[illegible] ಸಬಲೀಕರಣ : ಒಂದು ಸ್ತ್ರೀವಾದಿ ಅಧ್ಯಯನ
(ಹೈದ್ರಾಬಾದ ಕರ್ನಾಟಕವನ್ನು ಅನುಲಕ್ಷಿಸಿ)

[illegible] ಅಂತರ ಶಿಸ್ತೀಯ ಸಂಶೋಧನೆಯಂತೆ
[illegible] ಪಿಎಚ್.ಡಿ.
[illegible] ಮಹಾಪ್ರಬಂಧ

ಸಂಶೋಧಕರು
[illegible]

ಮಾರ್ಗದರ್ಶಕರು
ಡಾ. ಶಿವಾನಂದ ಎಸ್. ವಿರಕ್ತಮಠ
ಪ್ರಾಧ್ಯಾಪಕರು

[illegible] ವಿಜ್ಞಾನ, [illegible] ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – 583 276
2009

330

ಗ್ರಾಮೀಣ ಮಹಿಳೆಯ ಸಬಲೀಕರಣ : ಒಂದು ಸ್ತ್ರೀವಾದಿ ಅಧ್ಯಯನ
(ಹೈದ್ರಾಬಾದ ಕರ್ನಾಟಕವನ್ನು ಅನುಲಕ್ಷಿಸಿ)

ಸಮಾಜಶಾಸ್ತ್ರ ಹಾಗೂ ಮಹಿಳಾ ಅಧ್ಯಯನ ಅಂತರ ಶಿಸ್ತಿಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು

ಉಮಾದೇವಿ.ಎಸ್.ವಡೆಯರ್

ಮಾರ್ಗದರ್ಶಕರು

ಡಾ॥ ಶಿವಾನಂದ .ಎಸ್. ವಿರಕ್ತಮಠ

ಪ್ರವಾಚಕರು

ಮಹಿಳಾ ಅಧ್ಯಯನ ವಿಭಾಗ, ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ ಹಂಪಿ

ವಿದ್ಯಾರಣ್ಯ – 583 276

2009

ದೃಢೀಕರಣ ಪತ್ರ

"ಗ್ರಾಮೀಣ ಮಹಿಳೆಯ ಸಬಲೀಕರಣ: ಒಂದು ಸ್ತ್ರೀವಾದಿ ಅಧ್ಯಯನ (ಹೈದ್ರಾಬಾದ-ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಪಿ.ಹೆಚ್.ಡಿ ಮಹಾಪ್ರಬಂಧವನ್ನು **ಶ್ರೀಮತಿ ಉಮಾದೇವಿ. ಎಸ್. ವಡೆಯರ್** ಇವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿರುತ್ತಾರೆ. ಸಮಾಜಶಾಸ್ತ್ರ ಹಾಗೂ ಮಹಿಳಾ ಅಧ್ಯಯನ ಅಂತರ್ ಶಿಸ್ತಿಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿ.ಎಚ್.ಡಿ. ಪದವಿಗಾಗಿ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ದಿನಾಂಕ: 26 - 6 - 09
ಸ್ಥಳ: ವಿದ್ಯಾರಣ್ಯ

ಡಾ|| ಶಿವಾನಂದ ಎಸ್. ವಿರಕ್ತಮಠ
ಮಾರ್ಗದರ್ಶಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – 583276

ಪ್ರಮಾಣ ಪತ್ರ

"ಗ್ರಾಮೀಣ ಮಹಿಳೆಯ ಸಬಲೀಕರಣ: ಒಂದು ಸ್ತ್ರೀವಾದಿ ಅಧ್ಯಯನ (ಹೈದ್ರಾಬಾದ ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಪಿ.ಎಚ್.ಡಿ. ಪದವಿಗಾಗಿ ಸಮಾಜಶಾಸ್ತ್ರ ಹಾಗೂ ಮಹಿಳಾ ಅಧ್ಯಯನ ಅಂತರ್ ಶಿಸ್ತಿಗೆ ಸಂಬಂಧಿಸಿದಂತೆ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಪಿ.ಹೆಚ್.ಡಿ. ಪದವಿಗಾಗಿ ಡಾ॥ ಶಿವಾನಂದ ಎಸ್. ವಿರಕ್ತಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ, ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ: 26.6.09
ಸ್ಥಳ: ವಿದ್ಯಾರಣ್ಯ

(ಉಮಾದೇವಿ ಎಸ್. ವಡೆಯರ್)
ಸಂಶೋಧಕಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ ಹಂಪಿ
ವಿದ್ಯಾರಣ್ಯ – 583 276

ಗ್ರಾಮೀಣ ಮಹಿಳೆಯ ಸಬಲೀಕರಣ : ಒಂದು ಸ್ತ್ರೀವಾದಿ ಅಧ್ಯಯನ
(ಹೈದ್ರಾಬಾದ-ಕರ್ನಾಟಕವನ್ನು ಅನುಲಕ್ಷಿಸಿ)

ಪರಿವಿಡಿ

ಕೋಷ್ಟಕಗಳ ಪಟ್ಟಿ

ಅಧ್ಯಾಯ–1
ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

1. ಪ್ರಸ್ತಾವನೆ.
2. ಅಧ್ಯಯನದ ಉದ್ದೇಶ.
3. ಅಧ್ಯಯನದ ವ್ಯಾಪ್ತಿ.
4. ಅಧ್ಯಯನದ ವೈಧಾನಿಕತೆ.
5. ಅಧ್ಯಯನ ಕ್ಷೇತ್ರದ ಮಾಹಿತಿ ವಿವರಗಳು.

ಅಧ್ಯಾಯ-1

ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ವೈಧಾನಿಕತೆ

ಪ್ರಸ್ತಾವನೆ.

ಒಂದು ಸಮಾಜದಲ್ಲಿ ಮಹಿಳೆಯಾಗಿರಲಿ ಅಥವಾ ಪುರುಷನೇ ಆಗಿರಲಿ ಅವರ ಸ್ಥಾನಮಾನಗಳು ಅವರು ವಾಸಿಸುವ ಸಮಾಜದ ಮೇಲೆ ನಿರ್ಧಾರವಾಗಿರುತ್ತವೆ. ಅದು ಗ್ರಾಮೀಣ ಸಮಾಜವಾಗಿರಬಹುದು ಇಲ್ಲವೇ ನಗರ ಸಮಾಜವಾದರೂ ಆಗಿರಬಹುದು. ಸಾಮಾನ್ಯವಾಗಿ ಎಲ್ಲ ಮಹಿಳೆಯರ ಬಗ್ಗೆ ಅಂದರೆ ವಿಶೇಷವಾಗಿ ಗ್ರಾಮೀಣ ಮಹಿಳೆಯರನ್ನು ಕೆಳಮಟ್ಟದಿಂದ ನೋಡುವುದು ಪುರಾತನ ಕಾಲದಿಂದಲೆ ನಡೆದುಕೊಂಡು ಬಂದ ಪರಿಪಾಠವಾಗಿದೆ.

ಗ್ರಾಮೀಣ ಸಮಾಜದಲ್ಲಿ ವಾಸಿಸುವ ಮಹಿಳೆಯರನ್ನು ಹೀನವಾಗಿ ತುಚ್ಛವಾಗಿ, ಅವಮಾನದಿಂದ ಕಾಣುವುದು ಸತ್ಯವಾಗಿದೆ. ನಗರ ಮಹಿಳೆಯರನ್ನೊಳಗೊಂಡಂತೆ ಎಲ್ಲ ಮಹಿಳೆಯರು ತಮ್ಮ ಶಕ್ತಿಗೆ ಮೀರಿದ ಕೌಟುಂಬಿಕ ಜವಾಬ್ದಾರಿಯನ್ನು ಹೊರಬೇಕಾಗಿದೆ. ಈ ಜವಾಬ್ದಾರಿಗಳೆಂದರೆ ಮನೆ ವಾರ್ತೆಯ ಕೆಲಸಗಳಾದ ಕಸಗುಡಿಸುವುದು. ಪಾತ್ರೆ ತೊಳೆಯುವುದು. ಬಟ್ಟೆ ತೊಳೆಯುವುದು. ಅಡಿಗೆ ಮಾಡುವುದು. ಊಟಕ್ಕೆ ಬಡಿಸುವುದು, ಮಕ್ಕಳ ಪಾಲನೆ-ಪೋಷಣೆ, ಗಂಡನ ಆಜ್ಞೆಗಳ ಪರಿಪಾಲನೆ, ಹಿರಿಯರ ಉಪಚಾರ ಮುಂತಾದವುಗಳೂ ಒಟ್ಟಾರೆ ಮನೆಗೆ ಸಂಬಂಧಿಸಿದ ಎಲ್ಲ ಜವಾಬ್ದಾರಿಗಳನ್ನು ಮಹಿಳೆಯೇ ನಿರ್ವಹಿಸಬೇಕಾಗಿದೆ. ಅದಕ್ಕಾಗಿಯೇ ಅವಳು ಹುಟ್ಟಿ ಬಂದವಳು ಎನ್ನುವಂಥ ಸಾಮಾಜಿಕ ಪರಿಸರವನ್ನು ಕುಟುಂಬದಲ್ಲಿ ನೀಡುತ್ತ ಬೆಳಸಲಾಗುತ್ತಿದೆ. ಇಲ್ಲಿ ಪುರುಷರ ಪಾತ್ರವೇ ಇರುವುದಿಲ್ಲ. ಮಹಿಳೆಯರಿಗೆ ಮನೆಗೆಲಸ ದೊಂದಿಗೆ ತಮ್ಮ ಕುಟುಂಬದ ಆರ್ಥಿಕ ಮಟ್ಟವನ್ನು ಸುಧಾರಿಸಲು ಕೂಲಿ ಮಾಡುವುದು ರಸ್ತೆ ನಿರ್ಮಾಣ, ಕಟ್ಟಡ ನಿರ್ಮಾಣಗಳಂಥ ಗುತ್ತಿಗೆ ಕೆಲಸಗಳಲ್ಲಿ ತೊಡಗಿಸಿಕೊಳ್ಳುವುದು ಮುಂತಾಗಿ ಅಸಂಘಟಕ ಕೆಲಸಗಳಲ್ಲಿ ತೊಡಗುವುದು ಅನಿವಾರ್ಯವಾಗಿದೆ.

ಅದೇ ಸಮಯದಲ್ಲಿ ಹೈನುಗಾರಿಕೆಯೊಂದಿಗೆ ಆಡು, ಕುರಿ, ಕೋಳಿ, ಸಾಕಾಣಿಕೆ, ದನ-ಕರುಗಳನ್ನು ಮೇಯಿಸುವುದು, ಮೇವು ಸಂಗ್ರಹ, ಹಾಲು ಕರೆಯುವುದು, ಮಣ್ಣು ತೆಗೆಯುವುದು, ಆಸರೆಯಲ್ಲಿ ನಿಲ್ಲಿಸುವ ಜವಾಬ್ದಾರಿಗಳೆಲ್ಲವು ಇವಳದೆ ದಿನ-ರಾತ್ರಿಯಾದರೂ ಮುಗಿಯದ ಕೆಲಸಕ್ಕೆ ಒಂದು ವಿರಾಮವೆ ದೊರೆಯದಷ್ಟು ಗ್ರಾಮೀಣ ಮಹಿಳೆ ಕಾರ್ಯನಿರತಳಾಗಿರುತ್ತಾಳೆ.

"ಗ್ರಾಮೀಣ ಮಹಿಳೆಯರು ವಿಶ್ರಾಂತಿ ಬಯಸದೆಯೇ ಹೊಲ ಮನೆ ಕೆಲಸಗಳೊಂದಿಗೆ ಅರಣ್ಯೀಕರಣ ಮತ್ತು ಗ್ರಾಮೋದ್ಯೋಗಗಳಂಥ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿ ಕೊಂಡಿರುತ್ತಾರೆ. ಕಟ್ಟಡಗಳ ನಿರ್ಮಾಣದಲ್ಲಿ ಕಲ್ಲು-ಮಣ್ಣನ್ನು ಹೊರುವುದು, ಜಲ್ಲಿ ಕಲಿಸುವುದು, ಇಟ್ಟಿಗೆ ಹೊರುವುದು, ಮರಳು ಕಲಿಸುವುದು, ಮುಂತಾದ ಕೆಲಸಗಳಲ್ಲಿ ತೊಡಗಿಸಿಕೊಂಡಿರುತ್ತಾರೆ. ಇನ್ನಷ್ಟು ಜನರು ಹಣ್ಣು-ತರಕಾರಿಗಳ ಮಾರಾಟ, ಬಳೆಗಳ ಮಾರಾಟ, ಸೊಪ್ಪು-ಸೌದೆಗಳ ಮಾರಾಟಗಳಂಥ ಸಣ್ಣ-ಪುಟ್ಟ ವ್ಯಾಪಾರಗಳತ್ತ ತಮ್ಮ ಒಲುವನ್ನು ತೋರಿರುತ್ತಾರೆ. ಬದುಕಿನುದ್ದಕ್ಕೂ ಮುಗಿಯದ ಜವಾಬ್ದಾರಿಗಳ ನೊಗಕ್ಕೆ ಹೆಗಲೊಡ್ಡುವ ಈ ಮಹಿಳೆಯರು ಸತತವಾಗಿ ದುಡಿಯುವ ಸಜೀವ ಯಂತ್ರಗಳೆಂದು ಹೇಳಿದರೂ ಅತಿಶಯವೆನಿಸದು[1] (ಡಾ॥ ಮಹಾಜನ 1989). ಲಿಂಗತಾರತಮ್ಯದ ನೆರಳು ಮಹಿಳೆಯನ್ನು ಎಲ್ಲಡೆ ಕಾಡುತ್ತಲೆ ಇದೆ. ಎಲ್ಲರಂಗಗಳಲ್ಲೂ ಪುರುಷರದ್ದೆ ಪ್ರಾಬಲ್ಯ. ದುಡಿಯುವಲ್ಲಿ ಯಾವುದೇ ರಿಯಾಯಿತಿ ತೋರದ ಸಮಾಜ ಪ್ರತಿಫಲದಲ್ಲಿ ಮಾತ್ರ ಎಲ್ಲಡೆಯೂ ಕಡಿತವನ್ನು ಮಾಡುತ್ತಿದೆ. ಕೂಲಿ ನೀಡುವಲ್ಲಿ ಪುರುಷರಿಗೆ ಹೆಚ್ಚು ಮಹಿಳೆಯರಿಗೆ ಕಡಿಮೆ. ಆಸ್ತಿ ಹಂಚಿಕೆಯ ವಿಷಯವಿರಲಿ, ಉಡುಗೆ-ತೊಡುಗೆಗಳ ವಿಷಯದಲ್ಲಿ, ಕುಟುಂಬದಲೂ ಅಷ್ಟೇ. ಇವಳನ್ನು ಅಬಲೆ, ಅಶಕ್ತಳು, ಅನರ್ಹಳು ಎಂಬಂತೆ ಕಾಣಲಾಗುತ್ತಿದೆ. ಈ ಅಸಮಾನತೆ ಎಲ್ಲಿಯೂ ಗಮನಿಸದ ಅಂಶವಾಗಿಯೇ ಉಳಿಯುತ್ತಿದೆ ಎಂಬುವುದೇ ಗಮನಾರ್ಹ.

ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಇಡೀ ಕುಟುಂಬದ ಸಂಸಾರಕ್ಕೆ ಪುರುಷನೇ ಮೂಲಾಧಾರ ಎಂಬಂತೆ ಬಿಂಬಿಸಲಾಗುತ್ತಿದೆ. ***ಅದೆಷ್ಟೇ ಸೋಮಾರಿ ಪುರುಷನಿದ್ದರೂ, ದುಡಿದು ತಂದಿದ್ದು ಚಟಕ್ಕೆ ಸಾಲದು ಎಂಬಂತೆ*** ಇದ್ದರೂ ಮನೆಯ ಯಜಮಾನ ಪುರುಷನೆ ಎಂಬಂತೆ ಚಿತ್ರಿಸಲಾಗಿದೆ. ಪುರುಷರು ತಮ್ಮ ಶಕ್ತಿ-ಸಾಮರ್ಥ್ಯದಿಂದ ಸಾಮಾಜಿಕ, ಆರ್ಥಿಕ, ಧಾರ್ಮಿಕ, ರಾಜಕೀಯ ಕೆಲಸಗಳಲ್ಲಿ ಭಾಗವಹಿಸಿ ತಮ್ಮ ಪ್ರಾಬಲ್ಯವನ್ನು ಮರೆಯುತ್ತಾರೆ. ಇಲ್ಲಿ ಎಲ್ಲಡೆಯೂ ಮಹಿಳೆಯ ದುಡಿಮೆ ಗೌಣವಾಗಿ ಯಾವುದೇ ಅಸ್ತಿತ್ವವೇ ಇಲ್ಲದಂತೆ ಆಗುತ್ತಿದೆ.

ಕುಟುಂಬದಲ್ಲಿ ಪುರುಷನಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಾಗುತ್ತಿದೆ. ಮನುಸ್ಮೃತಿಯಲ್ಲಿ ಹೇಳಿರುವಂತೆ ಮಹಿಳೆಯು ಬಾಲ್ಯದಲ್ಲಿ ತಂದೆಯ ಆಧೀನದಲ್ಲಿರಬೇಕು, ಯೌವ್ವನದಲ್ಲಿ ಗಂಡನ

ಆಧೀನದಲ್ಲಿರಬೇಕು. ಮುಪ್ಪಿನಲ್ಲಿ ಮಕ್ಕಳ ಆಧೀನಳಾಗಿ ದುಡಿಯುವುದು ಅವಳ ಕರ್ಮವೆಂಬಂತೆ ಅವಳಿಗೆ ಯಾವುದೇ ರೀತಿಯ ಸ್ವಾತಂತ್ರ್ಯ ವಿಲ್ಲ ಎಂಬಂತೆ ಚಿತ್ರಿಸಲಾಗಿದೆ. ಮಹಿಳೆಯ ದುಡಿಮೆ ಅವಳ ಕರ್ತವ್ಯವೆನ್ನುವಂತೆ ಬಲವಂತವಾಗಿ ಅವಳ ಮೇಲೆ ಹೇರಲಾಗಿದೆ. ಆದರೂ ಅದರ ಫಲದ ಮೇಲೆ ಹಕ್ಕಿರುವುದಿಲ್ಲ. ಹಿರಿಯರು ಗಳಿಸಿದ ಆಸ್ತಿಯ ಮೇಲೆ ಹಕ್ಕಿದ್ದರೂ ಜೀವನಾಂಶವಾಗಲಿ, ಪಾಲಾಗಲಿ ಕೇಳುವಂತಿಲ್ಲ. ಗಂಡನು ಹೇಳುವ ಎಲ್ಲ ಕೆಲಸಗಳನ್ನು, ಹೇಳದೆಯಿರುವ ಕೆಲಸಗಳನ್ನು ಪ್ರೀತಿಯಿಂದ ಹೇಳಿರುವುದನ್ನು, ದರ್ಪದಿಂದ ಆದೇಶಿಸಿದ್ದು, ಅಹಂಕಾರದಿಂದ ಮಾಡು ಎಂದು ನಿರ್ದೇಶಿಸಿದ ಎಲ್ಲವನ್ನು ಮಾಡಲೇಬೇಕಾದದ್ದು ಅವಳ ಧರ್ಮ-ಕರ್ಮ ಎಂಬಂತೆಯೇ ಬೆಳೆಸಲಾಗುತ್ತಿದೆ. ಇದನ್ನೆ ಸಮಾಜದ ಹಿರಿಯರು ಸಹನೆ, ತ್ಯಾಗ, ಕರುಣೆ, ಪತಿವೃತೆ ಎಂಬ ಶಬ್ದಗಳಲ್ಲಿ ಅವಳ ಮೇಲಿನ ಎಲ್ಲ ಶೋಷಣೆಯನ್ನು ತಡೆದುಕೊಳ್ಳುವಂತೆ ಉಪದೇಶಿಸುವುದಾದರೆ ಅವಳ ಸುಃಖ-ದುಃಖ ಕೇಳುವುದಾದರೂ ಯಾರು? ಪುರುಷನೆಂದರೆ ಪ್ರಶ್ನಾತೀತ, ಪುರುಷ ಎಂದರೆ ಮನೆಗೆ ಎಲ್ಲವು, ಮಹಿಳೆಗೆ ಸಕಲ ಸೌಭಾಗ್ಯವೂ ಪುರಷನೆಂಬಂತೆ ಇವನಿಲ್ಲದೆ ಮಹಿಳೆಗೆ ಬದುಕೇ ಇಲ್ಲ ಎಂಬಂತೆ ಸಮಾಜ ಬಿಂಬಿಸುತ್ತಾ ಬಂದಿದೆ.

ಗ್ರಾಮೀಣ ಮಹಿಳೆಯ ಸ್ಥಾನ-ಮಾನದ ಬಗ್ಗೆ ಶ್ರೀ ದೇಸಾಯಿ ಹಾಗೂ ಶ್ರೀಮತಿ ಮೆತ್ರೇಯಿ ಹಾಗೂ ಕೃಷ್ಣರಾಜು ಅವರು 1987-1990 ರಲ್ಲಿ ಹೀಗೆ ವಿವರಿಸಿದ್ದಾರೆ:

1. ಮಹಿಳೆ ಸಾಮಾಜಿಕವಾಗಿ ಪರಾವಲಂಬಿ ಆಗಿದ್ದಾಳೆ.
2. ಗಂಡು ಮಕ್ಕಳಿಗೆ ಜನ್ಮಕೊಟ್ಟಷ್ಟು ಸಮಾಜದಲ್ಲಿ ಅವಳಿಗೆ ಹೆಚ್ಚಿನ ಗೌರವವಿದೆ.
3. ಅಸ್ತಿಯ ಮೇಲೆ ಮಹಿಳೆಗೆ ಯಾವುದೇ ಹಕ್ಕುಗಳಿರುವುದಿಲ್ಲ.
4. ತಂದೆಯ ಮನೆಯಲ್ಲಂತೂ ಸದಸ್ಯತ್ವ ಇರುವುದಿಲ್ಲ. ಇದೆ ಕಾರಣಕ್ಕೆ "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬ ಗಾದೆ ಮಾತನ್ನು ಕಟ್ಟಲಾಗಿದೆ. ತನ್ನದಲ್ಲದ ಗಂಡನ ಮನೆಯಲ್ಲಿ ಅವಳಿಗೆ ಸದಸ್ಯತ್ವ ಪಡೆಯಬೇಕಾದರೆ ಕೆಲವು ಅರ್ಹತೆಗಳು ಇರಲೇಬೇಕು.
5. ಮಹಿಳೆಯ ಪ್ರತಿಯೊಂದು ಹೆಜ್ಜೆಯಲ್ಲಿಯೂ ಪುರುಷರ ನಿಯಂತ್ರಣ ಇದ್ದೆ ಇರುತ್ತದೆ.

ನವಭಾರತದಲ್ಲಿ ಗ್ರಾಮೀಣ ಮಹಿಳೆಯರ ಉತ್ತಮ ಸ್ಥಾನಮಾನ:

ಬ್ರಿಟಿಷರ ಕಾಲದಲ್ಲಿ: ಭಾರತದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿ ಗ್ರಾಮೀಣ ಮಹಿಳಾ ಸಮುದಾಯಗಳಲ್ಲಿ ಹಾಗೂ ನಗರ ಮಹಿಳಾ ಸಮುದಾಯಗಳಲ್ಲಿ ಕೆಲವೊಂದು ಬದಲಾವಣೆಗಳಾಗಿರುವುದನ್ನು ನಾವು

ಮರೆಯುವಂತಿಲ್ಲ. ಬ್ರಿಟಿಷರು ಭಾರತದಲ್ಲಿ ನೆಲೆಗೊಂಡಿದ್ದಂತ ಸಾಮ್ರಾಜ್ಯ ಶಾಹಿಗಳನ್ನು ಅಳಿಸಿ ಎಲ್ಲರನ್ನು ಒಂದೇ ಆಡಳಿತ ಪದ್ಧತಿಗೆ ಗುರಿ ಮಾಡಿದರು.

ನಗರ ಮತ್ತು ಗ್ರಾಮೀಣ ಮಹಿಳೆಯರು ಪ್ರತ್ಯೇಕವಾದ ದೀಪಗಳಂತೆ ದೂರ ದೂರವಾಗಿಯೇ ವಾಸಿಸುತ್ತಿದ್ದರು. ಇಬ್ಬರ ನಡುವಿನ ಅಂತರವಿತ್ತು. ರಸ್ತೆ ಹಾಗೂ ಸಾರಿಗೆ ಸಂಪರ್ಕ ಸಾಧನಗಳ ಮೂಲಕ ಮತ್ತು ಸಾರ್ವತ್ರಿಕ ಶಿಕ್ಷಣ ಪದ್ಧತಿಯಿಂದ ಈ ಪ್ರತ್ಯೇಕತೆಯನ್ನು ಅಳಿಸಲು ಪ್ರಯತ್ನಿಸಿದರು. ರೈಲು ಬಸ್ಸುಗಳಂತಹ ಸಂಪರ್ಕ ಸಾಧನಗಳು ದೊರೆತು ಈ ಅಂತರ ಮತ್ತಷ್ಟು ಕುಗ್ಗಿತು. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಅವರ ಹಿತ್ತಲಲ್ಲಿ ಬೆಳೆಸಿದ ತರಕಾರಿ ಸೊಪ್ಪುಗಳಿಗೆ, ಹಾಲು, ಹೈನಕ್ಕೆ, ಹಣ್ಣು, ಮೊಟ್ಟೆ ನಗರ ಪ್ರದೇಶವು ಮಾರುಕಟ್ಟೆಯನ್ನು ಒದಗಿಸಿತು. ಅಂತೆಯೇ ಗ್ರಾಮೀಣ ಮಹಿಳೆಯರು ಕೊಳ್ಳುವ ಶಕ್ತಿಯು ನಿಧಾನವಾಗಿ ಹೆಚ್ಚತೊಡಗಿತು. ಪರಿಣಾಮ ನಗರ ಪ್ರದೇಶದಲ್ಲಿ ದೊರೆಯುವ ಬಟ್ಟೆ ಬರೆ, ಆಭರಣಗಳು ಮತ್ತು ಮನಗೆ ಬೇಕಾಗುವ ಅವಶ್ಯಕ ವಸ್ತುಗಳ ಖರೀದಿಗೆ ಬರತೊಡಗಿದರು. ಸಂಪರ್ಕ ಹೆಚ್ಚಾದಂತೆ ಸಾಮಾಜಿಕ ಹಾಗೂ ಆರ್ಥಿಕ, ಧಾರ್ಮಿಕ ಮದುವೆ-ಮುಂಜಿಯಂತಹ ಕಾರ್ಯಕ್ರಮಗಳಲ್ಲಿಯೂ ಪಾಲ್ಗೊಳ್ಳತೊಡಗಿದರು. ಹಾಗೂ ಲಾಭದಾಯಕ ಉದ್ಯೋಗಗಳನ್ನು ಅರಸುತ್ತ ನಗರ ಪ್ರದೇಶಗಳಿಗೆ ವಲಸೆ ಹೋಗತೊಡಗಿದರು.

ಬ್ರಿಟಿಷ ಸರ್ಕಾರದ ಶಿಕ್ಷಣವು ಸಾರ್ವತ್ರೀಕರಣಗೊಂಡಾಗ ನಿಧಾನವಾಗಿ ಹಲವು ಮೂಲ ಬದಲಾವಣೆಗಳಾಗಿ ತೊಡಗಿದವು. (ನಿಧಾನವಾಗಿ) ಬ್ರಿಟಿಷರು ನೀಡಿದ ಸಮಾನತೆಯ ಶಿಕ್ಷಣ ಸಾಮಾಜಿಕ ಸ್ತರಗಳಲ್ಲಿ ಬದಲಾವಣೆ ಕಂಡುಬಂದಿತು. ಉಳ್ಳವರ ಮತ್ತು ಉನ್ನತ ವರ್ಗದವರಿಗೆ ಮಾತ್ರ ಸೀಮಿತವಾಗಿದ್ದ ಓದು-ಬರಹ ಜನಸಾಮನ್ಯರಿಗೂ ಕೈಗೆಟುಕತೊಡಗಿತು. ಭಾರತೀಯ ಸಮಾಜದಲ್ಲಿ ಕಾಲಾನುಕಾಲದಿಂದ ಬೇರುಬಿಟ್ಟಿದ್ದ ಜಾತಿಭೇಧ, ವರ್ಗಭೇಧ, ವರ್ಣಭೇಧ, ಶ್ರೀಮಂತರು-ಬಡವರ ನಡುವೆ ಅಂತರ ಕಡಿಮೆ ಆಗ ತೊಡಗಿತು. ಉನ್ನತ ವರ್ಗದವರೊಂದಿಗೆ ಮಧ್ಯಮ ವರ್ಗದ ಮಹಿಳೆಯರು ಶಿಕ್ಷಿತರಾಗುತ್ತ ಶಿಕ್ಷಣದ ಕಡೆಗೆ ಒಲವು ತೋರತೊಡಗಿದರು. ಮಹಿಳೆಯರಿಗೆ ಶಿಕ್ಷಣ ಕೊಡಿಸುವುದು ಪ್ರತಿಷ್ಠೆಯ ಸಂಕೇತವಾಗತೊಡಗಿತು.

ಬ್ರಿಟೀಷರು ತಮ್ಮ ಆಡಳಿತದ ಅನುಕೂಲಕ್ಕೆ ತಕ್ಕಂತೆ ನೌಕರ ಶಾಹಿ ಪದ್ಧತಿಯನ್ನು ಬೆಳೆಸಲು ಭಾರತೀಯರನ್ನು ಕೆಳವರ್ಗದ ಕೆಲಸಗಳಿಗೆ ನೇಮಿಸಿಕೊಳ್ಳಲುತೊಡಗಿದರು. ಕಾವಲುಗಾರರಾಗಿ, ಅಡುಗೆಯವರಾಗಿ, ಬ್ರಿಟೀಷರ ಮನೆಯ ಸೇವಕರಾಗಿ, ಗುಮಾಸ್ತರಾಗಿ ಕೆಲಸ ನಿರ್ವಹಿಸಲು ಭಾರತೀಯರನ್ನು ನೇಮಿಸ ತೊಡಗಿದರು, ಅದೇ ಸಮಯದಲ್ಲಿಯೇ ಕಾರ್ಮಿಕ ವರ್ಗವನ್ನು ಹುಟ್ಟು ಹಾಕುವ ಕಾರ್ಖಾನೆಗಳು ಮತ್ತು ಗಿರಣಿಗಳನ್ನು ಆರಂಭಿಸಲಾಯಿತು. ಸಂಘಟಿತ ವಲಯಗಳಲ್ಲಿ

ಕಾರ್ಮಿಕ ಮತ್ತು ಕೂಲಿ ಕೆಲಸಕ್ಕೆ ಭಾರತೀಯರನ್ನು ನೇಮಿಸಲಾಯಿತು. ಗ್ರಾಮೀಣ ಜನರು ಕೇವಲ ಕೃಷಿ ಹಾಗೂ ಸಾಂಪ್ರದಾಯಿಕ ಕೆಲಸಗಳಿಗೆ ಅವಲಂಬಿತರಾಗುವುದು ಕ್ರಮೇಣ ಕಡಿಮೆಯಾಯಿತು.

ಬ್ರಿಟೀಷರ ಆಳ್ವಿಕೆಯ ಪರಿಣಾಮದಿಂದಾಗಿಯೇ ಭಾರತೀಯ ಸಮಾಜದಲ್ಲಿ 19ನೇ ಶತಮಾನದ ಆರಂಭದಲ್ಲಿ ಭಾರತೀಯ ಸಮಾಜದ ವಿವಿಧ ಸ್ತರಗಳಲ್ಲಿ ಬದಲಾವಣೆಗಳು ಕಂಡುಬಂದವು. ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ಕ್ಷೇತ್ರಗಳಲ್ಲಿ ಹಲವು ಸುಧಾರಣೆಗಳು ಕಂಡುಬಂದವು. ಇದಕ್ಕೆ ಅತೀ ಮಡಿವಂತಿಕೆಯ ಸಮಾಜವೆನ್ನಿಸಿಕೊಂಡ ವಿಪ್ರ ಮಹಿಳೆಯರು ಹೊರತಾಗಿರಲಿಲ್ಲ. ಭಾರತೀಯ ಸಮಾಜದಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಆ ಕಾಲ ಘಟ್ಟದಲ್ಲಿ ನಡೆದ ಮೂರು ಪ್ರಮುಖ ಬದಲಾವಣೆಗಳನ್ನು ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

1. **ಪ್ರಗತಿಪರ ಚಿಂತನೆ :** ಬ್ರಿಟೀಷರ ಉದಾರ ನೀತಿ ಹಾಗೂ ಪ್ರಗತಿ ಪರ ಚಿಂತನೆಯ ದೃಷ್ಟಿಕೋನ ಭಾರತೀಯರ ಸ್ವೀಕಾರಕ್ಕೆ ಅರ್ಹವೆನಿಸಿದ್ದು, ಅವುಗಳಿಗೆ ಸಾಮಾಜಿಕ ಅಂಗೀಕಾರ ದೊರೆಯ ತೊಡಗಿದ್ದು, ಪ್ರತಿಯೊಂದು ಸಮಸ್ಯೆಗಳಿಗೆ ವಿವೇಚನಾ ಪೂರ್ವಕವಾಗಿ ನಿರ್ಧಾರ ತೆಗೆದುಕೊಳ್ಳುವ ಸಾಂಪ್ರಾದಾಯ ಪ್ರಾರಂಭವಾಯಿತು.

2. **ಸಮಾಜ ಸುಧಾರಕರು ಮತ್ತು ಸುಧಾರಣಾ ಚಳುವಳಿಗಳು :** ರಾಜಾರಾಮ ಮೋಹನರಾಯ ರವರು ಬ್ರಹ್ಮ ಸಮಾಜವನ್ನು ಸ್ಥಾಪಿಸಿ ಸತಿಸಹಗಮನ ಪದ್ಧತಿಯ ವಿರುದ್ಧ ಹೋರಾಡಿದರು. ಈಶ್ವರ ಚಂದ್ರ ವಿದ್ಯಾಸಾಗರ ರವರು ವಿಧವೆಯರ ಮರು ವಿವಾಹ ನಿಷೇಧ ಪದ್ಧತಿ ಹಾಗೂ ಸ್ತ್ರೀ ಶಿಕ್ಷಣದ ಬಗ್ಗೆ ಒತ್ತುಕೊಟ್ಟರು. ಸರ್.ಸೈಯದ್ ಅಹ್ಮದ್‌ಖಾನ್, ರಾನಡೇ, ಕೇಶವಚಂದ್ರ ಸೇನ್, ಮಹರ್ಷಿ ಕರ್ವೆ ಅವರಂತಹ ಸಾಮಾಜಿಕ ಸುಧಾರಣಾ ವಾದಿಗಳು ಮಹಿಳೆಯರ ಸ್ಥಿತಿಗತಿಗಳನ್ನು ವಿಶ್ಲೇಷಿಸಿದರು. ಬಾಲ್ಯ ವಿವಾಹ, ಸತಿಸಹಗಮನ ಪದ್ಧತಿ, ಅನಕ್ಷರತೆ, ವಿಧವಾ ವಿವಾಹ ಮುಂತಾದ ಪಿಡುಗುಗಳನ್ನು ನಿವಾರಿಸಲು ಪರ್ಯಾಯ ಮಾರ್ಗಗಳನ್ನು ಯೋಚಿಸಿದರು. ಬಾಲಕಿಯರ ಓದಿಗೂ, ವಿಧವಾ ವಿವಾಹಕ್ಕೂ ಮುಂತಾದ ಸಮಸ್ಯೆಗಳ ಪರಿಹಾರಕ್ಕೆ ಸಾಮಾಜಿಕ ಅಂಕಿತ ದೊರೆಯುವಂತೆ ಮಾಡಿದರು.

3. **ಸ್ವಾತಂತ್ರ್ಯದ ಬಯಕೆ :** 19 ನೇ ಶತಮಾನದಲ್ಲಿ ನಡೆದ ಮತ್ತೊಂದು ಕ್ರಾಂತಿ ಎಂದರೆ ರಾಜಕೀಯವಾಗಿ ಮಹಿಳೆಯರು ಸ್ವತಂತ್ರವಾಗಿ ಇರಬೇಕೆಂದು ಕೊಂಡಿದ್ದು. ಬ್ರಿಟೀಷರ ಆಡಳಿತ ಶಾಹಿಯನ್ನು ಬುಡ ಸಹಿತವಾಗಿ ಭಾರತದಿಂದ ಕಿತ್ತುಹಾಕಬೇಕು ಎನಿಸಿದ್ದು ಮತ್ತು ಈ ಜನಪರ ಚಳುವಳಿಯಲ್ಲಿ ದೇಶದ ಒಟ್ಟು ಜನ ಸಂಖ್ಯೆಯಲ್ಲಿ ಅರ್ಧದಷ್ಟು ಇದ್ದ ಮಹಿಳೆಯರ ಭಾಗವಹಿಸುವಿಕೆ ಅತೀ ಅಗತ್ಯವಾಗಿತ್ತು. ಇದೇ ಕಾರಣದಿಂದಲೇ

ಮಹಿಳೆಯರು ತಮ್ಮ ಮನೆಯ ನಾಲ್ಕು ಗೋಡೆಯಿಂದ ಆಚೆ ಬರುವ ಅವಕಾಶ ನಿರ್ಮಾಣವಾಯಿತು. ಸ್ವಾತಂತ್ರ ಸಂಗ್ರಾಮ ಜನ ಚಳುವಳಿಯಾಗಿ ಪರಿವರ್ತನೆ ಆದಾಗ ಮಹಿಳೆಯರಿಗೂ ಒಂದು ಹೊಸ ದಿಗಂತ ಗೋಚರವಾಯಿತು. ಮಹಿಳೆ ತನ್ನ ಅಸ್ಮಿತೆಯನ್ನು ಇದೆ ಚಳುವಳಿಯಲ್ಲಿ ಗುರುತಿಸಿಕೊಂಡಳು. ಈ ಸಮಯದಲ್ಲಿಯೇ ಭಾರತ ತನ್ನ ಪುರಾತನ ಚಿತ್ರಣವನ್ನು ಬದಲಾಯಿಸಿತು. ಲಿಂಗ, ವರ್ಗ, ವರ್ಣ, ಬೇಧವಿಲ್ಲದ ಸಮಾಜದ ನಿರ್ಮಾಣಕ್ಕಾಗಿ ಪ್ರಗತಿಪರರ ಚಿಂತನೆಯನ್ನು ಪ್ರಚುರಪಡಿಸಲಾಯಿತು.

ಆಧುನಿಕ ಭಾರತದಲ್ಲಿ ಗ್ರಾಮೀಣ ಮಹಿಳೆಯರು:

ಭಾರತದ ಸ್ವಾತಂತ್ರ್ಯವು ತನ್ನೊಡನೆ ಹಲವು ಬದಲಾವಣೆಗಳನ್ನು ವಿಶೇಷವಾಗಿ ಗ್ರಾಮೀಣ ಮಹಿಳಾ ಸಮಾಜದಲ್ಲಿ ತರಲು ಕಾರಣವಾಯಿತೆಂದು ಹೇಳಬಹುದು. ಪ್ರಜಾಸತ್ತೆ, ಸಮಾನತೆ ಮತ್ತು ಜಾತ್ಯಾತೀತ ತತ್ವಗಳನ್ನು ಒಳಗೊಂಡ ಸಂವಿಧಾನವನ್ನು ಅಂಗೀಕರಿಸಲಾಯಿತು. ಇದಾದ ನಂತರ ಎಲ್ಲೆಡೆ ಬೇಧ-ಭಾವ ಉಳಿಯದಂಥ ಸಮಾಜದ ನಿರ್ಮಾಣವನ್ನು ಆಶಿಸಲಾಯಿತು. ಭಾರತದ ಸಮಗ್ರ ಹಾಗೂ ಸರ್ವಾಂಗೀಣ ಅಭಿವೃದ್ಧಿಯನ್ನು ಸಾಧಿಸುವುದೇ ಪರಮಧ್ಯೇಯವಾಯಿತು. ಅದಕ್ಕಾಗಿ ಕಾರ್ಯ ಯೋಜನೆಯ ನಿರ್ಮಾಣ ಆಗತೊಡಗಿತು. ಸಾಮಾಜಿಕ, ಆರ್ಥಿಕ, ರಾಜಕೀಯ ಸಮಾನತೆ ಸಾಧಿಸುವುದು ಅಭಿವೃದ್ಧಿಯ ಮೆಟ್ಟಿಲಾಗಿದ್ದವು. ಇದೇ ಸಮಯದಲ್ಲಿಯೇ ಮಹಿಳೆಯರ ಸ್ಥಿತಿಗತಿಗಳ, ಸ್ಥಾನಮಾನಗಳ ಬಗ್ಗೆಯೂ ಚಿಂತನ-ಮಂಥನಗಳು ನಡೆದು ಮಹಿಳೆಯರ ಔನ್ನತ್ತೀಕರಣದತ್ತ ಸಾಗತೊಡಗಿದವು. ಮಹಿಳಾ ಸಮಾನತೆ ಹಾಗೂ ಸ್ಥಿತಿಗತಿಗಳ ಸುಧಾರಣೆಯ ಬಗ್ಗೆ ಹೆಚ್ಚಿನ ಗಮನವಹಿಸಿರುವುದೇ ಇಂದು ಎಲ್ಲ ಕ್ಷೇತ್ರಗಳಲ್ಲಿಯೂ ಮಹಿಳೆಯರು ಮೇಲುಗೈ ಸಾಧಿಸಲು ಸಾಧ್ಯವಾಗಿದೆ.

ಮಹಿಳೆಯರಿಗೆ ಪೂರಕವಾದ ಸಂವಿಧಾನಿಕ ಕ್ರಮಗಳು ಈ ಕೆಳಗಿನಂತಿವೆ:

1. ಸಂವಿಧಾನದ 14ನೇ ಕಲಂ ಕಾನೂನಿನ ಎದುರಿಗೆ ಎಲ್ಲರು ಸಮಾನರು ಎಂಬ ಹಕ್ಕನ್ನು ನೀಡಿದೆ.
2. ಸಂವಿಧಾನದ 15ನೇ ಕಲಂ ಮಹಿಳೆಯಾಗಿರುವ ಕಾರಣವನ್ನೇ ಮುಂದಿಟ್ಟುಕೊಂಡು ಮಾಡುವ ತಾರತಮ್ಯ ಸಲ್ಲದು. ಅಷ್ಟೇ ಅಲ್ಲದೇ ಮಹಿಳೆಯರ ಎಲ್ಲ ಹಿತಾಸಕ್ತಿಗಳನ್ನು ಕಾಪಾಡಬೇಕಾಗಿದೆ.
3. ಸಂವಿಧಾನದ 16ನೇ ಕಲಂ ತನ್ನ ಅಧೀನ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳುವಾಗ ಯಾವುದೇ ರೀತಿಯ ವರ್ಗ, ವರ್ಣ, ಲಿಂಗ ತಾರತಮ್ಯವನ್ನು ಮಾಡಬಾರದೆಂದು ತಿಳಿಸಿದೆ.

4. ರಾಜ್ಯಾಂಗವು ತನ್ನ ನೀತಿ, ನಿರ್ದೇಶಕ ತತ್ವಗಳ ನಾಲ್ಕನೇಯ ಭಾಗದಲ್ಲಿ ಸರ್ಕಾರವು ಮಹಿಳೆಯರ ಆರ್ಥಿಕ ಬಲಸಂವರ್ಧನೆಗೆ ವಿಶೇಷ ಗಮನಹರಿಸಿ ಹೆಚ್ಚಿನ ಯೋಜನೆಗಳನ್ನು ಹಾಕಿಕೊಳ್ಳಬೇಕೆಂದು ಸೂಚಿಸಿದೆ.

5. ಸಂವಿಧಾನದ 39ನೇ ಕಲಂನಲ್ಲಿ ಮಹಿಳೆಯರ ಆರೋಗ್ಯ, ಯೋಗಕ್ಷೇಮ, ಧನಭಾಗ್ಯಕ್ಕೆ ಸಂಬಂಧಿಸಿದಂತೆ ಸರಕಾರಗಳು ಮೀನ, ಮೇಷ ಎಣಿಸದೇ ಮಹಿಳೆಯರ ಆರ್ಥಿಕ ಭದ್ರತೆಗೆ ಎಲ್ಲ ಸೌಕರ್ಯಗಳನ್ನು ನೀಡಬೇಕೆಂದು ಹೇಳಿದೆ. ನೌಕರಿ ಕೊಟ್ಟಿದ್ದನ್ನೇ ಕಾರಣವಾಗಿರಿ ಸಿಕೊಂಡು ಎಲ್ಲ ನೌಕರರನ್ನು ಅನಾರೋಗ್ಯಕರವಾದಂತಹ ವಾತಾವರಣದಲ್ಲಿ ನಡೆಸಿ ಕೊಳ್ಳಬಾರದು ಎಂಬ ನಿಷೇಧವನ್ನು ಸ್ಪಷ್ಟ ಪಡಿಸಿದೆ.

6. ಸಂವಿಧಾನದ 5ನೇ ಕಲಂ ಎ.ಸಿ.ಸಿ. ಮುಖಾಂತರ ಮಹಿಳೆಗೆ ಅಪಮಾನಕರವಾದ, ಅವಹೇಳನ ಕಾರಿಯಾದ ಯಾವುದೇ ಕ್ರಮಗಳಿಂದ ಸರ್ಕಾರ ದೂರವಿರಬೇಕು. ಹಾಗೇ ಇದ್ದಲ್ಲಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ನಿರ್ಧೇಶಿಸಿದೆ. ಹೀಗೆ ಮೂಲಭೂತ ಹಕ್ಕುಗಳ ಮುಖಾಂತರ ನೀತಿ, ನಿರ್ದೇಶಕ ತತ್ವಗಳ ಮುಖಾಂತರ ನಾಗರೀಕ ಹಿತರಕ್ಷಣೆಗೆ ಮಹತ್ವ ನೀಡಲಾಗಿದೆ.

ಮಹಿಳೆ ಮತ್ತು ಶಾಸನ ಕ್ರಮಗಳು:

ಸಮಾಜ ಮನ್ನಿತ ಬದಲಾವಣೆಗಳು ನಡೆಯಬೇಕೆಂದರೆ ಕಾನೂನು ಕ್ರಮಗಳು ಅತೀ ಅವಶ್ಯಕವಾಗಿವೆ. ಮಸೂದೆಗಳಲ್ಲಿ ಅಂಗೀಕರಿಸುವ ಹಳೆಯ ಕಂದಾಚಾರದ ಸಾಂಪ್ರಾದಾಯ ಮತ್ತು ಮೂಢನಂಬಿಕೆಗಳನ್ನು ಹೊಸ-ಹೊಸ ಕಾನೂನುಗಳು ಮತ್ತು ಕಾನೂನಿನ ತಿದ್ದುಪಡಿಗಳಿಂದ ಅಳಿಸಿ ಹಾಕುವುದು ಹೊಸ ಕಾಲದ ಕಾನೂನಿನ ಕರೆಯಾಗಿದೆ.

ಅಲಿವರ್ ವೆಂಡಿಲ್ ರವರ ಪ್ರಕಾರ "ಹೊಸ ಕಾನೂನು ಹಳೆಯ ಅವಶ್ಯಕತೆಗಳನ್ನು ಪೂರೈಸುವುದೇ ಆಗಿದೆ". ನಮ್ಮ ಇಂದಿನ ಕಾನೂನುಗಳು ಸಮಾಜದ ಬೇಕು-ಬೇಡಗಳನ್ನು ಗೌರವಿಸುವಂತಿರಬೇಕು. ಸ್ವಾತಂತ್ರ್ಯದ ಪೂರ್ವದಲ್ಲಿ ಬ್ರಿಟೀಷರು ಮಹಿಳೆಯರಿಗೆ ಸಂಬಂಧಿಸಿದಂತೆ ಮೂಢನಂಬಿಕೆ ಮತ್ತು ಕಂದಾಚಾರಗಳನ್ನು ಸಾಮಾಜಿಕ ಕಾನೂನಿನ ರೀತ್ಯಾ ಹೊಡೆದು ಹಾಕಿದರು. ಬ್ರಿಟೀಷ ಸರಕಾರದಲ್ಲಿ ಇದ್ದ ಸುಶಿಕ್ಷಿತ ಅಧಿಕಾರಿಗಳು ಮತ್ತು ಭಾರತೀಯ ಸುಧಾರಣಾವಾದಿಗಳು ಆಗ ಪ್ರಚಲಿತದಲ್ಲಿದ್ದ ಬಾಲ್ಯ ವಿವಾಹ, ಸತಿಸಹಗಮನ, ಶಿಶು ಹತ್ಯೆ, ಬಹು ಪತ್ನಿತ್ವ ಪದ್ಧತಿ, ನರಬಲಿ, ಪ್ರಾಣಿಬಲಿ, ಅಂಧಶ್ರದ್ಧೆಗಳನ್ನು ಮಾನವೀಯತೆಯ ದೃಷ್ಠಿಯಿಂದ ಉಚ್ಚಾಟಿಸಿದರು.

ಮಹಿಳೆಯ ಕುಲಕ್ಕೆ ಚಿತ್ರ ಹಿಂಸೆ ನೀಡುವ ಆದೆಷ್ಟು ಸಾಂಪ್ರಾದಾಯಗಳನ್ನು ಮಾನವೀಯ ಅನುಕಂಪದೊಡನೆ ಕೊನೆಗಾಣಿಸಿದರು.

ಬ್ರಿಟಿಷರು ಜಾರಿ ಮಾಡಿದ ಮಸೂದೆಗಳು :

1. ಹಿಂದೂ ವಿಧವಾ ಪುನರ್ ವಿವಾಹ ಮಸೂದೆ 1859.
2. ಭಾರತೀಯ ದಂಡಸಂಹಿತೆ 1860 ಮಹಿಳೆಯ ವಿರುದ್ಧದ ಕ್ರೌರ್ಯಗಳನ್ನು ನಿರ್ಭಂದಿಸಿತು. ಉದಾ: ಶೋಷಣೆ, ಬಹು ಪತ್ನಿತ್ವ ಇತ್ಯಾದಿ.
3. ಭಾರತೀಯ ವಿವಾಹ ವಿಚ್ಛೇಧನ ಮಸೂದೆ 1869.
4. ಬಾಲ್ಯವಿವಾಹ ನಿಷೇಧ ಕಾಯ್ದೆ 1929. (ವಧುವಿಗೆ–15 ವರ್ಷ ತುಂಬಿರಬೇಕು ಹಾಗೂ ವರನಿಗೆ 18 ವರ್ಷ ತುಂಬಿರಬೇಕು)

ಸ್ವಾತಂತ್ರ್ಯದ ನಂತರ ಮಹಿಳೆಯರ ಹಿತದೃಷ್ಟಿಯಿಂದ ಪಾಸಾದ ಕಾನೂನುಗಳು :

1. 1954ರ ವಿಶೇಷ ವಿವಾಹ ಕಾಯ್ದೆ: ಅಂತರ್ಜಾತಿಯ, ಅಂತರಧರ್ಮಿಯ ವಿವಾಹಕ್ಕೆ ಅವಕಾಶ ನೀಡಿ, ಮದುವೆಯ ವಯಸ್ಸು ಗಂಡಿಗೆ 21 ವರ್ಷ, ಹೆಣ್ಣಿಗೆ 18–ವರ್ಷಗಳಿರಬೇಕೆಂದು ಸೂಚಿಸಿದೆ.
2. 1955 ಹಿಂದೂ ವಿವಾಹ ಕಾಯ್ದೆ (1976ರಲ್ಲಿ ಈ ಕಾಯ್ದೆಯಲ್ಲಿ ತಿದ್ದುಪಡಿ ಮಾಡಲಾಗಿದೆ) ಋತುಮತಿಯಾಗುವ ಮೊದಲು ವಿವಾಹ ನಿರಾಕರಿಸುವ ಹಕ್ಕನ್ನು ಕನ್ಯೆಗೆ ನೀಡಿ ಗಂಡ ಹಿಂಸೆ ನೀಡಿದರೆ ವಿವಾಹ ವಿಚ್ಛೇದನ ಪಡೆಯಬಹುದು ಎಂದಿದೆ.
3. ವರದಕ್ಷಿಣೆ ನಿಷೇಧ ಕಾಯ್ದೆ 1961 ಹಾಗೂ 1986ರಲ್ಲಿ ಅಗತ್ಯದ ಇನ್ನಷ್ಟು ತಿದ್ದುಪಡಿ ಉಗ್ರ ಶಿಕ್ಷೆ ನೀಡುವಂತೆ ಸೂಚಿಸಿದೆ.
4. ಕೌಟುಂಬಿಕ ನ್ಯಾಯಾಲಯಗಳ ಮಸೂದೆ 1984.
5. ಸತಿಸಹಗಮನ ನಿಷೇಧ ಕಾಯ್ದೆ 1987 ಉಗ್ರ ಶಿಕ್ಷೆ, ಜೀವಾವಧಿ ಶಿಕ್ಷೆ ಅಥವಾ ಮರಣ ದಂಡನೆ ನೀಡಬೇಕೆಂದು ಸೂಚಿಸಿದೆ.

ಸಾಂಪ್ರದಾಯಿಕ ಹಿಂದು ಭಾರತೀಯ ಸಮಾಜದಲ್ಲಿ ಮಹಿಳೆಯ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ಅನೇಕ ಕಾಯ್ದೆ–ಕಾನೂನುಗಳು ಪಾಸಾಗಿವೆ. ಆದರೆ ಅವು ಕಾನೂನುಗಳಾಗಿಯೇ ಉಳಿದಿವೆ. ಕಾರಣವೇನೆಂದರೆ ಅನುಷ್ಠಾನದಲ್ಲಿ ತುಂಬಾ ತೊಡಕುಗಳಿವೆ. ಉದಾ: ಬಾಲ್ಯವಿವಾಹ ಕಾನೂನಿಗೆ ವಿರುದ್ಧವಾಗಿದೆ, ಆದರೂ ಇಂದಿಗೂ ಬಾಲ್ಯ ವಿವಾಹಗಳು ನಡೆಯುತ್ತಲಿವೆ. ಹಾಗೇಯೇ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಕಾನೂನು ಇದೇ ಆದರೆ ಗ್ರಾಮೀಣ

ಪ್ರದೇಶದಲ್ಲಿ ಪುರುಷರು ಮತ್ತು ಮಹಿಳೆಯರು ಮಾಡುವ ಕೆಲಸಗಳು ಕೃಷಿಗೆ ಸಂಬಂಧಿಸಿದ್ದರೂ ನೀಡುವ ಕೂಲಿಯಲ್ಲಿ ತಾರತಮ್ಯ ಮಾಡಲಾಗುತ್ತಿದೆ. ಹೀಗಾಗಿ ಮಹಿಳೆಯರ ಅಭಿವೃದ್ಧಿಯನ್ನ ದೃಷ್ಟಿಯಲ್ಲಿಟ್ಟುಕೊಂಡು ಪಾಸಾದ ಕಾನೂನುಗಳು ಎಲ್ಲವು ಪೂರ್ಣ ಪ್ರಮಾಣದಲ್ಲಿ ಸಹಕಾರಿ ಆಗದೇ ಇದ್ದರೂ ಅವಳು ಇಡುವ ದೃಢ ಹೆಜ್ಜೆಗಳಿಗೆ ಪೂರಕವಾಗಿವೆ.

ಮಹಿಳೆ ಮತ್ತು ಗ್ರಾಮೀಣ ಅಭಿವೃದ್ಧಿ ಯೋಜನೆಗಳು:

ರಾಜ್ಯಾಂಗದ ನಿರ್ದೇಶನದಂತೆ ಭಾರತ ಸರಕಾರವು ಬಡಜನರ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಾಗಿ ಹಲವಾರು ಗ್ರಾಮೀಣ ಯೋಜನೆಗಳನ್ನು ರೂಪಿಸಿದೆ. ಉದಾ: ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ (ಐ.ಆರ್.ಡಿ.ಪಿ), ಧ್ವಾಕ್ರಾ, ಟ್ರೈಸಂ (ಸ್ವ-ಉದ್ಯೋಗ ತರಬೇತಿ ಕಾರ್ಯಕ್ರಮ), ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ, ಸ್ತ್ರೀ ಶಕ್ತಿ ಯೋಜನೆ, ಮುಂತಾದ ಯೋಜನೆಗಳು ಗ್ರಾಮೀಣ ಜನರ ಅದರಲ್ಲಿಯೂ ಮುಖ್ಯವಾಗಿ ಗ್ರಾಮೀಣ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಯನ್ನು ಮುಖ್ಯ ಗುರಿಯಾಗಿರಿಸಿಕೊಂಡು ಯೋಜನೆಗಳನ್ನು ಅನುಷ್ಠಾನಗೊಳಿಸಲಾಯಿತು. ಈ ಯೋಜನೆಗಳು ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಅಂತಹ ಮಹತ್ತರ ಬದಲಾವಣೆಗಳನ್ನು ತರದೇ ಇದ್ದರೂ ಅವರ ಸಬಲೀಕರಣ ಪ್ರಕ್ರಿಯೆಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿವೆ. ಕಾರಣವೇನೆಂದರೆ ಯೋಜನೆಗಳು ಕೆಳಮುಖವಾಗಿ ರಚನೆಯಾಗಿದ್ದವು. ಗ್ರಾಮೀಣ ಜನರ ಬೇಕು-ಬೇಡಿಕೆಗಳೇ ಬೇರೆ. ಗ್ರಾಮೀಣ ಜನರ ಬೇಕು-ಬೇಡಿಕೆಗಳಿಗೂ ಮೇಲಿನಿಂದ ಹರಿದು ಬರುವ ಯೋಜನೆಗಳಿಗೂ ತಾಳ-ಮೇಳ ಇರದೇ ಇರುವುದರಿಂದ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರಿಗಾಗಿ ಬಂದಂತಹ ಯೋಜನೆಗಳು ಮಹಿಳೆಯರ ಹೆಸರಿನಲ್ಲಿ ಪ್ರತಿಫಲವನ್ನು ಬೇರೆಯವರು ಪಡೆದುಕೊಳ್ಳುವಲ್ಲಿ ಯಶ್ವಸಿಯಾದರು. ಸರ್ಕಾರ ಯೋಜನೆಗಳೇನು ರೂಪಿಸಿತು. ಆದರೆ ಅದರ ಅನುಷ್ಠಾನದಲ್ಲಿ ವೈಫಲ್ಯತೆಯನ್ನು ಕಂಡಿತು.

ಮಹಿಳೆ ಮತ್ತು ಪಂಚಾಯತ ರಾಜ್ ವ್ಯವಸ್ಥೆ :

ಸ್ಥಳೀಯ ಸರಕಾರಗಳೆಂದು ಕರೆಯುವ ಗ್ರಾಮ ಪಂಚಾಯತಿ, ತಾಲ್ಲೂಕಾ ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ, ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ.33 ರಷ್ಟು ಮೀಸಲಾತಿಯನ್ನು ಕಲ್ಪಿಸುವ ರಾಜ್ಯಾಂಗದ 72 ಮತ್ತು 73ನೇ ಕಾಯ್ದೆ ತಿದ್ದುಪಡಿ ಮೂಲಕ ಸರಕಾರವು ಗ್ರಾಮೀಣ ಮಹಿಳೆಯರ ಅಧಿಕಾರ ಚಲಾವಣೆ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸಿದೆ. ಸಾಮಾಜೊ-ಆರ್ಥಿಕ, ಶೈಕ್ಷಣಿಕ, ರಾಜಕೀಯ ದೃಷ್ಟಿಕೋನದಿಂದ ಗ್ರಾಮೀಣ ಪಂಚಾಯತಿ ಸಂಸ್ಥೆಗಳು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ. ಯೋಗ್ಯ ಶಿಕ್ಷಣ, ಸದೃಢ

ಆರೋಗ್ಯ, ನೀರು ಸರಬರಾಜು, ವಿದ್ಯುತ್ ಸರಬರಾಜು, ಉತ್ತಮ ರಸ್ತೆಗಳು ಮತ್ತು ಮಹಿಳಾ ಸ್ವ-ಸಹಾಯ ಗುಂಪುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ಗ್ರಾಮೀಣ ಮಹಿಳೆಯರ ಬದುಕನ್ನು ಸುಧಾರಿಸಬೇಕೆಂಬ ಗುರಿಯನ್ನು ಹೊಂದಿವೆ.

ಮಹಿಳೆ ಮತ್ತು ಸ್ವ-ಸಹಾಯ ಗುಂಪುಗಳು ಹಾಗೂ ಸ್ವಯಂ ಸೇವಾ ಸಂಸ್ಥೆಗಳು :

ಕಳೆದ 30-ವರ್ಷಗಳಿಂದ ಕರ್ನಾಟಕ ರಾಜ್ಯದ ವಿವಿದೆಡೆಗಳಲ್ಲಿ ಅದರಲ್ಲಿಯೂ ಹೈದ್ರಾಬಾದ-ಕರ್ನಾಟಕದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳು ಹಿಂದುಳಿದ ಪ್ರದೇಶಗಳೆಂದು ಗ್ರಾಮೀಣ ಪ್ರದೇಶಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ಮತ್ತು ಪುರಷರ ಸ್ವ-ಸಹಾಯ ಗುಂಪುಗಳನ್ನು ರಚಿಸಿ ಮಹಿಳೆಯರಿಗೆ ಶಿಕ್ಷಣ, ಆರೋಗ್ಯ, ಆರ್ಥಿಕ ಅಭಿವೃದ್ಧಿ, ಬ್ಯಾಂಕ್ ವ್ಯವಹಾರ ಮುಂತಾದ ವಿಷಯಗಳನ್ನು ಕುರಿತು ತಿಳುವಳಿಕೆಯನ್ನು ನೀಡುವಲ್ಲಿ ಹಾಗೂ ಸರಕಾರಿ ಯೋಜನೆಗಳನ್ನು ಗ್ರಾಮೀಣ ಜನತೆಗೆ ತಲುಪಿಸುವಲ್ಲಿ ಸಹಕಾರಿಯಾಗಿವೆ.

ಸ್ವ-ಸಹಾಯ ಗುಂಪಿನಲ್ಲಿ: 15 ರಿಂದ 20 ಜನ ವಿವಿಧ ಜಾತಿಯ 18 ರಿಂದ 50 ವರ್ಷದಳಗಿನ ಮಹಿಳೆಯರು ಸದಸ್ಯಯರಾಗಿರುತ್ತಾರೆ. ಸಾಮಾನ್ಯವಾಗಿ ಅವರಲ್ಲಿ ಅರ್ಧಕ್ಕಿಂತ ಹೆಚ್ಚಿನ ಜನ ಮಹಿಳೆಯರು ಬಡತನ ರೇಖೆಯ ಕೆಳಗೆ ಇರುವವರಾಗಿರುತ್ತಾರೆ.

ಸ್ವ-ಸಹಾಯ ಸಂಘವೆಂದರೆ: ತಮ್ಮದೇ ಅದಂತಹ ಗುರಿ ಮತ್ತು ಉದ್ದೇಶಗಳ ಈಡೇರಿಕೆಗಾಗಿ ಸಮಾನ ಹಿತಾಸಕ್ತಿಯಿಂದ ದುಡಿದು ತಮ್ಮ ತಮ್ಮಲ್ಲಿಯೇ ಒಬ್ಬರಿಗೊಬ್ಬರು ಸಹಾಯ ಮಾಡಿಕೊಂಡು ತಮ್ಮ ಜೀವನ ಸುಧಾರಣೆಯನ್ನು ಮಾಡಿಕೊಳ್ಳುವುದಾಗಿದೆ.

ಪ್ರತಿಯೊಂದು ಸ್ವ-ಸಹಾಯ ಸಂಘಕ್ಕೆ ಒಂದು ಹೆಸರು ಇರುತ್ತದೆ. ಈ ಸಂಘ ನೋಂದಣಿ ಆಗಿರಬಹುದು ಅಥವಾ ನೋಂದಣಿ ಆಗಿರದೇ ಇರಬಹುದು. ತನ್ನದೇ ಆದ ನೀತಿ-ನಿಯಮಗಳಿಂದ ಕೂಡಿರುತ್ತದೆ. ಸಂಘದಲ್ಲಿ ಪ್ರತಿ ವಾರ ಸಭೆ, ಉಳಿತಾಯ, ಸಾಲ ತೆಗೆದುಕೊಳ್ಳುವುದು, ಮರುಪಾವತಿ, ಬ್ಯಾಂಕ್ ಖಾತೆ, ಜಂಟಿ ಸಹಿದಾರರ ಬಗ್ಗೆ ಹಾಗೂ ಮಹಿಳೆಯರ ಸಮಸ್ಯೆಗಳ ಬಗ್ಗೆ ಗ್ರಾಮದ ಸಮಸ್ಯೆಗಳ ಬಗ್ಗೆ ದಾಖಲಾತಿಗಳನ್ನು ಇಡುವ ಕುರಿತು ಆರೋಗ್ಯ, ಶಿಕ್ಷಣ, ಪಂಚಾಯ್ತಿ ಮುಂತಾದ ಹತ್ತು-ಹಲವು ವಿಷಯಗಳ ಕುರಿತು ಚರ್ಚೆ, ಪರಿಹಾರಕ್ಕೆ ಕ್ರಮಗಳು, ಸಂಘಟನೆಯ ಮಹತ್ವ ಕುರಿತು ಚರ್ಚಿಸಲಾಗುತ್ತದೆ. ಹಾಗೆಯೇ ಇಂದು ಅನೇಕ ಸರ್ಕಾರಿ, ಅರೆ ಸರ್ಕಾರಿ, ವಿದೇಶಿ ಯೋಜನೆಗಳನ್ನು ಮಹಿಳೆಯರು ಗ್ರಾಮೀಣ ಭಾಗದಲ್ಲಿ ಪಡೆದುಕೊಂಡು ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವಲ್ಲಿ ಯಶ್ವಸಿ ಪ್ರಯತ್ನ ಸಾಗಿದೆ. ಮಹಿಳೆಯರು ತಾವು ಶಿಕ್ಷಣ ಕಲಿಯದೇ ಇದ್ದರೂ ಶಿಕ್ಷಣದ ಮಹತ್ವವನ್ನು ಅರಿತ ಮೇಲೆ ತಮ್ಮ ಮಕ್ಕಳಿಗೆ ಅನೇಕ ತೊಂದರೆಗಳ ನಡುವೆಯೂ ಶಿಕ್ಷಣ ಕೊಡಿಸಲು ಮುಂದಾಗಿದ್ದಾರೆ. ಮನೆಯ

ನಿರ್ಧಾರಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಮೊದಲಿಗಿಂತ ಈಗ ಸ್ವಲ್ಪ ಹೆಚ್ಚಿರುವುದು ಕಂಡುಬಂದಿದೆ.

ಒಟ್ಟಾರೆಯಾಗಿ ಸ್ವ-ಸಹಾಯ ಗುಂಪುಗಳು ಮಹಿಳೆಯ ಸಬಲೀಕರಣದಲ್ಲಿ ತನ್ನದೇ ಆದಂತಹ ಮಹತ್ವದ ಪಾತ್ರವನ್ನು ನಿರ್ವಹಣೆ ಮಾಡುತ್ತಿವೆ. ಅವಳ ಸಾಮಾಜಿಕ, ಆರ್ಥಿಕ, ಆರೋಗ್ಯಕ್ಕೆ ಸಂಬಂಧಿಸಿದಂತೆ ಸ್ಥಾನ-ಮಾನಗಳು ಕುಟುಂಬದಲ್ಲಿ ಮತ್ತು ಸಮಾಜದಲ್ಲಿ ಎತ್ತರಿಸಲು ಸಹಕರಿಸಿವೆ. ಹಿಂದೆ ಮಹಿಳೆಯನ್ನು ಕುರಿತು "ಹೆಣ್ಣಿನ ಬುದ್ದಿ ಮೊಳಕಾಲ ಕೆಳಗೆ ಎಂದು ಹೇಳುತ್ತಿದ್ದ" ಪುರಷ ಮಹಾನುಭಾವರು ಇತ್ತೀಚಿಗೆ ಹೇಳುವ ಮಾತುಗಳೆಂದರೆ "ನನ್ನ ಹೆಂಡ್ತಿ ಸಂಘ ಸೇರಿದ ಮ್ಯಾಲ ಶ್ಯಾಣಿ ಆಗ್ಯಾಳಾ ಆಕಿ ಇಲ್ಲ ಅಂದರ ನಮ್ಮ ಸಂಸಾರ ಬಂಡಿ ನಡಿಯುವುದು ಕಷ್ಟ ಎಂದು ಹೇಳುತ್ತಿದ್ದಾರೆ". ಅದಕ್ಕೆ ಸರಿಯಾಗಿ ಮಹಿಳೆ ತನ್ನ ಸಂಸಾರದ ಬಂಡಿಯನ್ನು ಚಾಕುಚಕ್ಕತೆಯಿಂದ ಸಾಗಿಸುತ್ತಿದ್ದಾಳೆ. ಈ ರೀತಿಯಾಗಿ ಸ್ವ-ಸಹಾಯ ಸಂಘಗಳು ಗ್ರಾಮೀಣ ಮಹಿಳೆಯರ ಬದುಕಿನಲ್ಲಿರುವ ತೊಡಕುಗಳ ವಿರುದ್ಧ ದೊಡ್ಡ ಬಿರುಗಾಳಿಯನ್ನೇ ಎಬ್ಬಿಸಿ ಪರಿಹಾರಗಳು ಸಾಧ್ಯ ಎಂಬ ಆತ್ಮ ವಿಶ್ವಾಸವನ್ನು ಮೂಡಿಸಿ ಶಾಂತ ವಾತಾವರಣವನ್ನು ನಿರ್ಮಿಸಿ ಮಹಿಳೆಯರು ಸಂಘಟಿತರಾಗುವುದು ಅತೀ ಅವಶ್ಯಕವೆಂದು ತಿಳಿಸಿವೆ. ಮಹಿಳೆ ಮತ್ತು ಸ್ವ-ಸಹಾಯ ಸಂಘ ಒಂದು ಬಿಟ್ಟು ಇನ್ನೊಂದು ಇಲ್ಲವೆಂಬಂತೆ ಮಹಿಳೆಯ ಸಬಲೀಕರಣ ಪ್ರಕ್ರಿಯೆಯಲ್ಲಿ ಇವು ಎರಡು ಒಂದೇ ನಾಣ್ಯದ ಎರಡು ಮುಖದಂತೆ ಕಾರ್ಯನಿರ್ವಹಿಸುತ್ತಿವೆ. ಆದರೂ ಮಹಿಳೆ ಸ್ವ-ಸಹಾಯ ಗುಂಪಿನಲ್ಲಿ ಪೂರ್ಣ ಪ್ರಮಾಣದಲ್ಲಿ ಸಬಲತೆಯನ್ನು ಹೊಂದಿದ್ದಾಳೆಯೇ ಎಂಬ ಪ್ರಶ್ನೆ ಮತ್ತೆ ಮತ್ತೆ ಎದುರಾಗುತ್ತಿದೆ.

ಸ್ವ-ಸಹಾಯ ಸಂಘಗಳ ಸಂಖ್ಯೆ ಮೊದಲಿಗಿಂತ ಇಂದು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಸ್ಪೂರ್ತಿಯಿಂದ ಸ್ಥಾಪಿತವಾಗುತ್ತಿವೆ. ಗ್ರಾಮ ಮಟ್ಟದಿಂದ ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ರಾಷ್ಟ್ರ ಮಟ್ಟದವರಿಗೂ ಮಹಿಳೆಯರು ಚಲಿಸಲು ಸಾಧ್ಯವಾಗಿದೆ. ಇತ್ತೀಚಿಗೆ ಕೆಲವು ಗ್ರಾಮೀಣ ಮಹಿಳೆಯರು ಸ್ವ-ಸಹಾಯ ಸಂಘದ ಮಹತ್ವ ಮತ್ತು ಮಹಿಳೆಯರ ಜೀವನದ ಸಮಸ್ಯೆಗಳು ಪರಿಹಾರಗಳು ಮತ್ತು ಬದಲಾವಣೆಗಳು ಸಂಘಟನೆಯ ಮಹತ್ವ ಮುಂತಾದ ವಿಷಯಗಳನ್ನು ಕುರಿತು ಚರ್ಚಿಸಲು ಸಂಪನ್ಮೂಲ ವ್ಯಕ್ತಿಗಳಾಗಿ ಬೇರೆ ಸಂಘ-ಸಂಸ್ಥೆಗಳಿಗೆ ಜಾಗೃತಿ ಮೂಡಿಸಲು ಹೋಗಿ ಬರುತ್ತಿರುವುದು ಅತ್ಯಂತ ಹೆಮ್ಮೆಯ ವಿಷಯವಾಗಿದೆ. ಘಟಕ ಸಂಘಗಳು ಒಕ್ಕೂಟಗಳಾಗಿವೆ. ಹೀಗೆ ಗ್ರಾಮೀಣ ಮಹಿಳೆ ಸ್ವ-ಸಹಾಯ ಸಂಘಗಳ ಮುಖಾಂತರ ತನ್ನ ಬದುಕಿನಲ್ಲಿ ಪ್ರಗತಿಯನ್ನು ಸಾಧಿಸಿ ಸಬಲತೆಯ ಹೆಜ್ಜೆಗಳನ್ನು ಇಡುತ್ತಿದ್ದಾಳೆ.

ಮಹಿಳಾ ಸಬಲೀಕರಣದಲ್ಲಿ ಸ್ವಯಂ –ಸೇವಾ ಸಂಸ್ಥೆಗಳ ಪಾತ್ರ :

ಸ್ವಯಂ ಸೇವಾ ಸಂಸ್ಥೆಗಳು ಗ್ರಾಮೀಣ ಮಹಿಳೆಯರ, ಸರ್ಕಾರಿ ಯೋಜನೆಗಳ ಮತ್ತು ಅಧಿಕಾರಿಗಳ ಮಧ್ಯದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿವೆ. ಸೇವಾ ಮನೋಭಾವನೆಯಿಂದ ಹೆಚ್ಚಿನ ಲಾಭದ ಫಲಾಪೇಕ್ಷೆಯಿಲ್ಲದೆ ಗ್ರಾಮೀಣ ಜನರ ಅಭಿವೃದ್ಧಿಯನ್ನೆ ಮುಖ್ಯ ಗುರಿಯಾಗಿರಿಸಿ ಕೊಂಡಂತಹ ಅನೇಕ ಸ್ವಯಂ ಸೇವಾ ಸಂಸ್ಥೆಗಳು ಹೈದ್ರಾಬಾದ–ಕರ್ನಾಟಕದ ಈ ಮೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಕೆಲವೊಂದನ್ನು ಮಾತ್ರ ಹೆಸರಿಸಲಾಗಿದೆ.

1. ಬೀದರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳೆಂದರೆ :

   1) ಮಹಿಳಾ ಸಮಾಖ್ಯ ಕರ್ನಾಟಕ, 2) ಪ್ರವರ್ದ

   3) ದಾರಿ 4) ಅರಳು

   5) ಎನ್.ಕೆ.ಆರ್.ಡಿ.ಎಸ್ 6) ಆರ್ಬಿಟ್ ಇತ್ಯಾದಿ.

2. ಗುಲಬರ್ಗಾ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳೆಂದರೆ :

   1) ಮಹಿಳಾ ಸಮಾಖ್ಯ ಕರ್ನಾಟಕ 2) ಮೈರಾಡಾ

   3) ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆ 4)ಸಾರ್ಡ್ಸ್

   5) ವಿದ್ಯಾ ಇತ್ಯಾದಿ.

3. ರಾಯಚೂರು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳೆಂದರೆ :

   1) ಮಹಿಳಾ ಸಮಾಖ್ಯ ಕರ್ನಾಟಕ 2) ಪ್ರೇರಣಾ

   3)ಸಮೂಹ ಇತ್ಯಾದಿ.

ಗ್ರಾಮೀಣ ಅಭಿವೃದ್ಧಿ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ಸಂಘಟನೆ ಅವರ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು ಹೆಚ್ಚಿಸಲು ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ನಮ್ಮ ಅಧ್ಯಯನಕ್ಕೆ ಮಹಿಳಾ ಸಮಾಖ್ಯ ಕರ್ನಾಟಕ ಈ ಮೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುವುದರಿಂದ ಈ ಸಂಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಹಾಗೆಯೇ ಗುಲಬರ್ಗಾದಲ್ಲಿ ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯನ್ನು ಸಹ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಎರಡು ಸಂಸ್ಥೆಗಳು ತಮ್ಮ ಉದ್ದೇಶಿತ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಯಾವ ರೀತಿಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿವೆ ಎಂದು ನೋಡುವುದು ಅಧ್ಯಯನದ ಆಶಯವಾಗಿದೆ.

ಈ ರೀತಿಯಾಗಿ ಗ್ರಾಮೀಣ ಮಹಿಳಾ ಸಬಲೀಕರಣವು ಹಲವಾರು ವಿಷಯಗಳ ಸೂಕ್ಷ್ಮ ಎಳೆಗಳೊಂದಿಗೆ ಸೇರಿಕೊಂಡಿರುವ ಇತಿಹಾಸ ಇದಕ್ಕೆ ಇದೆ. ಹಿಂದಿನ ಕಾಲದಿಂದಲು

ಇಂದಿನವರೆಗೂ ಪುರುಷ ಪ್ರಧಾನ ಸಮಾಜದಲ್ಲಿ ಅನೇಕ ರೀತಿಯ ಏಳು-ಬೀಳುಗಳ ನಡುವೆ ಮಹಿಳೆಯರ ಬದುಕಿನ ಪ್ರಶ್ನೆಗಳಲ್ಲಿ ಕೆಲವೊಂದಕ್ಕೆ ಉತ್ತರ ಸಿಕ್ಕರೆ ಇನ್ನೂ ಕೆಲವೊಂದಕ್ಕೆ ಉತ್ತರ ಸಿಗದೇ ಹಾಗೆಯೇ ಉಳಿದುಕೊಂಡಿವೆ. ಇಂದಿನ ಶಾಸನಗಳು, ಕಾಯ್ದೆಗಳು, ಗ್ರಾಮ ಪಂಚಾಯತಿಗಳು, ಸ್ವ-ಸಹಾಯ ಸಂಘಗಳು, ಸ್ವಯಂ ಸೇವಾ ಸಂಸ್ಥೆಗಳು, ಸರ್ಕಾರಿ ಯೋಜನೆಗಳು ಎಲ್ಲವು ಮಹಿಳೆಯರ ಅಭಿವೃದ್ಧಿಯನ್ನೇ, ಸಬಲೀಕರಣವನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡರೂ ಸಾಧನೆ ಮಾತ್ರ ನೀರಿಕ್ಷಿತ ಮಟ್ಟದಲ್ಲಿ ಕಾಣುವುದು ಅಸಾಧ್ಯವಾಗಿದೆ. ಮಹಿಳೆಯ ಪರಿಪೂರ್ಣ ಸಬಲತೆಗೆ ಇರುವ ತೊಡಕುಗಳೇನು ಎಂಬುವುದನ್ನು ಶೋಧಿಸಿ ಪರಿಶೀಲಿಸುವುದು ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

ಅಧ್ಯಯನದ ಮುಖ್ಯ ಉದ್ದೇಶಗಳು :

ಗ್ರಾಮೀಣ ಮಹಿಳೆಯರ ಸಬಲೀಕರಣದ ಹಿನ್ನೆಲೆಯಲ್ಲಿ ಗ್ರಾಮೀಣ ಮಹಿಳೆಯರು ಅದೆಷ್ಟು ಸಬಲರಾಗಿದ್ದಾರೆ ಎನ್ನುವುದನ್ನು ಮಹಿಳಾ ಆಯಾಮಗಳೊಂದಿಗೆ ಅಧ್ಯಯನ ಮಾಡುವುದೇ ಈ ಸಂಶೋಧನೆಯ ಮುಖ್ಯ ಉದ್ದೇಶವಾಗಿದೆ. ಮಹಿಳಾವಾದದಷ್ಟೆ ಸಮರ್ಥವಾಗಿ ಸಮಾನತೆ, ಸ್ವಾತಂತ್ರ್ಯ ಹಾಗೂ ಸ್ವಾವಲಂಬನೆಯನ್ನು ಸ್ತ್ರೀ ಆಯಾಮಗಳೊಂದಿಗೆ ಒಟ್ಟೊಟ್ಟಿಗೆ ಅಧ್ಯಯನ ಮಾಡುವುದು ಸಂಶೋಧನೆಯ ಗುರಿಯಾಗಿದೆ. ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶಗಳು ಈ ಕೆಳಗಿನಂತಿವೆ.

1. ಹೈದ್ರಾಬಾದ-ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಾದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳ ಗ್ರಾಮೀಣ ಪ್ರದೇಶದ ಮಹಿಳೆಯರ ಸಬಲೀಕರಣ ಕುರಿತು ಅಧ್ಯಯನ ಮಾಡುವುದು.
2. ಗ್ರಾಮೀಣ ಮಹಿಳೆಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕ ಮತ್ತು ಆರ್ಥಿಕತೆಗಳ ಪಾತ್ರವನ್ನು ಗುರುತಿಸುವುದು.
3. ಗ್ರಾಮೀಣ ಮಹಿಳೆಯರು ಸ್ವ-ಸಹಾಯ ಸಂಘದ ಗುರಿ, ಉದ್ದೇಶದ ಬಗ್ಗೆ ಹೊಂದಿರುವ ಮಾಹಿತಿ.
4. ಗ್ರಾಮೀಣ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಆರೋಗ್ಯದ ಸಬಲೀಕರಣಕ್ಕೆ ಸಂಬಂಧಿಸಿದಂತೆ ಅಧ್ಯಯನ ಮಾಡುವುದು.
5. ಗ್ರಾಮೀಣ ಮಹಿಳೆಯ ಸಬಲೀಕರಣವನ್ನು ಸ್ತ್ರೀವಾದದ ಸೈದ್ಧಾಂತಿಕ ಚರ್ಚೆಗಳ ಮೂಲಕ ಶೋಧಿಸುವುದು.

6. ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳು ಮಹಿಳೆಯರ ಮೇಲೆ ಬೀರಿದ ಪರಿಣಾಮಗಳನ್ನು ಕುರಿತು ಅಧ್ಯಯನ ಮಾಡುವುದು.
7. ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವನ್ನು ಕುರಿತು ಅಧ್ಯಯನ ಮಾಡುವುದು.
8. ಗ್ರಾಮೀಣ ಮಹಿಳೆಯ ಬದುಕಿನ ತೊಡಕುಗಳು, ಪರಿಹಾರ, ಸಲಹೆಗಳು, ಮುನ್ನೆಚ್ಚರಿಕೆ ಕ್ರಮಗಳು ಮುಂತಾದ ವಿಷಯಗಳನ್ನು ಸ್ತ್ರೀವಾದಿ ನೆಲೆಯಲ್ಲಿ ಅಧ್ಯಯನಿಸಿ ಮುಂದಿನ ಸಾಧ್ಯತೆಗಳು ಏನೆಂದು ನೋಡುವುದೇ ಈ ಅಧ್ಯಯನದ ಪ್ರಮುಖ ಆಶಯವಾಗಿದೆ.

ಸಂಶೋಧನಾ ಅಧ್ಯಯನದ ವ್ಯಾಪ್ತಿ :

ಹಿನ್ನೆಲೆ :

ಹೈದ್ರಾಬಾದ–ಕರ್ನಾಟಕ ಪ್ರದೇಶದಲ್ಲಿ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳು ಸೇರುತ್ತವೆ. ಈ ಜಿಲ್ಲೆಗಳು ಹಿಂದೆ ಹೈದ್ರಾಬಾದ ನಿಜಾಮನ ಆಳ್ವಿಕೆಗೆ ಒಳಪಟ್ಟಿದ್ದವು. ನವೆಂಬರ 1, 1956 ರಲ್ಲಿ ಭಾಷಾವಾರು ಪ್ರಾಂತಗಳ ರಚನೆಯಾಗಿ ಕರ್ನಾಟಕದಲ್ಲಿ ಸೇರ್ಪಡೆಯಾದ ನಂತರ ಈ ಪ್ರದೇಶಕ್ಕೆ ಹೈದ್ರಾಬಾದ–ಕರ್ನಾಟಕ ಪ್ರದೇಶವೆಂದು ಕರೆದಿದ್ದಾರೆ. ನೂತನ ಕರ್ನಾಟಕ ರಾಜ್ಯವು ಮೈಸೂರು ರಾಜ್ಯಕ್ಕೆ ಸೇರಿದ ಜಿಲ್ಲೆಗಳೆಂದರೆ, ಮೈಸೂರು, ಮಂಡ್ಯ, ಬೆಂಗಳೂರು, ಕೋಲಾರ, ತುಮಕೂರ, ಚಿತ್ರದುರ್ಗ, ಚಿಕ್ಕಮಂಗಳೂರು ಮತ್ತು ಹಾಸನ ಜಿಲ್ಲೆಗಳು. ಮುಂಬೈ–ಕರ್ನಾಟಕ ಪ್ರಾಂತ್ಯಕ್ಕೆ ಸೇರಿದ ಜಿಲ್ಲೆಗಳೆಂದರೆ, ಧಾರವಾಡ, ಬಿಜಾಪೂರ, ಬೆಳಗಾವ ಮತ್ತು ಉತ್ತರ ಕನ್ನಡ ಜಿಲ್ಲೆಗಳು. ಮದ್ರಾಸ್–ಕರ್ನಾಟಕ ಪ್ರಾಂತಕ್ಕೆ ಸೇರಿದ ಜಿಲ್ಲೆಗಳೆಂದರೆ, ಬಳ್ಳಾರಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳು ಅಲ್ಲದೇ ಹಿಂದಿನ ಕೊಡುಗು ಜಿಲ್ಲೆಯ ಗುಡ್ಡಾಗಾಡು ಪ್ರದೇಶ ಒಳಗೊಂಡಿದೆ.

ಧರಿ ಪ್ರಾಂತವೆಂದು ಹೆಸರಾದ ಬೀದರ ಜಿಲ್ಲೆಗೆ ಕೆಂಪು ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯಿದೆ. ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳು ಎರೆಯ, ಮಸಾರಿ ಅಚ್ಚುಕಪ್ಪಿನ ಕೆಂಪು ಮರಳು ಮಿಶ್ರತ ಜೇಡಿಯ ಮಣ್ಣಿನಿಂದ ಕೂಡಿದ ಭೂಮಿಯಿದೆ. ಈ ಮೂರು ಜಿಲ್ಲೆಗಳು ಆಗಾಗ ಬರಗಾಲವನ್ನು ಎದುರಿಸುತ್ತವೆ. ಇಲ್ಲಿಯ ಜನರ ಮುಖ್ಯ ಉದ್ಯೋಗ ಒಕ್ಕಲುತನ ಆಗಿದೆ. ಇಂತಹ ವೈವಿಧ್ಯಮಯವಾದ ಹಿನ್ನೆಲೆಯುಳ್ಳ ಹೈದ್ರಾಬಾದ–ಕರ್ನಾಟಕ ಪ್ರದೇಶ ಮುಂದೆ ಇಂಗ್ಲೀಷರ ದಬ್ಬಾಳಿಕೆಯಿಂದ ನಿಜಾಮ ಸರ್ಕಾರದ ಸಾಮ್ರಾಜ್ಯಶಾಹಿ ಆಡಳಿತ ಹಾಗೂ ರಜಾಕರ ಹಾವಳಿಯಿಂದ ಇಲ್ಲಿನ ಜನರ ಬದುಕು ಸಾಗಿ ಬಂದಿರುವುದು ಒಂದು ಸಾಹಸವೇ ಸರಿ. ಇಲ್ಲಿಯ

ಜನರ ಜೀವನ ಅತ್ಯಂತ ಶೋಚನೀಯ ಸ್ಥಿತಿಯಲ್ಲಿದೆ. ಅನಕ್ಷರತೆ ಮತ್ತು ಬಡತನದಿಂದ ತಮ್ಮೂರಿನಲ್ಲಿ ದುಡಿಮೆಗೆ ತಕ್ಕ ಕೂಲಿ ಸಿಗದೇ ಮೂಲಭೂತ ಅವಶ್ಯಕತೆಗಳು (ಊಟ, ಬಟ್ಟೆ, ವಸತಿ) ಸಿಗದೇ ಹೊಟ್ಟೆ ಹೊರೆದುಕೊಳ್ಳಲು ತಮ್ಮ ಜನರು ತಮ್ಮ ಹಳ್ಳಿಗಳನ್ನು ಬಿಟ್ಟು ಪುಣೆ, ಬೊಂಬಾಯಿ, ರತ್ನಾಗಿರಿ, ಬೆಂಗಳೂರು ಮೊದಲಾದ ಪಟ್ಟಣಗಳಿಗೆ ಸಂಸಾರ ಸಮೇತ ವಲಸೆ ಹೋಗಿ ದುಡಿದು ಬದುಕುತ್ತಿದ್ದಾರೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ ಇವತ್ತಿಗೂ ಇಲ್ಲಿಯ ಜನ ಹಿಂದುಳಿದಿದ್ದಾರೆ. ಅನೇಕ ಹಳ್ಳಿಗಳಲ್ಲಿ ನಾಗರಿಕತೆಯ ಗಾಳಿ ಇನ್ನೂ ಬಿಸಿಲ್ಲ.

ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಸರ್ಕಾರದ ಪ್ರಯತ್ನ ಸಾಗಿದ್ದು, "1954 ರಲ್ಲಿ ಫ್ಯಾಕ್ಟ್ ಫೈಂಡಿಂಗ್ ಕಮಿಟಿ ತನ್ನ ವರದಿಯಲ್ಲಿ ಹೈದ್ರಾಬಾದ-ಕರ್ನಾಟಕ ಪ್ರದೇಶ ಎಲ್ಲ ಹಂತಗಳಲ್ಲಿಯೂ ಹಿಂದುಳಿದಿದೆ. ಮುಂಬರುವ ವರ್ಷಗಳಲ್ಲಿ ಇದಕ್ಕೆ ವಿಶೇಷವಾದ ಕಾಳಜಿ ವಹಿಸಬೇಕೆಂದು ಸ್ಪಷ್ಟಪಡಿಸಿದೆ".

ಅಧ್ಯಯನದ ಕ್ಷೇತ್ರದ ವ್ಯಾಪ್ತಿ:

ಹೈದ್ರಾಬಾದ-ಕರ್ನಾಟಕ ಪ್ರದೇಶವು ಹಿಂದುಳಿದಿರುವುದರಿಂದ ಅಧ್ಯಯನದ ಕ್ಷೇತ್ರ ವ್ಯಾಪ್ತಿಯಲ್ಲಿ ಬೀದರ-ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಸ್ವಾತಂತ್ರದಿಂದಿಚೆಗೆ ಈ ಪ್ರದೇಶದ ಅಭಿವೃದ್ಧಿಗೆ ಸಾಕಷ್ಟು ಪ್ರಯತ್ನಗಳಾಗಿದ್ದು, ಅದಕ್ಕೆ ಸಂಬಂಧಿಸಿದಂತೆ, ಸಂವಿಧಾನದ 371ನೇ ಕಲಂನ ತಿದ್ದುಪಡಿ ಮಾಡಬೇಕೆಂದು ಈ ಪ್ರದೇಶದ ಜನರು ಸರ್ಕಾರವನ್ನು ಒತ್ತಾಯಿಸುತ್ತಿದ್ದಾರೆ. ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಹಿಂದುಳಿದಿರುವ ಈ ಪ್ರದೇಶದ ಮೂರು ಜಿಲ್ಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಪ್ರದೇಶಕ್ಕೆ ಸೇರಿದ ಜಿಲ್ಲೆಗಳು ಬಳ್ಳಾರಿ, ಇದು ಮೊದಲು ಮದ್ರಾಸ್ ಪ್ರಾಂತಕ್ಕೆ ಸೇರಿದ ಜಿಲ್ಲೆಯಾಗಿರುವುದರಿಂದ ಹಾಗೂ ಕೊಪ್ಪಳ ಜಿಲ್ಲೆಯೂ ಅನೇಕ ವರ್ಷಗಳ ಕಾಲ ರಾಯಚೂರು ಜಿಲ್ಲೆಯ ಒಂದು ಭಾಗವಾಗಿರುವುದರಿಂದ ಈ ಜಿಲ್ಲೆಗಳ ನಡುವೆ ಅಂತಹ ವ್ಯತ್ಯಾಸಗಳು ಕಾಣದೇ ಇರುವುದರಿಂದ ಅಧ್ಯಯನಕ್ಕೆ ಒಳಪಡಿಸಿಲ್ಲ ಹಾಗೂ ಇತ್ತಿಚಿಗೆ ಅಧ್ಯಯನದ ಕೊನೆಯ ಹಂತದಲ್ಲಿ ಅಂದರೆ (ಅಧ್ಯಯನ ಮುಕ್ಕಾಲು ಭಾಗ ಮುಗಿಯುವ ಹಂತದಲ್ಲಿ) ಕೊನೆಯ ಹಂತದಲ್ಲಿ ಯಾದಗಿರಿ ಈ ಮೊದಲು ಗುಲಬರ್ಗಾದ ತಾಲ್ಲೂಕಾಗಿದ್ದು, ಇತ್ತಿಚಿಗೆ ಜಿಲ್ಲೆಯಾಗಿದೆ. ಈಗಾಗಲೇ ಗುಲಬರ್ಗಾದ ಕ್ಷೇತ್ರ ಕಾರ್ಯದಲ್ಲಿ ಯಾದಗಿರಿ ತಾಲ್ಲೂಕನ್ನು ತೆಗೆದುಕೊಳ್ಳಲಾಗಿದೆ.

ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳ ಕೆಲವು ಗ್ರಾಮಗಳನ್ನು ಉದ್ದೇಶಿತ ಪ್ರದೇಶವಾಗಿ ಆಯ್ಕೆ ಮಾಡಲಾಗಿದೆ. ಗ್ರಾಮೀಣ ಮಹಿಳೆಯ ಸಬಲೀಕರಣ ಪ್ರಕ್ರಿಯೆಯಲ್ಲಿ ಸ್ವ-ಸಹಾಯ ಸಂಘಗಳು ಮಹತ್ವದ ಪಾತ್ರವನ್ನು ವಹಿಸಿರುವುದರಿಂದ ಸ್ವ-ಸಹಾಯ ಸಂಘಗಳನ್ನು

ಹೊರತುಪಡಿಸಿ ಮಹಿಳಾ ಸಬಲೀಕರಣದ ಪರಿಕಲ್ಪನೆಯನ್ನು ವಿಶ್ಲೇಷಿಸುವುದು ಅಸಾಧ್ಯದ ಮಾತಾಗಿದೆ. ಒಟ್ಟಾರೆ ಕ್ಷೇತ್ರದ ಅಧ್ಯಯನ ನೀರಿಕ್ಷೆಗೆ ಮೀರಿದ ವ್ಯಾಪಕ ವ್ಯಾಪ್ತಿಯನ್ನು ಹೊಂದಿದೆ. ಸಾವಿರಾರು ಸ್ವ-ಸಹಾಯ ಸಂಘಗಳಿವೆ ಪ್ರತಿಯೊಂದನ್ನು ಕೂಲಂಕುಷವಾಗಿ ಅಧ್ಯಯನ ಮಾಡುವುದು ಕಷ್ಟ. ವಿವಿಧ ತಾಲೂಕುಗಳಲ್ಲಿ ವಿವಿಧ ಸಂಖ್ಯೆಯ ಸ್ವ-ಸಹಾಯ ಸಂಘಗಳಿವೆ. ಹೈದ್ರಾಬಾದ-ಕರ್ನಾಟಕದ ಮೂರು ಜಿಲ್ಲೆಗಳ ವ್ಯಾಪ್ತಿಯಲ್ಲಿ ಬರುವ ವಿವಿಧ ತಾಲೂಕುಗಳಿಂದ ವಿವಿಧ ಗ್ರಾಮೀಣ ಪ್ರದೇಶದ ಸ್ವ-ಸಹಾಯ ಸಂಘಗಳನ್ನು ಸಂಶೋಧನಾ ಅಧ್ಯಯನದ ಕ್ಷೇತ್ರ ಕಾರ್ಯಕ್ಕೆ ಆಯ್ಕೆ ಮಾಡಿ ಕೊಳ್ಳುವುದು ಅನಿವಾರ್ಯವಾಯಿತು.

ಮಾಹಿತಿಯ ಸ್ವರೂಪ:

ಎಲ್ಲವನ್ನು ಅಧ್ಯಯನಿಸುವ ಬದಲು ವಿವಿಧ ಸಂಖ್ಯೆಯ ಹಾಗೂ ವೈವಿಧ್ಯಮಯವಾಗಿರುವ 30 ಸ್ವ-ಸಹಾಯ ಸಂಘಗಳಿಂದ 300-ಜನ ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರನ್ನೊಳಗೊಂಡಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಗ್ರಾಮೀಣ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ, ಸಾಹಿತ್ಯ ಒದಗಿಸುವ ಮಾಹಿತಿಗಳು ಮಹಿಳಯರ ಸಬಲೀಕರಣದ ವಿಭಿನ್ನ ನೆಲೆಗಳನ್ನು ಗುರುತಿಸಲು ಸಹಾಯಕವೆನಿಸುತ್ತದೆ. ಈ ವಿಭಿನ್ನ ಮಾದರಿಗಳ ಮೂಲಕ ಮಹಿಳಾ ಸಬಲೀಕರಣದಲ್ಲಿ ತೊಡಕುಗಳು ಪರ್ಯಾಯವಾಗಿ ಸಾಧ್ಯತೆಗಳಿವೆ ಎನ್ನುವ ದಿಕ್ಕಿನಲ್ಲಿ ಪ್ರಸ್ತುತ ಅಧ್ಯಯನ ಕೈಗೊಳ್ಳಲಾಗಿದೆ.

ಸಂಶೋಧನಾ ಅಧ್ಯಯನದ ವೈಧಾನಿಕತೆ :

ಈ ಅಧ್ಯಯನವು ಹೈದ್ರಾಬಾದ-ಕರ್ನಾಟಕ ಪ್ರದೇಶದ ಮೂರು ಜಿಲ್ಲೆಗಳಲ್ಲಿ ಒಳಗೊಂಡಿದೆ. ಅವುಗಳೆಂದರೆ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳ ಗ್ರಾಮೀಣ ಪ್ರದೇಶವನ್ನು ಅಧ್ಯಯನ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ.

ಈ ಮೂರು ಜಿಲ್ಲೆಗಳ ಕೆಲವು ಗ್ರಾಮಗಳನ್ನು ಉದ್ದೇಶಿತ ಪ್ರಾದೇಶವಾಗಿ ಆಯ್ಕೆಮಾಡಿಕೊಳ್ಳಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರ ಸಬಲೀಕರಣದಲ್ಲಿ ಸ್ವ-ಸಹಾಯ ಗುಂಪುಗಳು ಮಹತ್ವದ ಪಾತ್ರ ನಿರ್ವಹಿಸುವುದರಿಂದ ಸ್ವ-ಸಹಾಯ ಸಂಘಗಳನ್ನು ಹೊರತುಪಡಿಸಿ ಮಹಿಳಾ ಸಬಲೀಕರಣದ ಪರಿಕಲ್ಪನೆಯ ಬಗ್ಗೆ ತಿಳಿದುಕೊಳ್ಳುವುದು ಅಸಾಧ್ಯದ ಮಾತಾಗಿದೆ.

ಕ್ಷೇತ್ರ ಕಾರ್ಯದ ಮಾದರಿ ಮತ್ತು ಆಯ್ಕೆಯ ಪ್ರಕ್ರಿಯೆ :

ಒಟ್ಟಾರೆ ಕ್ಷೇತ್ರದ ಸಂಶೋಧನಾ ಅಧ್ಯಯನ ನಿರೀಕ್ಷೆಗೂ ಮೀರಿದ ವ್ಯಾಪಕ ವ್ಯಾಪ್ತಿಯನ್ನು ಹೊಂದಿದೆ. ಒಂದೊಂದು ಜಿಲ್ಲೆಯಲ್ಲಿಯೂ ಸಾವಿರಾರು ಸ್ವ-ಸಹಾಯ ಸಂಘಗಳಿರುವುರಿಂದ ಪ್ರತಿಯೊಂದನ್ನು ಅಧ್ಯಯನ ಮಾಡುವುದು ಅಸಾಧ್ಯದ ಮಾತಾಗಿದೆ. ಹಾಗೆಯೇ ವಿವಿಧ

ತಾಲೂಕುಗಳಲ್ಲಿ ಹೆಚ್ಚಿನ ಸಂಖ್ಯೆಯ ಸ್ವ-ಸಹಾಯ ಸಂಘಗಳಿರುವುದರಿಂದ ಹೈದ್ರಾಬಾದ-ಕರ್ನಾಟಕ ವಿವಿಧ ಗ್ರಾಮೀಣ ಪ್ರದೇಶದ ಸ್ವ-ಸಹಾಯ ಸಂಘಗಳನ್ನು ರ್‍ಯಾಂಡಮ ಆಗಿ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಎಲ್ಲವನ್ನು ಅಧ್ಯಯನಿಸುವ ಬದಲು ವಿವಿಧ ಸಂಖ್ಯೆಯ ಹಾಗೂ ವೈವಿಧ್ಯಮಯವಾಗಿರುವ 30 ಸ್ವ-ಸಹಾಯ ಸಂಘಗಳಿಂದ 300 ಜನ ಮಹಿಳೆಯರನ್ನು ಅಂದರೆ ಒಂದು ಸ್ವ-ಸಹಾಯ ಸಂಘದಿಂದ 10-ಜನ ಮಹಿಳೆಯರನ್ನು, ಇದರಲ್ಲಿ 5-ಜನ ಸಂಘದ ಪ್ರತಿನಿಧಿಗಳು ಮತ್ತು 5-ಜನ ಸಂಘದ ಸದಸ್ಯರನ್ನೊಳಗೊಂಡಂತೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಮಾದರಿ ವಿಧಾನ :

ಈ ಅಧ್ಯಯನ ಬಹು ಹಂತದ ಮಾದರಿ ವಿಧಾನವನ್ನು ಆಧರಿಸಿ ಮಾಡಲಾಗಿದೆ. ಈಗಾಗಲೇ ನಿರ್ಧರಿಸಿದಂತೆ ನಿರೀಕ್ಷಿತ ಮಾದರಿಯ ಸಂಖ್ಯೆಗಳನ್ನು ಪಡೆಯಲು ಸಂಶೋಧನಾ ಅಧ್ಯಯನದಲ್ಲಿ ತಾಲ್ಲೂಕುಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಮುಂದಿನ ಹಂತದಲ್ಲಿ ಆಯ್ಕೆಯಾದ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಪಂಚಾಯ್ತಿ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಆಯ್ಕೆಯಾದ ಹಳ್ಳಿಗಳಿಂದ ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು.

ಅಧ್ಯಯನಕ್ಕೆ ಅಗತ್ಯವಿರುವ ವಿವಿಧ ಸ್ತರದ ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಿಕೊಳ್ಳುವ ಪ್ರಕಿಯೆ ಕಷ್ಟ ಸಾಧ್ಯವಾಗಿದೆ. ಈ ನಿಟ್ಟಿನಲ್ಲಿ ಅಧ್ಯಯನಕ್ಕೆ ಅಗತ್ಯವಾಗಿ ಬೇಕಾದ ಸಮೂಹಗಳನ್ನು ನಿಯಮ ಅನುಸಾರವಾಗಿ ಮುಂದುವರೆದು ಯಾದೃಚ್ಚಿಕ ಮಾದರಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಮಾದರಿ ಚೌಕಟ್ಟಿನ ಸಿದ್ಧತೆ :

ಪ್ರಾಥಮಿಕ ಹಂತದ ವಿಧಾನವು ಕೋಷ್ಠಕದಲ್ಲಿ ವಿವರಿಸಿದಂತೆ ಮೂರು ಜಿಲ್ಲೆಗಳಲ್ಲಿ ತಾಲ್ಲೂಕುಗಳನ್ನು ಆಯ್ಕೆ ಮಾಡಲಾಯಿತು. ತಾಲ್ಲೂಕುಗಳಲ್ಲಿ ಗ್ರಾಮ ಪಂಚಾಯ್ತಿಗಳ ಹಾಗೂ ಹಳ್ಳಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಆ ಹಳ್ಳಿಯ ಅಂದರೆ ಗ್ರಾಮದ ಸಂಪರ್ಕ ಸಾಧನಗಳು, ಸೌಲಭ್ಯಗಳು (ಭೌತಿಕ) ಹಾಗೂ ಸಂವಹನವನ್ನು ಗಣನೆಗೆ ತೆಗೆದುಕೊಂಡು ಆಯ್ಕೆ ಪ್ರಕ್ರಿಯೆ ಮಾಡಲಾಯಿತು.

ಬೀದರ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ ಎರಡು ತಾಲೂಕುಗಳನ್ನು ಬಸವಕಲ್ಯಾಣ ಮತ್ತು ಹಮನ್ನಾಬಾದ, ಗುಲಬರ್ಗಾ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ ಮೂರು ತಾಲ್ಲೂಕುಗಳು,

ಗುಲಬರ್ಗಾ, ಚಿತ್ತಾಪೂರ, ಯಾದಗಿರಿ ಹಾಗೂ ರಾಯಚೂರು ಜಿಲ್ಲೆಯ ರಾಯಚೂರು ತಾಲೂಕನ್ನು ಅಧ್ಯಯನದ ಕ್ಷೇತ್ರ ಕಾರ್ಯಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು.

ಮಾಧ್ಯಮಿಕ ಹಂತದ ವಿಧಾನದಲ್ಲಿ ಗ್ರಾಮ ಪಂಚಾಯ್ತಿಗಳ ಆಯ್ಕೆ:

ಸಂಶೋಧನಾ ಅಧ್ಯಯನದ ಮಾಧ್ಯಮಿಕ ಹಂತದಲ್ಲಿ ಈಗಾಗಲೇ ಆಯ್ಕೆಯಾದ ತಾಲ್ಲೂಕುಗಳಿಂದ ಗ್ರಾಮ ಪಂಚಾಯ್ತಿಗಳನ್ನು ಆಯ್ಕೆ ಮಾಡಲಾಯಿತು. ತಾಲ್ಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳ ಪ್ರಕಾರ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲ್ಲೂಕಿನಲ್ಲಿ 36 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ ಹಾಗೂ ಹುಮನ್ನಾಬಾದ ತಾಲ್ಲೂಕಿನಲ್ಲಿ 33 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ. ಗುಲಬರ್ಗಾ ಜಿಲ್ಲೆಯ ಗುಲಬರ್ಗಾ ತಾಲ್ಲೂಕಿನಲ್ಲಿ 36 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ. ಹಾಗೂ ಚಿತ್ತಾಪೂರ ತಾಲ್ಲೂಕಿನಲ್ಲಿ 35 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ. ಯಾದಗಿರಿ ತಾಲ್ಲೂಕಿನಲ್ಲಿ 39 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ. ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನಲ್ಲಿ 28 ಗ್ರಾಮ ಪಂಚಾಯ್ತಿ ಹಳ್ಳಿಗಳಿವೆ.

ಕೋಷ್ಟಕ 1.1

ಮೂರು ಜಿಲ್ಲೆಯ ತಾಲ್ಲೂಕ ಪಂಚಾಯ್ತಿ, ಹಳ್ಳಿಗಳ ಮತ್ತು ಸ್ವ–ಸಹಾಯ ಸಂಘದ ಸದಸ್ಯರ ವಿವರ

ಜಿಲ್ಲೆಗಳು	ತಾಲೂಕು ಗಳು	ಆಯ್ಕೆಯಾದ ತಾಲೂಕು	ತಾಲೂಕಿನ ಪಂ. ಹಳ್ಳಿ	ಆಯ್ಕೆಯಾದ ಪಂ.ಹಳ್ಳಿ	ಆಯ್ಕೆಯಾದ ಹಳ್ಳಿಯ ಖಟೂಟು	ಆಯ್ಕೆಯಾದ ಸ್ವ–ಸಹಾಯ ಸಂಘಗಳು	ಸ್ವ–ಸಹಾ ಸಂಘದ 10 ಜನ ಮಹಿಳೆಯರು
ಬೀದರ	05	02	69	05	100	10	100
ಗುಲಬರ್ಗ	10	03	110	06	175	15	115
ರಾಯಚೂರು	05	01	28	01	25	05	50
ಒಟ್ಟು	**20**	**06**	**207**	**12**	**300**	**30**	**300**

ಮೂರನೇ ಹಂತದ ಆಯ್ಕೆಯ ವಿಧಾನ : ಗ್ರಾಮ ಪಂಚಾಯ್ತಿಗಳ ಆಯ್ಕೆ ಬೀದರ ಜಿಲ್ಲೆಯ ಬಸವಕಲ್ಯಾಣ ಮತ್ತು ಹುಮನ್ನಾಬಾದ ತಾಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ 69 ಗ್ರಾಮ ಪಂಚಾಯ್ತಿಗಳಿಂದ ಐದು ಗ್ರಾಮ ಪಂಚಾಯ್ತಿ ಹಳ್ಳಿಗಳನ್ನು ಗುಲಬರ್ಗಾ, ಚಿತ್ತಾಪೂರ, ಯಾದಗಿರಿ ತಾಲೂಕಿನ ತಾಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ 110 ಗ್ರಾಮ ಪಂಚಾಯ್ತಿಗಳಿಂದ 6 ಗ್ರಾಮ ಪಂಚಾಯ್ತಿ ಹಳ್ಳಿಗಳನ್ನು, ರಾಯಚೂರು ಜಿಲ್ಲೆಯ ರಾಯಚೂರು ತಾಲೂಕು ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ 28 ಗ್ರಾಮ ಪಂಚಾಯ್ತಿಗಳಿಂದ ಒಂದು ಗ್ರಾಮ ಪಂಚಾಯ್ತಿ ಹಳ್ಳಿಯನ್ನು ಹೀಗೆ ಒಟ್ಟು 12 ಗ್ರಾಮ ಪಂಚಾಯ್ತಿ ಹಳ್ಳಿಗಳ ಆಯ್ಕೆಯನ್ನು ತಾಲೂಕು ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮತ್ತು ಕಾರ್ಯದರ್ಶಿಗಳ ಸಲಹೆಯ ಮೇರೆಗೆ ಮಾಡಲಾಗಿದೆ.

ನಾಲ್ಕನೇ ಹಂತದ ಆಯ್ಕೆಯಾದ ಗ್ರಾಮ ಪಂಚಾಯ್ತಿಗಳಿಂದ ಸ್ವ-ಸಹಾಯ ಸಂಘಗಳ ಆಯ್ಕೆ :

ತಾಲ್ಲೂಕ ಪಂಚಾಯತ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಕಾರ್ಯದರ್ಶಿಗಳು ನೀಡಿದ ಮಾಹಿತಿಯನ್ನು ಗಣನೆಗೆ ತೆಗೆದುಕೊಂಡು, ಬೀದರ ಜಿಲ್ಲೆಯ ಬಸವಕಲ್ಯಾಣ ಮತ್ತು ಹುಮನ್ನಾಬಾದ ತಾಲ್ಲೂಕಿನಿಂದ ಆಯ್ಕೆ ಮಾಡಿಕೊಂಡು ಐದು ಗ್ರಾಮ ಪಂಚಾಯ್ತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಲಹೆಯ ಮೇರೆಗೆ 100 ಸ್ವ-ಸಹಾಯ ಸಂಘಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಅದೇ ರೀತಿಯಾಗಿ ಗುಲಬರ್ಗಾದಿಂದ ಆಯ್ಕೆ ಮಾಡಿದ ತಾಲೂಕುಗಳಿಂದ ಆರು ಗ್ರಾಮ ಪಂಚಾಯತಗಳನ್ನು 175 ಸ್ವ-ಸಹಾಯ ಸಂಘಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಅದೇ ರೀತಿಯಾಗಿ ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನ ಗ್ರಾಮ ಪಂಚಾಯ್ತಿ ಹಳ್ಳಿಯಿಂದ 25 ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಲಾಗಿದೆ.

ಇವುಗಳಲ್ಲಿ ಬೀದರ ಜಿಲ್ಲೆಯ 160 ಸ್ವ-ಸಹಾಯ ಸಂಘಗಳಲ್ಲಿ 10 ಸ್ವ-ಸಹಾಯ ಸಂಘಗಳನ್ನು, ಗುಲಬರ್ಗಾ ಜಿಲ್ಲೆಯ 175 ಸ್ವ-ಸಹಾಯ ಸಂಘಗಳಿಂದ, 15 ಸ್ವ-ಸಹಾಯ ಸಂಘಗಳನ್ನು, ರಾಯಚೂರು ಜಿಲ್ಲೆಯ 25 ಸ್ವ-ಸಹಾಯ ಸಂಘಗಳಿಂದ, 5 ಸ್ವ-ಸಹಾಯ ಸಂಘಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಯಿತು. ಒಟ್ಟಾರೆಯಾಗಿ ಮೂರು ಜಿಲ್ಲೆಗಳಿಂದ ಅಧ್ಯಯನಕ್ಕೆ 30 ಸ್ವ-ಸಹಾಯ ಸಂಘಗಳನ್ನು ಆಯ್ಕೆ ಮಾಡಿಕೊಳ್ಳಲಾಯಿತು. ಪ್ರತಿ ಸ್ವ-ಸಹಾಯ ಸಂಘಗಳಿಂದ ಪದಾಧಿಕಾರಿಗಳು ಮತ್ತು ಸದಸ್ಯರು ಸೇರಿದಂತೆ 10 ಜನ ಮಹಿಳಾ ಸದಸ್ಯೆಯರನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಯಿತು. ಹೀಗೆ 30 ಸ್ವ-ಸಹಾಯ ಗುಂಪುಗಳಿಂದ ಒಟ್ಟು 300-ಜನ ಸದಸ್ಯೆಯರನ್ನು ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಸಂದರ್ಶನ ವೇಳಾ ಪಟ್ಟಿ, ಅನುಸೂಚಿಯ ಸಿದ್ಧತೆ ಹಾಗೂ ಪೂರ್ವ ಪರೀಕ್ಷೆ:

ಈ ಪ್ರದೇಶದ ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿಯೇ ಸಂದರ್ಶನ ಅನುಸೂಚಿಯನ್ನು ತಯಾರಿಸಿ ಅದರ ಸಹಾಯದಿಂದ ಅಧ್ಯಯನ ಕೈಗೊಳ್ಳಲಾಗಿದೆ. ಪ್ರಶ್ನಾವಳಿ ಅನುಸೂಚಿಯನ್ನು ಸಿದ್ಧಗೊಳಿಸುವ ಮೊದಲು ಈ ಉದ್ದೇಶಿತ ಗ್ರಾಮಗಳಿಗೆ ಕೆಲವು ಸಾರಿ ಭೇಟಿ ನೀಡಿ ಸ್ವ-ಸಹಾಯ ಗುಂಪಿನ ಮಹಿಳೆಯರನ್ನು ಭೇಟಿ ಮಾಡಿ ಚರ್ಚಿಸಿದಾಗ ಅನೇಕ ಹೊಸ-ಹೊಸ ವಿಷಯಗಳು ಅಧ್ಯಯನಕ್ಕೆ ಮುನ್ನವೇ ಪ್ರಶ್ನಾವಳಿಯ ಸಿದ್ಧತೆಗೆ ಸಹಾಯ ಮಾಡಿದವು.

ಸ್ವ-ಸಹಾಯ ಸಂಘಗಳ ಪದಾಧಿಕಾರಿಗಳು ಹಾಗೂ ಗ್ರಾಮ ಪಂಚಾಯ್ತಿಯ ಅಧ್ಯಕ್ಷರು, ಕಾರ್ಯದರ್ಶಿಗಳು ಪಂಚಾಯ್ತಿಯ ಕೆಲವು ಸದಸ್ಯರಿಗೆ ಭೇಟಿಯಾದಾಗ ಅಲ್ಲಿಯೇ ಪಂಚಾಯ್ತಿ

ಹಾಗೂ ಸ್ವ-ಸಹಾಯ ಸಂಘಗಳ ಇತಿಹಾಸ ಗ್ರಾಮಕ್ಕಿರುವ ಸವಲತ್ತು ಮುಂತಾದ ವಿಷಯಗಳನ್ನು ಕುರಿತಂತೆ ಅವರೆಲ್ಲರಿಂದ ಮಾಹಿತಿಗಳನ್ನು ಸಂಗ್ರಹಿಸಲಾಯಿತು.

ಸ್ವ-ಸಹಾಯ ಸಂಘದ ಪದಾಧಿಕಾರಿಗಳು ಮತ್ತು ಇತರ ಸದಸ್ಯರೊಂದಿಗೆ ನಡೆದ ನಿರಂತರ ಚರ್ಚೆ ಹಾಗೂ ಸಂವಹನದಿಂದಾಗಿ ಅತೀ ಸ್ಪಷ್ಟವಾದ ಪ್ರಶ್ನಾವಳಿಯನ್ನು ಅಥವಾ ಸಂದರ್ಶನ ಅನೂಸೂಚಿಯನ್ನು ಸಿದ್ಧಪಡಿಸುವುದು ಸಾಧ್ಯವಾಯಿತು. ನಂತರ ಈ ಅನುಸೂಚಿಯನ್ನು ಕೆಲವು ಸ್ವ-ಸಹಾಯ ಸಂಘಗಳಿಗೆ ಅಂದರೆ ಸಂಘದ ಸದಸ್ಯೆಯರಿಗೆ ನೀಡಲಾಯಿತು. ಉದ್ದೇಶಿತ ಗುಂಪು ಪ್ರಶ್ನಾವಳಿಯನ್ನು ಸರಳವಾಗಿ ಅರ್ಥ ಮಾಡಿಕೊಳ್ಳಬಹುದೆಂಬುವುದನ್ನು ಸ್ಪಷ್ಟಪಡಿಸಿಕೊಂಡ ನಂತರ ಅಗತ್ಯವಿದ್ದಲ್ಲ ಬದಲಾವಣೆಗಳನ್ನು ಮಾಡಿ ಸಂದರ್ಶನ ಅನೂಸೂಚಿಯನ್ನು ಸಿದ್ಧಪಡಿಸಲಾಯಿತು.

ಮಾಹಿತಿಯ ಆಕರ :

ಈ ಉದ್ದೇಶಿತ ಅಧ್ಯಯನವು ದತ್ತಾಂಶಗಳ ಆಕರವಾಗಿ ಎರಡು ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಲಾಗಿದೆ.

1. **ಪ್ರಾಥಮಿಕ ಮಾಹಿತಿ:** ನೇರವಾಗಿ ಕ್ಷೇತ್ರ ಅಧ್ಯಯನ ಕಾರ್ಯದಲ್ಲಿ ಭಾಗಿಯಾಗಿರುವುದು.
2. **ಮಾಧ್ಯಮಿಕ ಮಾಹಿತಿ:** ಕಛೇರಿಯ ದಾಖಲಾತಿಗಳಿಂದ ಪಡೆಯಲಾಯಿತು.

ಇವೆಲ್ಲದರೊಂದಿಗೆ ಸ್ವ-ಸಹಾಯ ಸಂಘಗಳ ಮಾಹಿತಿಯ ಬಗೆಗೆ ವೃತ್ತ ಪತ್ರಿಕೆ, ದಿನ ಪತ್ರಿಕೆ ಹಾಗೂ ನಿಯತ ಕಾಲಿಕೆಗಳಲ್ಲಿ ಪ್ರಕಟವಾದ ಮಾಹಿತಿಯನ್ನು ಬಳಸಿಕೊಳ್ಳಲಾಗಿದೆ. ನಬಾರ್ಡ (NABARD BANK) ಕೆಲವೊಂದು ಮಾಹಿತಿಗಳು ಅದಷ್ಟೇ ಅಲ್ಲದೇ ಪಠ್ಯಪುಸ್ತಕಗಳು, ಮಹಿಳಾ ಸಬಲೀಕರಣಕ್ಕೆ ಸಂಬಂಧಪಟ್ಟ ಪುಸ್ತಕಗಳು, ಸಂಶೋಧನಾ ಅಧ್ಯಯನಗಳಿಂದ (NIRD - National Institute of Rural Development) ಸಂಬಂಧಿಸಿದ ಮಾಹಿತಿಗಳನ್ನು (ರಾಷ್ಟ್ರೀಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಹೈದ್ರಾಬಾದ) ನಿಯತಕಾಲಿಕೆಗಳನ್ನು ಸಂಶೋಧನ ಅಧ್ಯಯನಗಳನ್ನು ಮಹಿಳಾ ಸಾಮಖ್ಯ ಕರ್ನಾಟಕ (ಎಂ.ಎಸ್.ಕೆ 1986 ಶಿಕ್ಷಣ ನೀತಿಯ ಅಡಿಯಲ್ಲಿ ಮಹಿಳೆಯರ ಸಮಾನತೆ ಶಿಕ್ಷಣ ಸಶಕ್ತಿಕರಣಕ್ಕಾಗಿ ಪ್ರಾರಂಭಿಸಿದ ಯೋಜನೆಯಿಂದ) ಅಗತ್ಯವಿರುವ ಮಾಹಿತಿಗಳನ್ನು, ಭಾವಚಿತ್ರಗಳನ್ನು ನೈಜ ಘಟನೆಗಳ ವಿವರಗಳನ್ನು ಸಂಶೋಧನಾ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಕ್ಷೇತ್ರ ಅಧ್ಯಯನದ ಕಾರ್ಯದಲ್ಲಿ ಬಾಗಿಯಾಗಿರುವುದು:

ಸಂಶೋಧನಾ ಅಧ್ಯಯನದಲ್ಲಿ ಅಧ್ಯಯನಕ್ಕೆ ಆಯ್ಕೆ ಮಾಡಿದ ಗ್ರಾಮಗಳಲ್ಲಿ ವಾಸ್ತವ್ಯ ಹೂಡಿ ಸ್ವ-ಸಹಾಯ ಗುಂಪಿನ ಮಹಿಳೆಯರು ವಾರಕ್ಕೊಮ್ಮೆ ಸಭೆ ಸೇರುತ್ತಾರೆ. ಈ ಸಭೆಯಲ್ಲಿ ಖುದ್ದಾಗಿ ಭಾಗವಹಿಸಿ, ಗಮನಿಸಿ ಅಧ್ಯಯನದ ಭಾಗವಾಗಿ ಸಭೆ ಸೇರುವುದರೊಂದಿಗೆ ಮಹಿಳೆಯರ ಸಂಘ ಸಭೆಯ ಚರ್ಚೆ ಮತ್ತು ತೀರ್ಮಾನಗಳನ್ನು ಅಂದರೆ ಸಂಘದ ನೀತಿ-

ನಿಯಮ, ಶಿಸ್ತು, ದಾಖಲಾತಿಗಳನ್ನು ಇಡುವುದು. ಉಳಿತಾಯ ಸಾಲ ಮರುಪಾವತಿ, ಬ್ಯಾಂಕ್ ವ್ಯವಹಾರ, ಆರ್ಥಿಕ ವಿಷಯಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಸಮಸ್ಯೆಗಳ ಬಗ್ಗೆ ಚರ್ಚೆ ಪರಿಹಾರ ಹೀಗೆ ಹತ್ತು-ಹಲವಾರು ವಿಷಯಗಳನ್ನೆಲ್ಲ ನೇರವಾಗಿ ಸಂಘದ ಮಹಿಳೆಯರೊಂದಿಗೆ ಪಾಲ್ಗೊಂಡು ದಾಖಲಿಸಲಾಗಿದೆ.

ಸಂದರ್ಶನ ವಿಧಾನ :

ಈ ಅಧ್ಯಯನವು ಸಂದರ್ಶನ ವಿಧಾನವನ್ನು ಒಳಗೊಂಡಿರುತ್ತದೆ. ಪ್ರತಿ ಸದಸ್ಯೆಯನ್ನು ವೈಯಕ್ತಿಕವಾಗಿ ಭೇಟಿ ಮಾಡಿ ಪ್ರಶ್ನೆಗಳನ್ನು ಕೇಳಿ ಅವುಗಳಿಗೆ ಉತ್ತರಗಳನ್ನು ಪಡೆದು ಅಗತ್ಯದ ನಿರ್ದಿಷ್ಟ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಈ ಸಂದರ್ಭದಲ್ಲಿ ರಚಿತ ಮತ್ತು ಅರಚಿತ ಪ್ರಶ್ನೆಗಳನ್ನು ಕೇಳಿ ಉತ್ತರಗಳನ್ನು ಪಡೆಯಲಾಗಿದೆ. ಮಹಿಳಾ ಸಬಲೀಕರಣದ ಬಗೆಗೆ ನಿಕರವಾದ ಮಾಹಿತಿಗಳನ್ನು ಸಂಗ್ರಹಿಸಲು ಸಾಧ್ಯವಾಗಿದೆ ಎಂದು ಹೇಳಬಹುದಾಗಿದೆ.

ವರ್ಗಿಕೃತ ಮಾಹಿತಿಯ ಕ್ರೋಢೀಕರಣ ಮತ್ತು ದಾಖಲೆ:

ಮಾಹಿತಿಯನ್ನು ಮೊದಲ ಹಂತದಲ್ಲಿ ವರ್ಗಿಕರಿಸಿ ಯಾಂತ್ರಿಕವಾಗಿ ಕ್ರೋಡಿಕರಿಸಿದ ನಂತರವೇ ವರದಿಯ ಮುಖ್ಯ ಕರಡನ್ನು ಸಿದ್ದಪಡಿಲಾಗಿದೆ.

ಸಂಶೋಧನಾ ಅಧ್ಯಯನದ ಚೌಕಟ್ಟು:

ಈ ಸಂಶೋಧನಾ ಅಧ್ಯಯನ ತನ್ನದೇ ಆದ ಇತಿಮಿತಿಗಳನ್ನು ಮತ್ತು ಈ ಅಧ್ಯಯನದ ವಿಸ್ತೃತ ರೂಪವನ್ನು ಗಮನಿಸಿದರೆ ಅಧ್ಯಯನದ ವ್ಯಾಪ್ತಿ ವೈಶಾಲ್ಯತೆಯಿಂದ ಕೂಡಿದೆ ಎಂದು ಅರ್ಥವಾಗುತ್ತದೆ. ಅಧ್ಯಯನದ ಸ್ವರೂಪವನ್ನು ಇಡೀಯಾಗಿ ಅಧ್ಯಯನ ಮಾಡುವುದು ಅಸಾಧ್ಯವಾಗಿರುವುದರಿಂದ ಸಂಶೋಧನಾ ಅಧ್ಯಯನದಲ್ಲಿ ಆಯ್ಕೆ ಮಾಡಿದ ಮಾದರಿಯ ಜನಸಂಖ್ಯೆಗೆ ಸಂಪೂರ್ಣವಾಗಿ ಪ್ರತಿನಿಧಿಸುತ್ತದೆ ಎಂದು ಹೇಳುವುದು ಕಷ್ಟವಾಗುತ್ತದೆ. ಆದರೆ ಸಾಧ್ಯವಾದ ಮಟ್ಟಿಗೆ ನಿಖರವಾದ ಮಾಹಿತಿಗಳನ್ನು ಸಂಗ್ರಹಿಸಲು ಉದ್ದೇಶಿತ ಗ್ರಾಮಗಳಿಗೆ ಸ್ವತಃ ಭೇಟಿ ನೀಡಿ, ವಾಸ್ತವ್ಯ ಹೂಡಿ ಸಂಘದ ಸದಸ್ಯೆಯರೊಂದಿಗೆ ಮಾತನಾಡಿ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ಹೀಗೆ ಅಧ್ಯಯನದ ವೈಧಾನಿಕತೆಯು ಬೇರೆ-ಬೇರೆ ವಿಷಯಗಳನ್ನೊಳಗೊಂಡಿದೆ.

ಗ್ರಾಮೀಣ ಮಹಿಳೆಯರ ಸಬಲೀಕರಣ ಕುರಿತು ಈವರೆಗಿನ ಸಾಹಿತ್ಯದ ವಿಮರ್ಶೆ :

ಸ್ವಾತಂತ್ರ್ಯದಿಂದ ಈಚೆಗೆ ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದದ ಅಡಿ ಗ್ರಾಮೀಣ ಮಹಿಳೆಯರ ಸ್ವಾವಲಂಬನೆ, ಸ್ವಾತಂತ್ರ್ಯ ಹಾಗೂ ಸಾಬಲ್ಯದ ಬಗೆಗೆ ಹಲವಾರು ಸಮಾಜ ಶಾಸ್ತ್ರಜ್ಞರು, ಆರ್ಥಿಕ ತಜ್ಞರು, ಬ್ಯಾಂಕ ಅಧಿಕಾರಿಗಳು, ರಾಜಕೀಯ ತಜ್ಞರು ಹಲವಾರು ಅಧ್ಯಯನ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಮಹಿಳಾ ಸಬಲತೆಯ ಬಗೆಗೆ ವಿವಿಧ ಆಯಾಮಗಳ

ಚಿಂತನ ಹಾಗೂ ಮಂಥನ ಹಲವಾರು ಗ್ರಂಥಕರ್ತೃಗಳು ಈವರೆಗೆ ಮಾಡಿದ್ದಾರೆ. ಅವರಲ್ಲಿ "ಆರ್.ಕೆ.ಸಪ್ರು (1989) ರಲ್ಲಿ ಅಭಿವೃದ್ಧಿ ಮತ್ತು ಮಹಿಳೆ"[2] ಎಂಬ ಗ್ರಂಥದಲ್ಲಿ ಹಲವು ಸುಪ್ರಸಿದ್ಧ ತಜ್ಞರ ಸಿದ್ಧಾಂತಗಳನ್ನು ಚರ್ಚಿಸಿದ್ದಾರೆ. ಇತರ ತಜ್ಞರ ವಾದಗಳನ್ನು ಸಮರ್ಥಿಸುವ, ಚರ್ಚಿಸುವ ಪ್ರಯೋಗಗಳನ್ನು ಮಾಡಿದ್ದಾರೆ.

ಬಹುತೇಕ ಲೇಖಕರು ಮಹಿಳಾ ಶಿಕ್ಷಣ, ಆರೋಗ್ಯ, ಸಮಾಜೋ-ಆರ್ಥಿಕ ಸಮಸ್ಯೆ, ವ್ಯವಸ್ಥೆಗಳ ಬಗೆಗೆ ತಮ್ಮ ವಿಚಾರಗಳ ಹೊನಲನ್ನು ಹರಿಯಬಿಟ್ಟಿದ್ದಾರೆ. 7ನೇ ಪಂಚವಾರ್ಷಿಕ ಯೋಜನೆಯ ಅಡಿಯಲ್ಲಿ ಸಮಾಜೋ-ಆರ್ಥಿಕ ಕಾರ್ಯಕ್ರಮಗಳಲ್ಲಿ ಮಹಿಳೆಯರ ಸ್ಥಾನಮಾನ ಕುರಿತು ಮಹಾಜನ ಅವರು ಬರೆದಿದ್ದಾರೆ.

"ಗ್ರಾಮೀಣ ಮಹಿಳೆಯರ ಸಾಮರ್ಥ್ಯ ಮತ್ತು ಅಂತಸ್ತು" ಎಂಬ ಗ್ರಂಥದಲ್ಲಿ ಮಹಿಳಾ ಅಧ್ಯಯನಕಾರ ತಜ್ಞ ಸೇರಿ ಅವರು ತಮ್ಮ ಆಲೋಚನೆಗಳನ್ನು ಹಾಗೂ ಮಹಿಳೆಯ ಸ್ಥಿತಿಗತಿಯನ್ನು ಶಬ್ದರೂಪಕ್ಕೆ ಇಳಿಸಿದ್ದಾರೆ.

ನಿಯಾಸ ಸಂಸ್ಥೆಯು: "ಅಂತಸ್ತಿನ ಅನ್ವೇಷಣೆ ಸಂಶೋಧನಾ ಗ್ರಂಥದಲ್ಲಿ ಗ್ರಾಮೀಣ ಮಹಿಳೆಯರು ಹೊಂದಿರುವ ಸ್ಥಾನಮಾನಗಳನ್ನು ಮತ್ತು ಹಕ್ಕುಗಳನ್ನು ಮಹಿಳೆಯರೊಂದಿಗೆ ಚರ್ಚಿಸಿ ಬಂದಂತಹ ಅಭಿಪ್ರಾಯಗಳನ್ನು ಬಹಳಷ್ಟು ಸ್ವಾರಸ್ಯಕರವಾಗಿ ದಾಖಲಿಸಿದ್ದಾರೆ. ತಮ್ಮ ಸಂಶೋಧನಾ ಅಧ್ಯಯನದಲ್ಲಿ ಅವರು ಕಂಡುಕೊಂಡಿದ್ದೇನೆಂದರೆ ಗ್ರಾಮೀಣ ಪ್ರದೇಶದಲ್ಲಿ ಮಹಿಳೆಯರಿಗೆ ಸಮಯ ಮತ್ತು ಅವಕಾಶ ನೀಡುವುದರಿಂದ ಸಬಲತೆ ಬಗ್ಗೆ ಯೋಚಿಸಲು ಸಾಧ್ಯವಾಗುವುದು ಎಂದಿದ್ದಾರೆ.[3]

ಡಾ|| ಶಾಂತಾ.ಬಿ.ಅಷ್ಟಗಿ "ನಡೆ ತುರಗ" (ಬಿಡಿ ಲೇಖನಗಳು) ಎಂಬ ಗ್ರಂಥದಲ್ಲಿ ಗ್ರಾಮೀಣ ಮಹಿಳೆಯರ ಶಿಕ್ಷಣ ಆರೋಗ್ಯ, ಗ್ರಾಮೀಣ ಮಹಿಳೆಯರ ಸಬಲೀಕರಣ ಕುರಿತಂತೆ ಅನೇಕ ವಿಷಯಗಳನ್ನು ಸ್ತ್ರೀವಾದಿ ನೆಲೆಯಲ್ಲಿ ಚರ್ಚಿಸಿದ್ದಾರೆ.[4]

ಡಾ|| ಸಮತಾ.ಬಿ.ದೇಶಮಾನೆ "ದಲಿತ ಮಹಿಳೆಯರ ಬದಲಾಗುತ್ತಿರುವ ಸ್ಥಾನಮಾನಗಳ ಸಮಾಜಶಾಸ್ತ್ರೀಯ ಅಧ್ಯಯನ" ಸಂಶೋಧನಾ ಮಹಾಪ್ರಬಂಧದಲ್ಲಿ ದಲಿತ ಮಹಿಳೆಯರು ಹೊಂದಿರುವ ಶೋಚನೀಯವಾದ ಸ್ಥಾನಮಾನಗಳು ವ್ಯವಸ್ಥೆಯ ಒತ್ತಡದಲ್ಲಿ ಸಿಲುಕಿದ್ದ ಮಹಿಳೆಯರ ಸ್ಥಿತಿಗತಿಗಳನ್ನು ಸುಧಾರಿಸಲು ಸರ್ಕಾರಿ ಯೋಜನೆಗಳ ವೈಫಲ್ಯತೆಯನ್ನು ಕುರಿತು ಮುಂಬರುವ ಯೋಜನೆಗಳು ಮಹಿಳೆಯರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ರೂಪಿಸಬೇಕಂಬ ಸಲಹೆ ನೀಡಿದ್ದಾರೆ.[5]

ಡಾ॥ ಟಿ.ಆರ್. ಚಂದ್ರಶೇಖರ – "ಮಹಿಳೆ ಮತ್ತು ಆರ್ಥಿಕತೆ"ಎಂಬ ಗ್ರಂಥದಲ್ಲಿ ಮಹಿಳೆಯ ಸಬಲೀಕರಣ ಎಂದರೇನು? ಹಾಗೂ ಮಹಿಳೆಯ ಆರ್ಥಿಕ ದುಡಿಮೆಯನ್ನು ಸಮಾಜ ಹೇಗೆ ಪರಿಗಣಿಸುತ್ತದೆ. ಪುರುಷರ ದುಡಿಮೆಯನ್ನು ಹೇಗೆ ಪರಿಗಣಿಸುತ್ತದೆ ಸೇವಾ ವಲಯದಲ್ಲಿ ಮಹಿಳೆಯ ದುಡಿಮೆಯನ್ನು ಅವಳ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಹೇಳಲಾಗಿದೆ. ಅಧಿಕಾರ ವಲಯದಲ್ಲಿ ಪುರುಷರ ದುಡಿಮೆಗೆ ಆದಾಯ ಸಿಗುತ್ತದೆ ಮುಂತಾದ ವಿಷಯಗಳನ್ನು ಹೇಳಿದ್ದಾರೆ. [6]

ಕೊಠಾರಿ ಅವರು ಮಹಿಳಾ ಆರೋಗ್ಯದ ಬಗೆಗೆ ಬರೆದಿದ್ದಾರೆ. ಖನ್ನಾ ಅವರು ಈ ಮುಖ್ಯವಾಹನಿಯ ಲೇಖಕರೊಂದಿಗೆ ಕೇವಲ ಮಹಿಳೆಯರನ್ನೇ ಕೇಂದ್ರಿಕರಿಸದೇ ಲಿಂಗ ಸಮಾನತೆಯ ಆಯಾಮವನ್ನೂ ಗುರುತಿಸಿ "ಸಮಾಜೋ–ಆರ್ಥಿಕ ವ್ಯವಸ್ಥೆಯಲ್ಲಿ ಲಿಂಗ ಸಮಾನತೆ ಒಂದು ಆಯಾಮ" ವಿಷಯದ ಬಗೆಗೆ ಬರೆದಿದ್ದಾರೆ. ಪರಾಂಜಪೆ ಅವರು ಗ್ರಾಮೀಣ ಮಹಿಳೆಯರ ಸರ್ವಾಂಗೀಣ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ.

ಮೀರಾ ದೇಸಾಯಿ ಮತ್ತು ಮೈತ್ರೇಯಿ ಕೃಷ್ಣರಾಜ್ (1987) ಇವರಿಬ್ಬರೂ ಮಹಿಳಾ ಆರ್ಥಿಕ, ಸಮಾಜಿಕ, ಕೌಟುಂಬಿಕ, ಆರೋಗ್ಯ ಹಾಗೂ ಶಿಕ್ಷಣದ ಬಗೆಗೆ ವಿಶ್ಲೇಷಿಸಿದ್ದಾರೆ. ಅದರೊಂದಿಗೆ ಅತ್ಯಾಚಾರ ಹಾಗೂ ಶೋಷಣೆಯಂಥ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ಇದಷ್ಟೇ ಅಲ್ಲ, ಸಮಸ್ಯೆಗಳನ್ನು ಬಿಡಿಸಿ ಹೇಳುತ್ತಲೇ ಪರಿಹಾರಗಳನ್ನು ಸೂಚಿಸಿದ್ದಾರೆ. ಆದರೆ ಎಲ್ಲಿಯೂ ಸಮಗ್ರ ಸಬಲೀಕರಣದ ಪರಿಕಲ್ಪನೆ ಬಿಂಬಿಸುವಲ್ಲಿ ಸಂಪೂರ್ಣವಾಗಿ ಸಾಫಲ್ಯ ಪಡೆಯಲಾಗಿಲ್ಲ ಎಂದು ಹೇಳಬಹುದು.

ಇದಕ್ಕೆ ಪೂರಕವಾಗಿ ಮಹಾಜನ್ ಅವರ ಗ್ರಂಥವಾದ "ಭಾರತದ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ" ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಸಮಗ್ರವಾಗಿ ಮಾಹಿತಿಗಳನ್ನು ಒಂದೆಡೆ ಸೇರಿಸುವ ಪ್ರಯತ್ನ ಮಾಡಿದ್ದಾರೆ ಹಾಗೂ ಮಹಿಳೆಯರ ಸಮಸ್ಯೆಗಳ ಬಗೆಗೆ ಹೆಚ್ಚಿನ ವಿವರಗಳನ್ನು ನೀಡಿದ್ದಾರೆ. ಈ ಗ್ರಂಥದಲ್ಲಿ ಹಲವು ವಿಷಯಗಳು ಹೀಗಿವೆ: ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿಯಲ್ಲಿ ಮಹಿಳೆಯರ ಭಾಗವಹಿಸುವಿಕೆ.

ಸೂಕ್ಷ್ಮ ಮತ್ತು ಸ್ಥೂಲ ಅವಲೋಕನಗಳು, ಮಹಿಳಾ ಶಿಕ್ಷಣ ಮತ್ತು ಅದರ ಪರಿಣಾಮಗಳು, ಮಹಿಳಾ ಉದ್ಯಮದಾರರು ಮತ್ತು ಕಾರ್ಯನಿರ್ವಾಹಕರು, ಜಾತಿ, ವರ್ಗ ಮತ್ತು ಮಹಿಳೆಯರ ಸ್ಥಾನಮಾನ, ಮಹಿಳೆಯರು ಮತ್ತು ಅವರಿಗಾಗಿ ಇರುವ ಯೋಜನೆಗಳು, ಮಹಿಳೆಯರ ಸಬಲೀಕರಣದ ಅಗತ್ಯದ ಕುರಿತು ಈ ಪುಸ್ತಕವು ಪ್ರಮುಖ ಬೆಳಕು ಚೆಲ್ಲುತ್ತದೆ.

ಉಪ್ರೇತಿ ಮತ್ತು ಉಪ್ರೇತಿ 2000 – ಅವರು ತಮ್ಮ ಗ್ರಂಥವಾದ "ಮಹಿಳೆಯರು ಮತ್ತು ಲಿಂಗಭೇದ ಸಮಸ್ಯೆ" ಎಂಬುವುದರಲ್ಲಿ ಸಮಾಜದ ವಿವಿಧ ಸ್ತರಗಳ ಮಹಿಳೆಯರನ್ನು

ದೃಷ್ಠಿಯಲ್ಲಿಸಿಕೊಮಡು ಲಿಂಗ ಸೂಕ್ಷ್ಮತೆಯ ನ್ಯಾಯಕ್ಕಾಗಿ ಭಾರತೀಯ ಮಹಿಳೆಯರು ನಡೆಸಿದ ಹೋರಾಟಗಳನ್ನು ಅವಲೋಕಿಸಲಾಗಿದೆ.[7] ಕೆ.ಶಾಂತಿ 1998, ಇವರು ತಮ್ಮ ಸಂಪಾದಿತ "ಮಹಿಳಾ ಸಬಲೀಕರಣ" ಕೃತಿಯಲ್ಲಿ ಮಹಿಳಾ ಸಬಲೀಕರಣದ ವಿವಿಧ ಆಯಾಮಗಳು ಕುರಿತು ತಮ್ಮ ಅಭಿಪ್ರಾಯಗಳನ್ನು ದಾಖಲಿಸಿದ್ದಾರೆ. ಆರ್.ಕೆ. ಸಾಮಂತ್, 2005 ಗ್ರಾಮೀಣ ಮಹಿಳೆಯರ ಸಬಲೀಕರಣ ಎಂಬ ಹೆಸರಿನಲ್ಲಿಯೇ ಗ್ರಾಮೀಣ ಮಹಿಳೆಯರನ್ನು ಸಬಲೀಕರಣಗೊಳಿಸುವ ಅಗತ್ಯದ ಕುರಿತು ಒತ್ತಿ ಹೇಳಿದ್ದಾರೆ.

ಈ ಗ್ರಂಥಗಳಲ್ಲಿಯ ಮುಖ್ಯ ಶೀರ್ಷಿಕೆಗಳೆಂದರೆ:

1. ಅಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ.
2. ಗ್ರಾಮೀಣ ಮಹಿಳೆಯರನ್ನು ಸಬಲಗೊಳಿಸುವುದರಲ್ಲಿ ಅನುಸರಿಸಬೇಕಾದ ವ್ಯೋಹಾತ್ಮಕ ದರ್ಶನ.
3. ಉದ್ದಿಮೆಗಾರಿಕೆ ಮತ್ತು ಮಹಿಳಾ ಸಬಲೀಕರಣ ಮುಂತಾದವು.

ಎನ್.ಲಲಿತಾ 1997 – ಅವರು ಗ್ರಾಮೀಣ ಮಹಿಳಾ ಸಬಲೀಕರಣ ಮತ್ತು ಬ್ಯಾಂಕಿಂಗ್ ಅಭಿವೃದ್ಧಿ ಎಂಬ ಪುಸ್ತಕದಲ್ಲಿ ಗ್ರಾಮೀಣ ಮಹಿಳೆಯರನ್ನೇ ದೃಷ್ಟಿಯಲ್ಲಿರಿಸಿಕೊಂಡು ಮಹಿಳಾ ಸಬಲೀಕರಣದ ಅವಶ್ಯಕತೆ ಕುರಿತು ವ್ಯಾಪಕವಾಗಿ ಚರ್ಚಿಸಿದ್ದಾರೆ. ಈ ಲೇಖಕಿಯರ ಅಭಿಪ್ರಾಯದ ಪ್ರಕಾರ ಗ್ರಾಮೀಣ ಮಹಿಳೆಯರ ಸಬಲೀಕರಣ ಕಾರ್ಯಕ್ರಮವು ಮುಖ್ಯವಾಗಿ ಸಮಾನ ಕೆಲಸಕ್ಕೆ ಸಮಾನ ವೇತನ, ಹುಡುಗಿಯರ ಶಿಕ್ಷಣದ ವಿಸ್ತರಣೆ, ಮಹಿಳೆಯರಿಗೆ ಆಸ್ತಿ ಮತ್ತು ಒಡೆತನದ ಹಕ್ಕು, ತರಬೇತಿ ಮತ್ತು ತಂತ್ರಗಾರಿಕೆಯ ಸುಲಭ ಸೌಕರ್ಯಗಳು, ಬ್ಯಾಂಕ್ ಸೌಲಭ್ಯಗಳು ಮಾರಾಟ ವ್ಯವಸ್ಥೆ ಶುದ್ಧ ನೀರಿನ ಸೌಲಭ್ಯ, ಸ್ವಚ್ಛ ಪರಿಸರ, ವಿದ್ಯುತ್ ಸೌಕರ್ಯ ಮೊದಲಾದವುಗಳನ್ನು ಒಳಗೊಂಡಿರಬೇಕು ಎಂದು ಪ್ರತಿಪಾದಿಸಿದ್ದಾರೆ.

ಮಹಿಳಾ ಸಬಲೀಕರಣದಲ್ಲಿ ಬ್ಯಾಂಕಿಂಗ್ ಮತ್ತು ಸಾಲ ಸೌಲಭ್ಯಗಳನ್ನು ದೃಷ್ಟಿಯಲ್ಲಿರಿಸಿ ಕೊಂಡು ಈ ಅಧ್ಯಯನ ಕಾರ್ಯವನ್ನು ಕೈಗೊಳ್ಳಲಾಗಿದೆ. ಬ್ಯಾಂಕಿಂಗ್ ಪದ್ಧತಿಯಲ್ಲಿ ಹಲವಾರು ಲೋಪ–ದೋಷಗಳಿದ್ದು ಗ್ರಾಮೀಣ ಮಹಿಳೆಯರ ಅಗತ್ಯಗಳಿಗೆ ಸ್ಪಂದಿಸುವುದಿಲ್ಲ. ಅಭಿವೃದ್ಧಿಗೆ ಪೂರಕವಾಗಿಲ್ಲ ಎಂಬುದು ಈ ಅಧ್ಯಯನ ಮೂಲಕ ತಿಳಿದುಬಂದ ಸಂಗತಿಯಾಗಿದೆ.

ಸುಮನ್ ಪಾಮೇಚ ಮತ್ತು ಅಂಕಿತಾ ಬಾಲಿಕ್ ಅವರು (2005) – "ಗ್ರಾಮೀಣ ಮಹಿಳೆಯರ ಸಬಲೀಕರಣ" ಎಂಬ ಲೇಖನದಲ್ಲಿ ಸಬಲೀಕರಣ ಎಂಬ ಕಲ್ಪನೆಯನ್ನು ಗ್ರಾಮೀಣ ಮಹಿಳೆಯರ ಸ್ಥಿತಿಗಳನ್ನು ಆಧರಿಸಿ ವಿವರಿಸಿದ್ದಾರೆ.

ಸ್ವ-ಸಹಾಯ ಗುಂಪು ಮತ್ತು ಗ್ರಾಮೀಣ ಮಹಿಳೆಯರ ಸಬಲೀಕರಣ ಸ್ವ-ಸಹಾಯ ಗುಂಪುಗಳ ಪರಿಕಲ್ಪನೆಯೇ ವಿಶೇಷವಾಗಿತ್ತು. ಇದೇ ಕಾರಣಕ್ಕೆ ಸಾಮಾಜಿಕ, ಆರ್ಥಿಕ, ಬ್ಯಾಂಕ್ ಕ್ಷೇತ್ರ ಹಾಗೂ ಮನಶಾಸ್ತ್ರಜ್ಞರ ಗಮನ ಸೆಳೆಯಿತು.

'ನಬಾರ್ಡ್' – ಸಹ ಸ್ವ-ಸಹಾಯ ಸಂಘದ ಪ್ರಭಾವಕ್ಕೆ ಒಳಗಾಗಿ ಪರಿಣಾಮಕಾರಿಯಾದ ಅಧ್ಯಯನಗಳನ್ನು ಪ್ರಕಟಿಸಿದೆ. ಕೆ.ಜಿ. ಕರಮಕರ್ 1999 ರಲ್ಲಿ "ಗ್ರಾಮೀಣ ಸಾಲನೀಡಿಕೆ ಹಾಗೂ ಸ್ವ-ಸಹಾಯ ಗುಂಪುಗಳು" ಎಂಬ ಗ್ರಂಥದಲ್ಲಿ ಮಿತವ್ಯಯದ ಕಲ್ಪನೆ ಇದ್ದರೆ ಗ್ರಾಮೀಣ ಮಹಿಳೆಯರು ಸ್ವ-ಸಹಾಯ ಸಂಘಗಳ ಮೂಲಕ ಸಾಕಷ್ಟು ಹಣವನ್ನು ಕೂಡಿಹಾಕಬಹುದು ಎಂದು ಅಭಿಪ್ರಾಯ ಪಟ್ಟಿದ್ದಾರೆ.[8]

ಕೃಷಿ ಅರ್ಥ ಶಾಸ್ತ್ರ ಕುರಿತು ಭಾರತೀಯ ಜರ್ನಲ್ ಕೂಡ ಪರಿಣಿತ ತಜ್ಞರ ಅನೇಕ ಲೇಖನಗಳನ್ನು ಪ್ರಕಟಿಸಿದೆ. ಗ್ರಾಮೀಣ ಮಹಿಳೆಯರ ಸಬಲೀಕರಣದ ದಿಕ್ಕಿನಲ್ಲಿ ಸ್ವ-ಸಹಾಯ ಗುಂಪುಗಳು ಮಹತ್ವದ ಪಾತ್ರವಹಿಸುತ್ತವೆ ಎಂಬುದನ್ನು ಈ ಲೇಖನಗಳು ಪ್ರತಿಪಾದಿಸಿವೆ.

ಈ ದಿಕ್ಕಿನಲ್ಲಿ ಅನೇಕ ಸಂಶೋಧನೆಗಳು ಅಧ್ಯಯನಗಳು ನಡೆದಿವೆ. ಆದರೂ ಸ್ವ-ಸಹಾಯ ಸಂಘಗಳ ಮಹಿಳೆಯರು ಬದುಕಿನ ಪರಿವರ್ತನೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸವುದಿಲ್ಲ.

ಬಿಹಾರ, ಛತ್ತೀಸಗಢ, ಉತ್ತರ ಪ್ರದೇಶ ಮತ್ತು ಮಧ್ಯ ಪ್ರದೇಶಗಳಲ್ಲಿ ಸುತ್ತಾಡಿ ವಿಸ್ತೃತ ಅಧ್ಯಯನ ನಡೆಸಿದ ತಜ್ಞ ಅಲಕಾ ಶ್ರೀವಾಸ್ತವ 2004 ಅವರು ಸ್ವ-ಸಹಾಯ ಗುಂಪುಗಳ ಹುಟ್ಟು ಮತ್ತು ಬೆಳವಣಿಗೆ ಕುರಿತು ವಿವರಿಸಿದ್ದಾರೆ. ಅವರು ತಮ್ಮ ಅಧ್ಯಯನದಲ್ಲಿ ನಾಲ್ಕು ಜಿಲ್ಲೆಗಳ 60 ಸ್ವ-ಸಹಾಯ ಗುಂಪುಗಳನ್ನು ಸಂದರ್ಶಿಸಿದ ವ್ಯಾಪಕ ಅಧ್ಯಯನ ಇವರದ್ದಾಗಿದೆ. ಸ್ವ-ಸಹಾಯ ಗುಂಪುಗಳ ಪರಿಣಾಮಕಾರಿ ನಿರ್ವಹಣೆಯಲ್ಲಿ ಸೌಕರ್ಯಗಳನ್ನು ನೀಡುವ ಸಂಸ್ಥೆಗಳ ಪಾತ್ರವೇನು ಎಂಬುದನ್ನು ಅಲಕಾ ಶ್ರೀವಾಸ್ತವ್ ಅವರು ವಿಶ್ಲೇಷಿಸಿದ್ದಾರೆ. ಆದರೂ ಈ ಅಧ್ಯಯನದ ಮುಖ್ಯ ಉದ್ದೇಶವು ಸಾಮಾಜಿಕ ಪರಿಣಾಮಗಳು ಮತ್ತು ಸಾಮಾಜಿಕ ಪರಿವರ್ತನೆಯಲ್ಲಿ ಸ್ವ-ಸಹಾಯ ಗುಂಪುಗಳ ಪಾತ್ರಗಳ ಮಹತ್ವದ ಬಗೆಗೆ ಹೆಚ್ಚಿನ ಗಮನ ಕೇಂದ್ರೀಕರಿಸಲಾಗಿದೆ.

ನಾಲ್ಕು ರಾಜ್ಯಗಳ ಸ್ವ-ಸಹಾಯ ಗುಂಪುಗಳು ಹೊಸತಾಗಿ ಆರಂಭಿಸಿದವು. ಕೇವಲ ನಾಲ್ಕೈದು ವರ್ಷಗಳಿಂದ ಅವು ಕಾರ್ಯನಿರ್ವಹಿಸುತ್ತಿರುವ ಗುಂಪುಗಳು. ಇವುಗಳಲ್ಲಿ ಮೂವತ್ತು ವರ್ಷ ವಯಸ್ಸಿನವರೇ ಹೆಚ್ಚಿನವರು. ಸಾಮಾಜಿಕ ಕೆಳಸ್ತರದಲ್ಲಿರುವವರೇ ಹೆಚ್ಚಿನ ಆಸಕ್ತಿ ತೋರಿದವರು ಎಂಬುದು ಸ್ಪಷ್ಟಗೊಳಿಸುತ್ತದೆ. ನೂತನ ಪ್ರಯೋಗಗಳಿಗೆ ಕಿರಿಯರಾದವರೇ ತೆರೆದುಕೊಂಡಿದ್ದು ಎಂಬುದು ಸ್ಪಷ್ಟವಾಗುತ್ತದೆ.

ಅಷ್ಟೇ ಅಲ್ಲ, ಆರ್ಥಿಕವಾಗಿ ಹೆಚ್ಚಿನ ಸುಧಾರಣೆಯಾಗದಿದ್ದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಪರಿವರ್ತನೆಯಾಗಿರುವುದು ಗೋಚರವಾಗುತ್ತದೆ. ಸ್ವ-ಸಹಾಯ ಗುಂಪುಗಳಲ್ಲಿ ತೊಡಗಿಸಿಕೊಂಡವರು ಕೌಟುಂಬಿಕ ನಿರ್ಣಯವನ್ನು ತೆಗೆದುಕೊಳ್ಳ ಬಲ್ಲವರಾಗಿರುತ್ತಾರೆ. ಮಕ್ಕಳ ಶಿಕ್ಷಣ ಮುಂತಾದ ನಿರ್ಣಯಗಳನ್ನು ತೆಗೆದುಕೊಳ್ಳಬಹುದಾದ ಸಾಮರ್ಥ್ಯವನ್ನು ಹೊಂದಿದವರು ಆಗಿರುತ್ತಾರೆ ಎಂಬುದೂ ಸ್ಪಷ್ಟಪಡಿಸುತ್ತದೆ.

ಅಲಕಾ ಶ್ರೀವಾಸ್ತವ – ಅವರ ಅಧ್ಯಯನವು ಸಮಗ್ರ ಮತ್ತು ಮಹತ್ವದ್ದಾಗಿದ್ದರೂ ತಾತ್ವಿಕ ಮತ್ತು ಕ್ರಮಬದ್ಧ ಅಭ್ಯಾಸ ನಡೆಸುವಲ್ಲಿ ಸೊತಿದೆಯೆನಿಸುತ್ತದೆ. ಲೇಖಕರು ಒಂದು ಕಡೆ ಸ್ವ-ಸಹಾಯ ಗುಂಪುಗಳ ಸದಸ್ಯರು ಕೌಟುಂಬಿಕ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಯಶಸ್ಸು ಸಾಧಿಸಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಆರ್ಥಿಕ ಸ್ಥಿರತೆ ಅಥವಾ ಭದ್ರತೆಯನ್ನು ಗಳಿಸುವುದರಲ್ಲಿ ವಿಫಲರಾಗಿದ್ದಾರೆ ಎಂದೂ ಹೇಳುತ್ತಾರೆ. ಆರ್ಥಿಕ ಸಬಲತೆಯೇ ಕೌಟುಂಬಿಕ ನಿರ್ಣಯ ತೆಗೆದುಕೊಳ್ಳುವಲ್ಲಿ ಪಾತ್ರವಹಿಸುತ್ತದೆ ಎಂಬ ಅಂಶವನ್ನು ನಿರ್ಲಕ್ಷಿಸಿದಂತೆ ಕಾಣುತ್ತದೆ. ವೃತ್ತಿನಿರತೆಗೂ ಕೌಟುಂಬಿಕ ನಿರ್ಣಯಕ್ಕೂ ಪರಸ್ಪರ ಸಂಬಂಧವಿದ್ದೇ ಇರುತ್ತದೆ ಎಂಬ ಸಾಮಾನ್ಯ ಅಂಶವನ್ನು ಕಡೆಗಣಿಸಿದಂತಾಗಿದೆ. ಈ ವ್ಯತಿರಿಕ್ತ ಹೇಳಿಕೆಗಳಿಂದಾಗಿ ಅವರ ನಿರ್ಣಯಗಳು ಸಂಪೂರ್ಣವಾಗಿ ಸ್ವೀಕಾರಾರ್ಹವಾಗಿವೆ ಎಂದು ಹೇಳಲಿಕ್ಕಾಗದು. ಅಧ್ಯಯನಕ್ಕೆ ಒಳಗಾದ ಸ್ವ-ಸಹಾಯ ಗುಂಪುಗಳೂ ಬಾಲ್ಯಾವಸ್ಥೆಯಲ್ಲಿ ಪ್ರಾರಂಭಿಕ ಹಂತದಲ್ಲಿ ಇರುವುದರಿಂದ ಅವುಗಳ ಮೌಲ್ಯೀಕರಣ ಸಾಧುವೆಂದು ಹೇಳಲಾಗದು. [9]

ಪಿ. ಸತೀಶ್ 2001 – "ಸ್ವ-ಸಹಾಯ ಗುಂಪುಗಳ ರಚನೆ: ಮೂಲ ಪ್ರಶ್ನೆಗಳು" ಎಂಬ ಗ್ರಂಥದಲ್ಲಿ ಹೆಳಿರುವ ಕೆಲ ಅಂಶಗಳನ್ನು ಇಲ್ಲಿ ನೀಡಲಾಗಿದೆ.[10]

1. ಗ್ರಾಮಗಳಲ್ಲಿನ ನೈಜ ಬಡವರು ಸ್ವ-ಸಹಾಯ ಗುಂಪುಗಳ ಸದಸ್ಯರಾಗುವುದು ಸಾಧ್ಯವೇ?
2. ಸ್ವ-ಸಹಾಯ ಗುಂಪುಗಳ ರಚನಾ ಪ್ರಕ್ರಿಯೆಯಲ್ಲಿನ ನೀತಿ ನಿಯಮಗಳು.
3. ಸ್ವ-ಸಹಾಯ ಗುಂಪುಗಳ ರಚನೆಯಲ್ಲಿ ಬರುವ ಅಡ್ಡಿ ಆತಂಕಗಳು ಮತ್ತು ಪರಿಹಾರ ಉಪಾಯಗಳು.

ಇನ್ನೊಂದು ಮಹತ್ವಪೂರ್ಣ ಅಧ್ಯಯನದಲ್ಲಿ **"ಆರ್.ಸೂರ್ಯ ಮೂರ್ತಿ 2005** ಅವರು "ಕೇರಳದಲ್ಲಿಯ ಸ್ವ-ಸಹಾಯ ಗುಂಪುಗಳು ಮತ್ತು ಸಣ್ಣ ಪ್ರಮಾಣದ ಸಾಲಗಳು" ಎಂಬ ಅಧ್ಯಯನ ವಿಷಯದಲ್ಲಿ ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಸ್ವ-ಸಹಾಯ ಗುಂಪುಗಳ ಕಾರ್ಯನಿರ್ವಹಣೆ ಮತ್ತು ಮಹಿಳೆಯರಿಗೆ ಸಹಾಯವಾಗುವ ಬಗೆಗೆ ಬರೆದಿದ್ದಾರೆ. ಸ್ವ-ಸಹಾಯ

ಗುಂಪುಗಳ ಮೂಲಕ ಮಹಿಳೆಯರು ಪಡೆದ ಸಾಲಗಳನ್ನು ಪುರಷರೇ ದುರುಪಯೋಗ ಪಡೆಸಿಕೊಂಡಿರುವುದೇ ಸಿಂಹಪಾಲು ಎಂಬ ಸತ್ಯವನ್ನು ಹೊರಗೆಡವಿದ ಅಧ್ಯಯನವಿದು.[11]

ಹಂಟ್ ಮತ್ತು ಕಸ್ಯನಾಥನ್ 2001 – ಅವರು ಇದೇ ವಿಷಯದ ಬಗೆಗೆ ಗುರುತರ ಮಾಹಿತಿಯನ್ನು ನೀಡಿದರು. ಸ್ವ-ಸಹಾಯ ಗುಂಪಿನ ಮಹಿಳೆಯರು ಪಡೆದ ಸಾಲವನ್ನು ತಮ್ಮ ಗಂಡನಿಗೆ ನೀಡಿ ಕೈತೊಳೆದುಕೂಂಡ ಬಗೆಯನ್ನು, ಸಾಲ ನಿರ್ವಹಣೆಯನ್ನು ಆ ಮಹಿಳೆಯ ಕುಟುಂಬದ ಪುರುಷರೇ ಕೈಗತ್ತಿಕೊಂಡಿದ್ದು ಸ್ಪಷ್ಟಪಡಿಸುತ್ತದೆ. ಸಾಲ ತೆಗೆದುಕೊಂಡ ಮೇಲೆ ತಮ್ಮ ಗಂಡ, ಮಗ, ಅಳಿಯ ಹೀಗೆ ಅವಲಂಬಿತ ಪುರಷರಿಗೆ ಹಸ್ತಾಂತರಿಸಿದ ಸತ್ಯವನ್ನು ಈ ಅಧ್ಯಯನ ಎತ್ತಿಹಿಡಿಯಿತು.

ಈ ಸಾಲದ ಹಣವನ್ನೂ ಬಳಸಿ ಇಡೀ ವ್ಯವಹಾರದ ಮೇಲೆ ಪುರುಷರು ತಮ್ಮ ಹಿಡಿತ ಸಾಧಿಸಿದರು. ಮಹಿಳೆ ಮತ್ತೊಮ್ಮೆ ಅವರ ದುಡಿಯುವ ತೊತ್ತಿನ ಕೈಗೊಂಬೆಯಾದಳು. ಕೇವಲ ಸಾಲ ತರುವುದು, ಪುರಷರಿಗೆ ಒಪ್ಪಿಸುವಲ್ಲಿ ಮಾತ್ರ, ಅವಳ ಪಾತ್ರ ಸಕ್ರಿಯವಾಯಿತು. ನಂತರ ಅವಳು ನೇಪಥ್ಯಕ್ಕೆ ಸರಿಯುವ ಅನಿವಾರ್ಯವನ್ನು ಸೃಷ್ಟಿಸಿದರು.

ಮಹಿಳೆಯರು ಕೇವಲ ಆ ಹಣದ ಜವಾಬ್ದಾರಿಯನ್ನು ಮಾತ್ರ ಹೊರುವಂತಾಯಿತು. ಒಮ್ಮೊಮ್ಮೆ ಉತ್ಪಾದನಾ ಚಟುವಟಿಕೆಗಳಿಗೆ ವ್ಯಾಪಾರಕ್ಕೆ ಎಂದು ಪಡೆದ ಹಣವೂ ನೆರೆಹೊರೆಯವರ ಕಷ್ಟಕ್ಕೆ, ಬಂಧುಗಳಿಗೆ ಆಪದ್ಧನವಾಗಿದ್ದೂ ಇದೆ. ಸಾಲದ ಹಣ ತಿರುಗಿ ಕೈಗೆ ಬಾರದಿದ್ದಾಗ ಮಾನಸಿಕ ಕ್ಲೇಷಗಳಿಗೆ ಬಲಿಯಾಗಿದ್ದೂ ಹೆಂಗಳೆಯರೇ, ಇದರೊಂದಿಗೆ ಆರ್ಥಿಕ ಸಂಕಷ್ಟಗಳನ್ನೂ ಆತಂಕಗಳನ್ನು ಹಣದ ವ್ಯವಹಾರ ನಿರ್ವಹಿಸಲಾಗದ ಭಾರದಿಂದಲೂ ಅವಳು ಕುಸಿಯುವಂತಾಯಿತು.[12]

ಎನ್.ಲಲಿತಾ ಮತ್ತು ಬಿ.ಎಸ್. ನಾಗರಾಜನ್ (2002) – "ಸ್ವ-ಸಹಾಯ ಗುಂಪುಗಳು ಗ್ರಾಮೀಣ ಅಭಿವೃದ್ಧಿ" ಎಂಬ ಪ್ರಬಂಧದಲ್ಲಿ ತಮಿಳು ನಾಡಿನಲ್ಲಿ ಸ್ವ-ಸಹಾಯ ಗುಂಪುಗಳ ಉದ್ದೇಶ ಪೂರ್ತಿಯಾಗಿ ಈಡೇರದೇ ಇರುವುದರಿಂದ ಸಹ ಸ್ವ-ಸಹಾಯ ಗುಂಪುಗಳ ರಚನೆಗೆ ನಿರುತ್ಸಾಹದಾಯಕ ವಾತಾವರಣ ನಿರ್ಮಾಣವಾಗಿದೆ ಎಂದಿದ್ದಾರೆ.[13]

ವಿವಿಧ ಹಂತಗಳ ಅಧ್ಯಯನಗಳೊಂದಿಗೆ ಕೆಲವೊಂದು ಸ್ವ-ಸಹಾಯ ಗುಂಪುಗಳನ್ನು ಮಾದರಿಯಾಗಿ ಸ್ವೀಕರಿಸಿ ಈ ಅಧ್ಯಯನ ಕಾರ್ಯ ನಡೆಸಲಾಗಿದೆ. ಸ್ವ-ಸಹಾಯ ಗುಂಪುಗಳ ಬಹುತೇಕ ಜನ ಸದಸ್ಯರು ಬಡವರ್ಗದಿಂದಲೇ ಬಂದವರು. ಬಡತನದ ರೇಖೆಗಿಂತ ಕೆಳಗಿನವರು. ತಮ್ಮ ಉಳಿತಾಯದ ಹಣವನ್ನು ಸರಿಯಾದ ಸಮಯಕ್ಕೆ ಕಟ್ಟಿರುವರು. ಸಾಲದ ಹಣವನ್ನು ಸದ್ಬಳಿಕೆ ಮಾಡಿಕೊಂಡು ಆದಾಯದ ಮೂಲಗಳನ್ನು ಕಂಡುಕೊಂಡಿರುವರು. ಈ ಅಧ್ಯಯನ

ಸ್ವ-ಸಹಾಯ ಗುಂಪುಗಳ ಪರವಾಗಿಯೇ ನಡೆದಿದೆ. ಆದರೂ ಪ್ರಾಯೋಜಕರು ಮತ್ತು ಫಲಾನುಭವಿಗಳು ಆರ್ಥಿಕ ಸ್ವಾತಂತ್ರ್ಯದ ಪ್ರಾಪ್ತಿಯಲ್ಲಿ ಸಾರ್ಥಕ್ಯ ಪಡೆದಿದ್ದಾರೆಯೇ ಎಂಬುದರ ಬಗೆಗೆ ಹೆಚ್ಚಿನ ವಿವರ ನೀಡುವುದಿಲ್ಲ.

"ಅಲ್ಪ ಪ್ರಮಾಣದ ಸಾಲ ವಿತರಣೆ ಮತ್ತು ಮಹಿಳಾ ಸಬಲೀಕರಣ ಕೇರಳದ ಎರಡು ಸರ್ಕಾರೇತರ ಸಂಸ್ಥೆಗಳ ಅಧ್ಯಯನ" ಎಂಬ ಪ್ರಬಂಧದಲ್ಲಿ ಡಾ॥ ರಾಜಶೇಖರ್ ಮಹಿಳಾ ಸಬಲೀಕರಣದ ನಿಟ್ಟಿನಲ್ಲಿ ಸ್ವ-ಸಹಾಯ ಗುಂಪುಗಳು ನೆರವಾಗುತ್ತವೆಯೇ ಎಂಬ ಪ್ರಶ್ನೆಯನ್ನು ಎದುರಿಗಿಟ್ಟರು.

ಮಹಿಳಾ ಆದಾಯದ ಸ್ವರೂಪಗಳೂ ಬಹಳ ಸೀಮಿತವಾದವುಗಳು. ಕೆಲವೊಂದು ಹಳ್ಳಿಗಳಲ್ಲಿ ಕೃಷಿಯನ್ನು ಹೊರತುಪಡಿಸಿದರೆ ಬೇರೆ ಉದ್ಯೋಗಗಳಿಗೆ ಅವಕಾಶಗಳೇ ಇರುವುದಿಲ್ಲ. ಮಹಿಳೆಯರು ಸಾಲ ಪಡೆಯಬೇಕೆಂದಿದ್ದರೂ ಯಾವು ಉದ್ಯೋಗಕ್ಕಾಗಿ ಸಾಲ ಪಡೆಯಲಾಗತ್ತಿದೆ ಎಂಬುದನ್ನು ವಿವರಿಸಲು ಹೆಚ್ಚಿನ ಆಯ್ಕೆಗಳಿರಲಿಲ್ಲ. ತಮ್ಮ ಆದಾಯದ ಮೂಲಗಳಲ್ಲಿ ಹೆಚ್ಚು ಮಾಡಬಹುದಾದ ಸಾಧ್ಯತೆಯ ವಿವರಗಳನ್ನು ನೀಡಲು ಮಹಿಳೆಯರಿಗೆ ಅಶಕ್ಯವಾಯಿತು. ಕೆಲವೊಂದು ಪ್ರಾಯೋಜಕರು ತಾವು ಸ್ವಾತಂತ್ರ್ಯವಾಗಿ ವ್ಯವಹಾರಗಳನ್ನು ನಡೆಸಿ ಲಾಭ ಮಾಡಿಕೊಳ್ಳುವುದಕ್ಕೆ ನಮಗೆ ಮುಕ್ತ ಅವಕಾಶ ದೊರೆಯುವುದಿಲ್ಲ ಎಂದು ತಿಳಿಸಿದ್ದಾರೆ ಎಂದು ಈ ಅಧ್ಯಯನದಲ್ಲಿ ಉತ್ತರ ಕಂಡುಕೊಂಡರು.

ಕೃಷಿಗಾಗಿ ಸಾಲ ಪಡೆದ ಮಹಿಳೆಯರು ಸಾಲದ ಹಣವನ್ನು ಪೂರ್ತಿಯಾಗಿ ತಮ್ಮ ಕುಟುಂಬದ ಪುರುಷ ಸದಸ್ಯರಿಗೆ ನಿಡಿದರೂ ಸಾಲವನ್ನು ಹಿಂತಿರುಗಿಸಬೇಕಾದಾಗ ಪುರುಷರಿಗೆ ಅಂಗಲಾಚಿ ಕಂತು ಕಟ್ಟಿದರು ಅಥವಾ ತಮ್ಮ ದುಡಿಮೆಯ ಫಲಸ್ವರೂಪದಲ್ಲಿ ದೊರೆತ ಹಣದಿಂದಲೇ ಸಾಲ ಮರಳಿಸಿದರೂ, ಹೈನುಗಾರಿಕೆಗಾಗಿ ದನಗಳನ್ನು ಖರೀದಿಸಿ ಮೇಯಿಸಿದರು. ಇಡೀ ದಿನ ದುಡಿದು ಹುಲ್ಲು ಹೊತ್ತರು. ಆದರೆ ಹಾಲು ಮಾರುವ ಹಕ್ಕಾಗಲೀ ಪುನಃ ದನ ಖರೀದಿಸುವ ಹಕ್ಕಾಗಲೀ ಅವರಿಗೆ ದೊರೆಯಲಿಲ್ಲ. ಹಾಲು ಮಾರಾಟದಿಂದ ಬಂದ ಹಣವನ್ನೆಲ್ಲ ಗಂಡಸರೇ ನಿಭಾಯಿಸಿದರೆ ಕುಟುಂಬ ಸಾಕಿದ ಸಂತೃಪ್ತಿ ಮಾತ್ರ ಮಹಿಳೆಯರಿಗೆ ದಕ್ಕಿತು ಎಂಬುದನ್ನು ಈ ಅಧ್ಯಯನ ವಿಶ್ಲೇಷಿಸಿದೆ.

ಕೆಲವೊಂದಡೆ ಸ್ವ-ಸಹಾಯ ಗುಂಪುಗಳ ಪಾತ್ರ ಸಬಲೀಕರಣದ ತದ್ವಿರುದ್ಧವಾಗಿ ಸಾಲದ ಕೂಪಕ್ಕೆ ತಳ್ಳುವ ದೌರ್ಬಲ್ಯವಾಗಿಯೂ ಹೊರಹೊಮ್ಮಿದೆ ಎನ್ನುತ್ತಾರೆ ರಾಜಶೇಖರ ತಮ್ಮ ಸಂಶೋಧನಾ ಗ್ರಂಥದಲ್ಲಿ.

1. ಮಹಿಳೆಯೊಬ್ಬಳು ಕೋಳಿ ಸಾಕಣೆಗಾಗಿ ಕೊಂಡ ಸಾಲದಿಂದ ಕೃಷಿ ಉಪಕರಣಗಳನ್ನು ಖರೀದಿಸಿ, ಇನ್ನಷ್ಟು ಹಣವನ್ನು ಮಕ್ಕಳ ಬಟ್ಟೆಬರೆಗಾಗಿ ವ್ಯಯಮಾಡಿದ್ದಳು. ಅನುತ್ಪಾದಕತೆಗೆ ಹೆಚ್ಚಿನ ಹಣ ವೆಚ್ಚವಾಯಿತು. ಆದಾಯ ಮೂಲವಾಗಬೇಕಿದ್ದ ಈ ಸಾಲ ಖರ್ಚಿನಲ್ಲಿಯೇ ಕರಗಿಹೋಯಿತು. ಸ್ವ-ಸಹಾಯ ಗುಂಪಿನ ಒತ್ತಡ ಹೆಚ್ಚಾದಾಗ ಮಹಿಳೆ ಮತ್ತೆ ತಾನೆ ಹಗಲಿರುಳೂ ದುಡಿದು ಸಾಲ ತಿರುಗಿಸಬೇಕಾಯಿತು. ಗಳಿಕೆಯೆಲ್ಲ ಸಾಲಕ್ಕೆ ನೀಡಬೇಕಾಯಿತು ಎಂಬ ನಿದರ್ಶನವನ್ನು ಅವರು ಉದ್ಧರಿಸಿದ್ದಾರೆ. [14]

2. ಇನ್ನೊಂದು ನಿದರ್ಶನವೆಂದರೆ ಕುರಿ ಸಾಕಣೆಗಾಗಿ ಮಹಿಳೆಯೊಬ್ಬಳು ಸಾಲ ಪಡೆದಳು. ಸಾಲದಿಂದ ಕರುಗಳನ್ನು ಕೊಂಡಳು. ಅನಿವಾರ್ಯ ಕಾರಣದಿಂದ ಒಂದಿ ದಿನಕ್ಕೆ ಹಳ್ಳಿ ಬಿಟ್ಟು ಹೋದಾಗ ಕುಡುಕ ಗಂಡ ಕುರಿಗಳೆಲ್ಲವನ್ನು ಮಾರಾಟ ಮಾಡಿ ತನ್ನ ಕುಡಿತದ ಸಾಲವನ್ನು ತೀರಿಸಿದ್ದ. ಆದಾಯದ ಮೂಲವನ್ನು ಕಳೆದುಕೊಂಡು, ಕುರಿಗಳನ್ನು ಕಳೆದುಕೊಂಡು ಮಹಿಳೆ ಮೊದಲಿನ ಆರ್ಥಿಕ ಸ್ಥಿತಿಗಿಂತ ಕೆಳಗಿನ ಮಟ್ಟಕ್ಕೆ ಇಳಿದಳು.

3. 20 ಜನರು ಇರುವ ಒಂದು ಸ್ವ-ಸಹಾಯ ಗುಂಪು ಪ್ರತಿಯೊಬ್ಬರಿಗೂ 100 ರೂಪಾಯಿಯಂತೆ ಸಾಲ ನೀಡಲಾಗಿದ್ದು, ಅವರು ಒಂದೊಂದು ಕೋಳಿಗಳನ್ನು ಖರೀದಿಸಿದರು. ತಮಗೆ 100 ರೂಪಾಯಿ ಸಾಲ ಸಿಕ್ಕಿದೆ ಎಂಬ ಸಂತೋಷದಲ್ಲಿಯೇ ಕೋಳಿ ಸಾಕಾಣಿಕೆ ಪ್ರಾರಂಭಿಸಿದ್ದರು. ಈ ಪ್ರಕ್ರಿಯೆಯನ್ನು ಆಳವಾಗಿ ಅಧ್ಯಯನಿಸಿದಾಗ ಈ ಗುಂಪಿಗೆ ನಿಜವಾಗಿ ಸಿಕ್ಕ ಸಾಲ 25,000 ರೂಪಾಯಿಯಾಗಿತ್ತು. ಹಾಗಾದರೆ ಮಹಿಳೆಯರಿಗೆ ಸಿಕ್ಕ ಹಣ ಕೇವಲ 2,000 ರೂಪಾಯಿಗಳು ಮಾತ್ರ. ಉಳಿದ 23,000 ರೂಪಾಯಿಗಳು ಎಲ್ಲಿ ಹೋದವು. ಯಾರ ಪಾಲದವು. ಮಹಿಳೆಯರಿಗೆ ಗೊತ್ತಿಲ್ಲ. ಹೀಗಾಗಿ ಮಹಿಳೆಯರ ಹೆಸರಲ್ಲಿ ಸಬಲೀಕರಣದ ಯೋಜನೆಗಳು ವ್ಯವಸ್ಥೆಯಲ್ಲಿ ದುರುಪಯೋಗವಾಗಿರುವುದು ಸ್ಪಷ್ಟವಾಗಿ ಕಂಡುಬಂದಿದೆ. ಆದರೂ ಮಹಿಳೆಯರು 100 ರೂಪಾಯಿ ಸಾಲದಲ್ಲಿಯೇ ಪ್ರಗತಿಯತ್ತ ಸಾಗಿರುವುದು ತುಂಬಾ ಸಂತೋಷದ ವಿಷಯ. ಒಂದು ವೇಳೆ ಪೂರ್ತಿ ಹಣ ಮಹಿಳೆಯರ ಕೈಗೆ ಸೇರಿದರೆ ಸದುಪಯೋಗ ವಾಗುವ ಸಾಧ್ಯತೆ ಇತ್ತು. ಇಂಥ ಹತ್ತು ಹಲವು ಅಧ್ಯಯನಗಳು ಮಹಿಳಾ ಸಬಲೀಕರಣ ವಿಷಯವನ್ನೇ ಕೇಂದ್ರಿಕೃತವಾಗಿರಿಸಿಕೊಂಡು ನಡೆದವು. ಅಹವಾನ್

(1999), ಮ್ಯಾಥ್ಯೂ (2005), ಚಂದ್ರಮಣಿ, (2005), ಹೊಸಮನಿ (2001), ಅವು ಯಾವವೂ ಅನುಭವ ಪ್ರಧಾನ ಒಳಪ್ರವೇಶದ ಅಧ್ಯಯನವನ್ನು ನಡೆಸುವಲ್ಲಿ ವಿಫಲವಾಗಿವೆ ಎಂದೇ ಹೇಳಬೇಕಾಗುತ್ತದೆ. ಸ್ವ-ಸಹಾಯ ಗುಂಪುಗಳು ಮಹಿಳೆಯರನ್ನು ಸಬಲಗೊಳಿಸಿ ಆರ್ಥಿಕ ಉತ್ಪಾದನೆ ಚಟುವಟಿಕೆಗಳನ್ನು ಸ್ವತಂತ್ರವಾಗಿ ನಿಭಾಯಿಸುವುದಕ್ಕೆ ಮತ್ತು ತಮ್ಮ ಮಿತವ್ಯಯದಿಂದ ಸಂಗ್ರಹಿಸಿದ ಉಳಿತಾಯ ಗಣದ ಬಗೆಗೆ ತಾವೇ ಯೋಗ್ಯ ನಿರ್ಣಯ ತೆಗೆದುಕೊಳ್ಳುವುದಕ್ಕೆ ಮತ್ತು ಸಮಾಜದಲ್ಲಿ ತಮ್ಮ ಸ್ಥಾನಮಾನಗಳು ಹೆಚ್ಚಿಸಿಕೊಳ್ಳುವುದಕ್ಕೆ ಸ್ವ-ಸಹಾಯ ಗುಂಪುಗಳು ನೆರವಾಗಿವೆ ಎಂದು ಯಾವ ಅಧ್ಯಯನಗಳೂ ಸ್ಪಷ್ಟಪಡಿಸಿರುವುದಿಲ್ಲ.

ಮಹಿಳೆ ಇನ್ನೂ ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡಿಸಲು, ಮದುವೆಯ ವಯೋಮಾನ (ವಯಸ್ಸು) ನಿರ್ಧರಿಸಲು, ಯಾರಿಗೆ ಯಾವಾಗ ಮದುವೆ ಮಾಡಬೇಕು ಎಂಬ ವಿಷಯಗಳಿಗೆ ಸಂಬಂಧಿಸಿದಂತೆ ತಾನೆಷ್ಟು ಮಕ್ಕಳನ್ನು ಪಡೆಯಬೇಕು? ಮಕ್ಕಳ ಜನನ ನಿಯಂತ್ರಣಕ್ಕೆ ಯಾರು ಯಾವ ವಿಧಾನ ಅನುಸರಿಸಬೇಕು? ಕುಟುಂಬ ಕಲ್ಯಾಣ ಯೋಜನೆಗೆ ಒಳಪಡಬೇಕು (ಯಾರು ಗಂಡನೋ ಅಥವಾ ಹೆಂಡತಿಯೋ), ಜೀವನದ ಇಂಥ ಎಲ್ಲ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ವತಂತ್ರಳಲ್ಲ ಅಂದರೆ ಅವಳಿಗೆ ಅವಕಾಶವಿಲ್ಲ. ಈಗಲೂ ಸ್ವ-ಇಚ್ಚೆಯಿಂದಾಗಲಿ, ಬಲವಂತದಿಂದಾಗಲಿ ಪುರಷರನ್ನು ಅವಲಂಬಿಸಿರುವುದು ಹಾಗೂ ಪುರಷರ ನಿರ್ಧಾರವೇ ಅಂತಿಮ ನಿರ್ಧಾರವಾಗಿರುವುದು ಶತಸಿದ್ಧವಾಗಿದೆ.

ಟಿಪ್ಪಣೆಗಳು

1. ಡಾ॥ ಮಹಾಜನ 1989 "ಭಾರತ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ"
2. ಆರ್.ಕೆ.ಸಪ್ರು 1989 "ಅಭಿವೃದ್ಧಿ ಮತ್ತು ಮಹಿಳೆ"
3. ಶ್ರೀಲತಾ ಬಾಟ್ಲಿವಾಲಾ ಮತ್ತು ಅನಿತಾ ಗುರುಮೂರ್ತಿ 1998 "ಅಂತಸ್ತಿನ ಅನ್ವೇಷಣೆ" ನಿಯಾಸ್ ರಾಷ್ಟ್ರೀಯ ಉಚ್ಚ ಅಧ್ಯಯನಗಳ ಸಂಸ್ಥೆ.
4. ಡಾ॥ ಶಾಂತಾ.ಬಿ. ಅಷ್ಟಗಿ 2007 "ನಡೆತುರಗ" ಬಿಡಿ ಲೇಖನಗಳು."
5. ಸಮತಾ.ಬಿ.ದೇಶಮಾನ್ಯೆ 2004 "ದಲಿತ ಮಹಿಳೆಯರ ಬದಲಾಗುತ್ತಿರುವ ಸ್ಥಾನಮಾನಗಳ ಸಮಾಜಶಾಸ್ತ್ರೀಯ ಅಧ್ಯಯನ" ಸಂಶೋಧನಾ ಪ್ರಬಂಧ.
6. ಡಾ॥ ಟಿ.ಆರ್.ಚಂದ್ರಶೇಖರ 2001 "ಮಹಿಳೆ ಮತ್ತು ಆರ್ಥಿಕತೆ".
7. ಉಪ್ರೇತಿ ಮತ್ತು ಉಪ್ರೇತಿ 2000 "ಮಹಿಳೆಯರು ಮತ್ತು ಲಿಂಗಬೇಧ ಸಮಸ್ಯೆ".

8. ಕೆ.ಜಿ.ಕರಮಕರ 1999 "ಗ್ರಾಮೀಣ ಸಾಲ ವಿತರಣೆ ಹಾಗೂ ಸ್ವ-ಸಹಾಯ ಗುಂಪುಗಳು" ಪುಟ.ಸಂಖ್ಯೆ: 300.

9. ಅಲಕಾ ಶ್ರೀವಾಸ್ತವ 2004 "ಸ್ವ-ಸಹಾಯ ಗುಂಪುಗಳ ಹುಟ್ಟು ಮತ್ತು ಬೆಳವಣಿಗೆ ಪುಟ ಸಂಖ್ಯೆ: 151, 152.

10. ಸತೀಶ.ಪಿ. 2001 "ಸ್ವ-ಸಹಾಯ ಗುಂಪುಗಳ ರಚನೆ : ಮೂಲ ಪ್ರಶ್ನೆಗಳು" ಭಾರತೀಯ ಜರನಲ್ ಕೃಷಿಕ ಅರ್ಥಶಾಸ್ತ್ರ 56 (3) ಪುಟ ಸಂಖ್ಯೆ: 411.

11. ಆರ್.ಸೂರ್ಯಮೂರ್ತಿ 2005 "ಕೇರಳದಲ್ಲಿನಯ ಸ್ವ-ಸಹಾಯ ಗುಂಪುಗಳು ಮತ್ತು ಸಣ್ಣ ಪ್ರಮಾಣದ ಸಾಲಗಳು" ವ್ಯಾಲುಮ್ 55 ಜನವೇರಿ –ಮಾರ್ಚ.

12. Hunt and kasyanathan (2001)
"Pathways to empowerment and reflections on Micro finance and transfromation in Gender relations in South Asia Gender and development. 9- Page.No.42 to 52.

13. ಕೆ.ಎನ್.ಲಲಿತಾ ಮತ್ತು ಬಿ.ಎಸ್.ನಾಗರಾಜ –2002 "ಸ್ವ-ಸಹಾಯ ಗುಂಪುಗಳು ಮತ್ತು ಗ್ರಾಮೀಣಾಭಿವೃದ್ಧಿ".

14. ರಾಜಶೇಖರ 2000 " ಅಲ್ಪ ಪ್ರಮಾಣದ ಸಾಲ ವಿತರಣೆ ಮತ್ತು ಮಹಿಳಾ ಸಬಲೀಕರಣ ವ್ಯಾಲುಮ್.30 ಜನೆವರಿ–ಜೂನ್. ಪುಟ.ಸಂಖ್ಯೆ: 80–87.

ಅಧ್ಯಾಯ–2

ಗ್ರಾಮೀಣ ಮಹಿಳೆ, ಸಬಲೀಕರಣ ಹಾಗೂ ಸ್ತ್ರೀವಾದಗಳ ಸೈದ್ಧಾಂತಿಕ ಚರ್ಚೆ

2.1 ಗ್ರಾಮೀಣ ಮಹಿಳೆ

2.2 ಸಬಲೀಕರಣ

2.3 ಸ್ತ್ರೀವಾದಿ ಸೈದ್ಧಾಂತಿಕ ಹಿನ್ನೆಲೆ

ಅಧ್ಯಾಯ–2
ಗ್ರಾಮೀಣ ಮಹಿಳೆ, ಸಬಲೀಕರಣ ಹಾಗೂ ಸ್ತ್ರೀವಾದಗಳ ಸೈದ್ಧಾಂತಿಕ ಚರ್ಚೆ

ಪೀಠಿಕೆ :

ಭಾರತದೇಶದಲ್ಲಿರುವ ಹಳ್ಳಿಗಳ ಸಂಖ್ಯೆ 6 ಲಕ್ಷ ಅಂದರೆ 5,75,936 ಹಾಗೂ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇ.74ರಷ್ಟು ಜನರು, ಗ್ರಾಮೀಣ ಪ್ರದೇಶದಲ್ಲಿಯೇ ವಾಸಮಾಡುತ್ತಿದ್ದಾರೆ. ಭಾರತಹಳ್ಳಿಗಳ ನಾಡು ಹಳ್ಳಿಯ ಜೀವನ ಸರಳ ಸಹಜ ಮಣ್ಣಿನ ಸೊಗಡನ್ನು ಹೊಂದಿರುವ ಪ್ರಾಕೃತಿಕ ಹಾಗೂ ಮೂಲ ಸಂಸ್ಕೃತಿಯನ್ನು ಪ್ರತಿನಿದಿಸುವುದಾಗಿದೆ. ಗ್ರಾಮೀಣ ಜನರು ಸರಳ ಜೀವಿಗಳು ಮುಗ್ದರು ನಿರಾಡಂಬರರು ದೈವಭಕ್ತರು, ಮಣ್ಣಿನ ಮಕ್ಕಳು ಹೆಚ್ಚಾಗಿ ಕೃಷಿಯನ್ನೆ ಅವಲಂಬಿಸಿದ್ದಾರೆ. ಗ್ರಾಮೀಣ ಸಹಜೀವನ ಭವ್ಯ ಪರಂಪರೆ ಇತಿಹಾಸವನ್ನು ಪ್ರತಿನಿಧಿಸುತ್ತದೆ. ಗಾಂಧಿಜಿಯವರು ಹೇಳಿರುವಂತೆ. "ನನ್ನ ನಾಡು ಹಳ್ಳಿಗಳಲ್ಲಿದೆ" ಎನ್ನುವ ನುಡಿ ಅಕ್ಷರ ಸಹ ಸತ್ಯವಾಗಿದೆ. ಹಳ್ಳಿಗಳ ಅಭಿವೃದ್ಧಿಯ ಹೊರತಾಗಿ ದೇಶದ ಅಭಿವೃದ್ಧಿ ಅಸಾದ್ಯವೆಂದಿದ್ದಾರೆ.

ಆರಂಭದಲ್ಲಿ ಅಲೆಮಾರಿಯಾಗಿದ್ದ ಮಾನವ ತನ್ನ ಅಲೆಮಾರಿ ಜೀವನಕ್ಕೆ ಮಂಗಳಹಾಡಿ, ಕೃಷಿಯನ್ನೆ ಅವಲಂಬಿಸಿ, ಒಂದೆಡೆ ಸ್ಥಿರವಾಗಿ ನೆಲೆಸಿ ವಾಸಿಸಲು ಆರಂಬಿಸಿದನು. ಅಂದಿನಿಂದ ಜಗತ್ತಿನಲ್ಲಿ ಗ್ರಾಮಗಳು ಮತ್ತು ಗ್ರಾಮೀಣ ಸಮುದಾಯಗಳು ರೂಪಗೊಂಡಿವೆ ಹಾಗೂ ತನ್ನದೆಯಾದ ಇತಿಹಾಸಗಳನ್ನು ಹೊಂದಿವೆ. ಭಾರತದ ಜನಗಣತಿಯ ಪ್ರಕಾರ "ಗ್ರಾಮವು ಗರಿಷ್ಠ 5000 ಜನಸಂಖ್ಯೆಯನ್ನು ಹೊಂದಿದ್ದು ಈ ಸಮುದಾಯದ ಜನರ ಮುಖ್ಯ ಉದ್ಯೋಗ ಒಕ್ಕಲುತನ. ಇದನ್ನೇ ಗ್ರಾಮೀಣ ಸಮುದಾಯವೆಂದು ಕರೆಯುತ್ತಾರೆ.

ಪಿ.ಎ ಸಾರೋಕಿನ್ ಮತ್ತು ಕಾಲ್ ಜಮ್ಮರಮನ್ – ಇವರ ಪ್ರಕಾರ "ಕೃಷಿ ಪ್ರಧಾನವಾದ ಸರಳ ಹಾಗೂ ಸಾದಾ ಜೀವನವನ್ನು ನಡೆಸುವ ಸಮುದಾಯವನ್ನು" ಗ್ರಾಮೀಣ ಸಮುದಾಯವೆಂದು ಕರೆದಿದ್ದಾರೆ.[1]

ಬೋಗಾರ್ಡಸರವರ – ಪ್ರಕಾರ "ಮಾನವ ಸಮಾಜವು ತನ್ನ ತೊಟ್ಟಿಲನ್ನು ಗ್ರಾಮೀಣ ಸಮೂಹದಲ್ಲಿ ಕಂಡಿದೆ"[2]

ಚಾರ್ಲ್ಸ್ ಮೆಟಕಾಫ್‌ರವರ – ಪ್ರಕಾರ ಗ್ರಾಮೀಣ ಸಮುದಾಯ ಎಂದರೆ "ಈ ಗ್ರಾಮೀಣ ಜನ–ಸಮುದಾಯಗಳು ಪುಟ್ಟ ಗಣರಾಜ್ಯಗಳಂತಿವೆ ತಮಗೆ ಬೇಕಿರುವುದೆಲ್ಲ ತಮ್ಮಲೇ ಇದ್ದು ಯಾವುದೇ ವಿದೇಶಿ ಸಂಬಂಧಗಳಲ್ಲದೆ ಸ್ವತಂತ್ರರು. ಸಾಮ್ರಾಜ್ಯಗಳ ನಂತರ ಸಾಮ್ರಾಜ್ಯಗಳು ಉರಳಿ ಬೀಳುತ್ತವೆ. ಕ್ರಾಂತಿಯ ನಂತರ ಕ್ರಾಂತಿ ಯಶ್ವಸಿ ಆಗುತ್ತದೆ. ಆದರೆ ಗ್ರಾಮೀಣ ಸಮುದಾಯಗಳು ಮಾತ್ರ ಇದ್ದಹಾಗೆ ಇರುತ್ತವೆ.[3]

ಭಾರತೀಯ ಗ್ರಾಮಗಳ ಲಕ್ಷಣಗಳು:

1. ಸಮಾಜದ ಒಂದು ಸದೃಢ ಘಟಕ. ಕೃಷಿಯೆ ಮುಖ್ಯ ಉದ್ಯೋಗ ವಾಗಿರುವುದರಿಂದ ಭಾರತ ದೇಶವನ್ನು ಹಳ್ಳಿಗಳ ನಾಡು ಒಕ್ಕಲಿಗರ ಬೀಡು ಎಂದು ಕರೆಯಲಾಗುತ್ತದೆ.
2. ಗ್ರಾಮೀಣ ಸಮುದಾಯವು ಸಣ್ಣ ಗಾತ್ರವನ್ನು ಹೊಂದಿ, 5000 ಕ್ಕಿಂತ ಕಡಿಮೆ ಜನಸಂಖ್ಯೆಯನ್ನು ಹೊಂದಿದೆ ಇವರಲ್ಲಿಯ ಅನೊನ್ಯ ಸಂಬಂಧಗಳು ಪ್ರೀತಿ, ವಿಶ್ವಾಸದಿಂದ ಕೂಡಿವೆ.
3. ಅವಿಭಕ್ತ ಕುಟುಂಬಕ್ಕೆ ಹೆಚ್ಚಿನ ಪ್ರಾತಿನಿಧ್ಯ ಇದ್ದು, ಅನೌಪಚಾರಿಕ ನಿಯಂತ್ರಣದ ವ್ಯವಸ್ಥೆಯಿದೆ.
4. ಗ್ರಾಮೀಣ ಸಮುದಾಯದಲ್ಲಿ ವಿಶೇಷವಾಗಿ ಗ್ರಾಮೀಣ ಮಹಿಳೆಯರ ಸ್ಥಾನಮಾನಗಳನ್ನು ನೋಡಿದರೆ ಪ್ರತ್ಯೇಕ ಅಸ್ತಿತ್ವ ಇದೆ ಎಂದು ಎನಿಸಲಾರದು.
5. ಗ್ರಾಮೀಣ ಜನರ ಬದುಕು ಸರಳತೆ ಮತ್ತು ಧರ್ಮ ಶ್ರದ್ಧೆಯಿಂದ ಕೂಡಿದೆ.
6. ಗ್ರಾಮೀಣ ಸಮುದಾಯದಲ್ಲಿ ಬಡತನ, ನಿರುದ್ಯೋಗ ಅನಕ್ಷರತೆಯಂತಹ ಮೂಲ ಸಮಸ್ಯೆಗಳೊಂದಿಗೆ ಜಾತಿ ವ್ಯವಸ್ಥೆಯೂ ವ್ಯಾಪಕವಾಗಿ ಹರಡಿದೆ.

ಗ್ರಾಮೀಣ ಸಮುದಾಯಗಳು ಈ ಮೇಲಿನ ಎಲ್ಲ ಲಕ್ಷಣಗಳನ್ನು ಹೊಂದಿವೆ.[4]

2.1 ಗ್ರಾಮೀಣ ಮಹಿಳೆ:

ಗ್ರಾಮೀಣ ಸಮುದಾಯದಲ್ಲಿ ವಾಸಿಸುವ ಮಹಿಳೆಯನ್ನು ಗ್ರಾಮೀಣ ಮಹಿಳೆ ಎಂದು ಸರಳವಾಗಿ ಅರ್ಥೈಸಲಾಗುತ್ತದೆ. ಭಾರತೀಯರಲ್ಲಿಯ ಮಹಿಳೆಯರ ಸಂಖ್ಯೆ ನಮ್ಮ ಒಟ್ಟು ಜನ ಸಂಖ್ಯೆಯ. ಅರ್ಧದಷ್ಟಿದೆ. (ಶೇ.48% ರಷ್ಟಿದೆ) 2001ರ ಜನಗಣತಿಯ ಪ್ರಕಾರ ಮಹಿಳೆಯರ

ಸಂಖ್ಯೆ 49 ಕೋಟಿ 60 ಲಕ್ಷಗಳ ಆಸುಪಾಸಿನಲ್ಲಿದೆ. ಗ್ರಾಮೀಣ ಮಹೀಳೆಯರ ಬಗ್ಗೆ ಹೇಳುವುದಾದರೆ ಅವರಿಗೆ ಪ್ರತ್ಯೇಕ ಅಸ್ತಿತ್ವವಿದೆ ಎಂದೆ ಅನ್ನಿಸುವುದಿಲ್ಲ. ಅವರು ಪುರುಷರ ಜೀವನದ ಒಂದು ಭಾಗವಾಗಿಯೇ ಕೆಲಸಮಾಡುವರು. ಪುರುಷರಿಗೆ ಅಧೀನರಾಗಿ, ವಿಧೇಯರಾಗಿ, ಸಂಪೂರ್ಣವಾಗಿ ಶರಣಾಗತರಾಗಿ ಅವರು ನಡೆದುಕೊಳ್ಳುತ್ತಾರೆ. ಭಾರತೀಯ ಪರಂಪರೆಯಲ್ಲಿ ವೈಭವೀಕರಿಸಲಾಗಿರುವ "ಪಾತಿವ್ರತ್ಯದ" ಕಲ್ಪನೆಯು ಅವರಿಗೆ ಅರ್ಥವಾಗಿದೆಯೆನ್ನುವುದಕ್ಕಿಂತ ಅದನ್ನು ಮೌನವಾಗಿ ಸ್ವೀಕರಿಸಿದವರಂತೆ ನಡೆದುಕೊಳ್ಳುವರು. ಮಹಿಳೆಯರು ಕುಟುಂಬದ ಬೆನ್ನೆಲುಬಿದ್ದಂತೆ, ಕುಟುಂಬದ ನಿತ್ಯ ವ್ಯವಹಾರಗಳಿಗಾಗಿ ತಮ್ಮ ಜೀವನವನ್ನು ಬಿಡುವಿಲ್ಲದಂತೆ ತೇಯುವರು, ಗೃಹಕೃತ್ಯಗಳನ್ನು ಪುರುಷರು ಹಂಚಿಕೊಂಡು ಮಾಡುವ ಕ್ರಮವೇ ಭಾರತದ ಗ್ರಾಮಗಳಲ್ಲಿ ಇಲ್ಲವಾದರಿಂದ ಅದು ಸಂಪೂರ್ಣವಾಗಿ ಸ್ತ್ರೀಯರ ಕೆಲಸವೆ ಆಗಿದೆ. ಅಗತ್ಯಬಿದ್ದಾಗ ಮನೆಕೆಲಸದ ಜೊತೆಗೆ ಹೊಲಗದ್ದೆಗಳಲ್ಲಿ ಪುರುಷರೊಂದಿಗೆ ಸೇರಿಕೊಂಡು ದುಡಿಯುವುದು, ಮನೆ, ಹೊಲ, ಕೆಲಸದ ಜೊತೆಗೆ ಕೂಲಿಕೆಲಸ, ದನಕರುಗಳನ್ನು ಕಾಯುವುದು, ಹುಲ್ಲುತರುವುದು. ಮುಂತಾದ ಕೆಲಸಗಳನ್ನು ಮಾಡಬೇಕಾಗುತ್ತದೆ. "ಗ್ರಾಮೀಣ ಸ್ತ್ರೀಯರಿಗೆ ಕುಟುಂಬವು ತೀರಾ ಅಗತ್ಯವಾಗಿರುವ ಸಂಸ್ಥೆ, ಕುಟುಂಬದ ಹೊರತಾಗಿ ಅವರು ಜೀವಿಸುವುದು, ಅಸಾದ್ಯವಾಗಿದೆ. ಆದ್ದರಿಂದ ಗ್ರಾಮೀಣ ಮಹೀಳೆ ತನ್ನ ಕೌಟುಂಬಿಕ ಜೀವನ ಸುಗಮವಾಗಿ ಸಾಗಲು ಯಾವುದೆ ಬಗೆಯ ತ್ಯಾಗಕ್ಕೂ ಸಿದ್ದಳಾಗುತ್ತಾಳೆ. ಏಕೆಂದರೆ ಅವಳ ಮನಸ್ಸಿನ ಬಳ್ಳಿ ಬೆಳೆದು ಹೊರಹೋಗದಂತೆ ಪುರುಷ ಪ್ರಧಾನ ಸಮಾಜ ಬೇಲಿ ಹಾಕಿದೆ. ಅಂದರೆ ಅವಳ ವಿಚಾರಗಳು ಹೊರಹೊಗದಂತೆ ಹೊರಗಿನ ವಿಚಾರಗಳು ಒಳಗೆ ಬರದಂತೆ ಮಾನ, ಮರ್ಯಾದೆ, ಗೌರವಗಳ ಎಂಬ ಕಟ್ಟಿನಿಂದ ಕಟ್ಟಿ ಹಾಕಿದೆ. ಹಾಗೇ ಇದ್ದರೆ ಮಾತ್ರ ಅವಳಿಗೆ ಮರ್ಯಾದಸ್ಥಳು, ಉತ್ತಮ ಗ್ರಹಿಣಿ ಎಂಬ ಬಹುಮಾನವು ನೀಡಿದೆ. ಮಹಿಳೆಯರಿಗೆ ಕುಟುಂಬದಲ್ಲಿ ಬೇರೆ-ಬೇರೆ ರೀತಿಯ ಶೋಷಣೆಗಳಿದ್ದರು ಪುರಷರಿಗೆ ಅಧೀನರಾಗಿ ನಡೆದುಕೊಳ್ಳಬೇಕಾದ ಅನಿವಾರ್ಯತೆ ಇದೆ. ಅದರಲ್ಲಿಯೇ ಒತ್ತಾಯದಿಂದ ತೃಪ್ತಿ ಕಾಣುವರು. ಬಾರತದ ಗ್ರಾಮೀಣ ಮಹಿಳೆ ತುಂಬಾ ಭಾವುಕ ಜೀವಿಯಾಗಿರುವುದರಿಂದ ತನ್ನ ಗಂಡ, ಮಕ್ಕಳು, ಕುಟುಂಬದ ಸದಸ್ಯರ ಜೊತೆಗೆ ಭಾವನಾತ್ಮಕ ಸಂಬಂಧ ಹೊಂದಿರುವುದರಿಂದ ಅವರೆಲ್ಲರ ಸಲುವಾಗಿ ಏನು ಬೇಕಾದರು ತ್ಯಾಗ ಮಾಡಲು ಸಿದ್ಧಳಾಗಬೇಕಾದ ಪರಿಸ್ಥಿತಿ ನಮ್ಮಲ್ಲಿದೆ. ಪಾಶ್ಚಿಮಾತ್ಯರಲ್ಲಿ ಕಾಣುವ ವಿವಾಹ ವಿಚ್ಛೇದನಾ, ಮರುಮದುವೆ, ವಿರಸ, ಪರಸ್ಪರ ಪರಿತ್ಯಜನೆ ಇವು ಭಾರತದ ಗ್ರಾಮೀಣ ಮಹಿಳೆಯರ ಕಲ್ಪನೆಗೂ ನಿಲುಕದ ಸಂಗತಿಗಳಾಗಿವೆ"[5].

ಪ್ರಸ್ತುತ ಅಧ್ಯಾಯದಲ್ಲಿ ಗ್ರಾಮದ ಪರಿಸರ ಮತ್ತು ಗ್ರಾಮೀಣ ಮಹಿಳೆಯ ಸ್ಥಿತಿಗತಿ ಅವಳು ಸ್ವರೂಪ ಅಥವಾ ಲಕ್ಷಣಗಳು, ಎದುರಿಸುತ್ತಿರುವ ಸಮಸ್ಯೆಗಳು, ಪರಿಹಾರ, ಸಬಲೀಕರಣ ಹಾಗೂ ಸ್ತ್ರೀವಾದಗಳು ಸೈಧ್ಧಾಂತಿಕ ಚರ್ಚೆಯನ್ನು ಮಾಡಲಾಗುವುದು. ಪುರುಷ ಪ್ರಧಾನ ಸಮಾಜದಲ್ಲಿ ಗ್ರಾಮೀಣ ಮಹಿಳೆಯ ಬದುಕು ಸುಖ-ಸಂತೋಷದಿಂದ ಕೂಡಿದೆಯೇ ಅಥವಾ ಸಂಕೋಲೆಗಳಿಂದ ಬಂಧಿಸಲಾಗಿದೆಯೇ? ಮನೆಯ ನಾಲ್ಕು ಗೋಡೆಗಳಿಂದ ಹೊರಗೆ ಬರುವಲ್ಲಿ ಅವಳ ಪಾತ್ರವೇನು, ಸಮಾಜದ ಪಾತ್ರವೇನು, ಸಬಲೀಕರಣದ ಹೆಜ್ಜೆಗಳನ್ನು ಹಾಕುತ್ತಿದ್ದಾಳೆಯೇ ಎಂದು ನೋಡುವುದು ಈ ಅಧ್ಯಾಯನದ ಮುಖ್ಯ ಉದ್ದೇಶವಾಗಿದೆ.

2.1.1 ಭಾರತೀಯ ಗ್ರಾಮೀಣ ಮಹಿಳೆಯರ ಸ್ಥಿತಿಗತಿ:

ಭಾರತೀಯ ಸಾಂಪ್ರದಾಯಕ ಸಮಾಜದಲ್ಲಿ ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ, ವೈಜ್ಞಾನಿಕವಾಗಿ ಅನೇಕ ಬದಲಾವಣೆಗಳಾಗುತ್ತಿವೆ. ಆದರೆ ನಮ್ಮ ಗ್ರಾಮೀಣ ಮಹಿಳೆಯರ ಸ್ಥಿತಿಗತಿಗಳು ಮಾತ್ರ ಇಂದಿಗೂ ದು:ಸ್ಥಿತಿಯಲ್ಲಿಯೇ ಇವೆ.

ದೇಶದ ಒಟ್ಟು ಮಹಿಳಾ ಸಂಖ್ಯೆಗೆ ಹೋಲಿಸಿದರೆ ಮುಕ್ಕಾಲು ಭಾಗ ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿಯೇ ವಾಸಿಸುತ್ತಿದ್ದಾರೆ. ಒಂದೆರಡು ವಿಷಯಗಳನ್ನು ಬಿಟ್ಟರೆ ಹಾಡು ಹೇಳುತ್ತಾ ರಾಗಿ, ಜೋಳ ಬೀಸುವುದು, ಕುಟ್ಟುವುದು ಇಂತಹವುಗಳ ಇತ್ತೀಚೆಗೆ ಸ್ವಲ್ಪ ಕಡಿಮೆಯಾಗಿದೆ. ಉಳಿದೆಲ್ಲ ವಿಷಯಗಳಲ್ಲಿ ಇವಳು ಹಿಂದೆ ಹೇಗೆ ಸಂಕೋಲೆಗಳಿಂದ ಬಿಗಿಯಲ್ಪಟ್ಟಿದ್ದಳೊ ಇಂದಿಗೂ ಸಹ ಹಾಗೆಯೇ ಮುಂದುವರಿದಿರುವುದು ಶೋಚನೀಯ.

ಬೆಳಗಾಗುವ ಮುನ್ನ ಇವಳ ಕೆಲಸ ಪ್ರಾರಂಭವಾದರೆ ಇನ್ನೂ ಅದು ಮುಗಿಯುವುದು ರಾತ್ರಿ ಮನೆಯವರೆಲ್ಲ ನಿದ್ರಿಸಿದ ಮೇಲೆಯೇ. ನಸುಗತ್ತಲೆಯಲ್ಲಿ ಎದ್ದು ಕಸಗುಡಿಸುವುದರಿಂದ ಹಿಡಿದು ಪಾತ್ರೆ ತೊಳೆಯುವುದು, ಅಡಿಗೆ ಬೇಕಾದ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಂಡು ಅಡುಗೆ ಮಾಡುವುದು, ಬಟ್ಟೆಗಳನ್ನು ತೊಳೆಯುವುದು, ನೀರು ತುಂಬುವುದು, ಧನ ಕರುಗಳನ್ನು ನೋಡಿಕೋಳ್ಳುವುದು, ಗಂಡ-ಮಕ್ಕಳಿಗೆ ಊಟ ಬಡಿಸುವುದು, ಇಷ್ಟಕ್ಕೆ ಇವಳ ಕೆಲಸ ಮುಗಿಯಲಿಲ್ಲ. ಮನೆಯ ಎಲ್ಲ ಕೆಲಸ ಮುಗಿಸಿದ ನಂತರ ತನ್ನ ಹೊಲದ ಕೆಲಸಕ್ಕೆ ಅಥವಾ ಬೇರೆಯವರ ಹೊಲದಲ್ಲಿ ಕೂಲಿ ಕೆಲಸ ಮಾಡುವುದಕ್ಕೆ ಜೊತೆಯಲ್ಲಿಯೇ ಅಡುಗೆ ಮಾಡಲು-ಬೇಕಾದ ಸೌದೆ-ಸೊಪ್ಪುಗಳನ್ನು ತರುವುದು, ದನ-ಕರಗಳನ್ನು ಮೇಯಿಸುವುದು ಮುಸ್ಸಂಜೆಯಲ್ಲಿ ಕಟ್ಟಿಗೆ ಮತ್ತು ಹುಲ್ಲಿನ ಹೊರೆಯೊಂದಿಗೆ ಮನೆಗೆ ಬಂದರೆ ಮತ್ತೆ ಕೆಲಸಗಳ ಸರಮಾಲೆ ಕಸ ಗುಡಿಸುವುದು. ನೀರು. ಅಡಿಗೆ ಊಟ ಹೀಗೆ ಆಕೆಯ ಕೆಲಸಗಳು ಒಂದೇ ಎರಡೇ, "ರೈತನ ಕೆಲಸ ಹೊಲದಲ್ಲಿ ಪ್ರಾರಂಭವಾಗಿ ಹೊಲದಲ್ಲಿಯೇ ಮುಗಿಯುತ್ತದೆ" ಮಹಿಳೆಯ ಕೆಲಸ ಮನೆಯಲ್ಲಿ

ಪ್ರಾರಂಭವಾಗಿ ಹೊಲದಲ್ಲಿ ಸಾಗಿ, ಪುನಃ ಮನೆಯಲ್ಲಿ ಮುಕ್ತಾಯವಾಗುತ್ತವೆ. ಈ ರೀತಿ ಗ್ರಾಮೀಣ ಮಹಿಳೆ ಮೂರು ಹಂತಗಳಲ್ಲಿ ಕೆಲಸ ಮಾಡುತ್ತಾಳೆ. ರಾಷ್ಟ್ರೀಯ ಸಮೀಕ್ಷೆಯೊಂದರ ಪ್ರಕಾರ ಅವಳು ಕೆಲಸ ಮಾಡುವ ಅವಧಿ ದಿನದಲ್ಲಿ 14–15 ಗಂಟೆಗಳು.

ಇಷ್ಟೆಲ್ಲಾ ಮಾಡಿ ಇವಳಿಗೇನು ಸಿಕ್ಕಿದೆ? ಸಮಾಜದಲ್ಲಿ ಉತ್ತಮ ಸ್ಥಾನವೇ? ಉತ್ತಮ ಆರೋಗ್ಯವೇ? ಉತ್ತಮ ಶಿಕ್ಷಣ ವ್ಯವಸ್ಥೆಯೇ? ನಿರ್ಧಾರಗಳನ್ನು ತೆಗೆದುಕೊಳ್ಳಲು ಅವಕಾಶವೇ?, ಸಮಾನ ವೇತನವೇ? ಶೋಷಣಾ ರಹಿತ ಬದುಕೆ? ಉತ್ತಮ ವೈದ್ಯಕೀಯ ವ್ಯವಸ್ಥೆಯೇ? ಉತ್ತಮ ಶೌಚಾಲಯ ವ್ಯವಸ್ಥೆಯೇ? ಈ ಎಲ್ಲವುಗಳಿಂದಲೂ ಗ್ರಾಮೀಣ ಮಹಿಳೆ ವಂಚಿತಳಾಗಿದ್ದಾಳೆ. ಈ ಎಲ್ಲ ಅಂಶಗಳ ಬಗ್ಗೆ ಸೂಕ್ಷ್ಮವಾಗಿ ವೀಕ್ಷಿಸಿದರೆ. ಅವಳ ಸ್ಥಿತಿಗತಿ ಯಾಕೆ ಹೀಗಾಗುತ್ತಿದೆ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ.

ಸಮಾಜದಲ್ಲಿ ಈಕೆಗೆ ನಿಕೃಷ್ಟ ಸ್ಥಾನ ಈಕೆ ಕೆಲಸಕ್ಕೆ ಬಾರದವಳು, ಈಕೆಯ ಕೆಲಸಕ್ಕೆ ಯಾವುದೇ ಆದಾಯವಿಲ್ಲ. ಅವಳು ಅಡಿಗೆ ಮನೆಯ ಎಲ್ಲ ಕೆಲಸಗಳನ್ನು ಮಾಡಿಕೊಂಡು, ಮಕ್ಕಳನ್ನು ಹೆತ್ತು, ಗಂಡ ಮತ್ತು ಮಕ್ಕಳ ಸೇವೆ ಮಾಡಬೇಕೆಂಬ ಮನೋಭಾವ ಹಿಂದಿನಿಂದ ಕಾಲದಿಂದಲೂ ಇಂದಿನವರೆಗೆ ಬೆಳೆದು ಬಂದಿದೆ. ಈಕೆ ಮಾಡುವ ಮನೆಯ ಎಲ್ಲ ಕೆಲಸಗಳನ್ನು ಕೆಲಸ ಎಂದು ಪರಿಗಣಿಸುವುದಿಲ್ಲ.

ಗ್ರಾಮೀಣ ಮಹಿಳೆಯ ಅರೋಗ್ಯದ ಕಡೆ ಗಮನ ಹರಿಸಿದರೆ ಇವಳಿಗೆ ಪೋಷಣೆ ಮತ್ತು ಆರೈಕೆ ಸಿಗುವುದು. ಜೀವನದಲ್ಲಿ ಎರಡು ಬಾರಿ ಮಾತ್ರ ಒಂದು ಋತುಮತಿಯಾದಾಗ. ಮತ್ತೊಂದು ಬಾಣಂತಿಯಾದಾಗ ಈ ಸಮಯದಲ್ಲಿಯೂ ಅವಳಿಗೆ ಸರಿಯಾದ ಆರೈಕೆ ಸಿಗುತ್ತದೆ ಎಂದು ಹೇಳಲಾಗದು. ಮಾನವ ಸಂಪತ್ತಿನ ಅಭಿವೃದ್ಧಿಯ ಮೂಲ ಪ್ರಕ್ರಿಯೆಗಳಾದ ಮುಟ್ಟು, ಗರ್ಭ, ಹೆರಿಗೆಯನ್ನು ಮಡಿ–ಮೈಲಿಗೆ ಎಂದು ತೀರಸ್ಕರಿಸಿ ಮಾನಸಿಕ ಹಿಂಸೆ ನೀಡಲಾಗುತ್ತದೆ. ಹೊಟ್ಟೆಗೆ ಸರಿಯಾದ ಆಹಾರ ಕೊಡುವುದಿಲ್ಲ. ಗರ್ಭಿಣಿಯಾಗಿದ್ದಾಗ ಕೂಡ ಅವಳ ಅರೋಗ್ಯದ ಕಡೆಗೆ ಹೆಚ್ಚಿನ ಗಮನ ನೀಡದೇ "ಗರ್ಭಿಣಿ ಹೆಣ್ಣು ಮಗಳು ಮೈಯಿ ತುಂಬಾ ಕೆಲಸ ಮಾಡಿದರೆ ಹೆರಿಗೆ ಸುಲಭವಾಗುತ್ತದೆ ಎಂಬ ನೀತಿ–ಪಾಠ ಹೇಳಿಕೊಡಲಾಗುತ್ತದೆ. ಹೀಗಾಗಿ ಗರ್ಭಿಣಿ ಮಹಿಳೆಯ ತಲೆಯ ಮೇಲೊಂದು ಸೌದೆ ಹೊರೆ ಹೊಟ್ಟೆಯಲ್ಲೊಂದು ಮಗು, ಕೈಯಲ್ಲೊಂದು ದನ ಹಿಡಿದಿರುವ ಎಷ್ಟೋ ಮಹಿಳೆಯರು ನಮ್ಮ ಕಣ್ಣು ಮುಂದೆ ಹಾದು ಹೋಗುವುದನ್ನು ನಾವು ಗಮನಿಸಬಹುದು. ಹೆರಿಗೆಯಾಗುವ ದಿನದವರೆಗೂ ದುಡಿಯುತ್ತಲೇ ಇರುತ್ತಾಳೆ. ಆಕೆ ಆ ಸಮಯದಲ್ಲಿ ಹೆಚ್ಚು ಕೆಲಸ ಮಾಡಿದಷ್ಟು ಒಳ್ಳೆಯದು **ಬಸುರಿಯ ಕೈಗೆ ಹಗ್ಗ ಕೊಡೆ, ಬಾಣಂತಿ ಕೈಗೆ ಮಣಿಕೊಡು** ಎಂಬ ಗಾದೆ ಗ್ರಾಮೀಣ ಪ್ರದೇಶದಲ್ಲಿದೆ. ಹೀಗೆ ಮಹಿಳೆಯರ ಆರೋಗ್ಯಕ್ಕೆ

ಸಂಬಂಧಿಸಿದಂತೆ ನೋಡಿದಾಗ ಸಾಂಪ್ರದಾಯಗಳು ಅನೇಕ ಆಚರಣೆಗಳು, ಮೂಢನಂಬಿಕೆಗಳು, ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿದೆ ಎಂಬುವುದನ್ನು ಈ ಕೆಳಗಿನ ಅಂಶಗಳು ಸ್ಪಷ್ಟ ಪಡಿಸುತ್ತವೆ.

ಅನೇಕ ಆಚರಣೆಗಳು ಮೂಢ ನಂಬಿಕೆಗಳು ಮಹಿಳೆಯರ ಆರೋಗ್ಯದ ಮೇಲೆ ಕೆಟ್ಟ ಪರಿಣಾಮ ಬೀರಿವೆ.

- ಗಂಡುಮಕ್ಕಳ ಊಟದ ನಂತರ ಊಟ ಮಾಡುವುದು ಉಳಿದ ಆಹಾರವನ್ನು ಊಟ ಮಾಡುವುದು.
- ಉಪವಾಸ ಮತ್ತು ವ್ರತಗಳನ್ನು ಕೈಗೊಳ್ಳುವುದು.
- ಬಾಣಂತನದ ಸಮಯದಲ್ಲಿ ಸರಿಯಾಗಿ ಊಟ ಕೊಡದಿರುವುದು.
- ಹೆಚ್ಚು ಹೆಚ್ಚು ಮಕ್ಕಳಿಗೆ ಜನ್ಮ ನೀಡುವುದು ಅದಲ್ಲಿರಯೂ ಗಂಡು ಮಗು ಹುಟ್ಟುವರೆಗೂ ಕಾಯುವುದು.
- ಹೆರಿಗೆ ಅಂತರ ಕಡಿಮೆ ಇರುವುದು.
- ಮಹಿಳೆಯರಿಗೆ ಅನಾರೋಗ್ಯ ಉಂಟಾದಾಗ ಆಲಕ್ಷಿಸುವುದು.
- ಕೆಲವೊಂದು ಗುಪ್ತ ರೋಗಗಳನ್ನು ನಾಚಿಕೆಯಿಂದ ಮುಚ್ಚು ಇಡುವುದು.
- ಸಮೀಪದಲ್ಲಿ ಆರೋಗ್ಯ ಸೇವೆಗಳ ಕೊರತೆ ಇರುವುದು ಮತ್ತು ನುರಿತ ವೈದ್ಯರ ಕೊರತೆ ಇರುವುದು.

ಈ ಮೇಲಿನ ಎಲ್ಲ ಕಾರಣದಿಂದ ಗ್ರಾಮೀಣ ಪ್ರದೇಶದ ಮಹಿಳೆಯರು ಪೌಷ್ಟಿಕ ಅಂಶದ ಕೊರತೆಯಿಂದ ಮತ್ತು ರಕ್ತಹಿನತೆಯಂತಹ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಗ್ರಾಮೀಣ ಮಹಿಳೆಯರಿಗೆ ಶೌಚಾಲಯದ ವ್ಯವಸ್ಥೆ ಬಗ್ಗೆ ಒಂದು ನೋಟ ಹರಿಸಿದಾಗ ಈ ವಿಷಯ ತುಂಬಾ ಚಿಕ್ಕದಾಗಿ ಕಂಡರೂ ಗ್ರಾಮೀಣ ಮಹಿಳೆಯರಿಗೆ ನಿರ್ಭಯವಾಗಿ ಮಲ ವಿಸರ್ಜನೆ ಮಾಡುವುದಕ್ಕೂ ಅವಕಾಶವಿರುವುದಿಲ್ಲ. ಎಲ್ಲ ಗಂಡಸರು ಏಳುವ ಮುಂಚೇಯೇ ಎದ್ದು ಸದ್ದಾಗದಂತೆ ಆ ಕೆಲಸಮುಗಿಸಿ ಬಿಡುತ್ತಾರೆ. ಆನಂತರ ಕತ್ತಲಾಗುವುದನ್ನೇ ಕಾಯಬೇಕಾಗುತ್ತದೆ. ಆರೋಗ್ಯ ಕೆಟ್ಟರೆ, ಹಗಲಿನಲ್ಲಿ ಅಗತ್ಯ ಅನ್ನಿಸಿದರೆ ಜಾಗಕ್ಕಾಗಿ ತಡಕಾಡಬೇಕಾಗುತ್ತದೆ. ಇದು ಚಿಕ್ಕ ವಿಷಯವಾಗಿ ಕಂಡರೂ ವಿಚಾರಗಳು ಮೂಲತಃ ಜೈವಿಕ ಕ್ರಿಯೆಗಳ ಮೇಲೆ ಅಪಾರ ಪರಿಣಾಮ ಬೀರುವ ಭಯಾನಕ ವಿಚಾರಗಳು. ಗರ್ಭಿಣಿ ಸ್ತ್ರಿಯರ ಸ್ಥಿತಿಯಂತೂ ಶೋಚನೀಯ ಗರ್ಭಿಣಿಯರಿಗೆ ಸಾಮಾನ್ಯವಾಗಿ ಮೂತ್ರ ಬಾಧೆ ತೀವ್ರವಾಗಿರುತ್ತದೆ. ಆ ಸಮಯದಲ್ಲಿ ಮೂತ್ರ ಬಾಧೆಯನ್ನು

ತಡೆಯುವುದು ಆಕೆಗೂ ಮತ್ತು ಮಗುವಿನ ಬೆಳವಣಿಗೆಗೂ ತೊಂದರೆಯಾಗುತ್ತದೆ ಎನ್ನುವ ಸತ್ಯ ಎಲ್ಲರಿಗೂ ಗೊತ್ತಿದೆ.

ಇನ್ನೂ ಗ್ರಾಮೀಣ ವೈದ್ಯಕೀಯ ಸೌಲಭ್ಯದ ಬಗ್ಗೆ ನೋಡಿದರೆ, ಹಳ್ಳಿಯಲ್ಲಿ ನುರಿತ ವೈದ್ಯರಿಲ್ಲ, ಆಸ್ಪತ್ರೆಗಳಿಲ್ಲ, ಇರುವಂತಹ ಉಪ-ಕೇಂದ್ರಗಳಲ್ಲಿ ಸಿಬ್ಬಂದಿಗಳು ಯಾರು ಇರುವುದಿಲ್ಲ. ಎಷ್ಟೋ ಜನ ಮಹಿಳೆಯರು ಸಣ್ಣ ಪುಟ್ಟ ಕಾಯಿಲೆಗಳು ಬಂದರೂ ಅವುಗಳನ್ನು ಸಹಿಸಿಕೊಂಡೆಯೇ ದುಡಿಯುತ್ತಿರುತ್ತಾರೆ. ಹೆರಿಗೆ ಸಮಯದಲ್ಲಂತೂ ಅವರ ಸ್ಥಿತಿ ಚಿಂತಾಜನಕ ಹಳ್ಳಿಯ ಸೂಲಗಿತ್ತಿಯರಿಂದಲೇ ಹೆರಿಗೆ ಮಾಡಿಸುವುದು. ಕೆಲವು ಸಮಯದಲ್ಲಿ ಅಸ್ಪತ್ರೆಗೆ ಕರೆದೊಯ್ಯಲು ವಾಹನದ ಸೌಲಭ್ಯ ಇರುವುದಿಲ್ಲ. ಎತ್ತಿನಗಾಡಿಯ ವ್ಯವಸ್ಥೆ ಮಾಡಿಕೊಂಡು ಹೊರಡುವಷ್ಟರಲ್ಲಿ ಅರ್ಧ ದಾರಿಯಲ್ಲೇ ಹೆರಿಗೆಯಾಗುವುದು, ಅಥವಾ ಅರ್ಧದಾರಿಯಲ್ಲಿಯೇ ಮಹಿಳೆಯರು ಅಸುನಿಗುವ ಉದಾಹರಣೆಗಳು ಸಾಕಷ್ಟಿವೆ.

ಗ್ರಾಮೀಣ ಮಹಿಳೆಯರ ಶಿಕ್ಷಣದ ಕಡೆ ದೃಷ್ಟಿ ಹರಿಸಿದರೆ "ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿತೆಂದು ಆಕಾಶವೇ ತಲೆಯಮೇಲೆ ಬಿದ್ದಂತೆ ಮಾಡುವ ಈ ಜನ ಸಮಾಜ ಹೆಣ್ಣು ಮಕ್ಕಳನ್ನು ಬಾಲ್ಯದಲ್ಲಿಯೇ ಮನೆ ಕೆಲಸಗಳ ಜವಾಬ್ದಾರಿ ಹೊರಸುತ್ತದೆ. ಮುಂದೆ ಗಂಡನ ಮನೆಯಲ್ಲಿ ಉತ್ತಮ ಗೃಹಿಣಿಯಾಗಿ ಹೇಗೆ ಇರಬೇಕೆಂದು ಅವಳಿಗೆ ತರಬೇತಿ ನೀಡಿ ಸಿದ್ದಪಡಿಸುತ್ತದೆ. ಹೆಣ್ಣು ಮಗಳಿಗೆ ಶಾಲೆ ಕಲಿಸುವುದರಿಂದ ತಮಗೆ ಏನು ಉಪಯೋಗವಿಲ್ಲ. ಅವಳು ಇನ್ನೊಬ್ಬರ ಮನಗೆ ಮದುವೆಯಾಗಿ ಹೋಗುವಳು 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎನ್ನುವ ಮೂಢವಿಚಾರಗಳಿಂದ ಅವಳ ಶಿಕ್ಷಣಕ್ಕೆ ಮಹತ್ವವನ್ನು ನೀಡುವುದಿಲ್ಲ.

ಶಿಕ್ಷಣಕ್ಕಿಂತ ಮದುವೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡುತ್ತಾರೆ. ಹೀಗಾಗಿ ಹೆಣ್ಣು ಮಕ್ಕಳನ್ನು ಬೇರಳೆಣಿಕೆಯಷ್ಟು ತಂದೆ-ತಾಯಿಯವರು ಮನಸ್ಸಿಲ್ಲದ ಮನಸ್ಸಿನಿಂದ ಶಾಲೆಗೆ ಕಳುಹಿಸುತ್ತಾರೆ. ಹಾಗೂ ಅವರಿಗೆ ಉತ್ತಮ ಶಾಲಾ ಸೌಲಭ್ಯ ಸಹ ಇರುವುದಿಲ್ಲ. ಗ್ರಾಮೀಣ ಹೆಣ್ಣು ಮಕ್ಕಳು ಚಿಕ್ಕಂದಿನಲ್ಲಿ ಆಟವಾಡಿಕೊಂಡು ಕಾಲ ಕಳೆಯುವ ಈ ಸಮಯದಲ್ಲಿ ಇಡೀ ಮನೆಯ ಅರ್ಧಕ್ಕಿಂತ ಹೆಚ್ಚಿನ ಕೆಲಸದ ಹೊರೆಯನ್ನು ಹೊತ್ತುಕೊಳ್ಳುವಂತೆ ಪ್ರೋತ್ಸಾಹ ನೀಡಲಾಗುತ್ತದೆ. ತಾಯಿಗೆ ಮನೆ ಕೆಲಸದಲ್ಲಿ ನೆರವುವಾಗುವಳು. ತಾಯಿಗೆ ಕೂಲಿ ಕೆಲಸಕ್ಕೆ ಹೋದಾಗ "ಆಡುವ ಕೂಸಿಗೊಂದು ಕಾಡುವ ಕೂಸು" ಎನ್ನುವಂತೆ ತನ್ನ ಚಿಕ್ಕ ತಮ್ಮ-ತಂಗಿಯರನ್ನು ನೋಡಿಕೊಳ್ಳುವ ಜವಾಬ್ದಾರಿ ಇವಳ ಮೇಲೆ ಇದೆ. ಇನ್ನೂ ವಯಸ್ಸಿಗೆ ಬಂದಂತೆ ಹೆಚ್ಚು-ಹೆಚ್ಚು ಬಂದಿಯಾಗುತ್ತಾಳೆ. ಸೀರೆ ಉಟ್ಟಿಕೊಳ್ಳಬೇಕು, ಹೊರಗಡೆ ಎಲ್ಲಿಯೂ ಹೋಗಬಾರದು, ಯಾರೊಂದಿಗೂ ಮಾತನಾಡಬಾರದು, ಹೆಚ್ಚಿಗೆ ನಗಬಾರದೆಂಬ ನಿಯಮಗಳಿಗೆ ಬಂದಿಯಾಗುತ್ತಾಳೆ. ಇನ್ನೂ ಚಿಕ್ಕ ವಯಸ್ಸಿನಲ್ಲಿಯೇ

ಬಾಲ್ಯವಿವಾಹ ಮಾಡಲು ಹೊರಟರೆ ಮದುವೆ ವಿಷಯದಲ್ಲಿ ಏನು ಮಾತಾಡುವಂತಿಲ್ಲ ಮದುವೆಯಾದ ಮೇಲೆ ಮತ್ತೆ ಬಂಧಿಯಾಗುತ್ತಾಳೆ.

ಗ್ರಾಮೀಣ ಹೆಣ್ಣುಮಕ್ಕಳಿಗೆ ಮದುವೆಯೆಂಬುದು 'ತವರಿಂದ ಪತಿಗೃಹಕ್ಕೆ ಸಾಗಿ ಬರುವ ಒಂದು ಕ್ರಿಯೆ' ಗಂಡನ ಮನೆಯಲ್ಲಿ ಅವಳ ಪಾತ್ರ ಹೆಂಡ್ತಿಯಾಗಿ, ತಾಯಿಯಾಗಿ, ಆದರ್ಶ ಮಹಿಳೆಯಾಗಿ, ಪತಿವ್ರತೆಯಾಗಿ ಇರಬೇಕೆಂಬ ಆದರ್ಶದ ನಿಯಮಗಳಿವೆ. ಹೆಣ್ಣು ಮಗಳಿಗೆ ತಾಯಿಯ ಮನೆಯಲ್ಲಿ ಆಕೆಯ ಮುಂದಿನ ಗೃಹಿಣಿ ಜೀವನವನ್ನು ಕುರಿತು ತರಬೇತಿಯನ್ನು ನೀಡಿ ಗಂಡನ ಮನೆಯಲ್ಲಿ ನಿಜವಾಗಿ ಕೆಲಸಕ್ಕೆ ಇಳಿಯಲು ಸಹಕರಿಸುತ್ತಾರೆ.

ಇನ್ನು ಗ್ರಾಮೀಣ ಮಹಿಳೆ ತೆಗೆದುಕೊಳ್ಳುವ ನಿರ್ಧಾರಗಳ ವಿಷಯಕ್ಕೆ ಬಂದರೆ, ಈಕೆ ಮನೆಯ ಯಾವ ವ್ಯವಹಾರಗಳಲ್ಲಿ ತಲೆ ಹಾಕುವಂತಿಲ್ಲ. ಹೆಣ್ಣಿನ ಬುದ್ಧಿ ಮೊಳಕಾಲ ಕೆಳಗೆ ಎನ್ನುವ ಗಾದೆಯೊಂದಿಗೆ ಮದುವೆಯಿಂದ ಹಿಡಿದು ಮಕ್ಕಳನ್ನು ಪಡೆಯುವುದಾಗಲಿ, ಮನೆಯ ಕೆಲಸ ಕಾರ್ಯಗಳ ಬಗ್ಗೆಯಾಗಲಿ, ಮಕ್ಕಳ ಶಿಕ್ಷಣದ ಬಗ್ಗೆಯಾಗಲಿ ಈಕೆಗೆ ನಿರ್ಧಾರ ತೆಗೆದುಕೊಳ್ಳುವ ಸ್ವಾತಂತ್ರ್ಯವಿಲ್ಲ. ಯಾವು ಪಾತ್ರವೂ ಇಲ್ಲ. ಅಷ್ಟೇ ಏಕೆ ತನ್ನ ಶರೀರದ ಮೇಲೆ ತನಗೆ ನಿಯಂತ್ರಣವಿಲ್ಲ. ತಾನು ಧರಿಸುವ ಗರ್ಭದ ಬಗ್ಗೆಯೂ ನಿರ್ಧಾರವನ್ನು ತೆಗೆದುಕೊಳ್ಳಲು ಬೀಡದ ಇವಳಿಗೆ, ಊಟ, ತಿಂಡಿ, ತಾನು ಧರಿಸುವ ಬಟ್ಟೆ, ತನ್ನ ಅಲಂಕಾರ ಮುಂತಾದವುಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವೆ? ಹಾಗಾದರೆ ಇವಳ ದೈನಂದಿನ ಬದುಕಿನಲ್ಲಿ ನಿರ್ಧಾರ ತೆಗೆದುಕೊಳ್ಳುವವರು ಯಾರು? ಬಹಳ ಸೂಕ್ಷ್ಮವಾಗಿ, ಆಳವಾಗಿ, ಆಲೋಚಿಸಬೇಕಾಗಿದೆ.

ಗ್ರಾಮೀಣ ಮಹಿಳೆಯರ ಉದ್ಯೋಗದ ವಿಷಯಕ್ಕೆ ಬಂದರೇ "ಉದ್ಯೋಗಂ ಪುರಷ ಲಕ್ಷ್ಮಣಂ" ಎನ್ನುವಂತೆ ಮಹಿಳೆ ಮಾಡಿದ ಮನೆ ವಾರ್ತೆಗಳಿಗೆ ಯಾವುದೇ ಆದಾಯವಿಲ್ಲ. ಇವಳ ಕೆಲಸವನ್ನು ದುಡಿಮೆಯೆಂದು ಪರಿಗಣಿಸುವುದಿಲ್ಲ. ಎಂದೂ ಮುಗಿಯದ ಮಹಿಳೆಯರ ಮನೆಗೆಲಸ, ಶ್ರಮ, ದಣಿವು ಯಾರ ಕಣ್ಣಿಗೂ ಬೀಳುವುದಿಲ್ಲ. ಕುಟುಂಬದ ಪಾಲನೆ, ಪೋಷಣೆ ಆದಾಯ ರಹಿತವಾದ ಆಹಾರೋತ್ಪಾದನೆ ಲೆಕ್ಕವಿಲ್ಲದವುಗಳು. ಮಹಿಳೆಯನ್ನು ಹೇಗೆ ನಿಕೃಷ್ಟಳೆಂದು ಪರಿಗಮಿಸಲ್ಪಟ್ಟಿದ್ದಾಳೋ ಹಾಗೇಯೇ ಆಕೆಯ ಕೆಲಸಗಳ ನಿಕೃಷ್ಟವಾದವುಗಳೆಂದು ಪರಿಗಣಿಸಲ್ಪಟ್ಟಿವೆ.

ಈ ರೀತಿಯಾಗಿ ಗ್ರಾಮೀಣ ಮಹಿಳೆಯು ಇಡೀ ಬದುಕಿನಲ್ಲಿ ಶೋಷಣೆಯ ಸವಾಲುಗಳನ್ನು ಎದುರಿಸುತ್ತಿದ್ದಾಳೆ. ಬಾಲ್ಯದಲ್ಲಿ ಅಸಮಾನತೆಯಿಂದಾದ ಶೋಷಣೆಗಳು, ಯೌವನದಲ್ಲಿ ಜೌದ್ಯೋಗಿಕ ಮತ್ತು ಲೈಂಗಿಕ ಶೋಷಣೆ, ಕೆಲಸ ಮಾಡುವ ಸ್ಥಳದಲ್ಲಿ ಮಾಲಿಕರು, ಕಾರ್ಮಿಕ ಮಹಿಳೆಯರನ್ನು ಶೋಷಿಸುವುದು ಇತ್ಯಾದಿ. ಕೌಟುಂಬಿಕ ಜೀವನದಲ್ಲಿ ಕೆಲವೊಮ್ಮೆ ಗಂಡನ ಲೈಂಗಿಕ ಸುಖವೂ ಸಹ ಒಂದು ರೀತಿಯ ಅತ್ಯಾಚಾರವೇ ಆಗಿದೆ. ಬೇಕಾದಾಗ ಮಾತ್ರ

ಕ್ರೂರ ಪ್ರಾಣಿಯಂತೆ ಅನುಭವಿಸಿ ಹೋಗುವ ಶೋಷಣೆಗೆ ಒಳಗಾಗಿದ್ದಾಳೆ. ಇಲ್ಲಿ ಯಾವುದೇ ರೀತಿಯ ಭಾವನಾತ್ಮಕ ಸಂಬಂಧವಿಲ್ಲದೇ ಮನಸ್ಸಿನಲ್ಲಿಯೇ ಅತ್ಯಂತ ನೋವಿನ ಸ್ಥಿತಿಯನ್ನು ಅನುಭವಿಸುತ್ತಿದ್ದಾಳೆ.

"ಈ ರೀತಿ ಗ್ರಾಮೀಣ ಪ್ರದೇಶದ ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. (ಕಗ್ಗಂಟ್ಟಿನೊಳಗೆ ಸಿಲುಕಿದ್ದಾರೆ) ಹೆಣ್ಣು ತಾನು ಹೆಣ್ಣಾಗಿ ಹುಟ್ಟಿ, ಬೆಳೆದು ದೊಡ್ಡವಳಾಗಿ ಮುಪ್ಪಾಗುವ ತನಕ ಪುರುಷ ಕಾಣದ ಕೆಲವು ಅನುಭವಗಳನ್ನು ಪಡೆಯುತ್ತಾಳೆ. ಮುಟ್ಟು–ಗರ್ಭ–ಹರಿಗೆ ಇವು ದೈಹಿಕ ವೈಶಿಷ್ಟ್ಯಗಳಾದರೆ, ಲಜ್ಜೆ, ಭಯ, ಸಂಕೋಚ, ಕೀಳರಿಮೆ, ತಾಯ್ತನದ ಹೊಣೆ ಇವು ಪರಿಸರ ನಿರ್ಮಿತವಾದವು. ಸಮಾಜದ ದ್ವಿಮುಖ ನೀತಿ ಗಂಡಿನ ದಬ್ಬಾಳಿಕೆ, ದೈಹಿಕ ದೌರ್ಜನ್ಯ ಸ್ವಯಂ ನಿರ್ಮಿತ ಕಟ್ಟಳೆಗಳ ನಡುವೆ ಗ್ರಾಮೀಣ ಮಹಿಳೆ ನಾನಾ ತರಹದ ಕ್ಷೋಭೆಗಳಿಗೆ ಒಳಗಾಗಿದ್ದಾಳೆ. ಆಕೆಯ ಸ್ಥಿತಿಯನ್ನು ಒಂದೇ ಮಾತಿನಲ್ಲಿ ಹೇಳುವುದಾದರೆ ಆಕೆಯ ಸ್ಥಿತಿ ಉರಿಬಿಸಿಲಿನಲ್ಲಿ ಉಸುಕಿನ ಮೇಲೆ ನಡೆದಂತಿದೆ.

ಈ ದುಃಸ್ಥಿತಿ ಬಗ್ಗೆ ಪ್ರತಿಯೊಬ್ಬರು ಯೋಚಿಸಬೇಕಾಗಿದೆ. ಸಮಾಜದಲ್ಲಿರುವ ಹೆಣ್ಣು ಮಕ್ಕಳ ಸ್ಥಿತಿಯನ್ನು ಸುಧಾರಿಸಲು ಸಾಧ್ಯವೇ? ಕೇವಲ ಮಹಿಳೆಯರ ಇಚ್ಚೆಯಿಂದ ಮಾತ್ರ ಈ ಬದಲಾವಣೆ ಸಾಧ್ಯವೇ? ಇದಕ್ಕೆ ಪುರಷುರು ಪ್ರೋತ್ಸಾಹ ನೀಡಬಹುದೇ? ಎಂಬಂತ ಹಲವು ಪ್ರಶ್ನೆಗಳ ಬಗ್ಗೆ ಪ್ರಜ್ಞಾವಂತರಾದವರೆಲ್ಲರೂ ವಿವೇಚಿಸಬೇಕಾಗಿದೆ. ಮಹಿಳೆಯರ ಸೂಕ್ಷ್ಮ ವಿಚಾರಗಳ ಕಡೆ ಗಮನಹರಿಸಬೇಕಾಗಿದೆ. ಅವಳ ಕೆಲಸದಲ್ಲಿ ಸಹಕಾರ ನೀಡಿ ಸಮಾನವಾಗಿ ಕಾಣುವ ಅವಶ್ಯಕತೆ ಇದೆ. ಗ್ರಾಮೀಣ ಹೆಣ್ಣು ಮಕ್ಕಳ ಬದುಕು ಅರ್ಥ ಪೂರ್ಣವಾಗಿಸುವಲ್ಲಿ ನಮ್ಮ ಪುರುಷ ಪ್ರಧಾನ ಸಮಾಜದ ನಿಲುವುಗಳೇನು, ಪ್ರತಿಯೊಬ್ಬರ ಪ್ರಜ್ಞಾವಂತರ ಆಲೋಚನೆಗಳೇನು? ಮುಂತಾದ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾಗಿದೆ. ಈ ಪ್ರಯತ್ನಕ್ಕೆ ತಿಳಿಯುವ ತುಂಬಿದ ಕಣ್ಣು, ಒಲವು ತುಂಬಿದ ಎದೆಯು ಛಲವನರಿಯದ ಬದುಕು ಇಷ್ಟು ಸಾಕಲ್ಲವೇ"[6].

ಗ್ರಾಮೀಣ ಮಹಿಳೆಯರನ್ನು ಎರಡು ಪ್ರಕಾರವಾಗಿ ವಿಂಗಡಿಸಬಹುದು:

ಸಣ್ಣ ಹಿಡುವಳಿದಾರರು: ಸಣ್ಣ ಪ್ರಮಾಣದ ಅಸ್ತಿಯನ್ನೆ ಹೊಂದಿದ್ದು ಮಹಿಳೆಯ ಮನೆಯ ಎಲ್ಲ ಕೆಲಸಕಾರ್ಯಗಳ ಜೊತೆ ಬೇರೆಯವರ ಹೊಲ ಗದ್ದೆಗಳಿಗೆ ಕೂಲಿಕೆಲಸಕ್ಕೆ ಹೋಗುತ್ತಾರೆ. ಗಂಡನಜೋತೆ ಸ್ವಂತಹೊಲದಲ್ಲಿಯು ಕೆಲಸ ಮಾಡುತ್ತಾರೆ. ಇವರನ್ನು ಸಣ್ಣ ಹಿಡುವಳಿದಾರರು ಎನ್ನುತ್ತಾರೆ.

ಭೂರಹಿತ ಕಾರ್ಮಿಕರು: ತಮ್ಮ ಸ್ವಂತ ಅಸ್ತಿಹೊಂದಿರದೆ ಸದಾಕಾಲ ಬೇರೆಯವರ ಹೊಲದಲ್ಲಿ ಗಸ್ಕಿಗಳಲ್ಲಿ ದುಡಿಯುವುದು, ಇವರ ಸ್ಥಿತಿ ಚಿಂತಾಜನಕವಾಗಿದೆ.

2.1.2 ಗ್ರಾಮೀಣ ಮಹಿಳೆಯ ಲಕ್ಷಣಗಳು :

ಗ್ರಾಮದಲ್ಲಿ ವಾಸಿಸುವ ಮಹಿಳೆಯನ್ನು ಗ್ರಾಮೀಣ ಮಹಿಳೆಯೆಂದು ವ್ಯಾಖ್ಯಾನಿಸಬಹುದು, ಇವಳು ತನ್ನದೆಯಾದಂತಹ ವಿಶಿಷ್ಟವಾದ ಸ್ವರೂಪ ಮತ್ತು ಲಕ್ಷಣಗಳನ್ನು ಹೊಂದಿದ್ದಾಳೆ.

1. ಗ್ರಾಮೀಣ ಮಹಿಳೆ ಹೆಚ್ಚಾಗಿ ಸಾಂಪ್ರದಾಯಪ್ರಿಯರು, ಆದ್ದರಿಂದ ಬದಲಾವಣೆ ಯನ್ನು ಬಯಸುವುದಿಲ್ಲ.
2. ಬಹುತೇಕ ಮಹೀಳೆಯರು ಅನಕ್ಷರಸ್ಥರು, ಅವಿದ್ಯಾವಂತರೂ ಅಗಿರುವಾದರಿಂದ ಹೊಸಬದಲಾವಣೆಗಳಿಗೆ ಸ್ಪಂದಿಸುವುದಿಲ್ಲ.
3. ಕಳ್ಳು ಬಳ್ಳಿಯ ಸಂಬಂಧ ನೆರೆಹೊರೆ ಮತ್ತು ಪ್ರಾಥಮಿಕ ಸಂಬಂಧಗಳಿಗೆ ಹೆಚ್ಚಿನ ಮಹತ್ವ ನೀಡುತ್ತಾರೆ.
4. ಗ್ರಾಮೀಣ ಮಹಿಳೆಯರು ಜಾತಿಧರ್ಮಗಳಿಗೆ ಕಟ್ಟುಬಿದ್ದಿರುತ್ತಾರೆ. ಅವರ ವಿಚಾರಗಳು ತೀರ ಅವೈಜ್ಞಾನಿಕವಾಗಿರುತ್ತವೆ.
5. ಗ್ರಾಮೀಣ ಮಹಿಳೆ ದೇವರು, ಧರ್ಮ ಪೂಜೆ ಮುಂತಾದ ಭ್ರಮೆಗಳ ಸುಳಿಗೆ ಸಿಕ್ಕಿ ಪುರುಷರಿಂದ ಶೋಷಣೆಗೆ ಒಳಗಾಗುತ್ತಿದ್ದಾರೆ.
6. "ಹುಟ್ಟಿಸಿದ ಶಿವ ಹುಲ್ಲುಮೇಯಿಸುವನೇನು" ಎಂಬ ಪುರುಷ ಪ್ರಧಾನದ ಭ್ರಮೆಯಲ್ಲಿ ಒತ್ತಡಕ್ಕೆ ಸಿಕ್ಕ ಹೆಚ್ಚಿನ ಮಕ್ಕಳಿಗೆ ಜನ್ಮ ನೀಡುತ್ತಿದ್ದಾಳೆ. ಇದರಿಂದ ಅವಳು ಆನಾರೋಗ್ಯಕ್ಕೆ ಬಲಿಯಾಗುತ್ತಿದ್ದಾಳೆ. ಕಟುಂಬದ ಪ್ರಗತಿಗಿಂತ ಅದೋಗತಿಗೆ ಸಾಗುತ್ತಿದೆ.
7. ಮನೆಯಲ್ಲಿ ತನಗೆ ತಿಳಿದ ಗಂಡನು ಆದೇಶಿಸದ, ಪ್ರೀತಿಯಿಂದ ಹೇಳಿದ, ಎಲ್ಲ ಜವಾಬ್ದಾರಿಗಳನ್ನು ನಿರ್ವಹಿಸಿಯೂ ತೀರ್ಮಾನ ತೆಗೆದುಕೊಳ್ಳುವಲ್ಲಿ ಇವಳ ಪಾತ್ರ ಪಾತ್ರವಿಲ್ಲ. ಇದು ಇವಳ ಅಸ್ತಿತ್ವದ ಪ್ರಶ್ನೆಯಾಗಿದೆ.
8. ಗ್ರಾಮೀಣ ಮಹಿಳೆ ಮಾಡುವ ಕೂಲಿ ಕೆಲಸಕ್ಕೆ ಕೇವಲ ರೂ. 25 ರಿಂದ 50 ರೂಪಾಯಿಗಳವರೆಗೆ ಅಂದರೆ ತುಂಬಾ ಕಡಿಮೆ ಕೂಲಿ ಸಿಗುತ್ತದೆ. ಬೇರೆ ವಲಯಗಳಿಗೆ ಹೋಲಿಸಿದರೆ ಪುರಷನ ಕೂಲಿಗೆ ಹೋಲಿಸಿದರೆ ಮಹಿಳೆಯರಿಗೆ ತುಂಬಾ ಕಡಿಮೆ ಕೂಲಿಯಿದೆ.
9. ಇವರು ಹಳೆಯ ಮನೆಗಳು ಗುಡಿಸಲುಗಳಲ್ಲಿ ವಾಸಮಾಡುತ್ತಾರೆ. ಮನೆಯ ವಾತಾವರಣ ಅಷ್ಟೊಂದು ಸ್ವಚ್ಛತೆಯಿಂದ ಕೂಡಿಲ್ಲ. ಹೀಗಾಗಿ ಪದೇ ಪದೇ ಕಾಯಿಲೆಗೆ ತುತ್ತಾಗುವ ಸಂಭವವಿದೆ.

10. ಮನೆಯ ನಾಲ್ಕು ಗೋಡೆಯ ಮಧ್ಯದಿಂದ ಹೊರಗೆಹೋಗುವ ಅವಕಾಶ ಇಲ್ಲ. ಕಾರಣ ಆಕೆಗೆ ಏನು ತಿಳಿಯಲ್ಲ, ಪಾಪ, ಅಬಲೆ, ಹೆಚ್ಚಿನ ಸಾಮರ್ಥವಿಲ್ಲ ಮುಂತಾದ ಅಲಂಕಾರಿಕ ಮಾತುಗಳಿಂದ ಸಮಾಜದಲ್ಲಿ ಪುರಷನ ಅಧೀನವಾದ ಸ್ಥಾನಮಾನಗಳನ್ನು ಹೊಂದಿದ್ದಾಳೆ.

11. ಗ್ರಾಮೀಣ ಮಹಿಳೆ ಹೆಚ್ಚಿನ ಕೌಶಲ್ಯಗಳನ್ನು ಹೊಂದಿಲ್ಲ. ಒಂದು ಅಂದಾಜಿನ ಮೇಲೆ ಕೆಲಸಕಾರ್ಯಗಳನ್ನು ಮಾಡುತ್ತಾಳೆ. ಗುಂಪಿನಲ್ಲಿಯೇ ಹೆಚ್ಚಾಗಿ ಕೆಲಸಕ್ಕೆ ಹೋಗುತ್ತಾಳೆ. ವೈಯುಕ್ತಿಕವಾಗಿ ಕೆಲಸಕ್ಕೆ ಹೋಗುವುದು ಕಡಿಮೆ. ವ್ಯವಸ್ಥೆ ಅವಳನ್ನು ಹಿಂಜರಿಯುವಂತೆ ಮಾಡಿದೆ.

12. ಗ್ರಾಮೀಣ ಮಹಿಳೆಯರು ಇನ್ನು ಪೂರ್ಣಪ್ರಮಾಣದಲ್ಲಿ ಸಂಘಟಿತರಾಗಿಲ್ಲ. ಹೀಗಾಗಿ ಪ್ರತಿಯೊಂದು ಹಂತದಲ್ಲೂ ಕೆಳಮಟ್ಟದ ಜೀವನವನ್ನು ನಡೆಸುತ್ತಿದ್ದಾರೆ.

ಹೀಗೇ ಗ್ರಾಮೀಣ ಮಹಿಳೆಯು ತನ್ನದೆ ಆದಂತಹ ಲಕ್ಷಣಗಳನ್ನು ಹೊಂದಿದ್ದಾಳೆ. ಹಾಗೇಯೇ ಗ್ರಾಮೀಣ ಸಮುದಾಯದಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ ಎಂದು ಮುಂದಿನ ವಿಶ್ಲೇಷಣೆಯಲ್ಲಿ ನೋಡಬಹುದಾಗಿದೆ.

2.1.3 ಗ್ರಾಮೀಣ ಮಹಿಳೆಯು ಎದುರಿಸುತ್ತಿರುವ ಸಮಸ್ಯೆಗಳು:

1. **ಕೌಟುಂಬಿಕ ಸಮಸ್ಯೆ:** ಕುಟುಂಬದಲ್ಲಿ ಮಹಿಳೆ ಮನೆಯ ಎಲ್ಲ ಕೆಲಸದ ಜೊತೆಗೆ ಕೂಲಿಕೆಲಸ ಮಾಡಿದರೂ ಸಹ ತನ್ನ ಗಂಡನಿಂದಲೇ ಅನೇಕರೀತಿಯ ಹಿಂಸೆಯನ್ನು ಅನುಭವಿಸುತ್ತಿದ್ದಾಳೆ. ಉದಾ: ಕುಡಿದು ಬಂದು ಹೊಡಿಯುವುದು.

2. **ಅನಾರೋಗ್ಯ ಸಮಸ್ಯೆ:** ಇಡೀ ದಿನ ಬಿಡುವಿಲ್ಲದ ದುಡಿಮೆ ಪೌಷ್ಟಿಕಾಂಶವಿಲ್ಲದ ಅಹಾರ, ಗಂಡುಮಕ್ಕಳ, ವೈದ್ಯಕೀಯ ಸೌಲಭ್ಯಗಳ ಕೊರತೆ ರಕ್ತ ಹೀನತೆ ಇತ್ಯಾದಿ ಅರೋಗ್ಯ ಗಮನ ಕೊಡದಿರುವುದು ವೈದ್ಯಕೀಯ ಸೌಲಭ್ಯಗಳ ಕೊರತೆ ರಕ್ತಹೀನತೆ ಇತ್ಯಾದಿ ಅರೋಗ್ಯ ಸಮಸ್ಯೆ.

3. **ಅಜ್ಞಾನ ಅಂಧಶ್ರದ್ಧೆ:** ಅನರಕ್ಷರತೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ. ಸಾವಿರಾರು ದೇವರಪೂಜೆ ಮಾಡುವದರಲ್ಲಿ, ಉಪವಾಸ ಮಾಡುವುದರಲ್ಲಿ, ಜೀವ ಸವೆಸುತ್ತಾರೆ. ಅವೈಜ್ಞಾನಿಕವಾದ ಅಮಾನವೀಯವಾದ ಜಾತಿಪದ್ಧತಿಗೆ ಜೋತು ಬಿದ್ದಿದ್ದಾರೆ.

4. **ಹೆಚ್ಚು ದುಡಿತ ಕಡಿಮೆ ಕೂಲಿ:** ಸರ್ಕಾರ ಸಮಾನಕೂಲಿ ನೀಡಬೇಕೆಂಬ ಕಾಯ್ದೆಯಿದ್ದರೂ ಅದು ಕೇವಲ ಕಾಗದದಲ್ಲಿಯೇ ಇದು 25 ರೂಪಾಯಿ ಕೂಲಿಗೆ ಮಹಿಳೆ ಇಡೀ ದಿನ ದುಡಿಯಬೇಕಾದ ಪ್ರಸಂಗವಿದೆ.

5. **ಕೆಳಮಟ್ಟದ ಜೀವನ:** ಆರ್ಥಿಕವಾಗಿ ಸಾಮಾಜಿಕವಾಗಿ ಕೆಳಮಟ್ಟದ ಸ್ಥಾನಮಾನವನ್ನು ಅನುಭವಿಸುತ್ತಿದ್ದಾರೆ. ಹೆಚ್ಚು ದುಡಿತ ಕಡಿಮೆ ಕೂಲಿಯಿಂದ ಜೀವನಮಟ್ಟ ಎತ್ತರಿಸುವ ಬದಲು ಕೆಳಗಿಳಿಯುತ್ತದೆ. ಮೇಲುವರ್ಗದ ತುಳಿತಕ್ಕೆ ಶೋಷಣೆಗೆ ಬಲಿಯಾಗಿ ಅನ್ಯಾಯ ಅತ್ಯಾಚಾರ ಆತ್ಮಹತ್ಯೆ ಮುಂತಾದ ಶೋಷಣೆಗೆ ಬಲಿಯಾಗುತ್ತಿದ್ದಾಳೆ. ಪುರುಷಸಮಾಜ, ಸ್ತ್ರೀಯನ್ನು ಒಂದು ಭೋಗದವಸ್ತುವೆಂದು ಪರಿಗಣಿಸಿದೆ. ಹೀಗಾಗಿ ಕೆಳಮಟ್ಟದ ಜೀವನ ಸಾಗಿಸುತ್ತಿದ್ದಾರೆ.

6. **ಬಾಲ್ಯವಿವಾಹ ಮತ್ತು ವರದಕ್ಷಣೆಯ ಸಮಸ್ಯೆ:** ಗ್ರಾಮೀಣ ಸಮಾಜದಲ್ಲಿ ಇವೆರಡು ಸಮಸ್ಯೆಗಳು ಜೀವಂತವಾಗಿವೆಯೆಂದು ಹೇಳಬಹುದು. ಅನೇಕ ಸಂಧರ್ಬದಲ್ಲಿ ತಮ್ಮ ಹೆಣ್ಣುಮಕ್ಕಳಿಗೆ ಬಾಲ್ಯವಿವಾಹ ಮಾಡುತ್ತಿದ್ದಾಗ ಆಥವಾ ವರದಕ್ಷಿಣೆ, ಸಮಸ್ಯೆ ಎದುರಾದಾಗ ಏನೊಂದು ಮಾತಾಡಲು ಅವಕಾಶವಿರದೆ ಮೌನವಾಗಿ ಅನುಭವಿಸುತ್ತಿದ್ದಾಳೆ.

7. **ಹೆಚ್ಚಿನ ಮಕ್ಕಳಿಗೆ ಜನ್ಮ ಕೊಡುವುದು:** ಎಷ್ಟು ಮಕ್ಕಳು ಬೇಕೆಂದು ನಿರ್ಧರಿಸುವವರು ಗಂಡ ಮತ್ತು ಕುಟುಂಬದ ಸದಸ್ಯರು, ಹೀಗಾಗಿ ಗಂಡು ಸಂತಾನ ಆಗುವತನಕವೂ ಅವಳು ಹಲವು ಬಾರಿ ಗರ್ಭಧರಿಸುವುದು. ಸ್ಕ್ಯಾನಿಂಗ ನಂತರ ಹೆಣ್ಣು ಎಂದು ಗೊತ್ತಾದಾಗ ಗರ್ಭ ತೆಗೆಯಿಸುವುದು ಗ್ರಾಮೀಣ ಪ್ರದೇಶದಲ್ಲಿ ಸರ್ವ ಸಾಮಾನ್ಯವಾಗಿದೆ. ಇದರಿಂದ ಅನೇಕ ರೀತಿಯ ಮಾನಸಿಕ ತೊಂದರೆಗಳನ್ನು ಅನುಭವಿಸುತ್ತಿದ್ದಾಳೆ.

8. ಬಾಲಕಾರ್ಮಿಕತನದ ಸಮಸ್ಯೆಯನ್ನು ಎದುರಿಸುತ್ತಿದ್ದಾಳೆ ಭೂಮಿಯಲ್ಲಿ ಬೆಳ್ಳಿಗ್ಗೆ ಯಿಂದ ಸಂಜೆಯವರೆಗೆ ಕೂಲಿ ಕೆಲಸ ಹಾಗೂ ಮಕ್ಕಳನ್ನು ಶಾಲೆಬಿಡಿಸಿ ಕೂಲಿ ಕೆಲಸಕ್ಕೆ ಕಳಿಸುವಂಥ ಸಮಸ್ಯೆಯಿದೆ.

9. ಸೇವಾವಲಯದಲ್ಲಿ ಸ್ತ್ರೀಗೆ ಹೆಚ್ಚಿನ ಪ್ರಾಮುಖ್ಯತೆಯಿದೆ ಆದರೆ ಅಧಿಕಾರ ವಲಯದಲ್ಲಿ ಅಂದರೆ ತೀರ್ಮಾನ ತೆಗೆದುಕೊಳ್ಳುವಲ್ಲಿ ಅವಳಿಗೆ ಯಾವ ಪಾತ್ರವು ಇಲ್ಲ.

10. **ವಿಧವೆಯರ ಸಮಸ್ಯೆ, ಅನೈತಿಕ ಸಂಬಂಧಗಳು:** ಗ್ರಾಮೀಣ ಪ್ರದೇಶದಲ್ಲಿ ವಿಧವೆಯುವರು ತಮ್ಮ ಕುಟುಂಬದವರಿಂದಲೇ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದ ವಿಧವೆಗೆ ಮರುಮದುವೆ ಇಲ್ಲ. ವಿಧುರನಿಗೆ 1-ವರ್ಷ ತುಂಬುವದರೊಳಗಾಗಿಯೇ ಮದುವೆ. ಪುರುಷ ಮನೆಯಲ್ಲಿ ಹೆಂಡತಿಯಿದ್ದರೂ ಹೊರಗಡೆ ಅನೈತಿಕ ಸಂಬಂಧವಿಟ್ಟುಕೊಂಡಿರುತ್ತಾನೆ. ಈ ವಿಷಯದಲ್ಲಿ ಮಹಿಳೆಯು ಹೆಚ್ಚಿನ ಸಮಸ್ಯೆಗಳನ್ನು ಅನುಭವಿಸುತ್ತಿದ್ದಾಳೆ.

ಈ ಮೇಲೆ ಹೇಳಿದ ರೀತಿಯಲ್ಲಿ ಗ್ರಾಮೀಣ ಮಹಿಳೆ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾಳೆ ಕೆಲವೊಂದು ಸಾರಿ ಸಮಸ್ಯೆಗೆ ಪರಿಹಾರ ಸಿಕ್ಕರೂ ಪುನಃ ಪುನಃ ಸಮಸ್ಯೆಗಳು ಬಂದೊದಗುತ್ತಿವೆ. ಚಕ್ರಗಳ ಸುಳಿಯಲ್ಲಿ ಸಿಲುಕಿದ್ದಾಳೆಂದು ಈ ಮೂಲಕ ಹೇಳಬಹುದಾಗಿದೆ.

ಕೊನೆಯದಾಗಿ "ಗ್ರಾಮೀಣ ಮಹಿಳೆಯ ಬಗ್ಗೆ ಹೇಳಬೇಕಾದರೆ ಗ್ರಾಮ ಮತ್ತು ಕುಟುಂಬ ಬೇರೆ ಬೇರೆಯಲ್ಲ ಗ್ರಾಮವೆಂದರೆ ಹಲವು ಕುಟುಂಬಗಳ ಸಮೂಹ, ಕುಟುಂಬವೆಂದರೆ ಅದೊಂದು ಮಹಿಳೆಯ ಶಕ್ತಿ ಕೇಂದ್ರ ತಾಯಿ, ತಂಗಿ, ಅಜ್ಜಿ, ಅಕ್ಕ, ಮಗಳು, ಅತ್ತಿಗೆ , ನಾದಿನಿ, ಯಾರೇ ಇರಲಿ ಹೆಣ್ಣಿಲ್ಲದ ಮನೆಯು ಎಂದು ಮನೆಯನಿಸಲಾರದು, ಹೆಣ್ಣು ಬಾಳಿನ ಕಣ್ಣು ಮಾತ್ರವಲ್ಲದೆ ಪ್ರಾಣ ಜೀವಾಳವು ಆಗಿದ್ದಾಳೆ, ಆದರೆ ನಮ್ಮ ಗ್ರಾಮೀಣ ಮಹಿಳೆ ಇಂದು ಅನಂತ ತಿರುಗುಣಿಯಲ್ಲಿ ಸಿಲುಕಿನೊಂದು ನಲುಗಿ ಹೋಗಿದ್ದಾಳೆ. ಬೆಂದು ಬಸವಳಿದಿದ್ದಾಳೆ. ಹಲವಾರು ಸಮಸ್ಯೆಗಳ ಆಳದಲ್ಲಿ ಮುಳುಗಿ ಮೇಲಕ್ಕೇರಲಾರದಂತಹ ಸ್ಥಿತಿಯಲ್ಲಿ ಗೋಳಾಡುತ್ತಿದ್ದಾಳೆ. ಅವಳು ಒಟ್ಟು ಜನಸಂಖ್ಯೆಯ ಅರ್ಧಭಾಗವಾಗಿದ್ದಾಳೆ. ಒಟ್ಟು ಶ್ರಮದ ಕೆಲಸಕಾರ್ಯಗಳಲ್ಲಿ ಮೂರನೆಯ ಎರಡು ಭಾಗ ಮಾಡುತ್ತಾಳೆ, ಇದನ್ನು ಮಹಿಳಾಪರವಾದಿಗಳು "ರಕ್ತ ಬೆವರು ಕಣ್ಣೀರು ಎಂದು ವರ್ಣಿಸುತ್ತಾರೆ". ಹಾಗೆ ನೊಡಿದರೆ. ಸಂತಾನಾಭಿವೃದ್ಧಿಯ ಪ್ರಕ್ರಿಯೆಗೆ ಕಾರಣವಾಗುವ ದೇಹದ ಕೆಲವು ಭಾಗಗಳಲ್ಲಿ ಮಾತ್ರ ಹೆಣ್ಣು ಗಂಡಿನಲ್ಲಿ ವಿಭಿನ್ನತೆ ಕಂಡುಬರುತ್ತದೆ. ಇದನ್ನು ಹೊರತುಪಡಿಸಿದರೆ ಮಹಿಳೆಯ ಉಳಿದಿಲ್ಲ. ಸಾಮರ್ಥ್ಯ ಮತ್ತು ಕುಶಲಗಳು ಪುರುಷನಿಗೆ ಸರಿಸಮವಾಗಿಯೇ ಇರುತ್ತವೆ. ಆದರೆ ನಮ್ಮ ಸಮಾಜದಲ್ಲಿ ಅವಳು ತನ್ನ ಅಸ್ತಿತ್ವವನ್ನು ಕಳೆದುಕೊಂಡಿದ್ದಾಳೆ. ಎರಡನೆ ದರ್ಜೆಯ ಪ್ರಜೆಯಾಗಿ ತಾಪವನ್ನು ಅನುಭವಿಸುತ್ತಿದ್ದಾಳೆ. ಅವಳಿಗೆ ತನ್ನದೆಯಾದ ಮನೆಯಲ್ಲಿ ಬಾಲ್ಯದಲ್ಲಿ ತವರಮನೆ, ಯೌವನದಲ್ಲಿ ಗಂಡನ ಮನೆ, ಮುಪ್ಪಿನಲ್ಲಿ ಮಗನ ಮನೆ ಬದುಕ್ಕಿನೊದ್ದಕ್ಕೂ ಪುರಷನ ಅಧೀನದಲ್ಲಿಯೇ ಇರಬೇಕಾದ ಅನಿವಾರ್ಯತೆ ಇದೆ.

ಅವಳಿಗೆ ಆಸ್ತಿಯಿಲ್ಲ. ತೀರ್ಮಾನದಲ್ಲಿ ಪಾಲಿಲ್ಲ. ಶಿಕ್ಷಣ ಕನ್ನಡಿಯೊಳಗಿನ ಗಂಟಾಗಿದೆ. ದಿನಾಲು ಎಲ್ಲರಗಿಂತ ಮೊದಲೆದ್ದು ಎಲ್ಲರೂ ಮಲಗಿದ ಮೇಲೆ ಮಲಗುತ್ತಾಳೆ, ಅವಳು ಮಾಡುವ

ಕೆಲಸಕ್ಕೆ ಯಾವುದೇ ಆದಾಯವಿಲ್ಲ. ಅವಳ ಆರೋಗ್ಯದ ಬಗೆಗೆ ಅನಶಕ್ತಿ ತೋರಿಸಲಾಗುತ್ತಿದೆ. ನಿಜವಾಗಿಯೂ ಈ ಎಲ್ಲಾ ಒತ್ತಡಗಳ ನಡುವೆ ಗ್ರಾಮೀಣ ಹೆಣ್ಣು ಹಣ್ಣಾಗಿ ಹೋಗಿದ್ದಾಳೆ.

ನಮ್ಮ ಸಮಾಜ ಹೆಣ್ಣು ಮತ್ತು ಗಂಡನ್ನು ಎಂದೂ ಒಂದಾಗಿ ಕಂಡಿಲ್ಲ. ಸಮ-ಸಮ ಅವಕಾಶಗಳನ್ನು ಕೊಟ್ಟಿಲ್ಲ. ಹೆರಿಗೆ ಪ್ರಕ್ರಿಯೆಯ ಕಾರಣವಾಗಿ ಹೆಣ್ಣಿನ ಆರೋಗ್ಯ ಖಂಡಿತವಾಗಿ ಗಂಡಿಗಿಂತ ಭಿನ್ನವಾಗಿದೆ. ಅವಳ ಅಸ್ತಿತ್ವ ಕುಟುಂಬದಲ್ಲಿ ಪ್ರಧಾನ ಪಾತ್ರವಹಿಸಿದೆ. "ರೋಗ ಪೀಡಿತ ತಾಯಿ ಒಡಲಿನಿಂದ ನಿರೋಗಿಯಾದ ಜನಾಂಗವನ್ನು ಪಡೆಯಬಯಸುವ ನಮ್ಮ ಸಮಾಜದ ನಿರೀಕ್ಷೆ ಹಾಸ್ಯಸ್ಪದ ಎನಿಸುತ್ತದೆ. ಒಂದು ಕುಟುಂಬದವರ ಪೋಷಣೆ ಮತ್ತು ಆರೈಕೆಗಳಿಗೆಲ್ಲ ಹೆಣ್ಣು ಜವಾಬ್ದಾರಿ ಆಗಿದ್ದಾಳೆ. ಹಾಗೆ ನೋಡಿದರೆ ಹೆಣ್ಣಿನ ಸಬಲೀಕರಣದಲ್ಲಿಯೇ ಇಡೀ ಕುಟುಂಬದ ಸಬಲೀಕರಣವು ಅಡಗಿದೆ. ಅದು ಒಂದು ಗ್ರಾಮದ, ನಾಡಿನ ದೇಶದ ಸಬಲೀಕರಣವೇ ಆಗಿದೆ. ಈ ಹಿನ್ನಲೆಯಲ್ಲಿ ಪುರುಷ ರಾಜಕಾರಣ, ಸಬಲೀಕರಣ ಸ್ತ್ರೀವಾದಗಳ ಕುರಿತು ಚರ್ಚೆ ಮಹತ್ವವನ್ನು ಪಡೆಯುತ್ತದೆ."[7].

2.2 ಗ್ರಾಮೀಣ ಮಹಿಳೆ ಸಬಲೀಕರಣ:

ಪೀಠಿಕೆ:

ಸಾಮಾನ್ಯವಾಗಿ ಸಂಪ್ರಾದಾಯಿಕ ಭಾರತೀಯ ಸಮಾಜದಲ್ಲಿ ಎಲ್ಲ ಮಹಿಳೆಯರು ಅದರಲ್ಲಿಯೂ ವಿಶೇಷವಾಗಿ ಗ್ರಾಮಾಂತರ ಮಹಿಳೆಯರು ಬಹಳ ಶೋಷಣೆಗೊಳಗಾದ ವರಾಗಿದ್ದಾರೆ. ಇಂದಿನ ಸಮಾಜದಲ್ಲೂ ಕೂಡ ಮಹಿಳೆಯರನ್ನು ಬಹಳ ಕೆಳಮಟ್ಟದಿಂದ ನೋಡಿಕೊಳ್ಳಲಾಗುತ್ತಿದೆ. ಅವರಿಗೆ ಅವರದೇ ಆದ ಯಾವ ಸ್ಥಾನ-ಮಾನಗಳು ಇಲ್ಲ. ಒಂದು ಸರ್ವೆಸಾಮಾನ್ಯ ತಿಳುವಳಿಕೆಯೇನೆಂದರೆ ಮಹಿಳೆಯರಿಗೆ ಬೌದ್ಧಿಕ ಉನ್ನತಿ ಇರುವುದಿಲ್ಲ. ಸೃಜನಶೀಲ ಸಾಮರ್ಥ್ಯ ಇರುವುದಿಲ್ಲ ಮತ್ತು ವಿಶಾಲ ಹೃದಯವಿರುವುದಿಲ್ಲ ಎಂಬುದು ಮನು ಮಹಾಶಯನಂತೂ ಮಹಿಳೆಯರು ಬಾಲ್ಯದಲ್ಲಿ ತಂದೆಯ, ಯೌವನದಲ್ಲಿ ಪತಿಯ, ವೃದ್ಧಾಪ್ಯದಲ್ಲಿ ಮಗನ ಸಂರಕ್ಷಣೆಯಲ್ಲಿರುತ್ತಾರಾದುದರಿಂದ ಅವರಿಗೆ ಯಾವುದೇ ರೀತಿಯ ಸ್ವಾತಂತ್ರ್ಯವಿರಬಾರ ದೆಂದು ಸಾರಿದ್ದಾನೆ. ಆದರೆ ಆಧುನಿಕ ವಿಜ್ಞಾನವು ಮಹಿಳೆಯರಲ್ಲಿ ಪುರುಷರಷ್ಟೇ ಬೌದ್ಧಿಕತೆ, ಸಾಮಾಜಿಕತೆ ಮತ್ತು ನೈತಿಕತೆಯ ಸಾಮಥ್ಯವಿರುವುದೆಂಬುದನ್ನು ಸಿದ್ಧಪಡಿಸಿ ತೋರಿಸಿದೆ. ಹುಟ್ಟಿನಿಂದಲೇ ಅವರು ಕೀಳಾಗಿರುವುದಿಲ್ಲ. ಪುರುಷ ಪ್ರಾಬಲ್ಯವು ಅವರನ್ನು ಹತ್ತಿಕ್ಕಿದೆಯೆಂಬ ಮಾತನ್ನು ಸಮಾಜ ವಿಜ್ಞಾನಿಗಳು ವಿಶ್ಲೇಷಿಸಿದ್ದಾರೆ. ಆಧುನಿಕತೆಯ ದೃಷ್ಟಿಕೋನವೇನೆಂದರೆ ಮಹಿಳೆಯರಿಗೂ ಸಮಯ ಮತ್ತು ಅವಕಾಶ ನೀಡುವುದರ ಮುಖಾಂತರ ಪ್ರೋತ್ಸಾಹ ಮತ್ತು

ಸೌಕರ್ಯವನ್ನು ನೀಡಿದರೆ ಅವರು ಕೂಡ ಪುರುಷ ಸಮಾನ ಸ್ಕಂಧರಾಗಿ ಸಮಾಜದ ಏಳಿಗೆಯಲ್ಲಿ ಪ್ರಧಾನ ಪಾತ್ರವಹಿಸಬಲ್ಲರು.

ಮಹಿಳಾ ಸಬಲೀಕರಣ ಅಲೋಚನೆಯೇ ತೀರ ಇತ್ತೀಚಿನದು. ಈಚೀನ ವರ್ಷಗಳಲ್ಲಿ ವಿಶ್ವ ಮಹಾ ಸಂಘವೇ ಮಹಿಳಾ ಸಬಲೀಕರಣದ ಕಲ್ಪನೆಯನ್ನು ಮೂಡಿಸಿತು. ಎಲ್ಲಿಯವರೆಗೆ ಮಹಿಳಾ ಸಮೂಹವು ವಿದ್ಯೆ, ಉದ್ಯೋಗ, ತೀರ್ಮಾನ, ಸಾಮರ್ಥ್ಯ ಪ್ರದರ್ಶಿಸಲು ಅರ್ಹರಾಗುವುದಿಲ್ಲವೋ ಅಲ್ಲಿಯತನಕ ಲಿಂಗ ಸಮಾನತೆ ಎಂಬುದು ಕನಸಿನ ಮಾತಾಗಿದೆ ಎಂಬುದು ಜಾಗತಿಕ ಮಟ್ಟದಲ್ಲಿ ಚರ್ಚಿಸಲಾಯಿತು.

ಮಹಿಳೆಯರು ತಮ್ಮ ಸ್ವಾತಂತ್ರ್ಯ ಗೌರವ, ಸ್ವಾವಲಂಬನೆ ಮುಕ್ತ ಆಯ್ಕೆ ಅಭಿವೃದ್ಧಿ ಕಾರ್ಯಗಳಲ್ಲಿ ಪಾಲ್ಗೋಳುವಿಕೆ ಬಗ್ಗೆ ತಾವಾಗಿಯೇ ಮುಂದೆ ಬಂದಾಗ ಮಾತ್ರ ಲಿಂಗ ಸಮಾನತೆ ಸ್ವತಃ ಹುಡುಕಿಕೊಂಡು ಬರುತ್ತದೆ. ಆಧುನೀಕರಣದ ಹೆಸರಿನಲ್ಲಿ ಸಂಪ್ರದಾಯ ನಿಷ್ಠೆ. ಅವಿಭಕ್ತ ಕುಟುಂಬ ನಿರ್ವಹಣೆ, ಜಾತಿ ಸಂಬಂಧಗಳು ಧಾರ್ಮಿಕ ನಂಬಿಕೆಗಳು ಶಿಥಿಲಗೊಳ್ಳುತ್ತಿರುವಾಗ ಲಿಂಗ ಸಮಾನತೆ ಎಂಬ ಶಬ್ದ ಅವಕಾಶಗಳಿಗಿಂತ ಕರ್ತವ್ಯಗಳಲ್ಲಿಯೇ ಹೆಚ್ಚು ಕಾಣಿಸಿಕೊಳ್ಳತೊಡಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳಲ್ಲಿಯೂ ಮಹಿಳೆ ದಾಪುಗಾಲು ಇರಿಸಿದ್ದರಿಂದ ಲಿಂಗ ಸಮಾನತೆ ಎಂಬ ಶಬ್ದ ತನ್ನ ಅಸ್ಮಿತ್ತೆಯನ್ನು ಹುಡುಕುವಂತಾಗಿದೆ. ಇಂದಿನ ಜೀವನಶೈಲಿಯಲ್ಲಿ ಪರಾವಲಂಬನೆ ಎಂಬ ಶಬ್ದಕ್ಕೆ ಅವಕಾಶವೇ ಇಲ್ಲದಂತಾಗಿದೆ. ಪ್ರತಿಯೊಬ್ಬರೂ ತಮ್ಮ ತುತ್ತಿನ ಚೀಲಕ್ಕಾಗಿ ದುಡಿಯಲೇಬೇಕಾದ ಅನಿವಾರ್ಯ ಉಂಟಾಗಿದೆ. ಹಾಗಾಗಿ ಆದಾಯ ಮೂಲದ ಉದ್ಯೋಗವನ್ನು ಹುಡುಕಿಕೊಂಡು ಬದುಕಲೇಬೇಕಾದ ಸ್ಥಿತಿ ಬಂದಿದೆ.

ವಿಭಕ್ತ ಕುಟುಂಬದ ಕಲ್ಪನೆ, ಹೆಚ್ಚಿದ ಜವಾಬ್ದಾರಿ, ಪ್ರತ್ಯೇಕ ಬಾಳುವೆ ನಡೆಸಬೇಕಾದ ಬದುಕಿನ ಸ್ವರೂಪ, ಜೀವನಾವಶ್ಯಕತೆಗಳನ್ನು ಪೂರೈಸಲು ಗಗನಕ್ಕೇರಿದ ದುಬಾರಿ ಬೆಲೆ, ದುಬಾರಿ ಬದುಕು ಇವೆಲ್ಲವೂ ಮಹಿಳೆಯರು ನಾಲ್ಕು ಗೋಡೆಗಳಿಂದ ಆಚೆ ಬಂದು ಸಂಸಾರದ ನೊಗಕ್ಕೆ ಹೆಗಲೊಡ್ಡವಂತೆ ಪರಿಸ್ಥಿತಿ ಒತ್ತಾಯಿಸಿದೆ. ಇವೆ ಎಲ್ಲ ಕಾರಣದಿಂದಲೇ ಮಹಿಳೆಯೊಬ್ಬಳು ತನ್ನದಲ್ಲದ ಸಂಸಾರದಲ್ಲಿ ಭಾರವಾಗಿ, ಬದುಕಬಹುದಾದ ಯಾವ ಸಾಧ್ಯತೆಗಳೂ ಇಲ್ಲದಂತಾಗಿದೆ. ಈ ಕಾರಣಕ್ಕಾಗಿಯೇ ಶಿಕ್ಷಣ ಪಡೆದು, ಕೆಲಸ ಗಳಿಸಲೇಬೇಕಿದೆ. ಆರ್ಥಿಕ ಸ್ವಾವಲಂಬಿಯಾಗುವುದು ಅತೀ ಅವಶ್ಯಕವಾಗಿದೆ. ಈ ಕಾರಣಕ್ಕಾಗಿಯೇ ಮಹಿಳೆಯರು ಶಿಕ್ಷಣವನ್ನು ಪಡೆದು, ಬೇರೆ-ಬೇರೆ ಕುಶಲಗಳ ಕಲೆಗಳ ಮೂಲಕ ಉದ್ಯೋಗಕ್ಕೆ ಅವಕಾಶ ನಿರ್ಮಾಣ ಮಾಡಿಕೊಳ್ಳುತ್ತಿದ್ದಾರೆ. ಗಂಡು ಹೆಣ್ಣುಗಳೆಂಬ ಭೇದವಿರದೆ ದುಡಿಯುತ್ತಿದ್ದಾರೆ. ಮಹಿಳಾ ಸಬಲೀಕರಣವು. ಮಹಿಳೆಯರ

ದೃಷ್ಟಿಯಿಂದ ಮಾತ್ರವಲ್ಲ ಕುಟುಂಬದ ಹಾಗೂ ರಾಷ್ಟ್ರದ ಹಿತವನ್ನೂ ಗಮನದಲ್ಲಿರಿಸಿಕೊಂಡು ಸಾಗಿದೆ.

ಸಬಲೀಕರಣವೆಂಬುದು, ಅಶಕ್ತರು, ಅಂಗವಿಕಲರು, ವಂಚಿತರು, ಅನುಪಯುಕ್ತರು ಎಂಬಂಥ ದೃಷ್ಟಿಯಿಂದಲೂ ಲಿಂಗ, ವಯಸ್ಸು, ಅಲ್ಪ ಸಂಖ್ಯಾತರು, ಬಹು ಸಂಖ್ಯಾತರು ಎಂಬ ಬೇಧವಿಲ್ಲದೆ ಸಾಪೇಕ್ಷ ಸಂಬಂಧವನ್ನು ಪಡೆದಿದೆ ಎನ್ನಬಹುದು. ಸಬಲೀಕರಣದ ಅರ್ಥವೇ ಸಶಕ್ತರನ್ನಾಗಿಸುವುದು ಮತ್ತು ಬರಲಿರುವ ದುರ್ದಿನಗಳನ್ನು ಎದುರಿಸಲು ಹಲವು ತಾರತಮ್ಮಗಳ ವಿರುದ್ಧ ಸಮರ್ಥರನ್ನಾಗಿ ಮಾಡುವುದೇ ಅಗಿದೆ. ಮಹಿಳೆಯರು ತಮ್ಮತನವನ್ನೂ ಗುರುತಿಸಿಕೊಂಡು ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಅರ್ಥಮಾಡಿಕೊಂಡು ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಸಕ್ರಿಯಾತ್ಮಕವಾಗಿ ದುಡಿಯುವುದೇ ಮಹಿಳಾ ಸಬಲೀಕರಣದ ಮುಖ್ಯ ಧ್ಯೇಯವಾಗಿದೆ.

2.2.1 ಸಬಲೀಕರಣದ ಅರ್ಥ ಮತ್ತು ವ್ಯಾಖ್ಯೆ:

ಸಬಲೀಕರಣವೆಂದರೆ ದಮನಕಾರರ ವಶದಲ್ಲಿರುವ ಅಧಿಕಾರವನ್ನು ಕಡಿತಗೋಳಿಸುವುದು ಮತ್ತು ದಮನಕ್ಕೆ ಒಳಗಾದವರಿಗೆ ಅಧಿಕಾರ ನೀಡುವುದು. ಇಲ್ಲಿ ಸಬಲೀಕರಣವೆಂದರೆ ಅಧಿಕಾರದ ವರ್ಗಾವಣೆ, ಶಕ್ತಿ ಅಥವಾ ಅಧಿಕಾರದ ಸಂಬಂಧಗಳ ಹೊಂದಾಣಿಕೆ. ಇಲ್ಲಿ ಪವರನ ಮರುಹಂಚಿಕೆಯೇ ಸಬಲೀಕರಣ "ಸಬಲೀಕರಣ" ಎಂಬ ಶಬ್ದದ ಅರ್ಥವೇನೆಂದರೆ, ಮಹಿಳೆಯರಿಗೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಸವಲತ್ತುಗಳನ್ನು ನೀಡಿ ಅವರ ಚತುರತೆಯ, ಹಕ್ಕಿನ, ಪ್ರಜ್ಞೆಯ ಮತ್ತು ಜವಾಬ್ದಾರಿಯ ಸಾಮರ್ಥ್ಯವನ್ನು ವೃದ್ಧಿಸುವುದು.

ಸಬಲೀಕರಣವೆಂದರೆ ಮಾನವೀಯ ಅಸಮಾನತೆಗೆ ಈಡಾದ ಮಹಿಳೆಯರು ಸ್ವತಂತ್ರ, ಸ್ವಾವಲಂಬನೆ, ಮತ್ತು ಆತ್ಮಾವಿಶ್ವಾಸ ಜೀವನ ಸಾಗಿಸಲು ಅರ್ಹರಾಗಿ ತಮಗಾಗುತ್ತಿರುವ ದಬ್ಬಾಳಿಕೆ ಮತ್ತು ತಾರತಮ್ಯ ಬೇಧಭಾವವನ್ನು ಪ್ರತಿಭಟಿಸಿ ಪುರುಷ ಪ್ರಧಾನ ಸಮಾಜದಲ್ಲಿ ಆತ್ಮಗೌರವ ಮತ್ತು ಆತ್ಮಾಭಿಮಾನದಿಂದ ಬಾಳುವುದೇ ಅಗಿದೆ.

"ಸಬಲೀಕರಣ" ಎಂಬ ಶಬ್ದವು ಸೂಚಿಸುವುದೇನೆಂದರೆ, ವ್ಯಕ್ತಿಯು ಎಲ್ಲ ರೀತಿಯಿಂದಲೂ ಬಲಶಾಲಿಯಾಗಿ ಜೀವನದ ಸವಾಲುಗಳನ್ನು ಧೈರ್ಯದಿಂದ ಎದುರಿಸುವುದು ಮತ್ತು ಅಡ್ಡ ಬರುವ ಅನಾನುಕೂಲತೆಗಳನ್ನು ದಾಟಿ ತನ್ನೊಡನೆ ನಡೆಯುವ ಅಸಮಾನತೆ ವೈಕಲ್ಯವನ್ನು ಚಾಕಚಕ್ಯತೆಯಿಂದ ಪ್ರತಿಭಟಿಸುವದು ಎಂದೆನ್ನಬಹುದು. ಮಹಿಳಾ ಸಬಲೀಕರಣ ತತ್ವವು ಕಾಲಮಾನ, ದೇಶಕ್ಕನುಗುಣವಾಗಿ ವ್ಯತ್ಯಾಸವಾಗುವದೆಂಬುದನ್ನು ನಾವು ಜ್ಞಾಪಕದಲ್ಲಿರಿಸಿಕೊಳ್ಳಬೇಕು. ಸಬಲೀಕರಣವು ಅಭಿವೃದ್ಧಿಶೀಲ ಪಾಶ್ಚಾತ್ಯ ದೇಶಗಳಲ್ಲಿ ಬೇರೆಯೇ ಅರ್ಥವನ್ನು ಕೊಡುತ್ತದೆ.

ಅದೇ ರೀತಿ ಹಿಂದುಳಿದ ಭಾರತ ದೇಶದಂತಹ ಸನ್ನಿವೇಶದಲ್ಲಿ ವಿಭಿನ್ನ ಕಲ್ಪನೆಯನ್ನು ಮೂಡಿಸುತ್ತದೆ.

ಉದಾಹರಣಾರ್ಥವಾಗಿ ಹೇಳಬಹುದಾದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಮಹಿಳೆಯು ಪುರುಷ ದಬ್ಬಾಳಿಕೆ ಸಹಿಸದೆ ತನ್ನ ಗಂಡನಿಂದ ಬಿಡುಗಡೆ ಪಡೆದು ಇನ್ನೊಬ್ಬನನ್ನು ಸಹಜವೆಂಬಂತೆ ಪುನರ್ವಿವಾಹವಾಗಬಹುದಾಗಿದೆ. ಪಾಶ್ಚಾತ್ಯ ಸಮಾಜದಲ್ಲಿ ವಿವಾಹ ವಿಚ್ಛೇದನ ಮತ್ತು ಪುನರ್ವಿವಾಹ ಪದ್ಧತಿಗಳನ್ನು ಕಳಂಕಪ್ರಾಯ ಕ್ರಮಗಳೆಂದು ಪರಿಗಣಿಸುವುದೇ ಇಲ್ಲ. ಅದೇ ಭಾರತೀಯ ಸಮಾಜದಲ್ಲಿ ಮಹಿಳಗೆ ಅದೆಷ್ಟೋ ಪ್ರತಿಕೂಲ ಪರಿಸ್ಥಿತಿ ಇದ್ದರೂ ವಿವಾಹ ವಿಚ್ಛೇದನದಂತಹ ಕ್ರಮಕ್ಕೆ ಕೈಹಾಕಲು ಧೈರ್ಯ ಮಾಡುವುದಿಲ್ಲ. (ಕಟ್ಟಿಕೊಂಡವನ ಜೊತೆಗೆ ಕೊನೆಯವರೆಗೆ ಬದುಕುಬೇಕೆಂಬ ನೀತಿಪಾಠವಿದೆ) ಅವನು ಎಷ್ಟೇ ಕೆಟ್ಟವನಾಗಿದ್ದರು ಅನಿವಾರ್ಯವಾಗಿ ಸಹಿಸಿಕೊಳ್ಳುವ ಪರಿಸ್ಥಿತಿ ಮಹಿಳೆಯರಿಗೆ ಇದೆ. ಇನ್ನೂ ಮರು ಮದುವೆಯನ್ನುವುದು ಕಲ್ಪಿಸಲಾಗದ ಆಲೋಚನೆಯಾಗಿದೆ. ಗಂಡನಿಂದ ತೊರೆಯಲ್ಪಟ್ಟ ಹೆಣ್ಣಿಗೆ ಭಾರತೀಯ ಕುಟುಂಬದಲ್ಲಿಯಾಗಲಿ, ಸಮುದಾಯದಲ್ಲಿಯಾಗಿಲಿ, ಸಮಾಜದಲ್ಲಿಯಾಗಿಲಿ ಗೌರವ ಇರುವುದಿಲ್ಲ. ಇದಕ್ಕೆ ಬದಲಾಗಿ ಗಂಡ ಬಿಟ್ಟು ಬಂದವಳು ಎಂದು ಅವಳನ್ನು ಹೀನಯವಾಗಿ, ತುಚ್ಚವಾಗಿ, ನಿಂದಿಸುವುದು ಉಂಟು. ಹೀಗಾಗಿ ಮಾನಸಿಕವಾಗಿ ಹಿಂಸೆ ಅನುಭವಿಸುವ ಸಾಧ್ಯತೆಗಳೆ ಹೆಚ್ಚಾಗಿವೆ.

ಅಷ್ಟೇ ಏಕೆ ಪಟ್ಟಣದ ವಿದ್ಯಾವಂತ ಮತ್ತು ಉದ್ಯೋಗಸ್ಥ ಮಹಿಳೆಯು ಕೂಡ ಇದಕ್ಕೆ ಹೊರತಾಗಿಲ್ಲ. ವಿವಾಹ ವಿಚ್ಛೇದನವೆಂದರೆ ಹಿಂದೇಟು ಹಾಕುತ್ತಾಳೆ. ಭಾರತೀಯ ಮಹಿಳೆಯು ಪುನರ್ವಿವಾಹವನ್ನು ಕುರಿತು ಆಲೋಚನೆಯನ್ನೇ ಮಾಡುವುದಿಲ್ಲ. ಮಹಿಳೆಗೆ ತನ್ನ ಬದುಕಿನಲ್ಲಿ ಗಂಡನಿಂದ ಅತ್ಯಾಚಾರ ಮತ್ತು ಹಿಂಸೆ ಅತೀಯಾಗಿ ತವರು ಮನೆಯಿಂದ ಅಥವಾ ಗಂಡನ ಮನೆಯ ಇತರ ಸದಸ್ಯರಿಂದ ಸಹಕಾರ ಸಿಗದೇ, ಸಾಯುವುದಕ್ಕಿಂತಲೂ ಒಂಟಿ ಜೀವನವನ್ನು ಸಾಗಿಸಬೇಕೆಂದು ಮನಸ್ಸು ಮಾಡಿದಾಗ ಮಾತ್ರ ವ್ಯವಸ್ಥೆತೆ ವಿರುದ್ಧ ಪ್ರತಿಭಟಿಸಲು ತಯಾರಾಗುತ್ತಾಳೆ. ಈ ರೀತಿ ತಯಾರಾಗುವ ಮಹಿಳೆಯರ ಸಂಖ್ಯೆ ಸಾವಿರಕ್ಕೆ ಒಂದು ಇರಬಹುದು. ಮಹಿಳಾ ಸಬಲೀಕರಣದ ಅರ್ಥವೇನೆಂದರೆ, ಅವಳು ಸ್ವಂತಂತ್ರ್ಯ ಮತ್ತು ಪರಾವಲಂಬನವಲ್ಲದ ಜೀವನವನ್ನು ಸಾಗಿಸಲು ಮನೋ ಸಿದ್ಧತೆಯನ್ನು ಮಾಡಿಕೊಳ್ಳುವುದೇ ಆಗಿದೆ.

ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಪುರುಷ ಪ್ರಾಧಾನ್ಯತೆಯುಳ್ಳ ಗ್ರಾಮೀಣ ಸಮಾಜದಲ್ಲಿ ವಿವಾಹ ಪರಿತ್ಯಜನೆ ಅಥವಾ ವಿವಾಹವಿಚ್ಛೇದನದಂತಹ ಕ್ರಮವನ್ನು ಯಾರೂ

ಸಮ್ಮತಿಸುವುದಿಲ್ಲ. ಹೀಗಾಗಿ ಹೇಳಬಹುದು ಮಹಿಳಾ ಸಬಲೀಕರಣವನ್ನು ಇಂತಹ ಸಾಂಸ್ಕೃತಿಕ ಹಿನ್ನಲೆಯಲ್ಲಿ ನಾವು ಪರಾವಲೋಚಿಸಬೇಕಾಗುತ್ತದೆ.

2.2.2 ಮಹಿಳಾ ಸಶಕ್ತೀಕರಣ ಪರಿಕಲ್ಪನೆಯ ಅರ್ಥ:

"ಲಿಂಗತಾರತಮ್ಮತೆ, ಅಸಮಾನತೆ, ಅನರ್ಹತೆ ಹಾಗೂ ಇನ್ನಿತರ ಬಗೆಯ ಸಂಕಷ್ಟಗಳಿಗೆ ಒಳಗಾಗಿರುವ ಸ್ತ್ರೀಯರಿಗೂ ಕೂಡ ಪುರುಷರಿಗೆ ಸರಿಸಮಾನವಾದ ಅಂತಸ್ತು ಹಾಗೂ ಅವಕಾಶಗಳನ್ನು ನೀಡಿ ಅವರನ್ನು ಸಶಕ್ತರನ್ನಾಗಿಸಲು ಹಮ್ಮಿಕೊಳ್ಳಲಾಗಿರುವ ಅಭಿವೃದ್ಧಾತ್ಮಕ ಕಾರ್ಯಯೋಜನೆಗಳ ಪ್ರಕ್ರಿಯೆಯನ್ನು, ಮಹಿಳಾ ಸಶಕ್ತೀಕರಣ ಪ್ರಕ್ರಿಯೆ ಎಂದೆನ್ನಬಹುದು.

ಭಾರತದಲ್ಲಿ ಸ್ತ್ರೀಯರ ಅಂತಸ್ತು:

"ಮಹಿಳಾ ಸಶಕ್ತೀಕರಣ" ಎಂದರೆ ಮಹಿಳೆಯರಿಗೆ ತಮ್ಮ ಜೀವನವನ್ನು ನಿಯಂತ್ರಿಸುತ್ತಾ ಬಂದಿರುವ ಇತರರಿಂದ ಮುಕ್ತಿ ಪಡೆದುಕೊಳ್ಳಲು ಹಾಗೂ ತಮ್ಮ ಜೀವನವನ್ನು ಅದಕ್ಕೆ ಸಂಬಂಧಿಸಿದ ಪರಿಸ್ಥಿತಿಗಳನ್ನು ತಾವೇ ನಿಯಂತ್ರಿಸಿಕೊಳ್ಳಲು ಸೂಕ್ತವಾದ ಶಕ್ತಿಯನ್ನು ನೀಡುವುದು ಎಂದರ್ಥ.

"ಮಹಿಳಾ ಸಶಕ್ತೀಕರಣ" ಪರಿಕಲ್ಪನೆಯು ಆರಂಭಿಕ ಹಿನ್ನೆಲೆ:

ಇತಿಹಾಸದುದ್ದಕ್ಕೂ ಮಹಿಳೆಯರನ್ನು "ಅಬಲೆಯರು" ಅಥವಾ "ದುರ್ಬಲರು" ಎಂದು ಪರಿಗಣಿಸಲಾಗಿತ್ತಲ್ಲದೆ ಅವರನ್ನು "ದ್ವಿತೀಯ ದರ್ಜೆಯ ಪ್ರಜೆಗಳು" ಎಂಬಂತೆಯೇ ನೋಡಿಕೊಳ್ಳಲಾಗುತ್ತಿತ್ತು. ಕುಟುಂಬ ನಿರ್ವಹಣೆಯ ಹೊಣೆಹೊತ್ತವರು ಎಂಬ ಅರ್ಥದಲ್ಲಿ ಅವರನ್ನು "ಮನೆ ನಿರ್ಮಾತೃಗಳು" ಎಂದುಕೂಡಾ ಕರೆಯುವುದಿತ್ತು. ಕಾಲಸರಿದಂತೆ ಸ್ತ್ರೀಯರ ಬಗೆಗಿನ ದೃಷ್ಟಿಕೋನ ಬದಲಾಯಿತು. 20ನೇ ಶತಮಾನದ ಆದಿಭಾಗದಲ್ಲಿ ಬ್ರಿಟಿನ್ ಮತ್ತು ಅಮೇರಿಕಗಳಲ್ಲಿ ಸ್ತ್ರೀಯರಿಗೂ ಮತದಾನದ ಸಮಾನ ಹಕ್ಕನ್ನು ನೀಡಿದ ಮೇಲಂತೂ ಪಶ್ಚಿಮದ ಸಮಾಜಗಳಲ್ಲಿ ಅವರ ಅಂತಸ್ತಿನಲ್ಲಿ ಬಾರೀ ಸುಧಾರಣೆಯಾಯಿತು. ಹಲವಾರು ಅನರ್ಹತೆಗಳು ದೂರವಾದುವು. ಮಹಿಳೆಯರಿಗೆ ಹೆಚ್ಚಿನ ಕ್ಷೇತ್ರಗಳಲ್ಲಿ ಪುರುಷರಿಗೆ ಸರಿಸಮಾನವಾದ ಹಕ್ಕು ಮತ್ತು ಅವಕಾಶಗಳನ್ನು ನೀಡಲಾಯಿತು.

ಎಲ್ಲ ರೀತಿಯ ಜ್ಞಾನ ಸಂಪಾದನೆ ಮತ್ತು ಸಂಪನ್ಮೂಲಗಳ ಕ್ರೋಢೀಕರಣ ಸ್ವಯಂ ನಿರ್ಣಾಯಕ ಸಾಮರ್ಥ್ಯ ಪಡೆದು ತಮ್ಮ ಜೀವನವನ್ನು ತಾವೇ ರೂಪಿಸಿಕೊಳ್ಳುವ ಯೋಗ್ಯತೆಯನ್ನು ಗಳಿಸಿ ಮೂಢನಂಬಿಕೆಗಳು, ಸಂಪ್ರಾದಾಯಗಳು, ತಲೆತಲಾಂತರದ ಅಂಧಶ್ರದ್ಧೆಗಳು ತಮ್ಮ ಮೇಲೆ ಹೇರಿದ ಬಂಧಕಗಳನ್ನು ನಿವಾರಿಸಿಕೊಂಡು ಮಹಿಳೆಯರು ಮುನ್ನಡೆಯುವುದೇ ಮಹಿಳಾ ಸಬಲೀಕರಣವಾಗಿದೆ"[8]

ಕಾರ್ಲನ್ ಪ್ರಕಾರ 1995 "ಹೆಚ್ಚಿನ ಜಾಗೃತಿ ವ್ಯಕ್ತಿತ್ವ ನಿರ್ಮಾಣ ಮತ್ತು ಹೆಚ್ಚಿನ ಸಮ ನಿರ್ಧಾರ ಸಾಮರ್ಥ್ಯವೇ ಸಬಲೀಕರಣದ ತಾತ್ಪರ್ಯವಾಗಿದೆ", ಅಧಿಕಾರ ಮೂಲಗಳನ್ನು ಆಕ್ರಮಿಸಿಕೊಂಡು ಸಮಾನ ಅವಕಾಶಗಳನ್ನು ಪಡೆಯುವುದೇ ಮಹಿಳಾ ಸಬಲೀಕರಣ ಎಂದಿದ್ದಾರೆ

ಒಟ್ಟಿನಲ್ಲಿ ಮಹಿಳಾ ಸಬಲೀಕರಣವು ಇಲ್ಲಿಯವರೆಗೆ ನಡೆದುಕೊಂಡು ಬಂದ ಪಿತೃಪ್ರಧಾನ ವ್ಯವಸ್ಥೆಯನ್ನು ಬುಡಮೇಲು ಮಾಡಿ ಲಿಂಗ ಅಸಮಾನತೆಯನ್ನು ಹೋಗಲಾಡಿಸಿ, ಎಲ್ಲ ಸ್ಪರ್ಧಾತ್ಮಕ ವಲಯಗಳಲ್ಲಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮಹಿಳೆಯರು ಕೂಡ ಭಾಗವಹಿಸುವಂಥ ನವಜಾಗೃತ ಸಮಾಜ ನಿರ್ಮಾಣ ಮಾಡುವುದೇ ಆಗಿದೆ.

ಸ್ತ್ರೀ ಸಬಲೀಕರಣಕ್ಕೆ ಸಹಾಯಕವಾದ ಅಂಶಗಳು ಈ ಕೆಳಗಿನಂತಿವೆ:

1. ಸ್ತ್ರೀಯರ ಹಕ್ಕುಗಳನ್ನು ಗುರುತಿಸಿ, ಗೌರವಿಸಿ ಒಪ್ಪಿಕೊಳ್ಳುವುದು.
2. ಸ್ತ್ರೀಯರಿಗೆ, ಶಿಕ್ಷಣ, ವಿವಾಹ, ಮಕ್ಕಳು, ವೃತ್ತಿ ಕುಟುಂಬಿಕ ವಿಚಾರಗಳಲ್ಲಿ ನಿರ್ಧಾರತೆಗೆದುಕೊಳ್ಳುವ ಸ್ವಾತಂತ್ರ್ಯ ಇರಬೇಕು.
3. ಶಿಕ್ಷಣ ಮತ್ತು ಉದ್ಯೋಗ ಪಡೆಯಲು ಸಮಯ ಮತ್ತು ಅವಕಾಶ ಬೇಕಾಗಿದೆ.
4. ಸ್ತ್ರೀ ನಿರ್ಧಾರಕ್ಕೆ 'ತೂಕ' ಮತ್ತು ಗೌರವ ಸಿಗಬೇಕಾದರೆ ಆಡಳಿತಾತ್ಮಕ ಪ್ರಕ್ರಿಯೆಯಲ್ಲಿ ಸಹಭಾಗಿತ್ವಕ್ಕೆ ಅವಕಾಶ ದೊರೆಯಬೇಕು.

ಮಹಿಳಾ ಸಬಲೀಕರಣದ ಅವಶ್ಯಕತೆ:

1. ಶಿಕ್ಷಣ ಮತ್ತು ಸಾಕ್ಷರತೆ 2001ರ ಜನಗಣತಿಯಂತೆ ಪುರುಷರ ಸಾಕ್ಷರತಾ ಪ್ರಮಾಣ 100ಕ್ಕೆ 75% ರಷ್ಟಿದೆ ಸ್ತ್ರೀಯರದು 100ಕ್ಕೆ 54% ರಷ್ಟಿದೆ ಇದು ಸ್ತ್ರೀಯರ ಶೋಷಣೆಗೆ ಕಾರಣವಾಗಿದೆ ಸಾಕ್ಷರತೆಯನ್ನು ಹೆಚ್ಚಿಸುವ ಅವಶ್ಯಕತೆಯಿದೆ.
2. ಸ್ತ್ರೀಯರ ಅನಾರೋಗ್ಯ ಬಲಪಡಿಸಬೇಕಾಗಿದೆ. ಪೌಷ್ಠಿಕ ಅಹಾರ ಅನಾರೋಗಕ್ಕೆ ಸೂಕ್ತ ಔಷಧಿ ಅವರ ಮಾನಸಿಕ ಸ್ಥಿತಿಯನ್ನು ಬಲಪಡಿಸುವಂತೆ ಕುಟುಂಬದ ಸಮಾಜದ ಪಾತ್ರ ಬಹು ಮುಖ್ಯವಾಗಿದೆ.
3. ಆರ್ಥಿಕ ದುರವಸ್ಥಿಗಳು: ಕಡಿಮೆ ಕೂಲಿ ಹೆಚ್ಚಿನ ದುಡಿತ ಆಸ್ತಿಯ ಒಡೆತನ. ಸ್ವಾವಲಂಬನೆಯಿಂದ ಸ್ತ್ರೀಯರು ತಮ್ಮ ಅರ್ಥಿಕ ಸ್ಥಾನಮಾನ ಹೆಚ್ಚಿಸಿಕೊಳ್ಳುವುದು. ಸಾಧ್ಯವಾಗುತ್ತದೆ.
4. ಸ್ತ್ರೀಯರ ಮೇಲಿನ ದೌರ್ಜನ್ಯಗಳು: ಸ್ತ್ರೀಯರು ದುರ್ಬಲ ಎಂಬ ಕಾರಣದಿಂದ ಅವರ ಮೇಲೆ ಅನೇಕ ರೀತಿಯಲ್ಲಿ ದೌರ್ಜನ್ಯಗಳಾಗುತ್ತಿವೆ. ಹಾಸು, ವ್ಯಂಗೆ, ಅಪಹರಣ, ಮಾನಹರಣ, ಲೈಂಗಿಕ ಕಿರುಕುಳ, ಒತ್ತಾಯದ ವಿವಾಹವನ್ನೊಳ

ಗೊಂಡಂತೆ ಲೈಂಗಿಕ ಅತ್ಯಚಾರ, ವರದಕ್ಷಿಣೆ ಹಿಂಸೆ, ಹಾಗೂ ಕೊಲೆಯಂತಹ ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಾರೆ. ಇವುಗಳನ್ನು ಸ್ವಯಂಶಕ್ತಿ ಅಥವಾ ಸಂಘಟಿತ ಶಕ್ತಿಯಿಂದ ಎದುರಿಸಿನಿಲ್ಲುವ ಶಕ್ತಿಯಿದ್ದರೂ ಸಾಮಾಜಿಕ ವ್ಯವಸ್ಥೆಯಲ್ಲಿ ಅಸಹಾಯಕರಾಗಿದ್ದಾರೆ. ಹೀಗಾಗಿ ಈ ಪ್ರಕ್ರಿಯೆಯಲ್ಲಿ ಪುನರ್ ಸುಧಾರಣೆ ಆಗಬೇಕಾಗಿದೆ. ಈ ಎಲ್ಲ ಕಾರಣದಿಂದ ಮಹಿಳೆಯರ ಕೈಗೆ ಅಧಿಕಾರ ನಿಡುವಂತಹ ಮಹಿಳಾ ಸಬಲೀಕರಣ ದ ಅವಶ್ಯಕತೆ ತೀವ್ರವಾಗಿದೆ.

ಯೂರೋಪನಲ್ಲಿ ಬೊರ್ಜ್ವಾ ಪ್ರಜಾತಾಂತ್ರಿಕ ಕ್ರಾಂತಿಯ ನಂತರ ಸ್ಥಾಪನೆಯಾದ ಆಧುನಿಕ ಕೈಗಾರಿಕೆಗಳಲ್ಲಿ ದುಡಿಯುವ ಮಹಿಳೆಯರು ತಮ್ಮನ್ನು ಅಮಾನವೀಯವಾಗಿ ದುಡಿಸಿಕೊಳ್ಳುವುದರ ವಿರುದ್ಧ ನಡೆಸಿದ ಧೀರೋದ್ಯಾತ ಹೋರಾಟ ಶತಮಾನಗಳು ಸಂದರು ಅವಿಸ್ಮರಣೀಯ. ಸಮಾನ ದುಡಿಮೆಗೆ–ಸಮಾನ ವೇತನ ದಿನಕ್ಕೆ 8 ಗಂಟೆಗಳ ದುಡಿಮೆ ಉತ್ತಮ ದುಡಿಮೆಯ ಪರಿಸ್ಥಿತಿ ಇತ್ಯಾದಿಗಳಾಗಿ ಒತ್ತಾಯಿಸಿ 20–30 ಸಾವಿರ ಮಹಿಳಾ ಕಾರ್ಮಿಕರು 13–ವಾರಗಳ ಕಾಲ ಕೊರೆಯುವ ಚಳಿಯಲ್ಲಿ ಎದೆಗುಂದದೇ ನಡೆಸಿದ ಹೋರಾಟಕ್ಕೆ ಸರ್ಕಾರ ಸ್ಪಂದಿಸಿದ್ದು ಗುಂಡಿನ ಸುರಿ ಮಳೆಯೊಂದಿಗೆ ಅಂದು ಆ ಮಹಿಳೆಯರ ರಕ್ತ ದಾರಿಯಾಗಿ ಹರಿಯಿತು. ಆದರೆ ಮುಂದೆ ಇದು ಅನೇಕ ಮಹಿಳಾ ಹೋರಾಟಗಳಿಗೆ ಸ್ಪೂರ್ತಿಯ ಚಿಲುಮೆ ಆಯಿತು.

1910ರಲ್ಲಿ ಕೊಪೆನ್ ಹೆಗನ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದಲ್ಲಿ ಸಮಾಜವಾದಿ **ನಾಯಕಿ ಕ್ಲಾರಾ ಜಟ್ಕಿನ್** ರವರು ಈ ಮಹಾನ ಹೋರಾಟದ ನೆನಪಿನಲ್ಲಿ ಮಾರ್ಚ್ 8 ನ್ನು ಅಂತರ ರಾಷ್ಟ್ರೀಯ ಮಹಿಳಾ ದಿನಾಚಾರಣೆ ಎಂದು ಆಚರಿಸಲು ಪ್ರತಿನಿಧಿಗಳಿಗೆ ಕರೆ ನೀಡಿದರು. ಅಂದಿನಿಂದ ಪ್ರಪಂಚದಲ್ಲೆಡೆ ಮಹಿಳಾ ದಿನದ ಸ್ಫೂರ್ತಿಯಲ್ಲಿ ಹಲವಾರು ಮಹಿಳಾ ಚಳುವಳಿಗಳು ಸ್ಪೋಟಗೊಂಡಿವೆ. ಅಂತಾರಾಷ್ಟ್ರೀಯ ಮಹಿಳಾ ದಿನದ ಶತಮಾನತೋತ್ಸವಕ್ಕೆ ಕಾಲೂಡುತ್ತಿದ್ದೇವೆ. ಹೀಗಾಗಿ ಮಹಿಳೆಯರು ಸಬಲೀಕರಣಗೊಳ್ಳುವುದು ಅತೀ ಅವಶ್ಯಕವಾಗಿದೆ.

ಸಶಕ್ತೀಕರಣದ ತಂತ್ರಗಳು ಮತ್ತು ಅವುಗಳ ಅನುಷ್ಠಾನ:

1. ವಿಶ್ವ ಸಂಸ್ಥೆಯು 1975ರ ವರ್ಷವನ್ನು "ಅಂತರಾಷ್ಟ್ರೀಯ ಮಹಿಳಾ ವರ್ಷವೆಂದು ಘೋಷಿಸಿ ಮಹಿಳೆಯರ ಅಭಿವೃದ್ಧಿಯ ಕಡೆಗೆ ಸದಸ್ಯ ರಾಷ್ಟ್ರಗಳೆಲ್ಲವು ಗಮನಹರಿಸಬೇಕೆಂದು ತಿಳಿಸಿತು.
2. 1985ರಲ್ಲಿ ನ್ಯೋರೋಬಿಯಾದಲ್ಲಿ ಸ್ತ್ರೀಯರ 3ನೇ ಜಾಗತಿಕ ಮಾಹಾಸಭೆ ಮಹಿಳಾ ಸಶಕ್ತೀಕರಣಕ್ಕೆ ಕರೆ ನೀಡಿತು.

3. 1995 ರಲ್ಲಿ ನಾಲ್ಕನೆಯ ಜಾಗತಿಕ ಮಹಿಳಾ ಸಮ್ಮೇಳನ ಬಿಜಿಂಗ್‌ನಲ್ಲಿ 189 ದೇಶದ ಪ್ರತಿನಿಧಿಗಳು ಭಾಗವಹಿಸಿದ್ದು ಮಹಿಳೆಯರಿಗೆ ಸಂಬಂಧಿಸಿದ 12 ಗಂಭೀರ ವಿಷಯಗಳನ್ನು ಗುರುತಿಸಲಾಯಿತು. ಬಡತನ ಆರೋಗ್ಯ, ಹೆಣ್ಣು ಮಗು, ಮಾನವಹಕ್ಕು ಮತ್ತು ಮಹಿಳೆ, ಮಹಿಳೆಯರ ಅಭಿವೃದ್ಧಿ ಇವೆಲ್ಲದರಲ್ಲಿ ಲಿಂಗಸಮಾನತೆಯನ್ನು ಸ್ಥಾಪಿಸುವ ಬಗ್ಗೆ ಸರ್ವಾನುಮತದ ತಿರ್ಮಾನ.
4. 2001 ನೇ ವರ್ಷವನ್ನು ಮಹಿಳಾ ಸಶಕ್ತಿಕರಣ ವರ್ಷವೆಂದು ಘೋಷಿಸಲಾಯಿತು.

ಸ್ತ್ರೀ ಸಶಕ್ತೀಕರಣದ ಕಾರ್ಯತಂತ್ರ ಮತ್ತು ಅನುಷ್ಠಾನ:

1. ಸ್ತ್ರೀಯರು ರಾಜಕೀಯ ಸಹಭಾಗಿತ್ವ ಪಡೆಯಲು ಕನಿಷ್ಟ 35% ರಷ್ಟು ಸ್ಥಾನಗಳನ್ನು ಮೀಸಲಿಡಬೇಕು.
2. ಆರ್ಥಿಕರಂಗದಲ್ಲಿ ಆದಾಯ ನೀಡುವಂತಹ ಹೊಸ ಹೊಸ ಯೋಜನೆಗಳ ಅನುಷ್ಠಾನ (IRDP, JRY, TRYSEM, SGSRY, SGSY, NREGS, ಸ್ವ-ಶಕ್ತಿ, ಸ್ತ್ರೀ-ಶಕ್ತಿ) ಇತ್ಯಾದಿ.
3. ಸಾಮಾಜಿಕ ರಂಗದಲ್ಲಿ ಸ್ತ್ರೀಯರ ಸಾಕ್ಷರತೆಯ ಪ್ರಮಾಣವನ್ನು ಹೆಚ್ಚಿಸಿ ಸ್ವಾವಲಂಬಿ ಜೀವನಕ್ಕೆ ಅಣಿಮಾಡುವುದು.
4. ದೌರ್ಜನ್ಯಗಳನ್ನು ತಡೆಯುವುದು.
5. ಹೆಣ್ಣು ಮಕ್ಕಳ ವಿರುದ್ಧ ತಾರತಮ್ಮ ನೀತಿಯನ್ನು ಕೊನೆಗೊಳಿಸುವುದು.
6. ಪ್ರಸಾರ ಮಾಧ್ಯಮಗಳ ಪಾತ್ರದಲ್ಲಿ ಪುನರ ಸುಧಾರಣೆ ತರುವುದು.
7. ಸ್ತ್ರೀಯರಿಗೆ ಮಾನವಹಕ್ಕುಗಳ, ಮೂಲ ಭೂತಹಕ್ಕುಗಳ ಭರವಸೆ ನೀಡುವುದು.
8. ಮಹಿಳಾ ವಿಷಯಗಳಿಗೆ ಸಂಬಂಧಿಸಿದಂತೆ ಲಿಂಗ ಸಂವೇದನೆ ಜಾಗೃತಿ ನೀಡುವುದು.
9. ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹಿಳೆಯರಿಗೆ ಭಾಗವಹಿಸಲು ಅವಕಾಶ ನೀಡುವುದು.
10. ತಿರ್ಮಾನ ತೆಗೆದುಕೊಳ್ಳುವ ಸ್ಥಾನದಲ್ಲಿ ಮಹಿಳೆಯರು ಇರುವಂತೆ ನೋಡಿಕೊಳ್ಳುವುದು.

ಸಬಲೀಕರಣವು ಈ ಕೆಳಗಿನ ಸಂಗತಿಗಳನ್ನು ಒಳಗೊಂಡಿದೆ:

1. ಮಹಿಳೆಯರಿಗೆ ಪರವಾದ ನಿಲುವನ್ನು ಬಹಿರಂಗವಾಗಿ ಘೋಷಿಸುವುದು.

2. ಲಿಂಗಸಂಬಂಧಗಳನ್ನು ಸಾಮಾಜಿಕವಾಗಿ ಕಟ್ಟಿಕೊಂಡ ಸಂಗತಿಗಳೆಂದು ಪ್ರತಿಪಾದಿಸುವುದು.
3. ಲಿಂಗಸಂಬಂಧಗಳನ್ನು ಬದಲಾಯಿಸುವುದು ಸಾಧ್ಯ ಎನ್ನುವುದನ್ನು ನಂಬುವುದು.
4. ಲಿಂಗಸಂಬಂಧಗಳನ್ನು ಕುರಿತಂತೆ ಪರ್ಯಾಯ ಸಂಕಥೆಗಳನ್ನು ಕಟ್ಟುವುದು.
5. ಮಹಿಳೆಯರ ಸ್ಥಿತಿಗತಿ ಮತ್ತು ಸ್ಥಾನಮಾನಗಳನ್ನು ವಿಶ್ಲೇಷಿಸುವುದು. ಸಬಲೀಕರಣವು ಮುಖ್ಯವಾಗಿ ಈ ಕೆಳಕಂಡ ನೆಲೆಯಲ್ಲಿ ಕೆಲಸ ಮಾಡುತ್ತದೆ.
    - ಮಹಿಳೆಯರು ತಮ್ಮ ಸ್ಥಿತಿಯನ್ನು ಗುರುತಿಸಿಕೊಳ್ಳುವುದು.
    - ತನ್ನ ಅಧೀನ ಸ್ಥಿತಿಗೆ ಕಾರಣವಾದ ಸಂಗತಿಗಳನ್ನು ಅರಿತುಕೊಳ್ಳುವುದು.
    - ಸ್ವಾಭಿಮಾನ ಭರವಸೆ, ಸ್ವಾಯುತ್ತತೆ ಗುಣಗಳನ್ನು ಬೆಳೆಸಿಕೊಳ್ಳುವುದು.
    - ಸ್ವತಂತ್ರವಾಗಿ ಬದುಕನ್ನು ನಡೆಸುವ ತನ್ನ ಬದುಕನ್ನು ಕಟ್ಟುವ ಸುಸ್ಥಿತಿಯಲ್ಲಿಟ್ಟು ಕೊಳ್ಳುವ ಭಾವನೆಯನ್ನು ಬೆಳೆಸಿಕೊಳ್ಳುವುದು.

ಸಬಲೀಕರಣವೆಂದರೆ ಅಧಿಕಾರದ ಅಸಮ ಹಂಚಿಕೆಯನ್ನು ಅರಿತು ಕೊಳ್ಳುವದು ಮತ್ತು ಅದನ್ನು ಬದಲಾಯಿಸಲು ಪ್ರಯತ್ನಿಸುವುದು. ಅಸಮಸ್ಥಿತಿಯನ್ನು ಪ್ರಶ್ನಿಸುವುದು. ಸಬಲೀಕರಣದ ಮುಖ್ಯ ನೆಲೆಯಾಗಿದೆ. ಇದರಲ್ಲಿ ಎರಡು ಪ್ರಕಾರದ ನೆಲೆಗಳಿವೆ. 1. ವ್ಯಕ್ತಿಗತ ನೆಲೆ, 2. ಸಂಘಟಿತ ನೆಲೆ, ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ ಪಾತ್ರಗಳ ಬದಲಾವಣೆಯೇ ಸಬಲೀಕರಣ ಮಹಿಳೆಯರನ್ನು ಕುರಿತಂತೆ ಮಹಿಳೆಯರ ಚಿಂತನೆ ಮತ್ತು ಬದಲಾವಣೆ, ಇದೊಂದು ಆತ್ಮಜಾಗೃತಿಯ ಪ್ರಕ್ರಿಯಯಾಗಿದೆ. ಸಬಲೀಕರಣ ಪ್ರಕ್ರಿಯೆಯು ಈ ಕೆಳಕಂಡ ಬದಲಾವಣೆಯನ್ನು ತರುತ್ತದೆಂದು ಭಾವಿಸಲಾಗಿದೆ.

1. ಸುರಕ್ಷತೆ, ಸುಬದ್ರತೆಯ ಭಾವನೆ, ಭವಿಷ್ಯದ ಕಡೆ ಮುನ್ನೋಟ.
2. ಬದುಕನ್ನು ಕಟ್ಟುವ ಸಾಮರ್ಥ.
3. ಸಾಮಾಜಿಕ ಕ್ಷೇತ್ರದಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸುವುದು.
4. ಕುಟುಂಬದ ತೀರ್ಮಾನ – ನಿರ್ಣಯ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅಧಿಕಾರ ಚಲಾವಣೆ.

2.2.3 ಭಾರತ ದೇಶದಲ್ಲಿ ಮಹಿಳಾ ಸಬಲೀಕರಣ:

ತಾತ್ವಿಕವಾಗಿ ವಿಚಾರ ಮಾಡಿದರೆ ಪುರುಷರೊಡನೆ ಸಮನಾಸ್ಕಂಧರಾಗಿ ಸಕಲ ಹಕ್ಕು ಬಾಧ್ಯತೆಗಳನ್ನು ಮಹಿಳೆಯರು ಅನುಭೋಗಿಸುವುದೇ ಮಹಿಳಾ ಸಬಲೀಕರಣವೆಂದು

ಅರ್ಥೈಸಬಹುದು. ಗಂಡಸರಿಗೆ ಆದ ಕೆಲವೊಂದು ದೈಹಿಕ ಮತ್ತು ಮಾನಸಿಕ ಅನುಕೂಲಗಳು ದೈವದತ್ತವಾಗಿ ದೊರಕಿರುವುದರಿಂದ ಅವರು ಮಹಿಳೆಯರ ಮೇಲೆ ದಬ್ಬಾಳಿಕೆ ನಡೆಸಬಹುದು ಸಹಜವಾಗಿದೆ. ಅದಕ್ಕಾಗಿ ಸಬಲೀಕರಣವನ್ನು ನಾವು ಪರಿಸ್ಥಿತಿಗೆ ಅನುಗುಣವಾಗಿ ವಿಸ್ತರಿಸಬೇಕಾಗುತ್ತದೆ. ಇದೇ ರೀತಿಯಲ್ಲಿ ಸಬಲೀಕರಣದ ವ್ಯಾಖ್ಯಾನವನ್ನು ದೇಶ ವಿದೇಶಗಳ ಹಿನ್ನೆಲೆಯನ್ನು ಇಟ್ಟುಕೊಂಡು ಪರಿಶೀಲಿಸಬೇಕಾಗುತ್ತದೆ.

ಪಾಶ್ಚಾತ್ಯ ದೇಶಗಳಲ್ಲಿ ಕುಟುಂಬ ಮತ್ತು ಮದುವೆಯಂಥ ಬಂಧನಗಳು ಬಹಳ ಮುಕ್ತವಾಗಿವೆ. ಕಟ್ಟುನಿಟ್ಟಾದ ಬಾಂಧವ್ಯಗಳು ಅಲ್ಲಿಲ್ಲ. ಪಶ್ಚಿಮದ ಮಹಿಳೆ ತನಗೆ ಅಗತ್ಯವೆನಿಸಿದಾಗ ವಿಚ್ಛೇದನ ಪಡೆದು ಮರುಮದುವೆಯಾಗಬಹುದು. ಆದರೆ ಭಾರತದಂಥ ಸಂಪ್ರದಾಯಸ್ಥ ದೇಶದಲ್ಲಿ ಮದುವೆಯೆಂದರೆ ಪವಿತ್ರ ಬಂಧನ. ಒಮ್ಮೆ ನಡೆದು ಹೋದರೆ ಅದನ್ನು ಮಾರ್ಪಡಿಸಲು ಹೆಣ್ಣಿಗೆ ಸಾಧ್ಯವಿಲ್ಲದ ಮಾತು. ಗಂಡನು ಹಿಂಸಿಸಿದರೂ ಅವಹೇಳನ ಮಾಡಿದರೂ ಅವಮಾನಿಸಿದರೂ ಅವಳಿಗೆ ಸ್ವತಂತ್ರ ಬದುಕಿನ ಆಯ್ಕೆ ಇರುವುದಿಲ್ಲ. ಹೆತ್ತವರೂ ಎಲ್ಲವನ್ನೂ ಸಹಿಸಲೆಂದೇ ಬಂದಿರುವೇ ಸಹಿಸಿಕೊ ಎಂಬ ಉಪದೇಶವನ್ನೇ ಹಿತವಾಗಿ ಹೇರುತ್ತಾರೆ.

ಭಾರತದಲ್ಲಿ ಮಹಿಳಾ ಸಬಲೀಕರಣವೆಂದರೆ ಅವಳ ಸ್ಥಾನಮಾನದಲ್ಲಿ ಗುಣಾತ್ಮಕ ಮತ್ತು ಪ್ರಮಾಣಾತ್ಮಕ ಬದಲಾವಣೆ ತರುವುದೇ ಆಗಿದೆ. ಮಹಿಳೆಯ ಶಿಕ್ಷಣ ಆರೋಗ್ಯ ಮತ್ತು ಉದ್ಯೋಗ ಪ್ರಾಪ್ತಿ ವಿಷಯಗಳಲ್ಲಿ ಔದಾರ್ಯ ತೋರುವುದಷ್ಟೇ ಅಲ್ಲ ಕಾರ್ಯಗತವಾದರೆ ಮಾತ್ರ ಇದನ್ನು ಮಹಿಳಾ ಸಬಲೀಕರಣ ಎನ್ನಬಹುದು.

ಮಹಿಳಾ ಸಬಲೀಕರಣಕ್ಕೆ ಕೇವಲ ಮಹಿಳೆಯರಷ್ಟೇ ಮನಸು ಮಾಡಿದರೆ ಸಾಲದು. ಸಮಾಜ, ಕುಟುಂಬ ಹಾಗೂ ಪರಿಸರ ಸಬಲೀಕರಣದ ಹೊಸ ದೃಷ್ಟಿಕೋನ ಹೊಂದುವುದು ಅವಶ್ಯವಾಗಿದೆ ಎಂಬುದೂ ಗಮನೀಯ ಅಂಶವಾಗಿದೆ.

ಮಹಿಳಾ ಸಬಲೀಕರಣ ಜಾರಿಗೆ ತರಲು ಕಾರ್ಯಸೂಚಿಗಳು ಹಾಗೂ ಸಲಹೆಗಳು:

"ಮಹಿಳಾ ಸಬಲೀಕರಣ ಅಗತ್ಯವನ್ನು ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ಅರ್ಥೈಸಿದ್ದಾರೆ. ಜಿ.ಕೆ.ಪಿಳ್ಳೈ, 1990 ಅವರು ಮಹಿಳಾ ಸಬಲೀಕರಣಕ್ಕೆ ಈ ಕೆಳಗಿನ ಕಾರ್ಯಸೂಚಿಗಳನ್ನು ತಿಳಿಸಿರುವರು.

1. ಹೆಚ್ಚಿನ ಸಾಕ್ಷರತೆ ಮತ್ತು ಶಿಕ್ಷಣ
2. ಮಹಿಳೆಯರ ಮತ್ತು ಮಕ್ಕಳ ಆರೋಗ್ಯದಲ್ಲಿ ಸುಧಾರಣೆ
3. ವಿಲಂಬಿತ ವಿವಾಹ ಪದ್ಧತಿ
4. ಆಧುನಿಕ ಉದ್ಯಮಗಳಲ್ಲಿ ಲಿಂಗಭೇದವಿಲ್ಲದ ಭಾಗವಹಿಸುವಿಕೆ

5. ಅಗತ್ಯದ ಆರ್ಥಿಕ ಮತ್ತು ಸೇವಾ ಭದ್ರತೆ

6. ಅಧಿಕಾರ ಚಲಾಯಿಸಲು ಅಗತ್ಯವಿರುವ ಪ್ರಗತಿಶೀಲ ದೃಷ್ಟಿಕೋನ

7. ಹಕ್ಕುಗಳ ಬಗೆಗಿನ ಜಾಗೃತಿ

8. ಮಹಿಳೆಯರಲ್ಲಿ ಬೇಕಾದ ಸ್ವಾವಲಂಬನೆ, ಆತ್ಮಗೌರವ ಮತ್ತು ಆತ್ಮಾಭಿಮಾನ ಈ ಕಾರ್ಯಸೂಚಿಗಳನ್ನು ನಾವು ಸಾರ್ವತ್ರೀಕರಣಗೊಳಿಸದೇ ಗ್ರಾಮ ಪಟ್ಟಣ ಬುಡಕಟ್ಟುಜನ ಮೊದಲಾದವುಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಅನ್ವಯಿಸ ಬೇಕಾಗುತ್ತದೆ"[9].

ನಗರ ಪ್ರದೇಶಗಳಲ್ಲಿ ಮಹಿಳೆಯರಿಗೆ ಸುಲಭವಾಗಿ ಶಿಕ್ಷಣ, ಉದ್ಯೋಗ ಸಮಾಜ ಸೇವೆಯ ಅವಕಾಶಗಳು ದೊರೆಯಬಹುದಾಗಿದೆ. ಅವನ್ನು ಗ್ರಾಮಾಂತರ ಪ್ರದೇಶದಲ್ಲಿ ನಿರಿಕ್ಷಿಸಲಾಗುವುದಿಲ್ಲ.

ನಂಜುಂಡಪ್ಪ ಆಯೋಗ ಎಂಬ ಉನ್ನತ ಅಧಿಕಾರಿಗಳ ಸಮಿತಿಯು ತನ್ನ ಸುಪ್ರಸಿದ್ಧ ವರದಿಯಲ್ಲಿ 2002 ಮಹಿಳಾ ಸಬಲೀಕರಣಕ್ಕೆ ಈ ಕೆಳಗಿನ ಕಾರ್ಯಸೂಚಿಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದೆ.

1. ಉತ್ಪನ್ನಗಳು ಜಮೀನು ಸಂಪನ್ಮೂಲಗಳ ಮೇಲಿನ ನಿಯಂತ್ರಣ ಸಾಮರ್ಥ್ಯ
2. ಆರ್ಥಿಕ ಪಾಲುಗಾರಿಕೆ
3. ಸಾರ್ವಜನಿಕ ಮೂಲಗಳ ಹತೋಟಿ
4. ದೈಹಿಕ ಸಾಮರ್ಥ್ಯಗಳ ಬಳಕೆ
5. ರಾಜಕೀಯ ಸ್ಥಾನಗಳ ಮೇಲಿನ ಹಕ್ಕು ಚಲಾವಣೆ
6. ಕಾನೂನಿನ ಪರಿಜ್ಞಾನ ಮತ್ತು ಅಡೆತಡೆಗಳನ್ನು ನಿವಾರಿಸುವ ಶಕ್ತಿ

"ಬಿಶ್ವಾಸ ಮತ್ತು ಕಬೀರ್ 2004 ಮಹಿಳಾ ಸಬಲೀಕರಣಕ್ಕೆ 11 ಅಂಶಗಳ ಅಳತೆಗೋಲನ್ನು ನಿರ್ಧರಿಸಿರುವರು.

1. ಚಲನಶೀಲ
2. ನಿರ್ಣಾಯಕತ್ವ
3. ಸ್ವಯಂ ಅಟಾನಮಿ
4. ಕೌಟುಂಬಿಕ ಆಸ್ತಿ ಮೇಲಿನ ಒಡೆತನ
5. ದಬ್ಬಾಳಿಕೆ ವಿರೋಧ ಶಕ್ತಿ
6. ಅಭಿವೃದ್ಧಿ ಯೋಜನೆಗಳಲ್ಲಿ ಸಮಾನವಾಗಿ ಭಾಗವಹಿಸುವಿಕೆ
7. ರಾಜಕೀಯ ಮತ್ತು ಕಾನೂನಿನ ಪರಿಜ್ಞಾನ

8. ಕೌಟುಂಬಿಕ ಖರ್ಚುಗಳಲ್ಲಿ ಸಮಾನ ಹಂಚಿಕೆ

9. ಆದಾಯ ಹೆಚ್ಚಿಸುವ ಹಕ್ಕು

10. ಮಾಧ್ಯಮಗಳ ಮಾಹಿತಿಗಳನ್ನು ಗ್ರಹಿಸುವುದು

11. ಸಾಮಾಜಿಕ ಚಟುವಟಿಕೆಗಳಲ್ಲಿ ಪಾಲ್ಗೋಳ್ಳುವುದು.

ಸಾಮಾನ್ಯವಾಗಿ ಗ್ರಾಮೀಣ ಮಹಿಳೆಯರ ಬದುಕಿನೊಂದಿಗೆ ಸಾಂಸ್ಕೃತಿಕ ಮೌಲ್ಯಗಳನ್ನು ಗಮನದಲ್ಲಿರಿಸಿಕೊಂಡು ಈ ಪ್ರಬಂಧದಲ್ಲಿ ಗ್ರಾಮೀಣ ಮಹಿಳೆಯ ಸಬಲೀಕರಣ ವಿಷಯವಾಗಿ ಕೆಲವು ವಿಚಾರಗಳನ್ನು ಅಭಿವ್ಯಕ್ತಪಡಿಸಲಾಗಿದೆ.

ಸಲಹೆಗಳನ್ನು ಈ ಕೆಳಗಿನಂತೆ ನೀಡಲಾಗಿದೆ:

1. ಮದುವೆ ಮತ್ತು ಕುಟುಂಬದ ಬಗೆಗಿನ ದೃಷ್ಟಿಕೋನದಲ್ಲಿ ಬದಲಾವಣೆ.
2. ಸಾಕ್ಷರತೆ ಮತ್ತು ಶಿಕ್ಷಣ ಹಾಗೂ ಸ್ವ-ಉದ್ಯೋಗ ಪ್ರಾಪ್ತಿ ಬಗೆಗಿನ ದೃಷ್ಟಿಕೋನದಲ್ಲಿ ಬದಲಾವಣೆ
3. ಕೌಟುಂಬಿಕ ಸಮಸ್ಯೆಗಳ ನಿವಾರಣೆಯಲ್ಲಿ ನಿರ್ಣಯಾತ್ಮಕ ದೃಷ್ಟಿಕೋನ ಬರಬೇಕು.
4. ಕುಟುಂಬ ಮತ್ತು ಸಮಾಜದಲ್ಲಿ ಪ್ರತಿಷ್ಠೆ ಪ್ರಾಪ್ತಿಯ ದೃಷ್ಠಿಕೋನ
5. ಗೃಹ ನಿರ್ವಹಣೆ, ಆರೋಗ್ಯ ಮತ್ತು ನೈರ್ಮಲ್ಯದ ಬಗೆಗಿನ ದೃಷ್ಟಿಕೋನದಲ್ಲಿ ಬದಲಾವಣೆ.
6. ಮಟ್ಕಾ ಕೇಂದ್ರ , ಜೂಜು ಕಟ್ಟೆಗಳ ನಿರ್ನಾಮ ಮತ್ತು ಪಾನ ನಿರೋಧವನ್ನು ವಿರೋಧಿಸಿ ಸಮೂಹ ಪ್ರಯತ್ನ ಸಾಗಬೇಕು.

ಈ ಅಧ್ಯಯನದಲ್ಲಿ ಸಬಲೀಕರಣವು ಈ ಕೆಳಗಿನ ಕೆಲವು ಅಂಶಗಳೊಂದಿಗೆ ಪುಷ್ಟೀಕರಿಸುತ್ತದೆ.

1. ಸ್ವ-ಉದ್ಯೋಗ ಸಾಧನೆ.
2. ಆರೋಗ್ಯ ಸೇವೆಯ ಸದ್ಬಳಕೆ.
3. ಶಿಕ್ಷಣ ಪ್ರಾಪ್ತಿ.
4. ಸ್ವ-ಸಹಾಯ ಗುಂಪುಗಳ ಪಾತ್ರ ಹಾಗೂ
5. ಪಂಚಾಯತ್ ರಾಜ್ಯದ ಮಹತ್ವ

ಗ್ರಾಮೀಣ ಮಹಿಳೆಯರ ಬದುಕು ಮತ್ತು ಸಬಲೀಕರಣ ಎರಡು ನೋಡಿದಾಗ ಅವರು ಕೌಟುಂಬಿಕ ನಿರ್ಧಾರಗಳು. ಶಿಕ್ಷಣ ಉದ್ದೇಶ ತಮ್ಮ ಅರೋಗ್ಯದೆಡೆ ಗಮನ ಸ್ವ-ಸಹಾಯ ಗುಂಪಿನ ಮುಖಾಂತರ ಅರಿವು ಜಾಗೃತಿ ಹೊಂದಿ ಸಂಪನ್ಮೂಲ ವ್ಯಕ್ತಿಯಾಗಿ ರೂಪಗೊಂಡು

ತಮಗಿರುವ ಮಿಸಲಾತಿಯ ಅನುಕೂಲವನ್ನು ಪಡೆದು ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ವ್ಯಕ್ತಿತ್ವವನ್ನು ಸ್ಥಾನಮಾನವನ್ನು ಗುರುತಿಸಿಕೊಳ್ಳುವ ಸಾಮರ್ಥ್ಯ ಬಂದಾಗ ಮಾತ್ರ ಸಬಲಳಾಗುತ್ತಿದ್ದಾಳೆ. ಆಗುವ ಪ್ರಕ್ರಿಯೆಯಂತು ಆರಂಭವಾಗಿದೆಯನ್ನುವ ವಿಷಯ ಈ ಅಧ್ಯಾಯದಲ್ಲಿ ಬೆಳಕನ್ನು ಚೆಲ್ಲುತ್ತದೆ"[10].

2.3 ಸ್ತ್ರೀವಾದಿ ಸೈದ್ಧಾಂತಿಕ ಹಿನ್ನೆಲ್ಲೆ:

1. ಸ್ತ್ರೀವಾದದ ಹಿನ್ನಲೆ.
2. ಸ್ತ್ರೀವಾದದ ಅರ್ಥ ಮತ್ತು ವ್ಯಾಖ್ಯೆ.
3. ಸ್ತ್ರೀವಾದದ ತತ್ವಗಳು
4. ಸ್ತ್ರೀವಾದದ ನಿಲುವುಗಳು ಮತ್ತು ಪ್ರಕಾರಗಳು.
5. ಗ್ರಾಮೀಣ ಮಹಿಳೆಗೆ ಸಂಬಂಧಪಟ್ಟಂತೆ ಸ್ತ್ರೀವಾದದ ನಿಲುವು.

2.3.1 ಸ್ತ್ರೀವಾದ ಎಂದರೇನು?

ಸ್ತ್ರೀವಾದವೆಂಬುವುದು ಮಹಿಳಾ ಪರವಾದ ಒಂದು ಗಂಭೀರ ಚಿಂತನೆ. ಅದು ಮಹಿಳಾ ಶೋಷಣೆಯ ವಿರುದ್ಧ ಹಾಗೂ ಮಹಿಳೆಯರ ಸ್ಥಾನಮಾನಗಳನ್ನು ಉತ್ತಮ ಪಡಿಸಲು ನಡೆಸಲಾಗುತ್ತಿರುವ ಹೋರಾಟವು ಹೌದು, ಸ್ತ್ರೀಯರನ್ನು ಶೋಷಿಸುವ, ಹಿಂಸಿಸುವ ಮತ್ತು ಅವಹೇಳನಗೊಳಿಸುವ ವರ್ಗವನ್ನು ವಿರೋಧಿಸುವಲ್ಲಿ ನ್ಯಾಯಬದ್ಧ ಹೋರಾಟ ನಡೆಸುವತ್ತ ಇದು ಗಮನ ಹರಿಸುತ್ತಿದೆ. ಇತ್ತೀಚಿನ ದಿನಗಳಲ್ಲಿ ಸ್ತ್ರೀವಾದ ತನ್ನದೆಯಾದರೀತಿಯಲ್ಲಿ ಮಹತ್ವವನ್ನು ಪಡೆದುಕೊಂಡಿದೆ. ಸ್ತ್ರೀವಾದವು ಮುಖ್ಯವಾಗಿ ಕ್ರಾಂತಿಕಾರಕ ಬದಲಾವಣೆಗಳನ್ನು ಕಂಡ ಪಾಶ್ಚಿಮಾತ್ಯ ಸಮಾಜದ ಕೊಡುಗೆಯೆಂಬ ಅಭಿಪ್ರಾಯ ಒಂದೆಡೆಯಿದ್ದರೆ ಇನ್ನೊಂದಡೆ ಭಾರತದಲ್ಲಿಯೋ ಸ್ತ್ರೀವಾದ ಚಳುವಳಿಯ ಕುರಿತಾದ ವಿಚಾರಿಸುವ ಬುದ್ಧಿಜೀವಿಗಳಿರುವುದನ್ನು ನಾವು ಮರೆಯುವಂತಿಲ್ಲ ಎಂದು ತಜ್ಞರ ಅಭಿಪ್ರಾಯವಿದೆ.

ಸ್ತ್ರೀವಾದಿಗಳೆಂದರೆ, ಕೇವಲ ಸ್ತ್ರೀಯರೇ ಅಲ್ಲ ಅಥವಾ ಕೇವಲ ಪುರುಷರೆ ಅಲ್ಲ ಇಬ್ಬರು ಚಳುವಳಿಯಲ್ಲಿ ಪಾಲುದಾರರಾಗಿದ್ದಾರೆ. ಸ್ತ್ರೀವಾದವೆಂದರೆ ಪುರುಷರ ವಿರೋಧವಾದವಲ್ಲ ಎಂಬ ಸತ್ಯವನ್ನು ಅರಿತುಕೊಳ್ಳಬೇಕಾಗಿದೆ. ಸ್ತ್ರೀವಾದವು ಗುರುತಿಸುವಂತೆ ಸ್ತ್ರೀಪರವಾದ ವಿಚಾರಗಳ ಬಗೆಗೆ ವಿಶೇಷವಾದ ಕಾಳಜಿ ಹೊಂದಿದ್ದು ಪ್ರತಿಸ್ಪಂದಿಸುವವರನ್ನು ಸ್ತ್ರೀವಾದಿಗಳೆಂದು ಪರಿಗಣಿಸಬಹುದು. ಈ ವ್ಯಾಖ್ಯಾನದಂತೆ ಹೆಣ್ಣಿನ ಸ್ವಾತಂತ್ರ್ಯ ಸ್ವಾಭಿಮಾನ ಹಕ್ಕುಗಳು ಮತ್ತು ಅಸ್ತಿತ್ವಗಳನ್ನು ಪ್ರಶ್ನಿಸುವ ವ್ಯಕ್ತಿಗಳು ಹೆಂಗಸರೆ ಆಗಿದ್ದರೂ ಅವರು ಸ್ತ್ರೀವಾದಿಗಳಲ್ಲ.

ಸ್ತ್ರೀಪರ ಸಂವೇದನೆ ಕಾಳಜಿ ಹಾಗೂ ಚಿಂತನೆಯಿರುವ ವಿಚಾರಗಳಿಗೆ ಪೂರಕವಾಗಿ ಸ್ಪಂದಿಸುತ್ತಾ ಸ್ತ್ರೀಪರ ವಿಚಾರಗಳ ಬಲವಾದ ಸಮರ್ಥಿಕರು ಪುರುಷರಾಗಿದ್ದರೆ ಅವರನ್ನು ಸ್ತ್ರೀವಾದಿಗಳು ಎನ್ನಬಹುದು. ಸ್ತ್ರೀವಾದವು ಸೈದ್ಧಾಂತಿಕ ವಿಚಾರದ ಪರಿಕಲ್ಪನೆಯಾಗಿದೆ. ಪ್ರಯೋಗಾತ್ಮಕವಾಗಿ ಮಾನಸಿಕ ತಯಾರಿಕೆ ಮಾಡುವ ನಿಲುವನ್ನು ಹೊಂದಿದೆ. ಇಲ್ಲಿ ಐಡಿಯಾಲೋಜಿಗೆ ಪ್ರಥಮ ಆದ್ಯತೆ ಕೊಡಲಾಗಿದೆ. ಇಲ್ಲಿ ಲಿಂಗವೆಂದರೆ ಸ್ತ್ರೀಲಿಂಗ ಮತ್ತು ಪುಲ್ಲಿಂಗ.

ಸ್ತ್ರೀವಾದಿ ಚಳುವಳಿಗಳ ಮುಖ್ಯ ಉದ್ದೇಶ :

1. ಲಿಂಗ ಸಮಾನತೆಯನ್ನು ಪತ್ತೆಹಚ್ಚುವುದು.
2. ಸಮಾನತೆಗಾಗಿ ಹೋರಾಟ ಮಾಡುವುದು.

ಉದಾ: ಆಧುನಿಕ ಭಾರತೀಯ ಸಮಾಜವು ವಿಜ್ಞಾನ ಮತ್ತು ತಂತ್ರಜ್ಞಾನದ ಕ್ಷೇತ್ರದಲ್ಲಿ ಎಷ್ಟೊಂದು ಸಾಧನೆಗಳನ್ನು ಮಾಡಿ ಭೂಮಿಯ ಮೇಲೆ ವಾಸ ಮಾಡುವ ಮಾನವರು ಚಂದ್ರಯಾನ ಮಾಡುತ್ತಿದ್ದರೂ ಮಹಿಳೆಯರನ್ನು ಪುರುಷರು ತಮ್ಮ ಸರಿಸಮಾನವಾದ ದೃಷ್ಟಿಕೋನದಿಂದ ಕಾಣುತ್ತಿಲ್ಲ. ತಾವು ಆಳವರು ಮಹಿಳೆಯರು ತಮ್ಮ ಅಧೀನದಲ್ಲಿ ಆಳಿಸಿಕೊಳ್ಳುವವರು ಎಂಬ ಅಹಂನಲ್ಲಿಯೇ ಸಮಾಜವು ಇಂದಿನವರೆಗೂ ಸಾಗಿರುವುದು ಮಾತ್ರ ಸತ್ಯ.

ಮಹಿಳೆಯರ ಬದುಕಿನ ವಿವಿಧ ಹಂತಗಳಲ್ಲಿ ಸಾಮಾಜಿಕ ವ್ಯವಸ್ಥೆ, ಲಿಂಗ ತಾರತಮ್ಯವನ್ನು ಹೇಗೆ ಮಾಡುತ್ತಿದೆಂದು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಲು ಸಾಧ್ಯವಾಗುವುದು.

1. ಹೆಣ್ಣು ಹುಟ್ಟಿದಾಗ ಸಿಹಿ ಹಂಚುವಲ್ಲಿಯೂ ತಾರತಮ್ಯ ಮಾಡುತ್ತಾರೆ. ಹೆಣ್ಣು ಮಗು ಹುಟ್ಟಿದ್ದರೆ ಜಿಲೇಬಿ, ಗಂಡು ಹುಟ್ಟಿದ್ದರೆ ಪೇಡಾ, ಗಂಡು ಮಗು ಹೆತ್ತ ತಾಯಿಯನ್ನು ಸ್ವಲ್ಪ ಮಟ್ಟಿನ ಗೌರವದಿಂದ ಕಾಣುತ್ತಾರೆ. ಹೆಣ್ಣು ಮಗು ಹುಟ್ಟಿಯೆಂದು ಗೊತ್ತಾದರೆ ಎಷ್ಟೋ ಸಾರಿ ತಂದೆಯಾದವನು ಮಗುವಿನ ಮುಖ ಸಹ ನೋಡಲು ಬರುವುದಿಲ್ಲ. ಮತ್ತು ಹೆಂಡ್ತಿಯನ್ನೇ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುತ್ತಾನೆ. ಇದು ಎಂತಹ ವಿಪರ್ಯಾಸ.
2. ಮಗುವಿನ ಆಟ–ಪಾಠ, ಶಿಕ್ಷಣ, ಆರೋಗ್ಯ, ಬಟ್ಟೆ–ಬರೆ, ಆಹಾರ ಮುಂತಾದ ವಿಷಯಗಳಲ್ಲಿ ಗಂಡಿಗೆ ಹೆಚ್ಚಿನ ಆದ್ಯತೆ ನೀಡುವುದು, ಹೆಣ್ಣಿಗೆ ಕಡಿಮೆ ಆದ್ಯತೆ ನೀಡುವುದು ಸಹಜವಾಗಿದೆ. ಪ್ರತಿಯೊಂದರಲ್ಲಿಯೂ ಹೆಣ್ಣಿಗೆ ಅನೇಕ ರೀತಿಯ ನಿರ್ಬಂದನೆಗಳಿವೆ. ಗಂಡಿಗೆ ಯಾವ ನಿರ್ಬಂಧನೆಗಳು ಇಲ್ಲ. ಉದಾ: ಹೆಣ್ಣು ಮಗಳು ಹೆಚ್ಚಿಗೆ ನಗಬಾರದು, ಹೆಚ್ಚಿಗೆ ಊಟ ಮಾಡಬಾರದು, ಹೊರಗಡೆ ಗಂಡು ಬೀರಿಯಂತೆ ತಿರಗಾಡಬಾರದು.

ಮನೆಯ ಎಲ್ಲ ಕೆಲಸಗಳ ಜೊತೆಗೆ ಅಡುಗೆ ಕೆಲಸವನ್ನು ಅಚ್ಚು ಕಟ್ಟಾಗಿ ಮಾಡಬೇಕು. ಅಂದರೆ ಮಾತ್ರ ಗಂಡನ ಮನೆಯಲ್ಲಿ ಉತ್ತಮ ಗ್ರಹಿಣಿಯಾಗಿ ಬದುಕುತ್ತೀಯಾ ಎಂಬ ನೀತಿ ಪಾಠದೊಂದಿಗೆ ಆಕೆಯ ಸ್ವಾತಂತ್ರವನ್ನು ಕಿತ್ತಿಕೊಳ್ಳಲಾಗಿದೆ.

3. ಸಾಮಾನ್ಯ ಕೂಲಿಯಲ್ಲಿ ಪರುಷರಿಗೆ ಹೆಚ್ಚಿನ ಕೂಲಿ ಮಹಿಳೆಯರಿಗೆ ಕಡಿಮೆ ಕೂಲಿ ನೀಡಲಾಗುತ್ತದೆ.

4. ಭಾರತೀಯ ವಿವಾಹವು ಒಂದು ಪವಿತ್ರವಾದ ಬಂಧನ. ಇಲ್ಲಿ ವಧುವಿಗೆ ವಿವಾಹದ ಸಂಕೇತವಾಗಿ ತಾಳಿ ಮತ್ತು ಕಾಲುಂಗುರು ತಾಳಿ ಹಾಕಲಾಗುತ್ತದೆ. ಆದರೆ ಪುರುಷನಿಗೆ ವಿವಾಹದ ಗುರುತೇನು? ಯಾವುದೇ ಗುರುತು ಇಲ್ಲ. ಸುಳ್ಳುಹೇಳಿ ಇನ್ನೊಂದು ಮದುವೆಯಾಗುವ ಸಾಧ್ಯತೆಯಿದೆ. ಸಮಾಜ, ಸರ್ಕಾರ, ಇದನ್ನು ಲಿಂಗ ಅಸಮಾನತೆಯೆಂದು ಗುರುತಿಸಿ ಇಬ್ಬರಿಗೂ ಮದುವೆಯಾದಿ ಗುರುತಾಗಿ ಏನಾದರೂ ಸಂಕೇತ ಮಾಡುವದು ಅತೀಅವಶ್ಯವಾಗಿದೆ. ಇತ್ತೀಚಿಗೆ ಎಂಗೇಜಮೆಂಟನಲ್ಲಿ ಒಂದು ಉಂಗುರು ಹಾಕುತ್ತಾರೆ. ಅದು ಕಡ್ಡಾಯವಾಗಿ ಗಂಡ ಸಾಯುವ ತನಕ ಧರಿಸಬೇಕೆಂದು ಕಡ್ಡಾಯದ ನಿಯಮವಿದೆ.

5. ತನ್ನದಲ್ಲದ ಗಂಡನ ಮನೆಯಲ್ಲಿ ಪ್ರತಿಯೊಂದು ಹಂತದಲ್ಲಿಯೂ ಮಹಿಳೆಯೇ ಎಲ್ಲರೂಡನೆ ಹೊಂದಿಕೊಳ್ಳಬೇಕೆಂಬ ಒತ್ತಾಯವಿದೆ. ಉಳಿದವರು ಆಕೆಗೆ ಹೊಂದಿಕೊಳ್ಳುವುದಿರಲಿ ಒಂದು ಪ್ರೀತಿಯ ಮಾತಾಡುವುದಿಲ್ಲ. ಸ್ವತಃ ಮದುವೆ ಮಾಡಿಕೊಂಡ ಗಂಡನೆ ಅವಳನ್ನು ಸೇವಕಿಯ ಸ್ಥಾನದಲ್ಲಿಯೇ ನೋಡುತ್ತಾನೆ ಇದೆಂಥ ವಿಪರ್ಯಾಸ.

6. ಹುಟ್ಟಿದ ಪ್ರತಿಯೊಂದು ಜೀವ ಒಂದಿಲ್ಲೊಂದು ದಿನ ಸಾಯಲೇಬೇಕು. ಹಾಗೆಯೇ ಕುಟುಂಬದಲ್ಲಿ ಗಂಡ ಸತ್ತು ಹೆಂಡತಿ ಮತ್ತು ಎರಡು ಮಕ್ಕಳಿವೆ ಅಂದುಕೊಳ್ಳಿ ಅವಾಗ ಸುತ್ತಮುತ್ತಲಿನವರ ಅಭಿಪ್ರಾಯ ಹೇಗಿರುತ್ತದೇ ಎಂದರೆ ಈ ಎರಡು ಮಕ್ಕಳಿಗೆ ತಗೊಂಡು ಹ್ಯಾಂಗ ಜೀವನ ಮಾಡಬೇಕು ಮಕ್ಕಳ ಉದ್ಧಾರಕೋಸ್ಕರ ನೀನು ಧೈರ್ಯ ತೆಗೆದುಕೊಳ್ಳಬೇಕಮ್ಮ ಇನ್ನು ನಿನಗೂ ಸಣ್ಣ ವಯಸ್ಸು ಹುಷಾರಾಗಿಬೇಕು. ಈ ಎಲ್ಲ ನೀತಿ ಪಾಠಗಳಲ್ಲಿ ಈಕೆಗೆ ಸಣ್ಣ ವಯಸ್ಸಿದೆ ಮರು ಮದುವೆಯ ವಿಚಾರ ಯಾರ ತಲೆಯಲ್ಲಿಯೂ ಸುಳಿಯುವುದಿಲ್ಲ. ಹಿಂದಿನ ಕಾಲದಿಂದಲೂ ಇಂದಿನವರೆಗೆ ನೋಡಿದರೂ ಮರು ಮದುವೆ ವಿಚಾರ ಮಾಡುವವರ ಸಂಖ್ಯೆ ಬಹಳ ಕಡಿಮೆ.

ಹೆಂಡತಿ ಸತ್ತು ಎರಡು ಮಕ್ಕಳಿದ್ದ ಗಂಡನಿದ್ದರೆ ಆತನಿಗೆ ನೀಡುವ ಉಪದೇಶ ಈ ರೀತಿಯಾಗಿ ಇರುತ್ತದೆ. "ಸತ್ತ ಹೋದಳು ಅವಳು, ಪಡೆದುಕೊಂಡು ಬಂದಿದ್ದೆ ಅಷ್ಟು, ನೀನು ಸಮಾಧಾನ ಮಾಡಿಕೋ, ಸಣ್ಣ ವಯಸ್ಸಿನ ಎರಡು ಮಕ್ಕಳಿವೆ ಅವರನ್ನು ಸಾಕಲು ನಿನಗೆ ಕಷ್ಟವಾಗುತ್ತದೆ. ಸಾದ್ಯವಾದರೆ ಅವಳ ತಂಗಿಯನ್ನೆ ಕೊಟ್ಟು ಮದುವೆ ಮಾಡಿದರೆ ಒಳ್ಳೆಯದು. ಕಳ್ಳು-ಬಳ್ಳಿಯ ಸಂಬಂಧವಾಗಿದ್ದರಿಂದ ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳುತ್ತಾಳೆ. ಒಂದು ವೇಳೆ ತಂಗಿಯಿಲ್ಲವಾದರೆ ಬೇರೆ ಹುಡುಗಿಯ ಜೊತೆಗೆ ಮದುವೆಮಾಡಬೇಕು. ಮನೆಯ ಕೆಲಸಕ್ಕೆ ಹೆಣ್ಣು ಮಗಳು ಬೇಕಾಗುತ್ತದೆ. ಪಾಪ! ಪುರುಷನಿಗೆ ಅದೆಲ್ಲ ಹ್ಯಾಗ್ ಮಾಡಿಲಿಕ್ಕೆ ಆಗುತ್ತೇ? ಅವನಿಗೇನು ಅಂಥ ವಯಸ್ಸಾಗಿಲ್ಲ, ಹ್ಯಾಂಗನಾ ಮಾಡಿ ಒಂದು ವರ್ಷದಾಗ ಮರು ವಿವಾಹ ಮಾಡಬೇಕು" ಎನ್ನುವ ಉಪದೇಶವಿರುತ್ತದೆ.

ಅಂದರೆ ಇಲ್ಲಿ ಇಬ್ಬಗೆಯ ನೀತಿ ಲಿಂಗತಾರತಮ್ಯ ಸ್ಪಷ್ಟವಾಗಿ ಎದ್ದುಕಾಣುತ್ತದೆ. ಸ್ತ್ರೀ-ಪುರುಷರಲ್ಲಿ ಸೈದ್ಧಾಂತಿಕವಾದ ಸಮಾನತೆಯನ್ನು ನಾವಿಂದಿಗೂ ಕಾಣುತ್ತಿಲ್ಲ. ಜವಾಬ್ದಾರಿ ಹೋರುವುದು ಹೆಣ್ಣು ಅವಕಾಶಗಳನ್ನು ಪಡೆಯುವುದು ಗಂಡೆಂದು ಸ್ಪಷ್ಟವಾಗುತ್ತದೆ. ಹೀಗೆ ಪ್ರಗತಿಶೀಲದ ಗಾಳಿಯು ಪುರುಷ ಮತ್ತು ಪುರುಷರ ನಡುವಿನ. ಸ್ತ್ರೀಯರ ಮತ್ತು ಪುರುಷರ ನಡುವಿನ. ಸ್ತ್ರೀಯರು ಮತ್ತು ಸ್ತ್ರೀಯರ ನಡುವಿನ ಸಂಬಂಧವನ್ನು ತಾತ್ವಿಕತೆಯಿಂದ ಪುನರಾವಲೋಕನ ಮಾಡಿದ ಪರಿಣಾಮವೇ ಸ್ತ್ರೀವಾದದ ಹುಟ್ಟಿಗೆ ಕಾರಣವಾಯಿತೆಂದು ಹೇಳಬಹುದು.

6ನೇ ಶತಮಾನದಲ್ಲಿ ಮಾಹತ್ಮ ಗೌತಮಬುದ್ಧ ಸಮಾನತೆಗಾಗಿ "ಕಾರಣ ಮತ್ತು ಪರಿಣಾಮ" ಎಂಬ ಮೂಲಮಂತ್ರದಿಂದ ಸಮಾನತೆಯ ಸಮಾಜ ಕಟ್ಟಲು ಪ್ರಯತ್ನಿಸಿದ ನಂತರ ಶರಣರ ಯುಗದಲ್ಲಿ ಶರಣೆ ಅಕ್ಕಮಾಹಾದೇವಿಯನ್ನು ಪುರುಷ ಮತ್ತು ಸ್ತ್ರೀಯಲ್ಲಿ ಸಮಾನತೆ ಏಕೆ ಇಲ್ಲವೆಂದು ಪ್ರಶ್ನಿಸಿದ ಪ್ರಥಮ ಮಹಿಳೆ ಎಂದು ಗುರುತಿಸಲಾಗುತ್ತದೆ.

1950 ಜನೇವರಿ 19 ರಂದು ಹಿಂದೂ ಕಾರ್ಡ ಬಿಲ್ಲ ಮಸೂದೆ ಮಹಿಳೆಯರ ಪಾಲಿಗೆ ಒಂದು ವರದಾನವಾಗಿ ಸಾಮಾಜಿಕ, ಆರ್ಥಿಕ, ರಾಜಕೀಯ ಕ್ಷೇತ್ರದಲ್ಲಿ ಸಹಕಾರಿಯಾಯಿತು. 1975-85ರ ವರೆಗಿನ ವರ್ಷಗಳನ್ನು "ವುಮೆನ್ ಡಿಕೇಡ್" ಎಂದು ಆಚರಿಸಲಾಯಿತು. 1975 ಅಂತರಾಷ್ಟ್ರೀಯ ಮಹಿಳಾ ವರ್ಷವೆಂದು, ಪ್ರತಿ ವರ್ಷ ಮಾರ್ಚ-8 ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯೆಂದು ಲಕ್ಷಾಂತರ ಮಹಿಳೆಯರು ಆಚರಿಸುತ್ತಿದ್ದಾರೆ. ಇದರ ಜೊತೆ ಜೊತೆಯಲ್ಲಿಯೇ ಮಾನವ ಹಕ್ಕಿನ ಅರ್ಥವೇನೆಂದರೆ ಮಾನವರನ್ನು ಮಾನವನಂತೆ ಕಾಣುವುದೇ ಮಾನವ ಹಕ್ಕಾಗಿದೆ. ನಮ್ಮ ಗ್ರಾಮೀಣ ಮಹಿಳೆಯರಿಗೆ ಮಾನವಹಕ್ಕಿನ ಕುರಿತಾದ ಜಾಗೃತಿ ಎಷ್ಟರ

ಮಟ್ಟಿಗಿದೆ. ಎಂದು ಪ್ರಶ್ನಿಸಿಕೊಳ್ಳಬೇಕಾಗಿದೆ. 1986ರ ರಾಜಸ್ಥಾನದ ರೂಪಕನ್ವರ್ ರವರ ದಾರುಣ ದುರಂತ ಕಥೆ. 1996ರಲ್ಲಿ ಬಾಲ್ಯವಿವಾಹ ತಡೆಗಟ್ಟಲು ಪ್ರಯತ್ನಿಸಿದ (50-60) ಬಾವರಿದೇವಿ ಸಮಾಜಸೇವಕಿಯ ಮೇಲಿನ ಆತ್ಯಚಾರ ಮನೂಕುಲವನ್ನು ನಾಚಿಸುವಂಥವು. ಇವುಗಳನ್ನು ಮತ್ತೆ ಮತ್ತೆ ಯಾಕೆ ಹೇಗೆ ಏನು ಎಂದು ಯೋಚಿಸಬೇಕಾಗಿದೆ.

ಸ್ತ್ರೀವಾದ ವಿಕಾಸಕೊಂಡು ಬಂದಿರುವ ಹಂತಗಳನ್ನು ಗಮನಿಸಿದಾಗ ತಿಳಿದುಬರುವ ಸತ್ಯವೇನೆಂದರೆ ಸ್ತ್ರೀವಾದವು ಸ್ತ್ರೀಪರ ಹಕ್ಕುಗಳ ಹಾಗೂ ಸ್ತ್ರೀಹಿತಾಸಕ್ತಿಗಳ ಬಗೆಗಿನ ಹೋರಾಟವಾಗಿದೆ ವಿನ: ಪುರುಷ ಸೃಷ್ಟಿಯನ್ನು ಹೊಂದಿಲ್ಲ. ಸ್ತ್ರೀವಾದವು ಹೆಣ್ಣಿನ ಪ್ರತಿಭೆ ಸಾಧ್ಯತೆ, ಸಾಮರ್ಥ್ಯ ಹಾಗೂ ಸಾಧನೆಗಳನ್ನು ಗುರುತಿಸುವ ಅವಕಾಶ ಮಾಡಿ. ಪರಂಪರೆಯಲ್ಲಿ ಹೆಣ್ಣಿನ ತಾಯ್ತನದ ವೈಭವಿಕರಣವನ್ನು ವಿರೋದಿಸಿ ಸಿದ್ಧಮಾದರಿಯ ಪ್ರತಿಗಳಲ್ಲಿ (Stereotyped roles) ಹೆಚ್ಚನ್ನು ಚಿತ್ರಿಸುವ ವಿಚಾರಕ್ಕೆ ವಿರೋಧಿಸಿ ಲಿಂಗಾಧಾರಿತ ತಾರತಮ್ಯಗಳಲ್ಲಿಯ ಜೈವಿಕ ಭಿನ್ನತೆಗಳನ್ನು ಗುರುತಿಸಬೇಕೆಂಬ ಅಂಶದೆಡೆ ಒತ್ತು ನೀಡುತ್ತದೆ. ಸಮಾಜದ ರಚನೆಯಲ್ಲಿ ಮೂಲೆಗುಂಪಾಗಿರುವ ನಿರ್ಲಕ್ಷಕ್ಕೊಳಗಾಗಿರುವ ಅಮುಖ್ಯವಾದ ಪಾತ್ರಕ್ಕೆ ತಳ್ಳಲ್ಪಟ್ಟಿರುವ ಸ್ತ್ರೀಯರ ಪಾತ್ರವನ್ನು ಎತ್ತಿಹಿಡಿದು ಮನುಷ್ಯ ಮನುಷ್ಯರ ನಡುವಿನ ಸಮಾನತೆಯೊಂದಿಗೆ ಮಹಿಳೆಯ ಸಬಲೀಕರಣವಾಗಬೇಕೆಂಬುದೆ ಸ್ತ್ರೀವಾದದ ಆಶಯವಾಗಿದೆ.

2.3.2 ಸ್ತ್ರೀವಾದದ ಅರ್ಥ ಮತ್ತು ವ್ಯಾಖ್ಯೆ:

ಸ್ತ್ರೀವಾದವೆಂಬುದು ಇಂಗ್ಲಿಷ, ಫೆಮಿನಿಸಂ ಶಬ್ದದ ಭಾಷಾಂತರವಾಗಿದೆ.

'ಫೆಮಿನಿಸಂ' ಎಂಬುದು ಲ್ಯಾಟಿನ್ ಭಾಷೆಯ ಫೆಮಿನಾದಿಂದ ಬಂದಿದೆ. ಫೆಮಿನಾದ ವಾಸ್ತವಿಕ ಅರ್ಥ. 'ಹೆಣ್ತನದ ಗುಣವುಳ್ಳ'ವರು ಎಂದಾಗುತ್ತದೆ. ಹೆಣ್ತನದ ಜಾಗದಲ್ಲಿ ಲಿಂಗಾತೀತ ಗುಣಲಕ್ಷಣಗಳನ್ನು ಹೊಂದುವುದೇ ಸ್ತ್ರೀವಾದದ ಅರ್ಥವಾಗಿದೆ. 1890ರ ಸುಮಾರಿನಲ್ಲಿ ಲಿಂಗ ಸಮಾನತೆಯ ಹಕ್ಕುಗಳಿಗಾಗಿ ಹೋರಾಟಗಳು ಪ್ರಾರಂಭವಾಗಿ ಸ್ತ್ರೀವಾದವು ಪ್ರಚಲಿತದಲ್ಲಿ ಬಂದಿತು.

ಸ್ತ್ರೀವಾದ ತತ್ವವನ್ನು ಬಗೆಬಗೆಯಾಗಿ ಅರ್ಥೈಸಲಾಗುತ್ತಿದೆ. ಲಿಂಗಭೇದವಿಲ್ಲದೆ ಸಮಾನ ಪುರುಷರೊಂದಿಗೆ ಅವಕಾಶಗಳು ಇರಬೇಕೆಂದು ವಾದಿಸುವವರೇ ಸ್ತ್ರೀವಾದಿಗಳು ಎಂದು ಅರ್ಥಕೋಶಗಳಲ್ಲಿ ವಿವರಿಸಲಾಗಿದೆ. ಇನ್ನೊಂದು ತಂಡ, ಪುರುಷ ಪ್ರಾಧಾನ್ಯವನ್ನು ಅಲ್ಲಗಳೆದು ಸ್ತ್ರೀಗೆ ಸಮಾನ ಅವಕಾಶಗಳು ಸಿಗಬೇಕು ಎಂದು ಹೋರಾಡುವವರೇ ಸ್ತ್ರೀವಾದಿಗಳು ಎಂದೂ ವ್ಯಾಖ್ಯಾನಿಸಿದ್ದಾರೆ.

ಪುರುಷ ಪ್ರದಾನ ಸಮಾಜದಲ್ಲಿ ಸಾಮಾಜಿಕ ರಚನೆಯಲ್ಲಿಯೇ ಮೂಲ ಬದಲಾವಣೆಯ ಸುಧಾರಣೆಯ ಅಗತ್ಯವಿದೆ. ಸಾಮಾಜಿಕ ಪ್ರಕ್ರಿಯೆಗಳು ಸ್ತ್ರೀಯರನ್ನು ಅವರ ಅಸ್ತಿತ್ವವನ್ನು ಬಲಿ

ತೆಗೆದುಕೊಳ್ಳುತ್ತಿರುವುದರಿಂದ ಪ್ರತಿ ಬದಲಾವಣೆಗಳೂ ಮಹಿಳಾ ಸಮಸ್ಯೆಗಳಾಗಿಯೇ ಪರಿಣಮಿಸುತ್ತವೆ ಎಂದು ಚರ್ಲೋಟ್ಟೆ ಬಂಚ್ ಅವರು ಒತ್ತಿ ಹೇಳಿದ್ದಾರೆ.

"ಸ್ತ್ರೀವಾದಿ ಚಿಂತನೆ ಎಂದರೆ ಮಹಿಳಾ ಬದುಕಿನ ಪರವಾಗಿ ನಿಂತು ಮಂಡಿಸುವ ಒಂದು ವಾದ ಅಥವಾ ಚಿಂತನೆ ಎಂದಿದ್ದಾರೆ. ಹಾಗೆಯೇ ಮುಂದುವರೆದು ಒಬ್ಬ ಗೃಹಣಿ ತನ್ನ ಮನೆಯಲ್ಲಿ ತನ್ನ ಅಸ್ತಿತ್ವ ಆಧೀನ ಸ್ತರದಲ್ಲ ಸಮಾನ ನೆಲೆಯದು ಎಂಬುವುದನ್ನು ಪ್ರಜ್ಞಾಪೂರ್ವಕವಾಗಿ ನಿರೂಪಿಸಲು ನಡೆಸುವ ಅವಳ ಪ್ರಯತ್ನಕ್ಕೆ ತನ್ನದೇ ಮಹತ್ವ ಖಂಡಿತ ಇದೆ ಎಂದಿದ್ದಾರೆ. ಡಾ॥ ಎಚ್.ಎಸ್. ಶ್ರೀಮತಿ ತಮ್ಮ ಸ್ತ್ರೀವಾದ ಗ್ರಂಥದಲ್ಲಿ"[11].

"ಬಾರ್ಬರಾ ಬರ್ಗ ಅವರ ಪ್ರಕಾರ, ಎಲ್ಲ ಹಂತಗಳಲ್ಲಿ ಎಲ್ಲ ಕ್ಷೇತ್ರಗಳಲ್ಲಿ ಹಳೆಯ ಕಾಲದ ನಂಬಿಕೆಗಳಿಂದ ಮಹಿಳೆಯರನ್ನು ಮುಕ್ತಗೊಳಿಸುವುದೇ ಸ್ತ್ರೀವಾದ ಅಗಿದೆ ಎಂದು ಹೇಳುತ್ತಾರೆ. ಅದು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

1. ತಮ್ಮ ಹಣೆಬರಹವನ್ನು ತಾವೇ ರೂಪಿಸುವ ಸ್ವಾತಂತ್ರ್ಯ.
2. ಲಿಂಗಭೇದವನ್ನು ತೊಡೆದು ಹಾಕುವ ಸ್ವಾತಂತ್ರ್ಯ.
3. ದಮನಕಾರಿ ಸಾಮಜಿಕ ಬಂಧಗಳಿಂದ ಮುಕ್ತಿ ಪಡೆಯುವ ಸ್ವಾತಂತ್ರ್ಯ
4. ಮುಕ್ತವಾಗಿ ಅಭಿಪ್ರಾಯವನ್ನು ವ್ಯಕ್ತ ಪಡಿಸುವ ಸ್ವಾತಂತ್ರ್ಯ ಲಭಿಸಿದಾಗಲೇ ಸಮಾಜದಲ್ಲಿ ನಿಜವಾದ ಬದಲಾವಣೆಯನ್ನು ತಂದಂತೆಯೇ ಎಂಬುದೇ ಅವರ ವಿಚಾರಧಾರೆಯಾಗಿದೆ."[12]

ಕಲ್ಪನಾ ಶಹಾ ಅವರು 1984, ಸಾಮಾಜಿಕ ರಾಜಕೀಯ, ಆರ್ಥಿಕ ನಾಗರೀಕತೆಯನ್ನು ಪೂರ್ಣವಾಗಿ ಪಡೆದು ಸ್ತ್ರೀಯರು ಸಮಾನ ಅವಕಾಶಗಳ ಹಕ್ಕಿಗಾಗಿ ಹೋರಾಡುವುದೇ ಸ್ತ್ರೀವಾದ ಎನಿಸುತ್ತದೆ. ಮಹಿಳಾ ಪ್ರತ್ಯೇಕ ವಾದದವರೆಗೆ ಸ್ತ್ರೀವಾದದ ಪ್ರತಿಪಾದನೆಗಳು ನಡೆದಿವೆ.

ಕೋಲಿನ್ಸ ಡಿಕ್ಷನರಿ ಆಫ್ ಸೂಸಿಯಾಲೂಜಿ ಪ್ರಕಾರ ಸ್ತ್ರೀವಾದ ಎಂಬುದು ಸಮಗ್ರ ಸಿದ್ದಾಂತವಾಗಿದ್ದು ಅದು ಸ್ತ್ರೀಯರ ಜಾಗತಿಕ ಪಿಡನೆ ಹಾಗೂ ಪುರುಷಾಧೀನತೆಯ ಸ್ವರೂಪವನ್ನು ಕುರಿತಾದುದು" ಎಂದಿದ್ದಾರೆ.

ಭಾರತ, ಬಂಗ್ಲಾದೇಶ, ಪಾಕಿಸ್ತಾನ ನೇಪಾಳ ಹಾಗೂ ಶ್ರೀಲಂಕಾ ಮಹಿಳಾ ಪ್ರತಿನಿಧಿತ್ವ ದಕ್ಷಿಣ ಏಷ್ಯಾ ಕಮ್ಮಟದಲ್ಲಿ ಅಂಗೀಕರಿಸಲಾದ ವಿಶಾಲ ವ್ಯಾಪ್ತಿಯ ನಿರ್ಣಯ ಇಂತಿದೆ. ಮಹಿಳಾ ದಬ್ಬಾಳಿಕೆ ಮತ್ತು ದುರ್ಬಳಕೆಯ ಪರಿಜ್ಞಾನವಿರಬೇಕು. ಹೀನ ಸ್ಥಿತಿಯಿಂದ ಆಚೆ ಬರಲು ಪುರುಷರನ್ನು ಅವಲಕ್ಷಿಸುವಂಥ ಕೆಚ್ಚೆದೆ ಗಳಿಸಿಕೊಳ್ಳಬೇಕು ಎಂದು ತಿಳಿಸಲಾಗಿದೆ. ಬಾಸಿರ್ನ ಮತ್ತು ಖಾನ 1991.

ಸ್ತ್ರೀವಾದವು ಒಂದು ಸಾಮಾಜಿಕ ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಹೋರಾಟದ ಪ್ರಕ್ರಿಯೆಯಾಗಿದೆ. ಜೀವನದ ಪ್ರತಿಯೊಂದು ಕ್ಷೇತ್ರದಲ್ಲಿ ಮಹಿಳೆಯರಿಗೆ ಪುರುಷರೊಡನೆ ಸಮಾನ ಅವಕಾಶಗಳಿರಬೇಕು ಎಂಬುದೇ ಆಗಿದೆ.

ಮಹಿಳೆಯರನ್ನು ಲೈಂಗಿಕ ತೃಪ್ತಿಯ ಸಾಧನ ಮತ್ತು ಸೇವಕಿ ಎಂದು ಅವಳನ್ನು ಭಾವಿಸದೇ ಅವರೂ ತಮ್ಮಂತೆ ಕಾಮನೆಗಳುಳ್ಳ ಜೀವಿ ಎಂದು ಪರಿಗಣಿಸುವ ಮನೋಭಾವ ಪುರುಷರಲ್ಲಿ ಬರಬೇಕು.

ಮಹಿಳೆಯರನ್ನು ಕೀಳಾಗಿ ನೋಡುವ ಮತ್ತು ಅವರನ್ನು ತುಚ್ಛೀಕರಿಸುವ ಸಮಾಜದ ಎಲ್ಲ ಅಂಧಶ್ರದ್ಧೆಗಳು, ಆಚಾರ ವಿಚಾರಗಳು ಮತ್ತು ಸಂಪ್ರದಾಯಗಳಿಗೆ ಇತಿಶ್ರೀ ಹಾಡಬೇಕಾಗಿದೆ ಎಂದೇ ಅರ್ಥವಾಗಿದೆ.

ಸ್ತ್ರೀವಾದವು ಸ್ತ್ರೀಲಿಂಗ ಪರವಾದ ಸಿದ್ಧಾಂತವಾಗಿದೆ. ಪುರುಷ ಪ್ರಧಾನ ಸಮಾಜದಲ್ಲಿ ಲಿಂಗ ಸಮಾನತೆಯನ್ನು ಸಾಧಿಸಲು ಇದೊಂದು ಪ್ರಬಲ ಅಸ್ತ್ರವಾಗಿದೆ. ಮಹಿಳೆಯರು ತಮ್ಮ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಹಕ್ಕುಗಳು ಮತ್ತು ಜವಾಬ್ದಾರಿಗಳನ್ನು ಅರಿತಾಗಲೆ ಸ್ತ್ರೀವಾದದ ಯಶಸ್ಸು ಸಾಧ್ಯವಾಗುತ್ತದೆ.

2.3.3. ಸ್ತ್ರೀವಾದದ ಐದು ಪ್ರಮುಖ ನಿಲುವುಗಳು:

1. ಪ್ರಮುಖ ತತ್ವಗಳು

ಜಾನ್.ಜಿ. ಮ್ಯಸಿಯೋನಿಸ್ರವರ ಪ್ರಕಾರ ಸ್ತ್ರೀವಾದಿಗಳೆಂದು ಕರೆಸಿಕೊಳ್ಳುವ ಹಲವಾರು ಜನ ಹಲವಾರು ವಿಷಯಗಳಲ್ಲಿ ಪರಸ್ಪರ ಭಿನ್ನಮತ ತಳೆದಿದ್ದರೂ ಈ ಕೆಳಗಿನ ಐದು ತತ್ವಗಳ ಬಗ್ಗೆ ಸಮ್ಮತಿಯನ್ನು ಹೊಂದಿ ಅವುಗಳನ್ನು ಬೆಂಬಲಿಸುತ್ತಾರೆ ಅವು ಈ ಕೆಳಗಿನಂತಿವೆ.

1. ಲಿಂಗ ತಾರತಮ್ಯ ಅರಿತುಗೊಂಡು ಸ್ತ್ರೀ–ಪುರುಷರ ಸಮಾನತೆಯನ್ನು ಹೆಚ್ಚಿಸುವುದಕ್ಕಾಗಿ ಪರಿಶ್ರಮಿಸುವುದು.
2. ಸಹಕಾರ ಮತ್ತು ಭಾವನಾತ್ಮಕತೆಯಿಂದ ಕೂಡಿದ "ಸ್ತ್ರೀಯರ ಪ್ರಪಂಚ" ಹಾಗೂ ಸ್ವದಳ ಮತ್ತು ವೈಚಾರಿಕತೆಯಿಂದ ಕೂಡಿದ "ಪುರುಷ ಪ್ರಪಂಚ" ಇದಕ್ಕೆ ಪರ್ಯಾಯವಾಗಿ ಮಾನವತೆಯ ಪುನರಸಂಘಟನಾ ವಿಚಾರದೆಡೆ ಸಾಗುವುದು.
3. ಗಂಡು–ಪ್ರಧಾನ ಸಂಸ್ಕೃತಿ, ಹೆಣ್ಣು–ಅಧೀನ ಸಂಸ್ಕೃತಿಗೆ ಸೇರಿದ್ದಾಳೆಂದು, ಅವಳು ಪುರುಷನ ಪ್ರಧಾನ ಸಂಸ್ಕೃತಿಯಲ್ಲಿ ಅಧೀನಳಾಗಿ, ಕರಗುತ್ತಿದ್ದಾಳೆ. ಹಾಗಾಗದೆ ಸ್ವಾತಂತ್ರ ಅಸ್ತಿತ್ವವಿದೆ ಎಂಬ ನಿಲುವನ್ನು ತಳೆಯುವುದು.

4. ಆಧುನಿಕ ಮಹಿಳಾ ಅಂದೋಲನಗಳು ಮಹಿಳೆಯ ಮೇಲಿನ ಲೈಂಗಿಕ ಹಿಂಸಾಚಾರದ ನಿರ್ಮೂಲನೆ ಸ್ತ್ರೀಯರ ಸುರಕ್ಷತೆಯ ದೃಷ್ಟಿಯಿಂದ ತೀರಾ ಅಗತ್ಯವೆಂದು ಸಾರಿವೆ.
5. ಲೈಂಗಿಕ ಸ್ವಾತಂತ್ರಕ್ಕೆ ಪ್ರೋತ್ಸಾಹ: ಸ್ತ್ರೀವಾದವು ಸ್ತ್ರೀಯರ ಲೈಂಗಿಕತೆ ಮತ್ತು ಪ್ರಜನನದ ಮೇಲೆ ನಿಯಂತ್ರಣವಿರಬೇಕು. ಅಂದರೆ ಮಕ್ಕಳು ಬೇಕೇ? ಬೇಡವೇ? ಬೇಕ್ಕಿದ್ದರೆ ಎಷ್ಟು ಬೇಕು? ಯಾವಾಗ ಬೇಕು? ಬೇಡದ ಗರ್ಭ ನಿರ್ಮೂಲನ ಮಾಡುವ ಸ್ವಾತಂತ್ರ್ಯವಿದೆ ಹೀಗಾಗದೇ ಅವಳ ಬುದುಕಿಗೆ ಸಂಬಂಧಪಟ್ಟ ನಿರ್ಧಾರಗಳನ್ನು ಅವಳ ಗಂಡ, ಭಾವ, ಮೈದುನ, ಮಾವ, ಗಂಡನ ಸ್ನಹೀತರು, ಊರಿನ ಶ್ರೀಮಂತರು ಮತ್ತು ರಾಜಕಾರಣಿಗಳು ತೆಗದುಕೊಳ್ಳವುಂತಾಗಬಾರದೆಂದು ಆಗ್ರಹಿಸುತ್ತದೆ.

ಸ್ತ್ರೀವಾದದ ನಿಲುವುಗಳು:

ಸ್ತ್ರೀವಾದದ ಉದ್ದೇಶಗಳಂತೆ ಗುರಿ ಉದ್ದೇಶಗಳ ಸಾಧನೆಯನ್ನೇ ಈ ಕೆಳಕಂಡ ಕ್ಷೇತ್ರದಲ್ಲಿ ಕಾಣಬಹುದಾಗಿದೆ.

1. ಮತವನ್ನು ಸ್ವರಿತನಿರ್ಧಾರ ಮಾಡಿ ಚಲಾವಣೆ ಮಾಡುವುದು.
2. ಮದುವೆ ಬೇಕೆ ಬೇಡವೇ? ಎಂದು ತೀರ್ಮಾನಿಸುವ ಹಕ್ಕು.
3. ಶಿಕ್ಷಣ, ಉದ್ಯೋಗ, ಆಸ್ತಿಯಲ್ಲಿ ಪಾಲು, ಬೇಕೋ ಬೇಡವೂ ಎಂದು ನಿರ್ಧರಿಸುವುದು.
4. ಹಿಂಸೆ ಬೇಕೇ? ಸಾಕೇ? ವಿಚ್ಛೇದನ ಬೇಕೆ ಬೇಡವೋ?
5. ಮಗು ಬೇಕೆ ಬೇಡವೇ? ಬೇಕೆಂದರೆ ಎಷ್ಟು ಮಕ್ಕಳು ಬೇಕೆಂಬ ತೀರ್ಮಾನ.

ಈ ಮೇಲಿನ ಬಹುಮುಖ್ಯ ಸ್ತ್ರೀವಿರೋಧಿ ಚಟುವಟಿಕೆಗಳನ್ನು ವಿರೋಧಿಸಿ ಹೋರಾಟ ಮಾಡುವ ಮುಖ್ಯ ಉದ್ದೇಶ ಏನೆಂದರೆ ಪುರುಷ ಪ್ರಧಾನ ವ್ಯವಸ್ಥೆಯನ್ನು ಕಿತ್ತು ಹಾಕಿ ಸಮಾನತೆಯ ಸಮಾಜದ ಸ್ಥಾಪನೆ ಮಾಡುವುದೇ ಆಗಿದೆ.

ರೋಸ್‌ಮೇರಿ ವಾಂಗ್ ಫೀನಿಸ್ಟ ಥಾಟ–ಎ ಕಾಂಪ್ರೆಹೆನ್ಸಿವ್ ಇಂಟ್ರೋಡಕ್ಷನ್ ಕಾಟಲೆಜ್ಡ (1992) ಇವರ ಪ್ರಕಾರ ನೋಡಬಹುದು.

ಸ್ತ್ರೀವಾದಿ ನಿಲುವುಗಳಲ್ಲಿ ಪ್ರಮುಖವಾಗಿ ಆರು ವಿಧಗಳನ್ನು ಕಾಣಬಹುದಾಗಿದೆ.

1. ಉದಾರವಾದಿ ಸ್ತ್ರೀವಾದ – Liberal Feminism.
2. ಮಾರ್ಕ್ಸವಾದಿ ಸ್ತ್ರೀವಾದ – Marxist Feminism.
3. ತೀವ್ರಗಾಮಿ ಸ್ತ್ರೀವಾದ – Radical Feminism.
4. ಮನೋವಿಶ್ಲೇಷಣಾತ್ಮಕ ಸ್ತ್ರೀವಾದ – Psychalytical Feminism.
5. ಅಸ್ತಿತ್ವವಾದಿ ಸ್ತ್ರೀವಾದ – Existentialist Feminism.
6. ಸಮಾಜವಾದಿ ಸ್ತ್ರೀವಾದ – Socielistic Feminism.

1. ಉದಾರವಾದಿ ಸ್ತ್ರೀವಾದ – Liberal Feminism:

ಕ್ರಿ.ಶಕ. 16–17ನೇ ಶತಮಾನದಲ್ಲಿ ವಿಕಾಸಗೊಂಡ ಈ ಉದಾರವಾದದ ಸಿದ್ಧಾಥದಂತೆ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪ್ರತಿಭೆ ಸಾಮರ್ಥ್ಯಗಳನ್ನು ವೃದ್ಧಿಸಿಕೊಳ್ಳಲು, ಹಾಗೂ ಅಸಕ್ತಿ ಅಭಿರುಚಿಗಳನ್ನು ಕಾಯ್ದುಕೊಳ್ಳಲು, ಬೆಳೆಸಿಕೊಳ್ಳಲು ಸ್ವತಂತ್ರನಿರಬೇಕು. ವ್ಯಕ್ತಿಗಳ ಇಂತಹ ಹಕ್ಕನ್ನು ಸರ್ಕಾರ ಸಂರಕ್ಷಿಸಬೇಕು. ಈ ಹಕ್ಕು ಮಹಿಳೆಯರಿಗೂ ಅನ್ವಯಿಸಬೇಕೆಂಬ ವಿಚಾರ ಮುಂದಿಟ್ಟುಕೊಂಡು ಸ್ತ್ರೀವಾದ ಬೆಳೆಯಿತು.

ಉದಾರವಾದಿ ಸ್ತ್ರೀವಾದದ ಮುಖ್ಯ ವಿಚಾರಗಳು:

1. ಸ್ತ್ರೀ ಪುರುಷರ ಸಮಾನತೆ ಮತ್ತು ಸ್ತ್ರೀಯರಿಗೆ ಸಮಾನಹಕ್ಕುಗಳ ಪ್ರತಿಪಾದನೆ.
2. ಎಲ್ಲ ಸ್ತ್ರೀಯರಿಗೆ ಲೈಂಗಿಕ ಸ್ವಾತಂತ್ರ್ಯ ಅಂದರೆ ಪ್ರಜಿನನದ ಸ್ವಾತಂತ್ರ್ಯವಿರಬೇಕು.
3. ಕುಟುಂಬವನ್ನು ಒಂದು ಪ್ರಮುಖ ಸಾಮಾಜಿಕ ಸಂಸ್ಥೆ ಎಂದು ಪರಿಗಣಿಸುವ ಈ ಸಿದ್ಧಾಂತ ಮನೆಗೆಲಸಗಳಲ್ಲಿ ಮಕ್ಕಳ ಪೋಷಣೆಯಲ್ಲಿ ಪುರುಷರು ಸಮಾನ ಜವಾಬ್ದಾರಿ ತೆಗೆದುಕೊಂಡು ಮಾನವೀಯ ಬದಲಾವಣೆಗೆ ಸಹಕರಿಸಬೇಕೆಂದು ತಿಳಿಸದೆ.
4. ಸ್ತ್ರೀಯರು ತಮ್ಮ ಸ್ಥಿತಿಯನ್ನು ತಾವೇ ಉತ್ತಮ ಪಡಿಸಿಕೊಳ್ಳಬೇಕೆಂದು ಕರೆನೀಡಿದೆ . ಉದಾ: ಪುರುಷರು ಮಾಡುವ ವೃತ್ತಿಗಳೆಲ್ಲವನ್ನು ಬ್ಯಾಂಕಿಂಗೆ, ಕಾನೂನು, ವ್ಯಾಪಾರ, ವ್ಯವಹಾರ, ತಾಂತ್ರಿಕತೆ, ಸೈನಿಕ ಕ್ಷೇತ್ರಗಳಲ್ಲಿ ಕೆಲಸ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಮಹಿಳೆಯರು ಸಿದ್ಧವಿರಬೇಕೆಂದು ಹೇಳಿದೆ.
5. ಸಮಾಜಿಕ ವ್ಯವಸ್ಥೆಯಲ್ಲಿದ್ದಕೊಂಡೆ ಉದ್ಯೋಗ ಹಾಗೂ ಕುಟುಂಬಗಳನ್ನು ಹೊಂದಿಸಿಕೊಂಡು ಲಿಂಗಸಮಾನತೆ ಸಾಧಿಸಬೇಕೆಂದು ಸ್ತ್ರೀಯರಿಗೆ ಹೇಳಿದೆ.

6. ವ್ಯಕ್ತಿಗಳಿಗೆ ಹಕ್ಕುಗಳ ಪೂರ್ಣಭರವಸೆ, ಹಿತಾಸಕ್ತಿಗಳ ಕಾಪಾಡುವಿಕೆಗೆ ಸ್ತ್ರೀಯರು ಒಟ್ಟುಗೂಡುವಿಕೆ. ಕಾನೂನಿನ, ಸಾಂಸ್ಕೃತಿಕ ಅಡೆತಡೆಗಳ ನಿರ್ಮೂಲನೆಯಿಂದ ಸ್ತ್ರೀಪುರುಷರು ಸಾಧನೆ ಮಾಡಲು ತಮ್ಮನ್ನು ತಾವು ಸುಧಾರಿಸಿಕೊಳ್ಳಲು ಸಾಧ್ಯ. ಇದು ಉದಾರವಾದಿ ಸ್ತ್ರೀವಾದದ ನಂಬಿಕೆಯಾಗಿದೆ.

2. ಮಾರ್ಕ್ಸವಾದಿ ಸ್ತ್ರೀವಾದ – Marxist Feminism:

ಸ್ತ್ರೀಶೋಷಣೆಯು ಯಾವುದೇ ವ್ಯಕ್ತಿಯ ಉದ್ದೇಶಿತ ಕ್ರಿಯೆಯಾಗಿರದೆ ಕೆಲವು ಬಂಡವಾಳಶಾಹಿ ವ್ಯವಸ್ಥೆಯ ದುರಾಡಳಿತಗಳಾದ ರಾಜಕೀಯ ಸಮಾಜಿಕ ಆರ್ಥಿಕ ರಚನೆಗಳಿಂದ ಸೃಷ್ಟಿಯಾದಂಥ ಒಂದು ವ್ಯವಸ್ಥೆ ಎಂಬುದನ್ನು ಎಲ್ಲ ವರ್ಗಗಳ ಸ್ತ್ರೀಯರು ಅರಿತುಕೊಳ್ಳ ಬೇಕೆಂಬುದೇ ಮಾರ್ಕ್ಸನವಾದಿ ಸ್ತ್ರೀವಾದದ ಒಳತಿರುಳಾಗಿತ್ತು. ಮಾರ್ಕ್ಸನ ಮರಣಾನಂತರ ಫೆಡ್ರಿಕ್ ಎಂಗೆಲ್ಸ್ ರಚಿಸಿದ – "ಫಾರ್ ಹರಿಜನ್ ಆಫ್ ಫ್ಯಾಮಿಲಿ ಪ್ರಾವೇಟ್ ಆ್ಯಂಡ್ ದಿ ಸ್ಟೇಟ್" (1845) ಎಂಬಗ್ರಂಥದಲ್ಲಿ ಸ್ತ್ರೀವಾದಕ್ಕೆ ಸಂಬಂಧಪಟ್ಟಂತೆ, ಕುಟುಂಬ, ಮನೆಕೆಲಸ ವಿವಾಹದ ಪರಿಕಲ್ಪನೆಗಳೇ ಪ್ರಮುಖವಾಗಿವೆ ಎಂದಿದ್ದಾರೆ. ಇದು ಮಾರ್ಕ್ಸವಾದಿ ಸ್ತ್ರೀವಾದಕ್ಕೆ ಒಂದು ಉತ್ತಮವಾದ ಸೈದ್ಧಾಂತಿಕ ಹಿನ್ನಲೆಯನ್ನು ಒದಗಿಸಿದೆ.

3. ತೀವ್ರಗಾಮಿ ಸ್ತ್ರೀವಾದ – Radical Feminism:

ಸಮಾಜದಲ್ಲಿ ಸ್ತ್ರೀಯು ಮೂಲಭೂತವಾಗಿ ಮಕ್ಕಳನ್ನು ಹೇರುವ ಹೊರುವ (ಗರ್ಭಧರಿಸುವ) ಪೊಷಿಸುವ ಯಂತ್ರದಂತೆ ಕಾಣುವುದೆ ಆಕೆಯ ಶೋಷಣೆಗೆ ಮೂಲವಾಗಿದೆ. ಅವರವರ ದೇಹರಚನೆಯಲ್ಲಿಯೋ ವ್ಯತ್ಯಾಸವಿದೆ. ಜೈವಿಕ ತಾಯ್ತತನದ ನಿರ್ಮೂಲನವನ್ನು (ಈ ತಂತ್ರಜ್ಞಾನವು ನಳಿಕಾಶಿಸುವಿನ ಜನನದ ಪರಿಷ್ಕೃತ ರೂಪವಾಗಿರುತ್ತದೆ ಎನ್ನಬಹುದು ಕುರಿತಂತೆ ತೀವ್ರಗಾಮಿ, ಸ್ತ್ರೀವಾದಿ ಧೋರಣೆಗಳ ಪ್ರಬಲ ವಿಚಾರ ಮಂಡನೆಯನ್ನು ನಾವು ಮಾರ್ಜ ಪರ್ಸಿಯ – "ವುಮನ್ ಅನ್ ದಿ ಎಡ್ಜ್ ಅಪ್ ಟೈಮ್ 1976" ಎಂಬ ಕಾಲ್ಪನಿಕ ಕಾದಂಬರಿಯಲ್ಲಿ ಕಾಣಬಹುದು.

4. ಮನೋವಿಶ್ಲೇಷಣಾತ್ಮಕ ಸ್ತ್ರೀವಾದ – Psycho-Analytical Feminism:

ಈ ಲಿಂಗ ವ್ಯವಸ್ಥೆಯನ್ನೊಂದು ಲೈಂಗಿಕ ಪಕ್ವತೆಯ (Maturation) ಮನೋ ವಿಶ್ಲೇಷಣಾತ್ಮಕ ಸ್ತ್ರೀವಾದ ಸಿದ್ಧಾಂತವು ಲೈಂಗಿಕತೆಯ ಪರಿಕಲ್ಪನೆಗೆ ಸಂಬಂಧಿಸಿದಂತೆ ಹೆಣೆದಿರುವ ಒಂದು ಸ್ತ್ರೀವಾದಿ ಧೋರಣೆಯಾಗಿದೆ. ಈ ಅಧ್ಯಯನದ ಮೂಲ ಪುರುಷ ಫ್ರಾಯ್ಡ್ ಇವರ ವಿಚಾರದ ನೆಲೆಯಲ್ಲಿ ಅಲಪ್ರೆಡ್ ಅಡ್ಲೇರ್ ಡಾರತಿ ಡಿನ್ನರ ಸ್ಟನ ಪ್ರಮುಖರಾಗಿದ್ದಾರೆ.

ಜೈವಿಕತೆಯು ಸ್ತ್ರೀಯ ವಿಧಿಯನ್ನು ನಿರ್ಧರಿಸುವ ಏಕೈಕೀಕ ಸಾಧನ ಎಂಬ ತತ್ವವನ್ನು ಮಿಷಲ್ ಒಂದು ಸಮಾಜಶಾಸ್ತ್ರೀಯ ನಿಟ್ಟಿನಲ್ಲಿ ಪರಿಶೀಲಿಸಿ ಮಾನಸಿಕ – ಲೈಂಗಿಕ ಅನುಭವಗಳು ಕೇವಲ ಜೈವಿಕ ಕ್ರಿಯೆಗಳಲ್ಲದೆ ಆಯಾ ಸಮಾಜದ ಸಮಕಾಲಿನ ಪರಿಸ್ಥಿತಿಗಳಿಂದ ಪ್ರಭಾವಿಸಲ್ಪಟ್ಟಿರುತ್ತವೆ. ಎಂದು ನೇರವಾಗಿ ಅಭಿಪ್ರಾಯ ಪಟ್ಟಿದ್ದಾಳೆ.

5. ಅಸ್ತಿತ್ವವಾದಿ ಸ್ತ್ರೀವಾದ – Existentialist Feminism:

ಪ್ರೆಂಚ ಚಿಂತಕ ಸಿಮಾನ್ ಬೋವಾ ರಚನೆ 4ದಿ ಸೆಕೆಂಡ್ ಸೆಕ್ಸ್ (1974) ರಲ್ಲಿ ಅಸ್ತಿತ್ವವಾದಿ ಸ್ತ್ರೀವಾದ ಪ್ರಮುಖ ಅಂಶಗಳು. ಕಾಣಬಹುದು. ಮಹಿಳೆ ಎನ್ನುವುದು ಜೀವಶಾಸ್ತ್ರೀಯ ಘಟಕ ಚೆಂಚಲತೆ ಮಹಿಳೆಯ ವ್ಯಕ್ತಿತ್ವದ ಮುಖ್ಯ ಸ್ವಭಾವವಾಗಿದೆ. ಅದ್ದರಿಂದ ಅಕೆ ಸಾಮಾನ್ಯವಾಗಿ ಶೀಘ್ರಕೋಪಿಯು, ಧೈರ್ಯಹೀನಳೂ ಆಗಿ ವರ್ತಿಸುತ್ತಾಳೆ. ಮಹಿಳೆಯ ಜೈವಿಕ ವಿಶಿಷ್ಟತೆ ಅವಳ ಬದುಕಿನಲ್ಲಿ ಮಹತ್ತರ ಪಾತ್ರವಹಿಸುತ್ತದೆ ಹಾಗೂ ಅವಳು ಹೊಂದಿರುವ ಸ್ಥಾನಮಾನ ಅವರಲ್ಲಿ ಅಂತರಂಗಿಕವಾಗಿರುವ ಜೈವಿಕ ಅಂಶದ ಪಾತ್ರಕ್ಕೆ ಅನುಸಾರವಾಗಿಯು ಇರುತ್ತದೆ ಎಂಬ ಅಭಿಪ್ರಾಯವನ್ನು ಹೊಂದಿದ್ದು ಸ್ತ್ರೀ ಅಸ್ತಿತ್ವವೇ ಅವಳ ಶೋಷಣೆಗೆ ಮೂಲಕಾರಣ ಸ್ತ್ರೀ ಅದರಿಂದ ಹೊರಬರುವ ಸಾಧ್ಯತೆಯಿದೆಯೆಂದು ಹೇಳಿದ್ದಾರೆ.

6. ಸಮಾಜವಾದಿ ಸ್ತ್ರೀವಾದ – Socielistic Feminism:

ಜುಲಿಯಟ್ ಮಿಷಲ್‌ಳು ತನ್ನ ಸೈಕೋ ಅನಾಲಿಸಿಸ್ ಮತ್ತು ಫೆಮಿನಿಸಂ (1974)ನಲ್ಲಿ ಸ್ತ್ರೀಯ ಮಾನಸಿಕ ಸ್ಥಿತಿ ಸಮಾಜದ ಅಂಶಗಳಿಂದ ಹೇಗೆ ಪ್ರಭಾವಿತವಾಗಿದೆಯೆಂದು ವಿಶ್ಲೇಷಿಸಿದ್ದಾಳೆ. ಅವಳ ದೃಷ್ಟಿಯಲ್ಲಿ ಎಲ್ಲ ಸಮಾಜಗಳು ಪುರುಷ ಪ್ರಧಾನ ಸಮಾಜಗಳಾಗಿರುವುದರಿಂದ ಸ್ತ್ರೀ ಎಲ್ಲೆ ಇರಲಿ ಅವಳ ಪರಿಸ್ಥಿತಿ ಒಂದೇ ಅಗಿರುತ್ತದೆ. ಬದಲಾವಣೆಗೆ ವ್ಯವಸ್ಥೆ ಅವಕಾಶ ನೀಡದು ಎಂದು ಅಭಿಪ್ರಾಯ ಪಟ್ಟಿದ್ದಾರೆ, ಎಂಗೆಲ್ಸನ ಅಭಿಪ್ರಾಯದಲ್ಲಿ ಮಹಿಳೆಯರ ಅಸಮಾನತೆಗೆ ಮುಖ್ಯಕಾರಣ ಅವರನ್ನು ಸಮಾಜಿಕವಾಗಿ ಉತ್ಪಾದನಾ ಕಾರ್ಯದಿಂದ ದೂರತಳಿದ್ದ ಆಗಿದೆ ಬ್ರಹತ್ ಪ್ರಮಾಣದಲ್ಲಿ ಸ್ತ್ರೀಯರು ಸಾಮಾಜಿಕ ಉತ್ಪಾದನೆಯಲ್ಲಿ ಭಾಗವಹಿಸಿದರೆ ವಿಮೋಚನೆ ಸಾಧ್ಯವೆಂದಿದ್ದಾರೆ. ವರ್ಜಿನಿಯಾವುಲ್ಫ (1882–1941) ಸ್ತ್ರೀವಾದಕ್ಕೆ ನೀಡಿದ ಕೊಡುಗೆ ಅಪಾರ. ಎರೋಮ ಅಫ್ ವನ್ಸ ಒನ್" ಪುಸ್ತಕಗಳಿಗೆ ಮಹಿಳೆಯರು ಹೇಗೆ ತಮಗೆ ತಾವೆ ಬಲಿಪಶುಗಳಾಗುತ್ತಾರೆ. ಮತ್ತು ಪುರುಷರಿಂದ ಹೇಗೆ ಬಲಿಪಶುಗಳಾಗುತ್ತಾರೆಂದು ಸೂಚಿಸಿದ್ದಾಳೆ.

ಈ ಮೇಲಿನ ಆರು ಸ್ತ್ರೀವಾದ ಸಿದ್ಧಾಂತಗಳಲ್ಲದೇ ಫ್ರೆಂಚ್ ಸ್ತ್ರೀವಾದ, ಅಮೇರಿಕನ್ ಸ್ತ್ರೀವಾದ, ಭಾರತೀಯ ಸ್ತೀವಾದ, ದಲಿತ ಸ್ತ್ರೀವಾದ, ಸಾಂಸ್ಕೃತಿಕ ಸ್ತ್ರೀವಾದ ಮತ್ತು ಪರಿಸರವಾದ ಮುಂತಾದವುಗಳ ವಿಶ್ಲೇಷಣೆಯನ್ನು ಈ ಕೆಳಗಿನಂತೆ ಮಾಡಲಾಗಿದೆ.

ಫ್ರೆಂಚ್ ಸ್ತ್ರೀವಾದ:

"ಜಗತ್ತಿನ ಬೇರೆ-ಬೇರೆ ಕಡೆಗಳಲ್ಲಿ ಸ್ತ್ರೀವಾದಿ ಚಿಂತನೆಗಳು ನೆಲೆ ಕಾಣುವುದಕ್ಕಿಂತ ಮೊದಲೇ ಸಮಾಜದಲ್ಲಿ ಹೆಣ್ಣನ್ನು ಅಸಮಾನವಾಗಿ ಕಂಡು ಆಧೀನಳನ್ನಾಗಿಸಿಕೊಳ್ಳುವ ಕುರಿತು ಫ್ರಾನ್ಸ್ ಮಹಿಳೆಯರು ಬರೆಯ ತೊಡಗಿದರು. 17 ಮತ್ತು 18ನೇ ಶತಮಾನದಲ್ಲಿ ಮಹಿಳೆಯರಿಗೆ ಓದು-ಬರಹದ ಜೊತೆಗೆ ನಾಗರೀಕ ಹಾಗೂ ರಾಜಕೀಯ ಹಕ್ಕುಗಳನ್ನು ಕುರಿತು ಚಿಂತಿಸಬಲ್ಲವ ರಾಗಿದ್ದರು. ಫ್ರೆಂಚ್ ಕ್ರಾಂತಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದರು ಲಿಂಗ ಸಮಾನತೆ ಪ್ರಶ್ನೆಯನ್ನು ವಿರೋಧಿಸಿ ಪ್ರತ್ಯಕವಾದ ಎಂಬ ಅಪಾರ್ಥದಲ್ಲಿ ಗ್ರಹಿಸಲಾಯಿತು. ಫ್ರೆಂಚ್ ಭಾಷೆಯ ಫಮಿನಿಸ್‌ಂನ ವಿಪರೀತದ ಅರ್ಥ ಫ್ರಾನ್ಸ್ ಮತ್ತು ಯೂರೋಪಗಳಲ್ಲಿ ಮಹಿಳಾ ಹಕ್ಕಿಗಾಗಿ ಹರಡಿದ ಸ್ತ್ರೀವಾದವನ್ನು ಫೆಮಿನಿಸ್‌ಂ ಎಂದು ಕರೆದರು.

ಚಳುವಳಿಯ ಎರಡನೇ ಹಂತಕ್ಕೆ ಸಾಗಿ ವಿಮೋಚನೆಯ ಮಾತನಾಡ ತೊಡಗಿದರು. (ಎಂ.ಎಲ್.ಎಫ್.) ಲೈಂಗಿಕತಾವಾದ ಹಾಗೂ ಜನಾಂಗೀಯವಾದಗಳನ್ನು ಆಧರಿಸಿ ಹುಟ್ಟಿಕೊಂಡ ಪಿತೃ ಪ್ರಧಾನ ಸಮಾಜಗಳು ಹೆಣ್ಣಿನ ಬದುಕುನ್ನು ಆಕ್ರಮಿಸಿ ಆಳುವ ಮೂಲ ಕಾರಣಗಳು ಎಂಬುವುದನ್ನು ಈ ಹೊಸ ಅಲೆಯೂ ಸೂಕ್ತವಾಗಿಯೇ ಗ್ರಹಿಸಿತು.

ಅಮೇರಿಕಾ ಸ್ತ್ರೀವಾದಿಗಳಲ್ಲಿ ಬಹಳಷ್ಟು ಜನ ಪತ್ರಕರ್ತೆಯರು, ಲೇಖಕಿಯರು ಮತ್ತು ವಿಶ್ವವಿದ್ಯಾಲಯಗಳಲ್ಲಿ ಬೋಧಿಸುತ್ತಿದ್ದವರು ಇವರು ಸ್ತ್ರೀವಾದಿ ಚಿಂತನೆಗಳನ್ನು ಶೈಕ್ಷಣಿಕ ಶಿಸ್ತಿಗೆ ಒಳಪಡಿಸಿ ವಿಸ್ತರಿಸಿದರು. ವಿಶ್ವವಿದ್ಯಾಲಯಗಳಲ್ಲಿ ಮಹಿಳಾ ಅಧ್ಯಯನಕ್ಕಾಗಿ ಪ್ರತ್ಯೇಕ ವಿಭಾಗಗಳು ಆರಂಭಗೊಳ್ಳುವ ವಾತಾವರಣಕ್ಕೂ ಕಾರಣರಾದರು. ಮಹಿಳಾ ಲೋಕವನ್ನು ಕುರಿತು ಸಮಗ್ರ ಅಧ್ಯಯನ, ಸಂಶೋಧನೆಗಳಿಗೆ ಅವಕಾಶಗಳು ವಿಸ್ತರಿಸದವು. ಈ ಮಹಿಳೆಯರ ಬೌದ್ಧಿಕ ಪರಿಶ್ರಮವು ಮಹಿಳಾ ಚಳವಳಿಯ ಕ್ರಿಯಾಶೀಲತೆಗೆ ಹೆಚ್ಚಿನ ಬಲ ಒದಗಿಸಿ ತಾತ್ವಿಕ ನೆಲೆಗಟ್ಟನ್ನು ಕಲ್ಪಿಸ ತೊಡಗಿತು. ಸಣ್ಣ ಪುಟ್ಟ ಗುಂಪಿನ ಹಂತದಲ್ಲಿ ನಡೆಯುತ್ತಿದ್ದ ಅಧ್ಯಯನಗಳಿಗೆ ಸಾಮುದಾಯಿಕ ರೂಪ ದೊರೆಯಿತು. ಅಂದರೆ ಸಾಹಿತ್ಯ ಲೋಕವನ್ನು ಮಹಿಳಾ ದೃಷ್ಟಿಕೋನದಿಂದ ಮರು ವಿಶ್ಲೇಷಿಸ ತೊಡಗಿದರು.

ಭಾರತೀಯ ಸ್ತ್ರೀವಾದದ ಚಿಂತನೆಗಳಲ್ಲಿ ಅಮೇರಿಕಾದ ಸ್ತ್ರೀವಾದದ ಮಾದರಿ ಕೂಡಾ ಹೆಚ್ಚು ಸ್ವೀಕೃತವಾಯಿತು. ಮಹಿಳಾ ಪ್ರಶ್ನೆಗಳನ್ನು ಸಮುದಾಯ ಹೋರಾಟಗಳ ಮೂಲಕ ಬಗೆಹರಿಸಿಕೊಳ್ಳಬೇಕಾಗುತ್ತದೆ ಎಂಬ ಸ್ತ್ರೀವಾದಿ ಚಿಂತನೆಯನ್ನು ಪ್ರಚುರಪಡಿಸಿ ತಮ್ಮನ್ನು ತೊಡಗಿಸಿಕೊಂಡ ಇಲ್ಲಿನ ಮಹಿಳೆಯರು ಈ ಪರಿಣಾಮಕಾರಿ ಚಳುವಳಿಗೆ ತೀವ್ರ ಅಧ್ಯಯನಗಳಿಗೆ ಅಗತ್ಯವಿದೆ ಎಂದು ಮನಗಂಡರು ಹಾಗೂ ಅಧ್ಯಯನ ವಿಧಾನವನ್ನು ಅಮೇರಿಕದಿಂದಲೇ

ಪಡೆದುಕೊಂಡರು ಹೀಗಾಗಿ ಇಲ್ಲಿಯೂ ಸ್ತ್ರೀವಾದಿ ವಿಮರ್ಶೆಯೇ, ಸ್ತ್ರೀವಾದಿ ಚಿಂತನೆಯ ವಿಶ್ಲೇಷಣಾ ಸಾಧನಾಯಿತು. ಬಹಳ ವಿಚಿತ್ರವೆನ್ನುವಂತೆ ಅಮೇರಿಕಾ ಸ್ತ್ರೀವಾದವನ್ನು ಅಲ್ಲಿನ ಕಪ್ಪು ಮಹಿಳೆಯರು ನಿರಾಕರಿಸಿದಂತೆ ಭಾರತೀಯ ಸ್ತ್ರೀವಾದವನ್ನು ದಲಿತ ಸ್ತ್ರೀವಾದವು ಸಂಶಯದಿಂದ ನೋಡಿತು".[13]

"ಲೆಸ್ಬಿಯನ್ ಸ್ತ್ರೀವಾದ: ಮಹಿಳೆ ಪುರುಷನೊಂದಿಗೆ ಲೈಂಗಿಕ ಸಂಬಂಧವನ್ನು ಹೊಂದವುದು ನೈಸರ್ಗಿಕವಾದದ್ದು. ಆದರೆ ಮಹಿಳೆ-ಮಹಿಳೆಯೊಂದಿಗೆ ಲೈಂಗಿಕ ಸಂಬಂಧ ಹೊಂದಿ ಪರಸ್ಪರ ಪ್ರೀತಿ, ಅನುರಾಗದಿಂದ, ದಾಂಪತ್ಯವನ್ನು ನಡೆಸುವುದು ಸಾಧ್ಯವಾದರೆ ಪುರುಷ ದೌರ್ಜನದ ಮಾತೆ ಬರುವುದಿಲ್ಲ. ಇಂತಹ ಸಹ ಲಿಂಗ ಪ್ರತಿಯನ್ನು ಹೇಳುವ ವಾದವೇ ಲೆಸ್ಬಿಯನ್ ಸ್ತ್ರೀವಾದವಾಗಿದೆ. ಪಿತೃ ಪ್ರಧಾನತೆಗೆ ಒಡ್ಡುವ ಪ್ರತಿರೋಧವಾಗಿ ಪುರುಷ ಸಂಬಂಧಗಳನ್ನು ನಿರಾಕರಿಸುವ ತರ್ಕವಾಗಿದೆ"[14].

ಸಾಂಸ್ಕೃತಿಕ ಸ್ತ್ರೀವಾದ ಮತ್ತು ಪರಿಸರವಾದ:

ಸ್ತ್ರೀ ಶಕ್ತಿ ಎನ್ನವುದು ಮೂಲ ಅವಳ ಜೀವನ ಪ್ರೇಮವೇ ಆಗಿದೆ. ಇದರ ಬಹುಮುಖ್ಯ ನೆಲೆ ಅವಳ ಶರೀರವೇ ಆಗಿದೆ. ಪುರುಷ ಚಿಂತನೆಯ ಆಕ್ರಮಣದ ಮೂಲ ಗುರಿ ಆಕೆಯ ಶರೀರವೇ ಆಗಿದೆ. ಈ ಜೀವ ವಿರೋಧಿ ಆಕ್ರಮಣವನ್ನು ಎದುರಿಸಿ ಸ್ತ್ರೀ ಶಕ್ತಿಯನ್ನು ಮತ್ತೆ ಗಳಿಸಿಕೊಳ್ಳುವುದೇ ಈ ಸ್ತ್ರೀವಾದದ ಪ್ರಮುಖ ಚಿಂತನೆ. ತೀವ್ರವಾದಿ ಸ್ತ್ರೀವಾದಿಯಾಗಿ ಪ್ರಸಿದ್ಧಳಾದ ಮೇರಿ ಡಾಲಿ ಆ ಚಿಂತನೆಯನ್ನು ಸಾಂಸ್ಕೃತಿಕ ಪರಿಸರದೊಂದಿಗೆ ಬೆಸೆದು ಬೆಳಸುವ ಈ ಹಂತವನ್ನು ಸ್ತ್ರೀ ಪರಿಸರವಾದ ಎಂದು ವಿವರಿಸುತ್ತಾಳೆ. ಪುರುಷ ಮತ್ತು ಪುರುಷನ ಜೀವಶಾಸ್ತ್ರವೇ ಮಹಿಳೆಯ ಬದುಕಿಗೆ ಶತ್ರುವಾಯಿತು ಹಾಗೂ ಒಂದು ಜೀವ ವಿರೋಧಿ ಸಾಂಸ್ಕೃತಿಕ ಪರಿಸರವನ್ನು ಹರಡಿತು ಎಂದು ಈ ಸ್ತ್ರೀವಾದ ವ್ಯಾಖ್ಯೆನಿಸುತ್ತದೆ.

ಮುಟ್ಟು, ಗರ್ಭ, ಜೀವದ ಫಲಿಸುವಿಕೆ, ಸ್ತನ್ನಪಾನ ಶಕ್ತಿಗಳಂತಹ ವಿಶೇಷ ಪ್ರಕ್ರಿಯೆಗಳು ಅವಳಿಗೆ ಅಷ್ಟೇ ಜೈವಿಕ ಸಂವಾದಗಳಾಗಿವೆ. ಈ ಸ್ತ್ರೀ ಶಕ್ತಿಯನ್ನು ಪಿತೃ ಪ್ರಧಾನ ವಿಚಾರಧಾರೆ ಸಂಕುಚಿತ ಕೆಳದರ್ಜೆಯಿಂದ ಕಾಣುವುದು ಹಿಂದಿನ ಹುನ್ನಾರ. ಈ ಸ್ತ್ರೀ ಶಕ್ತಿಯನ್ನು ನಿಯಂತ್ರಿಸುವ ಒಂದು ಕುತಂತ್ರ ನೆಲೆಕೊತ್ತುವ ಒಂದು ಪ್ರಯತ್ನ ಈ ಸಾಂಸ್ಕೃತಿಕ ರಾಜಕಾರಣವನ್ನು ಅರ್ಥ ಮಾಡಿಕೊಳ್ಳಲು ಸ್ತ್ರೀವಾದಿಗಳು ಸೂಚಿಸಿದರು.

ಹೆಣ್ಣಿನ ಸಹನೆ, ತಾಳ್ಮೆ, ಬೌದ್ಧಿಕ ಶಕ್ತಿ, ಸೂಕ್ಷ್ಮ ಅರಿವು ಸ್ತ್ರೀ ದೈಹಿಕ ಸಾಮರ್ಥ್ಯಗಳೆಂದು ಸ್ವೀಕೃತವಾದಗ ಮಾತ್ರ ಪುರುಷನ ಈ ವಿಷಯದ ಬಗ್ಗೆ ಭಯ, ಆತಂಕ, ಇಂದಿಗೂ ಮುಂದುವರೆದಿರುವುದು ವಿಸ್ಮಯ ಎಂದು ಸ್ತ್ರೀವಾದಿಗಳ ಚಿಂತನೆಯಾಗಿದೆ.

"ಭಾರತೀಯ ಸ್ತ್ರೀವಾದದಲ್ಲಿ ಕಾಣುವ ಸತ್ಯವೇನೆಂದರೆ ಪಿತೃ ಪ್ರಧಾನತೆಯ ಜೊತೆಗೆ ಜಾತಿ, ವರ್ಗ, ಲಿಂಗ, ನಂಬಿಕೆ ಆಚರಣೆಗಳು ಹೆಣ್ಣಿನ ಮೇಲೆ ನಡೆಸುವ ಹಿಂಸೆ ಭಾಗಗಳೇ ಆಗಿವೆ. ಹೀಗಾಗಿ ಭಾರತೀಯ ಸ್ತ್ರೀವಾದ ಎಂದರೆ, ಸವಾಲುಗಳು, ಪ್ರತಿಭಟನೆಗಳು ತನ್ನ ಎರಡು ಬಾವುಗಳಲ್ಲಿ ತಬ್ಬಿಕೊಂಡು ಸಾಗುವುದೇ ಆಗಿದೆ. ಅತ್ಯಂತ ಶೋಚನೀಯ ಸ್ಥಿತಿಯಲ್ಲಿ ಇರುವ ಮಹಿಳೆಯರ ಬಗ್ಗೆ ಅರಿಯುವುದೆಂದರೆ ಶುದ್ಧ ಮಾನವತೆಯ ಅಧ್ಯಯನವಾಗುತ್ತದೆ. ಭಾರತೀಯ ಸ್ತ್ರೀವಾದ ಈ ದಿಶೆಯಲ್ಲಿ ಶ್ರಮಿಸಬೇಕಾಗಿದೆ. ಅದು ಆಗಾದಿದ್ದರೆ ಹುಟ್ಟಿದ ಪ್ರತಿಯೊಬ್ಬ ಶ್ರೇಷ್ಠ ಮಹಿಳಾ ಪ್ರತಿಭೆಯು ಮಾನವ ಕುಲಕ್ಕೆ ದಕ್ಕದೆ ಹೋಗುತ್ತದೆ ಎಂದು ಡಾ॥ ಹಾಲತಿ ಸೋಮಶೇಖರ ರವರು ತಮ್ಮ ಮಹಿಳಾ ಚಳುವಳಿ ಗ್ರಂಥದಲ್ಲಿ ತಿಳಿಸಿದ್ದಾರೆ"[15].

ಸ್ತ್ರೀವಾದದ ತತ್ವಗಳು ಅಥವಾ ಸ್ತ್ರೀವಾದದ ನಿಲುವುಗಳು:

ತಜ್ಞರು ಹಲವಾರು ಸ್ತ್ರೀವಾದ ತತ್ವಗಳನ್ನು ಪ್ರತಿಪಾದಿಸಿದ್ದಾರೆ. ಅವುಗಳಲ್ಲಿ ಮುಖ್ಯವಾಗಿ ಒಂದು ಸಾಂಪ್ರದಾಯಿಕ ಇನ್ನೊಂದು ಅಸಾಂಪ್ರದಾಯಿಕ ದೃಷ್ಟಿಕೋನದ ತತ್ವಗಳನ್ನು ಅರ್ಥ ಮಾಡಿಕೊಂಡು ಭಾರತೀಯ ಪರಿಸ್ಥಿತಿಯಲ್ಲಿ ಅವಿದ್ಯಾವಂತ ಗ್ರಾಮೀಣ ಮಹಿಳೆಯರನ್ನು ಗಮನದಲ್ಲಿರಿಸಿಕೊಂಡು ಯಾವುದನ್ನು ಅನ್ವಯಿಸಬೇಕು ಎಂಬುದರ ಕಡೆ ದೃಷ್ಟಿಕೋನವನ್ನು ಹರಿಸಲಾಗಿದೆ.

ಸಾಂಪ್ರದಾಯಿಕ ಸ್ತ್ರೀವಾದ:

ಸಾಂಪ್ರದಾಯಿಕ ದೃಷ್ಟಿಕೋನವು ಮುಖ್ಯವಾಗಿ ಕೀಳರಿಮೆ ಮೇಲರಿಮೆಯ ಒಲವನ್ನು ಆಧರಿಸಿರುತ್ತದೆ. ಈ ತತ್ವದ ಪ್ರಕಾರ ಮಹಿಳೆಯ ಸ್ಥಾನ ಮಾನ ಮತ್ತು ಪಾತ್ರವು ಅವಳು ಹುಟ್ಟಿನಿಂದ ಪಡೆದ ಗುಣಧರ್ಮಗಳ ಮೇಲೆ ಅವಲಂಬಿತವಾಗಿರುತ್ತದೆ. ದೈಹಿಕ ಕಾರಣಗಳಿಂದಾಗಿ ಮಹಿಳೆಯರನ್ನು ಪುರುಷರೊಡನೆ ಹೋಲಿಸಿದರೆ ಶರೀರ ರಚನೆಯಲ್ಲಿಯೇ ಅವರು ಅಶಕ್ತರು ಮತ್ತು ಕೋಮಲವಾಗಿರುತ್ತಾರೆ ಎಂಬುದನ್ನು ಬಲವಂತದಿಂದ ಒಪ್ಪಿಸಲಾಗಿದೆ. ಮಹಿಳೆಯರಿಗೆ ಹೆಚ್ಚಿನ ಭಾರ ಹೊರುವುದಕ್ಕೆ ಸಾಧ್ಯವಾಗುವುದಿಲ್ಲ. ಭಾರವಾದ ವಸ್ತುಗಳನ್ನು ಎತ್ತಿ ಒಯ್ಯುವುದು ಅಸಾಧ್ಯ. ಅದಕ್ಕಾಗಿಯೇ ಮಹಿಳೆಯರು ಗಂಡಸರೊಂದಿಗೆ ಹೋರಾಡಲಾರರು ಮತ್ತು ಸ್ಪರ್ಧಿಸಲಾರರು. ಪುರುಷರು ತಮ್ಮ ಹೆಚ್ಚಿನ ದೈಹಿಕ ಬಲ ಹಾಗೂ ಸದೃಢ ಅವಯುವಗಳಿಂದಾಗಿ ಸ್ತ್ರೀಯರ ಮೇಲೆ ನಿಯಂತ್ರಣ ಗಳಿಸಿ ಅವರನ್ನು ಹತ್ತಿಕ್ಕಬಲ್ಲರು. ಹಿಂಸಿಸಬಲ್ಲರು ಮತ್ತು ಆವರ ಇಚ್ಛೆಗೆ ವಿರುದ್ಧ ಯಾವುದೇ ಕೆಲಸವನ್ನು ಮಾಡಿಸಬಲ್ಲರು. ಹೀಗಾಗಿಯೇ ಮಹಿಳೆಯರು ಪುರುಷರ ಒತ್ತಡಕ್ಕೆ ಮಣಿದು ಯಾವ ಕೆಲಸ ಮಾಡಲು ಹಿಂಜರಿಯಲು ಅದು ಭಿಕ್ಷೆಗೂ ಆಗಿರಬಹುದು, ವೈಶ್ಯಾ ವಾಟಿಕೆ ಆಗಿರುಬಹುದು ಇದು ಮಹಿಳೆಯರಿಗೆ ಅಷ್ಟೇ ಅನಿವಾರ್ಯವಾಗಿದೆ.

ಪುರುಷ ಪ್ರಾಬಲ್ಯದ ಎದುರು ಅವರ ಅಪೇಕ್ಷೆ ಅನಪೇಕ್ಷೆಗಳು ಗೌಣವಾಗಿ ಬಿಟ್ಟಿವೆ. ನಿಸರ್ಗದತ್ತವಾಗಿರುವ ಋತುಸ್ರಾವ, ಹೆರಿಗೆ, ಗರ್ಭಧಾರಣೆ, ಹಾಲುಣಿಸುವುದು ಮುಂತಾದ ಭಾಧೆಗಳೂ ಕಾಡುತ್ತವೆ. ಅವರಲ್ಲಿ ಅಬಲೆ, ಅಭದ್ರೆ ಹಾಗೂ ಅಸಹಾಯಕತೆಯ ಭಾವಗಳು ಮೂಡಿ, ಪುರುಷರು ಆಶ್ರಯ ಮತ್ತು ಸಂರಕ್ಷಣೆಯಲ್ಲಿ ಬಾಳುವುದೇ ಯೋಗ್ಯವೆಂಬ ತೀರ್ಮಾನಕ್ಕೆ ಬರುವ ಸಾಧ್ಯತೆಗಳೂ ಹೆಚ್ಚಿವೆ. ಹಾಗಾಗದೇ ಇದ್ದರೆ ಬದುಕು ದುಸ್ಥರವಾಗುತ್ತದೆ ಎಂದು ಹೆದರಿ ತನ್ನ ಮನಸ್ಸಿಗೆ ಮತ್ತು ಬದುಕಿಗೆ ವಿರುದ್ಧವಾದ ಅನೇಕ ತೀರ್ಮಾನಗಳನ್ನು ಬಹಳಷ್ಟು ಮಹಿಳೆಯರು ತೆಗೆದುಕೊಳ್ಳುವಂತಹ ಪರಿಸ್ಥಿತಿ ನಮ್ಮಲ್ಲಿದೆ.

ಮಹಿಳೆಯರ ಸಹಜ ಸೌಂದರ್ಯ, ಆಕರ್ಷಣೆ, ಅಸಹಾಯಕತೆಯಿಂದಾಗಿ ಶೀಲಭಂಗ, ಅತ್ಯಾಚಾರಕ್ಕೆ ಬಲಿಯಾಗುವ ಸಾಧ್ಯತೆಗಳು ಬಹಳಷ್ಟಿವೆ. ಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೇನೆಂದರೆ ಏಕ ವ್ಯಕ್ತಿಯಿಂದ ಅಥವಾ ಸಾಮೂಹಿಕ ವ್ಯಕ್ತಿಗಳಿಂದ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿರುವುವಂತಹ ಸಾವಿರಾರು ನಿದರ್ಶನಗಳಿವೆಯೇ ಹೊರತಾಗಿ ಪುರಷರು ಸ್ತ್ರೀಯರ ಅತ್ಯಾಚಾರಕ್ಕೆ ಒಳಗಾದರು ಎಂಬ ಸುದ್ದಿಗಳು ಇರುವುದಿಲ್ಲ. ಇದಕ್ಕೆ ನಾವು ಓದುವ ದಿನನಿತ್ಯದ ಪತ್ರಿಕೆಗಳೇ ಸಾಕ್ಷಿಯಾಗಿವೆ.

ಹೀಗಾಗಿ ಮಹಿಳೆಯರು ಮನೆಗಳಿಗೆ ಮತ್ತು ನೆರೆಮನೆಗಳಿಗೆ ಸೀಮಿತರಾಗಿಯೇ ಉಳಿಯಲು ಇಚ್ಛಿಸುತ್ತಾರೆ. ಸಮಾಜದ ಪುರುಷ ಪ್ರಧಾನ ವ್ಯವಸ್ಥೆ ಮಹಿಳೆಯರನ್ನು ಸಾರ್ವಜನಿಕ ಕ್ಷೇತ್ರಗಳಲ್ಲಿ ಮುನ್ನುಗ್ಗಲು ಅವಕಾಶ ಮಾಡಿಕೊಡುವುದಿಲ್ಲ. ಈ ಕಾರಣಕ್ಕೆ ಮಹಿಳೆಯರು ಮನೆಯ ನಾಲ್ಕು ಗೋಡೆ ಮಧ್ಯವಿದ್ದರೆ ಸಾಕು ಎಂಬ ನಿಲುವಿಗೆ ಬಂದಿದ್ದಾರೆ. ಮಹಿಳೆಯರು ಹುಟ್ಟಿನಿಂದ ಕೆಳಸ್ತರದಲ್ಲಿ ಬದುಕು ಸಾಗಿಸುವಂತೆ ಒತ್ತಾಯಿಸಲಾಗಿದೆ.

ಅಸಂಪ್ರದಾಯಿಕ ದೃಷ್ಟಿಕೋನ ಪ್ರಗತಿಶೀಲ ಮತ್ತು ಪಾಶ್ಚಿಮಾತ್ಯ ಸ್ತ್ರೀವಾದ:

"ಮಹಿಳೆ ಜೈವಿಕವಾಗಿ, ಮಾನಸಿಕವಾಗಿ, ದೈಹಿಕವಾಗಿ ಪುರುಷಗಿಂತ ಯಾವ ವಿಷಯದಲ್ಲೂ ಕಡಿಮೆ ಇರುವುದಿಲ್ಲ. ಸರ್ವ ಸಮಾನತೆ ಇರುವುದು ಅವಶ್ಯ ಎಂಬುದು ಪ್ರಗತಿ ಶೀಲರ ತೀರ್ಮಾನ. ಪುರುಷ ವರ್ಗವು ಒಗ್ಗಟ್ಟಾಗಿ ಸ್ತ್ರೀವರ್ಗವನ್ನು ಆಳುತ್ತದೆ. ಮತ್ತು ಎಲ್ಲ ಆಧುನಿಕ ಸೌಕರ್ಯಗಳ ಫಲಾನುಭವಿಗಳು ಪುರುಷರೇ ಆಗಿರುತ್ತಾರೆ ಎಂಬುದು ಪ್ರಗತಿಶೀಲ ಸ್ತ್ರೀವಾದಿಗಳ ನಂಬಿಕೆಯಾಗಿದೆ.

ಇದನ್ನು ಪಿತೃ ಪ್ರಧಾನ ವ್ಯವಸ್ಥೆ ಎಂದು ಕರೆದು ಪುರುಷರೇ ಮೇಲುಗೈ ಸಾಧಿಸಲು ಹವಣಿಸುತ್ತಾರೆ. ಜೈವಿಕವಾಗಿ ಮತ್ತು ಮಾನಸಿಕವಾಗಿ ನೋಡಿದರೂ ಮಹಿಳೆಯರು ಪುರುಷರಿಗಿಂತ ಶ್ರೇಷ್ಠವಾಗಿದ್ದಾರೆ. ಕೀಳಾಗಿ ಇಲ್ಲ ನೋಡಿ ಗುಡ್ಡೇ 1997 ಹೆಣ್ಣಿನ ಶ್ರೇಷ್ಠತೆ ತಾಯಿಯ ಗರ್ಭದಿಂದಲೇ

ಆರಂಭವಾಗುತ್ತದೆ. ಬಹಳಷ್ಟು ಗಂಡು ಮಕ್ಕಳು ಸತ್ತು ಹುಟ್ಟುತ್ತವೇ. ಹೆಣ್ಣು ಶಿಶುಗಳು ಸಾವನ್ನಪ್ಪುವುದು ಈ ಸಂಖ್ಯೆಗೆ ಹೋಲಿಸಿದರೆ ಕಡಿಮೆ. ಒಂದು ವರ್ಷದ ಅವಧಿಯಲ್ಲಿ ಗಂಡು ಶಿಶುಗಳ ಸಾವಿನ ಪ್ರಮಾಣ ಹೆಣ್ಣು ಶಿಶುವಿಗಿಂತ ಹೆಚ್ಚಾಗಿದೆ".[16]

ಜೈವಿಕವಾಗಿಯೂ ಮಾನಸಿಕವಾಗಿಯೂ ದೈಹಿಕ ದುಡಿಮೆಯಿಂದಲೂ ಹೆಣ್ಣು ಯಾವ ರೀತಿಯಿಂದಲೂ ಗಂಡಿಸಗಿಂತ ಕಡಿಮೆ ಇರುವುದಿಲ್ಲ. ಅವಳು ನಿಸರ್ಗದತ್ತವಾಗಿ ಪರಿಪೂರ್ಣಳು. ಸುಪ್ರಸಿದ್ಧ ಸ್ತ್ರೀವಾದಿ ಕಲ್ಪನಾ ಶಾ ರವರು ಹೇಳುವಂತೆ, ಕೇವಲ ದೊಡ್ಡ ಗಾತ್ರ ಮತ್ತು ದೈಹಿಕ ಶಕ್ತಿ ಯಾರನ್ನೂ ಶ್ರೇಷ್ಠವಾಗಿಸಲಾರದು. ಹಾಗಿದ್ದಲ್ಲಿ ಬಿಳಿಯರಿಗಿಂತ ದೈಹಿಕವಾಗಿ ಬಲಿಶಾಲಿಗಳಾದ ನೀಗ್ರೋಗಳು ಶ್ರೇಷ್ಠರೆಂದು ಕರೆಸಿಕೊಳ್ಳಬೇಕಿತ್ತು.

ಮಹಿಳೆಗೆ ಏನು ತಿಳಿಯದು ಅಶಕ್ತಳು ಮತ್ತು ಅಬಲೆಯರೆಂದು ಮತ್ತೆ ಮತ್ತೆ ಹೇಳಿ ಮಹಿಳೆಯರನ್ನು ಮೂಲೆಗುಂಪು ಮಾಡಲಾಗಿದೆ ಅಷ್ಟೆ ಎಂಬುದು ಅವರ ವಾದ. ಇಂದಿನ ಕಾಲದಲ್ಲಿ ಮಹಿಳೆಯರು ಸ್ವತ: ನಿರ್ಧಾರಕ್ಕೆ ಬಂದು ಎಷ್ಟೋ ಭಾರವಾದ ಮತ್ತು ಶಕ್ತಿಯುತ ಕೆಲಸ ನಿರ್ವಹಿಸುತ್ತಿದ್ದಾರೆ.

ಪುರುಷ ರೂಪಿತ ಮತ್ತು ಪುರುಷ ಯೋಜಿತ ಸಾಂಸ್ಕೃತಿಕ ಸಿದ್ಧಾಂತಗಳ ಕಾರಣಗಳಿಂದ ಲಿಂಗ ವರ್ತನೆಗಳು ನಿರ್ಣಯಾತ್ಮಕ ಪಾತ್ರ ವಹಿಸುತ್ತವೆ. ಮಾರ್ಗರೇಟ್, ಮೇಡ್ ರವರು ತಮ್ಮ ಗ್ರಂಥವಾದ ಲಿಂಗ ಮತ್ತು ಪ್ರವೃತ್ತಿ ಎಂಬ ಪುಸ್ತಕದಲ್ಲಿ ಪುರುಷತ್ವ ಮತ್ತು ಸ್ತ್ರೀತ್ವಗಳನ್ನು ನಿರ್ಧರಿಸುವಲ್ಲಿ ಸಾಂಸ್ಕೃತಿಕ ಹಿನ್ನಲೆಯೇ ನಿರ್ಣಯಾತ್ಮಕ ಅಂಶವಾಗಿದೆಯೆಂದು ತಿಳಿಸಿದ್ದಾರೆ.

ಭಾರತದಲ್ಲಿ ಸ್ತ್ರೀವಾದವೆಂದರೆ ಮಹಿಳಾ ಪ್ರಾಧಾನ್ಯತೆಯೆಂಬುದಲ್ಲ. ಪುರುಷರೊಡನೆ ಸಮಾನತೆ ಎಂದು ಅರ್ಥೈಸಿಕೊಳ್ಳಬೇಕಾಗುತ್ತದೆ. ಸ್ತ್ರೀವಾದವು ಬಹಳ ಸಲ ವ್ಯತೀರಿಕ್ತ ಅರ್ಥಕೊಡುವ ಸಾಧ್ಯತೆ ಇದೆ. ಒಂದು ವರ್ಗದ ತಿಳುವಳಿಕೆಯೇನೆಂದರೆ ಮಹಿಳೆಯು ಹುಟ್ಟಿನಿಂದಲೇ ಅಶಕ್ತಳಾಗಿ, ಅಬಲೆಯಾಗಿ, ಕೋಮಲೆಯಾಗಿ ಹುಟ್ಟುವುದರಿಂದ ಶಾರೀರಿಕ ವಾಗಿಯೂ ಮತ್ತು ಮಾನಸಿಕವಾಗಿಯೂ ತನ್ನನ್ನು ತಾನು ಯಾವುದೇ ಕೆಲಸಕ್ಕೆ ಅನರ್ಹಳೆಂದು ಭಾವಿಸುವುದರಿಂದ ಅವಳಿಗೆ ಪುರುಷ ಸಮಾನತೆಯ ಸ್ಥಾನಮಾನ ನೀಡುವುದು ಕಲ್ಪನಾತೀತ ವಾದುದು. ಆದರೆ ಅದು ಹಾಗಲ್ಲ ಪದೇ ಪದೇ ಹೇಳಿ ಹೇಳಿ ಬಲವಂತವಾಗಿ ಒಪ್ಪಿಸಲಾಗಿದೆ ಎಂಬುದು ಸತ್ಯ.

ಇನ್ನೊಂದುವಾದವು ಏನೆಂದರೆ, ಸ್ತ್ರೀ ವಾದತ್ವವು ಮುಖ್ಯವಾಗಿ ಪುರುಷರೆ ಕಲ್ಪಿಸಿದಂತಹ ಒಂದು ಕುತಂತ್ರ. ಈ ಮೂಲಕವೂ ಅವರು ಜಾಗೃತ ಮಹಿಳೆಯರ ಮೇಲೆ ಒಂದು ರೀತಿಯ ಪ್ರಚ್ಛನ್ನ ಗುಲಾಮಗಿರಿಯನ್ನು ಹೇರಲು ಬಯಸುತ್ತಾರೆ.

ಈ ನನ್ನ ಪ್ರಬಂಧವು ಎರಡೂ ವಾದಗಳನ್ನು ಅಲ್ಲಗಳೆದು ಒಂದು ಮಧ್ಯಮಾರ್ಗವನ್ನು ಕಂಡುಕೊಳ್ಳುವುದಾಗಿದೆ. ಕಮಲಾ ಭೂಷಣ ಮತ್ತು ಖಾನ್ ಅವರ (1991) ಪ್ರಕಾರ, ಮಹಿಳಾ ಶೋಷಣೆ ಮತ್ತು ಅವಳನ್ನು ಬಂಧಿಯಾಗಿಸಿರುವುದನ್ನು ತಡೆಯುವುದೇ ಸ್ತ್ರೀವಾದಿತ್ವಾಗಿದೆ. ಸಮಾಜದಲ್ಲಿಯೂ ಮತ್ತು ಕುಟುಂಬದಲ್ಲಿಯೂ ಆಕೆ ಆತ್ಮ ಜಾಗೃತಿಗೊಂಡು ತನ್ನ ಕೆಲಸ ಕಾರ್ಯಗಳನ್ನು ಜವಾಬ್ದಾರಿಯುತವಾಗಿ ನಿಭಾಯಿಸುವುದು ಸ್ತ್ರೀವಾದದ ಮೂಲ ಸ್ವರೂಪ. ಇಂಥ ಪರಿಸ್ಥಿತಿಯ ಬಗ್ಗೆ ಗಂಡು ಹೆಣ್ಣು ಉಭಯರೂ ಹೊಸ ತಿಳುವಳಿಕೆಗಳನ್ನು ಪಡೆಯುವುದು ಅವಶ್ಯಕವಾಗಿದೆ. ಸ್ತ್ರೀವಾದವು ಮುಖ್ಯವಾಗಿ ಪುರುಷವಿರೋಧಿಯೂ ಅಲ್ಲ ಮಹಿಳೆಯ ಮೇಲ್ಮೆಯೂ ಅಲ್ಲ ಒಬ್ಬರು ಮತ್ತೊಬ್ಬರನ್ನು ಸಮಾನ ಪಾತಳಿಯ ಮೇಲೆ ಅರ್ಥಮಾಡಿಕೊಳ್ಳುವದೇ ಸ್ತ್ರೀ ವಾದವಾಗಿದೆ ಪುರುಷರನ್ನು ಹೊರತುಪಡಿಸಿದರೆ ಸ್ತ್ರೀವಾದಕ್ಕೆ ಅರ್ಥವೇ ಉಳಿಯುವುದಿಲ್ಲ.

ಕೆಲವೊಂದು ವ್ಯಕ್ತಿಗಳ ಮೂಲ ಹಕ್ಕುಗಳನ್ನು ಸರ್ಕಾರ ಸಂರಕ್ಷಿಸಬೇಕಾಗುತ್ತದೆ ಎಂಬ ತಿಳುವಳಿಕೆಯ ಮೇಲೆ ಉದಾರ ಸ್ತ್ರೀವಾದ ರೂಪಿತವಾಗಿದೆ. ಶಿಕ್ಷಣ ಉದ್ಯೋಗ ರಾಜಕೀಯ ಮೀಸಲಾತಿ ಒದಗಿಸುವ ಮುಖಾಂತರ ಸದ್ಯದ ಪರಿಸ್ಥಿತಿಯಲ್ಲೂ ಲಿಂಗಭೇದವಿಲ್ಲದೆ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿದೆ. ಗಂಡು ಹೆಣ್ಣಿನಲ್ಲಿರುವ ವ್ಯತ್ಯಾಸವನ್ನು ಸಂಪೂರ್ಣವಾಗಿ ಹೋಗಲಾಡಿಸುವುದು. ಸರ್ಕಾರಗಳಿಂದ ಸಾಧ್ಯವಿಲ್ಲವಾದರೂ ಪರಸ್ಪರ ಅರ್ಥೈಸಿ ಕೊಳ್ಳುವಿಕೆಯ ಮುಖಾಂತರ ವಾಸ್ತವಿಕತೆಯ ಪ್ರಚಾರ ಮತ್ತು ಪ್ರಸಾರದ ಮೂಲಕ ಇಬ್ಬರ ನಡುವಣ ಅಂತರವನ್ನು ಕಡಿಮೆಗೊಳಿಸುವುದು ಸಾಧ್ಯವಾಗುತ್ತದೆ.

ಗ್ರಾಮೀಣ ಮಹಿಳೆಯ ಸಬಲೀಕರಣ ಸ್ತ್ರೀವಾದಿ ಚಿಂತನೆಯ ಅಧ್ಯಯನದ ಮೂಲಕ ಸರ್ಕಾರದ ಮಧ್ಯಪ್ರವೇಶ ತಂತ್ರಗಾರಿಕೆಯ ಮುಖಾಂತರ ಹಾಗೂ ಸಾಮಾಜಿಕ, ಶೈಕ್ಷಣಿಕ, ರಾಜಕೀಯ, ಆರ್ಥಿಕ ಸಬಲಗೊಳಿಸುವುದರ ಮೂಲಕ ಗ್ರಾಮೀಣ ಮಹಿಳೆಯರ ಸ್ಥಾನಮಾನವನ್ನು ಗಮನಾರ್ಹವಾಗಿ ಎತ್ತರಿಸಬಹುದಾಗಿದೆ ಎಂದು ಪ್ರತಿಪಾದಿಸಲಾಗಿದೆ.

ಸಾಂಪ್ರದಾಯಿಕ ಭಾರತಿಯ ಸಮಾಜದಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ನಮ್ಮ ಧೋರಣೆಯು ಗ್ರಾಮಾಂತರ ಪ್ರದೇಶಗಳಲ್ಲಿ ಪುರುಷರ ಪ್ರಾಬಲ್ಯವನ್ನು ಸಂಪೂರ್ಣವಾಗಿ ಅಳಿಸಲಾಗದು ಎಂಬ ಎಚ್ಚರಿಕೆಯಿಂದಲೇ ಮುಂದುವರಿಯುವುದಾಗಿದೆ. ಭಾರತದಂಥ ಸಾಂಪ್ರದಾಯಪ್ರಿಯ ರಾಷ್ಟ್ರದಲ್ಲಿ ಯಾವುದನ್ನೂ ಒಮ್ಮೆಲೇ ಕಿತ್ತು ಹಾಕಲು, ಹೋಗಲಾಡಿಸಲು ಸಾಧ್ಯವಿಲ್ಲ. ಕೆಲಮಟ್ಟಿಗಾದರೂ ಕಡಿಮೆ ಮಾಡಬಹುದೇ ಹೊರತು ಸಂಪೂರ್ಣವಾಗಿ, ಬೇರು ಸಹಿತ ಕೀಳುವುದು ಅಸಾಧ್ಯದ ಕೆಲಸವಾಗಿದೆ. ಹಲವು ರೀತಿಯಿಂದ ಗ್ರಾಮೀಣ ಮಹಿಳೆಯರು ಸಬಲರಾದರೆ ಸ್ತ್ರೀ ವಾದಕ್ಕೆ ಪ್ರೋತ್ಸಾಹ ದೊರೆತಂತೆ ಅಗುತ್ತದೆ

ಎಂಬುದೇ. ಅಧ್ಯಯನದ ಆಶಯವಾಗಿದೆ. ಸ್ತ್ರೀವಾದ ಮತ್ತು ಸಬಲೀಕರಣ ಒಂದಕ್ಕೊಂದು ಪೂರಕವಾಗಿವೆ. ಮಹಿಳೆಯ ಸ್ಥಾನಮಾನವನ್ನು ವಿಸ್ತರಿಸುವಲ್ಲಿ ಸಹಕಾರಿಯಾಗಿವೆ. ಗ್ರಾಮೀಣ ಜನತೆಗೆ ಇನ್ನು ಹೆಚ್ಚಿನ ಅರಿವನ್ನು, ಸಮಾನತೆಯ ತತ್ವವನ್ನು, ಮಾನವೀಯತೆಯ ಮೌಲ್ಯಗಳನ್ನು, ಜಾಗೃತಿಮಾಡಬೇಕಾಗಿದೆ. ಹೀಗಾಗಿ ಗ್ರಾಮೀಣ ಮಹಿಳೆಯ ಸಬಲೀಕರಣದಲ್ಲಿ ಸ್ತ್ರೀವಾದವು ಅತ್ಯಂತ ಮಹತ್ವದ ಪಾತ್ರವನ್ನು ಪಡೆಕೊಂಡಿದೆ. ಅವಳ ಸಬಲೀಕರಣಕ್ಕೆ ಹೆಚ್ಚಿನ ಒತ್ತನ್ನು ನೀಡಿದೆ ದಾರಿದೀಪವಾಗಿದೆಯೆಂದು ಹೇಳಬಹುದಾಗಿದೆ.

ಕೊನೆಯದಾಗಿ ಗ್ರಾಮೀಣ ಮಹಿಳೆ ತನ್ನ ಕುಟುಂಬದಲ್ಲಿ ಅಲಂಕಾರಿಕ ಭ್ರಮೆಯ ಮಾತುಗಳಿಗೆ ಕುಗ್ಗದೆ ಸ್ತ್ರೀ–ಪುರುಷ ಸಂಬಂಧಗಳು ಸಹಜಗೊಳ್ಳುವ ವಾತಾವರಣ ನಿರ್ಮಾಣವಾದಾಗ ಕುಟುಂಬ ಜಂಜಾಟವಾಗಿರದೆ ಸುಖದ ನೆಲೆಯಾಗಿರುತ್ತದೆ. ಇದು ಮುಂದೊಂದು ದಿನ ಬರುವ ಸಮಾನತೆಯ ಸಮಾಜಕ್ಕೆ ಭದ್ರ, ಬುನಾದಿಯಾಗಿದೆ. ಹೀಗೆ ಗ್ರಾಮೀಣ ಮಹಿಳೆಗೂ, ಸ್ತ್ರೀವಾದಕ್ಕೂ. ಹಾಗೂ ಸಬಲೀಕರಣಕ್ಕೂ ಬಹಳ ಅವಿನಾಭಾವ ಸಂಬಂಧಗಳಿವೆ.

ಟಿಪ್ಪಣಿಗಳು

1. ಕೆ.ಭೈರಪ್ಪ –2005 "ಭಾರತೀಯ ಸಮಾಜ ಪುಟ ಸಂಖ್ಯೆ : 238.
2. ಅದೇ ಪುಟ ಸಂಖ್ಯೆ: 237.
3. ವಿವರಗಳಿಗೆ ನೋಡಿ ಕನವಳ್ಳಿ ಸದಾನಂದ ಮತ್ತು ರಾಜೂರು ವೀರಣ್ಣ (ಸಂ) ಮಹಾಮಾರ್ಗ 1998 ಪುಟ ಸಂಖ್ಯೆ : 386.
4. ಚ.ನ.ಶಂಕರರಾವ 2005 – ಭಾರತೀಯ ಸಮಾಜ, ಪುಟ.ಸಂಖ್ಯೆ 228.
5. ಅದೇ ಪುಟ ಸಂಖ್ಯೆ : 260 ರಿಂದ 265.
6. ಶೈಲಶ್ರೀ 2004 ಗ್ರಾಮೀಣ ಮಹಿಳೆಯರ ಸ್ಥಿತಿಗತಿ "ಮಾನಿನಿ"
7. ಡಾ॥ ಶಾಂತಾ.ಬಿ.ಅಷ್ಟಗಿ 2007 ನಡೆ ತುರಗ (ಬಿಡಿ ಲೇಖನಗಳು) ಪುಟ.ಸಂಖ್ಯೆ: 24, 25.
8. ಚ.ನ.ಶಂಕರರಾವ್ 2008 "ಭಾರತದಲ್ಲಿ ಮಹಿಳಾ ಅಧ್ಯಯನ" ಪುಟ ಸಂಖ್ಯೆ: 168 ರಿಂದ 170.
9. ಜಿ.ಕೆ.ಪಿಳ್ಳೆ 1990 ಭಾರತೀಯ ಮಹಿಳೆಯ ಸಬಲೀಕರಣ ವಿಶ್ವವಿದ್ಯಾಲಯದ ಹೊಸ ನೀತಿ ಪುಟ.ಸಂಖ್ಯೆ: 19, 47

10. ಬಿಶ್ವಾಸ ಮತ್ತು ಕಬೀರ್ 2004 " ಮೇಝುರಿಂಗ್ ವ್ಯೂಮನ್ಸ್ ಎಂಪಾವರಮೆಂಟ್ ಇಂಡಿಕೇಟರ್ಸ್ ಆ್ಯಂಡ್ ಮೇಝುರ್‌ಮೆಂಟ್ಸ್ ಟೆಕ್ನಿಕ್ಸ್ ಸೋಷಿಯಲ್ ಚೆಂಜ್ ವ್ಯಲುಮ್ ಪೇಜ್ ನಂ. 3

11. ವಿವರಗಳಿಗೆ ನೋಡಿ ಡಾ॥ ಎಚ್.ಎಸ್.ಶ್ರೀಮತಿ 2003 ಸ್ತ್ರೀವಾದ ಪುಟ.ಸಂಖ್ಯೆ : 12, 13

12. ಸುಂದರಿ.ಎಸ್.1992 ಇಸ್ ಫೆಮಿನೀಸಂ ಕಲ್ಚರಲಿ ಲಿಮಿಟಡ್ ಸೋಷಿಯಲ್ ಚೆಂಜ್ ಡಿಸೆಂಬರ್ 1992 ವ್ಯಾಲುಮ್ 22 ಪೇಜ್.ನಂ.4.

13. ಡಾ॥ ಎಚ್.ಎಸ್.ಶ್ರೀಮತಿ 2003 ಸ್ತ್ರೀವಾದ ಪುಟ ಸಂಖ್ಯೆ : 51 ರಿಂದ 52.

14. ಡಾ॥ ಹಾಲತಿ ಸೋಮಶೇಖರ 2007 ಮಹಿಳಾ ಚಳುವಳಿ ಪುಟ ಸಂಖ್ಯೆ: 318.

15. ಅದೇ ಪುಟ ಸಂಖ್ಯೆ: 339.

16. ನೋಡಿ ಗುಡ್ಡೆ ಡಬ್ಲ್ಯೂ.ಜೆ 1977 ಸಮಾಜಶಾಸ್ತ್ರದ ತತ್ವಗಳು ಪುಟ.ಸಂಖ್ಯೆ: 344, 345.

ಅಧ್ಯಾಯ–3

ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ

3.1 ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳು.

3.2 ಗ್ರಾಮೀಣ ಮಹಿಳಾ ಸಬಲೀಕರಣದ ಪರಿಣಾಮಗಳು.

3.3 ಸರ್ಕಾರೇತರ ಸಂಸ್ಥೆಗಳ ಪಾತ್ರ.

3.3.1 ಮಹಿಳಾ ಸಮಾಖ್ಯ ಕರ್ನಾಟಕ

3.3.2 ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆ

ಅಧ್ಯಾಯ–3

ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳ ಪಾತ್ರ

3.1. ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳು:

ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಭಾರತ ಸರ್ಕಾರ ಪಂಚವಾರ್ಷಿಕ ಯೋಜನೆಗಳ ಮುಖಾಂತರ ಪ್ರಾರಂಭದಿಂದ ಇಲ್ಲಿಯವರೆಗೆ ಅನೇಕ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ಆದರೆ ನಿರೀಕ್ಷಿತಮಟ್ಟದಲ್ಲಿ ಪ್ರಗತಿ ಸಾಧಿಸಿಲ್ಲವೆಂದು ಹೇಳಬಹುದಾಗಿದೆ. ಗ್ರಾಮೀಣ ಪ್ರದೇಶದ ಮಹಿಳೆಯರು ಯಾವುದೇ ಸಂಪನ್ಮೂಲಗಳ ಮೇಲೆ ಹಿಡತವನ್ನು ಹೊಂದಿಲ್ಲ. ಪುರುಷ ಪ್ರಧಾನ ಸಮಾಜದಲ್ಲಿ ಬೇರೆಯವರು ತೆಗೆದುಕೊಳ್ಳುವ ತೀರ್ಮಾನಗಳು ಮಹಿಳೆಯರ ದಿನನಿತ್ಯ ಬದುಕಿನ ಮೇಲೆ ಪರಿಣಾಮ ಬೀರುತ್ತವೆ. ಆದ್ದರಿಂದ ಮಹಿಳೆಯರ ಬದುಕಿಗೆ ಬೇಕಾಗಿರುವ ಸಂಪನ್ಮೂಲಗಳ ಮೇಲೆ ತಮ್ಮದೆಯಾದ ಹಿಡಿತ ಸಾಧಿಸಲು ಮತ್ತು ನಿಯಂತ್ರಣ ಪಡೆದುಕೊಳ್ಳಲು ಸರಿಸಮಾನತೆ ಸಾಧಿಸಲು ಸಾಧ್ಯವಿಲ್ಲ. ಹೀಗೆ ನಿಯಂತ್ರಣ ಹೊಂದಬೇಕಾದರೆ ಅವಳು ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ಪ್ರಗತಿ ಹೊಂದಬೇಕಾಗಿದೆ. ಗ್ರಾಮೀಣ ಮಹಿಳೆಯ ಸಬಲೀಕರಣದಲ್ಲಿ ಗ್ರಾಮೀಣ ಅಭಿವೃದ್ಧಿ ಯೋಜನೆಗಳು ಬಹಳ ಮಹತ್ವದ ಪಾತ್ರವನ್ನು ವಹಿಸಿ ಉತ್ತಮ ಪರಿಣಾಮವನ್ನು ಬೀರಿವೆ.

ರಾಜ್ಯಾಂಗದ ನಿರ್ದೇಶನದಂತೆ ಭಾರತ ಸರ್ಕಾರವು ಬಡ ಜನತೆಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಾಗಿ ಗ್ರಾಮೀಣ ಜನರ ಸರ್ವೋತೋಮುಖ ಅಭಿವೃದ್ಧಿಯನ್ನು ಗಮನದಲ್ಲಿರಿಸಿ ಕೊಂಡು ಹಲವಾರು ಯೋಜನೆಗಳನ್ನು ರೂಪಿಸಿದೆ. ಅವುಗಳಲ್ಲಿ ಗ್ರಾಮೀಣ ಮಹಿಳೆಯರಿಗೆ ಸಂಬಂಧಿಸಿದಂತೆ ಕೆಲವು ಯೋಜನೆಗಳನ್ನು ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

"1979ರಲ್ಲಿ ಮೊದಲ ಬಾರಿಗೆ ಕೈಗೊಳ್ಳಲಾಗಿರುವ ಯೋಜನೆಗಳಿಂದ ಗ್ರಾಮೀಣ

ಪ್ರದೇಶದಲ್ಲಿ ದುಡಿಯುವ ಜನರಿಗೆ ಉದ್ಯೋಗ ದೊರೆಯಲು ಅವಕಾಶವಾಯಿತು. ಹಾಗೆಯೇ ಮುಂದೆ ಕೆಲವೊಂದು ಯೋಜನೆಗಳನ್ನು ಸೇರಿಸಲಾಯಿತು. ಗ್ರಾಮೀಣ ಮಹಿಳೆಯರ ಸಬಲೀಕರಣವನ್ನು ಮುಖ್ಯ ಉದ್ದೇಶವನ್ನಾಗಿ ಇಟ್ಟಿಕೊಂಡಿರುವ ಕೆಲವು ಯೋಜನೆಗಳು ಈ ಕೆಳಗಿನಂತಿವೆ.

1. ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ. (IRDP)
   Intigreated Rural Development Programme
2. ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ. (DWACRA)
   Development of women and child in Rural Areas.
3. ಟ್ರೈಸಂ (Trysem)
4. ಸ್ತ್ರೀಶಕ್ತಿ ಯೋಜನೆ.
5. ಸ್ವರ್ಣಜಯಂತಿ ಗ್ರಾಮ ಸ್ವರೋಜಗಾರ ಯೋಜನಾ (SGSRY)" [1]
   Swarnajayanthi Gram Swarojagar yojana

1. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆ:

ಐಆರ್‌ಡಿಪಿ ಯೋಜನೆಯು 1980ರ ಅಕ್ಟೋಬರ 2ರಂದು ಪ್ರಾರಂಭಗೊಂಡಿತು. ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯ ಮುಖ್ಯ ಉದ್ದೇಶ ಗ್ರಾಮೀಣ ವಿಭಾಗದ ಜನ ಜೀವನ ಮಟ್ಟದಲ್ಲಿ ಸುಧಾರಣೆ ತರುವುದೇ ಆಗಿದೆ ಎಂದು ಸರಳವಾಗಿ ವ್ಯಾಖ್ಯಾನಿಸಬಹುದಾಗಿದೆ. "ಬಡತನ ರೇಖೆಗಿಂತ ಕೆಳ ಮಟ್ಟದಲ್ಲಿ ಜೀವನ ಸಾಗಿಸುವ ಜನರಿಗೆ ಸ್ವಾವಲಂಬಿಯಾಗಿಸುವಷ್ಟು ಕೆಲಸಗಳನ್ನು ನೀಡುವುದು" ಎಂದು ಉಮಾ ವೇಲಿ 1975 ರಲ್ಲಿ ವ್ಯಾಖ್ಯಾನಿಸಿದ್ದಾರೆ.

ಕೃಷಿ ಅವಲಂಬಿತ ನೀರಾವರಿ, ಸಂಪರ್ಕ, ಶಿಕ್ಷಣ, ಆರೋಗ್ಯ, ನೈರ್ಮಲ್ಯ ಹಾಗೂ ವಸತಿ ಮುಂತಾದ ಮೂಲ ಸೌಲಭ್ಯಗಳನ್ನು ಒಳಗೊಂಡಂತೆ ಉತ್ತಮ ಪರಿಸರ ನೀಡುವುದು, ಉತ್ತಮ ಬದುಕು ನೀಡುವುದು, ಜೀವನದಲ್ಲಿ ಗುಣಮಟ್ಟದ ಸುಧಾರಣೆ ತರುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸಮುದಾಯಿಕ ಅಭಿವೃದ್ಧಿ ಯೋಜನೆಯೇ (Community Devleopment Programme) ಗ್ರಾಮೀಣ ಜನರ ಬಡತನ ನಿವಾರಿಸುವ ದೃಷ್ಟಿಯಿಂದ ಮೊದಲು ಯೋಜಿಸಿದ ಯೋಜನೆಯಾಗಿದೆ ಈ ಯೋಜನೆಯ ಒಳ ತಿರುಳೇನೆಂದರೆ, ಲಭ್ಯ ಇರುವ ಸಂಪನ್ಮೂಲಗಳ ಬಳಸಿಕೊಂಡು ಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಂಡು ಸುಖ-ಸಂತೋಷದಿಂದ, ನೆಮ್ಮದಿಯಿಂದ ಬದುಕುವುದು ಇದಕ್ಕೆ ಪೂರಕವಾಗಿ ಉತ್ತಮ ಬದುಕಿಗೆ ಬೇಕಾದ ಆರೋಗ್ಯ ಹಾಗೂ ಶಿಕ್ಷಣವನ್ನೂ ಕಡೆಗಣಿಸದೆ

ಇದನ್ನು ಒಳಗೊಂಡಂತೆ ಇನ್ನಷ್ಟು ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳ ನಿರ್ಮಾಣ, ಶಾಲೆಗಳ ನಿರ್ಮಾಣ ಮಾಡಲಾಯಿತು ಹಾಗೆಯೇ ಆರ್ಥಿಕ ನೆರವಿಗಾಗಿ ಸಹಕಾರಿ ಬ್ಯಾಂಕುಗಳೊಂದಿಗೆ ಬ್ಯಾಂಕುಗಳ ಜಾಲವನ್ನು ವಿಸ್ತರಿಸಲಾಯಿತು. ಬ್ಯಾಂಕ್ ಸಾಲ ಸೌಲಭ್ಯವನ್ನು ನೀಡುವುದು ಜನಪ್ರಿಯಗೊಳಿಸಲಾಯಿತು. ಸಮಾಜದ ಕೆಳ ಸ್ತರದಲ್ಲಿರುವ ವ್ಯಕ್ತಿಯೂ ತನ್ನ ಕುಲ ಕಸುಬನ್ನು ಆಧುನಿಕತೆಯ ಯಂತ್ರಗಳೊಂದಿಗೆ ತಂತ್ರಜ್ಞಾನವನ್ನು ಬಳಸಲು ಪ್ರೋತ್ಸಾಹಿಸಲಾಯಿತು.

ಸಾಲಗಾರರ ಕಪಿಮುಷ್ಠಿಯಿಂದ ಆಚೆ ಬರಲು ಜನರ ವಿಶ್ವಾಸ ಗಳಿಸಲು ಸಹಕಾರಿ ಬ್ಯಾಂಕುಗಳೊಂದಿಗೆ ರಾಷ್ಟ್ರೀಯ ಬ್ಯಾಂಕುಗಳು ಹಳ್ಳಿಗಳಿಗೆ ತಲುಪಿದವು. ಸಹಕಾರ ಸಂಘಗಳು ತಮ್ಮ ಮಹತ್ವದ ಪಾತ್ರವನ್ನು ನಿರ್ವಹಿಸಲು ಆರಂಭಿಸಿದ್ದು ಇದೇ ಘಟ್ಟದಲ್ಲಿ. ರೈತರು ತಮ್ಮ ಹೊಲ ಗದ್ದೆಗಳಲ್ಲಿ ಬಾವಿ ತೋಡಿಸಿದರು. ಜೋಡಿ ಎತ್ತಿನ ಬದಲಿಗೆ ಟ್ರ್ಯಾಕ್ಟರ್‌ಗಳು ಸ್ಥಾನಪಡೆದವು. ನೇಗಿಲು ಮುಂತಾದವುಗಳನ್ನೆಲ್ಲ ಕೊಳ್ಳಲು ಅನುಕೂಲವಾಯಿತು. ಆದರೆ ಈ ಯೋಜನೆಯಲ್ಲಿಯೂ ಕೆಲವು ಬಿಟ್ಟು ಹೋದ ಕೊಂಡಿಗಳಿದ್ದವು. ಈ ಯೋಜನೆ ಯಾರಿಗೆ ತಲುಪಬೇಕಿತ್ತೊ ಅವರ ವರೆಗೆ ಸಾಗಲೇ ಇಲ್ಲ ಉಳ್ಳವರ ಅನುಕೂಲಕ್ಕೆ ನಿರ್ಮಾಣ ಮಾಡಿದಂತಾಯಿತು. ಅನುಕೂಲಸ್ಥ ಹಾಗೂ ಪ್ರಗತಿ ಪರ ಭೂಮಿಯುಳ್ಳ ಜಮೀನುದಾರರು ಮಾತ್ರ ಈ ಯೋಜನೆಯ ಪ್ರಯೋಜನ ಪಡದುಕೊಂಡು, ಕೃಷಿ ಕಾರ್ಮಿಕರು ಈ ಯೋಜನೆಯಿಂದಾಚೆಯೇ ಉಳಿಯುವಂತಾಯಿತು. ಯಂತ್ರಗಳ ಬಳಕೆಯಿಂದಾಗಿ ಈ ಕೂಲಿ ಕಾರ್ಮಿಕರ ಕೆಲಸಕ್ಕೂ ಕುತ್ತು ಬಂದಂತಾಗಿ ಸಿಗುವ ಕೂಲಿಗೂ ಕನ್ನ ಹಾಕಿದಂತಾಯಿತು. ಪರಿಣಾಮ ಉಳ್ಳವರ ಮತ್ತು ಇಲ್ಲದವರ ನಡುವಿನ ಅಂತರ ಹೆಚ್ಚಾಗುತ್ತಲೇ ಹೋಯಿತು.

ಇದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಬಹುತೇಕ ಜನರು ಬಡತನ ರೇಖೆಗಿಂತ ಕೆಳಗಿರುವವರೇ ಆಗಿದ್ದರಿಂದ ಅಡವು ಇಡಲು ಜಮೀನಾಗಲಿ, ಒಡವೆ, ನಗ-ನಾಣ್ಯಗಳಾಗಲಿ ಇರದವರೆ ಆಗಿದ್ದರು. ಹಾಗಾಗಿ ಫಲಾನುಭವಿಗಳಿಗೆ ತಲುಪದ ಯೋಜನೆಯ ದೋಷಗಳನ್ನು ಪರಿಷ್ಕರಿಸಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತರಲಾಯಿತು.

ಈ ಯೋಜನೆಯಲ್ಲಿ ಏನೂ ಇಲ್ಲದವರೂ ತಮ್ಮ ಕುಲಕಸುಬಿಗಾಗಿ ಯಾವುದೇ ಬಗೆಯ ಸಾಲಗಳನ್ನು ಪಡೆಯಬಹುದಾಗಿತ್ತು. ಈ ಯೋಜನೆಯ ಸದ್ಬಳಕೆ ಮಹಿಳೆಯರ ಆರ್ಥಿಕ ಸುಧಾರಣೆಯ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ನೆರವಾಯಿತು".[2]

2. **ಗ್ರಾಮೀಣ ಪ್ರದೇಶದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ರಾ) DWACRA** :

ಅಭಿವೃದ್ಧಿ ಕಾರ್ಯಕ್ರಮದಲ್ಲಿ ಮಹಿಳೆಯರನ್ನು ತೊಡಗಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ಐಆರ್‌ಡಿಪಿಯ ಉಪಾಂಗವಾಗಿ ಆರಂಭವಾಗಿದ್ದು 'ಡ್ವಾಕ್ರಾ' ಯೋಜನೆ. ಇದೊಂದು ಸಾಮೂಹಿಕ ಪ್ರಯತ್ನವಾಗಿತ್ತು. ಮಹಿಳೆಯರನ್ನು ಮುಖ್ಯವಾಹಿನಿಯತ್ತ ತರುವುದು ಹಾಗೂ ಅವರನ್ನು ಆರ್ಥಿಕವಾಗಿ ಸಬಲಗೊಳಿಸುವುದು ಇದರ ಉದ್ದೇಶಗಳಲ್ಲಿ ಒಂದಾಗಿತ್ತು. ಸರ್ಕಾರದ ಅಧೀನದಲ್ಲಿ ನೀಡಲಾಗುವ ವಿವಿಧ ಸಾಲ ಸೌಲಭ್ಯಗಳ ಸದ್ಬಳಕೆಯತ್ತಲೇ ಈ ಯೋಜನೆ ತನ್ನ ಗಮನವನ್ನು ಕೇಂದ್ರಿಕರಿಸಿತ್ತು.

ಡ್ವಾಕ್ರಾ ಯೋಜನೆಯ ಮುಖ್ಯ ಉದ್ದೇಶಗಳು:

1. ಉದ್ಯೋಗಾವಕಾಶಗಳನ್ನು ಹುಟ್ಟು ಹಾಕಿ ಹೆಚ್ಚುವರಿ ಆದಾಯದಿಂದ ಮಹಿಳೆಯರ ಆರ್ಥಿಕ ಮಟ್ಟವನ್ನು ಸುಧಾರಿಸುವುದು.
2. ಜೀವನ ಮಟ್ಟದ ಸುಧಾರಣೆಗೆ ಹೊಸ ಹೊಸ ಸೇವಾ ಅವಕಾಶಗಳನ್ನು ಕಲ್ಪಿಸುವುದು.
3. ಸಮೂಹ ಪ್ರಯತ್ನಗಳ ಮೂಲಕ ಮಹಿಳೆಯರನ್ನು ಸಬಲೀಕರಣಗೊಳಿಸಿ ಅವರ ಏಳಿಗೆಯ ವಿಧಾನಗಳನ್ನು ಅವರೇ ನಿರ್ಧರಿಸುವಂತೆ ಮಾಡುವುದು.
4. ಫಲಾನುಭವಿಗಳಿಗೆ ಸುಲಭ ಸಾಧ್ಯವಾಗುವ ರೀತಿಯಲ್ಲಿ ತರಬೇತಿ ಕಾರ್ಯಗಳನ್ನು ಆಯೋಜಿಸುವುದು.
5. ಆರೋಗ್ಯ ವಿದ್ಯಾಭ್ಯಾಸ ಪೌಷ್ಠಿಕ ಆಹಾರ ಹಾಗೂ ನಿರ್ಮಲ ಪರಿಸರದತ್ತ ಹೆಚ್ಚು ಗಮನ ನಿಡುವುದು.

"ಇವೆಲ್ಲವನ್ನು ಡ್ವಾಕ್ರಾ ಯೋಜನೆಯಡಿ ತರಬಹುದು ಎಂದು ಸೀಫಾ ಮತ್ತು ಸೋಮೇಶ್ವರ್ 1998 ಇವರು ಅಭಿಪ್ರಾಯ ಪಟ್ಟಿರುತ್ತಾರೆ".

3. **ಸ್ವ–ಉದ್ಯೋಗ ಕೈಗೊಳ್ಳುವಲ್ಲಿ ಗ್ರಾಮೀಣ ಯುವಕರಿಗೆ ತರಬೇತಿ ಕಾರ್ಯಕ್ರಮ (ಟ್ರೈಸಂ) :**

ಗ್ರಾಮೀಣ ಸ್ತ್ರೀ–ಪುರುಷ ಯುವಶಕ್ತಿಯನ್ನು ಆರ್ಥಿಕವಾಗಿ ಸದೃಢಗೊಳಿಸುವುದೇ 'ಟ್ರೈಸಂ'ನ ಮುಖ್ಯ ಉದ್ದೇಶವಾಗಿದೆ. 18 ರಿಂದ 35 ವರ್ಷ ವಯೋಮಿತಿಯೊಳಗಿನವರು ಮಾತ್ರ ಈ ಯೋಜನೆಯ ಪರಿಧಿಯಲ್ಲಿ ಬರುತ್ತಾರೆ.

ಫಲಾನುಭವಿಗಳಲ್ಲಿ ಮೂರರಲ್ಲಿ ಒಂದಾಂಶದಷ್ಟಾದರೂ ಮಹಿಳಾ ಅಭ್ಯರ್ಥಿಗಳಿರಲೇಬೇಕು ಎಂಬುದು ಒಂದು ನಿಯಮ. ಟ್ರೈಸಂ ಯೋಜನೆ ಅಡಿಯಲ್ಲಿ ವಿವಿಧ ಬಗೆಯ ತರಬೇತಿಗಳನ್ನು

ಏರ್ಪಡಿಸಲಾಗುತ್ತದೆ. ಕಸೂತಿ, ಹೊಲಿಗೆ, ಹಗ್ಗ ಹೊಸೆಯುವುದು, ಕೈ ಮಗ್ಗಗಳ ನೇಯ್ಗೆ, ಬೈಂಡಿಂಗ್, ಅಗರ ಬತ್ತಿ ತಯಾರಿಕೆ, ಮುದ್ರಣ, ಬಡಿಗತನ ಕೆಲಸ ಮುಂತಾದ ಕುಶಲ ಕಲೆಗಳನ್ನು ಹೇಳಿಕೊಡಲಾಗುತ್ತದೆ. ಸ್ವಾವಲಂಬಿಯಾಗಿ ಬದುಕಲು ಅನುಕೂಲವಾಗುವಂತೆ ಅಶಕ್ತರಿಗೆ ಟಿ.ವಿ., ರೇಡಿಯೋ ದುರಸ್ಥಿ, ಮೊಬೈಲ್ ಪೋನ್, ಫ್ರೀಜ್ಜುಗಳು, ದುರಸ್ಥಿಯಂತಹ ತರಬೇತಿಗಳನ್ನು ನೀಡಲಾಗುತ್ತದೆ.

'ಸುಂದರಿ ಮತ್ತು ಕಮಲಾಬಾಯಿ 1991ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ ಈ ಯೋಜನೆಯಲ್ಲಿಯೂ ಅನೇಕ ಲೋಪದೋಷಗಳು ಕಂಡುಬಂದವು, ತರಬೇತಿ ಪಡೆದ ಫಲಾನುಭವಿಗಳು ಉತ್ಪಾದಕ ಚಟುವಟಿಕೆಗಳಿಗಿಂತ ಅನುತ್ಪಾದಕ ಚಟುವಟಿಕೆಗಳಿಗೆ ಹೆಚ್ಚು ಹಣ ವ್ಯಯ ಮಾಡಿದರು ಎಂದು ಅಭಿಪ್ರಾಯ ಪಟ್ಟಿರುತ್ತಾರೆ.

ಮಹಿಳೆಯರಿಗೆ ನೀಡಲಾದ ಸಾಲದ ನಗದನ್ನು ಅವರ ಗಂಡ, ಅಣ್ಣ, ತಮ್ಮ, ಭಾವ, ಕುಟುಂಬದವರು ತಮ್ಮ ಖರ್ಚಿಗಾಗಿ ಬಳಸಿಕೊಂಡಿದ್ದರು. ಅವರ ಹಣ ಕಸಿದುಕೊಂಡ ನಂತರ ಅಲ್ಲಿ ಯಾವುದೇ ಸ್ವಯಂ ಉದ್ಯೋಗದ ಕನಸು ಅರಳಲೇ ಇಲ್ಲ. ಮೊದಲಿನ ಸ್ಥಿತಿಯಲ್ಲಿಯೇ ಮಹಿಳೆಯರು ಇನ್ನಷ್ಟು ಸಾಲದ ಭಾರದೊಂದಿಗೆ ಬದುಕುವಂತಾಯಿತು. ಈ ಯೋಜನೆಯ ಲೋಪದೋಷಗಳಿಂದಾಗಿ ಎಂದು ಶರ್ಮ ಮತ್ತು ತ್ಯಾಗಿ 1984 ಹಾಗೂ ಚರ್ತುವೇದಿ 1983 ರಲ್ಲಿ ಅಭಿಪ್ರಾಯ ಪಟ್ಟಿದ್ದಾರೆ"[3].

4. ಸ್ತ್ರೀ ಶಕ್ತಿ ಯೋಜನೆ:

"2000–2001ನೇ ವರ್ಷದಲ್ಲಿ ಸ್ತ್ರೀಶಕ್ತಿ ಯೋಜನೆಯು ಗ್ರಾಮೀಣ ಮಹಿಳೆಯರ ಸಬಲೀಕರಣ ಹಾಗೂ ಸ್ವಾವಲಂಬನೆ ಮುಖ್ಯ ಗುರಿಯಾಗಿ ಇಟ್ಟುಕೊಂಡು ಅನುಷ್ಠಾನಕ್ಕೆ ಬಂದಿತು. ರಾಜ್ಯದಲ್ಲಿ ಒಂದು ಲಕ್ಷ ಸ್ವ–ಸಹಾಯ ಗುಂಪುಗಳ ಮೂಲಕ ಇಪ್ಪತ್ತು ಲಕ್ಷ ಮಹಿಳೆಯರನ್ನು ಸಂಘಟಿಸುವುದು ಹಾಗೂ ಮಹಿಳೆಯರ ಸರ್ವತೋಮುಖ ಅಭಿವೃದ್ಧಿಗೆ ಈ ಯೋಜನೆಯು ದಾರಿ ದೀಪವಾಗಿದೆ. ಒಟ್ಟಾರೆಯಾಗಿ ಬೃಹತ ಪ್ರಮಾಣದಲ್ಲಿ ಮಹಿಳೆಯರನ್ನು ಸಂಘಟಿಸುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು.

ಈ ಯೋಜನೆಯ ಗುರಿ ಮತ್ತು ಉದ್ದೇಶಗಳು:

1. ರಾಜ್ಯಾದಾದ್ಯಂತ ಮಹಿಳಾ ಸ್ವ–ಸಹಾಯ ಗುಂಪುಗಳನ್ನು ರಚಿಸುವುದು. ಅವರಲ್ಲಿ ಆತ್ಮ ವಿಶ್ವಾಸ, ಸ್ವಾವಲಂಬನೆ, ಸಂಪನ್ಮೂಲಗಳ ಮೇಲೆ ಹತೋಟಿ ಸಾಧಿಸುವಂತೆ ತಿಳುವಳಿಕೆ ನೀಡುವುದು.

2. ಮಹಿಳೆಯರ ಆರ್ಥಿಕ ಪ್ರಗತಿಯನ್ನು ಸಾಧಿಸುವಂತಹ ಹಾಗೂ ಸಾಮಾಜಿಕ ಬದಲಾವಣೆಗೆ ಸೂಕ್ತ ವಾತಾವರಣದ ಪ್ರಕ್ರಿಯಯನ್ನು ಬಲಪಡಿಸುವುದು.

3. ಅದಾಯೋತ್ಪನ್ನ ಚಟುವಟಿಕೆಗಳಲ್ಲಿ ಮಹಿಳೆಯರನ್ನು ತೊಡಗಿಸುವುದು ಮತ್ತು ಬಡತನ ನಿವಾರಿಸುವುದು.

4. ವಿವಿಧ ಇಲಾಖೆಗಳಲ್ಲಿ ಮಹಿಳೆಯರಿಗೆ ಇರುವ ಸೌಲಭ್ಯಗಳನ್ನು ಪಡೆದುಕೊಳ್ಳುವಂತೆ ಅವಕಾಶ ಕಲ್ಪಿಸುವುದು. ಉದಾ: ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯಿಂದ ಒಂದು ಸ್ತ್ರೀ-ಶಕ್ತಿ ಗುಂಪಿಗೆ 5,000/- ರೂಪಾಯಿ ಸುತ್ತು ನಿಧಿ ಕೊಡುತ್ತಾರೆ. ಗುಂಪಿನಲ್ಲಿ ಒಬ್ಬ ಸದಸ್ಯರು ಸಾಲ ತೆಗೆದುಕೊಂಡು ನಂತರ ಮರು ಪಾವತಿ ಮಾಡುತ್ತಾರೆ. ಆ ಹಣವನ್ನು ಮತ್ತೊಬ್ಬರಿಗೆ ಸಾಲವಾಗಿ ನೀಡಲಾಗುತ್ತದೆ. ಅಂದರೆ ಸಂಘದಲ್ಲಿಯೇ ಈ ಹಣ ಸುತ್ತುವರಿಯುತ್ತದೆ"[4].

5. ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ ಯೋಜನೆ:

"ಐಆರ್‌ಡಿಪಿ ಯೋಜನೆಯ ಅನುಷ್ಠಾನದ ಎರಡು ದಶಕಗಳ ನಂತರ ಭಾರತದ ಗ್ರಾಮೀಣ ಜನರ ಪರಿಸ್ಥಿತಿಯನ್ನು ಅಥವಾ ಅಭಿವೃದ್ಧಿಯನ್ನು ಪುನರಾವಲೋಕನ ಮಾಡಲಾಯಿತು. ಪರಿಣಾಮವಾಗಿ ಗ್ರಾಮೀಣ ಪ್ರದೇಶದ ಮಹಿಳೆಯರ ಪರಿಸ್ಥಿತಿಯ ಸುಧಾರಣೆ ನೀರಿಕ್ಷಿಸಿದಷ್ಟು ಆಗಿರಲಿಲ್ಲ ಎಂಬುವುದು ಮೇಲ್ನೋಟಕ್ಕೆ ಕಂಡು ಬರುತ್ತಿತ್ತು. ಹೀಗಾಗಿ ಯೋಜನೆಗಳ ಅನುಷ್ಠಾನದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಲಾಯಿತು. ವೈಯಕ್ತಿಕ ಪ್ರಗತಿಯ ಬದಲು ಸಾಮುದಾಯಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು ಎಂಬುವುದು ಮನದಟ್ಟಾಯಿತು.

ಈ ನಿರ್ಧಾರಕ್ಕೆ ಬರಬೇಕಾದರೆ ವಸ್ತುಸ್ಥಿತಿಯ ವಾಸ್ತವ ಅಧ್ಯಯನ ಹಾಗೂ ಮೌಲ್ಯೀಕರಣಕ್ಕೆ 1997 ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯ ಅಧ್ಯಕ್ಷರಾದ ಎಸ್.ಆರ್. ಹಾಕೀಮ್ ರವರು ಯೋಜನೆಯ ಅನುಷ್ಠಾನದಲ್ಲಿ ಎದುರಿಸಿದ ತೊಡಕುಗಳನ್ನು ಗಮನಿಸಿ ಸಾಮುದಾಯಿಕ ಸ್ವಾವಲಂಬನೆಗೆ ಹೆಚ್ಚಿನ ಅವಕಾಶಗಳನ್ನು ಮತ್ತು ಆದ್ಯತೆ ನೀಡಬೇಕು ಎಂದು ಶಿಫಾರಸ್ಸು ಮಾಡಿದರು.

ಸ್ವರ್ಣ ಜಯಂತಿ ಗ್ರಾಮ ಸ್ವರೋಜಗಾರ್ ಯೋಜನೆಯು ಗ್ರಾಮೀಣ ಜನತೆಯ ಸೀಮಿತ ಅಂಶಗಳನ್ನು ಮುಕ್ತಗೊಳಿಸಿ ಸ್ವ-ಉದ್ಯೋಗಕ್ಕಾಗಿ ಅವಕಾಶಗಳನ್ನು ಕಲ್ಪಿಸಿತ್ತು.

ಈ ಯೋಜನೆಯಲ್ಲಿ ವರ್ಗದೊಂದಿಗೆ ವರ್ಣ ತಾರತಮ್ಯವನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಲಾಯಿತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿಗೆ ಅರ್ಧದಷ್ಟು ಅವಕಾಶಗಳು ಸೀಮಿತವಾಗಿಸಿದವು.

ಶೇ.40 ರಷ್ಟು ಬಡ ಮಹಿಳೆಯರು ಶೇ.30 ರಷ್ಟು ಅಂಗವಿಕಲರು, ಈ ಯೋಜನೆಯ ಫಲಾನುಭವಿಗಳಾಗಿರಬೇಕು ಎಂದು ಹೇಳುವುದರ ಮೂಲಕ ಸಮಾಜದ ಬಹುತೇಕ ಹಿಂದುಳಿದವರನ್ನು ಬಲಪಡಿಸುವಂತಾಯಿತು. ಮಹಿಪಾಲ್ ಎರಡು–ಮೂರು ವರ್ಷಗಳ ಅವಧಿಯಲ್ಲಿ ಈ ಎಲ್ಲಾ ಫಲಾನುಭವಿಗಳು ತಮ್ಮ ಬಡತನ ರೇಖೆಯಿಂದ ಮೇಲ್ಮಟ್ಟಕ್ಕೆ ಬರಬೇಕು ಅಂದರೆ ಅವರ ಜೀವನ ಮಟ್ಟದಲ್ಲಿ ಸುಧಾರಣೆ ಆಗಬೇಕು. ಯೋಜನೆಯಲ್ಲಿ ಸಾಲ ಪಡೆದು ಉದ್ಯೋಗವನ್ನು ಪ್ರಾರಂಭಿಸಿ ಖರ್ಚು–ವೆಚ್ಚಗಳಲ್ಲವೂ ಕಳೆದ ನಂತರ ಅವರ ತಿಂಗಳ ಆದಾಯ ರೂ.2000/– ಕ್ಕಿಂತಲೂ ಹೆಚ್ಚಿರಬೇಕು. ಮೂಲಭೂತ ಅವಶ್ಯಕತೆಗಳಾದ ಊಟ, ಬಟ್ಟೆ, ವಸತಿಯ ಕೊರತೆ ನೀಗಿ ಸಮಾಜದಲ್ಲಿ ಉತ್ತಮ ಸ್ಥಾನಮಾನಗಳನ್ನು ಪಡೆಯಬೇಕು"[5].

ಗ್ರಾಮೀಣ ಮಹಿಳಾ ಸಬಲೀಕರಣದ ಪರಿಣಾಮಗಳು:

ಸ್ವತಂತ್ರ ಭಾರತದ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರ ಪರವಾದ ಯೋಜನೆಗಳನ್ನೇನೂ ಮಾಡತ್ತಲೇ ಬಂದಿದ್ದಾರೆ. ಆದರೂ ಮಹಿಳಾ ಪರವಾದ ಯೋಜನೆಗಳು ಬಂದವೆ ಹೊರತಾಗಿ ಮಹಿಳೆಯರ ಹಿತಾಸಕ್ತಿಯ ಪರವಾಗಿರುವ ಯೋಜನೆಗಳು ಕಾರ್ಯರೂಪಕ್ಕೆ ಬರಲೇ ಇಲ್ಲ. ಮೊದಲ ನಾಲ್ಕು ಪಂಚವಾರ್ಷಿಕ ಯೋಜನೆಗಳು ಸಹ ಈ ನಿಟ್ಟಿನಲ್ಲಿ ವಿಫಲವಾದವು ಎಂದೇ ಹೇಳಬಹುದು.

ಮಹಿಳೆಯರನ್ನು ಸ್ವಾತಂತ್ರ್ಯವಾಗಿ, ಸ್ವಾವಲಂಬಿಯಾಗಿ ರೂಪಿಸುವ ಯಾವುದೇ ಕಾರ್ಯಕ್ರಮಗಳು ಕಾರ್ಯರೂಪಕ್ಕೆ ಬರಲಿಲ್ಲ. ಎಲ್ಲವೂ ಪುರಷ ಪ್ರಧಾನ ಸಮಾಜದಲ್ಲಿ ಮಹಿಳೆಯನ್ನು ಪೂರಕ ಪಾತ್ರವಾಗಿ ನಿರೂಪಿಸುತ್ತಾ ಹೋದವೆ ಹೊರತು ಸ್ವತಂತ್ರ ವ್ಯಕ್ತಿಯಾಗಿ, ಸ್ವಾವಲಂಬಿಯಾಗಿ ರೂಪಿಸಲೇ ಇಲ್ಲ. ಇವು ಪಂಚವಾರ್ಷಿಕ ಯೋಜನೆಗಳ ವೈಫಲ್ಯವೆಂದು ಹೇಳಬಹುದು.

ಮಹಿಳಾ ಸಮಾನತೆ ಎಂಬುವುದು ಕೇವಲ ಸಮಾನ ಅವಕಾಶಗಳಿಗೆ ಮಾತ್ರ ಸೀಮಿತ ವೆಂಬಂತೆ ಆಯಿತು. ಜೀವನದ ಮೂಲ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಸಹ ಕೈ ಚಾಚಬೇಕಾದ ಪರಿಸ್ಥಿತಿ ಇದ್ದರೆ ಅದನ್ನು ಸಮಾನತೆಯೆಂದು ಕರೆಯಲಾದೀತೆ? ಸ್ತ್ರೀವಾದ ಮತ್ತು ಮಹಿಳಾವಾದ ಎಂಬ ಶಬ್ದಗಳು ಇದೇ ಸಮಯದಲ್ಲಿ ಬೆಳಕಿಗೆ ಬಂದವು. ಭಾರತದಲ್ಲಿ 5ನೇ ಪಂಚವಾರ್ಷಿಕ ಯೋಜನೆಯಲ್ಲಿ 1974–1979 ಈ ಅವಧಿಯಲ್ಲಿ ಜಾಗತಿಕವಾಗಿ ಮಹಿಳಾ ಸಬಲೀಕರಣಕ್ಕೆ ಹೆಚ್ಚು ಒತ್ತು ನೀಡಲಾಯಿತು.

ಇದೇ ಕಾರಣಕ್ಕೆ 1975ರಲ್ಲಿ ವಿಶ್ವಸಂಸ್ಥೆಯು ಮಾರ್ಚ–8 ರಂದು ಅಂತರಾಷ್ಟ್ರೀಯ ಮಹಿಳಾ

ದಿನವೆಂದು ಘೋಷಿಸಲಾಯಿತು. ಆರೋಗ್ಯವಂತ ಸುಶಿಕ್ಷಿತ, ಸ್ವಾವಲಂಬಿ, ವಿಶೇಷ ಸಾಧನೆಗೈದ ಮಹಿಳೆಯರಿಗಾಗಿ ಈ ದಿನವನ್ನು ಮಿಸಲಾಗಿಟ್ಟು ಅವಳು ಉಳಿದ ಸಮಾಜಕ್ಕೆ ಪ್ರೇರಣಾ ಶಕ್ತಿಯಾಗಲಿ ಎಂಬ ಉದ್ದೇಶದಿಂದ ಆಚರಣೆ ಆರಂಭವಾಯಿತು. ತಲೆ–ತಲಾಂತರದಿಂದ ಪುರುಷ ಪ್ರಧಾನ ಸಾಮಾಜಿಕ ವ್ಯವಸ್ಥೆಯಲ್ಲಿ, ಸಾಮಾಜಿಕ ವ್ಯವಸ್ಥೆಯ ಸೂತ್ರದಾರನಾಗಿರುವ ಪುರುಷನ ಕೈಯಲ್ಲಿ ಆಡುವ ಗೊಂಬೆಯ ಪಾತ್ರ ಮಹಿಳೆಗೆ ಇದೆ. ಅವಳಿಗೆ ಒಂದು ವಿಶೇಷ ಅಸ್ತಿತ್ವವಿದೆ. ಅದನ್ನು ಸಾಬೀತು ಪಡಿಸಿ ಪುರುಷರ ಸರಿ–ಸಮಾನವಾಗಿ ನಿಲ್ಲಿಸಲು ಕೇವಲ ಕಲ್ಯಾಣ ಕಾರ್ಯಗಳಿಂದ ಮಾತ್ರ ಸಾಧ್ಯವಿಲ್ಲವೆಂಬುವುದು ಸ್ಪಷ್ಟವಾಯಿತು. ಇಂತಹ ಕಾರ್ಯಕ್ರಮಗಳಿಂದ ಪುರಷರ ಸರಿ–ಸಮಾನವಾಗಿ ನಿಲ್ಲುವುದು ಅಸಾಧ್ಯವೆಂದು ಸಾಮಾಜಿಕ ಪ್ರಜ್ಞೆಗೆ ಹೊಳೆದ ವಿಷಯವಾಯಿತು. ಕೇವಲ ಆರ್ಥಿಕ ಸಬಲೀಕರಣದಿಂದ ಅಷ್ಟೇ ಅಲ್ಲ ರಾಜಕೀಯ ಇಚ್ಛಾ ಶಕ್ತಿ ಇದಕ್ಕೆ ಅಗತ್ಯವಾಗಿ ಬೇಕೆಂಬುವುದು ಗಮನೀಯ ಅಂಶವಾಯಿತು. ರಾಜಕೀಯದಲ್ಲಿ ಮಹಿಳೆಯ ಪಾಲುಗಾರಿಕೆ ಸಾಧ್ಯವಿಲ್ಲ ಎಂಬುವುದು "ಕೇವಲ ಮಂತ್ರದಿಂದ ಅಭಿವೃದ್ಧಿಯ ಮಾವು ಉದುರಿಸಿದಂತೆ ಆಗುತ್ತಿತ್ತು".

ಮೊದಲಿಗೆ ಮಹಿಳೆಯರಿಗೆ ಮೂಲ ಸೌಕರ್ಯಗಳಾದ ನೀರು, ರಸ್ತೆ ವ್ಯವಸ್ಥೆಯಾಗಬೇಕು. ಬಯಲು ಶೌಚಾಲಯಗಳಿಗೆ ಬದಲಾಗಿ ಶೌಚಾಲಯಗಳನ್ನು ನಿರ್ಮಾಣ ಮಾಡಬೇಕು. ಚರಂಡಿ ವ್ಯವಸ್ಥೆಯಾಗಬೇಕು. ಅದರೊಂದಿಗೆ ರಾಜಕೀಯ, ಆಡಳಿತ ವಿಷಯಗಳಲ್ಲಿ ಪಾಲ್ಗೊಳ್ಳುವಿಕೆ ಅತೀ ಮುಖ್ಯವಾಗಿದೆ. ಅದಲ್ಲದೇ ಮಹಿಳಾ ಅಭಿವೃದ್ಧಿ ಎಂಬುವುದು ಗಗನ ಕುಸುಮವೇ ಸರಿ. ಕೇವಲ ಕಾಸಿನ ಝುಣ ಝುಣದಿಂದ ಜನರ ಜೀವನ ಮಟ್ಟ ಸುಧಾರಣೆಯಾಗದು. ಪ್ರತಿಯೊಂದರಲ್ಲೂ ಅವಳ ಪಾಲುದಾರಿಕೆಯೂ ಅತ್ಯವಶ್ಯಕ ಎಂಬುವುದು ಮನದಟ್ಟಾಯಿತು. ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡು 1990 ರಲ್ಲಿ ಕಾನೂನು ಬದ್ಧವಾಗಿ ರಾಷ್ಟ್ರೀಯ ಮಹಿಳಾ ಆಯೋಗವನ್ನು ಸ್ಥಾಪಿಸಲಾಯಿತು. ಈ ಸಂಸ್ಥೆಯ ಮುಖಾಂತರ ಮಹಿಳಾ ಹಿತಾಸಕ್ತಿಗಳನ್ನು ಕಾಪಾಡಬೇಕೆಂದು ಮಹಿಳೆಯ ಪರಿಪೂರ್ಣ ಸಬಲೀಕರಣವನ್ನೇ ಮುಖ್ಯ ಗುರಿಯಾಗಿ ಇಟ್ಟುಕೊಂಡು ಈ ಆಯೋಗವನ್ನು ಸ್ಥಾಪಿಸಲಾಯಿತು. ಮಹಿಳೆ ಎಂಬ ಕಾರಣಕ್ಕೆ ಶೋಷಿತ ಸಮಾಜದ ಪ್ರಮುಖ ಕೊಂಡಿಯಾಗಿರುವುದನ್ನು ಗುರುತಿಸಿ ಅದನ್ನು ಸರಿಪಡಿಸಬೇಕಾಗಿತ್ತು. ಈ ನಿಟ್ಟಿನಲ್ಲಿ ಆಯೋಗ ಕೆಲಸ ಮಾಡಬೇಕೆಂದು ನಿರ್ದೇಶಿಸಲಾಯಿತು.

ಇದಕ್ಕೆ ಪೂರಕವಾಗಿ ಸಂವಿಧಾನ 73 ಮತ್ತು 74ನೇ ತಿದ್ದುಪಡಿಯಲ್ಲಿ ಸ್ಥಳೀಯ ಆಡಳಿತ ಸಂಸ್ಥೆಗಳಾದ ಗ್ರಾಮ ಪಂಚಾಯತ, ತಾಲ್ಲೂಕ ಪಂಚಾಯತ ಮತ್ತು ಜಿಲ್ಲಾ ಪಂಚಾಯತ ಹಾಗೂ ಪುರಸಭೆ, ನಗರಸಭೆಗಳಲ್ಲಿ ಮಹಿಳೆಯರ ಪಾಲುದಾರಿಕೆ ಕಡ್ಡಾಯವಾಗಿ ಶೇ.33ರಷ್ಟು ಮೀಸಲಾತಿ

ಜಾರಿಯಾಯಿತು. ಈ ಕ್ರಮವನ್ನು ಮೊದಲ ಜಾರಿಗೆ ತಂದ ರಾಜ್ಯವೆಂಬ ಹೆಗ್ಗಳಿಕೆ ಕರ್ನಾಟಕಕ್ಕೆ ಸೇರಿತು. ಪ್ರಾಯೋಗಿಕವಾಗಿ ಜಾರಿಗೆ ತಂದ ಈ ಕ್ರಮ ಮುಂದೆ ಮಹಿಳಾ ಮಸೂದೆ ಮಂಡನೆಗೆ ಮಾದರಿ ಆಯಿತು ಎಂಬುವುದು ಅತ್ಯಂತ ಹೆಮ್ಮೆಯ ವಿಷಯ. ಒಂಭತ್ತನೇಯ ಪಂಚವಾರ್ಷಿಕ ಯೋಜನೆಯಲ್ಲಿ 1997–2002 ಗ್ರಾಮೀಣ ಮಹಿಳಾ ಸಬಲೀಕರಣವನ್ನೇ ಪರಮೋಚ್ಛಧ್ಯೆಯ ಎಂಬ ಪರಿಕಲ್ಪನೆ ಮೂಡಿಸಲಾಯಿತು.

ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಪಂಚವಾರ್ಷಿಕ ಯೋಜನೆಗಳ ಪರಿಣಾಮಗಳು:

1. ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಸೀಮಿತ ಪರಿಣಾಮಗಳನ್ನು ಬೀರಿವೆ.
2. ಯೋಜನೆಗಳ ಲಾಭ ಪಡೆಯುವಲ್ಲಿ ಮಹಿಳೆಯರಿಗೆ ಪುರುಷರ ಒತ್ತಾಯವಿದೆ.
3. ಆರ್ಥಿಕವಾಗಿ ಮಹಿಳೆಯರು ಸ್ವಾವಲಂಬಿಯಾಗಿಲ್ಲ.
4. ತೆಗೆದುಕೊಂಡ ಸಾಲವನ್ನು ನಿರ್ದಿಷ್ಟ ಉದ್ದೇಶಕ್ಕೆ ಬಳಕೆಯಾಗದಿರುವುದು ಕಂಡು ಬಂದಿದೆ.
5. ಮಹಿಳೆಯರು ತಮ್ಮ ಆದಾಯದ ಮೇಲೆ ಹಕ್ಕು ಮತ್ತು ನಿಯಂತ್ರಣವನ್ನು ಹೊಂದದೆ ಪುರಷರ ಪ್ರಾಬಲ್ಯಕ್ಕೆ ಬಲಿಯಾಗಿದ್ದಾರೆ.
6. ಸಾಲ ತೆಗೆದುಕೊಂಡು ಉದ್ಧಾರವಾಗುವ ಬದಲಿಗೆ ಇನ್ನಷ್ಟು ಸಾಲದ ಹೊರೆ ಹೆಚ್ಚಾಗಿದೆ.
7. ಯೋಜನೆಗಳು ಮಹಿಳೆಯರ ಹಿತಾಸಕ್ತಿಗೆ ಅನುಗುಣವಾಗಿಲ್ಲ.
8. ಯೋಜನೆಗಳ ಬಗ್ಗೆ ಸಂಪೂರ್ಣವಾದ ಮಾಹಿತಿ ಮಹಿಳೆಯರಿಗೆ ಇಲ್ಲ.
9. ಯೋಜನಾ ಪೂರ್ವ ತರಬೇತಿ ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ನಡೆದಿರುವುದಿಲ್ಲ.

ಈ ಮೇಲಿನ ಎಲ್ಲಾ ಅಂಶಗಳನ್ನು ನೋಡಿದರೆ ವ್ಯವಸ್ಥೆ ಮಹಿಳೆಯನ್ನು ಪ್ರತಿಯೊಂದಕ್ಕೆ ಹೊಂದಿಕೊಳ್ಳಲೇಬೇಕೆಂಬ ಪಾಠ ಕಲಿಸುತ್ತದೆ. ಬದುಕು ಅನಿವಾರ್ಯ ಹೀಗಾಗಿ ಈ ಎಲ್ಲಾ ಅಡೆತಡೆಗಳ ನಡುವೆ ಮಹಿಳೆ ಯಶಸ್ವಿನ ಹೆಜ್ಜೆಗಳನ್ನು ಇಡುತ್ತಿದ್ದಾಳೆ. ಮುಂಬರುವ ದಿನಗಳಲ್ಲಿ ಯೋಜನೆಗಳ ಸಂಪೂರ್ಣ ಲಾಭ ಪಡೆದು ಆದಾಯ ಹಕ್ಕು ನಿಯಂತ್ರಣ ಹೊಂದಿ ಸಬಲಳಾಗುತ್ತಾಳೆ ಎಂಬ ನಂಬಿಕೆಯಿಂದಲೇ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಯೋಜನೆಗಳು ಸಂಪೂರ್ಣವಾಗಿ ಮಹಿಳೆಯರಿಗೆ ಧಕ್ಕದೇ ಇದ್ದರೂ ತಮಗೆ ದೊರಕಿದ ಸೌಲಭ್ಯಗಳನ್ನು ಪಡೆದು ಮಹಿಳೆ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ತನ್ನ ಸ್ಥಾನಮಾನಗಳನ್ನು ಎತ್ತರಿಸಿಕೊಳ್ಳುತ್ತಿರುವುದು ಸಬಲೀಕರಣಕ್ಕೆ ಪೂರಕ ಪ್ರಯತ್ನವಾಗಿದೆ.

3.3 ಸರ್ಕಾರೇತರ ಸಂಸ್ಥೆಗಳ ಪಾತ್ರ:

ಸಾಂಪ್ರಾದಾಯಶೀಲವಾದ ಭಾರತೀಯ ಸಮಾಜದಲ್ಲಿ ಮಹಿಳೆಯನ್ನು ದೇವತೆಯ ಸ್ಥಾನಕ್ಕೆ ಏರಿಸಿ ಹಲವಾರು ಜವಾಬ್ದಾರಿಗಳನ್ನು ನೀಡಿ ಸೇವಾ ವಲಯದಲ್ಲಿಯೇ ಬದುಕಿನುದ್ದಕ್ಕೂ ದುಡಿಯುವಂತೆ ಮಾಡಿದೆ. ನಮ್ಮ ಸಾಮಾಜಿಕ ವ್ಯವಸ್ಥೆಯು ಅಧಿಕಾರದ ವಲಯದಲ್ಲಿ ಅವಳಿಗೆ ಯಾವುದೇ ರೀತಿಯ ಹಕ್ಕಿಲ್ಲ, ನಿಯಂತ್ರಣವಿಲ್ಲ ಆದರೆ ಒಟ್ಟು ಜನ ಸಂಖ್ಯೆಯ ಅರ್ಧ ಭಾಗದಷ್ಟು ಇರುವ ಮಹಿಳೆಯರು ಪ್ರತಿಯೊಂದು ಕ್ಷೇತ್ರದಲ್ಲಿಯೂ ಸಬಲರಾಗಬೇಕಾದ ಅನಿವಾರ್ಯತೆ ಇದೆ. ಈ ನಿಟ್ಟಿನಲ್ಲಿ ಸರ್ಕಾರಿ ಸಂಘ–ಸಂಸ್ಥೆಗಳು ಸಾಕಷ್ಟು ಯೋಜನೆಗಳನ್ನು ಕಾರ್ಯಕ್ರಮಗಳನ್ನು ರೂಪಿಸುವುದರ ಜೊತೆಗೆ ಇನ್ನೂ ಪರಿಣಾಮಕಾರಿಯಾಗಿ ಆಗಬೇಕಾದರೆ ಗ್ರಾಮೀಣ ಮಹಿಳೆಯ ಸಬಲೀಕರಣದಲ್ಲಿ ಸರ್ಕಾರೇತರ ಸಂಸ್ಥೆಗಳು ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿವೆ.

ಪುರಷರ ಸಮಾನತೆಯಲ್ಲಿರುವ ಮಹಿಳೆಗೆ ರಾಜಕೀಯದಲ್ಲಿ ಶೇ.50 ರಷ್ಟು ಮೀಸಲಾತಿ ಬೇಕಾಗಿದೆ. ಆದರೆ ಅವಳಿಗೆ ನೀಡಿರುವ ಶೇ.30ರಷ್ಟು ಮೀಸಲಾತಿಯೂ ಸಹ ಅವಳು ವಿಫಲಳಾಗುವಂತೆ ನೋಡಿಕೊಂಡಿದೆ. ಹೀಗಾಗಿ ಅವಳಿಗೆ ರಾಜಕೀಯ ತಿಳುವಳಿಕೆಯು ಅತೀ ಅವಶ್ಯಕವಾಗಿದೆ ಹಾಗೂ ಸ್ತ್ರೀಯರು ಮಾನವ ಸಂಪನ್ಮೂಲದ ಅಭಿವೃದ್ಧಿಯಲ್ಲಿ ಹೊಂದಿರುವ ತಾತ್ಸರ ಮನೋಭಾವನೆಯನ್ನು ತೊರೆದು ಸಮಾನತೆ ಸಮಾಜದ ಸ್ಥಾಪನೆ ಆಗಬೇಕಾಗಿದೆ. ಆಧುನಿಕ ವೈಜ್ಞಾನಿಕ ಮತ್ತು ತಾಂತ್ರಿಕ ಯುಗದಲ್ಲಿ ಮಹಿಳೆಯ ಸಬಲೀಕರಣಕ್ಕ ಪುರುಷರ ಮತ್ತು ಕುಟುಂಬದ ಸದಸ್ಯರ ಹಾಗೂ ಸಮಾಜದ ಸಹಕಾರ, ಪ್ರೋತ್ಸಾಹ ಅತಿ ಅವಶ್ಯಕವಾಗಿದೆ. ಹೀಗಾಗಿ ಸರ್ಕಾರದ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಜಾಗೃತಿ ಮೂಡಿಸುವ ಮುಖಾಂತರ ಸಾರ್ವಜನಿಕರಿಗೆ ತಿಳುವಳಿಕೆ ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳು ಮಹತ್ತರ ಪಾತ್ರವನ್ನು ವಹಿಸುತ್ತವೆ. ಸರ್ಕಾರೇತರ ಸಂಸ್ಥೆಗಳೆಂದರೆ ಸ್ವತಃ ಸರ್ಕಾರವೇ ಹುಟ್ಟು ಹಾಕಿದ ಸಂಸ್ಥೆಗಳು ಅಥವಾ ಸಾರ್ವಜನಿಕ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಇವು ತಮ್ಮದೆಯಾದ ಗುರಿ ಉದ್ದೇಶಗಳನ್ನು ನೀತಿ ನಿಯಮಗಳನ್ನು ಹೊಂದಿರುತ್ತವೆ. ಹೆಚ್ಚಿನ ಲಾಭವನ್ನು ನಿರೀಕ್ಷಿಸದೆ ಸಾರ್ವಜನಿಕ ಬಡವರ್ಗದವರ, ಕೆಳಸ್ತರದವರ ವಿಶೇಷವಾಗಿ ಮಹಿಳೆಯರ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸುತ್ತಿರುತ್ತವೆ.

ಸ್ವಯಂ ಸೇವಾ ಸಂಸ್ಥೆಗಳು ಸರ್ಕಾರದಿಂದ, ವಿದೇಶಗಳಿಂದ ಮತ್ತು ಸ್ಥಳೀಯ ಶ್ರೀಮಂತ ಜನರಿಂದ ಧನ ಸಹಾಯ ಪಡೆದು ಸಾರ್ವಜನಿಕ ಕಲ್ಯಾಣ ಕಾರ್ಯಕ್ರಮಗಳಿಗೆ ವಿಫಲವಾಗಿ ಧನ ಸಹಾಯ ಮಾಡುತ್ತವೆ.

1. ಪಾಲ್‌ಚಾದ್ರಿ 1996 ತಮ್ಮ ಲೇಖನದಲ್ಲಿ ಸರ್ಕಾರೇತರ ಸಂಸ್ಥೆಗಳ ಅರ್ಥ ಮತ್ತು ಕರ್ತವ್ಯಗಳನ್ನು ವಿವರಿಸಿದ್ದಾರೆ.

2. ನಾನಾವತಿ 1996 ಅವರು ಗ್ರಾಮೀಣಾಭಿವೃದ್ಧಿಯಲ್ಲಿ ಸರ್ಕಾರೇತರ ಸಂಸ್ಥೆಗಳು ವಹಿಸಬಹುದಾದ ಪಾತ್ರದ ಕುರಿತು ವಿವರಣೆ ನೀಡಿದ್ದಾರೆ.

3. ಹುಸೇನ್ 2000 ರವರು ತಮ್ಮ "ಸರ್ಕಾರೇತರ ಸಂಸ್ಥೆಗಳಿಗೆ ಇಷ್ಟವಾದ ಕಾರ್ಯಕ್ರಮಗಳು" ಎಂಬ ಲೇಖನದಲ್ಲಿ ಸಮಾಜದಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರವನ್ನು ಕುರಿತು ಆಲೋಚಿಸಿದ್ದಾರೆ.

4. ಕೆ. ಕುಲನ್‌ದೈವರ್ 2005 ಇವರು ಗ್ರಾಮೀಣಾಭಿವೃದ್ಧಿ ಮತ್ತು ಮಹಿಳಾ ಸಬಲೀಕರಣ ಕಾರ್ಯಕ್ರಮಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮತ್ತು ಪರಿಣಾಮವನ್ನು ಕುರಿತು ವಿವರಿಸಿದ್ದಾರೆ.

5. ಎಂ.ಗುರುಲಿಂಗಯ್ಯ 2002 ಅವರು ಕರ್ನಾಟಕ ರಾಜ್ಯವನ್ನೆ ಕೇಂದ್ರಿಕರಿಸಿಕೊಂಡು ಬುಡಕಟ್ಟು ಜನಾಂಗದವರ ಏಳಿಗೆ ಅದರಲ್ಲಿ ಮಹಿಳೆಯರು ಸ್ವಯಂ ಸೇವಾ ಸಂಸ್ಥೆಗಳಿಂದ ಸಹಾಯ ಪಡೆದು ಸ್ವ-ಉದ್ಯೋಗದಲ್ಲಿ ಸ್ವಾವಲಂಬಿಗಳಾಗಿರುವ ಬಗೆಯನ್ನು ತಿಳಿಸಿದ್ದಾರೆ.

ಹೀಗೆ ಸ್ವಯಂ-ಸೇವಾಸಂಸ್ಥೆಗಳು ಗ್ರಾಮೀಣ ಜನರ ಬದುಕಿನಲ್ಲಿ ತಮ್ಮನ್ನು ತಾವೇ ಅರ್ಪಿಸಿಕೊಂಡು. ಅತಿ ಹತ್ತಿರದಿಂದ ಜನರ ಬದುಕನ್ನು ಅರಿತು ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕ್ರಮವನ್ನು ಮತ್ತು ಸಮಸ್ಯೆಗಳು ಬರದಂತೆ ಮುಂಜಾಗ್ರತ ಕ್ರಮಗಳನ್ನು ಕುರಿತು ತಿಳುವಳಿಕೆಯನ್ನು ಮೂಡಿಸುವಲ್ಲಿ ಸಹಕಾರಿಯಾಗಿವೆ.

ಹೀಗಾಗಿ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರವೇ ನೋಂದಣಿ ಮಾಡಿದ ಮಹಿಳಾ ಸಮಾಖ್ಯ ಸಂಸ್ಥೆಯು ಕರ್ನಾಟಕದ 12-ಜಿಲ್ಲೆಗಳಲ್ಲಿ ಕಾರ್ಯನಿರ್ವಹಿತ್ತಿದೆ. ಅದರಲ್ಲಿ ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳನ್ನು ಒಳಗೊಂಡಿರುವುದರಿಂದ ಮಹಿಳೆಯರ ಸಬಲೀಕರಣದಲ್ಲಿ ಈ ಸಂಸ್ಥೆಯು ನಿರ್ವಹಿಸುತ್ತಿರುವ ಪಾತ್ರವನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಹಾಗೆಯೇ ಗುಲಬರ್ಗಾ ಜಿಲ್ಲೆಯ ಸ್ವಯಂ-ಸೇವಾ ಸಂಸ್ಥೆಯಾದ ಬಯಲು

ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಬೀದರ, ಗುಲಬರ್ಗಾ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಈ ಸಂಸ್ಥೆಯ ಕಾರ್ಯಕ್ರಮಗಳಲ್ಲಿ ಒಂದಾದ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ನಿರ್ವಹಿಸುತ್ತಿರುವ ಕೆಲಸ ಕಾರ್ಯಗಳನ್ನು ಸಂಕ್ಷಿಪ್ತವಾಗಿ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ.

3.3.1 ಮಹಿಳಾ ಸಮಾಖ್ಯ ಕರ್ನಾಟಕ:

ಪೀಠಿಕೆ :

"ಗ್ರಾಮೀಣ ಸಮಾಜದಲ್ಲಿ ಅದರಲ್ಲಿಯೂ ವಿಶೇಷವಾಗಿ ಗ್ರಾಮೀಣ ಮಹಿಳೆಯರ ಸಾಂಪ್ರದಾಯಕ ಮೂಢನಂಬಿಕೆ ಅನಕ್ಷರತೆಯಿಂದ ಕೂಡಿದ ಬದುಕಿನಲ್ಲಿ ಬದಲಾವಣೆಯನ್ನು ತರಲು ಸಾಕಷ್ಟು ಸರಕಾರ ಹಾಗೂ ಅರೆಸರ್ಕಾರಿ ಸಂಘ-ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಸಮಾಜದಲ್ಲಿ ದುರ್ಬಲ ವರ್ಗದವರಿಗೆ ಅಸಹಾಯಕರಿಗೆ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸಾಕಷ್ಟು ರೀತಿಯಲ್ಲಿ ಸವಲತ್ತು ಮತ್ತು ಸಂರಕ್ಷಣೆಯ ಅವಶ್ಯಕತೆಯಿದೆ. ಹಾಗೂ ಸಮಾಜದ ಮುಖ್ಯವಾಹಿನಿಗೆ ಸೇರಿಸುವುದು ಮಹತ್ವದ ಅಂಶವಾಗಿದೆ. ಈ ದಿಶೆಯಲ್ಲಿ ಸರ್ಕಾರೇತ್ತರ ಸ್ವಾಯುತತ್ತ ಸಂಸ್ಥೆಯಾಗಿರುವ ಮಹಿಳಾ ಸಮಾಖ್ಯ ಮಹಿಳೆಯರನ್ನು ಶಿಕ್ಷಣದ ಮೂಲಕ ಸಶಕ್ತರನ್ನಾಗಿ ಮಾಡುವ ನಿಟ್ಟಿನಲ್ಲಿ ಮಹಿಳಾ ಸಬಲೀಕರಣಕ್ಕಾಗಿ ದುಡಿಯುವ ಒಂದು ಬೃಹತ ಸಂಸ್ಥೆಯಾಗಿದೆ.

ಸಂಸ್ಥೆಯ ಪರಿಚಯ:

ಮಹಿಳಾ ಸಮಾಖ್ಯದ ಕಾರ್ಯಕ್ರಮವು ಭಾರತ ಸರ್ಕಾರದ ಮಾನವ ಸಂಪನ್ಮೂಲ ವಿಭಾಗದ ಶಿಕ್ಷಣ ಇಲಾಖೆಯ ಒಂದು ಯೋಜನೆಯಾಗಿದೆ. ಈ ಯೋಜನೆಯನ್ನು ನೆದರಲ್ಯಾಂಡಿನಿಂದ ಆಯ್ಕೆ ಮಾಡಿಕೊಳ್ಳಲಾಗಿದೆ. ಈ ಕಾರ್ಯಕ್ರಮವನ್ನು 1989 ರಲ್ಲಿ ಭಾರತದ ಮೂರು ರಾಜ್ಯಗಳಾದ ಕರ್ನಾಟಕ, ಗುಜರಾತ ಮತ್ತು ಉತ್ತರ ಪ್ರದೇಶದಲ್ಲಿ ಪ್ರಾರಂಭ ಮಾಡಲಾಯಿತು. ಶ್ರೀಮತಿ ಶ್ರೀಲತಾ ಬಾಟಲಿವಾಲಾ ಇವರು ಮಹಿಳಾ ಸಮಾಖ್ಯ ಕರ್ನಾಟಕ ರಾಜ್ಯ ಕಛೇರಿಯ ಪ್ರಥಮ ರಾಜ್ಯ ನಿರ್ದೇಶಕರಾಗಿದ್ದರು. ಗ್ರಾಮೀಣ ಪ್ರದೇಶದಲ್ಲಿರುವ ಅತಿ ಹಿಂದುಳಿದಿರುವಂತಹ ಮಹಿಳೆಯರ ಅಭಿವೃದ್ಧಿ ಮಾಡುವ ಉದ್ದೇಶದಿಂದಲೇ ಮೈಸೂರು, ಬೀದರ, ಬಿಜಾಪೂರ ಜಿಲ್ಲಾ ಘಟಕಗಳನ್ನು ಸ್ಥಾಪಿಸಿದರು.

1986ರ ಹೊಸ ಶಿಕ್ಷಣ ನೀತಿಯಡಿಯಲ್ಲಿ ಈ ಕಾರ್ಯಕ್ರಮ ಹುಟ್ಟಿಕೊಂಡಿತು. ಮಹಿಳಾ ಸಮಾಖ್ಯದಲ್ಲಿ ಶಿಕ್ಷಣವೆಂದರೆ ಮಾಹಿತಿ ಹಾಗೂ ಜ್ಞಾನ. ಮಹಿಳೆಯರಿಗೆ ಸಮಯ ಮತ್ತು ಅವಕಾಶ ದೊರೆತರೆ ಮಾಹಿತಿಗಳನ್ನು ಪಡೆದು ಸ್ವಾವಲಂಬಿಯಾಗಿ ಜೀವನ ಸಾಗಿಸುವರು. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಮಹಿಳೆಯರ ಪ್ರತಿಯೊಂದು ರಂಗದಲ್ಲಿಯೂ ಮುಂದೆ ಬರುವಂತೆ

ಪ್ರೋತ್ಸಾಹಿಸುವುದು. ಸ್ವಾವಲಂಬನೆ, ಶಿಕ್ಷಣ, ಆರೋಗ್ಯ, ಕಾನೂನು, ಪಂಚಾಯ್ತಿರಾಜ್, ಲಿಂಗ ಸಮಾನತೆ ಹಾಗೂ ಆರ್ಥಿಕಾಭಿವೃದ್ಧಿಗಳ ಬಗ್ಗೆ ಮಾಹಿತಿಯನ್ನು ನೀಡಿ ಸಬಲೀಕರಣ ಪ್ರಕ್ರಿಯೆಯಲ್ಲಿ ಸ್ವತಂತ್ರ ಹೆಜ್ಜೆಗಳಿಡಲು ಸಹಕರಿಸವುದೇ ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ 2008 ರಲ್ಲಿ ಮಹಿಳಾ ಸಮಾಖ್ಯವು ಕರ್ನಾಟಕದ 12–ಜಿಲ್ಲೆಗಳಲ್ಲಿ 51–ತಾಲೂಕುಗಳಲ್ಲಿ 4131 ಸಂಘಗಳಲ್ಲಿ 60,000 ಮಹಿಳೆಯರೊಂದಿಗೆ ಕಾರ್ಯನಿರ್ವಹಿಸುತ್ತಿದೆ.

ಕೋಷ್ಟಕ– 3.3.1

ಮಹಿಳಾ ಸಮಾಖ್ಯ ಕರ್ನಾಟಕ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಗಳ ವಿವರ

(2007–08 ನೇ ಸಾಲಿನಲ್ಲಿ)

ಕ್ರ ಸಂ.	ಜಿಲ್ಲೆಗಳು	ತಾಲೂಕುಗಳು	ಹಳ್ಳಿಗಳು	ಒಟ್ಟು ಸಂಘಗಳು
01.	ಬೀದರ	05	305	490
02.	ಗುಲಬರ್ಗಾ	06	303	428
03.	ರಾಯಚೂರು	04	253	448
04.	ಬಾಗಲಕೋಟ	05	249	382
05.	ಬಳ್ಳಾರಿ	05	256	494
06.	ಬಿಜಾಪೂರ	05	300	504
07.	ಬೆಳಗಾಂವ	03	87	127
08.	ಚಾಮರಾಜನಗರ	04	191	321
09.	ಚಿಕ್ಕಬಳ್ಳಾಪೂರ	02	55	70
10.	ಗದಗ	03	84	102
11.	ಕೊಪ್ಪಳ	04	250	427
12.	ಮೈಸೂರು	05	229	338
	ಒಟ್ಟು	**51**	**2562**	**4131**

ಮಹಿಳಾ ಸಮಾಖ್ಯಾದ ಗುರಿ ಮತ್ತು ಉದ್ದೇಶಗಳು:

1. **ಮಹಿಳಾ ಸಮಾಖ್ಯಾ ಗುರಿ :** ಮಹಿಳಾ ಸಮಾಖ್ಯಾವು ಮಹಿಳೆಯರಿಗೆ ಅಧಿಕಾರ ಬಲ ನೀಡುವ ಅವರು ತಮ್ಮ ಜೀವನಕ್ಕೆ ತಾವೇ ಹೊಣೆಯನ್ನಾಗಿಸುವುದನ್ನು ಸಾಧ್ಯವಾಗಿಸುವ ದೃಷ್ಠಿಯನ್ನು ಹೊಂದಿ ಗ್ರಾಮೀಣ ಭಾಗದಲ್ಲಿ 1989ರಲ್ಲಿ ಕಾರ್ಯನ್ಮುಖವಾಯಿತು. ಅನೇಕ ವರ್ಷಗಳ ಅಭಿವೃದ್ಧಿ ಕಾರ್ಯಗಳ ನಂತರವು ಮಹಿಳೆಯರ ಸ್ಥಾನ ಇನ್ನೂ ಅನಾದಿ ಕಾಲದಿಂದಲೂ ಮಹಿಳೆಯರು ಶೋಷಣೆ ಹಾಗೂ ಎಲ್ಲಕ್ಕಿಂತ ಕನಿಷ್ಠವಾಗಿ ಹಳ್ಳಿಯ ಬಡ ಮಹಿಳೆಯರು ಜಾತಿ ವರ್ಗಗಳನ್ನು ಮೀರಿ ಅತ್ಯಂತ ಬಲಹೀನ ಗುಂಪುಗಳಾಗಿದ್ದಾರೆ.

ಸಾಮಾನ್ಯವಾಗಿ ಅನೇಕ ಕಲ್ಯಾಣ ಮತ್ತು ಅಭಿವೃದ್ಧಿ ಸೌಕರ್ಯಗಳನ್ನು ಪಡೆಯುವ ಹಾಗೂ ಅಂತಹ ಯೋಜನೆಗಳನ್ನು ರೂಪಿಸುವಲ್ಲಿ ಯಾವುದೇ ಪಾತ್ರವಹಿಸಿದ ನಿಷ್ಕ್ರೀಯ ವರ್ಗವಾಗಿ ಮಾತ್ರ ಉಳಿದಿದ್ದಾರೆ. ಇಂತಹ ವ್ಯವಸ್ಥೆಯನ್ನು ತಿದ್ದಿ ಬದಲಿಸಿ ಅತ್ಯಂತ ಬಡ ಮಹಿಳೆಯರಿಗೂ ಕೂಡಾ ತಮ್ಮ ಜೀವನವನ್ನು ತಾವೇ ನಿರ್ಧರಿಸಿಕೊಳ್ಳುವಂತಹ ಸ್ವಾತಂತ್ರ್ಯ ಹಾಗೂ ಅರಿವನ್ನು ಕೊಡಿಸುವುದು ಸಹ ಮಹಿಳಾ ಸಮಾಖ್ಯಾದ ಗುರಿಯಾಗಿದೆ.

2. **ಮಹಿಳಾ ಸಮಾಖ್ಯಾದ ಉದ್ದೇಶಗಳು :** ಮಹಿಳಾ ಸಮಾಖ್ಯಾದ ಉದ್ದೇಶದಂತೆ ಬೀದರ, ಗುಲಬರ್ಗಾ ಮತ್ತು ರಾಯಚೂರು ಘಟಕಗಳು ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಸಂಘಟನೆಯ ಮನೋಭಾವ ಹೊಂದಲು ಆರ್ಥಿಕ ಸ್ವಾವಲಂಬನೆಗೆ ವಿವಿಧ ಸ್ವಯಂ ಉದ್ಯೋಗಗಳನ್ನು ಕೈಗೊಳ್ಳಲು ತರಬೇತಿ ಕೌಶಲ್ಯ ಮಾಹಿತಿಯನ್ನು ನೀಡುವುದನ್ನು ಮತ್ತು ಸ್ವತಂತ್ರ ತೀರ್ಮಾನ ತೆಗೆದುಕೊಂಡು ಸಶಕ್ತರಾಗುವಂತೆ ಮಾಡುವಲ್ಲಿ ಸಹಕರಿಸುತ್ತಿವೆ.

ಕರ್ನಾಟಕದ ಒಂಭತ್ತು ಜಿಲ್ಲೆಗಳಲ್ಲಿರುವ ಮಹಿಳಾ ಸಲಹಾ ಕೇಂದ್ರಗಳು ನೊಂದ ಹಾಗೂ ಸಹಾಯವನ್ನರಿಸಿ ಬಂದ ಮಹಿಳೆಯರಿಗೆ ಕಾನೂನು ನೆರವು ಹಾಗೂ ಆಪ್ತ ಸಮಾಲೋಚನಾ ಸೇವೆಯನ್ನು ಒದಗಿಸುವ ಮುಖ್ಯ ಗುರಿ ಹೊಂದಿವೆ. ಈ ಗುರಿಯನ್ನು ತಲುಪುವ ಉದ್ದೇಶಗಳು.

- ನೊಂದ ಮಹಿಳೆಯರಿಗೆ ಕಾನೂನು ಸಲಹೆ ಸಹಾಯಕ್ಕಾಗಿ ಮಹಿಳಾ ಸಲಹಾ ಕೇಂದ್ರಗಳು ವೇದಿಕೆಯಾಗಿವೆ.
- ನೊಂದ ಮಹಿಳೆಯರ ಜೊತೆ ಆಪ್ತ ಸಮಾಲೋಚನೆಯ ನಡೆಸಿ ಮಾನಸಿಕ ಹಾಗೂ ಭಾವನಾತ್ಮಕ ಬೆಂಬಲವನ್ನು ನೀಡುವುದು.
- ಮಹಿಳೆಯರಿಗೆ ನ್ಯಾಯ ದೊರಕುವುದನ್ನು ಖಾತರಿ ಪಡಿಸಿಕೊಂಡು ಅದನ್ನು ಉತ್ತೇಜಿಸುವುದು.
- ಅನೌಪಚಾರಿಕ ನ್ಯಾಯ ವೇದಿಕೆಗಳನ್ನು ಬಲಗೊಳಿಸುವುದು.
- ಮಹಿಳೆಯರು ತಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವರಿಗೆ ಮಾರ್ಗದರ್ಶನ ನೀಡುವುದು.

- ಮಹಿಳೆಯರಿಗೆ ಪ್ರತಿಯೊಂದು ರಂಗದಲ್ಲಿ ಅವಕಾಶಗಳನ್ನು ಕಲ್ಪಿಸಿಕೊಡುವುದು.

- ಮಹಿಳಾ ಉದ್ಯೋಗಗಳಲ್ಲಿ ದೃಢ ನಿಶ್ಚಯ ಮತ್ತು ಸ್ವಕಲ್ಪನೆ ನಿರ್ಮಿಸುವುದು ಮತ್ತು ಕೌಟುಂಬಿಕ ವಿಷಯದಲ್ಲಿ ತೀರ್ಮಾನ ಅಧಿಕಾರ ತೆಗೆದುಕೊಳ್ಳುವುದಕ್ಕೆ ಪ್ರೋತ್ಸಾಹಿಸುವುದು.

- ಜಾತಿ ವರ್ಗಗಳ ಮಿತಿಯನ್ನು ಮೀರಿ ಮಹಿಳಾ ಸಮುದಾಯ ಎಲ್ಲಾ ಮಟ್ಟಗಳಲ್ಲೂ ಕಾರ್ಯ ನಿರ್ವಹಿಸುವುದು.

- ಮಹಿಳೆಯರಲ್ಲಿ ಸ್ವ-ಸಾಮರ್ಥ್ಯದ ಬೆಳವಣಿಗೆ ಮತ್ತು ಟೀಕಾತ್ಮಕ ಆಲೋಚನೆ ಮಾಡುವ ಪ್ರವೃತ್ತಿ ಬೆಳೆಸುವುದು.

- ಮಹಿಳೆಯರು ರಾಜಕೀಯವಾಗಿ ಹೆಚ್ಚಿನ ಅರಿವನ್ನು ಹೊಂದಿ ಈ ಸಂಬಂಧಿತ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.

- ಲಿಂಗ ರಕ್ಷಣೆಯ ದೃಷ್ಟಿ ಕೋನದ ಚಿಂತನೆ, ವಿಶ್ಲೇಷಣೆ ಜ್ಞಾನ ಸಂಪಾದನೆ ಮತ್ತು ಕೆಲಸಗಳ ಮುಖಾಂತರ ಸಾಮಾಜಿಕ ಪರಿವರ್ತನೆಯನ್ನು ತರಲು ಸಹಾಯ ಮಾಡುವುದು.

- ಮಹಿಳೆಯರಿಗೆ ಸಂಘಗಳ ಮುಖಾಂತರ ಔಪಚಾರಿಕ ಮತ್ತು ಅನೌಪಚಾರಿಕ ಶಿಕ್ಷಣವನ್ನು ಕಲ್ಪಿಸುವುದು.

- ಗೃಹ ಕೈಗಾರಿಕೆಗಳು ಮತ್ತು ಸಾಮಾಜಿಕ ಸಂಪನ್ಮೂಲಗಳಿಗೆ ಪ್ರದೇಶಾಧಿಕಾರ ಮತ್ತು ತರಬೇತಿಯನ್ನು ಹೆಚ್ಚಿಸುವುದರ ಮೂಲಕ ಸದಸ್ಯರಾಗಿ ಮಹಿಳೆಯರ ವ್ಯವಹಾರ ಶಕ್ತಿಯನ್ನು ದೃಢಿಸುವುದು.

- ಮಹಿಳೆಯರ ಸಂಘಗಳ ಕ್ರಿಯೆಗೆ ಸ್ಫೂರ್ತಿ ನೀಡುವುದು ಮತ್ತು ಸಂಘಗಳಿಗೆ ಎಲ್ಲಾ ರೀತಿಯಿಂದ ಸಹಾಯ ಮಾಡುವುದು.

- ಹೆಣ್ಣು ಮಕ್ಕಳ ಹಕ್ಕುಗಳ ಮತ್ತು ಮಹಿಳೆಯರಿಗೆ ದೊರೆಯುವ ಕಾಯ್ದೆಯ ಸೌಲಭ್ಯವನ್ನು ತಿಳಿಸುವುದು.

- ಮಹಿಳೆಯರ ಸ್ಥಾನಕ್ಕೆ ವಿರುದ್ಧವಾಗಿರುವ ಹಾಗೂ ಶೋಷಣೆಗೆ ಒಳಪಡಿಸುವಂತಹ

ಎಲ್ಲಾ ಪ್ರತಿಭಟನೆಗಳನ್ನು ಬೆಂಬಲಿಸುವುದು.

- ಹಲವಾರು ಕಾರ್ಯಕ್ರಮಗಳನ್ನು ಯೋಜಿಸುವಾಗ ಮಹಿಳೆಯರನ್ನು ಒಳಗೊಂಡ ನೀತಿ ನಿರ್ಣಯಗಳನ್ನು ಅವರ ಹಿತಾಸಕ್ತಿಗೆ ಅನುಕೂಲವಾಗುವಂತೆ ಮಾಡುವುದು.
- ಮಹಿಳೆಯರಿಗೆ ಅಗತ್ಯ ಕೌಶಲ್ಯವನ್ನು ದೊರಕಿಸಿಕೊಳ್ಳಲು ನೆರವು ನೀಡಿ ಸರ್ಕಾರದ ಸಂಪನ್ಮೂಲಗಳನ್ನು ಹೆಚ್ಚು ಸುಲಭವಾಗಿ ಪಡೆಯಲು ಮತ್ತು ಸಾಧ್ಯವಾಗುವಂತೆ ಮಾಡುವುದು.
- ಮಹಿಳೆಯರಲ್ಲಿ ಸಂಘಟನೆ ಬೆಳೆಸುವುದು ಮತ್ತು ಅಧಿಕಾರ ನಿರ್ಣಯ ತೆಗೆದುಕೊಳ್ಳುವಿಕೆಯಲ್ಲಿ ಮಹಿಳೆಯರಿಗೆ ಸ್ಫೂರ್ತಿ ನೀಡುವುದು.
- ಕಾನೂನು ಬಗ್ಗೆ ಅರಿವು ಮೂಡಿಸುವುದು.

ಈ ಮೇಲಿನ ಉದ್ದೇಶಗಳನ್ನು ಇಟ್ಟುಕೊಂಡು ಗ್ರಾಮೀಣ ಪ್ರದೇಶದ ವಿವಿಧ ವಲಗಯಳಲ್ಲಿ ದುಡಿಯುವ ಮಹಿಳೆಯರನ್ನು ಸಬಲೀಕರಣಗೊಳಿಸುವ ಉದ್ದೇಶ ಹಾಗೂ ಪ್ರಮುಖ ಕಾರ್ಯ ಮಹಿಳಾ ಸಮಾಖ್ಯಾದ್ದಾಗಿದೆ.

ಸಮಾಖ್ಯದ ಕಾರ್ಯ ಚಟುವಟಿಕೆಗಳು:

1. ಸಂಘದ ಸ್ವಾವಲಂಬನಾ ಕಾರ್ಯ ಚಟುವಟಿಕೆಗಳು:

1. ಕ್ರಮಬದ್ಧವಾಗಿ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹಣೆ ಮಾಡುವುದು.
2. ವಿವಿಧ ಸಮಿತಿಗಳ ಸಮನ್ವಯ ಸಭೆಗಳನ್ನು ಕರೆಯುವುದು.
3. ಹೊಸ ಸಂಘಗಳನ್ನು ರೂಪಿಸುವುದು ಮತ್ತು ಬಲಹೀನವಾಗಿರುವ ಸಂಘಗಳನ್ನು ಬಲಪಡಿಸುವುದು.
4. ಸ್ತ್ರೀ-ಶಕ್ತಿ ಸಂಘಗಳೊಂದಿಗೆ ಕಾರ್ಯಜಾಲ ನಿರ್ಮಾಣ ಮತ್ತು ಲಿಂಗ ಸಮಾನತೆ ಪರಿಕಲ್ಪನೆಯ ಮಾಹಿತಿ ನೀಡುವುದು.
5. ಸದಸ್ಯ ಸಂಘಗಳ ಘರ್ಷಣೆಯನ್ನು ಬಗೆಹರಿಸುವುದು.
6. ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳು ಕಾರ್ಯಜಾಲ ರೂಪಿಸುವುದು ಮತ್ತು ಜನ ಸಂಪರ್ಕ ಸಭೆಗಳಲ್ಲಿ ಭಾಗವಹಿಸುವುದು.

7. ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಮತ್ತು ಫಲಾನುಭವಿಗಳನ್ನು ಗುರುತಿಸುವುದು.

8. ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ ಕೆ.ಜಿ.ಬಿ.ವಿ. ಮಹಿಳಾ ಸಮಾಖ್ಯದ ಕಾರ್ಯ ವ್ಯಾಪ್ತಿಯಲ್ಲಿರುವ 7 ಜಿಲ್ಲೆಗಳ 29 ಬ್ಲಾಕಗಳಲ್ಲಿ (ಗುಲಬರ್ಗಾ ಮತ್ತು ರಾಯಚೂರು ಸೇರಿ) 10 ರಿಂದ 14 ವರ್ಷ ವಯಸ್ಸಿನ ಹೆಣ್ಣು ಮಕ್ಕಳಿಗಾಗಿ ಆರಂಭಿಸಿರುವ ವಸತಿ ಶಾಲೆಗಳು ಸರ್ವ ಶಿಕ್ಷಣ ಅಭಿಯಾನದ ನೆರವಿನೊಂದಿಗೆ ನಡೆಯುತ್ತಿರುವ ಕಾರ್ಯಕ್ರಮವಾಗಿದೆ.

2. ಶೈಕ್ಷಣಿಕ ಕಾರ್ಯ ಚಟುವಟಿಕೆಗಳು:

1. ಕ್ರಮಬದ್ಧವಾಗಿ ಶಿಕ್ಷಣ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹಣೆ ಮಾಡುವುದು.

2. ಶಾಲಾಭಿವೃದ್ಧಿ ಮತ್ತು ನಿರ್ವಹಣಾ ಸಮಿತಿಯ ಸದಸ್ಯರಾಗಿ ಸಂಘದ ಪ್ರತಿನಿಧಿಗಳನ್ನು ಬೆಂಬಲಿಸುವುದು.

3. ಶಾಲೆ ಬಿಟ್ಟ ಮಕ್ಕಳ ಸಮೀಕ್ಷೆಯನ್ನು ಏರ್ಪಡಿಸಿ ಶಾಲಾ ದಾಖಲಾತಿ ಆಂದೋಲನದಲ್ಲಿ ಭಾಗವಹಿಸುವುದು.

4. ಸೇವಾ ಸೌಲಭ್ಯಗಳ ತೀವ್ರ ಕೊರೆತೆಯಿರುವ ಶಾಲೆಗಳನ್ನು ಮಂಜೂರು ಮಾಡಿಕೊಳ್ಳಲು ಶ್ರಮಿಸುವುದು.

5. ಮುಖ್ಯ ವಾಹಿನಿಯ ಶಿಕ್ಷಣ ವ್ಯವಸ್ಥೆಗಳಾದ ಶಾಲೆಗಳು, ವಸತಿ ನಿಲಯಗಳು, ಅಂಗನವಾಡಿಗಳು, ಶಿಶು ಅಭಿವೃದ್ಧಿ ಕೇಂದ್ರಗಳು ಮತ್ತು ಆಶ್ರಮ ಶಾಲೆಗಳೊಂದಿಗೆ ಕೆಲಸ ಮಾಡುವುದು.

6. ಹದಿ ವಯಸ್ಸಿನ ಹೆಣ್ಣು ಮಕ್ಕಳಿಗೆ (ಕಿಶೋರಿಯರ ಸಂಘದವರಿಗೆ) ಪ್ರೇರಣೆ ಮತ್ತು ಬೆಂಬಲ ನೀಡುವುದು.

7. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಸಮುದಾಯದಲ್ಲಿ ಸಕಾರಾತ್ಮಕ ವಾತಾವರಣ ಮೂಡಿಸುವುದು.

3. **ಕಾನೂನು ಮಾಹಿತಿಯ ಕಾರ್ಯ ಚಟುವಟಿಕೆಗಳು:**

1. ಕ್ರಮಬದ್ಧವಾಗಿ ಕಾನೂನು ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹ ಮಾಡುವುದು.
2. ದೌರ್ಜನ್ಯ, ವಂಚನೆ, ವರದಕ್ಷಿಣೆ, ಬಹುಪತ್ನಿತ್ವ, ಹೆಂಡತಿಯನ್ನು ತೊರೆಯುವುದು ಮತ್ತು ಆಸ್ತಿ ವಿವಾದಗಳಂತಹ ಸಮಸ್ಯೆಗಳನ್ನು ಬಗೆಹರಿಸುವುದು.
3. ನಾರಿ ಅದಾಲತ್ ಮುಖಾಂತರ ಸಮಸ್ಯೆಗಳನ್ನು ಬಗೆಹರಿಸುವುದು.
4. ಉಚಿತ ಕಾನೂನು ಸಲಹಾ ಮಂಡಳಿ ಮತ್ತು ಪೋಲಿಸ್ ಇಲಾಖೆಯೊಂದಿಗೆ ಕೆಲಸ ಮಾಡುವುದು.
5. ಸಾರಾಯಿ ವಿರೋಧಿ ಹೋರಾಟದಲ್ಲಿ ಮಹಿಳೆಯರು ಭಾಗವಹಿಸುವುದು.

4. **ಪಂಚಾಯತ್‌ರಾಜ್ ಕಾರ್ಯ ಚಟುವಟಿಕೆಗಳು:**

1. ಕ್ರಮಬದ್ಧವಾಗಿ ಪಂಚಾಯತ್ ರಾಜ್ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹಣೆ ಮಾಡುವುದು.
2. ಚುನಾಯಿತ ಮಹಿಳಾ ಪ್ರತಿನಿಧಿಗಳ ಒಕ್ಕೂಟವನ್ನು ರಚಿಸುವುದು.
3. ಗ್ರಾಮಸಭೆಗಳಲ್ಲಿ ಮತ್ತು ಜವಾಬ್ದಾರಿ ಕಾರ್ಯಕ್ರಮಗಳಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸುವಂತೆ ಸಂಘದ ಮಹಿಳೆಯರಿಗೆ ಪ್ರೇರಣೆ ನೀಡುವುದು.
4. ಸಂಘಗಳಲ್ಲಿ ಗ್ರಾಮಗಳ ಚುನಾಯಿತ ಮಹಿಳಾ ಪ್ರತಿನಿಧಿಗಳೊಂದಿಗೆ ಕೆಲಸ ಮಾಡುವುದು.
5. ಸರಕಾರದ ಸೌಲಭ್ಯಗಳನ್ನು ಪಡೆದುಕೊಳ್ಳುವುದು ಮತ್ತು ಫಲಾನುಭವಿಗಳನ್ನು ಗುರುತಿಸುವುದು.

6. **ಆರೋಗ್ಯದ ಕಾರ್ಯ ಚಟುವಟಿಕೆಗಳು:**

1. ಕ್ರಮಬದ್ಧವಾಗಿ ಆರೋಗ್ಯ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹ ಮಾಡುವುದು.
2. ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದೊಂದಿಗೆ ಕಾರ್ಯಾಜಾಲ ರೂಪಿಸುವುದು. ಆರೋಗ್ಯ ಸೇವಾ ಕಾರ್ಯಕರ್ತರು ಸಮರ್ಪಕವಾಗಿ ಜವಾಬ್ದಾರಿ ನಿರ್ವಹಿಸುವಂತೆ ನೋಡಿಕೊಳ್ಳುವುದು.

3. ಮಹಿಳೆಯರ ಆರೋಗ್ಯ ಸಮಸ್ಯೆಗಳ ಕುರಿತು ಸಮೀಕ್ಷೆ ಮಾಡುವುದು.

4. ಮಹಿಳೆಯರ ಆರೋಗ್ಯ ಸಮಸ್ಯೆಗಳ ಪರಿಹಾರದಲ್ಲಿ ರಾಜ್ಯ ಸರಕಾರವು ರೂಪಿಸಿರುವ ಆರೋಗ್ಯ ಕಾರ್ಯಕ್ರಮಗಳ ಸೌಲಭ್ಯ ಪಡೆಯುವಂತೆ ಪ್ರೇರೆಪಿಸುವುದು.

5. ಗ್ರಾಮ ನೈರ್ಮಲ್ಯ ಮತ್ತು ಸ್ವಚ್ಛತೆಗಾಗಿ ಸಮುದಾಯವನ್ನು ಪ್ರೇರೆಪಿಸುವುದು ಮತ್ತು ಶ್ರಮದಾನ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು.

7. ಲಿಂಗ ಸಮಾನತೆಯ ಕಾರ್ಯ ಚಟುವಟಿಕೆಗಳು :

1. ಕ್ರಮಬದ್ಧವಾಗಿ ಲಿಂಗ ಸಮಾನತೆಯ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹ ಮಾಡುವುದು.

2. ಸ್ತ್ರೀ–ಶಕ್ತಿ ಸಂಘಗಳಿಗೆ ಲಿಂಗ ಸಮಾನತೆಯ ಪರಿಕಲ್ಪನೆಯ ಮಾಹಿತಿ ನೀಡುವುದು.

3. ಮಹಿಳೆಯರು ಎದುರಿಸುವಂತಹ ಬಹುತೇಕ ಸಮಸ್ಯೆಗಳನ್ನು ನಿವಾರಿಸುವುದು.

4. ಮಹಿಳಾ ಸಮಾಖ್ಯಾ ಕಾರ್ಯಕ್ರಮದ ಉದ್ದೇಶದಂತೆ ಲಿಂಗ ಸೂಕ್ಷ್ಮತೆ ತರಬೇತಿ ಯಲ್ಲಿ ಪುರುಷರ ಸಹಭಾಗಿತ್ವ ಇರುವಂತೆ ನೋಡಿಕೊಳ್ಳುವುದು.

8. ಆರ್ಥಿಕಾಭಿವೃದ್ಧಿ ಕಾರ್ಯ ಚಟುವಟಿಕೆಗಳು:

1. ಕ್ರಮಬದ್ಧವಾಗಿ ಆರ್ಥಿಕಾಭಿವೃದ್ಧಿ ಸಮಿತಿಯ ಸಭೆಗಳನ್ನು ನಡೆಸುವುದು ಮತ್ತು ಮಾಹಿತಿ ಸಂಗ್ರಹ ಮಾಡುವುದು.

2. ಸಂಘಗಳನ್ನು ವರ್ಗೀಕರಿಸಿ ಸ್ವ–ಸಹಾಯ ಸಂಘಗಳ ಪರಿಕಲ್ಪನೆ ಬಗ್ಗೆ ತರಬೇತಿ ನೀಡುವುದು.


3. ಬ್ಯಾಂಕುಗಳು ಮತ್ತು ಇತರೆ ಹಣಕಾಸು ಸಂಸ್ಥೆಗಳಿಂದ ಸಾಲ ಹಾಗೂ ಸಹಾಯ ಧನವನ್ನು ಪಡೆದುಕೊಳ್ಳುವುದು.

   1. ಪ್ರಾರಂಭಿಕ ಹಂತ – Initial stage
   2. ಮಾಧ್ಯಮಿಕ ಹಂತ – Medium stage
   3. ಬಲವಾದ ಹಂತ – Strong stage

4. ಮಹಿಳೆಯರ ಮಾಶಾಸನ ಮತ್ತು ಹಳದಿ ಕಾರ್ಡುಗಳನ್ನು ಪಡೆದುಕೊಳ್ಳಲು ಅವರಿಗೆ ನೆರವಾಗುವುದು.

5. ಗಿರಿಜನರಿಗಾಗಿ ಭೂಮಿಯನ್ನು ಗುರುತಿಸುವುದು ಮತ್ತು ಅದರ ಅನುಸರಣೆಯ ಕೆಲಸ ಕಾರ್ಯಗಳನ್ನು ಮಾಡುವುದು.

ಮಹಿಳಾ ಸಮಾಖ್ಯಾದ ಸಂಘಟನಾ ರಚನೆ



ಹೀಗೆ ಮಹಿಳಾ ಸಮಾಖ್ಯಾ ಸಂಸ್ಥೆಯು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಹತ್ತು-ಹಲವಾರು ಕಾರ್ಯಕ್ರಮಗಳನ್ನು ಕಳೆದ 20-ವರ್ಷಗಳಿಂದಲೂ ಮಾಡುತ್ತಲೇ ಬಂದಿದೆ. ಮುಂದೆಯೂ ಮಾಡುವ ಸಾಧ್ಯತೆ ಇದೆ. ಏಕೆಂದರೆ ಮಹಿಳೆಯರ ಸಬಲೀಕರಣಕ್ಕಾಗಿ ಸರ್ಕಾರದಿಂದಲೇ ನೋಂದಣೆಯಾದ ಸಂಸ್ಥೆ ಇದಾಗಿದೆ. ಪರಿಣಾಮಕಾರಿಯಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ. ಗ್ರಾಮೀಣ ಮಟ್ಟದಲ್ಲಿ ಮಹಿಳೆಯರು ಸಂಘಟಿತರಾಗುತ್ತಿದ್ದಾರೆ. ನೀರಿಕ್ಷಿತ ಪ್ರಮಾಣದ ಗುರಿಯನ್ನು ಮುಟ್ಟಲಿಕ್ಕೆ ಆಗದೇ ಇದ್ದರು ಸಹ ಮಹಿಳೆಯರು ತಮ್ಮ ಬದುಕಿನಲ್ಲಿ ಸಾಂಪ್ರದಾಯಿಕ ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತುತ್ತಿರುವುದು ಸತ್ಯ ಅದು ಮಹಿಳೆ ತೆಗೆದುಕೊಳ್ಳುವ ತೀರ್ಮಾನವಾಗಿರುಬಹುದು, ವ್ಯವಸ್ಥೆಯ

ವಿರುದ್ಧ ನಡೆಸುವ ಹೋರಾಟವಾಗಿರುಬಹುದು ತಮ್ಮ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ತೆಗೆದುಕೊಳ್ಳುವುದಾದರೂ ಆಗಿರಬಹುದು ಮದುವೆಯ ವಿಷಯವಾಗಿರಬಹುದು, ಮಕ್ಕಳ ವಿಷಯವಾಗಿರಬಹುದು, ವರದಕ್ಷಿಣೆಯ ವಿಚಾರವಾಗಿರಬಹುದು. ಉದಾ: ತಾವು ಶಾಲೆ ಕಲಿತಿಲ್ಲವಾದರೂ ತಮ್ಮ ಮಕ್ಕಳಿಗೆ ಶಾಲೆ ಕಲಿಸಬೇಕೆಂಬ ಉತ್ಸಾಹ ಮಹಿಳೆಯರಲ್ಲಿ ಇದೆ. ಹಾಗೂ ವರದಕ್ಷಿಣೆಯ ವಿಚಾರಕ್ಕೆ ಬಂದಾಗ ತಮ್ಮ ಮಗಳಿಗೆ ವರದಕ್ಷಿಣೆ ಕೊಟ್ಟರು ಪರವಾಗಿಲ್ಲ ಮಗನಿಗೆ ತೆಗೆದುಕೊಳ್ಳುವುದಿಲ್ಲ ಎಂಬ ಮಾತುಗಳು ಮಹಿಳೆಯರು ಸಬಲತೆಯ ಹೆಜ್ಜೆಗಳನ್ನು ಹಾಕುತ್ತಿದ್ದಾರೆ ಎಂಬುವುದಕ್ಕೆ ಸಾಕ್ಷಿಯಾಗಿದೆ.

ಮುಂಬರುವ ದಿನಗಳಲ್ಲಿ ಲಿಂಗಬೇಧ ಮತ್ತು ಲಿಂಗ ತಾರತಮ್ಯದ ವಿರುದ್ಧ ಎಲ್ಲೆಡೆ ಧ್ವನಿ ಏಳುವ ಸಾಧ್ಯತೆ ಇದೆ ಎಂದು ನಂಬಿಯೇ ಈ ಅಧ್ಯಾಯನವನ್ನು ಕೈಗೊಳ್ಳಲಾಗಿದೆ.

1. ಈ ಯೋಜನೆಯ ಅನುಷ್ಠಾನದ ಪ್ರಾರಂಭಿಕ ಹಂತದಲ್ಲಿ ಪುರುಷ ಪ್ರಾಬಲ್ಯ ಕಂಡುಬಂದಿದೆ.
2. ಈ ಯೋಜನೆಯಲ್ಲಿ ಕಾರ್ಯನಿರ್ವಹಿಸುವ ಎಲ್ಲ ಸಿಬ್ಬಂದಿ ವರ್ಗದವರು ಸೇವಾ ಅಭದ್ರತೆಯನ್ನು ಹೊಂದಿದ್ದಾರೆ. ತಾವೆ ಸಬಲರಿಲ್ಲದೆಯಿದ್ದಾಗ ಇನ್ನೊಬ್ಬರನ್ನು ಮಾನಸಿಕವಾಗಿ ಹೇಗೆ ಸಬಲೀಕರಣಗೊಳಿಸುತ್ತಾರೆಂಬ ಪ್ರಶ್ನೆ ಖಂಡಿತ ಎಳುತ್ತದೆ.
3. ಸಬಲೀಕರಣ ಪ್ರಕ್ರಿಯೆಯಲ್ಲಿ ಮಹಿಳೆಯರನ್ನ ಸಬಲಗೊಳಿಸುವ ನಿಟ್ಟಿನಲ್ಲಿ ಇವರೆಲ್ಲರೂ ಹಗಲಿರುಳು ಶ್ರಮಿಸುತ್ತಾರೆ.
4. ಮಹಿಳೆಯರು ಈ ಯೋಜನೆಯ ಲಾಭ ಪಡೆದು ಹಳ್ಳಿಯಿಂದ ದಿಲ್ಲಿಯವರೆಗೆ ಚಲಿಸಲು ಸಾಧ್ಯವಾಗಿದೆ.
5. ಮಹಿಳೆಯರು ಸಂಘ ಮಟ್ಟದಿಂದ ಜಿಲ್ಲಾ ಮಟ್ಟದ ಒಕ್ಕೂಟದ ರಚನೆಯ ಹಂತಕ್ಕೆ ತಲುಪಿದ್ದಾರೆ.
6. ಮಹಿಳೆಯರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಕಾನೂನು, ಆರೋಗ್ಯ, ಲಿಂಗತ್ವ ಮುಂತಾದ ವಿಷಯಗಳ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಹೀಗಾಗಿ ಈ ಮೇಲೆ ತಿಳಿಸಿರುವಂತೆ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಮಹಿಳಾ ಸಮಾಖ್ಯಾ ಸಂಸ್ಥೆಯು ತನ್ನದೇ ಆದ ಮಹತ್ವದ ಪಾತ್ರವನ್ನು ನಿರ್ವಹಿಸಿ ಮಹಿಳೆಯರನ್ನು ಸಬಲವಾಗಿಸುವಲ್ಲಿ ಹಗಲಿರುಳು ಶ್ರಮಿಸುತ್ತಿದೆ.

3.3.2 ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಪರಿಚಯ :

ಪರಿಚಯ:

ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು 1993–94 ರಲ್ಲಿ ಗುಲಬರ್ಗಾ ಜಿಲ್ಲೆಯಲ್ಲಿ ಜಾಗತಿಕ ನೆರೆ ಸಂಸ್ಥೆ ಧಾರವಾಡ ಸಹಾಯದೊಂದಿಗೆ ಈ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಯಲು ಸೀಮೆ ಎನಿಸಿಕೊಂಡಿರುವ ಉತ್ತರ ಕರ್ನಾಟಕದ ಜಿಲ್ಲೆಗಳಾದ ಗುಲಬರ್ಗಾ, ಬೀದರ, ರಾಯಚೂರು ಮುಂತಾದ ಜಿಲ್ಲೆಗಳಲ್ಲಿ ಇದರ ಕಾರ್ಯಕ್ಷೇತ್ರ ವ್ಯಾಪ್ತಿಸಿದೆ.

ಪೀಠಿಕೆ :

ಗುಲಬರ್ಗಾ ಜಿಲ್ಲೆಯ ಒಣಬೇಸಾಯ ಪದ್ಧತಿ ಅವಳಡಿಸಿಕೊಂಡ ಪ್ರದೇಶಗಳಲ್ಲಿ ಜನರು ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಅಭಿವೃದ್ಧಿಯನ್ನು ಸಾಧಿಸುವುದೇ ಈ ಸಂಸ್ಥೆಯ ಗುರಿಯಾಗಿದೆ. ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಸಂಸ್ಥೆಯ ಮುಖಾಂತರ ಸಂಘಗಳನ್ನು ರಚಿಸಿಕೊಂಡು ಅವುಗಳ ಮುಖಾಂತರ ಕೃಷಿ, ಪಶುಸಂಗೋಪನಾ, ವೃತ್ತಿ ಪರಿಶಿಕ್ಷಣ, ಗೂಡಿಗಾರಿಕೆ, ಆರೋಗ್ಯ ವ್ಯವಸ್ಥೆ, ವಯಸ್ಕ ಶಿಕ್ಷಣ ಇವುಗಳನ್ನು ವಯಸ್ಕರು ಯುವತಿಯರು, ಯುವಕರಿಗೆ ಹಾಗೂ ಮಹಿಳೆಯರಿಗೆ ವಯೋವೃದ್ಧರಿಗೆ ಉದ್ಯೋಗಾವಕಾಶವನ್ನು ಮತ್ತು ತರಬೇತಿಯನ್ನು ನೀಡುವುದೇ ಈ ಸಂಸ್ಥೆಯ ಮುಖ್ಯ ಉದ್ದೇಶವಾಗಿದೆ.

ಸಂಸ್ಥೆಯ ಕಾರ್ಯ ಚಟುವಟಿಕೆಗಳು (2006–07):

1. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಯನ್ನು ಸಾಧಿಸುವುದು.
2. ಆರೋಗ್ಯ ಮತ್ತು ನೈರ್ಮಲ್ಯ.
3. ಭೂ ಅಭಿವೃದ್ಧಿ ಮತ್ತು ಉತ್ಪಾದನಾ ಹೆಚ್ಚಳ.
4. ಶೋಷತರಿಗೆ ಕಾನೂನಿನ ಕ್ರಮಕೈಗೊಳ್ಳುವುದು.
5. ಆರ್ಥಿಕಾಭಿವೃದ್ಧಿ ಮತ್ತು ತರಬೇತಿಯನ್ನು ನೀಡುವುದು.
6. ಮಾನವ ಸಂಪನ್ಮೂಲ ಅಭಿವೃದ್ಧಿಗಳ ಕಲ್ಪನೆ.
7. ಕಾನೂನು ಶಿಕ್ಷಣ ಮತ್ತು ಕಾರ್ಯವಿಧಿ ವಿಧಾನಗಳ ವೈಖರಿ.
8. ವೃತ್ತಿ ತರಬೇತಿ ಮತ್ತು ಕುಶಲತೆಗಳ ಅಭಿವೃದ್ಧಿ.

ಮಹಿಳೆಯರ ಆರ್ಥಿಕ ಅಭಿವೃದ್ಧಿ ಹೊಂದಲು ವಿಶೇಷವಾಗಿರುವ ಕಾರ್ಯಕ್ರಮಗಳು:

1. ಉಳಿತಾಯ ಮಾಡುವುದು, ಕುರಿಸಾಗಾಣಿಕೆ, ಹೈನುಗಾರಿಕೆ, ಭೂ ಅಭಿವೃದ್ಧಿ, ಧಾನ್ಯಗಳ ಸಂಗ್ರಹಣೆ, ಸಾಲಕೊಡಿಸುವುದು, ಭೂ ಸಾಗುವಳಿ, ಬೀಜ ಗೊಬ್ಬರಗಳ ಮಾರಾಟ.
2. ಮಹಿಳೆಯರಿಗೆ ಕಸೂತಿ ಗೂಡಿಕೈಗಾರಿಕೆ, ಟೈಲರಿಂಗ್, ಬುಟ್ಟಿ ಹೊಣೆಯುವುದು, ಗೊಂಬೆ ತಯಾರಿಕೆ ಹಾಗೂ ಇತರ ತಾಂತ್ರಿಕ ತರಬೇತಿಯನ್ನು ನೀಡುವುದು.
3. ವಿಶೇಷ ಶೈಕ್ಷಣಿಕ ತರಬೇತಿಗಳನ್ನು ನೀಡುವುದು.
4. ರಾಜಕೀಯ ಕಾನೂನು ಮತ್ತು ಮೀಸಲಾತಿಗಳ ಬಗ್ಗೆ ತರಬೇತಿ ನೀಡುವುದು.
5. ಆರೋಗ್ಯ ಮತ್ತು ಪರಿಸರದ ಬಗ್ಗೆ ಜಾಗೃತ ಕಾರ್ಯಕ್ರಮ.
6. ಸಾಮಾಜಿಕ ಪಿಡುಗುಗಳ ಬಗ್ಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

ಸಂಸ್ಥೆ ಗುರಿ ಮತ್ತು ಉದ್ದೇಶಗಳು:

ಈ ಯೋಜನೆಯ ಗ್ರಾಮೀಣ ಪ್ರದೇಶದ ಮಹಿಳೆಯರ ಅಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ.

1. ಗ್ರಾಮೀಣ ಪ್ರದೇಶದಲ್ಲಿರುವ ಬಡ ಮತ್ತು ಕಡುಬಡವ ಮಹಿಳೆಯರ ಅಭಿವೃದ್ಧಿ ಪಡಿಸುವುದು.
2. ಗ್ರಾಮೀಣ ಜನರಿಗೆ ಅನೌಪಚಾರಿಕ ಶಿಕ್ಷಣವನ್ನು ನೀಡುವುದರ ಮೂಲಕ ಮಹಿಳೆಯರಲ್ಲಿ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣೀಕ ಮನೋಭಾವವನ್ನು ಬೆಳೆಸುವುದು.
3. ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಸಾಮಾಜಿಕವಾಗಿ, ಆರ್ಥಿಕವಾಗಿ ಸ್ವಾವಲಂಬಿತರನ್ನಾಗಿ ಮಾಡುವುದು.
4. ಯುವಕ-ಯುವತಿಯರಿಗೆ, ನಿರುದ್ಯೋಗಿಗಳಿಗೆ ಮಹಿಳೆಯರಿಗೆ ಸ್ವಯಂ ಉದ್ಯೋಗಾವಕಾಶಗಳನ್ನು ಮತ್ತು ತರಬೇತಿಯನ್ನು ನೀಡುವುದು.
5. ಸರ್ಕಾರಿ ಮತ್ತು ಅರೇ ಸರ್ಕಾರಿ ಸಂಘ-ಸಂಸ್ಥೆಗಳೊಂದಿಗೆ ಸಹಕಾರ ಮನೋಭಾವದಿಂದ ಕಾರ್ಯನಿರ್ವಹಿಸುವುದು.

ಈ ಸಂಸ್ಥೆಯು ಹಲವಾರು ಹಳ್ಳಿಗಳಲ್ಲಿ ಮಹಿಳಾ ಸಂಘಟನೆಯನ್ನು ರೂಪಿಸಿಕೊಂಡು ಸಾಲ ಕೊಡಿಸುವುದು, ಸ್ವಂತ ಉದ್ಯೋಗದಲ್ಲಿ ತೊಡಗಿಸುವದು ಮತ್ತು ಮಹಿಳೆಯರು ಆರ್ಥಿಕ ಸಬಲತೆಯ ಅಧಿಕಾರ ಶಕ್ತಿಯನ್ನು ದೊರಕಿಸಿಕೊಡುವುದೇ ಈ ಸಂಸ್ಥೆಯ ಉದ್ದೇಶ.

ಜಾಗತಿಕ ನೇರ ಸಂಸ್ಥೆಯ ಮುಖಾಂಶ ತನ್ನ ಕಾರ್ಯವ್ಯಾಪ್ತಿಯನ್ನು ರೂಪಿಸಿದೆ. ಈ ಸಂಸ್ಥೆಗೆ ಸಹಾಯಧನವು ವಿಶ್ವ ಬ್ಯಾಂಕನಿಂದ ದೊರೆಯುತ್ತದೆ. ಜಿಲ್ಲಾ ಪಂಚಾಯತ ಮುಖಾಂತರ ತನ್ನ ಹಣಕಾಸು ನೆರವನ್ನು ಪಡೆಯತ್ತದೆ. ಹಲವಾರು ಸರಕಾರಿ ಮತ್ತು ಅರೆ ಸರ್ಕಾರಿ ಬ್ಯಾಂಕುಗಳಿಂದಲೂ ಸಾಲ ಪಡೆದುಕೊಳ್ಳುತ್ತೆವೆ.

ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಗೆ ಅಧಿಕಮೊತ್ತದ ಹಣವು ವಿಶ್ವಬ್ಯಾಂಕಿನಿಂದ ನೆರವು ಪಡೆದುಕೊಳ್ಳುತ್ತದೆ. ಕರ್ನಾಟಕ ಗ್ರಾಮೀಣ ನೀರು ಸರಬರಾಜು ಹಾಗೂ ನೈರ್ಮಲ್ಯ ಸಂಸ್ಥೆಯನ್ನು ಕರ್ನಾಟಕ ಸರ್ಕಾರ ಗ್ರಾಮೀಣ ಅಭಿವೃದ್ಧಿ ಇಲಾಖೆ ಪಂಚಾಯತರಾಜ್ ಇಲಾಖೆಗಳಿಂದ ಸಹಾಯ ಧನವನ್ನು ಪಡೆದುಕೊಳ್ಳುತ್ತದೆ. ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರು, ಒಳಚರಂಡಿ, ರಸ್ತೆ ಸುವ್ಯವಸ್ಥೆ, ತಿಪ್ಪೆಗುಂಡಿಗಳ ವ್ಯವಸ್ಥೆ ಮನೆಗಳ ನಿರ್ಮಾಣ ಸಂಸ್ಥಿಕ ಶೌಚಾಲಯಗಳ ನಿರ್ಮಾಣ ಮತ್ತು ಹೊಗೆ ರಹಿತ ಒಲೆಗಳನ್ನು ರೂಪಿಸುವುದು ಗ್ರಾಮ ಪಂಚಾಯತ, ತಾಲ್ಲೂಕಾ ಪಂಚಾಯತಿ, ಜಿಲ್ಲಾ ಪಂಚಾಯತ, ಸರ್ಕಾರಿ ಸಂಘಗಳು ಮತ್ತು ವಿಶ್ವ ಬ್ಯಾಂಕ್ ನೆರವಿನ ಮುಖಾಂತರ ತನ್ನ ಹಣಕಾಸಿನ ಕಾರ್ಯವ್ಯಾಪ್ತಿಯನ್ನು ರೂಪಿಸಿಕೊಳ್ಳುತ್ತದೆ. ವಿವಿಧ ರೀತಿಯ ಸಂಘಗಳು ಅಥವಾ ಗುಂಪುಗಳು ಸ್ಥಾಪಿಸಿಕೊಂಡು ಉಳಿತಾಯ ಮಾಡುವುದರ ಮೂಲಕವಾಗಿ ತನ್ನ ಸದಸ್ಯರ ಜೀವನ ಮೌಲ್ಯಗಳನ್ನು ಕಾಪಾಡಿಕೊಳ್ಳುತ್ತದೆ" [6(ಎ), 6(ಬಿ)].

ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ಇತಿಹಾಸ:

"ಜಾಗತಿಕ ನೇರ ಸಂಸ್ಥೆ ಧಾರವಾಡ ಈ ಸಂಸ್ಥೆಯು ಪ್ರಥಮಬಾರಿಗೆ ಅಮೇರಿಕಾದಲ್ಲಿ ಸ್ಥಾಪನೆಯಾಯಿತು. ಈ ಸಂಸ್ಥೆಯ ಸ್ಥಾಪಕ ಜಾನಿ ಪೀಟರ ಸಂಸ್ಥೆಯ ಕಾರ್ಯಕ್ಷೇತ್ರವು ದಕ್ಷಿಣ ಏಷ್ಯಾ ಹಾಗೂ ಭಾರತ, ನೇಪಾಳ ಇಂಡೋನೇಷ್ಯಾ, ಫಿಲಿಫೈನ್ಸ ಮತ್ತು ಉತ್ತರ ಅಮೇರಿಕಾ ಮತ್ತು ದಕ್ಷಿಣ ಅಮೇರಿಕಾಗಳಲ್ಲಿ ಇದರ ಕಾರ್ಯಕ್ಷೇತ್ರ ವ್ಯಾಪಿಸಿದೆ. ಪೂರ್ವ ಆಫ್ರಿಕಾ ಮತ್ತು ದಕ್ಷಿಣ ಆಫ್ರಿಕಾದಲ್ಲಿ ಕೂಡ ಹರಡಿಕೊಂಡಿದೆ. ಈ ರೀತಿಯಾಗಿ ಹರಡಿಕೊಂಡ ಈ ಸಂಸ್ಥೆಯ ಕಾರ್ಯವ್ಯಾಪ್ತಿ ಭಾರತದಲ್ಲಿ ಒಣಬೇಸಾಯ ಪ್ರದೇಶಗಳಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು.

ನಂತರ ಧಾರವಾಡದಿಂದ ಗುಲಬರ್ಗಾದವರೆಗೆ ವ್ಯಾಪಿಸಿ 1992–94 ರಲ್ಲಿ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯಾಗಿ ರೂಪಗೊಂಡಿತು. ಈ ಸಂಸ್ಥೆಯ ಸ್ಥಾಪಕ ಸುಬ್ಬಣ್ಣ ಬಿರಾದಾರರಂತಹ

ಮಹಾನ ಸಂಘಟಕರು ಸಂಸ್ಥೆಯ ಅಭಿವೃದ್ಧಿ ಸಾಧಿಸಲಿಕ್ಕೆ ಕಾರಣಕರ್ತರಾದರು. ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಸ್ವ–ಸಹಾಯ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳು ಮತ್ತು ಯೋಜನೆಗಳನ್ನು ರೂಪಿಸಿದೆ. ಈ ಕಾರ್ಯಕ್ರಮ ಮತ್ತು ಯೋಜನೆಗಳ ಮೂಲಕ ಮಹಿಳೆಯು ಸ್ವಾವಲಂಬಿತ ಬದುಕನ್ನು ಸಾಗಿಸಲು ಮುಂದಾಗಿದ್ದಾಳೆ.

ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯು ಹಮ್ಮಿಕೊಂಡ ಯೋಜನೆಗಳು ಮತ್ತು ಕಾರ್ಯಕ್ರಮಗಳು

1. ಮಹಿಳಾ ಉದ್ಯಮಶೀಲತಾ ಕಾರ್ಯಕ್ರಮ:

ಸ್ವ–ಸಹಾಯ ಸಂಘಗಳನ್ನು ರಚನೆಮಾಡಲು ಮತ್ತು ಸಂಘದ ರಚನೆಯ ಮುಖಾಂತರ ಸಭೆಯನ್ನು ಸೇರುವುದು ಮತ್ತು ಕಾರ್ಯಕಾರಿ ಮಂಡಳಿ ಸಭೆಯನ್ನು ಕರೆಯುವುದು ಈ ರೀತಿಯಾಗಿ ಸಂಘದ ಸದಸ್ಯರ ಅಭಿವೃದ್ಧಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಗುರಿ ಮತ್ತು ಉದ್ದೇಶಗಳು:

1. ಆರ್ಥಿಕವಾಗಿ ಸ್ವಾವಲಂಬಿತರಾಗುವಂತೆ ಮಾಡುವುದು.
2. ಮಹಿಳಾ ಹಕ್ಕುಗಳ ಬಗ್ಗೆ ಮತ್ತು ಕಾನೂನುಗಳ ಬಗ್ಗೆ ತರಬೇತಿ ನೀಡುವುದು.
3. ಸಾಮಾಜಿಕವಾಗಿ, ಶೈಕ್ಷಣಿಕ, ರಾಜಕೀಯವಾಗಿ ತಿಳುವಳಿಕೆಯನ್ನು ನೀಡಲು ಸಭೆ ಕರೆಯುವುದು.
4. ಸಂಘದ ಮುಖಾಂತರ ಆಡು ಸಾಕಾಣಿಕೆ, ಹೈನುಗಾರಿಕೆಗಳನ್ನು ಅಭಿವೃದ್ಧಿ ಪಡಿಸಲು ಸಹಾಯಧನವನ್ನು ನೀಡುವುದು.
5. ಧಾನ್ಯ ಸಂಗ್ರಹಣೆ ಮತ್ತು ಬೀಜಗಳ ಉತ್ಪಾದನೆಯನ್ನು ಹೆಚ್ಚಿಸುವುದು.
6. ಕಸೂತಿ, ಹೊಲಿಗೆ ಮತ್ತು ಲಂಬಾಣಿ ಜನಾಂಗದವರ ಉಡುಪುಗಳನ್ನು ತಯಾರಿಸುವುದು ಮತ್ತು ತರಬೇತಿ ನೀಡುವುದು.

2. ಸ್ತ್ರೀ ಸಮಗ್ರ ಸಬಲತೆ ಕಾರ್ಯಕ್ರಮಗಳು:

ಈ ಯೋಜನೆ ಕೂಡ ಸ್ವಯಂ ಸೇವಾ ಸಂಸ್ಥೆಯನ್ನು ರಚಿಸುವುದರ ಮೂಲಕ ಅಭಿವೃದ್ಧಿ ಕಾರ್ಯಕ್ರಮಗಳಿಗನುಗುಣವಾಗಿ ರೂಪಿಸಲಾಗಿದೆ. ಮಹಿಳಾ ಸಬಲೀಕರಣ ಮತ್ತು ಮಹಿಳಾ

ಸಶಸ್ತ್ರೀಕರಣವನ್ನು ರೂಪಿಸಲು ಅಗತ್ಯ ಕಾರ್ಯಕ್ರಮಗಳಿಗನುಗುಣವಾಗಿ ರಚಿಸಲಾಯಿತು.

ಈ ಯೋಜನೆಯು ಹಮ್ಮಿಕೊಂಡ ಕಾರ್ಯಕ್ರಮಗಳು:

1. ಭೂಸಾಗುವಳಿ ಮತ್ತು ಕಿರಣಾ ಅಂಗಡಿಗಳನ್ನು ಪ್ರಾರಂಭಿಸುವುದು.
2. ಆಡು ಕುರಿ ಸಾಕಾಣಿಕೆಯನ್ನು ಮಾಡುವುದು.
3. ರಾಶಿ ಮಶಿನ ಮತ್ತು ಜವಾರಿ ಬೀಜಗಳ ಸಂಗ್ರಹಣೆ ಮಾಡುವುದು.
4. ಕಾರ್ಯಭಾರಿ ಸಭೆಯನ್ನು ಎರಡು ತಿಂಗಳಿಗೊಮ್ಮೆ ನಡೆಸುವುದು.
5. ಮಹಿಳಾ ಕಾನೂನು ಮತ್ತು ಹಕ್ಕುಗಳ ಬಗ್ಗೆ ತಿಳುವಳಿಕೆ ನೀಡುವುದು.
6. ಹಕ್ಕುಗಳ ಬಗ್ಗೆ ತರಬೇತಿ ನೀಡುವುದು.
7. ಆಳಂದ ತಾಲೂಕಿನ 12-ಗ್ರಾಮಗಳಲ್ಲಿ ಮಹಿಳಾ ಜೀವನಾಂಶ ಹಕ್ಕುಗಳನ್ನು ಈ ಯೋಜನೆಯ ಮುಖಾಂತರ ಪ್ರಾರಂಭಿಸಲಾಯಿತು.

3. ಆರೋಗ್ಯ ತಪಾಸಣೆ:

ಮಹಿಳೆಯರ ಆರ್ಥಿಕಾಭಿವೃದ್ಧಿಯ ಜೊತೆಗೆ ವೈದ್ಯಕೀಯ ಕಾರ್ಯಕ್ರಮಗಳನ್ನು ರಚಿಸಲಾಯಿತು. ತಾಯಿಯ ಮತ್ತು ಮಗುವಿನ ಆರೋಗ್ಯದ ಬಗ್ಗೆ ತಿಳಿಯಪಡಿಸಲಾಯಿತು. ಬಾಣಂತಿಯ ಆರೈಕ್ಕೆ ಪೌಷ್ಠಿಕ ಆಹಾರದ ಉತ್ಪಾದನೆ ಮಗುವಿನ ಆರೋಗ್ಯದ ಬಗ್ಗೆ ವೈದ್ಯಕೀಯ ತಪಾಸಣೆ ಮಾಡುವುದು ಹಾಗೂ ಸ್ವಚ್ಛ ಮತ್ತು ಶುದ್ಧ ಬಾಣಂತನವನ್ನು ಮಾಡುವುದಕ್ಕಾಗಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ.

ಒಟ್ಟಾರೆಯಾಗಿ ಈ ಸಂಸ್ಥೆಯು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ಅನುಷ್ಠಾನಗೊಂಡ ಯೋಜನೆಗಳ ಸ್ಪಷ್ಟ ಅರಿವು ಫಲಾನುಭವಿಗಳಿಗೆ ಇಲ್ಲವೆಂದು ಕಂಡು ಬರುತ್ತದೆ.

ಸಾಲ ತೆಗೆದುಕೊಳ್ಳುವಲ್ಲಿ ಪುರುಷರ ಪ್ರಾಬಲ್ಯವಿರುವುದು ಕಂಡುಬಂದಿದೆ. ತೆಗೆದುಕೊಂಡ ಸಾಲವನ್ನು ಉತ್ಪಾದನಾ ಚಟುವಟಿಕೆಗೆ ಬಳಸುವ ಬದಲು ಅನುತ್ಪಾದಕ ಚಟುವಟಿಕೆಗಳಿಗೆ ಬಳಸಿರುತ್ತಾರೆ. ಅದಕ್ಕೆ ಸರಿಯಾಗಿ ಸಾಲ ಪಡೆದು ಮರು ಪಾವತಿ ಮಾಡದೇ ಶೂಲವಾಗಿ ಪರಿಣಮಿಸಿದೆ. ಅಂದರೆ ಮರು ಪಾವತಿ ಸರಿಯಾಗಿ ಆಗುತ್ತಿಲ್ಲ. ಮಹಿಳೆಯರಿಗೆ ಎಷ್ಟೊಂದು ಬಾರಿ ವಿಷಯಗಳನ್ನು ಸ್ಪಷ್ಟ ಪಡಿಸಿದ್ದರು ತಮಗೆ ತಿಳಿದಿಲ್ಲ ಎನ್ನುತ್ತಾರೆ. ಇದು ಅವರಿಗೆ ಇರುವ ಒತ್ತಡಗಳನ್ನು ಪ್ರತಿಭಿಂಬಿಸುತ್ತದೆ.

ಮಹಿಳೆಯರು ಸಂಘದಲ್ಲಿ ಸೇರುವುದಕ್ಕಿಂತ ಮುಂಚಿನ ಬದುಕು ಮತ್ತು ಈಗಿನ ಬದುಕಿಗೆ ಹೋಲಿಸಿದಾಗ ಹಲವಾರು ಬದಲಾವಣೆಗಳನ್ನು ಕಂಡಿದ್ದಾರೆ. ಕೆಲವರು ಸಾಲದಿಂದ ಎಮ್ಮೆ ಖರೀದಿ ಮಾಡಿ ಹೈನುಗಾರಿಕೆ ಮಾಡುತ್ತಿದ್ದಾರೆ, ಕಾಯಿಪಲ್ಲೆ ಮಾರಾಟ ಮಾಡುತ್ತಿದ್ದಾರೆ. ಆರ್ಥಿಕತೆಯ ಹಂತದಲ್ಲಿಯೂ ಶೈಕ್ಷಣಿಕ ಮತ್ತು ಆರೋಗ್ಯದ ವಿಷಯಗಳಲ್ಲಿಯೂ ಸಬಲತೆಯ ಹೆಜ್ಜೆಗಳನ್ನು ಹಾಕುತ್ತಿದ್ದಾರೆ. ಹೀಗೆ ಬಿ.ಎಸ್.ಆರ್.ಡಿ.ಎಸ್. ಸಂಸ್ಥೆಯು ಗ್ರಾಮೀಣ ಮಹಿಳೆಯರ ಸಬಲೀಕರಣ ದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿದೆ. ಮುಂಬರುವ ದಿನಗಳಲ್ಲಿ ಲಿಂಗ ತಾರತಮ್ಯ ಇಲ್ಲದ ಸಮಾನತೆಯ ಸಮಾಜದ ಸ್ಥಾಪನೆಗೆ ಬದ್ರ ಅಡಿಪಾಯದ ಉಪಾದಿಯಲ್ಲಿ ಈ ಸಂಸ್ಥೆ ತನ್ನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದರಿಂದ ಅಧ್ಯಯನಕ್ಕೆ ಸೂಕ್ತವೆಂದು ಆಯ್ಕೆಮಾಡಿ ಕೊಳ್ಳಲಾಗಿದೆ"[7].

ಟಿಪ್ಪಣೆಗಳು

1. ಚ.ನ.ಶಂಕರರಾವ 1999 ಭಾರತದಲ್ಲಿ ಸಾಮಾಜಿಕ ಸಮಸ್ಯೆಗಳು ಮತ್ತು ಸಾಮಾಜಿಕ ವಿಘ್ನಟನೆ. ಪುಟ ಸಂಖ್ಯೆ: 50 ಮತ್ತು 55.
2. ಕೆ.ಭೈರಪ್ಪ 2008 "ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿ ಸಮಾಜಶಾಸ್ತ್ರ" ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ. ಪುಟ ಸಂಖ್ಯೆ: 151 ರಿಂದ 156.
3. ರಾಮಚಂದ್ರ ಜೋಷಿ 2006 " ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ. ಪುಟ ಸಂ: 99
4. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ 2006 "ಸ್ತ್ರೀಶಕ್ತಿ ಕೈಪಿಡಿ" 2001
5. ರಾಮಚಂದ್ರ ಜೋಷಿ 2006 "ಸಮಾಜಶಾಸ್ತ್ರಿದ ಮೂಲತತ್ವಗಳು ಮತ್ತು ಸಾಮಾಜಿಕ ಚಿಂತನೆ" ಪುಟ ಸಂಖ್ಯೆ : 100.
6. (ಎ) ಮಹಿಳಾ ಸಮಾಖ್ಯ ಕರ್ನಾಟಕ ರಾಜ್ಯ ಕಛೇರಿ ವಾರ್ಷಿಕ ವರದಿಗಳು – 2005 ರಿಂದ 2008.

   (ಬಿ) ಬೀದರ, ಗುಲಬರ್ಗಾ, ರಾಯಚೂರು ಜಿಲ್ಲಾ ಮಹಿಳಾ ಸಮಾಖ್ಯ ಘಟಕದ ವಾರ್ಷಿಕ ವರದಿಗಳು – 2005 ರಿಂದ 2009.
7. ಬಯಲು ಸೀಮೆ ಗ್ರಾಮೀಣ ಅಭಿವೃದ್ಧಿ ಸಂಸ್ಥೆಯ ವರದಿಗಳು – 2006 ರಿಂದ 2008.

ಅಧ್ಯಾಯ–4

ಗ್ರಾಮೀಣ ಮಹಿಳೆಯ ಸಬಲೀಕರಣ
ಸ್ವ–ಸಹಾಯ ಸಂಘಗಳ ಚರ್ಚೆಯನ್ನಾಧರಿಸಿ

4.1 ಸ್ವ–ಸಹಾಯ ಸಂಘಗಳ ನಿರ್ವಚನ ಹಾಗೂ ಅವುಗಳ ಧ್ಯೇಯೋದ್ದೇಶಗಳು.

4.2 ಅಧ್ಯಯನಕ್ಕೆ ಬಳಸಿದ ಮಾದರಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗಳ ವಿಶ್ಲೇಷಣೆ.

4.3 ಸ್ವ–ಸಹಾಯ ಸಂಘಗಳ ಬಗೆಗಿರುವ ಅರಿವಿನ ವಿಶ್ಲೇಷಣೆ.

4.3.1 ಸ್ವ–ಸಹಾಯ ಸಂಘದ ಗುರಿ ಉದ್ದೇಶಗಳ ಬಗೆಗಿನ ಅರಿವು.

4.3.2 ಸ್ವ–ಸಹಾಯ ಸಂಘದ ನಿರ್ದಿಷ್ಟ ಗುರಿ ಉದ್ದೇಶಗಳ ಬಗೆಗಿನ ಅರಿವು.

4.3.3. ಬ್ಯಾಂಕ್ ವ್ಯವಹಾರದ ಬಗೆಗಿನ ಅರಿವು.

4.3.4 ಬ್ಯಾಂಕ್ ಸಂಪರ್ಕದ ಬಗೆಗಿನ ಅರಿವು.

4.3.5 ಬ್ಯಾಂಕ್ ಸಾಲದ ಬಗೆಗಿನ ಅರಿವು.

ಅಧ್ಯಾಯ-4
ಗ್ರಾಮೀಣ ಮಹಿಳೆಯ ಸಬಲೀಕರಣ
(ಸ್ವ-ಸಹಾಯ ಸಂಘಗಳ ಚರ್ಚೆಯನ್ನಾಧರಿಸಿ)

ಪೀಠಿಕೆ:

ಸಂಶೋಧನಾ ಅಧ್ಯಯನದ ಪ್ರಮುಖ ಅಂಶವಾಗಿರುವ "ಗ್ರಾಮೀಣ ಮಹಿಳೆಯ ಸಬಲೀಕರಣ" ಒಂದು ಸ್ತ್ರೀವಾದ ಅಧ್ಯಯನದಲ್ಲಿ ಮಹಿಳೆಯ ಸಬಲೀಕರಣಕ್ಕೆ ಸ್ವ-ಸಹಾಯ ಸಂಘಗಳು ಅವಶ್ಯಕವಾಗಿದ್ದು ಅವಳ ಬದುಕನ್ನು ಪುನರ ಮೌಲ್ಯೀಕರಣಗೊಳಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸುತ್ತಿವೆ. ಸ್ವ-ಸಹಾಯಗುಂಪುಗಳ ಮೂಲಕ ಮಹಿಳೆಯರು ಸಂಘ ಕಟ್ಟಿಕೊಳ್ಳುವುದು ತಮ್ಮ ಅಭಿವೃದ್ಧಿಯ ಪಥಗಳನ್ನು ಹುಡುಕಿಕೊಳ್ಳುತ್ತಿರುವುದು ಸಂತೋಷದಾಯಕ ವಿಷಯವಾಗಿದೆ. ಆದ್ದರಿಂದ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಪ್ರಮುಖ ವಿಷಯ ವಸ್ತುವಾಗಿರುವ ಈ ಸ್ವ-ಸಹಾಯ ಗುಂಪುಗಳೆಂದರೇನು? ಗುರಿ, ಉದ್ದೇಶಗಳೇನು? ಲಕ್ಷಣ ಗಳೇನು? ಇವುಗಳ ರಚನೆಯ ರೂಪರೇಷಗಳೇನು? ಸ್ವ-ಸಹಾಯ ಗುಂಪಿನ ಸದ್ಯಸರಾಗಿರುವ ಮಹಿಳೆಯರು ನಿಜವಾಗಿಯೂ ಸಾಮಾಜಿಕವಾಗಿ, ಅರ್ಥಿಕವಾಗಿ, ಶೈಕ್ಷಣಿಕವಾಗಿ, ಆರೋಗ್ಯ ದೃಷ್ಟಿಯಲ್ಲಿ ಸಬಲರಾಗಿದ್ದಾರೆಯೇ? ಇಲ್ಲವೇ? ಸಬಲರಾಗುವಲ್ಲಿ ತೊಂದರೆಗಳೇನಾದರೂ ಇವೆಯೇ? ಅವುಗಳಿಗೆ ಪರಿಹಾರ ಹುಡುಕಲು ಸಾಧ್ಯವೇ? ಎಂದು ಈ ಅಧ್ಯಾಯದಲ್ಲಿ ನೋಡುವದಾಗಿದೆ.

ಅಧ್ಯಯನಕ್ಕೆ ಬಳಿಸಿದ ಗ್ರಾಮೀಣ ಮಹಿಳೆಯರ ವ್ಯಕ್ತಿತ್ವ ರೂಪಿಸುವಲ್ಲಿ ಸಾಮಾಜಿಕ, ಆರ್ಥಿಕತೆಗಳ ಪಾತ್ರವೇನು? ಅದರಲ್ಲಿ ಮುಖ್ಯವಾಗಿ ವಯಸ್ಸು, ಜಾತಿ, ಧರ್ಮ, ಮದುವೆಯ ವಯಸ್ಸು ಮತ್ತು ವೈವಾಹಿಕ ಸ್ಥಿತಿಗತಿ, ಶಿಕ್ಷಣ ಉದ್ಯೋಗ, ಆದಾಯದಂತಹ ವಿಷಯಗಳು ಮಹಿಳೆಯ ವ್ಯಕ್ತಿತ್ವ ನಿರೂಪಣೆಯಲ್ಲಿ ಯಾವ ರೀತಿಯಾಗಿ ಪಾತ್ರ ನಿರ್ವಹಿಸಿವೆ ಎಂಬುವುದನ್ನು ಕ್ಷೇತ್ರ ಕಾರ್ಯದಲ್ಲಿ ಪ್ರಶ್ನೆಗಳನ್ನು ಕೇಳಿ ಮಹಿಳೆಯರೊಂದಿಗೆ ಚರ್ಚಿಸಿ ಸಂಗ್ರಹಿಸಿದ ಮಾಹಿತಿಗಳನ್ನು

ಈ ಅಧ್ಯಾಯದಲ್ಲಿ ನೇರವಾಗಿ ದಾಖಲಿಸಲಾಗಿದೆ ಹಾಗೂ ಈ ಮೇಲಿನ ಎಲ್ಲ ವಿಷಯಗಳು ಆಕೆಯ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿವೆ.

ಸ್ವ-ಸಹಾಯ ಸಂಘದ ಧ್ಯೇಯೋ-ಉದ್ದೇಶಗಳನ್ನು ಮಹಿಳೆಯರು ಅರ್ಥ ಮಾಡಿಕೊಂಡಿದ್ದಾರೆಯೇ? ಅಥವಾ ಹೆಸರಿಗೆ ಮಾತ್ರ ಸದಸ್ಯರಾಗಿದ್ದಾರೆಯೇ? ಅಥವಾ ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆಯೇ? ಹಾಗೆ ತಿಳಿದುಕೊಳ್ಳುವುದರಿಂದ ಬದುಕಿನಲ್ಲಿ ಏನಾದರೂ ಬದಲಾವಣೆಗಳು ಬಂದಿವೆಯೇ? ಮುಂಬರುವ ದಿನಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಹಿಳಾ ಸ್ವ-ಸಹಾಯ ಸಂಘಗಳ ರಚನೆಯಾಗಬೇಕೆ? ಹೆಚ್ಚು ಹೆಚ್ಚು ಮಹಿಳೆಯರು ಸಂಘದಲ್ಲಿ ಸೇರಬೇಕೆ? ಹಾಗೂ ಮಹಿಳೆಯರು ಬ್ಯಾಂಕಿನ ವ್ಯವಹಾರಗಳಾದ ಉಳಿತಾಯ, ಸಾಲ, ಸಂಪರ್ಕ, ಮರುಪಾವತಿ ಮುಂತಾದ ವಿಷಯಗಳ ಬಗ್ಗೆ ಅರಿವನ್ನು ಹೊಂದಿದ್ದಾರೆಯೇ? ಎಂದು ನೋಡುವುದು ಮಹಿಳಾ ಸಬಲೀಕರಣದಲ್ಲಿ ಈ ಎಲ್ಲಾ ಪ್ರಕ್ರಿಯೆಗಳು ಪೂರಕವಾಗಿವೆಯೇ? ಎಂದು ಈ ಅಧ್ಯಾಯದಲ್ಲಿ ನೋಡಲಾಗಿದೆ.

4.1 ಸ್ವ-ಸಹಾಯ ಸಂಘಗಳ ನಿರ್ವಚನ ಮತ್ತು ಧ್ಯೇಯೋದ್ದೇಶಗಳು:

"The Credit for initiating a Self-Help Group movement should go to Mohammed Yunus who is properly known as the father of Micro-Credit System. Mohammed Yunus experimented with research project in Bangaladesh in 1979 and come out with idea of Micro-Credit that resulted in the establishment of Grameen Bank."[1]

ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಭಾರತ ಸರ್ಕಾರವು ಗ್ರಾಮೀಣ ಪ್ರದೇಶದಲ್ಲಿ ಎರಡು ಬೃಹತ ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿತು.

1. ಸ್ವಯಂ ಉದ್ಯೋಗ ಯೋಜನೆ.
2. ಸ್ವ-ಸಹಾಯ ಗುಂಪುಗಳ ಸ್ಥಾಪನೆ.

ಸ್ವ-ಸಹಾಯ ಸಂಘದ ಪರಿಕಲ್ಪನೆ ಮೂಡಿದ್ದು ಮೊದಲ ಬಾರಿಗೆ ಬಾಂಗ್ಲಾದೇಶದಲ್ಲಿ ಅವುಗಳ ಅನುಷ್ಠಾನದಿಂದ ಮತ್ತು ಮಹೀಳೆಯರ ಅಭಿವೃದ್ಧಿಗೆ ಪೂರಕವಾಗಿ ಭಾರತ ದೇಶದಲ್ಲಿಯೂ ಸಹ ಸ್ವ-ಸಹಾಯ ಸಂಘಗಳ ವತಿಯಿಂದ ಮಹಿಳೆಯರ ಅಭಿವೃದ್ಧಿ ಸಾಧಿಸಲು ಪೂರ್ವ ಸಿದ್ಧತೆಗಳನ್ನು ಮಾಡಲಾಯಿತು. ಆಂಧ್ರ ಮತ್ತು ಕರ್ನಾಟಕ ರಾಜ್ಯಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ಮತ್ತು ಪುರುಷರ ಸ್ವ-ಸಹಾಯ ಸಂಘಗಳನ್ನು ರಚಿಸುವ ಕೆಲಸ ಕೈಗೆತ್ತಿಕೊಂಡಿದ್ದವು. ಬರುಬರುತ್ತಾ ಸರ್ಕಾರಿ ಸಂಸ್ಥೆಗಳು, ಸ್ವಯಂ ಸೇವಾಸಂಸ್ಥೆಗಳು, ಬ್ಯಾಂಕುಗಳು, ಮಹಿಳಾ ಅಭಿವೃದ್ಧಿಗಾಗಿ ಸ್ವ-ಸಹಾಯ ಸಂಘಗಳ ರಚನೆ ಅತಿಅವಶ್ಯಕವೆಂದು ಪ್ರೋತ್ಸಾಹ ನೀಡಿರುವುದು ಕಂಡುಬರುತ್ತದೆ.

ಸ್ವ-ಸಹಾಯ ಸಂಘದ ಅರ್ಥ ಮತ್ತು ವಾಖ್ಯೆ:

ಪ್ರಾಯೋಗಿಕ ಅಧ್ಯಯನದ ಮೂಲಕ ಅರಿತುಕೊಂಡಿರುವುದೇನೆಂದರೆ ಸ್ವ-ಸಹಾಯ ಸಂಘಗಳಿಗೆ ಯಾವುದೇ ನಿರ್ದಿಷ್ಟವಾದ ಸಂಕ್ಷಿಪ್ತವಾದ ವ್ಯಾಖ್ಯೆ ಅಥವಾ ಅರ್ಥವಿವರಣೆ ಇಲ್ಲ. ಜನ ಸಾಮಾನ್ಯರ ತಿಳುವಳಿಕೆಯಂತೆ ಇದರ ಅರ್ಥವಿವರಣೆಯನ್ನು ಹಲವು ಬಗೆಯಲ್ಲಿ ಅರ್ಥಮಾಡಿಕೊಳ್ಳಬಹುದು.

ಸ್ವ-ಸಹಾಯ ಸಂಘ ಎಂದರೇನು?

ನಬಾರ್ಡ - ಉಲ್ಲೇಖಿಸಿದಂತೆ "ಸ್ವ-ಇಚ್ಛೆಯಿಂದ ಸಮಾನ ಅಸಕ್ತಿಯಿಂದ ನಿರ್ಧಿಷ್ಟವಾದ ಗುರಿ ಮತ್ತು ಉದ್ದೇಶಗಳ ಸಾಧನೆಯ ಜೊತೆಗೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಕಾನೂನು ಕಟ್ಟಳೆಗಳಿಲ್ಲದೆ ಸಕ್ರಿಯವಾಗಿ ವ್ಯವಸ್ಥಿತ ರೀತಿಯಲ್ಲಿ ಶ್ರಮಿಸುವ 15 ರಿಂದ 20 ಜನರ ಗುಂಪಿಗೆ ಸ್ವಸಾಹಾಯ ಸಂಘವೆಂದು ಕರೆಯುವರು"[2]

ಕರಮಕರ.ಕೆ.ಜಿ. ರವರ ಅಭಿಪ್ರಾಯದಂತೆ 1999 - ಸಮಾನ ಅಸಕ್ತಿಯಿರುವ 15-20 ಜನರು ತಮ್ಮ ಅಭಿವೃದ್ಧಿಗಾಗಿ ಒಂದು ನಿರ್ಧಿಷ್ಟ ಸ್ಥಳದಲ್ಲಿ ಒಂದು ನಿರ್ಧಿಷ್ಟ ಸಮಯಕ್ಕೆ ಸೇರಿ ಸಮಸ್ಯೆಗಳನ್ನು ಸಹಭಾಗಿತ್ವದಲ್ಲಿ ಚರ್ಚಿಸಿ ಸರಿಯಾದ ತೀರ್ಮಾನಗಳ ಮೂಲಕ ತಮ್ಮದೆಯಾದ ಸ್ವಂತಬಂಡವಾಳ ಹೂಡಿ ಪರಸ್ಪರ ಸ್ವ-ಸಹಾಯ ಮಾಡಿಕೊಳ್ಳುವ ಗುಂಪನ್ನು ಸ್ವಸಾಹಾಯ ಗುಂಪು ಎಂದು ಕರೆಯುತ್ತಾರೆ".[3]

ಸ್ವ-ಸಹಾಯ ಗುಂಪಿನ ಸ್ವರೂಪ ಮತ್ತು ವ್ಯಾಪ್ತಿ:

ಸ್ವಸಾಹಾಯ ಗುಂಪು ಪರಸ್ಪರ ಸಮರ್ಥಿಸಿಕೊಂಡು ಸಹಾಯ ಮಾಡಿಕೊಳ್ಳುವ ಗುಂಪಾಗಿದ್ದು ತನ್ನದೆ ಸ್ವರೂಪ ಮತ್ತು ವ್ಯಾಪ್ತಿಯನ್ನು ಹೊಂದಿದೆ. ಅವು ಈ ಕೆಳಗಿನಂತಿವೆ.

1. ಬಡಕುಟುಂಬದ ಸದಸ್ಯರು.
2. ಸಹಭಾಗಿತ್ವ ಮತ್ತು ರಾಜಕೀಯ ರಹಿತ ಗುಂಪು.
3. ಸ್ವಸಾಹಾಯ ಗುಂಪಿನ ಗಾತ್ರಚಿಕ್ಕದಾಗಿರುತ್ತದೆ.
4. ಸ್ವಸಾಹಾಯ ಮತ್ತು ಪರಸ್ಪರ ಸಹಾಯ.
5. ಸಮಾನ ಹಿತಾಸಕ್ತಿ ಹಾಗೂ ಸಮಾನ ಮನೋಭಾವ.
6. ಸಾಮಾಜಿಕವಾಗಿ ಕೆಲಸಮಾಡುವ ಗುಂಪು.
7. ಸ್ವ-ಇಚ್ಛೆ ಹಾಗೂ ಪರಸ್ಪರ ಇಚ್ಛೆ.
8. ಪ್ರಜಾಪ್ರಭುತ್ವ ನೀತಿ ಮತ್ತು ಪರಸ್ಪರ ಬಾಂಧವ್ಯ.
9. ಸಕ್ರಿಯವಾಗಿ ಭಾಗವಹಿಸುವ ಗುಂಪು.
10. ಪರಸ್ಪರ ಸಂಕಷ್ಟಗಳಲ್ಲಿ ಸ್ವ-ಸಹಾಯ ಹಸ್ತ ನೀಡುವ ಗುಂಪು.

ಸ್ವ-ಸಹಾಯ ಗುಂಪಿನ ಗುಣಲಕ್ಷಣಗಳು:

ಪ್ರತಿಯೊಂದು ಸ್ವ-ಸಹಾಯ ಗುಂಪು ತನ್ನದೆಯಾದ ಗುಣಲಕ್ಷಣಗಳನ್ನು ಹೊಂದಿದ್ದು ಅವು ಗುಂಪಿನ ಶ್ರೇಷ್ಠತೆಯನ್ನು ಪ್ರತಿನಿಧಿಸುತ್ತವೆ. ಅಂಥಹ ಗುಣಲಕ್ಷಣಗಳು ಈ ಕೆಳಗಿನಂತಿವೆ.

1. ಗುಂಪಿನ ಗಾತ್ರವು 15-20 ಸದಸ್ಯರವರಗೆ ಸೀಮಿತವಾಗಿ ಕಾರಣ ಸಭೆಯಲ್ಲಿ ಸಕ್ರಿಯಭಾಗವಹಿಸುವಿಕೆ ಸಮಸ್ಯೆಯ ಚರ್ಚೆ, ಕಾರಣ, ಪರಿಣಾಮ ಪರಿಹಾರ ಗಳನ್ನು ಕಡಿಮೆ ಸಮಯದಲ್ಲಿ ಕಂಡುಕೊಳ್ಳಲು ಸಾದ್ಯವಾಗುವುದು.
2. ಸ್ವ-ಸಹಾಯ ಸಂಘಗಳು ಯಾವುದೆ ರಾಜಕೀಯ ಪಕ್ಷಗಳಿಗೆ ಸೇರಿಕೂಡದೆಂದು ನಿಯಮವಿದೆ.
3. ಸಂಘದಲ್ಲಿ ನಾಯಕತ್ವವೆನ್ನುವುದು ಅಧಿಕಾರವಾಗಿರದೆ ಜವಾಬ್ದಾರಿಯಿಂದ ಕೂಡಿರಬೇಕು.
4. ನಾಯಕತ್ವ ಸಂಕ್ಷಿಪ್ತವಾಗಿರದೆ ಮಾರ್ಗದರ್ಶಕನದಂತಿರಬೇಕು.
5. ಸ್ವ-ಸಹಾಯ ಸಂಘದ ಸಭೆಗಳು ಪ್ರತಿವಾರ ನಿಗದಿಪಡಿಸಿದ ದಿನ ಮತ್ತು ಸಮಯದಲ್ಲಿ ನಡೆಯುತ್ತವೆ.
6. ಸಂಘದಲ್ಲಿ ಯಾವುದೆ ಸಮಸ್ಯೆ ತಲೆದೊರಿದರೆ ಸದಸ್ಯರೆಲ್ಲರು ಸೇರಿ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಾರೆ.
7. ಸಂಘದ ಸದಸ್ಯರಲ್ಲಿ ಜಾತಿ-ಮತ, ಬೇಧ-ಭಾವ, ಮೇಲು-ಕೀಳು ಭಾವನೆ ಇರಬಾರದು.
8. ಪ್ರತಿಯೊಬ್ಬ ಸದಸ್ಯರು ವಾರದ ಸಭೆಯಲ್ಲಿ ಉಳಿತಾಯ ಮಾಡುವುದು ಕನಿಷ್ಟ ಉಳಿತಾಯ ಎಷ್ಟಿರಬೇಕೆಂದು ಗುಂಪು ತೀರ್ಮಾನಿಸುವುದು. ಸದಸ್ಯರಿಗೆ ಹೊರೆ ಯಾಗದಂತೆ ನೋಡಿಕೋಳ್ಳುತ್ತಾರೆ.
9. ತಿಂಗಳಿಗೊಮ್ಮೆಯಾದರೂ ಸಮುದಾಯದ ಕಾರ್ಯಕ್ರಮಗಳನ್ನು/ಸಮಸ್ಯೆಯನ್ನು ತೆಗೆದುಕೊಂಡು ಸದಸ್ಯರೆಲ್ಲರು ಭಾಗವಹಿಸಿ ಗ್ರಾಮದ ಜನರನ್ನು ಭಾಗವಹಿಸುವಂತೆ ಪ್ರೋತ್ಸಾಹಿಸುವುದು. ಉದಾ: ಪೋಲಿಯೋ ಹಾಕಿಸುವ ಕಾರ್ಯಕ್ರಮ, ಗ್ರಾಮ ಸಭೆಯಲ್ಲಿ ನಿರಾಶ್ರಿತ ಮಹಿಳೆಯರ (ಆಶ್ರಯ ಯೋಜನೆ ಮನೆಗಾಗಿ) ಪಟ್ಟಿಯನ್ನು ಸಿದ್ಧಪಡಿಸುವುದು, ನೀರಿನ ಸಮಸ್ಯೆ ಮತ್ತು ವಿದ್ಯುತ್ ಸಮಸ್ಯೆಗಳನ್ನು ಚರ್ಚಿಸುವುದು ಹಾಗೂ ಗ್ರಾಮ ಪಂಚಾಯ್ತಿಯ ಭೇಟಿ ಮತ್ತು ಸೌಲಭ್ಯಗಳನ್ನು ಕುರಿತು ಚರ್ಚೆ.

10. ಗುಂಪು ತನ್ನ ಅನಕ್ಷರಸ್ಥ ಸದಸ್ಯರಿಗೆ ಅಕ್ಷರ ಕಲಿಸಲು ರಾತ್ರಿ ಶಾಲೆಯ ಶಿಕ್ಷಕರ ವ್ಯವಸ್ಥೆಮಾಡುವಂಥದು ಹಾಗೂ ಸಂಘದ ಗ್ರಂಥಾಲಯದ ಉಪಯೋಗ ಬೇರೆಯವರು ಪಡೆದುಕೊಳ್ಳುವಂತೆ ಸಹಕರಿಸುವುದು.

11. ಹಣಕಾಸಿನ ವ್ಯವಹಾರ ಪಾರದರ್ಶಕತೆಯಿಂದ ಕೂಡಿರಬೇಕು.

12. ಸಂಘದ ದಾಖಲಾತಿಗಳನ್ನು ಬರೆದಿಡಬೇಕು. ದಾಖಲಾತಿಯಲ್ಲಿ ಏನಿದೆಯೆಂದು ಪ್ರತಿಯೊಬ್ಬ ಸದಸ್ಯರಿಗೂ ಗೊತ್ತಿರುವಂತೆ ನೋಡಿಕೊಳ್ಳಬೇಕು.

ಈ ಮೇಲಿನ ಲಕ್ಷಣಗಳೆಲ್ಲವನ್ನು ಪರಿಶೀಲಿಸಿದಾಗ ಅವುಗಳಲ್ಲಿ ಅಡಗಿರುವ ಕಾರ್ಯಪ್ರವೃತ್ತಿಯ ಮಾಲ್ಯದಿಂದ ಸ್ವ-ಸಹಾಯ ಗುಂಪಿನ ಸದಸ್ಯರು ಸಂಘವನ್ನು ರಚಿಸಿಕೊಳ್ಳಲು ಮತ್ತು ಪುನಶ್ಚೇತನ ಮಾಡಿಕೊಳ್ಳಲು ಈ ಮೇಲಿನ ಅಂಶಗಳು ತುಂಬಾ ಸಹಕಾರಿಯಾಗಿವೆ.

ಸ್ವ-ಸಹಾಯ ಗುಂಪಿನ ಗುರಿ ಮತ್ತು ಉದ್ದೇಶಗಳು:

ಯಾವುದೇ ಒಂದು ವ್ಯವಸ್ಥೆ ಸೃಷ್ಟಿಯಾಗಿ ಸರಿಯಾಗಿ ಕಾರ್ಯನಿರ್ವಹಿಸಬೇಕಾದರೆ ತನ್ನದೇ ಆದ ಧ್ಯೇಯ ಮತ್ತು ಉದ್ದೇಶಗಳನ್ನು ಹೊಂದಿರುತ್ತದೆ. ಅವು ಈ ಕೆಳಗಿನಂತಿವೆ.

ಗುರಿಗಳು :

1. ಗ್ರಾಮೀಣ ಪರಿಸರದ ಅಭಿವೃದ್ಧಿ.
2. ಗುಂಪಿನ ಸದಸ್ಯರ ಸರ್ವತೋಮುಖ ಅಭಿವೃದ್ಧಿ.
3. ಮಹಿಳೆಯರ ಸರ್ವತೋಮುಖ ಅಭಿವೃದ್ಧಿ.

ಉದ್ದೇಶಗಳು:

1. ಗ್ರಾಮೀಣ ಪ್ರದೇಶದ ಬಡಮಹಿಳೆಯರನ್ನು ಸಂಘಟಿತರಾಗಲು ಅವಕಾಶ ಕಲ್ಪಿಸುವುದು.
2. ಗುಂಪಿನ ಮಹಿಳೆಯರಿಗೆ ಏಕತೆಯ ಭಾವನೆ ಮೂಡಿಸಿ ಹಾಗೂ ಪರಿಜ್ಞಾನ ಬೆಳೆಸುವುದು.
3. ಉಳಿತಾಯದ ಮಹತ್ವ, ಆಸಕ್ತಿ, ಹವ್ಯಾಸವನ್ನು ಮನವರಿಕೆ ಮಾಡುವುದು.
4. ಸಂಘದ ಸದಸ್ಯರಲ್ಲಿ ಐಕ್ಯತೆ ಮತ್ತು ತಿಳುವಳಿಕೆ ಮೂಡಿಸುವುದು.
5. ಸಂಘದ ಸದಸ್ಯರಿಗೆ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ರಾಜಕೀಯ, ಆರೋಗ್ಯ ಮತ್ತು ಲಿಂಗಸೂಕ್ಷ್ಮತೆಯಂತ ವಿಷಯಗಳ ಮಾಹಿತಿ ನೀಡುವುದು.
6. ಸಂಘದ ಸದಸ್ಯರಿಗೆ ಅವರ ಕಸುಬು ಅಥವಾ ಉಪಕಸುಬಿಗನುಗುಣವಾಗಿ ಅವಶ್ಯಕತೆಗೆ ತಕ್ಕಂತೆ ಕೌಶಲ್ಯದ ತರಬೇತಿಗಳನ್ನು ನೀಡುವುದು.

7. ಸಂಘದಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

8. ಸಂಘದ ಅಭಿವೃದ್ಧಿಕಾರ್ಯಕ್ಕಾಗಿ ನಿಧಿಸಂಗ್ರಹಣೆ ವಿವಿಧ ಮೂಲಗಳಿಂದ ಪಡೆಯುವಂತೆ ಸಲಹೆ ನೀಡುವುದು.

9. ವೈಯಕ್ತಿಕ ಪರಿಸರ, ಸಾಮುದಾಯಕ ಪರಿಸರ, ಮತ್ತು ಗ್ರಾಮದ ಪರಿಸರವನ್ನು ಶುಚಿಯಾಗಿಡಲು, ಪ್ರಯತ್ನಸುವುದು.

10. ಸರ್ಕಾರಿ ಇಲಾಖೆಗಳಿಂದ, ಹಣಕಾಸು ಸಂಸ್ಥೆಗಳಿಂದ ಇತರೆ ಮೂಲಗಳಿಂದ ದೊರಕುವ ಸಂಪನ್ಮೂಲಗಳನ್ನು ಪಡೆದು ಸದಸ್ಯರ ಕುಟುಂಬಗಳು ಹಾಗೂ ಗ್ರಾಮದ ಸರ್ವತೋಮುಖ ಅಭಿವೃದ್ಧಿಗಾಗಿ ಕಾರ್ಯಗಳನ್ನು ಕೈಗೊಳ್ಳುವುದು.

11. ಅನಕ್ಷರತೆಯನ್ನು ಹೋಗಲಾಡಿಸುವುದು, ಜನಸಂಖ್ಯಾ ನಿಯಂತ್ರಣಕ್ಕೆ ಒತ್ತುಕೊಡುವುದು, ಮಹಿಳೆ & ಮಕ್ಕಳ ಅಭಿಪೃದ್ಧಿಗೆ ಹೆಚ್ಚಿನ ಒತ್ತು ಕೊಡುವುದು.

12. ಅಂತರ ಕಲಹಗಳನ್ನು ನಿವಾರಿಸುವುದು, ಶೋಷಣೆಯ ವಿರುದ್ಧ ಸಾಮೂಹಿಕ ಹೋರಾಟಗಳನ್ನು ನಡೆಸುವಂಥದ್ದು. ಉದಾ: ವರದಕ್ಷಿಣೆ ಸಮಸ್ಯೆ, ಕುಡಿತದ ಸಮಸ್ಯೆ ಬಗೆಹರಿಸುವುದು.

ಈ ಮೇಲಿನ ಗುರಿ ಉದ್ದೇಶಗಳನ್ನು ನೇರವೇರಿಸುವಲ್ಲಿ ಸ್ವ-ಸಹಾಯ ಗುಂಪಿನ ಸದಸ್ಯರಿಗೆ ಅನೇಕ ಸವಾಲುಗಳು ಎದುರಾಗಿವೆ. ಹೀಗೆ ಇವುಗಳ ಸಫಲತೆಯ ಹಿಂದೆ ಸ್ವ-ಸಹಾಯ ಗುಂಪುಗಳ ಯಶಸ್ಸಿನ ಗುಟ್ಟು ಅಡಗಿದೆ. ಹಾಗೇಯೇ ಇದರಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣದ ವಿವಿಧ ಮುಖಗಳನ್ನು ಅರಿತುಕೊಳ್ಳಲು ಸಾಧ್ಯವಾಗಿದೆಯೆಂಬುದು ಗಮನಾರ್ಹ ವಿಷಯವಾಗಿದೆ.

ಮಹಿಳೆಯರ ಸಫಲತೆ ಮತ್ತು ಅಭಿವೃದ್ಧಿಯ ಆಧಾರದ ಮೇಲೆ ಗುಂಪಿನ ಸದಸ್ಯರಲ್ಲಿಯೋ ಸ್ಪರ್ಧಾತ್ಮಕ ಮನೋಭಾವನೆ, ಸಹಕಾರ, ಸಮನ್ವಯ, ಶೋಷಣೆಯ ವಿರುದ್ಧ ಧ್ವನಿ ಎತ್ತುವಲ್ಲಿ ಮಹಿಳೆಯರ ಶ್ರಮ ಮತ್ತು ಪ್ರಯತ್ನವನ್ನು ಅರಿತು ಕೊಳ್ಳಬಹುದಾಗಿದೆ.

ಸ್ವ-ಸಹಾಯ ಗುಂಪಿನ ಸದಸ್ಯರ ಜವಾಬ್ದಾರಿ:

1. ಸ್ವ-ಇಚ್ಛೆಯಿಂದ ಗುಂಪಿಗೆ ಸದಸ್ಯರಾಗಬೇಕು.
2. ಸರಿಯಾದ ಸಮಯಕ್ಕೆ ನಿದಗಿಪಡಿಸಿದ ಸ್ಥಳದಲ್ಲಿ ಸಂಘಸಭೆಗೆ ಹಾಜರಾಗುವುದು.
3. ಅಧ್ಯಕ್ಷ ಕಾರ್ಯದರ್ಶಿಯನ್ನೊಳಗೊಂಡು ಎಲ್ಲ ಸದಸ್ಯರಿಗೆ ಗೌರವನೀಡುವುದು.
4. ತಪ್ಪದೆ ಗುಂಪು ತೀರ್ಮಾನಿಸಿದಂತೆ ಉಳಿತಾಯ ಮಾಡುವುದು.
5. ನೀತಿ ನಿಯಮಗಳ ಪಾಲನೆ ಮಾಡುವುದು.
6. ಸಭೆಯ ಚರ್ಚೆಯಲ್ಲಿ ಭಾಗವಹಿಸುವುದು.

7. ಆಗು-ಹೋಗುಗಳ ಬಗ್ಗೆ ಚಿಂತಿಸುವುದು,
8. ಸಂಘದ ಸಭೆಯಲ್ಲಿಯೇ ಕೊಡು-ತೆಗೆದುಕೊಳ್ಳುವ ಹಣಕಾಸಿನ ವ್ಯವಹಾರವನ್ನು ಪಾರದರ್ಶಕತೆಯಿಂದ ನಡೆಯಿಸುವದು.
9. ಸ್ವಾರ್ಥವನ್ನು ಹತ್ತಿಡುವುದು ಸರದಿಪ್ರಕಾರ ಬ್ಯಾಂಕಿಗೆ ಹೋಗಿ ಬರುವುದು.
10. ಮಾದರಿ ವ್ಯಕ್ತಿಯಾಗಿರುವುದು.

ಬ್ಯಾಂಕ ಸಂಪರ್ಕ ಮತ್ತು ಗುಂಪಿನ ಸದಸ್ಯರಿಗೆ ಆಗುವ ಪ್ರಯೋಜನೆಗಳು:

ಸಾಮಾನ್ಯವಾಗಿ ಸ್ವ-ಸಹಾಯ ಗುಂಪುಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರಬೇಕು, ಸಭೆಯಲ್ಲಿ ಉಳಿತಾಯ. ಆಂತರಿಕ ಸಾಲ ನಿರ್ವಹಣೆಯನ್ನು ಯಶಸ್ವಿಯಾಗಿ ಮಾಡುತ್ತಿರಬೇಕು. ಸಭೆಯ ನಿರ್ಣಯಗಳನ್ನು ತೀರ್ಮಾನ ಪುಸ್ತಕದಲ್ಲಿ ಬರೆದು ಸಹಿ ಹಾಕುತ್ತಿರಬೇಕು. ಸರಿಯಾದ ದಾಖಲೆ ಮತ್ತು ಲೆಕ್ಕಪತ್ರಗಳ ಇಟ್ಟಿರಬೇಕು ಹಾಗೂ ವರದಿಯನ್ನು ಸದಸ್ಯರೆಲ್ಲರ ಮುಂದೆ ಓದಿ ತೋರಿಸಬೇಕು.

ಸ್ವ-ಸಹಾಯ ಸಂಘದ ಗುರಿ ಉದ್ದೇಶವನ್ನು ಅರ್ಥಮಾಡಿಕೊಂಡಿರಬೇಕು. ಇದೆಲ್ಲ ಸರಿಯಿದ್ದರೆ ಮಾತ್ರ ಬ್ಯಾಂಕ ಅಧಿಕಾರಿಗಳು ಸಂಘಕ್ಕೆ ಭೇಟಿ ನೀಡಿ ಪರಿಶೀಲಿಸಿ ವಿಶ್ವಾಸದಿಂದ ಸಂಘಕ್ಕೆ ಬ್ಯಾಂಕ್ ಸಂಪರ್ಕ ಕಲ್ಪಿಸುತ್ತಾರೆ. ಅಂದರೆ ಸಾಲದ ಅರ್ಜಿಯನ್ನು ತುಂಬಿಸಿ ನೀತಿ ನಿಯಮಗಳಿಗನುಸರವಾಗಿ ಇದ್ದರೆ ಸಾಲ ಮಂಜೂರು ಮಾಡುತ್ತಾರೆ.

ಸದಸ್ಯರಿಗೆ ಆಗುವ ಪ್ರಯೋಜನಗಳೆಂದರೆ:

1. ಆದಾಯ ಮತ್ತು ಆದಾಯೋತ್ಪನ್ನ ಕಾರ್ಯಕ್ರಮಗಳಿಗೆ ಹೆಚ್ಚಿನ ಸಾಲ ಸೌಲಭ್ಯ ಸಿಗುತ್ತದೆ. ವಿಚ್ಛೇದಿತ ಬಡ್ಡಿದರದಲ್ಲಿ.
2. ಯೋಜನೆಯ ಹೈನುಗಾರಿಕೆ ಸಣ್ಣ ವ್ಯಾಪಾರ, ಕೌಶಲ್ಯ ಮತ್ತು ತಂತ್ರಜ್ಞಾನದ ಬಗ್ಗೆ ಮಾರು ಕಟ್ಟೆಯ ಬಗ್ಗೆ ಸಣ್ಣ ಪುಟ್ಟ ವ್ಯಾಪಾರ ಮಾಡಲು ತರಬೇತಿ ಸಿಗುತ್ತದೆ.
3. ಸ್ವ ಅಭಿವೃದ್ಧಿ ಮತ್ತು ಗ್ರಾಮಾಭಿವೃದ್ಧಿಯಲ್ಲಿ ಸಹಕಾರಿಯಾಗಿದೆ.
4. ಮಹಿಳಾ ಸಬಲೀಕರಣ ಪ್ರಕ್ರಿಯೆ ದಿನದಿಂದ ದಿನಕ್ಕೆ ಪುರುಷ ಪ್ರಧಾನ ವ್ಯವಸ್ಥೆ ಮಧ್ಯೆ ಅನೇಕ ಏಳು-ಬೀಳುಗಳ ನಡುವೆಯೂ ಸಾಗುತ್ತಿರುವುದನ್ನು ಕಾಣಬಹು ದಾಗಿದೆ.
5. ಹೆಚ್ಚಿನ ಬಡ್ಡಿದರದಿಂದ ಸಾಲಪಡೆಯುವದು ತಪ್ಪಿದೆ.
6. ಊರಿನಲ್ಲಿದ್ದ ಹಣವಂತರು ಮತ್ತು ದಲ್ಲಾಳಿಗಳಿಂದ ಹಣ ಪಡೆಯುವುದು ತಪ್ಪಿದೆ.

7. ಸ್ವ-ಸಹಾಯ ಸಂಘದಿಂದ ಬ್ಯಾಂಕ್ ವ್ಯವಹಾರದ ಬಗ್ಗೆ ಮಾಹಿತಿ ಸಿಕ್ಕಿದೆ. ಆದರೆ ಸಂಪೂರ್ಣ ಮಾಹಿತಿ ಸಿಕ್ಕಿಲ್ಲ.

8. ಮಹಿಳೆಯರು ಸಂಘಟಿತರಾಗಿ ತಮ್ಮ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಪಡೆಯುವಲ್ಲಿ ಪ್ರಯತ್ನಸುತ್ತಿದ್ದಾರೆ.

ಸ್ವ-ಸಹಾಯ ಗುಂಪಿನ ರೂಪರೇಷಗಳೆಲ್ಲವನ್ನು ನೋಡಿದಾಗ ಗ್ರಾಮೀಣ ಮಹಿಳೆಯರು ಮೂಢನಂಬಿಕೆ ಮತ್ತು ಸಾಂಪ್ರದಾಯಕತೆಯಿಂದ ಹೊರಬಂದು ಸಂಘ ಕಟ್ಟಿಕೊಂಡು ಸಂಘಟಿತರಾಗಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯಕರ, ಲಿಂಗ ತಾರತಮ್ಯಕ್ಕೆ ಸೇರಿದಂತೆ ಅರಿವನ್ನು ಪಡೆದು ಸಬಲತೆಯ ಹೆಜ್ಜೆಗಳನ್ನಿಡುತ್ತಿರುವುದು ಅತ್ಯಂತ ಸಂತೋಷದ ವಿಷಯ. ಹಾಗೆ ಎಂದಾಕ್ಷಣ ಮಹಿಳೆಯರು ಸಬಲತೆಯ ತುಟ್ಟತುದಿಯಲ್ಲಿ ಇದ್ದಾರೆಂದು ಅರ್ಥವಲ್ಲ. ಪ್ರತಿಯೊಂದು ಹೆಜ್ಜೆಗಳಲ್ಲಿಯೂ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ, ಸಮಸ್ಯೆಗಳಲ್ಲಿ ಸಿಲುಕಿಕೊಂಡಿದ್ದಾರೆ, ಅಲ್ಲಲ್ಲಿ ಪರಿಹಾರ ಕಂಡುಕೊಳ್ಳುತ್ತಿದ್ದಾರೆ, ಕೆಲವೊಂದಕ್ಕೆ ಪರಿಹಾರವೆ ಸಿಗದೆ ಪರದಾಡುತ್ತಿದ್ದಾರೆ. ಆದರೂ ಅಂತಿಮವಾಗಿ ಸ್ವ-ಸಹಾಯ ಸಂಘದಿಂದ ಮಹಿಳೆ ಸಬಲಳಾಗುವ ಸಾಧ್ಯತೆಗಳಿವೆಯೆಂದು ಮತ್ತು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಮುಂದೊಂದು ದಿನ ಮಹಿಳೆ ಸಂಪೂರ್ಣವಾಗಿ ಜಾಗೃತಳಾಗಿ ಸಬಲೀಕರಣ ಹೊಂದುತ್ತಾಳೆ ಎನ್ನುವ ಆಶೆಯಿಂದಲೇ ಮೇಲಿನ ವಿಷಯಗಳನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

ಸ್ವ-ಸಹಾಯ ಸಂಘದ ಮಹಿಳೆಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕ ಮತ್ತು ಆರ್ಥಿಕತೆಗಳ ಪಾತ್ರವನ್ನು ಕುರಿತು ಮುಂದಿನ ಅಧ್ಯಾಯದಲ್ಲಿ ಚರ್ಚಿಸಲಾಗಿದೆ.

4.2 ಅಧ್ಯಯನಕ್ಕೆ ಬಳಸಿದ ಮಾದರಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳ ವಿಶ್ಲೇಷಣೆ:

ಪ್ರತಿಯೊಬ್ಬ ವ್ಯಕ್ತಿಯ ಪಾತ್ರ ಮತ್ತು ಮಹತ್ವವನ್ನು ಅವರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ ಪ್ರತಿಬಿಂಬಿಸುತ್ತದೆ. ಅಷ್ಟೇ ಅಲ್ಲ, ನಾವು ಅಧ್ಯಯನಕ್ಕೆ ತೆಗೆದುಕೊಂಡ ಗ್ರಾಮೀಣ ಮಹಿಳೆಯರ ಮಾದರಿಗಳು ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿವೆ. ಅಧ್ಯಯನಕ್ಕೆ ಒಳಗಾದ ಗ್ರಾಮೀಣ ಮಹಿಳೆಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕತೆ ಮತ್ತು ಆರ್ಥಿಕತೆಗಳ ಪಾತ್ರ ಅತೀ ಮುಖ್ಯವಾಗಿದೆ ಹಾಗೂ ಅತೀ ಅವಶ್ಯಕವಾಗಿದೆ.

ವಯಸ್ಸು: ಗ್ರಾಮೀಣ ಮಹಿಳೆ ವಯಸ್ಸಿನ ಬಗ್ಗೆ ಸಾಮಾಜಿಕ ವ್ಯವಸ್ಥೆಯು ತನ್ನದೇ ಆದ ಮೂಲಭೂತ ಪರಿಕಲ್ಪನೆಯನ್ನು ಹೊಂದಿದೆ. ಬಾಲ್ಯದಲ್ಲಿ ಹೆಣ್ಣು ತಂದೆ-ತಾಯಿಯ ಅಧೀನದಲ್ಲಿ ಬಾಳಬೇಕು. ಮದುವೆ ಆದ ಮೇಲೆ ಗಂಡನ ಆಶ್ರಯದಲ್ಲಿ ಬಾಳಬೇಕು. ಮುಪ್ಪಿನಲ್ಲಿ ಮಕ್ಕಳ ಆಶ್ರಯದಲ್ಲಿ ಬಾಳಬೇಕೆಂದಿದೆ ಹಾಗೂ ಹೆಣ್ಣು ಮಗಳು ವಯಸ್ಸಿಗೆ ಬರುವ ಮುಂಚೆಯೇ ತಂದೆ-

ತಾಯಿಯವರು ತಮ್ಮ ಜವಾಬ್ದಾರಿಯನ್ನು ಕಳೆದುಕೊಳ್ಳಲು ಬಾಲ್ಯ ವಿವಾಹ ಮಾಡಲು ಹಿಂದೆ-ಮುಂದೆ ನೋಡುವುದಿಲ್ಲ.

ಸಾಮಾಜಿಕ, ಆರ್ಥಿಕ, ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯಗಳು ವ್ಯಕ್ತಿಯ ವಯಸ್ಸಿನೊಂದಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿಯಾದರೂ ತಳಕು ಹಾಕಿಕೊಂಡಿವೆ. ಯುವ ಜನಾಂಗಕ್ಕೆ ಸೇರಿದವರು ಹೊಸತನ್ನು ಅಥವಾ ಆಧುನಿಕತೆಯನ್ನು ಅಳವಡಿಸಿಕೊಳ್ಳುವಲ್ಲಿ ಹಿರಿಯರಿಗಿಂತ ಮುಂದಾಗಿರುತ್ತಾರೆ ಎಂಬುವುದರಲ್ಲಿ ಸಂದೇಹವಿಲ್ಲ.

ಕೋಷ್ಟಕ-4.2.1

ಮಹಿಳೆಯರ ವಯಸ್ಸಿನ ವಿವರ

ಕ್ರ.ಸಂ	ವಯಸ್ಸು	ಸಂಖ್ಯೆ	ಶೇ%
1.	ಹರೆಯದವರು (15–25)	22	7
2.	ಯುವ ಜನತೆ (26–35	131	44
3.	ಮಧ್ಯ ವಯಸ್ಕರು (36–45)	118	39
4.	ಹಿರಿಯರು (46–55)	29	10
ಒಟ್ಟು		**300**	**100**

ಈ ಮೇಲಿನ ಕೋಷ್ಟಕದಲ್ಲಿ ನೀಡಲಾಗಿರುವ ದತ್ತಾಂಶವು ಯುವಜನರೇ ಹೆಚ್ಚಿರುವುದನ್ನು ಎತ್ತಿ ತೋರುತ್ತದೆ. ಒಟ್ಟು ಮಾದರಿಯಲ್ಲಿ ಅವರು ಶೇ.44 ರಷ್ಟು ಜನರನ್ನು ಪ್ರತಿನಿಧಿಸುತ್ತಾರೆ. ಶೇ.39 ರಷ್ಟು ಜನರು ಮಧ್ಯವಯಸ್ಕರು. ಅಂದರೆ 36 ರಿಂದ 45ರ ವಯೋಮಾನದಲ್ಲಿರುವ ಜನರನ್ನು ಪ್ರತಿನಿಧಿಸುವಂಥವರು. ಇವರಿಬ್ಬರನ್ನೂ ಯುವಜನಾಂಗ ಮತ್ತು ವಯಸ್ಕ ಜನಾಂಗವೆಂದು ವಿಂಗಡಿಸಿದಾಗ ಈ ಫಲಿತಾಂಶ ನಮ್ಮ ಮುಂದಿದೆ. ಆದರೆ ವಿಷಾಲವಾದ ಅರ್ಥದಲ್ಲಿ ಗಮನಿಸಿದಾಗ ಒಟ್ಟಾರೆ ಯುವ ವಯಸ್ಕರು ಶೇ. 83ರಷ್ಟು ಜನರನ್ನು ಪ್ರತಿನಿಧಿಸುತ್ತಾರೆ. ಶೇ.7ರಷ್ಟು ಹಾಗೂ 10 ರಷ್ಟು ಮಾದರಿಯ ಕನಿಷ್ಠ ವಯಸ್ಕರಾದ ಹದಿಹರೆಯದವರನ್ನು ಹಾಗೂ ಹಿರಿಯ ವಯಸ್ಕರಾದ ವೃದ್ಧರನ್ನೂ ಕ್ರಮವಾಗಿ ಪ್ರತಿನಿಧಿಸುತ್ತದೆ. ಇದರರ್ಥ ಈ ಮಾದರಿಯ ಅನುಸಾರವಾಗಿ ಗಮನಿಸಿದರೆ ಸಮಾಜದಲ್ಲಿ ಬದಲಾವಣೆಯನ್ನು ಬಯಸುವ ಮತ್ತು ಅಳವಡಿಸುವ ಜನರ ಸಂಖ್ಯೆ (ಈ ವಯಸ್ಸಿನಲ್ಲಿ ಹೆಚ್ಚು ದುಡಿಯುವ ಶಕ್ತಿ ಇರುತ್ತದೆ) ಹೆಚ್ಚಿದೆಯೆಂದೇ ಹೇಳಬೇಕು. ನೀಡಿರುವ ದತ್ತಾಂಶ ಹಾಗೂ ವಯಸ್ಸು ಅಧ್ಯಯನವನ್ನು ಪೂರಕವಾಗಿ ಬೆಂಬಲಿಸುತ್ತವೆ ಎಂದೇ ಹೇಳಲಾಗುತ್ತದೆ (ಶ್ರೀನಿವಾಸ ದೂಳೆ).

ಜಾತಿ: ಭಾರತೀಯ ಜೀವನದಲ್ಲಿ ಜಾತಿ ಪದ್ಧತಿಯ ಸಾಮಾಜಿಕ ಜೀವನದಲ್ಲಿ ಒಬ್ಬ ವ್ಯಕ್ತಿಯ ಪಾತ್ರ ಹಾಗೂ ಸ್ಥಾನಮಾನವನ್ನು ನಿರ್ಧರಿಸುವ ಪ್ರಮುಖ ಅಂಶವಾಗಿದೆ. ಈ ಹಿಂದೆ ಜನರ ಸಾಮಾಜಿಕ

ಸ್ಥಾನಮಾನ ಅವರ ಪಾತ್ರ ಮತ್ತು ಪ್ರಾಮುಖ್ಯತೆಗಳನ್ನು ನಿರ್ಧರಿಸುವ ಅಳತೆಗೋಲು ಜಾತಿಯಾಗಿತ್ತು. ಸಂಪನ್ಮೂಲಗಳ ಬಳಕೆಗೆ ಉನ್ನತ ಜಾತಿಗೆ ಸೇರಿದವರಿಗೆ ಹೆಚ್ಚಿನ ಅವಕಾಶಗಳಿದ್ದವು. ಜಾತಿಯಾಧಾರದ ಮೇಲೆ ಸಾಮಾಜಿಕ ಅಂತಸ್ತು ಹಾಗೂ ಸ್ಥಾನಮಾನ ನಿರ್ಧರಿಸಲಾಗುತ್ತಿತ್ತು. ಇದೇ ಕಾರಣಕ್ಕೆ ಉನ್ನತ ಜಾತಿಯ ಜನರಿಂದ ಕೆಳ ವರ್ಗದ ಅಥವಾ ಕೀಳು ಜಾತಿಯ ಜನರ ಮೇಲೆ ಶೋಷಣೆಯಾಗುತ್ತಿತ್ತು. ಜಾತಿ ತಾರತಮ್ಯ ಸಮಾಜದಲ್ಲಿ ನಡೆದು ಬಂತು.

ಆದರೆ ಭಾರತ ಸ್ವಾತಂತ್ರ್ಯದ ನಂತರ ಭಾರತೀಯ ಸಂವಿಧಾನವು ಅಸ್ಪ್ರಶ್ಯತೆ ತೊಡೆದು ಹಾಕಿತು ಮತ್ತು ಎಲ್ಲರಿಗೂ ಸಮಬಾಳು ಸಮಾನ ಅವಕಾಶಗಳನ್ನು ನೀಡುವ ಸಮಾನತೆಯ ತತ್ವವನ್ನು ನೀಡಿತು. ಸಾಂಪ್ರದಾಯಿಕ ಕೆಳ ಜಾತಿಯ ಜನರಲ್ಲಿ ತಾರತಮ್ಯ ಮಾಡುವುದು ಈಗ ಕಡಿಮೆ ಆಗಿದೆ. ಮಧ್ಯಮ ಹಾಗೂ ಕೆಳಜಾತಿಯ ಜನರು ಸಹ ಸ್ವಾತಂತ್ರ್ಯವನ್ನು ಅನುಭವಿಸುತ್ತಿದ್ದಾರೆ.

ಗ್ರಾಮೀಣ ವಿಭಾಗದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಪರ ಕಾರ್ಯಕ್ರಮಗಳು ಹೆಚ್ಚಿನ ಅವಕಾಶಗಳನ್ನು ಹುಟ್ಟುಹಾಕಿವೆ. ಶಿಕ್ಷಣ, ರಸ್ತೆ, ಸಂವಹನ, ನೀರು, ವಿದ್ಯುತ್, ಸಾರಿಗೆ ವ್ಯವಸ್ಥೆಯಂಥ ಮೂಲಸೌಲಭ್ಯಗಳನ್ನು ಹೆಚ್ಚಿಸುತ್ತಿವೆ.

ಅದಕ್ಕೆ ತಕ್ಕಂತೆ ಸಾಮಾಜಿಕ ಅಂತಸ್ತುಗಳಲ್ಲಿಯೂ ಹೆಚ್ಚಿನ ಗರಿಷ್ಠ ಬದಲಾವಣೆ ಉಂಟಾಗಿದೆ ಎಂದೇ ಹೇಳಬಹುದು.

ಕೋಷ್ಟಕ–4.2.2.
ಜಾತಿಯ ವಿವರ

ಕ್ರಸಂ	ಜಾತಿ	ಮಾದರಿ	ಶೇ%
1.	ಉನ್ನತ ಜಾತಿ	98	32
2.	ಹಿಂದುಳಿದವರು	141	47
3.	ಪರಿಶಿಷ್ಟ ಜಾತಿ / ಪ.ಪಂಗಡ	61	20
	ಒಟ್ಟು	**300**	**100**

ಈ ಕೋಷ್ಟಕದಲ್ಲಿ ನೀಡಿದ ವಿವರಣೆಯಂತೆ ಸ್ವ–ಸಹಾಯ ಸಂಘದಲ್ಲಿ ಬೇರೆ–ಬೇರೆ ಜಾತಿಗೆ ಸೇರಿದ ಮಹಿಳೆಯರು ಇರುವುದು ಕಂಡು ಬಂದಿದೆ. ಶೇ.32% ಜನ ಮೇಲ್ವರ್ಗಕ್ಕೆ ಸೇರಿದ್ದು ಉಳಿದಂತೆ ಶೇ.20% ಜನರು ಕೆಳವರ್ಗಕ್ಕೆ ಸೇರಿದವರಾಗಿದ್ದಾರೆ.

ಹಿಂದುಳಿದ ವರ್ಗದವರೂ ಮೇಲ್ವರ್ಗದವರೊಂದಿಗೆ ಅಥವಾ ಅವರಿಗಿಂತ ಹೆಚ್ಚಾಗಿಯೇ ಮುಂದೆಬರುತ್ತಿದ್ದಾರೆ ಎಂಬುದು ಸ್ಪಷ್ಟವಾಗಿ ಈ ದತ್ತಾಂಶದಿಂದ ತಿಳಿದು ಬರುತ್ತದೆ. ಮೇಲ್ವರ್ಗದವರೊಂದಿಗೆ ಹೋಲಿಸಿದರೆ ಅದೇ ಕ್ರಮದಲ್ಲಿಯೇ ಗ್ರಾಮೀಣ ವಿಭಾಗದಲ್ಲಿ

ಕೆಳವರ್ಗದರು ಸಹ ಮುಂದುವರೆಯುತ್ತಿದ್ದಾರೆ ಎಂಬುದು ಈ ಅಂಕಿ ಅಂಶಗಳು ಸ್ಪಷ್ಟಪಡಿಸುತ್ತವೆ. ವ್ಯಕ್ತಿಯ ವ್ಯಕ್ತಿತ್ವ ನಿರೂಪಣೆಯಲ್ಲಿ ಜಾತಿಯು ಬಹು ಮುಖ್ಯವಾದ ಪಾತ್ರವನ್ನು ನಿರ್ವಹಿಸಿದೆ.

ಧರ್ಮ: ಮಹಿಳೆಯರ ವಿಷಯವನ್ನು ಅಧ್ಯಾಯನಿಸುವಾಗ ಅವರಸಾಧನೆ. ಗುರಿ, ಜೀವನ ಶೈಲಿಗಳನ್ನು ನಿರ್ಧರಿಸುವ ಪ್ರಮುಖ ಅಂಶವೆಂದರೆ ಜಾತಿಯೊಂದಿಗೆ ಧರ್ಮವೂ ಸೇರಿದೆ. ಎಲ್ಲ ಧರ್ಮಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ರಕ್ಷಿಸಿ ಮಹಿಳೆಯನ್ನು ಕಡೆಗಣಿಸಿವೆ. ಧರ್ಮಗಳು ಮತ್ತು ಪುರುಷ ಪ್ರಧಾನ ವ್ಯವಸ್ಥೆ ಒಂದು ನಾಣ್ಯದ ಎರಡು ಮುಖಗಳಂತೆ ಕಾರ್ಯನಿರ್ವಹಿಸುತ್ತಿವೆ. ಒಂದನ್ನು ಬಿಟ್ಟು ಇನ್ನೊಂದಿಲ್ಲ. ಅವು ಮಹಿಳೆಯರ ಆಧೀನ ಸಂಸ್ಕೃತಿಗೆ ಪೂರಕವಾಗಿಯೇ ಮಾತಾಡುತ್ತವೆ. ಹೀಗಾಗಿ ವ್ಯಕ್ತಿತ್ವ ನಿರ್ಮಾಣದಲ್ಲಿ ಧರ್ಮದ ಪಾತ್ರವು ಇದೆ ಎಂದು ಅರಿತು ಸ್ವ-ಸಹಾಯ ಸಂಘದಲ್ಲಿ ಬೇರೆ-ಬೇರೆ ಧರ್ಮಗಳಿಗೆ ಸೇರಿದ ಮಹಿಳೆಯರು ಇದ್ದು, ಸಂಘದ ಕಾರ್ಯಚಟುವಟಿಕೆಗಳನ್ನು ಐಕ್ಯತೆಯಿಂದ ಮಾಡುತ್ತಿರುವುದು ಕಂಡುಬಂದಿತು.

ಕೋಷ್ಟಕ-4.2.3
ಧರ್ಮದ ವಿವರ

ಕ್ರಸಂ	ಧರ್ಮ	ಮಾದರಿ	ಶೇ%
1.	ಹಿಂದು	266	90
2.	ಮುಸ್ಲಿಂ	16	4
3.	ಕ್ರೈಸ್ತರು	00	6
	ಒಟ್ಟು	**300**	**100**

ಈ ಕೋಷ್ಟಕದಲ್ಲಿಯ ಧರ್ಮದ ವಿವರಣೆಯನ್ನು ನೋಡಿದಾಗ ಹಿಂದೂ ಮಹಿಳೆಯರ ಸಂಖ್ಯೆ ಹೆಚ್ಚಿರುವುದು, ಮುಸ್ಲಿಂ ಮತ್ತು ಕೈಸ್ತರ ಮಹಿಳೆಯರ ಸಂಖ್ಯೆ ಕಡಿಮೆ ಇರುವುದು ಕಂಡುಬಂದಿತು.

ವೈವಾಹಿಕ ಸ್ಥಿತಿ : ಸಾಮಾನ್ಯವಾಗಿ ವಿವಾಹ ಎಂದರೇ ಲೈಂಗಿಕ ಅಪೇಕ್ಷೆಯನ್ನು ಪೂರೈಸಿಕೊಳ್ಳಲು ಸಂತಾನೋತ್ಪತ್ತಿ ಮಾಡಲು ಹಾಗೂ ಕುಟುಂಬದ ಸ್ಥಾಪನೆ ಮಾಡಲು ಸಮಾಜ ಮನ್ನಿತ ಒಪ್ಪಂದವಾಗಿದೆ. ಹಾಗೂ ಭಾರತೀಯ ಸಮಾಜದಲ್ಲಿ ವಿವಾಹವು ಒಂದು ಪವಿತ್ರ ಸಂಬಂಧವಾಗಿದೆ. ವಿವಾಹದ ಸಂಕೇತವಾಗಿ ವಧುವಿಗೆ ತಾಳಿ ಮತ್ತು ಕಾಲುಂಗರುಗಳನ್ನು ಹಾಕಲಾಗುತ್ತದೆ. ಆದರೆ ವರನಿಗೆ ಯಾವುದೇ ಸಂಕೇತಗಳಿಲ್ಲ ಹಾಗೂ ವಿವಾಹವಾಗುವ ಸಮಯದಲ್ಲಿ ವರನ ವಯಸ್ಸು ದೊಡ್ಡದಾಗಿರಬೇಕು, ವಧುವಿನ ವಯಸ್ಸು ಚಿಕ್ಕದಾಗಿರಬೇಕು ಕಾರಣ ಪುರುಷ ತನ್ನ ಅಧಿಕಾರ ದರ್ಪ ಹೆಚ್ಚಿನ ತಿಳುವಳಿಕೆ ಪಡೆದವನೆಂಬ ಭ್ರಮೆಯಿಂದ ತನ್ನ ಸಂಸಾರದ ರಥವನ್ನು ಸಾಗಿಸಿಕೊಂಡು ಹೋಗುತ್ತಾನೆಂಬ ಅಭಿಪ್ರಾಯ ವ್ಯವಸ್ಥೆಯಲ್ಲಿದೆ. ಹೀಗಾಗಿ ಶೇ.99% ವಿವಾಹಗಳಲ್ಲಿ ಗಂಡ ದೊಡ್ಡವನಿದ್ದು, ಹೆಂಡತಿ ಚಿಕ್ಕವಳಾಗಿರುತ್ತಾಳೆ. ಕೆಲವೊಂದು ಸಾರಿ ಇವರಿಬ್ಬರ ನಡುವಿನ ವಯಸ್ಸಿನ

ಅಂತರ 10-20 ವರ್ಷಗಳವರೆಗೆ ಇರುತ್ತದೆ. ಈ ಕಾರಣದಿಂದಲೇ ಗಂಡ ಬೇಗ ತೀರಿಕೊಂಡರೆ ಚಿಕ್ಕ ವಯಸ್ಸಿನಲ್ಲಿಯೇ ವಿಧವೆಯಾಗಿ ಜೀವನ ಪೂರ್ತಿ ಕಳೆಯಬೇಕಾಗುತ್ತದೆ. ವಿದುರನಿಗೆ ಮರು ಮದುವೆಗೆ ಅವಕಾಶವಿದೆ. ವಿಧವೆಗೆ ಮರು ಮದುವೆಗೆ ಅವಕಾಶವಿಲ್ಲ. ಹೀಗಾಗಿ ವಿವಾಹ ಸಂಸ್ಥೆಯು ಮಹಿಳೆಯ ಹಿತಾಸಕ್ತಿಗೆ ವಿರುದ್ಧವಾದ ದಿಕ್ಕಿನಲ್ಲಿ ಕೊಂಡೊಯ್ದು ಬಲವಂತವಾಗಿ ಹೊಂದಾಣಿಕೆ ಮಾಡಿಕೊಳ್ಳುವಂತೆ ಕಲಿಸುತ್ತದೆ. ಉದಾ: ವೈಜ್ಞಾನಿಕವಾಗಿ ನೋಡಿದರೆ ರಕ್ತ ಸಂಬಂಧಿಗಳ ನಡುವೆ ವಿವಾಹ ಮಾಡಬಾರದು ಎಂದಿದೆ. ಆದರೂ ಸೋದರ ಮಾನ, ಸೋದರ ಸೊಸೆಯರ ಮಧ್ಯ ವಿವಾಹಗಳು ಇಂದಿಗೂ ಜರುಗುತ್ತಲಿವೆ.

ವಿವಾಹ ಪುರುಷರು ಹಾಗೂ ಸ್ತ್ರೀಯರ ಫಲವತ್ತತೆಯನ್ನು ಬಿಂಬಿಸುವ ಪ್ರಮುಖ ಅಂಶವಾಗಿದೆ. ಮದುವೆ ಪುರುಷ ಹಾಗೂ ಸ್ತ್ರೀಯರಿಬ್ಬರ ಅಂತಸ್ತು ಹಾಗೂ ಅವರ ಸ್ಥಿತಿಗತಿಯನ್ನೂ ಬಿಂಬಿಸುತ್ತದೆ. ಸಮಾಜದಲ್ಲಿ ವಿವಾಹಿತೆಗೆ ಹೆಚ್ಚಿನ ಮನ್ನಣೆಯಿದೆ ಸಮಾಜದಲ್ಲಿ ಅವಿವಾಹಿತರಿಗೆ ಹೋಲಿಸಿದರೆ ವಿವಾಹಿತರಿಗೆ ಹೆಚ್ಚಿನ ಮನ್ನಣೆಯಿದೆ ಹಾಗೂ ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸುತ್ತಾರೆ. ಅವರು ಹೆಚ್ಚುವರಿ ಹೊಣೆಯನ್ನು ಹೊರುವಲ್ಲಿ, ಜವಾಬ್ದಾರಿಯನ್ನು ನಿಭಾಯಿಸುವಲ್ಲಿ ಮಹತ್ತರವಾದ ಪಾತ್ರವನ್ನು ನಿರ್ವಹಿಸುತ್ತಾರೆ ಹೆಚ್ಚಾಗಿ ಇವರಲ್ಲಿ ನಾಯಕತ್ವ ಗುಣಗಳಿರುತ್ತವೆ.

ಕೋಷ್ಟಕ-4.2.4

ವೈವಾಹಿಕ ಸ್ಥಿತಿಯ ವಿವರ

ಕ್ರಸಂ	ವೈವಾಹಿಕ ಸ್ಥಿತಿ	ಮಾದರಿ	ಶೇ%
1.	ವಿವಾಹಿತರು	285	95
2.	ಅವಿವಾಹಿತರು	15	5
	ಒಟ್ಟು	**300**	**100**

ಈ ಕೋಷ್ಟಕದಲ್ಲಿ ವಿವರಣೆ ನೀಡಿರುವಂತೆ ಮಾದರಿಯ ಬಹುಪಾಲು ಜನರು ವಿವಾಹಿತರು ಎಂಬುದು ಕೋಷ್ಟಕದಲ್ಲಿ ಸ್ಪಷ್ಟವಾಗಿ ಗೋಚರವಾಗುತ್ತದೆ. ಶೇ. 95ರಷ್ಟು ಜನ ವಿವಾಹಿತರಾಗಿದ್ದಾರೆ. ಕೇವಲ 5ರಷ್ಟು ಮಹಿಳೆಯರು ಮಾತ್ರ ಅವಿವಾಹಿತರಾಗಿದ್ದಾರೆ. ಸಾಮಾನ್ಯ ಜವಾಬ್ದಾರಿಯನ್ನು ಹಂಚುವಲ್ಲಿ ವಿವಾಹಿತರ ಪ್ರಮಾಣವೇ ಹೆಚ್ಚು ಎಂದು ತಿಳಿದುಬರುತ್ತದೆ.

ಮದುವೆಯ ವಯಸ್ಸು: ಸಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಯಾವ ವಯಸ್ಸಿಗೆ ಮದುವೆ ಮಾಡುತ್ತಾರೆ ಹಾಗೂ ಈಗಾಗಲೇ ಸಂಘದಲ್ಲಿದ್ದ ಮಹಿಳೆಯರ ಮದುವೆಗಳು ಯಾವ ವಯಸ್ಸಿನಲ್ಲಿ ಆಗಿವೆ ಎಂಬ ಅಂಶದ ಬಗ್ಗೆ ಚರ್ಚಿಸಿ ಅವರಿಂದ ಬಂದಂತಹ ಅಭಿಪ್ರಾಯಗಳನ್ನು ನೇರವಾಗಿಯೇ ದಾಖಲಿಸಲಾಗಿದೆ.

ಕೋಷ್ಟಕ–4.2.5
ಮದುವೆಯ ವಯಸ್ಸಿನ ವಿವರ

ಕ್ರಸಂ	ಮದುವೆಯ ವಯಸ್ಸು	ಮಾದರಿ	ಶೇ%
1.	10–15	10	3
2.	16–20	250	88
3.	21–25	25	9
	ಒಟ್ಟು	**300**	**100**

ಮದುವೆಯ ವಯಸ್ಸಿನ ಬಗೆಗೆ ಮಾಹಿತಿ ಸಂಗ್ರಹಿಸಿದಾಗ ಕಂಡು ಬಂದದ್ದು ಏನೆಂದರೆ 16 ರಿಂದ 20ರ ವಯೋಮಿತಿಯಲ್ಲಿ ಬಹುಸಂಖ್ಯಾತರು ಮದುವೆಯಾದದ್ದು ಕಂಡುಬರುತ್ತದೆ. ಚಿಕ್ಕ ವಯಸ್ಸಿನಲ್ಲಿ ಮದುವೆಯಾದವರು 10 ರಿಂದ 15 ವರ್ಷದ ವಯೋಮಿತಿಗೆ ಸೇರಿದವರು ಕೇವಲ ಶೇ.3 ರಷ್ಟು ಮಾತ್ರ, 21 ರಿಂದ 25ರ ವಯೋಮಿತಿಯಲ್ಲೂ ಶೇ. 9 ರಷ್ಟು ಜನರು ಮದುವೆಯಾದವರಿದ್ದಾರೆ. ತಮ್ಮ ಹೆಣ್ಣು ಮಕ್ಕಳಿಗೆ ದೊಡ್ಡವರಾದ ನಂತರ ಅಂದರೆ 18 ವರ್ಷದ ನಂತರವೇ ಮದುವೆ ಮಾಡುವುದು ಒಳ್ಳೆಯದು ಎಂಬ ಅಭಿಪ್ರಾಯ ಹೊಂದಿದ್ದಾರೆ. ಗ್ರಾಮೀಣ ವಿಭಾಗದಲ್ಲಿ ಸಣ್ಣ ವಯಸ್ಸಿನಲ್ಲಿಯೇ ಮದುವೆ ಮಾಡುವುದು ಗಣನೀಯವಾಗಿ ಕಡಿಮೆಯಾಗಿರುವುದು ಸಬಲೀಕರಣಕ್ಕೆ ಪೂರಕವಾಗಿರುವ ವಿಚಾರವಾಗಿದೆ ಹಾಗೂ ಈ ದತ್ತಾಂಶವು ಮಹಿಳೆಯರ ಮದುವೆಯ ವಯಸ್ಸು ಏರು ಗತಿಯಲ್ಲಿ ಇದೆ ಎಂಬುದನ್ನು ಸ್ಪಷ್ಟ ಪಡಿಸುತ್ತದೆ.

ಶಿಕ್ಷಣ: ಆಧುನಿಕ ಯುಗದಲ್ಲಿ ಶಿಕ್ಷಣವು ಅಭಿವೃದ್ಧಿಯ ಮಾನದಂಡವಾಗಿದೆ. ಸಾಕ್ಷರತೆ ಎಂದರೆ ಬರೆಯುವುದು, ಓದುವುದು ಹಾಗೂ ಅಂಕಿಗಳನ್ನು ಎಣಿಸುವುದಾಗಿದೆ. ಶಿಕ್ಷಣವೆಂದರೆ ಎಲ್ಲ ರೀತಿಯ ವ್ಯವಹಾರ ಜ್ಞಾನವನ್ನು ಹೊಂದುವುದೇ ಆಗಿದೆ. ಆದ್ದರಿಂದ ಸ್ವ–ಸಹಾಯ ಗುಂಪಿನಲ್ಲಿ ಮಹಿಳೆಯರ ಸಾಕ್ಷರತೆಯ ಪ್ರಮಾಣ ಎಷ್ಟಿದೆ ಎನ್ನುವುದು ನೋಡುವುದಾಗಿದೆ. ಶಿಕ್ಷಣವು ಮಹಿಳೆಯ ವ್ಯಕ್ತಿತ್ವ ನಿರ್ಮಾಣದಲ್ಲಿ ಬಹು ಮುಖ್ಯವಾದ ಪಾತ್ರವನ್ನು ವಹಿಸುತ್ತದೆ. ಶಿಕ್ಷಣದಿಂದ ಮಹಿಳೆಯರು ಸ್ವತಂತ್ರವಾಗಿ ಯೋಚಿಸಬಲ್ಲರು. ಅವರ ಆಲೋಚನೆಗಳಿಗೆ ವೈಚಾರಿಕ ನಿಲುವು ದೊರೆಯುತ್ತದೆ. ಮಹಿಳಾ ಸಬಲೀಕರಣದಲ್ಲಿ ಶಿಕ್ಷಣವು ಮಹತ್ವದ ಮೈಲಿಗಲ್ಲಾಗಿದೆ.

ಕೋಷ್ಟಕ–4.2.6
ಮಹಿಳೆಯರ ಶಿಕ್ಷಣದ ವಿವರ

ಕ್ರಸಂ	ಶಿಕ್ಷಣ ವಿವರ	ಮಾದರಿ	ಶೇ%
1.	ಅನಕ್ಷರಸ್ಥರು	171	51
2.	ಅಕ್ಷರಸ್ಥರು	60	20
3.	ಅರೆ ಅಕ್ಷರಸ್ಥರು	35	12
4.	ಶಿಕ್ಷಿತರು	34	11
	ಒಟ್ಟು	**300**	**100**

ಈ ಕೋಷ್ಟಕದಲ್ಲಿ ಶೈಕ್ಷಣಿಕ ಹಿನ್ನೆಲೆಯ ಮಾಹಿತಿ ಧನಾತ್ಮಕವಾಗಿಲ್ಲ. ಆಶಾದಾಯಕವೂ ಆಗಿಲ್ಲ. ಅರ್ಧಕ್ಕಿಂತ ಹೆಚ್ಚು ಜನ ಅನಕ್ಷರಸ್ಥರಾಗಿದ್ದಾರೆ. ಶೇ.57 ರಷ್ಟು ಜನ. ಮಹಿಳಾ ಸಬಲೀಕರಣದಲ್ಲಿ ಶಿಕ್ಷಣ ಮಹಿಳೆಯರ ಪರವಾಗಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಕೇವಲ ಶೇ. 9 ರಷ್ಟು ಜನ ಸಾಕ್ಷರಸ್ಥರಾಗಿದ್ದರೆ ಶೇ. 12 ರಷ್ಟು ಜನ ಅರೆ ಅಕ್ಷರಸ್ಥರಾಗಿದ್ದಾರೆ.

ಶಿಕ್ಷಿತರು ಎಂದು ಹೇಳಬಹುದಾದರೂ ಕೇವಲ ಶೇ.11 ರಷ್ಟು ಮಾತ್ರ ಇದ್ದಾರೆ. ಅದು 10 ನೇ ತರಗತಿಯವರೆಗೆ ಓದಿದವರು. ಶೈಕ್ಷಣಿಕ ಹಿನ್ನೆಲೆಯಿಂದ ನೋಡಿದರೆ ಮಹಿಳೆಯರ ಸಬಲೀಕರಣ ಆಗಬೇಕಿದೆ ಎಂಬುದನ್ನು ಈ ಕೋಷ್ಟಕ ಸ್ಪಷ್ಟಪಡಿಸುತ್ತದೆ.

ಉದ್ಯೋಗದ ವಿವರ: "ಉದ್ಯೋಗಂ ಪುರುಷ ಲಕ್ಷ್ಮಣಂ" ಅಂದರೆ ಪುರುಷರು ಉದ್ಯೋಗ ಮಾಡಬೇಕು ಮಹಿಳೆಯರು ಮನೆಯ ವಾರ್ತೆಗಳನ್ನು ಅಚ್ಚುಕಟ್ಟಾಗಿ, ಜವಾಬ್ದಾರಿಯುತವಾಗಿ ಮಾಡಬೇಕು. ಪುರುಷನ ದುಡಿಮೆ ದುಡಿಮೆಯೆಂದು ಪರಿಗಣಿಸಿ ಆದಾಯ ನೀಡಲಾಗುತ್ತದೆ. ಆದರೆ ಮಹಿಳೆಯ ದುಡಿಮೆಯನ್ನು ಕರ್ತವ್ಯ ಜವಾಬ್ದಾರಿಯೆಂದು ಪರಿಗಣಿಸಿ ಆದಾಯ ನೀಡಲಾಗುವುದಿಲ್ಲ. ಸ್ತ್ರೀ–ಪುರಷರಿಗೆ ನೀಡುವ ಕೂಲಿಯಲ್ಲಿಯೂ ತಾರತಮ್ಯವಿದೆ. ಅಂದರೆ ಮಹಿಳೆಗೆ ಕಡಿಮೆ ಕೂಲಿ ಪುರುಷನಿಗೆ ಹೆಚ್ಚು ಕೂಲಿ ನೀಡಲಾಗುತ್ತದೆ. ಪುರುಷನು ಊಟ, ನಿದ್ದೆಯೊಂದಿಗೆ ಕೂಲಿ ಕೆಲಸಕ್ಕೆ ಹೋಗುತ್ತಾನೆ. ಆದರೆ ಮಹಿಳೆ ಮನೆಯ ಎಲ್ಲ ಕೆಲಸಗಳ ಜೊತೆಗೆ ಕೂಲಿ ಕೆಲಸಕ್ಕೆ ಹೋಗುತ್ತಾಳೆ. ಪುರುಷ ಮನೆ ಕೆಲಸದಲ್ಲಿ ಯಾವುದೇ ಜವಾಬ್ದಾರಿ ತೆಗೆದುಕೊಳ್ಳುವುದಿಲ್ಲ. ಅಂದರೆ ಗ್ರಾಮೀಣ ಸಮಾಜದ ಸ್ತ್ರೀ–ಪುರಷರಲ್ಲಿ ಶ್ರಮವಿಭಜನೆ ಸರಿಯಾಗಿ ಹಂಚಿಕೆಯಾಗಿಲ್ಲವೆಂದೇ ಅರ್ಥವಾಗುತ್ತದೆ.

ಹೀಗಾಗಿ ನಮ್ಮ ಗ್ರಾಮೀಣ ಮಹಿಳೆಯರು ಸ್ವ–ಸಹಾಯ ಸಂಘ ಸೇರಿದ ನಂತರ ಮನೆಯ ಕೆಲಸಗಳೊಂದಿಗೆ ಬೇರೆ ಯಾವ ಉದ್ಯೋಗಳನ್ನು ಮಾಡುತ್ತಿದ್ದಾರೆಂದು ನೋಡುವುದಾಗಿದೆ. ಉದ್ಯೋಗವು ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ಮಹತ್ವದ ಪಾತ್ರ ನಿರ್ವಹಿಸುತ್ತವೆ.

ಉದ್ಯೋಗವು ವೃತ್ತಿ, ಸೇವೆ, ವಾಣಿಜ್ಯ, ವ್ಯವಹಾರ ಮುಂತಾದವುಗಳನ್ನು ತಮ್ಮ ಸಾಮರ್ಥ್ಯ ಕೌಶಲ್ಯಗಳನ್ನು ಬಳಸಿ ಸೇವೆಯ ಮೂಲಕ ಹಣಕಾಸಿನ ವ್ಯವಸ್ಥೆ ಮಾಡಿಕೊಳ್ಳುವುದೇ ಉದ್ಯೋಗವೆನಸಿಕೊಳ್ಳುತ್ತದೆ.

"ವೃತ್ತಿ ಇಲ್ಲಿ ಉದ್ಯೋಗದ ಮೂಲವಾಗಿದೆ. ಹಣ, ಸಂಬಳ ಅಥವಾ ಲಾಭವನ್ನು ಗಳಿಸಬಹುದಾದ ಯಾವುದೇ ವೃತ್ತಿಯನ್ನು ಉದ್ಯೋಗವೆಂದು ಪರಿಗಣಿಸಬಹುದಾಗಿದೆ". ಇದು ಸಾಮಾಜಿಕ ಸ್ಥಾನಮಾನದೊಂದಿಗೆ ಅವರ ಆರ್ಥಿಕತೆಯನ್ನು ಸಂಕೇತಿಸುವುದರಿಂದ ಮಹಿಳಾ ಸಬಲೀಕರಣದ ಪ್ರಮುಖ ಅಂಶವಾಗಿದೆ.

ಗ್ರಾಮೀಣ ಸಮಾಜದಲ್ಲಿ ಉದ್ಯೋಗವನ್ನು ಮಹಿಳೆಯ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿಕೊಂಡು ಮನೆ ವಾರ್ತೆಯೊಂದಿಗೆ ಯಾವ ಉದ್ಯೋಗವನ್ನು ಮಾಡುತ್ತಿದ್ದಾರೆಂದು ನೋಡಲಾಗಿದೆ, ಉದ್ಯೋಗವನ್ನು ಇಲ್ಲಿ ಎರಡು ವಿಭಾಗಗಳಲ್ಲಿ ವಿಂಗಡಿಸಲಾಗಿದೆ. ಅವುಗಳೆಂದರೆ,

1. ಸ್ಥಿರ ಹಾಗೂ ಸತತ ಉದ್ಯೋಗ
2. ಅಸ್ಥಿರ ಹಾಗೂ ಅನಿರ್ದಿಷ್ಟ ಉದ್ಯೋಗ

ಸ್ಥಿರ ಹಾಗೂ ಸತತ ಉದ್ಯೋಗಗಳೆಂದರೆ ಸಂಬಳಕ್ಕೆ ಮಾಡುವ ಕೆಲಸಗಳು ಅಥವಾ ನೌಕರಿಗಳು ಅಂಗಡಿ, ಹೋಟೆಲು ಮುಂತಾದವುಗಳಲ್ಲಿ ದುಡಿಯುವುದನ್ನು ಈ ವಿಭಾಗಕ್ಕೆ ಸೇರಿಸಬಹುದಾಗಿದೆ. ಅವರು ನೀಡುವ ಸೇವೆಗೆ ನಿರ್ದಿಷ್ಟವಾಗಿ ಸಂಬಳ ಸಿಗುತ್ತದೆ.

ಕೃಷಿ ಹಾಗೂ ದಿನಗೂಲಿ ನೌಕರಿಗಳು ಅಸ್ಥಿರ ಹಾಗೂ ಅನಿರ್ದಿಷ್ಟ ವಿಭಾಗಕ್ಕೆ ಸೇರಿದ ಕೆಲಸಗಳಾಗಿವೆ.

ಗ್ರಾಮೀಣ ಮಹಿಳೆಯ ಸಬಲೀಕರಣ ಅವರ ಉದ್ಯೋಗದೊಂದಿಗೆ ಖಂಡಿತವಾಗಿಯೂ ಬೆಸೆದುಕೊಂಡಿದೆ.

ಕೋಷ್ಟಕ–4.2.7
ಮಹಿಳೆಯರ ಉದ್ಯೋಗದ ವಿವರ

ಕ್ರ.ಸಂ	ಉದ್ಯೋಗ	ಮಾದರಿ	ಶೇ%
1.	ಸ್ಥಿರ ಹಾಗೂ ಸತತ	100	33
2.	ಅಸ್ಥಿರ ಹಾಗೂ ಅನಿರ್ದಿಷ್ಟ	150	50
3.	ಗೃಹಿಣಿಯರು	50	17
	ಒಟ್ಟು	**300**	**100**

ಈ ದತ್ತಾಂಶವು ಮಹಿಳಾ ಸಬಲೀಕರಣದಲ್ಲಿ ಉದ್ಯೋಗದ ಪಾತ್ರವನ್ನು ಪ್ರಸ್ತುತಪಡಿಸುತ್ತದೆ. ಮಹಿಳೆಯರಲ್ಲಿ ಶೇ.33 ರಷ್ಟು ಜನ ಸ್ಥಿರ ಹಾಗೂ ಸತತ ಉದ್ಯೋಗಗಳಲ್ಲಿ ನಿರತರಾಗಿದ್ದಾರೆ.

ಹೈನುಗಾರಿಕೆ, ಟೈಲರಿಂಗ್, ಅಂಗಡಿ, ಹೋಟೆಲ ಹಾಗೂ ತರಕಾರಿ ಮಾರುವ ಕೆಲಸ ಮುಂತಾದ ಕ್ಷೇತ್ರಗಳಲ್ಲಿ ದುಡಿಯುವ ಮಹಿಳೆಯರು ಈ ಗುಂಪಿಗೆ ಸೇರಿದವರಾಗಿದ್ದಾರೆ.

ಈ ವಿಭಾಗವು ಸಬಲೀಕರಣದ ಸಂಪನ್ಮೂಲವಾಗುವ ಎಲ್ಲ ಲಕ್ಷಣಗಳನ್ನೂ ಬಿಂಬಿಸುತ್ತದೆ. ಆದರೆ ಶೇ. 50 ರಷ್ಟು ಜನ ಅಸ್ಥಿರ ಹಾಗೂ ಅನಿರ್ದಿಷ್ಟ ಕೆಲಸಗಳಲ್ಲಿ ತೊಡಗಿಸಿಕೊಂಡವರಾಗಿದ್ದಾರೆ. ಅವರು ಕೃಷಿ ಕಾರ್ಮಿಕರಾಗಿದ್ದು ಋತುಮಾನಕ್ಕೆ ಅನುಸಾರವಾಗಿ ದುಡಿಯುವವರಾಗಿದ್ದಾರೆ. ದಿನಗೂಲಿ ನೌಕರರೂ ಇದೇ ಗುಂಪಿಗೆ ಸೇರಿದ್ದಾರೆ. ಶೇ. 50 ರಷ್ಟು ಜನ ಒಂದಲ್ಲ ಒಂದು ಉದ್ಯೋಗಗಳಲ್ಲಿ ತೊಡಗಿಸಿಕೊಂಡು ಸಂಪಾದನೆ ಮಾಡುತ್ತಿರುವುದು ಗಮನೀಯ ಅಂಶವಾಗಿದೆ. ಮಹಿಳಾ ಸಬಲೀಕರಣದಲ್ಲಿ ಇಂಥ ಅನಿರ್ದಿಷ್ಟ ಅಸ್ಥಿರ ಉದ್ಯೋಗಗಳು ಅತೀ ಅವಶ್ಯಕವಾಗಿದ್ದು, ಮಹತ್ವದ ಪಾತ್ರವಹಿಸಿವೆ.

ಆಸಕ್ತಿಕರ ಅಂಶವೆಂದರೆ ಶೇ.17 ರಷ್ಟು ಜನ ಗೃಹಿಣಿಯರಾಗಿದ್ದಾರೆ. ಅವರೆಲ್ಲ ಆರ್ಥಿಕವಾಗಿ ಪುರುಷರ ಮೇಲೆ ಅವಲಂಬಿಸಲೇಬೇಕಾದ ಅನಿವಾರ್ಯ ಇದೆ. ಆದ್ದರಿಂದ ಈ ವಿಭಾಗಕ್ಕೆ ಸೇರಿದವರು ಪರಾವಲಂಬಿಯಾಗಿರುವ ಕಾರಣಕ್ಕೆ ದುರ್ಬಲರಾಗಿರುವಂತೆ ಕಂಡು ಬರುತ್ತದೆ. ಇಲ್ಲಿ ನೀಡಿರುವ ದತ್ತಾಂಶಗಳ ಪ್ರಕಾರ ಔದ್ಯೋಗಿಕ ಸಾಧನೆಯಿಂದ ಸಬಲೀಕರಣ ಇನ್ನೂ ಉನ್ನತಮಟ್ಟದಲ್ಲಿ ಆಗಿಲ್ಲವೆನ್ನಬಹುದು. ಅವರ ಔದ್ಯೋಗಿಕ ಸಾಧನೆಯಿಂದ ಸಬಲೀಕರಣ ತಲುಪಬೇಕಾದ ಗುರಿ ಮುಟ್ಟಿಲ್ಲವೆಂದು ಅಭಿಪ್ರಾಯ ಪಡಬಹುದಾಗಿದೆ.

ಆದಾಯ: ಆದಾಯವೇನೆಂದರೆ ದುಡಿಮೆಗೆ ಸಿಗುವಂತ ಪ್ರತಿಫಲ. ದುಡಿಮೆಗೆ ಎರಡು ವಲಯಗಳಿವೆ ಒಂದು ಅಧಿಕಾರ ವಲಯ ಇನ್ನೊಂದು ಸೇವಾ ವಲಯ ಅಧಿಕಾರ ವಲಯದಲ್ಲಿ ಪುರಷರು ಮಾಡುವ ಕೆಲಸಗಳಿಗೆ ಆದಾಯ ಸಿಗುತ್ತದೆ. ಸೇವಾ ವಲಯದಲ್ಲಿ ಮಹಿಳೆಯು ಮಾಡುವ ಕೆಲಸಗಳಿಗೆ ಆದಾಯ ಸಿಗುವುದಿಲ್ಲ. ಉದಾ: ಒಬ್ಬ ಸ್ತ್ರೀಯು ಮನೆಯಲ್ಲಿ ಅಡುಗೆ ಕೆಲಸ, ಬಟ್ಟೆ ತೊಳಿಯುವುದು, ಇಸ್ತ್ರಿ ಮಾಡುವುದು ಅವಳ ಕರ್ತವ್ಯ ಮತ್ತು ಜವಾಬ್ದಾರಿ ಎಂದು ಹೇಳಲಾಗುತ್ತದೆ. ಆದರೆ ಪುರುಷ ಮನೆಯ ಹೊರಗಡೆ ಈ ಕೆಲಸಗಳನ್ನು ಮಾಡಿದರೆ ಆದಾಯ ನೀಡಲಾಗುತ್ತದೆ.

ಮಹಿಳಾ ಸಬಲೀಕರಣವನ್ನು ಬೆಂಬಲಿಸುವ ಇನ್ನೊಂದು ಪ್ರಮುಖ ಅಂಶವಾದ ಮಹಿಳೆಯರ ಆದಾಯವನ್ನು ವಿಶಾಲವಾದ ಅರ್ಥದಲ್ಲಿ ಗರಿಷ್ಠ ಆದಾಯ, ಮಧ್ಯಮ ಆದಾಯ ಹಾಗೂ ಕನಿಷ್ಠ ಆದಾಯವೆಂದು ವಿಂಗಡಿಸಲಾಗಿದೆ.

1. ಪ್ರತಿ ತಿಂಗಳು 1000–2000 ರೂಪಾಯಿಗಳಷ್ಟು ಗಳಿಸುವವರನ್ನು ಗರಿಷ್ಠ ಆದಾಯದ ಗುಂಪಿನಲ್ಲಿ ಸೇರಿಸಲಾಗಿದೆ.
2. ಪ್ರತಿ ತಿಂಗಳು 500–1000 ರೂಪಾಯಿಗಳಷ್ಟು ಗಳಿಸುವವರನ್ನು ಮಧ್ಯಮ ಗುಂಪಿನ ಅದಾಯದ ಗುಂಪಿನಲ್ಲಿ ಸೇರಿಸಲಾಗಿದೆ.

3. ಪ್ರತಿ ತಿಂಗಳು 500 ಕ್ಕಿಂತ ಕಡಿಮೆ ಗಳಿಸುವವರನ್ನು ಕನಿಷ್ಠ ಆದಾಯದ ಗುಂಪಿನಲ್ಲಿ ಸೇರಿಸಲಾಗಿದೆ.

ಕೋಷ್ಟಕ–4.2.8
ಮಹಿಳಯೆರ ಆದಾಯದ ವಿವರ

ಕ್ರಸಂ	ಆದಾಯ	ಮಾದರಿ	ಶೇ%
1.	ಗರಿಷ್ಟ	88	29
2.	ಮಧ್ಯಮ	112	37
3.	ಕನಿಷ್ಠ	100	34
	ಒಟ್ಟು	**300**	**100**

ಮಾದರಿಯ ಆದಾಯ ಹಂಚಿಕೆಯು ಶೇ. 29 ರಷ್ಟು ಜನ ಗರಿಷ್ಠ ಆದಾಯ ಪಡೆಯುತ್ತಿದ್ದಾರೆ ಎಂಬುದನ್ನು ತೋರಿಸುತ್ತದೆ. ಶೇ. 34 ರಷ್ಟು ಜನರ ಆದಾಯ ಏನೂ ಇಲ್ಲವೆಂದೇ ಹೇಳುವಷ್ಟು ಕಡಿಮೆ ಇದೆ, ಆದರೆ ಶೇ. 37 ರಷ್ಟು ಜನರು ಮಧ್ಯಮ ಆದಾಯವನ್ನು ಗಳಿಸುತ್ತಿದ್ದಾರೆ. ಒಟ್ಟಾರೆಯಾಗಿ ಗಮನಿಸಿದಾಗ ಶೇ. 50 ರಷ್ಟು ಜನರು ಆದಾಯ ಗಳಿಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ ಎಂದು ಹೇಳಬಹುದು.

ಹಣಕಾಸಿನ ಗಳಿಕೆಯ ಸಾಮರ್ಥ್ಯವನ್ನು ಇವರು ಪಡೆದಿದ್ದಾರೆ ಎಂದೇ ಹೇಳಬಹುದು. ಸಂಶೋಧನೆಯ ಈ ಅಧ್ಯಾಯದಲ್ಲಿ ಮಹಿಳೆಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕತೆ ಮತ್ತು ಆರ್ಥಿಕತೆಯ ಪಾತ್ರವನ್ನು ಕುರಿತು ಅಧ್ಯಯನ ಮಾಡಲಾಗಿದೆ. ಆರ್ಥಿಕ ಹಿನ್ನೆಲೆಯು ಮಹಿಳಾ ಸಬಲೀಕರಣವನ್ನು ಬೆಂಬಲಿಸುತ್ತದೆಯೋ ಇಲ್ಲವೇ ಎಂಬುದನ್ನು ಒರೆಗೆ ಹಚ್ಚಲು ವಿವಿಧ ಸ್ತರಗಳನ್ನು ಅಧ್ಯಯನ ಮಾಡಲಾಯಿತು.

ವಯಸ್ಸು: ಅಧ್ಯಯನಕ್ಕೊಳಗಾದ ಮಹಿಳೆಯರು ಯಾವ ವಯಸ್ಸಿನವರು ಎಂದು ಗಮನಿಸಿದಾಗ ಬಹು ಸಂಖ್ಯಾತರು 26 ರಿಂದ 45 ವರ್ಷ ವಯೋಮಿತಿಗೆ ಸೇರಿದವರಾಗಿದ್ದಾರೆ. ಇದರರ್ಥ ಅವರೆಲ್ಲ ಜೀವನದ ಸವಾಲುಗಳನ್ನು ಎದುರಿಸುವಲ್ಲಿ ಸಮರ್ಥರಾಗಿದ್ದಾರೆ ಎಂಬುದನ್ನು ಸಾಬೀತು ಪಡಿಸಿದಂತಾಗಿದೆ.

ಬೇರೆ ಬೇರೆ ಜಾತಿ–ಧರ್ಮದ ಮಹಿಳೆಯರು ಸಂಘದಲ್ಲಿ ಒಂದೆಡೆ ಸೇರಿ ಸಂಘಟನಾ ಚಟುವಟಿಕೆಗಳನ್ನು ಮತ್ತು ವೈಯುಕ್ತಿಕ ಚಟುವಟಿಕೆಗಳನ್ನು ನಿರ್ವಹಿಸುತ್ತಿದ್ದಾರೆ.

ಮದುವೆಯ ಅಂತಸ್ತು: ಶೇ.95 ರಷ್ಟು ಮಾದರಿಗಳು ವಿವಾಹಿತ ಗುಂಪಿಗೆ ಸೇರಿದವರಾಗಿದ್ದು, ಕೇವಲ ಶೇ.5 ರಷ್ಟು ಮಾತ್ರ ಅವಿವಾಹಿತ ಗುಂಪಿಗೆ ಸೇರಿದವರಾಗಿದ್ದಾರೆ.

ಮದುವೆ ಯಾವ ವಯಸ್ಸಿನಲ್ಲಿ ಆಗಿದೆ ಮತ್ತು ಹೆಣ್ಣು ಮಕ್ಕಳಿಗೆ ಮದುವೆಗೆ ಸೂಕ್ತ ವಯಸ್ಸು ಯಾವುದು: ಶೇ.285 ರಷ್ಟು ಜನ 16–20 ವರ್ಷದ ವಯೋಮಿತಿಯಲ್ಲಿ ಮದುವೆಯಾದವರಿದ್ದರು. ಶೇ.9 ರಷ್ಟು ಜನ 21–25ರ ನಡುವೆ ಮದುವೆಯಾದವರಿದ್ದರು. ಮತ್ತು ತಮ್ಮ ಹೆಣ್ಣು ಮಕ್ಕಳಿಗೆ ಮದುವೆಗೆ ಸೂಕ್ತ ವಯಸ್ಸು ಯಾವುದು ಎಂದು ಕೇಳಿದಾಗ ದೊಡ್ಡವರಾದ ಮೇಲೆ 18–ವರ್ಷದ ನಂತರ ಮದುವೆ ಮಾಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಇದರರ್ಥ ಮದುವೆಯ ಬಗೆಗೆ ಮೊದಲಿನ ನಂಬಿಕೆಗಳು ಗ್ರಾಮೀಣ ವಿಭಾಗದಲ್ಲಿ ಬದಲಾಗಿವೆ. ಕುಟುಂಬ ಯೋಜನೆ, ವಿವಾಹದ ವಯಸ್ಸಿನ ಬಗೆಗೆ ಜಾಗೃತರಾಗಿದ್ದಾರೆ. ವರದಕ್ಷಣೆಯೂ ಈ ಬದಲಾಗುತ್ತಿರುವ ಯೋಚನೆಗಳಿಗೆ ಮುಖ್ಯ ಅಂಶವಾಗಿದೆ. ವರದಕ್ಷಣೆಯ ಹಿಡುಗಿನಿಂದ ಆಚೆ ಬರಲು ಪ್ರಯತ್ನಿಸುತ್ತಿದ್ದಾರೆ. ತಮ್ಮ ಮಗಳಿಗೆ ವರದಕ್ಷಿಣೆ ಕೊಡುವುದು ಅನಿವಾರ್ಯವಾಗಿದೆ. ಆದರೆ ಮಗನಿಗೆ ವರದಕ್ಷಣೆ ತೆಗೆದುಕೊಳ್ಳಬಾರದೆನ್ನುವ ಯೋಚನೆ ಕೆಲವು ಮಹಿಳೆಯರಲ್ಲಿ ಬಂದಿರುವುದು ಸಂತೋಷದ ವಿಷಯವಾಗಿದೆ.

ಶಿಕ್ಷಣ: ಸಂಗ್ರಹಿಸಿದ ಮಾದರಿಯಲ್ಲಿ ಬಹುತೇಕ ಜನರು ಅನಕ್ಷರಸ್ಥರು. ಆದರೆ ಶೇ.20 ರಷ್ಟು ಜನ ಅಕ್ಷಸ್ಥರು ಶೇ.20 ರಷ್ಟು ಅರೆ ಅಕ್ಷರಸ್ಥರು, ಅವರಲ್ಲಿ 7, 8 ಹಾಗೂ 9ನೇ ತರಗತಿಯನ್ನು ಓದಿದವರು. ಶೇ.11 ರಷ್ಟು ಜನ ಮಾತ್ರ ತಮ್ಮ ಹತ್ತನೇ ತರಗತಿಯನ್ನು ಪೂರೈಸಿದವರು. ಇಡೀ ಸಮೂಹದ ಪ್ರಾತಿನಿಧ್ಯವನ್ನು ಗಮನಿಸಿದರೆ ಓದು ಬರಹ ಬಲ್ಲವರ, ರುಜು ಹಾಕಬಹುದಾದವರ ಸಂಖ್ಯೆ ಅತಿ ಸಣ್ಣ ಪ್ರಮಾಣದ್ದಾಗಿದೆ. ಇದೆಲ್ಲವನ್ನು ಗಮನಿಸಿದರೆ ಸಾಕ್ಷರತಾ ಆಂದೋಲನ ಪರಿಣಾಮ ಅತಿ ಕಡಿಮೆಯೆಂದೇ ಹೇಳಬಹುದು.

ಉದ್ಯೋಗ: ಸಂಗ್ರಹಿಸಿದ ಮಾದರಿಯಲ್ಲಿ ಶೇ.30 ರಷ್ಟು ಜನರು ಸ್ಥಿರ ಹಾಗೂ ನಿರಂತರ ಕಸುಬನ್ನು ಹೊಂದಿದವರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ ಶೇ.50 ರಷ್ಟು ಜನರು ಅಸ್ಥಿರ ಹಾಗೂ ನಿರಂತರವಲ್ಲದ ಉದ್ಯೋಗಗಳಲ್ಲಿ ತೊಡಗಿಸಿಕೊಂಡವರಾಗಿದ್ದಾರೆ. ಶೇ.33 ರಷ್ಟು ಜನ ಆರ್ಥಿಕ ಸ್ವಾವಲಂಬನೆಯನ್ನು ಅನುಭವಿಸುವಂಥವರು ಎಂದು ಇದರ್ಂಥವಾಗಿದೆ. ಅದೇ ಸಮಯಕ್ಕೆ ಶೇ.50 ರಷ್ಟು ಜನ ಸಮಯಾಧಾರಿತ ವೃತ್ತಿ ಪಡೆಯಬಲ್ಲವರಾಗಿದ್ದಾರೆ. ಇದೆಲ್ಲವನ್ನೂ ಕ್ರೂಢಿಕರಿಸಿದರೆ ಕೇವಲ ಶೇ.83 ರಷ್ಟು ಜನ ಉದ್ಯೋಗಾವಕಾಶವನ್ನು ಪಡೆಯಬಲ್ಲವರಾಗಿದ್ದಾರೆ ಎನ್ನಬಹುದಾಗಿದೆ.

ಆದಾಯ : ಶೇ.23 ಕ್ಕೂ ಹೆಚ್ಚಿನ ಜನರು ಅತಿ ಹೆಚ್ಚು ಎನ್ನಬಹುದಾದ ಪ್ರತಿಮಾಸಿಕ ಸುಮಾರು 1000 ರೂಪಾಯಿಗಳಿಂದ 1500 ರೂಪಾಯಿಗಳ ಆದಾಯ ಗಳಿಸುತ್ತಾರೆ. ಶೇ.37 ರಷ್ಟು ಜನರು 500 ರಿಂದ 1000 ರೂಪಾಯಿಗಳಷ್ಟು ಗಳಿಸುತ್ತಾರೆ. ಆದರೆ ಶೇ.34 ರಷ್ಟು ಜನರಿಗೆ ಆದಾಯವೇ

ಇಲ್ಲ. ಇದೆಲ್ಲವನ್ನೂ ಇಡಿಯಾಗಿ ಗಮನಿಸಿದರೆ ಬಹುತೇಕ ಜನರಿಗೆ ವೈಯಕ್ತಿಕ ಆದಾಯವೇ ಇಲ್ಲವೆಂಬುದು ಸ್ಪಷ್ಟವಾಗುತ್ತದೆ.

ಈ ಇಡೀ ಅಧ್ಯಾಯವನ್ನು ಗಮನಿಸಿದರೆ ಗ್ರಾಮೀಣ ಪ್ರದೇಶದ ಮಹಿಳೆಯರ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕ, ಆರ್ಥಿಕತೆಗಳು ಮಹತ್ವದ ಪಾತ್ರವನ್ನು ನಿರ್ವಹಿಸುವುದರಿಂದ ಗ್ರಾಮೀಣ ಮಹಿಳೆಯರ ಪ್ರವೃತ್ತಿಗಳಲ್ಲಿ ಬದಲಾವಣೆ ಕಂಡುಬರುತ್ತಿದೆ. ಆದಾಯ, ಮದುವೆ, ಶಿಕ್ಷಣ, ಉದ್ಯೋಗಗಳಲ್ಲಿ ವೇಗದ ಬದಲಾವಣೆ ಆಗದೇ ಇದ್ದರೂ ನಿಧಾನಗತಿಯಲ್ಲಾದರೂ ಬದಲಾವಣೆ ಪ್ರಕ್ರಿಯೆ ಕಂಡುಬರುತ್ತಿದೆ. ಇವೆಲ್ಲವು ಸಬಲೀಕರಣದ ಹೆಜ್ಜೆಗಳನ್ನು ಇಡುವಲ್ಲಿ ಮಹಿಳೆಗೆ ಸಹಕಾರಿಯಾಗಿವೆ. ಮುಂದಿನ ಅಧ್ಯಾಯದಲ್ಲಿ ಗ್ರಾಮೀಣ ಮಹಿಳೆ ತನ್ನ ವ್ಯಕ್ತಿತ್ವದೊಂದಿಗೆ ಮಹಿಳಾ ಸಂಘಗಳನ್ನು ಸೇರಿ ಸಂಘದ ಗುರಿ–ಉದ್ದೇಶಗಳನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾಳೆ ಎಂದು ನೋಡುವುದೇ ಆಗಿದೆ.

4.3 ಸ್ವ–ಸಹಾಯ ಸಂಘಗಳ ಬಗೆಗಿನ ಅರಿವಿನ ವಿಶ್ಲೇಷಣೆ:

ಸ್ವ–ಸಹಾಯ ಸಂಘಗಳು ಗ್ರಾಮೀಣ ಭಾಗದಲ್ಲಿ ಮಹಿಳಾ ಸಬಲೀಕರಣಕ್ಕೆ ಪೂರಕವಾದ ಮಹತ್ವದ ಸಂಸ್ಥೆಗಳಾಗಿವೆ ಎಂಬುದನ್ನು ಅನೇಕ ಅಧ್ಯಯನಗಳು ಸಾಬೀತು ಪಡಿಸಿವೆ. (ಶ್ರೀವಾತ್ಸವ, 2004, ಕುಮಾರ 2005, ನರಸಿಂಹನ್ 1999) ಮಹಿಳಾ ಸಬಲೀಕರಣದಲ್ಲಿ ಸ್ವ–ಸಹಾಯ ಸಂಘದ ಮಹತ್ವವು ಅವರಿಗೆ ತಮ್ಮ ಸ್ವ–ಸಹಾಯ ಸಂಘದ ಬಗೆಗೆ ಇರುವ ಅರಿವನ್ನು ಅವಲಂಬಿಸಿರುತ್ತದೆ ಎಂಬುದು ಈ ಅಧ್ಯಯನಗಳಿಂದ ಸ್ಪಷ್ಟವಾಗಿದೆ. ಗುರಿ ಮತ್ತು ಉದ್ದೇಶಗಳು, ಬ್ಯಾಂಕ್ ವ್ಯವಹಾರ, ಬ್ಯಾಂಕ್ ಹಾಗೂ ಸಂಘಗಳ ನಡುವಿನ ಸಂಪರ್ಕಸೇತು, ಸಾಲಗಳ ಬಗೆಗೆ ಅರಿವು ಇರುವುದು ಅವರ ಸಂಘದ ಮಹತ್ವದ ಬಗೆಗೆ ತಿಳಿದಿರುವುದು ಅಗತ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ನಮ್ಮ ಅಧ್ಯಯನದಲ್ಲಿ ಸ್ವಸಹಾಯ ಸಂಘದ ಕಚೇರಿ ಕೆಲಸಗಾರರು ಹಾಗೂ ಸ್ವಸಹಾಯ ಸಂಘದ ಸದಸ್ಯರಿಗೆ ಸಂಘದ ಗುರಿ ಉದ್ದೇಶ ಎಲ್ಲದರ ಅರಿವು ಇದೆ. ಇದು ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿದೆ ಎಂಬ ಹೇತುಪರಿಕಲ್ಪನೆಯ ಮೇಲೆ ಅಧ್ಯಯನಿಸಲಾಗಿದೆ.

ಕೋಷ್ಟಕ–4.3.1

ಸ್ವ–ಸಹಾಯ ಸಂಘದ ಗುರಿ ಉದ್ದೇಶಗಳ ಬಗೆಗಿನ ಅರಿವು

ಕ್ರ ಸಂ.	ಸ್ವ–ಸಹಾಯ ಸಂಘದ ಅರಿವಿನ ಮಟ್ಟ	ಪ್ರತಿನಿಧಿಗಳು		ಸದಸ್ಯರು		ಒಟ್ಟು	
		ಸಂ.	ಶೇ.	ಸಂ.	ಶೇ.	ಸಂ.	ಶೇ.
01.	ಅತಿ ಸ್ಪಷ್ಟ ಕಲ್ಪನೆ	62	52%	86	48%	148	49%
02.	ಸ್ಪಷ್ಟ ಕಲ್ಪನೆ	34	28%	50	28%	84	28%
03.	ಅಸ್ಪಷ್ಟ ಅರಿವು	24	20%	44	24%	68	23%
	ಒಟ್ಟು	**120**	**100%**	**180**	**100%**	**300%**	**100%**

ಈ ಕೋಷ್ಟಕದಲ್ಲಿರುವ ದತ್ತಾಂಶವು ಅರ್ಧದಷ್ಟು ಜನ ಸದಸ್ಯರಿಗೆ ಅತಿ ಸ್ಪಷ್ಟ ಕಲ್ಪನೆ ಇರುವುದು ತಿಳಿದು ಬರುತ್ತದೆ. ಸ್ವ–ಸಹಾಯ ಸಂಘದ ಗುರಿ ಉದ್ದೇಶಗಳ ಬಗೆಗೆ ಪ್ರತಿನಿಧಿಗಳಲ್ಲಿ ಶೇ 52ರಷ್ಟು ಜನರಿಗೆ ಅತಿ ಸ್ಪಷ್ಟ ಕಲ್ಪನೆ ಇದ್ದರೆ ಸದಸ್ಯರಲ್ಲಿ ಶೆ 48ರಷ್ಟು ಜನರಿಗೆ ತಮ್ಮ ಸಂಘದ ಗುರಿ ಉದ್ದೇಶಗಳ ಬಗೆಗೆ ಅತಿ ಸ್ಪಷ್ಟವಾದ ಮಾಹಿತಿ ಇದೆ. ಸದಸ್ಯರು ಹಾಗೂ ಪ್ರತಿನಿಧಿಗಳಿಗೆ ಸಮಪ್ರಮಾಣದಲ್ಲಿ ಒಟ್ಟು ಶೇಕಡಾವಾರು 28ರಷ್ಟು ಸ್ಪಷ್ಟವಾದ ಮಾಹಿತಿ ಇದೆ.ಪ್ರತಿನಿಧಿಗಳಿಗೆ ಹಾಗೂ ಸದಸ್ಯರಿಗೆ ಕ್ರಮವಾಗಿ ಶೇ 20 ಹಾಗೂ ಶೇ 24ರಷ್ಟು ಒಟ್ಟು 23ರಷ್ಟು ಜನರಿಗೆ ತಮ್ಮ ಸಂಘದ ಗುರಿ ಉದ್ದೇಶಗಳ ಬಗೆಗೆ ಅಸ್ಪಷ್ಟ ಮಾಹಿತಿ ಇದೆ.

ಈ ಮಾಹಿತಿ ಸಂಗ್ರಹಿಸುವಾಗ ಪರಿಶಿಷ್ಟ ಜಾತಿ ಮತ್ತು ಪಂಗಡಗಳೊಂದಿಗೆ ಹೋಲಿಸಿದರೆ ಮೇಲ್ವರ್ಗ ಮತ್ತು ಮೇಲ್ಜಾತಿಯ ಸದಸ್ಯರಿಗೆ ಸ್ವಸಹಾಯ ಸಂಘದ ಬಗೆಗೆ ಹೆಚ್ಚಿನ ಅರಿವು, ಮಾಹಿತಿ ಇರುವುದು ಕಂಡು ಬಂದಿದೆ.

ನಿರ್ದಿಷ್ಟ ಗುರಿ ಉದ್ದೇಶಗಳ ಬಗೆಗೆ ವಿವರ :

ಈ ಮೇಲಿನ ದತ್ತಾಂಶವು ಸ್ವಸಹಾಯ ಸಂಘದ ಬಹುತೇಕ ಪ್ರತಿನಿಧಿಗಳು ಹಾಗೂ ಸದಸ್ಯರಿಗೆ ಅವರ ಗುಂಪಿನ ಗುರಿ ಹಾಗೂ ಉದ್ದೇಶಗಳ ಬಗೆಗೆ ಮಾಹಿತಿ ಇದೆ ಎಂಬುದನ್ನು ಪುಷ್ಟೀಕರಿಸಿದೆ. ಈಗ ಇನ್ನೂ ಒಂದು ಹೆಜ್ಜೆ ಮುಂದಿರಿಸಿ, ಸಂಘದ ಪ್ರತಿಯೊಂದು ಸದಸ್ಯರಿಗೆ ನಿರ್ದಿಷ್ಟ ಗುರಿ ಉದ್ದೇಶದ ಬಗೆಗೆ ಮಾಹಿತಿಯಿದೆಯೇ ಎಂದು ನೋಡುವುದಾಗಿದೆ.

ಕೋಷ್ಟಕ –4.3.2

ನಿರ್ದಿಷ್ಟ ಗುರಿ ಉದ್ದೇಶಗಳ ಬಗೆಗಿನ ಮಾಹಿತಿ

ಕ್ರ. ಸಂ.	ನಿರ್ದಿಷ್ಟ ಉದ್ದೇಶಗಳ ಮಾಹಿತಿ	ಪ್ರತಿನಿಧಿಗಳು		ಸದಸ್ಯರು		ಒಟ್ಟು	
		ಸಂ.	ಶೇ.	ಸಂ	ಶೇ.	ಸಂ.	ಶೇ.
01.	ಆರ್ಥಿಕ ಸ್ವಾವಲಂಬಿತನ	64	53%	94	52%	158	53%
02.	ಶೋಷಣೆಯ ವಿರುದ್ಧ ಗ್ರಾಮೀಣ ಮಹಿಳೆಯರನ್ನು ಸಂಘಟಿಸುವುದು	44	37%	68	38%	112	37%
03.	ರಚನಾತ್ಮಕ ಪಾತ್ರ ವಹಿಸುವಲ್ಲಿ ಮಹಿಳೆಯರನ್ನು ಸಜ್ಜುಗೊಳಿಸುವುದು	12	10%	18	10%	30	10%
	ಒಟ್ಟು	**120**	**100%**	**180**	**100%**	**300%**	**100%**

ಕೋಷ್ಟಕವು ಸ್ವಸಹಾಯ ಸಂಘದ ಅರ್ಧಕ್ಕಿಂತ ಹೆಚ್ಚು ಸದಸ್ಯರಿಗೆ ಹಾಗೂ ಪ್ರತಿನಿಧಿಗಳಿಗೆ ಆರ್ಥಿಕ ಸ್ವಾವಲಂಬಿತನ ಸಾಧಿಸುವ ಉದ್ದೇಶದ ಬಗೆಗೆ ಪರಿಕಲ್ಪನೆ ಇರುವುದನ್ನು ಸ್ಪಷ್ಟಪಡಿಸುತ್ತದೆ. ಪ್ರತಿನಿಧಿಗಳು ಶೇ53ರಷ್ಟು, ಸದಸ್ಯರು ಶೇ 52ರಷ್ಟು ಒಟ್ಟಾರೆ ಶೇ 53ರಷ್ಟು ಜನರಿಗೆ ಮೊದಲ ಮತ್ತು ಆದ್ಯ ಗುರಿಯ ಬಗೆಗೆ ಅರಿವು ಇದೆ. ಗ್ರಾಮೀಣ ಮಹಿಳೆಯರು ಹಾಗೂ ಸಾಮಾನ್ಯ ಮಹಿಳೆಯರಿಗೆ ಗಳಿಕೆ ಇರುವ ದುಡಿತದಲ್ಲಿ ತೊಡಗಿಸಿಕೊಳ್ಳುವ ಅರಿವು ಮೂಡಿದೆ. ಹಣ ಗಳಿಕೆಯ ಹಕ್ಕಿನ ಬಗೆಗೆ ಅರಿವು ಮೂಡಿದೆ ಎಂಬುದು ಸಂಶೋಧನ ಸಮಯದಲ್ಲಿ ಸ್ಪಷ್ಟವಾಗಿದೆ. ಕೆಲಸದಲ್ಲಿ ಲಿಂಗ ತಾರತಮ್ಯವನ್ನು ವಿರೋಧಿಸುವ ಅರಿವು ಸಹ ಮೂಡಿದೆ.

ಸಪ್ರು ಹಾಗೂ ವೀಣಾ ಖನ್ನಾ (1989) ಪ್ರಕಾರ ಮಹಿಳೆಯರು ಈಗ ಪುರುಷನ ಗುಲಾಮತ್ವವನ್ನು ತಿರಸ್ಕರಿಸುತ್ತಿದ್ದಾರೆ. ಅವರ ಸರಿಸಮದ ಅಂತಸ್ತನ್ನು ಬೇಡುತ್ತಿದ್ದಾರೆ. ಅದಕ್ಕೆ ಅವಕಾಶಗಳು ಕಡಿಮೆ ಇವೆ ಲಿಂಗ, ವಯಸ್ಸು ಮುಂತಾದ ಎಲ್ಲೆಗಳನ್ನು ಮೀರಿಯೂ ಸಮ ಅವಕಾಶಕ್ಕಾಗಿ ಹಾತೊರೆಯುತ್ತಿದ್ದಾರೆ.

ಮಹಿಳೆ ಈಗ ಕಾಲೇಜು ವಿಶ್ವವಿದ್ಯಾಲಯದಲ್ಲಿ ಪ್ರವೇಶ ಪಡೆದು ಉನ್ನತ ಶಿಕ್ಷಣದಲ್ಲಿಯೂ ಸಾಧನೆ ಮಾಡುತ್ತಿದ್ದಾಳೆ. ಗುಣಮಟ್ಟ, ಕೌಶಲ್ಯವನ್ನು ಬಯಸುವ ವೃತ್ತಿನಿರತ ಕೋರ್ಸುಗಳಲ್ಲಿಯೂ ಸಾಧನೆ ಮಾಡಿದ್ದಾಳೆ. ಇದೇ ಕಾರಣಕ್ಕೆ ಇಂದು ಅವಳು ಎಲ್ಲ ಕ್ಷೇತ್ರಗಳಲ್ಲಿಯೂ ಶಿಕ್ಷಣ, ವೈದ್ಯಕೀಯ, ಎಂಜಿನಿಯರಿಂಗ್, ವಾಣಿಜ್ಯ, ಮುಂತಾದ ಕ್ಷೇತ್ರಗಳಲ್ಲಿಯೂ ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿದ್ದಾಳೆ.

ಸ್ವಸಹಾಯ ಸಂಘಗಳ ಬಗೆಗಿನ ಅರಿವು ಹಾಗೂ ಬೆಳವಣಿಗೆಯಿಂದಾಗಿ ಗ್ರಾಮೀಣ ಮಟ್ಟದಲ್ಲಿ ಸೂಕ್ಷ್ಮ ವಹಿವಾಟು ಹೆಚ್ಚಿದೆ. ಗ್ರಾಮೀಣ ಮಹಿಳೆಯರಲ್ಲಿ ಉದ್ಯೋಗದ ಪ್ರಜ್ಞೆ ಹಾಗೂ ಅವರ ಸ್ಥಾನಮಾನವನ್ನು ಸಂರಕ್ಷಿಸಲು ಪ್ರೇರೇಪಿಸುತ್ತಿದೆ.

ಕೋಷ್ಟಕದಲ್ಲಿ ವಿವರಣೆ ಸಹ ಇದೇ ಅಂಶಗಳನ್ನೇ ಎತ್ತಿ ಹಿಡಿಯುತ್ತದೆ. ಶೇ 53ರಷ್ಟು ಜನ ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬನೆಯೇ ಸ್ವಸಹಾಯ ಗುಂಪುಗಳ ಮುಖ್ಯ ಉದ್ದೇಶವಾಗಿದೆ ಎಂದು ತಿಳಿಸಿದ್ದಾರೆ.

ಶೇ.37ರಷ್ಟು ಹೇಳಿಕೆದಾರರು ಕೌಟುಂಬಿಕ ಶೋಷಣೆಯ ವಿರುದ್ಧ ಧ್ವನಿ ಎತ್ತಬೇಕು. ಸಂಘಟಿತರಾಗಬೇಕು ಎಂಬುದನ್ನು ಹೇಳಿರುವುದು ಇಲ್ಲಿ ಉಲ್ಲೇಖನೀಯವಾಗಿದೆ. ಅಷ್ಟೇ ಅಲ್ಲ ಮಹಿಳೆ ಅಥವಾ ಪುರುಷರಿಂದ ಆಗುವ ಶೋಷಣೆ ಇನ್ನು ಸಹಿಸಲು ಅಸಾಧ್ಯ ಎಂಬ ಭಾವನೆಯನ್ನೂ ವ್ಯಕ್ತಪಡಿಸಿದ್ದಾರೆ. ಆದರೆ ಶೇ.10 ರಷ್ಟು ಜನ ಮಾತ್ರ ಅಭಿವೃದ್ಧಿಪರ ಕಾರ್ಯಗಳ್ಲಿ ಹಾಗೂ ಸಾರ್ವಜನಿಕ ಬದುಕಿನಲ್ಲಿ ಮಹಿಳೆಯ ಪಾತ್ರವನ್ನು ರಚನಾತ್ಮಕವಾಗಿಸಬೇಕು ಎಂಬ ಉದ್ದೇಶವನ್ನು ಬಲ್ಲವರಾಗಿದ್ದಾರೆ.

ಈ ಕೋಷ್ಟಕವು ಸಂಘದ ಸದಸ್ಯರು (ಶೇ.52) ಹಾಗೂ ಪದಾಧಿಕಾರಿಗಳು (ಶೇ.33) ಮೊದಲ ಉದ್ದೇಶವಾದ ಆರ್ಥಿಕ ಸ್ವಾವಲಂಬಿತನವನ್ನು ಬಹುತೇಕ ಜನರು ಅರಿತುಕೊಂಡಿದ್ದಾರೆ ಎಂಬುದು ಸ್ಪಷ್ಟಪಡಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ಉಳಿದ ಉದ್ದೇಶಗಳ ಬಗೆಗೆ ಅವರ ಅಭಿಪ್ರಾಯಗಳನ್ನೂ ಸಂಗ್ರಹಿಸಿ ದಾಖಲಿಸಲಾಗಿದೆ. ಇದು ಸಹ ಮೊದಲಿನ ಉದ್ದೇಶವನ್ನೆ ಬೆಂಬಲಿಸುತ್ತದೆ.

ಗ್ರಾಮೀಣ ಮಹಿಳೆಯರ ಆರ್ಥಿಕ ಸ್ವಾವಲಂಬಿನೆಯ ಮುಖ್ಯ ಉದ್ದೇಶವನ್ನು ಅರ್ಥ ಮಾಡಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ.

ಬ್ಯಾಂಕ್ ವಹಿವಾಟಿನ ಅರಿವು:

ಇದು ಆತ್ಮವಿಶ್ವಾಸವನ್ನು ನೀಡುತ್ತದೆ. ಸ್ವಯಂ ಪ್ರೇರಣೆಯ ಮೂಲವಾಗಿದೆ. ಹಾಗೂ ಪುನಶ್ಚೇತನಕ್ಕೆ ಪ್ರೇರೇಪಿಸುತ್ತುದೆ. ಬ್ಯಾಂಕಿನ ವ್ಯವಹಾರದ ಬಗೆಗಿನ ಜ್ಞಾನವು ದೂರದರ್ಶಿತ್ವದ ಮೂಲ ಪ್ರೇರಣೆಯಾಗಿದೆ. ಆರ್ಥಿಕ ಚಟುವಟಿಕೆಗಳ ದೃಷ್ಟಿಕೋನದಿಂದ ಯೋಚಿಸುವಂತೆ ಮಾಡುತ್ತದೆ. ಸಂಘದ ಆರ್ಥಿಕ ವಿದ್ಯಮಾನಗಳನ್ನು ಸ್ಥಾನಮಾನವನ್ನು ಅರಿಯುವಲ್ಲಿ ಸಹಾಯಕವಾಗುತ್ತದೆ. ಸಂಘದ ಮಹಿಳೆಯರಿಗೆ ಬ್ಯಾಂಕ್ ವ್ಯವಹಾರದ ಅರಿವು ಎಷ್ಟು ಇದೆ ಎಂದು ನೋಡಲಾಯಿತು.

ಕೋಷ್ಟಕ – 4.3.3
ಬ್ಯಾಂಕ್ ವ್ಯವಹಾರದ ಬಗೆಗಿನ ಅರಿವು

ಕ್ರ ಸಂ.	ಬ್ಯಾಂಕ ವವ್ಯಹಾರದ ಬಗ್ಗೆ ಇರುವ ಅರಿವು	ಪ್ರತಿನಿಧಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಅತೀ ಸ್ಪಷ್ಟ	78	65%	54	30%	132	44%
02.	ಸ್ಪಷ್ಟ	24	20%	54	30%	78	26%
03.	ಅಸ್ಪಷ್ಟ	18	15%	72	40%	90	30%
	ಒಟ್ಟು	**120**	**100%**	**180**	**100%**	**300%**	**100%**

ಕೋಷ್ಟದಲ್ಲಿಯ ವಿರಣೆಯಂತೆ ಸ್ವ-ಸಹಾಯ ಸಂಘದ ಅರ್ಧಕ್ಕಿಂತ ಹೆಚ್ಚು ಜನ ಸದಸ್ಯರು ಬ್ಯಾಂಕ್ ವವ್ಯಹಾರವನ್ನು ಸ್ಪಷ್ಟವಾಗಿ ಅರಿತಿದ್ದಾರೆ. ಪದಾಧಿಕಾರಿಗಳಲ್ಲಿ ಶೇ.78 ಜನರಿಗೆ ಸದಸ್ಯರಲ್ಲಿ ಶೇ.30 ಜನರಿಗೆ ಸಂಘದ ಆರ್ಥಿಕ ವ್ಯವಹಾರ ಹಾಗೂ ಬ್ಯಾಂಕ್ ವ್ಯವಹಾರದ ಬಗ್ಗೆ ಅರಿವು ಇರುವುದು ಕಂಡುಬಂದಿತು. ಶೇ.70 ಪ್ರತಿನಿಧಿಗಳಿಗೆ ಬ್ಯಾಂಕ್ ವವ್ಯಹಾರದ ಬಗ್ಗೆ ಸ್ಪಷ್ಟತೆ ಇದೆ. ಅಷ್ಟೇ ಅಲ್ಲ ಉಳಿದ ಸದಸ್ಯರಿಗೆ ಸಂಘದ ಆರ್ಥಿಕ ಸ್ಥಿತಿಗತಿಗಳನ್ನು ಬ್ಯಾಂಕ್ ವ್ಯವಹಾರವನ್ನು ಕುರಿತಂತೆ ವಾರದ ಸಭೆ ಮತ್ತು ತಿಂಗಳ ಸಭೆಗಳಲ್ಲಿ ಚರ್ಚಿಸಿ ಸ್ಪಷ್ಟಪಡಿಸಿದ್ದಾರೆ.

ಹಾಗೂ ಸಂಘದ ಕಾರ್ಯದರ್ಶಿ ಮತ್ತು ವರದಿಗಾರರೊಂದಿಗೆ ಬ್ಯಾಂಕ್ ಠೇವಣಿ ಸಾಲ ಕೊಡುವುದು ಮತ್ತು ಮರು ಪಾವತಿಯ ಬಗೆಗೆ ಆಗಾಗ ಚರ್ಚಿಸಲಾಗುತ್ತದೆ ಎಂಬುವುದನ್ನು ಸ್ಪಷ್ಟಪಡಿಸಿದ್ದಾರೆ. ಇನ್ನೊಂದು ಮಹತ್ವದ ವಿಷಯವೆನೆಂದರೆ ಪದಾಧಿಕಾರಿಗಳನ್ನು ಹಾಗೂ ಸದಸ್ಯರನ್ನು ಹೋಲಿಸಿದಾಗ ಪದಾಧಿಕಾರಿಗಳಿಗೆ ಬ್ಯಾಂಕ್ ವ್ಯವಹಾರದ ಬಗೆಗೆ ಹೆಚ್ಚಿನ ಮಾಹಿತಿ ಇದೆ. ಪದಾಧಿಕಾರಿಗಳು ಶೇ.65 ಹಾಗೂ ಶೇ.20 ಜನರಿಗೆ ಅತೀ ಸ್ಪಷ್ಟ ಅರಿವು ಮತ್ತು ಸ್ಪಷ್ಟ ಅರಿವು ಇದೆ. ಆದರೆ ಸದಸ್ಯೆಯರಿಗೆ ಅಲ್ಪ ಪ್ರಮಾಣದ ಅರಿವು ಇದೆ ಎಂಬುವುದು ಸ್ಪಷ್ಟವಾಗುತ್ತದೆ. ಈ ಅಂತರಗಳು ಸಂಘದ ಕಾರ್ಯನಿರ್ವಹಣೆಯಲ್ಲಿ ಅಡೆ-ತಡೆಗಳನ್ನು ಒಡ್ಡುವ ಸಾಧ್ಯತೆಗಳು ಹೆಚ್ಚಿವೆ. ಪದಾಧಿಕಾರಿಗಳು ಮಾರ್ಗದರ್ಶಕರಂತೆ, ಸಮಾಲೋಚಕರಂತೆ, ಸಂಪನ್ಮೂಲ ವ್ಯಕ್ತಿಗಳಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

ಬ್ಯಾಂಕ್ ಸಂಪರ್ಕದ ಮಾಹಿತಿ : ಸ್ವ-ಸಹಾಯ ಸಂಘದ ಮಹಿಳೆಯರಿಗೆ ಬ್ಯಾಂಕ್ ಸಂಪರ್ಕದ ಮಾಹಿತಿ ಎಷ್ಟರ ಮಟ್ಟಿಗೆ ಇದೆ ಎಂಬುವುದನ್ನು ಮುಂದಿನ ಕೋಷ್ಟಕದಲ್ಲಿ ನೋಡಲಾಗಿದೆ. ಏಕೆಂದರೆ ಸಂಘಧ ಪ್ರತಿ ಸದಸ್ಯರಿಗೂ ಈ ಮಾಹಿತಿ ಇರಬೇಕಾಗಿರುವುದು ಅತೀ ಅವಶ್ಯವಾಗಿದೆ. ಬ್ಯಾಂಕ್ ಸಂಪರ್ಕವು ಸಾಲ ಪಡೆಯುವ, ಉದ್ಯೋಗ ಮಾಡುವ, ಆದಾಯ ಗಳಿಸುವ ಹಾಗೂ

ಸಾಲ ಮರು ಪಾವತಿಯ ಪ್ರಕ್ರಿಯೆ ಸುಲಭವಾಗುತ್ತದೆ. ಹಾಗೂ ಮಹಿಳೆಯರಿಗೆ ಆದಾಯ ಉತ್ಪನ್ನ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರೇರೆಪಿಸುತ್ತದೆ.

ಕೋಷ್ಟಕ – 4.3.4

ಸ್ವ–ಸಹಾಯ ಸಂಘದ ಪ್ರತಿನಿಧಿಗಳು ಮತ್ತು ಸದಸ್ಯೆರು ಬ್ಯಾಂಕ್ ಸಂಪರ್ಕದ ಬಗ್ಗೆ ಹೊಂದಿರುವ ಮಾಹಿತಿ.

ಕ್ರ. ಸಂ.	ಬ್ಯಾಂಕ್ ಸಂಪರ್ಕದ ಬಗ್ಗೆ ಹೊಂದಿರುವ ಮಾಹಿತಿ ವಿವರ	ಪ್ರತಿನಿಧಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಅತೀ ಸ್ಪಷ್ಟ	62	52%	68	38%	130	43%
02.	ಸ್ಪಷ್ಟ	34	28%	58	32%	92	31%
03.	ಅಸ್ಪಷ್ಟ	24	20%	54	30%	78	6%
	ಒಟ್ಟು	**120**	**100%**	**180**	**100%**	**300%**	**100%**

ಕೋಷ್ಟಕದಲ್ಲಿಯ ವಿವರಣೆಯಂತೆ ಸ್ವ–ಸಹಾಯ ಸಂಘದ ಬಹುತೇಕ ಸದಸ್ಯರಿಗೆ ಬ್ಯಾಂಕ್ ಸಂಪರ್ಕದ ಅರಿವು ಇಲ್ಲದೇ ಇರುವುದು ಕಂಡು ಬಂದಿತ್ತು. ಪದಾಧಿಕಾರಿಗಳು ಹಾಗೂ ಸದಸ್ಯರೆಲ್ಲ ಕೇವಲ ಶೇ.43 ಹಾಗೂ ಶೇ.31 ಜನರಿಗೆ ಬ್ಯಾಂಕಿನ ಸಂಪರ್ಕದ ಮಾಹಿತಿ ಇದೆ. ಇದರರ್ಥ ಸ್ವ–ಸಹಾಯ ಸಂಘದ ಸದಸ್ಯರು ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಮಾಹಿತಿಗಳನ್ನು ಪಡೆದು ಮುಂದುವರೆಯಬೇಕಾಗಿದೆ ಎಂಬುವುದು ಸ್ಪಷ್ಟವಾಗುತ್ತದೆ. ಇನ್ನೊಂದು ವಿಷಯ ವೇನೆಂದರೆ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಹೋಲಿಸಿದರೆ ಪಧಾಧಿಕಾರಿಗಳಿಗೆ ಹೆಚ್ಚಿನ ಮಾಹಿತಿ ಇರುವುದು ಸ್ಪಷ್ಟವಾಗುತ್ತದೆ. ಶೇ.52 ಪದಾಧಿಕಾರಿಗಳಿಗೆ ಅತೀ ಸ್ಪಷ್ಟವಾಗಿ ಅರಿವಿದ್ದರೆ ಶೇ.38 ಸದಸ್ಯರಿಗೆ ಅತೀ ಸ್ಪಷ್ಟ ಅರಿವು ಇದೆ. ಶೇ.28 ಪದಾಧಿಕಾರಿಗಳಿಗೆ ಮತ್ತು ಶೇ.32 ಸದಸ್ಯರಿಗೆ ಸ್ಪಷ್ಟ ಅರಿವು ಇರುವುದು ಕಂಡುಬಂದಿತು. ಅಂದರೆ ಸದಸ್ಯರಿಗೆ ಬ್ಯಾಂಕ್ ಸಂಪರ್ಕದ ಅರಿವು ಹೆಚ್ಚಿದೆ ಎಂಬುವುದು ಇದರಿಂದ ಸ್ಪಷ್ಟವಾಗುತ್ತದೆ. ಈ ವಿಷಯಕ್ಕೆ ಸಂಬಂಧಿಪಟ್ಟಂತೆ ಸಂಘಗಳು ಬ್ಯಾಂಕ್ ವವ್ಯಹಾರಕ್ಕೆ ಸಂಬಂಧಿಸಿದಂತೆ ಹೆಚ್ಚು ಪ್ರಗತಿಯಾಗಿಲ್ಲ ಎಂಬುವುದನ್ನು ಈ ಕೋಷ್ಟಕ ಬಿಂಬಿಸುತ್ತದೆ.

ಬ್ಯಾಂಕ್ ಸಾಲದ ಬಗ್ಗೆ ಇರುವ ಅರಿವು:

ಸ್ವ–ಸಹಾಯ ಸಂಘಗಳ ಬೆಳವಣೆಗೆಗೆ ಬ್ಯಾಂಕ್ ನೀಡುವ ಸಾಲವೇ ಜೀವರಕ್ಷಕವಾಗಿವೆ ಇದರಿಂದ ಮಹಿಳಾ ಸಬಲೀಕರಣ ಸುಲಭವಾಗಿದೆ. ಈ ಕಾರಣಕ್ಕಾಗಿಯೇ ಸ್ವ–ಸಹಾಯ ಸಂಘದ ಮಹಿಳೆಯರಿಗೆ ಬ್ಯಾಂಕ್ ನೀಡುವ ಸಾಲಗಳ ಬಗೆಗೆ ಎಷ್ಟರ ಮಟ್ಟಿಗೆ ಅರಿವು ಇದೆ ಎನ್ನುವುದನ್ನು

ತಿಳಿಯುವುದು ಅತೀ ಅವಶ್ಯಕವಾಗಿದೆ. ಅದಕ್ಕಾಗಿಯೇ ಮುಂದಿನ ಕೋಷ್ಟಕದಲ್ಲಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ವಿಶ್ಲೇಷಿಸಲಾಗಿದೆ.

ಕೋಷ್ಟಕ – 4.3.5
ಸ್ವ–ಸಹಾಯ ಸಂಘದ ಪ್ರತಿನಿಧಿಗಳು ಮತ್ತು ಸದಸ್ಯೆರು ಬ್ಯಾಂಕ್ ಸಾಲದ ಬಗ್ಗೆ ಹೊಂದಿರುವ ಮಾಹಿತಿ.

ಕ್ರ ಸಂ.	ಬ್ಯಾಂಕ್ ಸಾಲದ ಬಗ್ಗೆ ಹೊಂದಿರುವ ಮಾಹಿತಿ ವಿವರ	ಪ್ರತಿನಿಧಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಅತೀ ಸ್ಪಷ್ಟ	77	64%	94	52%	171	57%
02.	ಸ್ಪಷ್ಟ	43	36%	50	28%	93	35%
03.	ಅಸ್ಪಷ್ಟ	00	00	36	20%	36	12%
	ಒಟ್ಟು	**120**	**100%**	**180**	**100%**	**300%**	**100%**

ಈ ಕೋಷ್ಟಕದಲ್ಲಿಯ ವಿವರಣೆಯಂತೆ ಸ್ವ-ಸಹಾಯ ಸಂಘದ ಸದಸ್ಯರಿಗೆ ಹಾಗೂ ಪದಾಧಿಕಾರಿಗಳಿಗೆ ಬ್ಯಾಂಕ್ ಸಾಲ ಸೌಲಭ್ಯದ ಬಗ್ಗೆ ಹೆಚ್ಚಿನ ಮಾಹಿತಿ ಇದೆ. ಒಟ್ಟು ಶೇ.57 ಬ್ಯಾಂಕ್ ಸಾಲ ಸೌಲಭ್ಯದ ಬಗೆಗೆ ಸ್ಪಷ್ಟ ಮಾಹಿತಿ ಇದೆ ಎಂದು ಈ ಕೋಷ್ಟಕ ಬಿಂಬಿಸುತ್ತದೆ. ಶೇ.35 ಜನರಿಗೆ ಸಾಲದ ಬಗೆಗೆ ಸ್ಪಷ್ಟ ಕಲ್ಪನೆ ಇದ್ದರೆ ಕೇವಲ ಶೇ.12 ಜನರಿಗೆ ಮಾತ್ರ ಅಸ್ಪಷ್ಟ ಮಾಹಿತಿ ಇದೆ. ಹೆಚ್ಚಿನ ಪದಾಧಿಕಾರಿಗಳಿಗೆ ಅಂದರೆ ಶೇ.64 ಜನರಿಗೆ ಪರಿಪೂರ್ಣ ಮಾಹಿತಿ ಹೇಳಿಕೆದಾರರಿಗೆ ಈ ವಿಷಯ ಕುರಿತು ಪ್ರಶ್ನಿಸಿದಾಗ ತಿಳಿದ ಆಸಕ್ತಿಕರ ಅಂಶವೆಂದರೆ ಸಂಘದ ಎಲ್ಲ ಸದಸ್ಯರುಗಳಿಗೂ ಸಾಲ ತೆಗೆದುಕೊಳ್ಳುವ ಬಗ್ಗೆ ಹಾಗೂ ಅದನ್ನು ಖರ್ಚು ಮಾಡುವ ಬಗ್ಗೆ ಉದಾ: ಶಿಕ್ಷಣಕ್ಕಾಗಿ, ಆರೋಗ್ಯಕ್ಕಾಗಿ, ಆಡು, ಮೇಕೆ, ಕೋಳಿ ಸಾಕಾಣಿಕ ತಿಳಿದು ಬಂತು.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಸ್ವಸಹಾಯ ಸಂಘಗಳ ಗುರಿ ಮತ್ತು ಉದ್ದೇಶಗಳ ಬಗೆಗೆ ಅದೆಷ್ಟು ಜಾಗೃತರಾಗಿದ್ದಾರೆ, ಅದೆಷ್ಟು ಅರಿವು ಇದೆ ಎಂಬುದನ್ನು ಹೇಳಿಕೆದಾರರ ಬಳಿ ಚರ್ಚಿಸಿ ತಿಳಿದುಕೊಂಡೆವು. ಬ್ಯಾಂಕ್ ಸಂಪರ್ಕ, ವಹಿವಾಟು, ಸಾಲಗಳ ಬಗೆಗೆ ಅದೆಷ್ಟು ತಿಳಿದಿದ್ದಾರೆ ಎಂಬುದು ಅಂಕಿ ಅಂಶಗಳೊಂದಿಗೆ ನಿಖರವಾಗಿ ತಿಳಿದು ಬಂತು. ಬ್ಯಾಂಕ್ ವಹಿವಾಟ, ಸಂಪರ್ಕ ಹಾಗೂ ಸಾಲ ಸೌಕರ್ಯಗಳ ಬಗೆಗಿನ ಮಾಹಿತಿ ಮಹಿಳಾ ಸಶಕ್ತೀಕರಣದ ಒಂದು ಭಾಗವಾಗಿರುವುದರಿಂದ ಈ ಗುರಿ ಉದ್ದೇಶಗಳ ಬಗೆಗೆ ಅಧ್ಯಯನ ಮಾಡುವುದು ಅತ್ಯಗತ್ಯವಾಗಿತ್ತು. ಮಹಿಳೆಯರನ್ನು ಮಾನಸಿಕವಾಗಿ ಸಬಲರಾಗಿಸುತ್ತದೆ. ಈ ಆತ್ಮವಿಶ್ವಾಸವೇ ಅವರು ಸಬಲೀಕರಣದಲ್ಲಿ ಮುನ್ನುಗ್ಗುವಂತೆ ಪ್ರೇರೇಪಿಸುತ್ತದೆ.

ಸ್ವ-ಸಹಾಯ ಸಂಘದ ಗುರಿ ಉದ್ದೇಶಗಳ ಬಗೆಗಿನ ಅರಿವು: ಈ ಅಧ್ಯಾಯನದಲ್ಲಿ ಆಯ್ಕೆ ಮಾಡಿ ಕೊಂಡ ಸ್ವ-ಸಹಾಯ ಸಂಘಗಳ ಸದಸ್ಯರಲ್ಲಿ ಅರ್ಧದಷ್ಟು ಮಹಿಳೆಯರಿಗೆ ಸಂಘದ ಗುರಿ ಹಾಗೂ ಉದ್ದೇಶಗಳ ಬಗೆಗೆ ಸ್ಪಷ್ಟ ಮಾಹಿತಿ ಇದೆ. ಅಂದರೆ ಶೇ.50 ರಷ್ಟು ಜನರು ಸಂಘದ ಗುರಿ, ಉದ್ದೇಶಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದಾರೆಂದು ಅರ್ಥವಾಗುತ್ತದೆ. ಇನ್ನುಳಿದ ಶೇ.50 ರಷ್ಟು ಮಹಿಳೆಯರಿಗೆ ಸಂಘದ ಗುರಿ ಉದ್ದೇಶಗಳ ಸ್ಪಷ್ಟತೆಯ ಅರಿವು ಇಲ್ಲದೆ ಇರುವುದು ಕಂಡು ಬಂದಿತು.

ನಿರ್ದಿಷ್ಟ ಗುರಿ ಮತ್ತು ಉದ್ದೇಶಗಳ ಬಗೆಗಿನ ಅರಿವು: ಒಟ್ಟು ಜನರಲ್ಲಿ ಶೇ.53 ಜನ ಹೇಳಿಕೆದಾರರು ಆರ್ಥಿಕ ಸ್ವಾವಲಂಬನೆಯೇ ಸ್ವ-ಸಹಾಯ ಸಂಘದ ಮೂಲ ಉದ್ದೇಶವಾಗಿದೆ ಎಂದು ಸ್ಪಷ್ಟವಾಗಿ ಅರಿತಿದ್ದಾರೆ. ಶೇ.37 ಜನ ಮಹಿಳಾ ಶೋಷಣೆಯ ವಿರುದ್ಧ ಧ್ವನಿ ಎತ್ತುಬೇಕು ಎಂಬುವುದನ್ನು ಬೆಂಬಲಿಸಿದ್ದಾರೆ. ಆದರೆ ಕೇವಲ ಶೇ.10 ಜನರು ಮಾತ್ರ ಮಹಿಳಾ ಸಬಲೀಕರಣದಲ್ಲಿ ಮಹಿಳೆಯರು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಹತ್ವದ ಪಾತ್ರ ನಿರ್ವಹಿಸಬಲ್ಲರು ಎಂಬುವುದನ್ನು ಒಪ್ಪಿಕೊಂಡಿದ್ದಾರೆ ಎಂದು ಈ ಅಧ್ಯಯನದಲ್ಲಿ ಸಂಗ್ರಹಿಸಿದ ದತ್ತಾಂಶವು ಹೇಳುತ್ತದೆ. ಪದಾಧಿಕಾರಿಗಳಲ್ಲಿ ಶೇ.53, ಸದಸ್ಯರಲ್ಲ ಶೇ.52 ಜನರು ಆರ್ಥಿಕ ಸುಧಾರಣೆಯೇ ಸ್ವ-ಸಹಾಯ ಸಂಘದ ಮೂಲ ಉದ್ದೇಶವಾಗಿದೆ ಎಂಬುವುದನ್ನು ಅತೀ ಸ್ಪಷ್ಟವಾಗಿ ಅರಿತುಕೊಂಡಿದ್ದಾರೆ. ಈ ಕಾರಣದಿಂದಲೇ ಮಹಿಳೆಯ ಆರ್ಥಿಕ ಅಂತಸ್ತಿನಲ್ಲಿ ಸುಧಾರಣೆ ತರಬಹುದಾಗಿದೆ ಎಂಬ ಸತ್ಯವನ್ನು ತಿಳಿದುಕೊಂಡಿದ್ದಾರೆ.

ಬ್ಯಾಂಕ್ ವ್ಯವಹಾರ: ಇಲ್ಲಿ ಸಂಗ್ರಹಿಸಿದ ಅಂಕಿ-ಅಂಶಗಳು ನಿರಾಶದಾಯಕವಾಗಿವೆ. ಕೇವಲ ಶೇ.44 ಹಾಗೂ ಶೇ.26 ಬ್ಯಾಂಕ್ ಬಗೆಗೆ ಅತೀ ಸ್ಪಷ್ಟ ಮಾಹಿತಿ ಇದೆ. ಇದರರ್ಥ ಬಹಳ ಕಡಿಮೆ ಜನರಿಗೆ ಬ್ಯಾಂಕ್ ವವ್ಯಹಾರದ ಮಾಹಿತಿ ಇದೆ ಎಂದು ಅರ್ಥವಾಗುತ್ತದೆ. ಹಾಗೆಯೇ ಹೆಚ್ಚಿನ ಜನರಿಗೆ ಮಾಹಿತಿ ಇಲ್ಲವೆಂಬುವುದು ಅರ್ಥವಾಗುತ್ತದೆ. ಶೇ.33 ಸದಸ್ಯರಿಗೆ ಹೋಲಿಸಿದಾಗ ಶೇ.65 ಪದಾಧಿಕಾರಿಗಳಿಗೆ ಬ್ಯಾಂಕ್ ವವ್ಯಹಾರದ ಬಗೆಗೆ ಮಾಹಿತಿ ಇರುವುದು ಕಂಡು ಬಂದಿತು.

ಬ್ಯಾಂಕ್ ಸಂಪರ್ಕ: ಪ್ರಗತಿಪರ ಸ್ವ-ಸಹಾಯ ಸಂಘಗಳ ಸದಸ್ಯರಲ್ಲಿ ಬ್ಯಾಂಕ್ ಸಂಪರ್ಕದ ಬಗೆಗೆ ಹೊಂದಿರುವ ಮಾಹಿತಿಯು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಮಹಿಳಾ ಸಂಘಗಳು ಸಬಲೀಕರಣದತ್ತ ಸಾಗುವಲ್ಲಿ ಬ್ಯಾಂಕ್ ಸಂಪರ್ಕವು ಮಹತ್ವ ಪಾತ್ರವನ್ನು ನಿರ್ವಹಿಸುತ್ತವೆ. ಆದರೆ ಕೇವಲ ಶೇ.43 ಮತ್ತು ಶೇ.31 ಜನರಿಗೆ ಮಾತ್ರ ಅತೀ ಸ್ಪಷ್ಟವಾಗಿ ಹಾಗೂ ಸ್ಪಷ್ಟವಾಗಿ ಮಾಹಿತಿ ಇದೆ. ಶೋಚನೀಯ ಸಂಗತಿಯೆಂದರೆ ಶೇ.26 ಜನರಿಗೆ ಸ್ಪಷ್ಟವಾಗಿ ತಿಳಿದೆ ಇಲ್ಲ. ಅಂದರೆ ಶೇ.52 ಪದಾಧಿಕಾರಿಗಳಿಗೆ ಬ್ಯಾಂಕ್ ಸಂಪರ್ಕ ಮಾಹಿತಿ ಇದೆ. ಶೇ.38 ಸದಸ್ಯರಿಗೆ ಮಾಹಿತಿ ಇದ್ದು,

ಇವೆಲ್ಲವುಗಳನ್ನು ಗಮನಿಸಿದಾಗ ಬಹುತೇಕ ಸದಸ್ಯರಿಗೆ ಅಸ್ಪಷ್ಟ ಮಾಹಿತಿ ಇರುವುದು ಕಂಡು ಬಂದಿತು ಎಂಬ ತೀರ್ಮಾನಕ್ಕೆ ಬರಬಹುದಾಗಿದೆ.

ಬ್ಯಾಂಕ್ ಸಾಲ: ಹೇಳಿಕೆದಾರರಲ್ಲಿ ಬಹುತೇಕ ಜನರಿಗೆ ಸಾಲ ಸೌಲಭ್ಯದ ಬಗೆಗೆ ಪರಿಪೂರ್ಣ ಜ್ಞಾನವಿದೆ. ದತ್ತಾಂಶದ ಪ್ರಕಾರ ಶೇ.57 ಹಾಗೂ ಶೇ.35 ಜನರಿಗೆ ಸಾಲದ ಬಗೆಗೆ ಅತೀ ಸ್ಪಷ್ಟ ಹಾಗೂ ಸ್ಪಷ್ಟ ಮಾಹಿತಿ ಇದೆ. ಪ್ರತಿ ಸದಸ್ಯರು ಸಾಧ್ಯವಿದ್ದಷ್ಟು ಸಾಲವನ್ನು ಪಡೆಯಲು ಉತ್ಸಕರಾಗಿರುವುದು ಕಂಡುಬಂದಿತು. ಸಂಘದ ಸದಸ್ಯರಿಗೆ ಹೋಲಿಸಿದರೆ ಶೇ.52, ಪದಾಧಿಕಾರಿ ಗಳಿಗೆ ಹೆಚ್ಚಿನ ಮಾಹಿತಿ ಅಂದರೆ ಶೇ.64 ಹೆಚ್ಚಿನ ಮಾಹಿತಿ ಇರುವುದು ಕಂಡುಬರುತ್ತದೆ.

ಬ್ಯಾಂಕ್ ಸಾಲದ ಬಗೆಗೆ ಪದಾಧಿಕಾರಿಗಳು ಹಾಗೂ ಸದಸ್ಯರು ಇಬ್ಬರಿಗೂ ಸಾಲದ ಬಗೆಗೆ ಮಾಹಿತಿ ಇರುವುದು ಈ ಅಧ್ಯಾಯ ಸ್ಪಷ್ಟ ಪಡಿಸುತ್ತದೆ.

ಹೀಗೆ ಗ್ರಾಮೀಣ ಮಹಿಳೆಯರು ಸ್ವ-ಸಹಾಯ ಸಂಘದಲ್ಲಿ ಒಳಗೊಂಡಿರುವ ಅಂಶಗಳೆಲ್ಲವನ್ನು ಸ್ಪಷ್ಟವಾಗಿ ತಿಳಿದುಕೊಳ್ಳದೇ ಇದ್ದರು ಸಹ ಅರ್ಧಕ್ಕಿಂತ ಹೆಚ್ಚಿನ ಮಹಿಳೆಯರು ಆಸಕ್ತಿ ವಹಿಸಿ ಸಭೆಯ ಬೇರೆ ಬೇರೆ ವಿಷಯಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು ಚರ್ಚೆಗಳು ನಡೆದಾಗ ಪ್ರಶ್ನಿಸುವುದು ಸಂತೋಷಕರ ವಿಷಯಗಳಾಗಿವೆ. ಇದಕ್ಕೆ ಪೂರಕವಾಗಿಯೇ ಸಂಘದಲ್ಲಿ ಮಹಿಳೆಯರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಆರೋಗ್ಯ, ರಾಜಕೀಯ ಸಬಲೀಕರಣ ಕುರಿತಾದ ಚರ್ಚೆಗಳನ್ನು ಮಾಡುತ್ತಿದ್ದಾರೆ ಹಾಗೂ ಮುಂದಿನ ಅಧ್ಯಾಯದಲ್ಲಿ ಸಂಘದ ಮಹಿಳೆಯರ ಸಾಮಾಜಿಕ, ಆರ್ಥಿಕ ಶೈಕ್ಷಣಿಕ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟಂತೆ ಸಬಲೀಕರಣದ ಪ್ರಕ್ರಿಯೆಯನ್ನು ಚರ್ಚಿಸಲಾಗಿದೆ.

ಟಿಪ್ಪಣೆಗಳು

1. ನಬಾರ್ಡ ವರದಿ 2004–05.
2. ನಬಾಡ್ ವರದಿ 2005–06.
3. ಕರಮಕರ್.ಕೆ.ಜಿ. 1999 “ಗ್ರಾಮೀಣ ಸಾಲ ವಿತರಣೆ ಮತ್ತು ಸ್ವ-ಸಹಾಯ ಗುಂಪುಗಳು ಪುಟ.ಸಂಖ್ಯೆ: 292.
4. ಬೀದರ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್ ವರದಿ 2000–01 “ಸ್ವ-ಸಹಾಯ ಸಂಘಗಳ ತರಬೇತಿ ಕೈಪಿಡಿ”.
5. ಪ್ರವರ್ಧಾ ಸಂಸ್ಥೆಯ ವರದಿ 2002–03 “ಸ್ವ-ಸಹಾಯ ಗುಂಪಿನ ತರಬೇತಿ ಕೈಪಿಡಿ”.
6. ಗ್ರಾಮೀಣ ಮಹಿಳೆಯ ಸಬಲೀಕರಣ ಸ್ವ-ಸಹಾಯ ಗುಂಪಿನ ಸದಸ್ಯರೊಡನೆ

ಪ್ರಶ್ನಾವಳಿಗಳ ಮುಖಾಂತರ ಸಂದರ್ಶಿಸಿ ಅಭಿಪ್ರಾಯ ಸಂಗ್ರಹಿಸಲು ನುರಿತ ತಜ್ಞರ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಯಿತು.

(ಅ) ಡಾ॥ ಅಂಬಾರಾವ್ ಉಪಳಾಂವಕರ್, ಡಾ॥ ಶಾಂತಾ.ಬಿ.ಅಷ್ಟಗಿ, ಡಾ॥ ಗೌರಿ ಮಾನಸ ಮತ್ತು ಮಹಿಳಾ ಸಮಾಖ್ಯ ಕರ್ನಾಟಕ ಘಟಕಗಳಾದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲಾ ಸಂಯೋಜಕರ ಜೊತೆ ಚರ್ಚಿಸಲಾಗಿದೆ.

(ಬ) ಸ್ವಯಂ ಸೇವಾ ಸಂಸ್ಥೆಗಳ ನಿರ್ದೇಶಕರು

1. ಬೀದರಿನ ದಾರಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಅಶೋಕ.ಆರ್.ಬಿ.
2. ಗುಲಬರ್ಗಾದ ವಿದ್ಯಾ ಸಂಸ್ಥೆಯ ನಿರ್ದೇಶಕರಾದ ಶ್ರೀ ರಾಜಶೇಖರ ನಾಯ್ಡು.
3. ಗುಲಬರ್ಗಾ ಸಾರ್ಡ್ಸ್ ಸಂಸ್ಥೆಯ ನಿರ್ದೇಶಕರಾದ ಡಾ॥ ದೇವೆಂದ್ರ ಕಟ್ಟಿಮನಿ.
4. ಗುಲಬರ್ಗಾ ಬಿ.ಎಸ್.ಆರ್.ಡಿ.ಎಸ್ ಸಂಸ್ಥೆಯ ನಿರ್ದೇಶಕರಾದ ಶ್ರೀಸುಬಣ್ಣ ಬಿರಾದಾರ.
5. ಹೊಸಪೇಟ ಸಖಿ ಸಂಸ್ಥೆಯ ನಿರ್ದೇಶಕರಾದ ಡಾ॥ ಭಾಗ್ಯಲಕ್ಷ್ಮೀ ಎಂ.
6. ಪ್ರಜಾವಾಣಿ ದಿನ ಪತ್ರಿಕೆಯ, ಕಲಬುರ್ಗಿಯ ಆವೃತ್ತಿ ಹಿರಿಯ ವರದಿಗಾರ್ತಿ ಶ್ರೀಮತಿ ರಶ್ಮಿ.ಎಸ್. ಮುಂತಾದವರ ಜೊತೆ ಚರ್ಚಿಸಿದ ನಂತರ ಪ್ರಶ್ನಾವಳಿಯನ್ನು ರಚಿಸಲಾಗಿದೆ.

7. ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಯ 6 ತಾಲ್ಲೂಕಿನ 12 ಗ್ರಾಮ ಪಂಚಾಯ್ತಿ ವ್ಯಾಪ್ತಿಯ 30 ಸ್ವ-ಸಹಾಯ ಸಂಘಗಳ 300 ಜನ ಸದಸ್ಯರಿಗೆ ಸಂದರ್ಶನ ನಡೆಸಲಾಗಿದೆ.

ಅಧ್ಯಾಯ– 5

ಗ್ರಾಮೀಣ ಮಹಿಳೆಯ ಸಬಲೀಕರಣದಲ್ಲಿನ ತೊಡಕುಗಳು.

5.1. ಗ್ರಾಮೀಣ ಮಹಿಳೆಯ ಸಾಮಾಜಿಕ ಸಬಲೀಕರಣ.

5.2. ಗ್ರಾಮೀಣ ಮಹಿಳೆಯ ಆರ್ಥಿಕ ಸಬಲೀಕರಣ.

5.3. ಗ್ರಾಮೀಣ ಮಹಿಳೆಯ ಶೈಕ್ಷಣಿಕ ಸಬಲೀಕರಣ.

5.4. ಗ್ರಾಮೀಣ ಮಹಿಳೆಯ ಆರೋಗ್ಯದ ಸಬಲೀಕರಣ.

ಅಧ್ಯಾಯ – 5

ಗ್ರಾಮೀಣ ಮಹಿಳೆಯ ಸಬಲೀಕರಣದಲ್ಲಿನ ತೊಡಕುಗಳು

5.1 ಗ್ರಾಮೀಣ ಮಹಿಳೆಯ ಸಾಮಾಜಿಕ ಸಬಲೀಕರಣ:

ಗ್ರಾಮೀಣ ಸಮಾಜದಲ್ಲಿ ಸಾಮಾಜಿಕ ಸಬಲೀಕರಣವು ಮಹಿಳಾ ಸಬಲೀಕರಣದ ಸಮಗ್ರ ಸಾಧನವೆಂದೇ ಭಾವಿಸಲಾಗುತ್ತದೆ. ಸಾಮಾಜಿಕ ಸಬಲೀಕರಣವೆಂದರೆ ಸಾಮಾಜಿಕ ಸಂಸ್ಥೆಗಳ ಬಗೆಗೆ ಮಹಿಳೆಯಲ್ಲಿರುವ ರಚನಾತ್ಮಕ ಬದಲಾವಣೆಗಳು, ಮೌಲ್ಯಗಳಲ್ಲಿಯ ಬದಲಾದ ಚಿಂತನೆಗಳು, ಸಾಮಾಜಿಕ ಸಂಸ್ಥೆಗಳ ಬಗೆಗೆ ಬದಲಾದ ದೃಷ್ಟಿಕೋನ ಇವೆಲ್ಲವುಗಳಲ್ಲೂ ರಚನಾತ್ಮಕ ಬದಲಾವಣೆ ತರುವುದೇ ಆಗಿದೆ.

ಸಮಾಜಿಕ ಸಂಸ್ಥೆಗಳೆಂದರೆ ಮದುವೆ, ಕುಟುಂಬದ ಬಗೆಗಿನ ದೃಷ್ಟಿಕೊನವೆಂದೇ ಹೇಳಬಹುದಾಗಿದೆ. ಸೂಕ್ಷ್ಮವಾಗಿ ಗಮನಿಸಿದರೆ ಮದುವೆಯ ವಿಷಯದಲ್ಲಿ ಎರಡು ಅಂಶಗಳನ್ನು ಅಧ್ಯಯನ ಮಾಡಬಹುದಾಗಿದೆ.

5.1.1 ಹುಡುಗಿಯರ ಮದುವೆಗೆ ಸೂಕ್ತ ವಯಸ್ಸು

5.1.2 ಜೀವನ ಸಂಗಾತಿಯ ಆಯ್ಕೆ. ಕುಟುಂಬವನ್ನೂ ಭಾಗಗಳಾಗಿ ವಿಂಗಡಿಸಿ ಅಧ್ಯಯನಿಸಿದರೆ ಪ್ರಮುಖವಾಗಿ 5 ಅಂಶಗಳು ಗಮನಕ್ಕೆ ಬರುತ್ತವೆ.

5.1.3 ಬಯಸಿದ ಮಕ್ಕಳ ಸಂಖ್ಯೆ.

5.1.4 ಕುಟುಂಬದ ಪ್ರಕಾರಗಳು. 1) ಅವಿಭಕ್ತ ಕುಟುಂಬ 2) ಅವಿಭಕ್ತ ವಿಘಟಿತ ಕುಟುಂಬ 3) ವಿಭಕ್ತ ಕುಟುಂಬ.

5.1.5 ಕುಟುಂಬ ಯೋಜನೆ ಬಗ್ಗೆ ಮಹಿಳೆಯರು ಹೊಂದಿರುವ ವಿಶ್ವಾಸ.

5.1.6 ಕುಟುಂಬ ಯೋಜನೆಯ ಲಾಭ ಹಾನಿಗಳ ಬಗೆಗಿನ ನಿಲುವು.

5.1.7 ಗಂಡು ಮಕ್ಕಳಿಗೆ ಪ್ರಾಮುಖ್ಯತೆ ಕೊಡಬೇಕೆ ಎಂಬುದರ ಬಗೆಗಿನ ನಿಲುವು.

ಈ ಎಲ್ಲವುಗಳನ್ನೂ ಒಂದೊಂದಾಗಿ ಅಧ್ಯಾಯನ ಮಾಡುತ್ತಾ ಹೊದಂತೆ ಆಸಕ್ತಿಕರ ಅಂಶಗಳು ಸಂಶೋಧನೆಯಲ್ಲಿ ಕಂಡುಬಂದವು.

ಮದುವೆಗೆ ಹುಡುಗಿಯರ ಸೂಕ್ತ ವಯಸ್ಸು:

ಹುಡುಗಿಯರ ಮದುವೆಯ ವಯಸ್ಸಿನ ಬಗೆಗೆ ಸಮಾಜವು ತಳೆದಿರುವ ನಿಲುವು ಮಹಿಳಾ ಸಬಲೀಕರಣದಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಕಿರಿಯ ವಯಸ್ಸಿನಲ್ಲಿಯೇ ಮದುವೆ ಮಾಡುವಂಥ ಸಮಾಜವಾಗಿದ್ದಲ್ಲಿ ಅಲ್ಲಿ ಮಹಿಳೆಯು ಅಶಕ್ತಳಾಗಿರುತ್ತಾಳೆ. ಕಾರಣ ಸ್ಪಷ್ಟ. ಅವಳ ಹೆರುವ ಶಕ್ತಿ. ಋತುಮತಿಯಾದ ತಕ್ಷಣವೇ ಮದುವೆ ಮಾಡಿದಲ್ಲಿ ಮಕ್ಕಳನ್ನು ಹೆರುವ ಸಾಮರ್ಥ್ಯ ಮತ್ತು ಅವಧಿಗಳು ಹೆಚ್ಚಾಗುತ್ತವೆ. ಕಿರಿಯ ವಯಸ್ಸಿನಲ್ಲಿ ಹೆರಿಗೆಯಾದಾಗ ಶಿಶು ಮರಣ ದರ, ಬಾಣಂತಿ ಮರಣ ದರ ಹೆಚ್ಚಿರುತ್ತದೆ. ಇಲ್ಲವೇ ಮಹಿಳೆಯ ಶಾರೀರಿಕ ಹಾಗೂ ಮಾನಸಿಕ ಸ್ವಾಸ್ಥ್ಯದ ಮೇಲೆ ಪರಿಣಾಮ ಬೀರುತ್ತದೆ. ಇಂಥ ಸಂದರ್ಭದಲ್ಲಿ ರಚನಾತ್ಮಕ ಬದಲಾವಣೆಗಳಾಗಲಿ ಅಥವಾ ಗುಣಾತ್ಮಕ ಬದಲಾವಣೆಗಳಾಗಲಿ ಸುಧಾರಣೆಯನ್ನಾಗಲೀ ನಿರೀಕ್ಷಿಸುವುದು ಅಸಾಧ್ಯವಾಗುತ್ತದೆ.

ಇದೇ ಕಾರಣದಿಂದಲೇ ಮದುವೆಯ ವಯಸ್ಸು ಮಹಿಳಾ ಸಮಾಜಿಕ ಸಬಲೀಕರಣದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಆದರೆ ಆಧುನೀಕರಣ ಹಾಗೂ ವಿವಾಹದ ವಯಸ್ಸಿಗೆ ಸಂಬಂಧಿಸಿದಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಅನುಷ್ಠಾನಕ್ಕೆ ತಂದಿರುವ ಕಾನೂನುಗಳಿಂದಾಗಿ ಮದುವೆಯ ವಯಸ್ಸಿನ ಬಗೆಗೆ ಸಕಾರಾತ್ಮಕ ಧೋರಣೆ ಬೆಳೆದಿದೆ ಎಂದೇ ಊಹಿಸಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಆಧುನೀಕರಣವೂ ಈ ನಿಟ್ಟಿನಲ್ಲಿ ಹಿಂದುಳಿದಿಲ್ಲ. ಗ್ರಾಮೀಣ ಭಾಗದಲ್ಲಿಯೂ ಈಗ ಮದುವೆಯ ವಯಸ್ಸಿನ ಬಗೆಗೆ ಸಾಕಷ್ಟು ಜಾಗೃತಿ ಮೂಡಿದೆ.

ಇದೇ ಕಾರಣದಿಂದಲೇ ಸಾಮಾಜಿಕ ಸಂಸ್ಥೆಗಳೆನಿಸಿದ ಮದುವೆ ಹಾಗೂ ಕುಟುಂಬದ ಬಗೆಗೆ ಗ್ರಾಮೀಣ ಮಹಿಳೆಯರ ಧೋರಣೆಗಳು ಬದಲಾಗಿವೆ.

ಪ್ರಾಚೀನ ಭಾರತದಲ್ಲಿ ಮದುವೆಯ ವಯಸ್ಸು:

ಪ್ರಾಚೀನ ಭಾರತದಲ್ಲಿ ಬಾಲ್ಯವಿವಾಹ ಪದ್ಧತಿ ಜಾರಿಯಲ್ಲಿತ್ತು. ಹುಡುಗಿಯರನ್ನು ಋತುಮತಿಯಾಗುವ ಮುನ್ನವೇ ಮದುವೆ ಮಾಡಲಾಗುತ್ತಿತ್ತು. ಕನ್ಯತ್ವವನ್ನು ಕಾಪಾಡಲು ಅಥವಾ ಲೈಂಗಿಕ ದೌರ್ಜನ್ಯದಿಂದ ಕಾಪಾಡಲು ಖರ್ಚಿಗೆ ಹೆದರಿ, ರಕ್ತ ಸಂಬಂಧಗಳನ್ನು ಉಳಿಸಿಕೊಳ್ಳಲು ಏನು ಅರಿಯದ ಹುಡುಗಿಯರನ್ನು ಬಾಲ್ಯವಸ್ಥೆಯಲ್ಲಿಯೇ ಮದುವೆ ಮಾಡಿಕೊಡಲಾಗುತ್ತಿತ್ತು. ಇದರಿಂದ ಆಕೆಯ ಶರೀರಿದ ಮೇಲೆ ಮತ್ತು ಮನಸ್ಸಿನ ಮೇಲೆ, ದಿನನಿತ್ಯದ ಬದುಕಿನ ಮೇಲೆ ಬಹಳಷ್ಟು ಕೆಟ್ಟ ಪರಿಣಾಮಗಳು ಬೀರುತ್ತಿದ್ದವು.

ಬಾಲ್ಯವಿವಾಹದಿಂದ ಹುಡುಗಿಯರು ಆಘಾತಕ್ಕೆ ಒಳಗಾಗುತ್ತಿದ್ದರು. ಭಾವನಾತ್ಮಕವಾಗಿಯೂ ಅಬಲೆಯರಾಗಿರುತ್ತಿದ್ದರು. ಅಭದ್ರತೆಯ ಬದುಕಾಗಿರುತ್ತಿತ್ತು. ದೈಹಿಕವಾಗಿಯೂ ಮಾನಸಿಕವಾಗಿಯೂ ಜರ್ಜರಿತಗೊಳ್ಳುತ್ತಿದ್ದರು. ಆತ್ಮಸ್ಥೈರ್ಯವಿಲ್ಲದ, ಆತ್ಮವಿಶ್ವಾಸವಿಲ್ಲದ ವಿಶಾಲವಾದ ದೃಷ್ಟಿಕೋನವಿಲ್ಲದ ಕೇವಲ ಮನೆ ವಾರ್ತೆಗಳನ್ನು ನೋಡಿಕೊಂಡು ಮಕ್ಕಳನ್ನು ಹೆರುವ ಯಂತ್ರಗಳಾಗಿಯೇ ಬದುಕು ಸವೆಸುತ್ತಿದ್ದರು.

"ಬ್ರಿಟಿಷರು ತಮ್ಮ ಆಳ್ವಿಕೆಯಲ್ಲಿ ವಿವಾಹಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನು ಜಾರಿಗೆ ತಂದರು. ವಿಶೇಷವಾಗಿ ಸ್ವಾತಂತ್ರ್ಯದ ನಂತರ ಮಹಿಳೆಯರನ್ನು ಕಿಳು ದರ್ಜೆಯಿಂದ ನೋಡದೆ ವ್ಯಕ್ತಿಗಳಾಗಿ ಪರಿಗಣಿಸತೊಡಗಿದರು. 19ನೇ ಶತಮಾನದಲ್ಲಿ ಇಂಥ ಅನೇಕ ಸಾಮಾಜಿಕ ಬದಲಾವಣೆಗಳಾದವು. ಸಾಮಾಜೀಕರಣ, ನಗರೀಕರಣ, ಕೈಗಾರಕೀಕರಣ ಹಾಗೂ ಔಪಚಾರಿಕ ಶಿಕ್ಷಣ ಮುಂತಾದ ಕಾರಣಗಳಿಂದಾಗಿ ಮಹತ್ತರವಾದ ಬದಲಾವಣೆಗಳು ಬಂದವು. ಬದುಕಿನ ಮೌಲ್ಯಗಳು ಹಾಗೂ ಧೋರಣೆಗಳಲ್ಲಿ ಬದಲಾವಣೆಗಳು ಬಂದವು. ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿಯೇ ಸ್ವಾತಂತ್ರ್ಯ ಭಾರತ ಒಂದು ಧನಾತ್ಮಕ ಪ್ರಭಾವವನ್ನು ಬೀರಿತು. (ನೋಡಿ ಚೌಧರಿ 1988) ಕಳೆದ ನೂರು ವರ್ಷಗಳ ಹಿಂದೆ ವಧು-ವರರ ವಯಸ್ಸನ್ನು ನಿರ್ಧರಿಸುವುದು ಆರಂಭವಾಯಿತು. 19ನೇ ಶತಮಾನದ ಅಂತ್ಯದಲ್ಲಿ ಮದುವೆಯನ್ನು ಮುಂದೂಡುವ ಪರಿಪಾಠವೂ ಬೆಳೆದುಬಂದಿತು. ಉತ್ತಮ ಆರೋಗ್ಯ, ಶಿಕ್ಷಣ, ಕೆಲಸ ಗಳಿಕೆ ಮುಂತಾದ ಮಾನದಂಡಗಳನ್ನು ಮುಂದಿಟ್ಟುಕೊಂಡು ವಯಸ್ಸನ್ನು ಮುಂದೂಡಲು ಆರಂಭಿಸಲಾಯಿತು. ವ್ಯಕ್ತಿತ್ವದ ಸಮಗ್ರ ಬೆಳವಣಿಗೆಯನ್ನೂ ಗಮನದಲ್ಲಿರಿಸಿಕೊಂಡು ಇಂಥ ನಿರ್ಧಾರಗಳನ್ನು ತೆಗೆದುಕೊಳ್ಳಲಾಯಿತು. ಇದೇ ಸಂಘರ್ಷದಿಂದಲೇ ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು 1929ರಲ್ಲಿ ಜಾರಿಗೆ ತರಲಾಯಿತು. ಆದರೆ ಕಾಲ ಬದಲಾದಂತೆ 1949 ಹಾಗೂ 1956ರಲ್ಲಿ ಈ ಕಾಯ್ದೆಗೆ ತಿದ್ದುಪಡಿಯನ್ನೂ ತರಲಾಯಿತು"[1].

"ಪ್ರತಿಸಲ ತಿದ್ದುಪಡಿ ತಂದಾಗಲೂ ವಯಸ್ಸಿನಲ್ಲಿ ಸರಾಸರಿ ಏರಿಕೆ ಕಂಡು ಬರತೊಡಗಿತು. (ಅಲ್ಟೇಕರ್ 1962, ಕಪಾಡಿಯಾ 1966 ಬಾಲ್ಯವಿವಾಹ ಕಾಯ್ದೆ ಜಾರಿಗೆ ತಂದ ನಂತರವೂ ಮದುವೆಯ ವಯಸ್ಸಿನ ಬಗೆಗೆ ಮನೋಭಾವ ಬದಲಾಗಲು ಸಾಕಷ್ಟು ಸಮಯ ಬೇಕಾಯಿತು. ಬದುಕಿನಲ್ಲಿ ಅಂತರ್ಗತವಾಗಿ ಹರಿದುಬಂದ ನಂಬಿಕೆಯನ್ನು ಮೀರಿ ಬೆಳೆಯುವಲ್ಲಿ ಈ ಕಾಯ್ದೆಗಳು ಪರಿಣಾಮಕಾರಿಯಾಗಲು ಬಹುಕಾಲ ಕಾಯಬೇಕಾಯಿತು"[2]. ಹೀಗಾಗಿ ಸಂಘದ ಸದಸ್ಯರೊಂದಿಗೆ ಹುಡುಗಿಯರ ಸೂಕ್ತ ವಯಸ್ಸು ಮದುವೆಗೆ ಯಾವುದು ಎನ್ನುವ ಕುರಿತು ಚರ್ಚಿಸಲಾಯಿತು.

ಗ್ರಾಮೀಣ ಮಹಿಳೆಯರು ಅದರಲ್ಲೂ ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರು ಈ ಸಂಶೋಧನೆಗೆ ಒಳಪಟ್ಟಂತೆ ಮದುವೆಯ ವಯಸ್ಸಿನ ಬಗೆಗೆ ನೀಡಿದ ಪ್ರತಿಕ್ರಿಯೆಗಳು ಆಸಕ್ತಿಕರ ವಾಗಿವೆ ಹಾಗೂ ಬಂದಿರುವ ಅಭಿಪ್ರಾಯಗಳನ್ನು ನೇರವಾಗಿಯೇ ದಾಖಲಿಸಲಾಗಿದೆ.

ಕೋಷ್ಟಕ 5.1.1
ಮದುವೆಗೆ ಹುಡುಗಿಯರ ಸೂಕ್ತ ವಯಸ್ಸಿನ ಬಗೆಗೆ ಸಂಘದ ಪ್ರತಿನಿಧಿಗಳು ಹಾಗೂ ಸದಸ್ಯರು ನೀಡಿದ ಪ್ರತಿಕ್ರಿಯೆಗಳು

ಕ್ರ ಸಂ.	ಮದುವೆ ವಯಸ್ಸು ವರ್ಷಗಳಲ್ಲಿ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇ.
01.	16–18	24	20%	60	33%	84	28%
02.	19–20	78	65%	99	55%	177	59%
03.	21–22	18	15%	21	12%	39	13%
	ಒಟ್ಟು	**120**	**100%**	**180**	**100%**	**300**	**100%**

ಮದುವೆ ಸರಾಸರಿ ವಯಸ್ಸು 20: ಕೋಷ್ಟಕದಲ್ಲಿ ದಾಖಲಿಸಿರುವ ದತ್ತಾಂಶವು ಮದುವೆಯ ವಯಸ್ಸಿನ ಬಗೆಗೆ ಆಗಿರುವ ಜಾಗೃತಿಯನ್ನು ತೋರಿಸುತ್ತದೆ. ಶೇ.59ರಷ್ಟು ಜನ 19–20 ವರ್ಷಗಳ ವಯಸ್ಸಿನ ನಡುವೆ ಮದುವೆಯಾಗಬೇಕು ಎಂದು ಹೇಳಿದ್ದಾರೆ. ಶೇ 28ರಷ್ಟು ಜನರು 16–18ರ ವಯೋಮಿತಿಯಲ್ಲಿ ಮದುವೆ ಮಾಡುವ ಬಗೆಗೆ ಒಲವು ತೋರಿದ್ದಾರೆ. ಈ ವರ್ಗವು ಅನಕ್ಷರಸ್ಥ, ಬಡತನ ಮತ್ತು ಕೆಳವರ್ಗದ ಜನರಾಗಿದ್ದಾರೆ ಎಂಬದು ಗಮನೀಯ. ಇನ್ನೊಂದೆಡೆ ಶೇ 13ರಷ್ಟು ಜನರು ಮುಂದುವರಿದವರಂತೆ ಚಿಂತಿಸುತ್ತಾರೆ. ಇವರ ಪ್ರಕಾರ ಹುಡುಗಿಯರು 21–22ರ ವಯೋಮಿತಿಯಲ್ಲಿ ಮದುವೆಯಾಗಬೇಕು ಎಂದು ಹೇಳುತ್ತಾರೆ.

ಈ ದತ್ತಾಂಶವು ಇನ್ನೊಂದು ವಿಷಯವನ್ನೂ ಸ್ಪಷ್ಟಪಡಿಸುತ್ತದೆ. ಪದಾಧಿಕಾರಿಗಳು ಹೆಚ್ಚಾಗಿ ಪ್ರಗತಿಪರ ಧೋರಣೆಯುಳ್ಳವರಾಗಿದ್ದಾರೆ. ಪದಾಧಿಕಾರಿಗಳಲ್ಲಿ ಶೇ 65ರಷ್ಟು ಜನ ಮದುವೆಯ ಸೂಕ್ತ ವಯಸ್ಸು 19–20 ಎಂದು ತಿಳಿಸಿದ್ದಾರೆ. ಸದಸ್ಯರು ಶೇ.55ರಷ್ಟು ಈ ಮಾತನ್ನು ಒಪ್ಪಿದ್ದಾರೆ. ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಹೋಲಿಸಿದರೆ ಇವರಿಬ್ಬರ ನಡುವೆ ಪದಾಧಿಕಾರಿಗಳು ಹೆಚ್ಚು ಪ್ರಗತಿಪರ ಧೋರಣೆಯುಳ್ಳವರಾಗಿದ್ದಾರೆ ಎಂದು ಹೇಳಬಹುದಾಗಿದೆ. ಇದರರ್ಥ ಮದುವೆಯ ವಯಸ್ಸಿನ ನಿರ್ಧಾರದ ಬಗೆಗೆ ಮಹತ್ತರವಾದ ಬದಲಾವಣೆ ಬಂದಿದೆ ಎಂದು ಖಚಿತವಾಗಿ ಹೇಳಬಹುದಾಗಿದೆ.

ಬಾಳ ಸಂಗಾತಿಯ ಆಯ್ಕೆಯ ಹಕ್ಕು : ವೈಯಕ್ತಿಕ ಹಕ್ಕುಗಳ ಬಗೆಗೆ ಅರಿವು ಹೊಂದಿರುವುದೂ ಮಹಿಳಾ ಸಬಲೀಕರಣದ ಪರಿಕಲ್ಪನೆಯಲ್ಲಿ ಪ್ರಮುಖ ಅಂಶವಾಗಿದೆ. ಈ ಸಂಶೋಧನೆಗೆ ಒಳಪಟ್ಟ

ಗ್ರಾಮೀಣ ಮಹಿಳೆಯರು ವೈಯಕ್ತಿಕ ಹಕ್ಕುಗಳ ಬಗೆಗೆ ಜಾಗೃತಿ ಹೊಂದಿದ್ದಾರೆಯೇ ಎಂಬುದನ್ನು ಪರಿಶೀಲಿಸುವುದೂ ಈ ಸಂಶೋಧನೆಯ ಉದ್ದೇಶವಾಗಿದೆ. ಇದರ ಮೂಲಕ ಸ್ವತಂತ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯ ಹೊಂದಿರುವುದು ಕಂಡು ಬಂದರೆ ಸಾಮಾಜಿಕ ಸಬಲೀಕರಣದಲ್ಲಿ ಮಹತ್ವದ ಮೈಲಿಗಲ್ಲು ಆಗುತ್ತದೆ. ಗ್ರಾಮೀಣ ಜನರು ಅವರ ಹಕ್ಕುಗಳ ಬಗೆಗೆ ಜಾಗೃತರಾಗುತ್ತಿದ್ದಾರೆ. ಮಹಿಳೆಯರೂ ಕೇವಲ ಹಿರಿಯರು ತೆಗೆದುಕೊಂಡ ನಿರ್ಧಾರಗಳನ್ನು ಕಣ್ಣು ಮುಚ್ಚಿ ಒಪ್ಪಿಕೊಳ್ಳುತ್ತಿಲ್ಲ. ಹಿರಿಯರು ಅಥವಾ ಪುರುಷರು, ಕುಟುಂಬದ ಸಂಪೂರ್ಣ ನಿರ್ಧಾರಕ ವ್ಯಕ್ತಿಗಳಾಗಿ ಉಳಿದಿಲ್ಲ. ತಮ್ಮ ಅಭಿಪ್ರಾಯಗಳನ್ನೇ ಬಲವಂತವಾಗಿ ಹೇರುವಂತೆಯೂ ಇಲ್ಲ.

ಅನಕ್ಷರಸ್ಥ ಮಹಿಳೆಯರೂ ಆಗುತ್ತಿರುವ ಬದಲಾವಣೆಗಳನ್ನು ಅನುಭವಿಸುತ್ತಿದ್ದಾರೆ. ಅವರ ಅರಿವಿನ ವ್ಯಾಪ್ತಿಗೆ ಈ ಬದಲಾವಣೆಗಳು ಬಂದಿವೆ ಎಂಬುದೇ ಸಮಾಧಾನಕರ ವಿಷಯವಾಗಿದೆ.

ಜೀವನ ಸಂಗಾತಿಯ ಆಯ್ಕೆಯ ವಿಷಯದಲ್ಲಿಯೂ ಯುವ ಜನಾಂಗದ ಧೋರಣೆ ಬದಲಾಗಿದೆ. ಆಧುನಿಕ ಭಾರತದಲ್ಲಿ ಯುವಜನಾಂಗ ತನ್ನ ಬದುಕಿನ ಮೌಲ್ಯ, ಮದುವೆ ಹಾಗೂ ಕುಟುಂಬದ ಬಗೆಗೆ ವಿಶೇಷ ಗಮನವಹಿಸುತ್ತಿದೆ. ಅಷ್ಟೇ ಅಲ್ಲ ಅವರ ಮನೋಭಾವವೂ ಬದಲಾಗಿದೆ. ಅವರು ತಮ್ಮ ಜೀವನ ಸಂಗಾತಿಯ ಆಯ್ಕೆಯಲ್ಲಿ ಈಗ ಹೆಚ್ಚಿನ ಪ್ರಮಾಣದ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ.

ಕೋಷ್ಟಕ 5.1.2
ಜೀವನ ಸಂಗಾತಿಯ ಆಯ್ಕೆ ಹಕ್ಕಿನ ಕುರಿತಾದ ವಿವರ

ಕ್ರ ಸಂ.	ಪ್ರತಿಕ್ರಿಯೆ	ಪ್ರತಿನಿಧಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
01.	ಬಹುಮಟ್ಟಿಗೆ	30	25%	36	20%	66	22%
02.	ಸ್ವಲ್ಪ ಮಟ್ಟಿಗೆ	58	48%	76	42%	134	45%
03.	ಅಸಾಧ್ಯ	32	27%	68	38%	100	33%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿರುವ ದತ್ತಾಂಶವು ಜೀವನ ಸಂಗಾತಿಯ ಆಯ್ಕೆಗೆ ಮಹತ್ವ ನೀಡಬೇಕು ಎಂಬ ಅಂಶಕ್ಕೆ ಸಕಾರಾತ್ಮಕ ಧೋರಣೆ ವ್ಯಕ್ತವಾಗಿದೆ. ಸಂಗಾತಿಯ ಆಯ್ಕೆಯ ಹಕ್ಕನ್ನು ಹುಡುಗಿಯರಿಗೆ ನೀಡಲೇಬೇಕು ಎಂಬುದನ್ನು ಸ್ವಲ್ಪಮಟ್ಟಿಗೆ ಎಂದರೆ ಶೇ.45ರಷ್ಟು ಜನ ಒಪ್ಪಿಕೊಂಡಿದ್ದಾರೆ. ಬಹುಮಟ್ಟಿಗೆ ಅಥವಾ ಸಂಪೂರ್ಣ ಸ್ವಾತಂತ್ರ್ಯ ನೀಡಬೇಕು ಎಂದವರು ಶೇ.22 ಇವೆರಡನ್ನೂ ಹೋಲಿಕೆಮಾಡಿ ಗಮನಿಸಿದರೆ ಶೇ.33ರಷ್ಟು ಜನ ಅಸಾಧ್ಯದ ಮಾತು ಎಂದೂ ಹೇಳಿದ್ದಾರೆ.

ಮದುವೆಗೆ ಜೀವನ ಸಂಗಾತಿಯ ಆಯ್ಕೆಯ ಹಕ್ಕನ್ನು ಒಪ್ಪಕೊಂಡವರದ್ದೇ ಸಿಂಹಪಾಲು

ಆಗಿದೆ ಎಂಬುದು ಸಮಾಧಾನಕರ ವಿಷಯವಾಗಿದೆ. ಆದರೆ ಶೇ.33ರಷ್ಟು ಜನ ಅಸಾಧ್ಯ ಎಂದಿರುವುದು ದುರದೃಷ್ಟಕರ. ಮಹಿಳಾ ಹಕ್ಕುಗಳ ಬಗೆಗೆ ಅವರಿಗೆ ಅರಿವು ಇಲ್ಲವೇ ಇಲ್ಲ ಎಂದೂ ಹೇಳಬಹುದಾಗಿದೆ. ಮದುವೆಯಲ್ಲಿ ತಮ್ಮ ಭಾವೀ ಸಂಗಾತಿ ಹೇಗಿರಬೇಕು ಅಥವಾ ಯಾರಿರಬಹುದು ಎಂಬ ವಿಷಯಗಳ ತೀರ್ಮಾನ ತೆಗೆದುಕೊಳ್ಳುವಾಗ ಹುಡುಗಿಯರನ್ನು ಕೇಳಲೇಬೇಕು ಎಂಬುದನ್ನು ಇವರು ಒಪ್ಪುವುದೇ ಇಲ್ಲ. ಇದು ಅವರ ಸಾಂಪ್ರದಾಯಿಕ ಮನೋಭಾವನೆಯನ್ನು ಎತ್ತಿ ತೋರಿಸುತ್ತದೆ.

ಈ ದತ್ತಾಂಶ ಇನ್ನೊಂದು ಮಹತ್ವದ ಅಂಶದ ಮೇಲೆ ಬೆಳಕು ಚೆಲ್ಲುತ್ತದೆ. ಪದಾಧಿಕಾರಿಗಳು ಹಾಗೂ ಸದಸ್ಯರು ಆಯ್ಕೆ ಹಕ್ಕಿನ ಬಗೆಗೆ ಹೊಂದಿರುವ ಧೋರಣೆಯಲ್ಲಿ ಹೆಚ್ಚಿನ ಅಂತರವಿಲ್ಲ. ಆದರೆ ವಯಸ್ಸಿನ ಬಗೆಗೆ ಅಧ್ಯಯನ ಮಾಡಿದಾಗ ಪದಾಧಿಕಾರಿಗಳು ಹೆಚ್ಚು ಪ್ರಗತಿಪರ ಎನಿಸಿದ್ದರೂ ಇಲ್ಲಿ ಪದಾಧಿಕಾರಿಗಳು ಆಯ್ಕೆಯ ಹಕ್ಕನ್ನು ಶೇ 48ರಷ್ಟು ಒಪ್ಪಿದ್ದರೆ ಸದಸ್ಯರು ಶೇ 42ರಷ್ಟು ಜನರು ಒಪ್ಪಿದ್ದಾರೆ.

ಮದುವೆಯ ವಯಸ್ಸು ಹಾಗೂ ಜೀವನ ಸಂಗಾತಿಯ ಆಯ್ಕೆಯ ವಿಷಯದಲ್ಲಿ ಸಕಾರಾತ್ಮಕ ಬದಲಾವಣೆ ಹಾಗೂ ಸುಧಾರಣೆಗಳು ಕಂಡು ಬಂದಿವೆ ಎಂದು ಈ ಕೋಷ್ಟಕದ ಸಹಾಯದಿಂದ ತಿಳಿದು ಬರುತ್ತದೆ.

ಜೀವನ ಸಂಗಾತಿಯನ್ನು ಖುದ್ದಾಗಿ ಆಯ್ಕೆ ಮಾಡಿಕೊಳ್ಳುವುದು, ಪಾಲಕರೊಂದಿಗೆ ಆಯ್ಕೆ ಮಾಡಿಕೊಳ್ಳುವುದು ಅಥವಾ ಕೇವಲ ಪಾಲಕರು ಮಾತ್ರ ಆಯ್ಕೆ ಮಾಡುವುದು.

ಬಹುತೇಕ ಕುಟುಂಬದ ಹಿರಿಯರು ಹಾಗೂ ಪಾಲಕರೇ ನಿರ್ಧರಿಸುವುದು ಸಾಂಪ್ರಾದಾಯಿಕ ಮದುವೆಗೆ ಸಂಬಂಧಿಸಿದಂತೆ ಇತ್ತು. ಆದರೆ ಈಗ ಸಾಮಾಜೀಕರಣ, ಆಧುನೀಕರಣ, ಶಾಲಾ ಕಾಲೇಜು, ವಿದ್ಯಾಭ್ಯಾಸ, ಸಮೂಹಮಾಧ್ಯಮ, ವಿಜ್ಞಾನ ಮತ್ತು ತಂತ್ರಜ್ಞಾನ ಇವೆಲ್ಲವುಗಳ ಪರಿಣಾಮವಾಗಿ ಬದುಕಿನ ಮೌಲ್ಯಗಳಲ್ಲಿ ಬದಲಾವಣೆ ಕಂಡು ಬಂದಿದೆ. ಗ್ರಾಮೀಣ ಬದುಕಿನಲ್ಲಿಯೂ ಪರಿಣಾಮಕಾರಿಯಾದ ಬದಲಾವಣೆಗಳನ್ನು ತಂದಿದೆ. ಗ್ರಾಮೀಣ ಸಮಾಜದಲ್ಲಿಯೂ ಜೀವನ ಸಂಗಾತಿಯ ಆಯ್ಕೆ, ವ್ಯಕ್ತಿ ಸ್ವಾತಂತ್ರ್ಯ, ವೈಯಕ್ತಿಕ ನಿಲುವು, ಸ್ವಾಯತ್ತ ತೀರ್ಮಾನಗಳನ್ನು ತೆಗೆದುಕೊಳ್ಳುವ ಗಾಳಿ ಬೀಸತೊಡಗಿದೆ. ಅನಕ್ಷರಸ್ಥ ಹಾಗೂ ಅರೆ ಅಕ್ಷರಸ್ಥರಲ್ಲಿಯೂ ಹುಡುಗಿಯರು ತಮ್ಮ ಜೀವನ ಸಂಗಾತಿಯ ನಿರ್ಧಾರಕ್ಕೆ ಸ್ವಾತಂತ್ರ್ಯವನ್ನು ಬಯಸುತ್ತಿದ್ದಾರೆ. ವರನು ತನ್ನ ವಧುವನ್ನು ತಂದೆ ತಾಯಿಯರ ಅನುಮೋದನೆಯ ಮೇರೆಗೆ ಆಯ್ಕೆ ಮಾಡಿಕೊಳ್ಳುವ ಹಕ್ಕನ್ನು ಪಡೆದಿರುವುದು ವೆಂಕಟರಾಯಪ್ಪ ಅವರ ಅಧ್ಯಯನದಲ್ಲಿ ಕಂಡು ಬಂದಿದೆ. ಈಶ್ವರನ್ ಅವರು ಸಹ ಇದೇ ವಾದವನ್ನು ಎತ್ತಿ ಹಿಡಿಯುತ್ತಾರೆ. ಯುವ ಜನಾಂಗದಲ್ಲಿ

ತಮ್ಮ ವಧುವನ್ನು ಮದುವೆಗೆ ಮುಂಚೆಯೇ ಕಾಣಲು, ಮಾತನಾಡಲು ಉತ್ಸುಕರಾಗಿರುತ್ತಾರೆ. ಈಗಿನ ಹುಡುಗಿಯರೂ ತಮ್ಮನ್ನು ಮದುವೆಯಾಗುವ ಹುಡುಗನನ್ನು ನೋಡುವಷ್ಟು ಧೈರ್ಯವನ್ನೂ ತೋರುತ್ತಿದ್ದಾರೆ. (1968–72) ಯುವತಿಯರು ಹಾಗೂ ಯುವಕರು ತಮ್ಮ ಜೀವನ ಸಂಗಾತಿಯ ಆಯ್ಕೆಯ ಹಕ್ಕನ್ನು ಸ್ವಾತಂತ್ರ್ಯವನ್ನೂ ಕೇಳುತ್ತಿರುವುದು ಕಂಡುಬಂದಿದೆ. ಆದರೆ ತಮ್ಮ ಪಾಲಕರ ಅನುಮೋದನೆಯೊಂದಿಗೆ ತಮ್ಮ ಆಯ್ಕೆಯನ್ನು ತಿಳಿಸುವುದು ಹಳೆ ಬೇರು, ಹೊಸ ಚಿಗುರು ಕೂಡಿದರೆ ಮರ ಸೊಗಸು ಎಂಬಂತೆ ತೋರಿಸಿಕೊಡುತ್ತದೆ.

ಕೋಷ್ಟಕ 5.1.3

ಜೀವನ ಸಂಗಾತಿಯ ಆಯ್ಕೆ: ಸ್ವಂತ ಇಚ್ಛೆ, ಸ್ವಂತ ಇಚ್ಚೆ–ಪಾಲಕರ ನಿರ್ಧಾರ ಮತ್ತು ಕೇವಲ ಪಾಲಕರ ನಿರ್ಧಾರ

ಕ್ರ ಸಂ	ಜೀವನ ಸಂಗಾತಿಯ ಆಯ್ಕೆ ಪ್ರತಿಕ್ರಿಯೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಸ್ವಂತ ಇಚ್ಚೆ	42	35%	45	25%	87	29%
02.	ಸ್ವಂತ ಹಾಗೂ ಪಾಲಕರ ಇಚ್ಚೆ	66	55%	117	65%	183	61%
03.	ಕೇವಲ ಪಾಲಕರು	12	10%	18	10%	30	10%
	ಒಟ್ಟು	**120**	**100%**	**180**	**100%**	**300**	**100%**

ಸಂಗಾತಿಯ ಆಯ್ಕೆಯ ಪ್ರಶ್ನೆ ಬಂದಾಗ ಈ ಕೋಷ್ಟಕದಲ್ಲಿರುವ ದತ್ತಾಂಶ ಆಧುನೀಕರಣದ ಪರಿಣಾಮವನ್ನು ಬಿಂಬಿಸುತ್ತದೆ ಎಂದೇ ಹೇಳಬಹುದಾಗಿದೆ. ಈಗ ಸಂಗಾತಿಯ ಆಯ್ಕೆಯಲ್ಲಿ ಹುಡುಗಿಗೂ ತೀರ್ಮಾನ ತೆಗೆದುಕೊಳ್ಳಬೇಕು ಎಂಬ ಮನೋಭಾವ ಬೆಳೆಯುತ್ತಿದೆ. ಪ್ರತಿಕ್ರಿಯೆ ನೀಡಿದ ಹೇಳಿಕೆದಾರರು ಇದೇ ನಿಲುವನ್ನು ತಳದಿದ್ದಾರೆ. ಹುಡುಗಿಯು ತನ್ನ ಬದುಕಿನ ತೀರ್ಮಾನ ತೆಗೆದುಕೊಳ್ಳಬಹುದಾಗಿದೆ. ಆದರೆ ಪಾಲಕರ ಅನುಮತಿಯೂ ಅತ್ಯಗತ್ಯ ಎಂಬುದು ಸ್ಪಷ್ಟ ಪಡಿಸಲಾಗುತ್ತದೆ. ಈ ನಿಟ್ಟಿನಲ್ಲಿ ಜೀವನ ಸಂಗಾತಿಯ ನಿರ್ಧಾರ ತೆಗೆದುಕೊಳ್ಳುವುದು ಹುಡುಗಿ ಹಾಗೂ ಪಾಲಕರ ಸಹಭಾಗಿತ್ವದಲ್ಲಿ. ಈ ತೀರ್ಮಾನವೀಗ ದ್ವಿಮುಖವುಳ್ಳ ಆಯಾಮಾಗಿ ಬದಲಾಗಿದೆ. ಸಂಶೋಧನೆಗೆ ಒಳಗೊಂಡ ಪ್ರತಿಕ್ರಿಯೆದಾರರಲ್ಲಿ ಶೇ.61 ರಷ್ಟು ಸದಸ್ಯರು ಈ ಮಾತಿಗೆ ಅನುಮೋದನೆ ನೀಡಿದ್ದಾರೆ.

ಶೇ.29ರಷ್ಟು ಜನ ಜೀವನ ಸಂಗಾತಿಯ ಆಯ್ಕೆಯ ಸಂಪೂರ್ಣ ಸ್ವಾತಂತ್ರ್ಯ ಹುಡುಗಿಗೆ ನೀಡಬೇಕು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇವರ ಸಂಖ್ಯೆ ಗಮನೀಯವಾಗಿದೆ. ಕೇವಲ ಶೇ 10ರಷ್ಟು ಜನರು ಮಾತ್ರ ಈ ನಿರ್ಧಾರವನ್ನು ಪಾಲಕರೇ ತೆಗೆದುಕೊಳ್ಳಬೇಕು ಎಂದು ಹೇಳಿದ್ದಾರೆ. ಈ ಅಭಿಪ್ರಾಯವನ್ನು ನೀಡಿದವರ ಸಂಖ್ಯೆ ಗಮನೀಯವಾಗಿ ಕಡಿಮೆಯಾಗಿದೆ. ಬಲವಂತವಾಗಿ

ಹೇರಲಾದ ತೀರ್ಮಾನವನ್ನೇ ಅದೃಷ್ಟವೆಂದುಕೊಳ್ಳುವ ದಿನಮಾನಗಳೀಗ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅಷ್ಟೇ ಅಲ್ಲ ಮಹಿಳೆಯು ತನ್ನ ಭವಿಷ್ಯದ ನಿರ್ಧಾರವನ್ನು ತಾನೇ ಕೈಗೊಳ್ಳುವ ಸಾಮರ್ಥ್ಯವನ್ನೂ ಬೆಳೆಸಿಕೊಂಡಿದ್ದಾಳೆ ಎಂಬುದು ಸ್ಪಷ್ಟವಾಗುತ್ತದೆ.

ಈ ಫಲಿತಾಂಶವನ್ನು ಪರಿಗಣಿಸಿದರೆ ಗ್ರಾಮೀಣ ಮಹಿಳೆಯು ಸಾಂಪ್ರದಾಯಿಕ ಮತ್ತು ಆಧುನೀಕರಣದ ಚೌಕಟ್ಟಿನೊಳಗೆಯೇ ಸಬಲೀಕರಣದ ಪ್ರಕ್ರಿಯೆಗೆ ಒಳಗಾಗುತ್ತಿದ್ದಾಳೆ ಎಂಬುದು ಖಚಿತವಾಗಿದೆ.

ಕುಟುಂಬ: "ಡಾ॥ ಹಾಲತಿ ಸೋಮಶೇಖರ 2007 – "ಮಹಿಳಾ ಚಳುವಳಿ" ಎಂಬ ಗ್ರಂಥದಲ್ಲಿ ಕುಟುಂಬದ ವಿವರಣೆ ಈ ರೀತಿಯಾಗಿ ನೀಡಿದ್ದಾರೆ. "ಕುಟುಂಬ ಎಂದರೆ ಅದೊಂದು ಯಜಮಾನ್ಯ ಸಂಸ್ಕೃತಿಯ ಪೋಷಕ ಏಕೆಂದರೆ ಕುಟುಂಬದಲ್ಲಿ ಗಂಡಸೆ ಯಜಮಾನ. ಆತನೆ ನಿರ್ಣಾಯಕ ಸ್ಥಾನದಲ್ಲಿರುವನು. ಅದೊಂದು ಫ್ಯೂಡಲಿಸ್ಂ ದಬ್ಬಾಳಿಕೆಯನ್ನು ಜೀವಂತವಾಗಿಡುವ ಆಶ್ರಯತಾಣ. ಅದು ಪುರುಷ ಅಹಂಕಾರವನ್ನು ಸದಾ ಪೋಷಿಸುತ್ತದೆ ಎಂದಿದ್ದಾರೆ"[3].

"ಮಾನವ ಸಮಾಜದ ಮೂಲ ಕಲ್ಪನೆಯೇ ಕುಟುಂಬ. ಕುಟುಂಬ ಎಂಬುದನ್ನು ಇಲ್ಲಿ ಫ್ಯಾಮಿಲಿ ಶಬ್ದಕ್ಕೆ ಪರ್ಯಾಯವಾಗಿ ಬಳಸಲಾಗಿದೆ. ಫ್ಯಾಮಿಲಿ ಎಂಬ ಶಬ್ದ ಫ್ಯಾಮುಲಸ್ ಎಂಬ ಲ್ಯಾಟಿನ್ ಶಬ್ದದಿಂದ ವ್ಯುತ್ಪತ್ತಿಯಾದ ಶಬ್ದ. ಕುಟುಂಬ ನಿರ್ವಹಿಸಬಹುದಾದ ಕಾರ್ಯಗಳನ್ನು ಬೇರೆ ಯಾವುದೇ ಸಾಮಾಜಿಕ ಸಂಸ್ಥೆ ನಿರ್ವಹಿಸಲಾಗದು ಎಂದು ಸಮಾಜಶಾಸ್ತ್ರಜ್ಞರಾದ **ಮೈಕೆವರ್ ಮತ್ತು ಪೇಜ್** ಹೇಳುತ್ತಾರೆ. ಸಮಾಜದ ಮೂಲವೇ ಕುಟುಂಬ. ಮನುಜನ ಪ್ರಥಮ ಅಭಿವ್ಯಕ್ತಿಗಳೆಲ್ಲ ಆರಂಭವಾಗುವುದೇ ಈ ಕುಟುಂಬ ಎಂಬ ಸಂಸ್ಥೆಯಲ್ಲಿ ಎಂದು ಹೇಳಿದ್ದಾರೆ. ಕುಟುಂಬದ ಪ್ರಮುಖ ಕೆಲಸಗಳೆಂದರೆ ಹೊರುವುದು ಮತ್ತು ಹೆರುವುದು. ಮಕ್ಕಳ ಜನನ ಕುಟುಂಬದಲ್ಲಿಯೇ ಆಗಬೇಕು. ಕುಟುಂಬದಲ್ಲಿಯೇ ಮಗುವಿನ ಸಮಾಜೀಕರಣದ ಪ್ರಕ್ರಿಯೆ ಆರಂಭವಾಗುತ್ತದೆ. 'ಮಾಜದ ಬೇರೆ ಯಾವುದೇ ಸಾಮಾಜಿಕ ಸಂಸ್ಥೆಗಳಲ್ಲಿ ಮಗುವಿನ ಜನನ ಅಥವಾ ಸಮಾಜೀಕರಣದ ಮಾತು ಅಸಾಧ್ಯ. ಮಗುವಿನ ಬೆಳವಣಿಗೆಯು ಅಮ್ಮನೊಂದಿಗೆ ಮುಂದುವರಿಯುತ್ತದೆ"[4].

ಅವಿಭಕ್ತ ಕುಟುಂಬ: ಸಾಂಪ್ರದಾಯಿಕವಾಗಿ ಚಾಲ್ತಿಯಲ್ಲಿದ್ದುದ್ದೇ ಅವಿಭಕ್ತ ಕುಟುಂಬ. ಒಂದೇ ಮನೆಯಲ್ಲಿಯೇ ಮೂರು ತಲೆಮಾರಿನ ಜನರು ವಾಸವಾಗಿರುತ್ತಾರೆ. ಕುಟುಂಬದ ಎಲ್ಲ ಸದಸ್ಯರೂ ಒಂದೇ ಸೂರಿನಡಿ ಬದುಕುತ್ತಾರೆ. ಒಂದೇ ಅಡುಗೆ ಮನೆಯಲ್ಲಿ ಆಹಾರ ತಯಾರಿಸಲಾಗುತ್ತದೆ. ಒಂದೇ ಪೂಜಾಗೃಹವನ್ನು ಹಂಚಿಕೊಳ್ಳುತ್ತಾರೆ. ಎಲ್ಲರೂ ಒಟ್ಟುಗೂಡಿ ಶ್ರಮಿಸುತ್ತಾರೆ. ಹಣ ಗಳಿಸುತ್ತಾರೆ. ವೆಚ್ಚವನ್ನು ಹಂಚಿಕೊಳ್ಳುತ್ತಾರೆ. ಕುಟುಂಬದ ಹಿರಿಯರೇ ಇಲ್ಲಿ

ಯಜಮಾನರಾಗಿರುತ್ತಾರೆ. ಅವರನ್ನು ಕರ್ತನೆಂದು ಕರೆಯಲಾಗುತ್ತದೆ. ಕುಟುಂಬದ ಎಲ್ಲ ನಿರ್ಧಾರಗಳನ್ನೂ ಅವರೇ ತೆಗೆದುಕೊಳ್ಳುತ್ತಾರೆ. ತೀರ್ಮಾನ, ಅಧಿಕಾರ ಹಾಗೂ ಅನುಕೂಲಗಳೂ ಅವರದ್ದೇ ಹೆಚ್ಚಿನವಾಗಿರುತ್ತವೆ. ಮನೆಯಲ್ಲಿರುವ ಕಿರಿಯರಿಗೆ ತೀರ್ಮಾನದ ಹಕ್ಕು ಇರುವುದಿಲ್ಲ. ಕೇವಲ ಅಭಿಪ್ರಾಯಗಳನ್ನು ತಿಳಿಸಬಹುದಾಗಿರುತ್ತದೆ. ಹಿರಿಯರಿಗೆ ಇದ್ದಷ್ಟು ಅಧಿಕಾರ ಇರುವುದಿಲ್ಲ. ಒಂದು ತಲೆಮಾರಿನವರು ತಮ್ಮ ತಂದೆ-ತಾಯಿ, ಅಜ್ಜ, ಅಜ್ಜಿ, ಮಕ್ಕಳು, ಸಹೋದರ ಅವರ ಕುಟುಂಬದವರೊಡನೆ ಬದುಕುತ್ತಾರೆ.

ಕೈಗಾರಿಕೀಕರಣ, ನಗರೀಕರಣ, ವಿಜ್ಞಾನ ಮತ್ತು ತಂತ್ರಜ್ಞಾನ, ಔಪಚಾರಿಕ ಶಿಕ್ಷಣ ಈ ಎಲ್ಲ ಕಾರಣಗಳಿಂದ ಉದ್ಯೋಗ ಅವಕಾಶಗಳು ಹೆಚ್ಚಾದವು. ಆಗ ಕೂಡುಕುಟುಂಬದ ಪರಿಕಲ್ಪನೆಗೆ ಧಕ್ಕೆ ಬರತೊಡಗಿದ್ದೇ ಈ ಉದ್ಯೋಗಾವಕಾಶಗಳಿಂದ. ವೃತ್ತಿಪರ ನಿಲುವು ಹೆಚ್ಚಿದಂತೆ ಶಿಕ್ಷಿತರ ಸಂಖ್ಯೆಯೂ ಹೆಚ್ಚಾಯಿತು. ಕೆಲಸವನ್ನು ಅರಸಿ ಕುಟುಂಬ ಎಂಬ ಸಂಕೋಲೆ ಬಿಡಿಸಿಕೊಳ್ಳುವ ಪ್ರವೃತ್ತಿಯೇ ಹೆಚ್ಚಾಯಿತು. ಇದಕ್ಕೆ ನಗರೀಕರಣವೂ ಕಾರಣವಾಗದೇ ಇರಲಿಲ್ಲ. ಉದ್ಯೋಗವನ್ನು ಅರಸುವುದು, ದೊರೆತ ಉದ್ಯೋಗದಲ್ಲಿಯೇ ಮುಂದುವರಿಯುವುದು ಇವೆರಡೂ ಕಾರಣಗಳಿಂದ ಕುಟಂಬದ ಸದಸ್ಯರು ತಮ್ಮ ಒಂದೇ ಸೂರಿನಿಂದ ಹೊರ ಬಂದರು. ಪುಟ್ಟ ಗೂಡುಗಳನ್ನು ನಿರ್ಮಿಸಿಕೊಳ್ಳತೊಡಗಿದರು. ಅವಿಭಕ್ತ ಕುಟುಂಬದ ಪರಿಕಲ್ಪನೆ ಚದುರತೊಡಗಿದ್ದೇ ಈ ಕಾರಣಗಳಿಂದ. ವೈಯಕ್ತಿಕ ಲಾಭ, ಬೆಳವಣಿಗೆ ಕಾಳಜಿಯಂಥ ಮನೋಭಾವ ಬೆಳೆದದ್ದೇ ಅವಿಭಕ್ತ ಕುಟುಂಬ ತನ್ನ ಆಕರ್ಷಣೆ ಕಳೆದುಕೊಂಡಿತು.

ಕುಟುಂಬದ ಹಿರಿಯನಾಗುವ ಆಕಾಂಕ್ಷೆ. ಎಲ್ಲ ತೀರ್ಮಾನ ತೆಗೆದುಕೊಳ್ಳುವ ಅಧಿಕಾರದ ಲಾಲಸೆ ಹಾಗೂ ಸ್ವಂತ ಮತ್ತು ಸ್ವತಂತ್ರ ಬದುಕಿನ ಬಯಕೆ ಕುಟುಂಬದಿಂದ ಸಿಡಿದು ಹೊರಬರುವಂತೆ ಮಾಡಿತು.

ಆಗ ಕುಟುಂಬದ ಗಾತ್ರ ಕುಗ್ಗಿತು. ಕೇವಲ ಗಂಡ-ಹೆಂಡತಿ ಹಾಗೂ ಅವಿವಾಹಿತ ಮಕ್ಕಳಿಗೆ ಸೀಮಿತವಾಯಿತು. ಎರಡು ತಲೆಮಾರಿನವರು ಒಟ್ಟಿಗೆ ಬದುಕತೊಡಗಿದರು. ತಾವು ತಮಗಾಗಿ, ತಮ್ಮ ಮಕ್ಕಳಿಗಾಗಿ ಎಂಬ ಮನೋಭಾವ ಬೆಳೆದಿದ್ದೇ ವಿಭಕ್ತ ಕುಟುಂಬದ ಮೂಲವಾಯಿತು.

ಗ್ರಾಮೀಣ ಮಹಿಳೆಯರೂ ಪ್ರಜ್ಞಾಪೂರ್ವಕವಾಗಿ ತಮ್ಮ ಗಂಡ, ಮಕ್ಕಳ ಬಗೆಗೆ ಗಮನ ಕೇಂದ್ರೀಕರಿಸುತ್ತಿದ್ದಾರೆ. ಆದರೆ ಕೆಲವು ಸಂದರ್ಭಗಳಲ್ಲಿ ಮಾತ್ರ ಅತ್ತೆ ಮಾವ, ಗಂಡ-ಹೆಂಡತಿ, ಮಕ್ಕಳು ಸೇರಿ ಬದುಕುವ ಕುಟುಂಬಗಳಿವೆ. ಅವೂ ದುಡಿಯುವ ವರ್ಗದ ಅನುಕೂಲಕ್ಕೆ ಎಂಬುದು ಗಮನಿಸಬೇಕಾದ ಅಂಶ.

ಆದರೆ ಸಾಂಪ್ರದಾಯಿಕ ಅವಿಭಕ್ತ ಕುಟುಂಬ ಈಗ ಪರ್ವಕಾಲದಲ್ಲಿದೆ ಎಂದೇ ಹೇಳ ಬಹು

ದಾಗಿದೆ. ಇದಕ್ಕೆ ಈಗ ಒಂದು ಹೊಸ ಭಾಷ್ಯ ಬರೆಯುವ ಅಗತ್ಯವಿದೆ. ಈಗ ಕೂಡುಕುಟುಂಬ ಎಂಬುದು ಸಹೋದರ, ಸಹೋದರಿಯರ, ಸಹೋದರ ಸಹೋದರರ ಅಥವಾ ಹೆತ್ತವರ ಮತ್ತು ಮಕ್ಕಳ ಸಂಬಂಧವನ್ನು ಮಾತ್ರ ಸಾಂಕೇತಿಸುವ ಕುಟುಂಬಗಳಾಗಿ ಉಳಿದಿವೆ. (ಚೌಧರಿ 1988, ಸಿಂಘಾಲ 2003).

ಇದೇ ಕಾರಣಗಳನ್ನೇ ಮುಂದಿರಿಸಿಕೊಂಡು ನಮ್ಮ ಪ್ರತಿನಿಧಿಗಳಿಗೆ ಮೂಲ ಪ್ರಶ್ನೆಗಳನ್ನು ಕೇಳಲಾಯಿತು. ಅವರು ಅವಿಭಕ್ತ ಕುಟುಂಬ ವಿಘಟಿತ ಹಾಗೂ ವಿಭಕ್ತ ಕುಟುಂಬಗಳ ಬಗ್ಗೆ ಹೊಂದಿರುವ ಮಾಹಿತಿ ಹಾಗೂ ಅವರು ಯಾವ ಬಗೆಯ ಕುಟುಂಬಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಎಂದು ಪ್ರಶ್ನಿಸಲಾಯಿತು.

ಕೋಷ್ಟಕ 5.1.4

ಕುಟುಂಬದ ಆಯ್ಕೆಯ ಬಗೆಗಿನ ವಿವರ

ಕ್ರ ಸಂ.	ಕುಟುಂಬದ ಬಗೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
01.	ಕೂಡು ಕುಟುಂಬ	24	20%	45	25%	69	23%
02.	ಅವಿಭಕ್ತ ವಿಘಟಿತ	42	35%	72	40%	114	38%
03.	ವಿಭಕ್ತ ಕುಟುಂಬ	54	45%	63	35%	117	39%
	ಒಟ್ಟು	**120**	**100%**	**180**	**100%**	**300**	**100%**

ಕೋಷ್ಟಕದಲ್ಲಿಯ ಅಂಕಿ ಅಂಶಗಳು ಮಹಿಳೆಯರು ಈಗ ಅವಿಭಕ್ತ ವಿಘಟಿತ ಹಾಗೂ ವಿಭಕ್ತ ಕುಟುಂಬದತ್ತ ಒಲವು ತೋರುತ್ತಿರುವುದು ಕಂಡು ಬರುತ್ತಿದೆ. ಮಾನಸಿಕವಾಗಿ ಒಂದೆ ಕುಟುಂಬದವರಾಗಿದ್ದು, ಭೌತಿಕವಾಗಿ ಬೇರ್ಪಟ್ಟ ಕುಟುಂಬಗಳು ಎಂದು ಎನಿಸಿಕೊಳ್ಳುವ ಅವಿಭಕ್ತ ವಿಘಟಿತ ಕುಟುಂಬದತ್ತ ಶೇ. 38ರಷ್ಟು ಜನ ಒಲವು ತೋರಿಸಿದ್ದಾರೆ.

ಆದರೆ ಸಂಪೂರ್ಣ ಸ್ವಾತಂತ್ರ್ಯ ಬಯಸುವವರೇ ಹೆಚ್ಚಾಗಿರುವುದು ಶೇ.39ರಷ್ಟು ಜನರಿದ್ದಾರೆ. ಕೂಡುಕುಟುಂಬದತ್ತ ಒಲವು ತೋರಿದವರು ಶೇ 23ರಷ್ಟು. ಬದಲಾವಣೆಯ ಬೀಸು ರಭಸವಾಗಿಲ್ಲದಿದ್ದರೂ ಪ್ರಕ್ರಿಯೆಯ ವೇಗ ಹೆಚ್ಚಿದೆ ಎಂಬುದು ಕಂಡು ಬರುತ್ತದೆ. ಇದ್ಕಕೆ ಅವಿಭಕ್ತ ವಿಘಟಿತ ಕುಟುಂಬಗಳೇ ಕಾರಣವಾಗಿವೆ. ಅತ್ತ ಸ್ವಾತಂತ್ರ್ಯವೂ ಬಯಸುವ ಇತ್ತ ಸಹಭಾಗಿತ್ವದಲ್ಲೂ ನಂಬಿಕೆ ಇರುವ ಬಣ ಇದು. ಇವರ ಸಂಖ್ಯೆಯೂ ಗಮನೀಯವಾಗಿದೆ ಎಂಬುದು ಈ ಪ್ರತಿಕ್ರಿಯೆಗಳಿಂದ ಕಂಡು ಬರುತ್ತದೆ.

ಈ ದತ್ತಾಂಶವು ತೋರ್ಪಡಿಸುವ ಇನ್ನೊಂದು ಪ್ರಮುಖ ಅಂಶವೆಂದರೆ ಪದಾಧಿಕಾರಿಗಳು ವಿಭಕ್ತ ಕುಟುಂಬವನ್ನೇ ಹೆಚ್ಚಿನ ಸಂಖ್ಯೆಯಲ್ಲಿ ಆಯ್ಕೆ ಮಾಡಿಕೊಂಡಿದ್ದಾರೆ. ಶೇ.45 ರಷ್ಟು. ಸದಸ್ಯರು

ಶೇ.35 ರಷ್ಟು ಸದಸ್ಯರು ವಿಭಕ್ತ ಕುಟುಂಬದಡೆಗೆ ಒಲವು ತೋರಿದ್ದಾರೆ.

ದತ್ತಾಂಶ ಸಂಗ್ರಹದ ಸಮಯದಲ್ಲಿ ಈ ನಿರ್ಧಾರಕ್ಕೆ ಬರಲು ಪ್ರೇರೇಪಿಸಿದ ಕಾರಣಗಳನ್ನೂ ಚರ್ಚಿಸಲಾಯಿತು. ವಿಭಕ್ತ ಕುಟುಂಬದಲ್ಲಿ ವೈಯಕ್ತಿಕ ಸ್ವಾತಂತ್ರ್ಯ, ವ್ಯಕ್ತಿಗತ ಹಿತಾಸಕ್ತಿ ಹಾಗೂ ವ್ಯಕ್ತಿಗತ ಹಕ್ಕುಗಳ ಬಗೆಗೆ ಹೆಚ್ಚಿನ ಸ್ವಾತಂತ್ರ್ಯ ಸಿಗದೇ ಇದ್ದರೂ ಸ್ವಲ್ಪ ಮಟ್ಟಿಗಾದರೂ ಸ್ವಾತಂತ್ರ್ಯ ಸಿಗುವುದು ಎಂಬುದು ಅವರ ವಾದವಾಗಿದೆ. ಕೌಟುಂಬಿಕ ಅಧಿಕಾರ, ಸ್ವಾತಂತ್ರ್ಯ, ಪ್ರತಿಷ್ಠೆಗಳೇ ಮೇಲುಗೈ ಸಾಧಿಸಿದ್ದು ಈ ವಿಘಟಿತ ಕುಟಂಬದತ್ತ ಒಲವು ತೋರಲು ಕಾರಣವಾಗಿದೆ ಎನ್ನಬಹುದಾಗಿದೆ.

ಆದರೆ ವಿಕೇಂದ್ರೀಕೃತ ಅವಿಭಕ್ತ ಕುಟುಂಬದತ್ತಲೂ ಕೆಲವು ಮಹಿಳೆಯರು ಒಲವು ತೋರಿದ್ದಾರೆ. ಇದಕ್ಕೆ ಮೂಲ ಕಾರಣ ಖರ್ಚುವೆಚ್ಚಗಳನ್ನು ಸಮಪಾಲು ಆಗಿಸಿಕೊಳ್ಳುವುದು. ಮಕ್ಕಳ ಶಿಕ್ಷಣ, ಮದುವೆ, ಆರೋಗ್ಯ ಮುಂತಾದ ಕಾರಣಗಳಿಗೆ ತಗಲುವ ವೆಚ್ಚವನ್ನು ಸಮಭಾಗಿಯಾಗಿ ಹೊರಲು ಅನುಕೂಲವಾಗುವಂಥ ವ್ಯವಸ್ಥೆಯತ್ತಲೂ ಹೇಳಿಕೆದಾರರು ವಾಲಿದ್ದಾರೆ. ಇಲ್ಲಿ ಬಿಡಿ ಕುಟುಂಬದ ಸ್ವಾತಂತ್ರ್ಯ, ಅಧಿಕಾರಗಳೂ ಲಭ್ಯ. ಕೂಡುಕುಟುಂಬದ ಸಹಕಾರ ಸಾಮರಸ್ಯಗಳೂ ಅನುಕೂಲಗಳೂ ಲಭ್ಯ. ಒಟ್ಟಾರೆಯಾಗಿ ಎರಡೂ ಪದ್ಧತಿಯ ಅನುಕೂಲಗಳನ್ನು ಸಮೀಕರಿಸಿದ ಈ ಕುಟುಂಬದತ್ತಲೂ ಜನ ಒಲವು ತೋರಿದ್ದಾರೆ. ಇದಕ್ಕೂ ಮುಖ್ಯವಾದ ಇನ್ನೊಂದು ಕಾರಣವೆಂದರೆ ಮಾನಸಿಕವಾಗಿ ಬಿಡಿ ಕುಟುಂಬಕ್ಕೆ ಸಂಪೂರ್ಣವಾಗಿ ಸಿದ್ಧರಾಗಿದ್ದಾರೆ ಎಂದೂ ಹೇಳಬಹುದಾಗಿದೆ. ಕರುಳುಬಳ್ಳಿಯ ಸಂಬಂಧ ಕೊನೆತನಕ ಎಂಬ ನಂಬಿಕೆ ಈ ವ್ಯವಸ್ಥೆಯನ್ನು ಜೀವಂತವಾಗಿರಿಸಿದೆ ಎಂದೂ ತಿಳಿದು ಬಂದಿತು.

ಆದರೂ ಗಂಡ ಹೆಂಡತಿ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಬಿಡಿಕುಟುಂಬವನ್ನೇ ಬಯಸುತ್ತಾರೆ ಎಂಬುದೂ ಸ್ಪಷ್ಟವಾಯಿತು. ಕುಟುಂಬದ ಆಯ್ಕೆಯಲ್ಲಿಯೂ ಬದಲಾವಣೆ ಕಂಡುಬರುತ್ತಿದೆ. ಇದೂ ಸಬಲೀಕರಣದ ಮುಖ್ಯ ಲಕ್ಷಣವೆಂದೇ ಹೇಳಬಹುದು. ಕೂಡುಕುಟುಂಬದಲ್ಲಿ ಮಹಿಳೆಯೊಂದು ಪಾತ್ರವಾಗಿ ಮಾತ್ರ ಕಾರ್ಯನಿರ್ವಹಿಸುತ್ತಿದ್ದಳು. ಬಿಡಿಕುಟುಂಬದಲ್ಲಿ ಸೂತ್ರವಾಗಿ ಜವಾಬ್ದಾರಿಯನ್ನು ಹಂಚಿಕೊಳ್ಳುತ್ತಿದ್ದಾಳೆ. ಆಮಟ್ಟಿಗೆ ಸಬಲೀಕರಣದ ಒಂದು ಲಕ್ಷಣ ಈ ಬದಲಾವಣೆಯಲ್ಲಿ ಕಾಣಬಹುದಾಗಿದೆ.

ಕುಟುಂಬ ಯೋಜನೆ: ಕುಟುಂಬ ಯೋಜನೆಯು ಜನಸಂಖ್ಯೆಯ ನಿಯಂತ್ರಣದ ಸಾಧನವಾಗಿ ಬಳಸಲಾಗುತ್ತಿದೆ. ಪ್ರತಿಯೊಂದು ಸಮಾಜವೂ ಜನನ ನಿಯಂತ್ರಣಕ್ಕಾಗಿ ಒಂದಲ್ಲ ಒಂದು ಬಗೆಯ ಪದ್ಧತಿಗಳನ್ನು ಅನುಸರಿಸಿದೆ. ಆದರೆ ಹಿಂದಿನ ದಿನಗಳಲ್ಲಿ ಶಿಶುಮರಣದರ ಹೆಚ್ಚಾಗಿದ್ದರಿಂದ ಹೆಚ್ಚು ಹೆಚ್ಚು ಮಕ್ಕಳನ್ನು ಹೆರುವುದು ಪ್ರೋತ್ಸಾಹಿಸಲಾಗುತ್ತಿತ್ತು. ಕೃಷಿ ಮೂಲ ಕುಟುಂಬಕ್ಕೆ ದುಡಿಯುವ

ಕೈಗಳ ಲೆಕ್ಕಾಚಾರ ಮಾಡುತ್ತಿದ್ದರು. ಅದರಲ್ಲಿಯೂ ಬದುಕುಳಿಯುವ ಮಕ್ಕಳ ಸಂಖ್ಯೆ ಅತೀ ಕಡಿಮೆಯಾಗಿತ್ತು.

ಆದರೆ ಮೂಲ ಭಾರತೀಯ ಸಮಾಜವೂ ಕೃಷಿ ಆಧಾರಿತ ಸಮಾಜವಾಗಿದ್ದರಿಂದ ಅತಿಹೆಚ್ಚಿನ ಮಕ್ಕಳನ್ನು ಹೊಂದುವುದೇ ಲೇಸು ಎಂದು ಬಗೆಯುತ್ತಿದ್ದರು. ಮಹಿಳೆಯರಿಗೆ ಸಾಧ್ಯವಿದ್ದಷ್ಟೂ ಹೆರಲು ಪ್ರೋತ್ಸಾಹಿಸಲಾಗುತ್ತಿತ್ತು. ಆದರೆ ನಗರೀಕರಣ, ಕೈಗಾರಿಕೀಕರಣದಿಂದಾಗಿ ಬದುಕು ಬದಲಾಯಿತು. ವೈದ್ಯವಿಜ್ಞಾನವೂ ಮುಂದುವರಿದಿದ್ದು ಶಿಶುಮರಣದರ ಗಮನೀಯ ಪ್ರಮಾಣದಲ್ಲಿ ಕಡಿಮೆಯಾಯಿತು.

ಆದರೆ ಇದಕ್ಕೆ ಪ್ರತಿಯಾಗಿ ಜನನ ದರ ಪ್ರಮಾಣದ ಮೇಲೆ ಕಡಿವಾಣ ಹಾಕುವುದು ಆಗಲಿಲ್ಲ. ಪರಿಣಾಮವಾಗಿ ಜನಸಂಖ್ಯೆ ಅಪಾರ ಪ್ರಮಾಣದಲ್ಲಿ ಬೆಳೆಯಿತು. ಒಂದು ಹಂತದಲ್ಲಿ ಇದನ್ನು ಜನಸಂಖ್ಯಾ ಸ್ಫೋಟವೆಂದೇ ಕರೆಯಲಾಯಿತು. ಇದರ ಪರಿಣಾಮವಾಗಿ ಬಡತನ, ಅನಕ್ಷರತೆ, ನಿರುದ್ಯೋಗ, ಬಿಕ್ಷಾಟನೆ, ವೇಶ್ಯಾವಾಟಿಕೆ, ಬಾಲಕಾರ್ಮಿಕೆ ಮತ್ತು ನಿರಾಶ್ರಿತರ ಸಂಖ್ಯೆ ಹೆಚ್ಚಾಯಿತು. ಮೂಲ ಸೌಕರ್ಯಗಳ ಕೊರತೆ ಕಂಡುಬಂದಿತು. ಇದನ್ನೇ ಜನಸಂಖ್ಯಾ ಸ್ಫೋಟದ ಪರಿಣಾಮವೆಂದು ಕರೆಯಲಾಯಿತು. ಇದಕ್ಕೆ ಪರಿಹಾರವಾಗಿ ಜನನ ನಿಯಂತ್ರಣ ಉಪಾಯದತ್ತ ಒಲವು ತೋರತೊಡಗಿದರು.

ಈ ಕಾರಣದಿಂದಾಗಿ ರಾಷ್ಟ್ರೀಯ ಯೋಜನೆಯಲ್ಲಿಯೇ ಕುಟುಂಬ ಯೋಜನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ರಾಷ್ಟ್ರನಾಯಕರು ಆಲೋಚಿಸಿದರು. ಪರಿಣಾಮವಾಗಿ 1952ರಲ್ಲಿ ಭಾರತೀಯ ಕುಟುಂಬ ಯೋಜನೆ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಜನನ ನಿಯಂತ್ರಣಕ್ಕೆಂದೇ ರಾಷ್ಟ್ರೀಯ ಯೋಜನೆಯನ್ನು ಅನುಷ್ಠಾನಕ್ಕೆ ತರುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿತ್ತು. ಆ ಸಮಯದಲ್ಲಿ ಜಾಗತಿಕವಾಗಿ ಹಲವಾರು ರಾಷ್ಟ್ರಗಳು ಈ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂಬ ಮಾನ್ಯತೆಯನ್ನು ನೀಡಿದ್ದವು. ಜನನ ದರವನ್ನು ನಿಯಂತ್ರಿಸುವ ಈ ಯೋಜನೆಯನ್ನು ಒಪ್ಪಿಕೊಂಡ ಮೊದಲ ರಾಷ್ಟ್ರಗಳ ಸಾಲಿನಲ್ಲಿಯೇ ಭಾರತವೂ ಒಂದಾಗಿದೆ.

ಸಣ್ಣ ಕುಟುಂಬಕ್ಕೆ ಪ್ರಚಾರ: ಭಾರತ ಸರ್ಕಾರವು ಕುಟುಂಬದ ಗಾತ್ರವನ್ನು ಸಣ್ಣದಾಗಿಸುವುದಕ್ಕೆ ಹೆಚ್ಚಿನ ಮಹತ್ವ ನೀಡುವಂಥ ಹಲವಾರು ಯೋಜನೆಗಳನ್ನು ಕಾರ್ಯರೂಪಕ್ಕೆ ತಂದಿತು. ಇದನ್ನು ಜನಪ್ರಿಯಗೊಳಿಸುವುದರೊಂದಿಗೆ ಜನನ ನಿಯಂತ್ರಣಕ್ಕೆ ಸರಳ ಸೂತ್ರಗಳನ್ನು ಪರಿಚಯಿಸ ಲಾರಂಭಿಸಿತು. ಗರ್ಭನಿರೋಧಕ ಸಾಧನಗಳ ಬಳಕೆ, ಶಸ್ತ್ರಚಿಕಿತ್ಸೆ ಮುಂತಾದವುಗಳಿಗೆ ಪ್ರಚಾರ ನೀಡಲಾರಂಭಿಸಿತು. ಇದಕ್ಕಾಗಿಯೆಂದೇ ಅಂಗನವಾಡಿ ಕಾರ್ಯಕರ್ತರ ಸಹಾಯ ಪಡೆಯಿತು. ಗ್ರಾಮೀಣ ಪ್ರದೇಶಗಳಲ್ಲಿ ಈಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅದಕ್ಕೆ ಪೂರಕವಾಗಿ ಉಪಕೇಂದ್ರಗಳನ್ನು ಆರಂಭಿಸಿತು.

ಶಿಶು ಮರಣ ದರದಲ್ಲಿ ನಿಯಂತ್ರಣ ತರುವುದರೊಂದಿಗೆ ಪೋಲಿಯೋದಂತಹ ರೋಗಗಳ ನಿವಾರಣೆಗೆ ಚಳವಳಿಗಳನ್ನೇ ಆರಂಭಿಸಿ ಯುದ್ಧೋಪಾದಿಯ ಕ್ರಮಗಳನ್ನು ಕೈಗೊಂಡಿತು. ಇದಕ್ಕೆಲ್ಲ ಮೂಲವಾಗಿದ್ದು ಆರೋಗ್ಯವಂತ ಸಣ್ಣ ಕುಟುಂಬದ ಪರಿಕಲ್ಪನೆ.

"ಸಣ್ಣ ಕುಟುಂಬದತ್ತ ಒಲವು ಹೆಚ್ಚಿರುವುದು ಹಲವಾರು ಅಧ್ಯಯನಗಳಿಂದ ತಿಳಿದುಬಂದಿದೆ. ಸಾಮಾಜಿಕವಾಗಿ ಕುಟುಂಬದ ಗಾತ್ರ ಕುಗ್ಗತೊಡಗಿತು. ಈ ಗ್ರಾಮೀಣ ಪ್ರದೇಶದಲ್ಲಿಯೂ ಸಣ್ಣಕುಟುಂಬದ ಗಾಳಿಬೀಸತೊಡಗಿತು. ಈ ಉದ್ದೇಶ ಸಾಧನೆಗೆ ಸ್ವಯಂ ಸೇವಾ ಸಂಸ್ಥೆಗಳ ಪಾತ್ರವೂ ಹಿರಿದಾಗಿದೆ. ಈ ಸಂಸ್ಥೆಗಳು ಮಹಿಳೆಯರಿಗೆ ಸಣ್ಣ ಕುಟುಂಬದ ಮೂಲ ಅಂಶಗಳನ್ನು ಮನದಟ್ಟು ಮಾಡಿಕೊಡುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಈಗ ಈ ಸಂಶೋಧನೆಯಲ್ಲಿ ಕುಟುಂಬ ಯೋಜನೆ ಹಾಗೂ ಕುಟುಂಬ ಕಲ್ಯಾಣವೆರಡನ್ನೂ ಸಂಯೋಜಿಸಿ ಕೆಲ ವಿಷಯಗಳನ್ನು ಅಧ್ಯಯನಿಸಲಾಯಿತು.

1. ಕುಟುಂಬ ಯೋಜನೆಯಲ್ಲಿ ನಂಬಿಕೆ
2. ಕುಟುಂಬ ಯೋಜನೆಯ ಲಾಭ ಮತ್ತು ಹಾನಿಗಳು
3. ಬಯಸುವ ಮಕ್ಕಳ ಸಂಖ್ಯೆ
4. ಗಂಡು ಮಗುವಿಗಾಗಿ ಆದ್ಯತೆ

ಈ ಅಂಶಗಳನ್ನು ಇಲ್ಲಿ ಪ್ರತ್ಯೇಕವಾಗಿ ವಿಶ್ಲೇಷಿಸಲಾಗಿದೆ.

ಕುಟುಂಬ ಯೋಜನೆಯ ಬಗೆಗೆ ಭಾವನಾತ್ಮಕ ಬದಲಾವಣೆಗಳು ಆಗುತ್ತಿವೆ ಎಂಬುದನ್ನು ಅನೇಕ ಅಧ್ಯಯನಗಳು ಈಗಾಗಲೇ ಋಜುವಾತು ಪಡಿಸಿವೆ. ಜನನ ನಿಯಂತ್ರಣದ ಬಗೆಗೆ ಬದುಕನ್ನು ಬದಲಿಸುವ ಸಾಧನ ಎಂಬ ಪ್ರಬಲ ಮನೋಭಾವ ಭಿತ್ತಿಯಲ್ಲಿ ಬೆಳೆಯುತ್ತಿದೆ ಎಂದು ಶ್ರೀವಾತ್ಸವ ರವರು ತಮ್ಮ ಸ್ತ್ರೀವಾದಿ ಸಿದ್ಧಾಂತದಲ್ಲಿ ಹೇಳಿದ್ದಾರೆ"[5]

ಕುಟುಂಬ ಯೋಜನೆಯಲ್ಲಿ ನಂಬಿಕೆ ಬೆಳೆಯಲು ಕಾರಣಗಳು:

1. ಗ್ರಾಮೀಣ ಭಾಗದಲ್ಲಿ ಶಿಶುಮರಣ ದರದಲ್ಲಿ ಇಳಿಕೆ.
2. ಮಕ್ಕಳ ಜೀವಿತಾವಧಿಯಲ್ಲಿ ಹೆಚ್ಚಳ
3. ಮಕ್ಕಳ ಅಭಿವೃದ್ಧಿಯತ್ತ ಪಾಲಕರು ಗಮನ ಕೇಂದ್ರೀಕರಿಸುತ್ತಿರುವುದು.
4. ಸಣ್ಣ ಕುಟುಂಬದ ಬಗೆಗೆ ಪ್ರಚಾರ, ಆರೋಗ್ಯಕ್ಕೆ ಸಂಬಂಧಿಸಿದಂತೆ ಸಹಾಯಗಳು, ಹೆರಿಗೆ, ಸುರಕ್ಷಿತ ಸಂಸಾರ ಮುಂತಾದವುಗಳು.
5. ಸೌಲಭ್ಯಕ್ಕಾಗಿ ನಗರ ಪ್ರದೇಶಗಳಿಗೆ ವಲಸೆ ಬರುವುದು.

ಈ ಎಲ್ಲ ಕಾರಣಗಳಿಂದಾಗಿ ಕುಟುಂಬ ಕಲ್ಯಾಣ ಯೋಜನೆ ಯಶಸ್ವಿಯಾಗತೊಡಗಿತು. ಜನನ ನಿಯಂತ್ರಣ ಧರ್ಮಕ್ಕೆ ವಿರೋಧ ಎಂದು ಭಾವಿಸಿದವರೂ ಗುಣಮಟ್ಟದ ಬದುಕನ್ನು ಕಂಡು ತಮ್ಮ

ತೀರ್ಮಾನವನ್ನು ಬದಲಿಸತೊಡಗಿದರು. ಇದರಿಂದ ಹೆರುವ-ಹೊರುವ ಯಂತ್ರವಾಗಿ ಕಾಣುವುದು ಕಡಿಮೆಯಾಯಿತು.

1. ಗ್ರಾಮೀಣ ಪ್ರದೇಶದಲ್ಲಿ ಶಿಶುಮರಣ ಅನುಪಾತದಲ್ಲಿ ಇಳಿತ ಕಂಡುಬಂದದ್ದು:

ವೈದ್ಯಕೀಯ ಸೌಲಭ್ಯಗಳು ಗ್ರಾಮೀಣ ಪ್ರದೇಶಕ್ಕೆ ತಲುಪಿದಂತೆ ಶಿಶುಮರಣದರಕ್ಕೆ ಕಡಿವಾಣ ಬಿತ್ತು. ಹಸುಕೂಸಿನ ಜೀವಿತಾವಧಿ ಹೆಚ್ಚತೊಡಗಿತು. ತಾಲ್ಲೂಕು ಪ್ರದೇಶಗಳಷ್ಟೇ ಅಲ್ಲ, ಗ್ರಾಮ ಪಂಚಾಯತಿ, ಹಳ್ಳಿಹಳ್ಳಿಗೂ ಪ್ರಾಥಮಿಕ ಸಹಾಯ ಕೇಂದ್ರ ಹಾಗೂ ಅಂಗನವಾಡಿ ಸಂಸ್ಥೆಗಳ ಮೂಲಕ ವೈದ್ಯಕೀಯ ಸೌಲಭ್ಯಗಳು ಸಾಮಾನ್ಯರಿಗೂ ಎಟುಕತೊಡಗಿದವು. ಅಷ್ಟೇ ಅಲ್ಲ ಅವಕಾಶಗಳು ಹಾಗೂ ಕೆಲಸವನ್ನು ಅರಸುತ್ತ ವೈದ್ಯಕೀಯ ಸೇವೆಯಲ್ಲಿ ಇರುವವರು ಗ್ರಾಮೀಣ ಪ್ರದೇಶದತ್ತ ವಲಸೆ ಬರಲಾರಂಭಿಸಿದರು. ರೋಗಿಗಳು ಹಾಗೂ ಅಗತ್ಯವಿದ್ದವರಿಗೆ ವೈದ್ಯಕೀಯ ಸೌಲತ್ತುಗಳು ದೊರಕಲಾರಂಭಿಸಿದವು. ಪರಿಣಾಮವಾಗಿ ಶಿಶು ಮರಣ ದರ 5-ವರ್ಷದೊಳಗಿನ ಮಕ್ಕಳ ಮರಣದರದಲ್ಲಿ ಕಡಿತ ಕಂಡು ಬಂದಿತು. ಆ ವಯಸ್ಸಿನ ಮಕ್ಕಳಿಗೆ ಕಾಡುತ್ತಿದ್ದ ಮಾರಣಾಂತಿಕ ರೋಗಗಳ ಮೇಲೆ ನಿಯಂತ್ರಣ ಹೇರಲು ಸಾಧ್ಯವಾಯಿತು. ನೈರ್ಮಲ್ಯ, ಪೌಷ್ಟಿಕಾಂಶದ ಕೊರತೆಯಿಂದ ಕೆಲವೊಮ್ಮೆ ಸಾವಿಗೀಡಾಗುತ್ತಿದ್ದ ಮಕ್ಕಳ ಸಂಖ್ಯೆಯೂ ಕಡಿಮೆಯಾಗತೊಡಗಿತು.

ಗ್ರಾಮೀಣ ಪ್ರದೇಶದಲ್ಲಿ ಹೆಚ್ಚುತ್ತಿರುವ ಜಾಗೃತಿ, ಸಾಕ್ಷರತೆ ಪ್ರಮಾಣ ಇವೂ ಸಹ ಶಿಶುಮರಣದರದಲ್ಲಿ ಕಡಿಮೆಯಾಗಲು ಕಾರಣವಾಯಿತು. ಮರಣದರದಲ್ಲಿ ಕಡಿಮೆ ಕಂಡು ಬಂದದ್ದು ತಾಯಂದಿರಿಗೆ ಅನುಕೂಲವಾಯಿತು. ಇದಕ್ಕೆಲ್ಲ ಕಾರಣವಾಗಿದ್ದು ಗ್ರಾಮೀಣ ಜನರ ಮನೋಭಾವದಲ್ಲಿ ಆದ ಬದಲಾವಣೆ. ಹಾಗೂ ಸುಧಾರಣೆ. ಅದಕ್ಕೆ ಮೂಲಸಾಧನವಾದುದು ಆಧುನೀಕರಣ ಹಾಗೂ ಪ್ರಗತಿಪರ ಚಿಂತನಾಕ್ರಮ.

2. ಶಿಶುಮರಣದರದಲ್ಲಿ ಕಡಿಮೆಯಾಗಿದ್ದು ಮಕ್ಕಳ ಜೀವಿತಾವಧಿಯನ್ನೂ ಹೆಚ್ಚಿಸತೊಡಗಿತು.

ಜೀವಿತಾವಧಿಯು ಹೆಚ್ಚಾದಂತೆಲ್ಲ ಪಾಲಕರ ಒಲವು ಕುಟುಂಬಯೋಜನೆಯತ್ತ ವಾಲತೊಡಗಿತು. ಕೇವಲ ವೈದ್ಯಕೀಯ ಸೌಕರ್ಯದಿಂದ ಮರಣದರದ ನಿಯಂತ್ರಣವಷ್ಟೇ ಅಲ್ಲ, ಅದಕ್ಕೆ ಪೂರಕವಾಗಿ ಮಕ್ಕಳಿಗೆ ಶಿಕ್ಷಣವನ್ನೂ ನೀಡಬಹುದು ಎಂಬ ಆತ್ಮವಿಶ್ವಾಸವೂ ಮೂಡತೊಡಗಿತು. ಅಂಗನವಾಡಿ ಕೇಂದ್ರ, ಪ್ರಾಥಮಿಕ ಶಿಕ್ಷಣಕ್ಕೆ ಪ್ರೋತ್ಸಾಹ ಇವೆಲ್ಲವೂ ಪಾಲಕರಲ್ಲಿ ಅಭಿವೃದ್ಧಿಪರ ವಿಶ್ವಾಸವನ್ನೇ ಬೆಳೆಸತೊಡಗಿದವು. ಆರೋಗ್ಯವಂತ ಮಕ್ಕಳ ಮರಣದರವನ್ನು ಹಿಂದಿನದಕ್ಕೆ ಹೋಲಿಸಿದರೆ ಆರು ದಶಕಗಳ ಹಿಂದೆಗಿಂತ ಅತ್ಯುತ್ತಮ ಬದುಕು ಅವರದ್ದಾಯಿತು. ಬದುಕಿಗೊಂದು ಭರವಸೆ ದೊರೆಯಿತು.

3. ಮಕ್ಕಳ ಅಭಿವೃದ್ಧಿಯತ್ತ ಹೆಚ್ಚುತ್ತಿರುವ ಪಾಲಕರ ಒಲವು:

ಗ್ರಾಮೀಣ ಜನರಲ್ಲಿಯೂ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಯತ್ತ ಒಲವು ಹೆಚ್ಚುತ್ತಿದೆ. ಉತ್ತಮ ಆರೋಗ್ಯ, ಉತ್ತಮ ಶಿಕ್ಷಣ, ಉತ್ತಮ ಜೀವನಮಟ್ಟ ಮುಂತಾದ ಪರಿಕಲ್ಪನೆಗಳು ಈಗ ಸ್ಪಷ್ಟವಾಗುತ್ತಿದೆ. ಪ್ರಮಾಣಕ್ಕಿಂತ ಗುಣಾತ್ಮಕ ಬದುಕಿನೆಡೆ ಹೆಚ್ಚಿನ ಗಮನ ಕೇಂದ್ರೀಕರಿಸಲಾರಂಭಿಸಿದ್ದಾರೆ. ಜೀವನ ಮಟ್ಟ ಸುಧಾರಣೆ ಹಾಗೂ ಬದಲಾವಣೆಯತ್ತ ಹಾತೊರೆಯುತ್ತಿದ್ದ ಪಾಲಕರು ಕುಟುಂಬ ಯೋಜನೆಯತ್ತ ವಾಲತೊಡಗಿದರು.

4. ಸಣ್ಣ ಕುಟುಂಬದ ಬಗ್ಗೆ ಸರ್ಕಾರದ ಪ್ರಚಾರ:

ಭಾರತ ಸರ್ಕಾರವು ಸಣ್ಣ ಕುಟುಂಬಕ್ಕೆ ನೀಡಿದ ಪ್ರಚಾರವೂ ಈ ಬೆಳವಣಿಗೆಗೆ ಕಾರಣವಾಯಿತು. ಕುಟುಂಬ ಯೋಜನೆಯನ್ನು ಪ್ರತಿ ಮನೆಯ ಬಾಗಿಲಿಗೆ ಪರಿಚಯಿಸುವ ಕೆಲಸ ಆರಂಭವಾಯಿತು. ಈ ದಿಸೆಯಲ್ಲಿ ಹೆರಿಗೆ, ಚಿಕಿತ್ಸೆ, ನೈರ್ಮಲ್ಯ, ಆರೋಗ್ಯ ಎಲ್ಲವನ್ನೂ ನೀಡಲಾಯಿತು. ಇದೇ ಆರೋಗ್ಯವಂತ ಶಿಶುವಿನ ಜನನಕ್ಕೂ ಪೂರಕ ವಾತಾವರಣ ಕಲ್ಪಿಸಿತು. ಈ ಎಲ್ಲ ಸೌಲಭ್ಯಗಳೂ ತಳಮಟ್ಟದಿಂದಲೇ ಎಂದರೆ ಗ್ರಾಮೀಣ ಭಾರತದಿಂದಲೇ ಆರಂಭವಾದವು ಎಂಬುದು ಗಮನೀಯ. ಗ್ರಾಮೀಣ ಬದುಕಿನಲ್ಲಿಯೂ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಮಹತ್ವ ನೀಡುವುದೇ ಈ ಕಾರ್ಯಕ್ರಮದ ಉದ್ದೇಶದಲ್ಲಿ ಸೇರಿಕೊಂಡಿತು. ಇದೇ ಕಾರಣಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿ ಗ್ರಾಮೀಣ ಪ್ರದೇಶದ ಸಾಮಾಜಿಕ ಆರ್ಥಿಕ ಪರಿಸ್ಥಿತಿಗೆ ಉತ್ತೇಜನಕಾರಿಯಾಗುವಂಥ ವಿವಿಧ ತಂತ್ರಗಳನ್ನು ಹಂತಹಂತವಾಗಿ ಸೇರಿಸಲಾಯಿತು.

5. ನಗರ ಪ್ರದೇಶಗಳ ಸಾಮೀಪ್ಯ:

ಸಾರಿಗೆ ಸಂಪರ್ಕ ಸಾಧನಗಳಾದ ರೈಲು, ಬಸ್ಸುಗಳು, ರಸ್ತೆ, ಹೆದ್ದಾರಿ ರೈಲು ಮಾರ್ಗಗಳು ಇವೆಲ್ಲವೂ ಗ್ರಾಮೀಣ ಪ್ರದೇಶವನ್ನು ನಗರಗಳೊಂದಿಗೆ ಬೆಸೆಯುವ ಸಾಧನಗಳು ಸಿದ್ಧವಾಗಿವೆ. ಸಾಗಾಟ ಸಂಪೂರ್ಣವಾಗಿ ಕಡಿಮೆ ವೆಚ್ಚ, ಶ್ರಮದ ಕೆಲಸವಾಗಿದೆ. ದೂರ ಸಂಪರ್ಕ, ವಿದ್ಯುತ್ತು, ವೈದ್ಯಕೀಯ ಸೌಲಭ್ಯ, ಮನರಂಜನೆ ಇವೆಲ್ಲವೂ ನಗರಗಳೊಂದಿಗೆ ಹಳ್ಳಿಗಳನ್ನು ಬೆಸೆಯುವ ಪ್ರಮುಖ ಆಕರ್ಷಣೆಗಳಾಗಿವೆ ಎಂದೂ ಹೇಳಬಹುದಾಗಿದೆ. ಇದೇ ಕಾರಣಕ್ಕೆ ವೈದ್ಯಕೀಯ ತಪಾಸಣೆ, ಚಿಕಿತ್ಸೆ ಅಥವಾ ಸಮಾಲೋಚನೆ ಯಾವುದೂ ಈಗ ದುರ್ಭರವಾಗಿಲ್ಲ. ಎಲ್ಲವೂ ಸರಳವಾಗಿ, ಸುಲಭವಾಗಿ ಗ್ರಾಮೀಣರಿಗೆ ಎಟುಕುವಂತಾಗಿದೆ.

ಇವೆಲ್ಲ ಅಂಶಗಳನ್ನು ಗಮನಿಸಿದಾಗ ಕುಟುಂಬ ಯೋಜನೆಗೆ ಅಗತ್ಯವಿರುವ ಮಾನಸಿಕ ಮತ್ತು ಭೌತಿಕ ಸೌಕರ್ಯಗಳು ಗ್ರಾಮೀಣ ಜನರ ಕೈಗೆಟುಕಿದಾಗ ಅವರ ಮನೋಭಾವದಲ್ಲಿ ಬದಲಾವಣೆ ಕಂಡುಬಂದಿತು ಎಂದು ಹೇಳಬಹುದಾಗಿದೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ

ಗ್ರಾಮೀಣ ಜನರ ಬದುಕು ಬದಲಾಗುತ್ತಿದೆ. ಅದರೊಂದಿಗೆ ಅವರ ಮನೋಭಾವವೂ ಬದಲಾಗುತ್ತಿದೆ. ಹೀಗಾಗಿ ಗ್ರಾಮೀಣ ಮಹಿಳೆಯರು ಕುಟುಂಬ ಯೋಜನೆಯಲ್ಲಿ ಹೊಂದಿರುವ ನಂಬಿಕೆಯನ್ನು ಕೆಲವೊಂದು ಪ್ರಶ್ನೆಗಳನ್ನು ಕೇಳಿ, ಚರ್ಚಿಸಿ, ಅಭಿಪ್ರಾಯಗಳನ್ನು ಸಂಗ್ರಹಿಸಲಾಯಿತು.

ಕೋಷ್ಟಕ 5.1.5

ಕುಟುಂಬ ಯೋಜನೆಯಲ್ಲಿ ನಂಬಿಕೆ ಕುರಿತಾದ ವಿವರ

ಕ್ರ ಸಂ.	ಕುಟುಂಬ ಯೋಜನೆಯಲ್ಲಿ ನಂಬಿಕೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇ.
01.	ಬಹುಮಟ್ಟಿಗೆ	90	75%	110	61%	210	67%
02.	ಸ್ವಲ್ಪ ಮಟ್ಟಿಗೆ	20	17%	55	30%	75	25%
03.	ಇಲ್ಲವೇ ಇಲ್ಲ	10	08%	15	09%	25	08%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕವು ಸಂಶೋಧನೆಗೆ ಪರಿಗಣಿಸಿರುವ ಪ್ರತಿನಿಧಿಗಳು ಕುಟುಂಬ ಯೋಜನೆಯನ್ನು ಬಹುಮಟ್ಟಿಗೆ ನಂಬುತ್ತಾರೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಶೇ 67ರಷ್ಟು ಜನ ಬಹುಮಟ್ಟಿಗೆ ಕುಟುಂಬ ಯೋಜನೆಯಲ್ಲಿ ನಂಬಿಕೆ ಇರಿಸಿದ್ದಾರೆ ಎಂಬುದು ತೋರಿಸಿಕೊಡುತ್ತದೆ. ಪದಾಧಿಕಾರಿಗಳಲ್ಲಿ ಶೇ.75ರಷ್ಟು ಜನರು ಕುಟುಂಬ ಯೋಜನೆಯನ್ನು ತಮ್ಮ ಬದುಕಿನ ಅನುಕೂಲವೆಂದೇ ಅರಿತಿದ್ದಾರೆ.

ಪ್ರತಿನಿಧಿಗಳೊಂದಿಗೆ ಚರ್ಚಿಸಿದಾಗ ಬೇಡದ ಬಸಿರು, ಅನಗತ್ಯದ ಗರ್ಭಪಾತ, ಇಂಥ ಸಮಸ್ಯೆಗಳಿಗೆ ಬದಲಾಗಿ ಕುಟುಂಬ ಯೋಜನೆಯನ್ನು ಅನುಸರಿಸುವುದೇ ಒಳಿತು ಎಂಬ ನಂಬಿಕೆ ಅವರಲ್ಲಿ ಬೆಳೆದಿದೆ ಎಂದು ಕಂಡು ಬಂದಿತು. ಶೇ.25 ರಷ್ಟು ಜನ ಸ್ವಲ್ಪ ಮಟ್ಟಿಗೆ ಕುಟುಂಬ ಯೋಜನೆಯನ್ನು ನಂಬುತ್ತಾರೆ. ಅವರಲ್ಲಿ ಈಗಲೂ ಹೆರುವ ಶಕ್ತಿ ದೇವರು ನೀಡಿದ ದೇಣಿಗೆ ಎಂಬ ಕಲ್ಪನೆ ಇದೆ. ಆದರೆ ಸುಲಲಿತ ಬದುಕಿಗೆ ಇದು ಆಧಾರವಾಗುತ್ತದೆ ಎಂಬುದನ್ನೂ ಅವರು ಅಲ್ಲಗಳೆಯುವುದಿಲ್ಲ. ಸಂಪೂರ್ಣವಾಗಿ ಅಲ್ಲದಿದ್ದರೂ ಕೆಲಮಟ್ಟಿಗೆ ನಂಬಲು ಇದೇ ಕಾರಣವಾಗಿದೆ. ಶೇ.8 ರಷ್ಟು ಜನರು ಮಾತ್ರ ಇದನ್ನು ನಂಬುವುದೇ ಇಲ್ಲ ಎಂದು ಹೇಳಿದ್ದಾರೆ. ಇದಕ್ಕೆ ಅವರ ಪರಿವಾರ, ನಂಬಿಕೆಗಳೂ ಕಾರಣವಾಗಿವೆ ಎನ್ನಬಹುದಾಗಿದೆ.

ಒಟ್ಟಾರೆಯಾಗಿ ಗಮನಿಸಿದಾಗ ಮಹಿಳೆಯ ಹೆರಿಗೆಯ ಯಂತ್ರ ಎಂಬ ನಂಬಿಕೆ ಬುಡ ಸಮೇತ ಕಿತ್ತು ಹೋಗಿದೇ ವಿಚಾರಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆ ಕಂಡು ಬಂದಿದೆ ವಂಶಾಭಿವೃದ್ಧಿಯೊಂದಿಗೆ ಕೌಟುಂಬಿಕ ಬದುಕಿಗೆ ಆರೋಗ್ಯವಂತ ದಾಂಪತ್ಯ ಜೀವನದ ಬಗೆಗೂ ಜಾಗೃತಿ ಮೂಡಿದೆ. ಮಕ್ಕಳ ಸಂಖ್ಯೆಯ ತೀರ್ಮಾನದಲ್ಲಿ ಮಹಿಳೆಯರ ಪಾತ್ರ ಮಹತ್ವ

ಪಡೆಯುತ್ತಿರುವುದರಿಂದ ಮಹಿಳಾ ಸಬಲೀಕರಣವನ್ನು ಈ ಅಂಶ ಪುಷ್ಟೀಕರಿಸುತ್ತದೆ ಎಂದು ಹೇಳಬಹುದಾಗಿದೆ. ಹಾಗೆಯೇ ಕುಟುಂಬ ಯೋಜನೆಯ ಲಾಭ ಹಾನಿಗಳನ್ನು ಕುರಿತು ಮುಂದಿನ ಚರ್ಚೆಯಲ್ಲಿ ವಿಶ್ಲೇಷಿಸಲಾಗಿದೆ.

ಕುಟುಂಬ ಯೋಜನೆಯ ಲಾಭ ಮತ್ತು ಹಾನಿಗಳು:

ಈ ಅಧ್ಯಾಯದಲ್ಲಿ ಬರುವ ಈ ಭಾಗವು ಕುಟುಂಬ ಯೋಜನೆಯ ಲಾಭ ಹಾಗೂ ಹಾನಿಗಳನ್ನು ಗ್ರಾಮೀಣ ಮಹಿಳೆಯರು ಹೇಗೆ ಸ್ವೀಕರಿಸಿದ್ದಾರೆ ಎಂಬುದನ್ನು ತಿಳಿಸುತ್ತದೆ. ಇದು ಅನುಕೂಲವೆಂದು ಭಾವಿಸುವವರ ಮನೋಭಾವ ಅನಾನುಕೂಲವೆಂದುಕೊಂಡವರ ಮನೋ ಸಾಮರ್ಥ್ಯವನ್ನು ಗಮನಿಸುವುದಾಗಿದೆ.

ಕುಟುಂಬ ಯೋಜನೆಯನ್ನು ಅನುಕೂಲವೆಂದು ಭಾವಿಸಿ ಬದುಕಿನಲ್ಲಿ ಅಳವಡಿಸಿಕೊಳ್ಳುವುದು ಮನೋಸಾಮರ್ಥ್ಯವೆಂದು ಪರಿಭಾವಿಸಲಾಗಿದೆ. ಕುಟುಂಬ ಯೋಜನೆಯೆಂದರೆ ಕುಟುಂಬದ ಗಾತ್ರವನ್ನು ಕುಗ್ಗಿಸುವುದು ಎಂದೇ ಸಾಮಾನ್ಯವಾಗಿ ಅರ್ಥೈಸಲಾಗಿದೆ. ಹಲವಾರು ಅಧ್ಯಯನಗಳು ಸಂಶೋಧನೆಗಳು ಇದೇ ಅಂಶವನ್ನೇ ಎತ್ತಿ ಹಿಡಿದಿವೆ ಕುಟುಂಬದ ಗಾತ್ರವನ್ನು ಕುಗ್ಗಿಸುವುದು ಎಂದಾಗ ಅದರಲ್ಲಿ ಸಂಖ್ಯಾತ್ಮಕ ಅಷ್ಟೇ ಅಲ್ಲ, ಸಮಾಜಿಕ ಮೌಲ್ಯಗಳೂ ಪಾಲುದಾರಿಕೆ ಪಡೆದಿವೆ. ಗ್ರಾಮೀಣ ಭಾಗದಲ್ಲಿ ವಿಶೇಷವಾಗಿ ಮಹಿಳೆಯರಲ್ಲಿ ಇದು ಕೇವಲ ಕೌಟುಂಬಿಕ ಅನುಕೂಲಕ್ಕಾಗಿಯೇ ಇರುವ ಯೋಜನೆ ಎಂಬ ಅಂಶವೂ ಬೇರೂರಿದೆ. ಕುಟುಂಬ ಯೋಜನೆಯ ಪರ್ಯಾಯ ಸಮಸ್ಯೆಗಳು ಏನೇ ಇರಲಿ, ತೊಂದರೆಗಳೇನೇ ಇರಲಿ ಅವು ಈ ಸಂದರ್ಭದಲ್ಲಿ ಗೌಣವಾಗುತ್ತವೆ ಎಂದು ಹಲವಾರು ಸಂಶೋಧಕರು, ಸಮಾಜ ಶಾಸ್ತ್ರಜ್ಞರು ವಿಷದೀಕರಿಸಿದ್ದಾರೆ. ದೇಸಾಯಿ ಎಂಬ ಹೆಸರುಗಳನ್ನೆಲ್ಲ ಇಲ್ಲಿ ಹೆಸರಿಸಬಹುದಾಗಿದೆ.

ಕೋಷ್ಟಕ 5.1.6

ಕುಟುಂಬ ಯೋಜನೆಯ ಲಾಭ ಮತ್ತು ಹಾನಿಗಳ ಬಗೆಗಿನ ವಿವರ.

ಲಾಭ ಮತ್ತು ಹಾನಿಗಳ ಬಗೆಗಿನ ವಿವರ	ಪ್ರತಿನಿಧಿಗಳು			ಸದಸ್ಯರು			ಒಟ್ಟು		
	ಹೌದು	ಇಲ್ಲ	ಒಟ್ಟು	ಹೌದು	ಇಲ್ಲ	ಒಟ್ಟು	ಹೌದು	ಇಲ್ಲ	ಒಟ್ಟು
ಜೀವನಮಟ್ಟಸುಧಾರಿಸುವಲ್ಲಿ ಸಹಾಯಕವಾಗಿದೆ.	83	17	100	55	45	100	67	33	100
ಪಾಲಕರು ಹಾಗೂ ಮಕ್ಕಳ ಆರೋಗ್ಯ ರಕ್ಷಣೆಗೆ ಸಹಾಯಕವಾಗಿದೆ.	75	25	100	67	33	100	70	30	100
ಮನೆ ಮತ್ತು ಮಕ್ಕಳ ನಿರ್ವಹಣೆಗೆ ಅನುಕೂಲಕರವಾಗಿದೆ.	70	30	100	67	33	100	68	32	100

ಪತಿ ಪತ್ನಿಯ ನಡುವೆ ಗಟ್ಟಿಯಾದ ಅನುಬಂಧ	54	46	100	50	50	100	52	48	100
ಮಗ ಮತ್ತು ಮಗಳ ಬಗೆಗಿನ ಪ್ರಾಮುಖ್ಯವನ್ನು ಹೆಚ್ಚಿಸುತ್ತದೆ.	55	45	100	55	45	100	55	45	100
ಸಣ್ಣ ಕುಟುಂಬ ಅಭದ್ರ ಕುಟುಂಬ	65	35	100	72	28	100	67	33	100

ಈ ಕೋಷ್ಟಕದಲ್ಲಿ ಕುಟುಂಬ ಯೋಜನೆಯ ಲಾಭಾಂಶಗಳನ್ನೂ ಹಾಗೂ ಅನಾನುಕೂಲಗಳನ್ನು ಅತಿ ಸರಳವಾಗಿ 6 ಹಂತಗಳಲ್ಲಿ ಪ್ರಶ್ನಿಸಲಾಗಿದೆ. ಮೊದಲ ನಾಲ್ಕು ಪ್ರಶ್ನೆಗಳು ಕುಟುಂಬ ಯೋಜನೆಯ ಅನುಕೂಲಗಳನ್ನು ತಿಳಿಸಿದರೆ ಕೊನೆಯ ಎರಡು ಪ್ರಶ್ನೆಗಳು ಕುಟುಂಬ ಯೋಜನೆಯ ಋಣಾತ್ಮಕ ಅಂಶಗಳನ್ನು ಪ್ರತಿನಿಧಿಸಿವೆ.

ಇಲ್ಲಿ ಮೊದಲ ನಾಲ್ಕು ಪ್ರಶ್ನೆಗಳ ಭಾಗದಲ್ಲಿ

1. ಜೀವನಮಟ್ಟ ಸುಧಾರಿಸುವಲ್ಲಿ ಸಹಾಯಕವಾಗಿದೆ.
2. ಪಾಲಕರು ಹಾಗೂ ಮಕ್ಕಳ ಆರೋಗ್ಯ ರಕ್ಷಣೆಗೆ ಸಹಾಯಕವಾಗಿದೆ.
3. ಮನೆ ಮತ್ತು ಮಕ್ಕಳ ನಿರ್ವಹಣೆಗೆ ಅನುಕೂಲಕರವಾಗಿದೆ.
4. ಪತಿ–ಪತ್ನಿಯ ನಡುವೆ ಗಟ್ಟಿಯಾದ ಅನುಬಂಧ ಸಹಕಾರಿಯಾಗಿದೆ ಎಂಬ ವಿಷಯಗಳನ್ನು ಚರ್ಚಿಸಲಾಗಿದೆ.

ಕೊನೆಯ ಎರಡು ಪ್ರಶ್ನೆಗಳು ಲಿಂಗ ತಾರತಮ್ಯ ನೀತಿಯನ್ನು ಬೆಂಬಲಿಸುತ್ತವೆ. ಸಣ್ಣ ಕುಟುಂಬ ಅಭದ್ರ ಕುಟುಂಬ ಎಂಬ ಪ್ರಶ್ನೆಗಳನ್ನು ಪ್ರತಿನಿಧಿಗಳ ಮುಂದೆ ಇರಿಸಲಾಯಿತು.

ಈ ಎರಡೂ ಬಗೆಯ ಮಿಶ್ರ ಪ್ರಶ್ನೆಗಳಿಗೆ ಸಮ್ಮಿಶ್ರ ಪ್ರತಿಕ್ರಿಯೆಯೇ ವ್ಯಕ್ತವಾಯಿತು. ಆದರೂ ಲಾಭಗಳನ್ನು ಒಪ್ಪಿಕೊಂಡು ಹಾನಿಗಳನ್ನು ಅಲ್ಲಗಳೆದವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಸಮಾಧಾನ ತರುವಂಥ ಅಂಶವಾಗಿದೆ. ಮೊದಲ ಮೂರು ಪ್ರಶ್ನೆಗಳಿಗೆ ಕ್ರಮವಾಗಿ 67,70 ಹಾಗೂ 68ರಷ್ಟು ಜನ ಹೌದು ಎಂದು ಉತ್ತರಿಸಿದ್ದಾರೆ. ಕುಟುಂಬ ಯೋಜನೆಯಿಂದಾಗಿ ಜೀವನ ಮಟ್ಟು ಸುಧಾರಿಸುತ್ತದೆ. ಮಕ್ಕಳ ಮತ್ತು ಪಾಲಕರ ಆರೋಗ್ಯ ರಕ್ಷಣೆಗೆ ಅನುಕೂಲಕರವಾಗಿರುತ್ತದೆ. ಹಾಗೂ ಮನೆ ಮತ್ತು ಮಕ್ಕಳ ಉತ್ಕೃಷ್ಟ ನಿರ್ವಹಣೆಗೆ ಅನುಕೂಲಕರವಾಗಿದೆ ಎಂಬದುನ್ನು ನಂಬುತ್ತಾರೆ. ಆದರೆ ಕೇವಲ 52ರಷ್ಟು ಜನ ಮಾತ್ರ ಕುಟುಂಬ ಯೋಜನೆಯಿಂದ ದಂಪತಿಯಲ್ಲಿ ಪರಸ್ಪರ ಅರಿವು ಮತ್ತು ಅನುಭೂತಿಯನ್ನು ಹೆಚ್ಚುತ್ತದೆ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಆದರೆ ಇದಕ್ಕೆ ಸಮನಾಂತರವಾಗಿ ಕುಟುಂಬ ಯೋಜನೆಯು ಹೊರುವ ಹೆರುವ ಸಾಮರ್ಥ್ಯವನ್ನು ಸೀಮಿತಗೊಳಿಸುತ್ತದೆ. ಇದರಿಂದಾಗಿ ಮೊದಲು ಹೆತ್ತ ಹೆಣ್ಣು ಮಕ್ಕಳು ಇದ್ದರೆ ಗಂಡಿಗೆ ಅವಕಾಶ

ಇರುವುದಿಲ್ಲ. ಗಂಡು ಮಕ್ಕಳನ್ನೇ ಹೆತ್ತರೆ ಹೆಣ್ಣು ಮಕ್ಕಳಿಗೆ ಅವಕಾಶವಿರುವುದಿಲ್ಲ ಎಂಬದುನ್ನೂ ಶೇ 55 ರಷ್ಟು ಜನ ನಿವೇದಿಸಿದ್ದಾರೆ. ಅವರಿಗೆ ಕುಟುಂಬ ಯೋಜನೆಯ ಸೀಮಿತ ವ್ಯಾಪ್ತಿ ಪರಿಪೂರ್ಣವಾಗಿ ಅರ್ಥವಾಗಿದೆ.

ಶೇ.67 ರಷ್ಟು ಜನ ಸಣ್ಣ ಕುಟುಂಬ ಅಭದ್ರ ಕುಟುಂಬ ಎಂಬುದಕ್ಕೆ ಅನುಮೋದನೆ ನೀಡಿದ್ದಾರೆ. ಹೆಚ್ಚು ಮಕ್ಕಳನ್ನೂ ಹೆರುವುದರಿಂದಲೇ ಅನುಕೂಲವಾಗುತ್ತದೆ. ವೃದ್ಧಾಪ್ಯದಲ್ಲಿ ಜೊತೆಗೆಂದು ಇರಲು ಆಸರೆಯಾಗುತ್ತದೆ. ಇಲ್ಲದಿದ್ದಲ್ಲಿ ಒಂಟಿಯಾಗಿ ಬಾಳುವುದು ಅನಿವಾರ್ಯವಾಗುತ್ತದೆ ಎಂಬ ಆತಂಕವನ್ನೇ ಹೊಂದಿದ್ದಾರೆ. ಇದೇ ಕಾರಣಕ್ಕಾಗಿಯೇ ಸಣ್ಣ ಕುಟುಂಬದ ಹೊಣೆಗಾರಿಕೆ ಹೆಚ್ಚುತ್ತಲೇ ಹೋಗುತ್ತದೆ. ಆಕಸ್ಮಿಕಗಳು, ಅಪಘಾತಗಳು, ಅಕಾಲಿಕ ಮೃತ್ಯುಗಳು ಮುಂತಾದವು ಇಂಥ ಸವಾಲುಗಳನ್ನು ಎದುರಿಸಲೇಬೇಕಾಗುತ್ತದೆ ಎಂದು ತಮ್ಮ ಆತಂಕವನ್ನು ಸಂಶೋಧನೆಗೆ ಬೇಕಿರುವ ಮಾಹಿತಿ ಸಂಗ್ರಹದ ಸಮಯದಲ್ಲಿ ಹೇಳಿರುತ್ತಾರೆ.

ಈ ಸಮಯದಲ್ಲಿಯೇ ಮಹಿಳೆಯರನ್ನು ಕುರಿತು ಕುಟುಂಬ ಯೋಜನೆಯಲ್ಲಿ ಶಸ್ತ್ರ ಚಿಕಿತ್ಸೆಗೆ ಯಾರು ಒಳಗಾಗುತ್ತಾರೆ ಎಂದು ಕೇಳಿದಾಗ ಶೇ.80 ಮಹಿಳೆಯರು ಹೆಣ್ಣು ಮಕ್ಕಳೆ ಆಪರೇಶನ ಮಾಡಿಸಿಕೊಳ್ಳಬೇಕೆಂದು ಹೇಳಿದರು. ಕಾರಣವೇನೆಂದು ಕೇಳಿದಾಗ ಪುರುಷರು ನಾಜಕಾಗಿ ಇರುತ್ತಾರೆ. ಇಡೀ ದಿನ ಹೊರಗಡೆ ಹೋಗಿ ಕೆಲಸ-ಕಾರ್ಯಗಳನ್ನು ಮಾಡುವುದರಿಂದ ಭಾರ ಎತ್ತಬಾರದು ಎನ್ನುವ ಕಾರಣದಿಂದ ಮಹಿಳೆ ಮನೆ ಕೆಲಸ ಮಾತ್ರ ಮಾಡವುದರಿಂದ ಮಹಿಳೆ ಶಸ್ತ್ರ ಚಿಕ್ಸಿತೆಗೆ ಒಳಗಾಗುವುದರಿಂದ ಕೆಟ್ಟ ಪರಿಣಾಮಗಳು ಆಗುವುದಿಲ್ಲ ಎಂಬ ಅಭಿಪ್ರಾಯವನ್ನು ಮಹಿಳೆರು ಹೊಂದಿದ್ದಾರೆ. ಇದು ಮಹಿಳಾ ಸಬಲತೆಯೂ ಅಥವಾ ಪುರುಷರ ಅಬಲತೆಯೇ? ಅಥವಾ ಸ್ತ್ರೀಯರಿಗೆ ದೊರೆತ ಸ್ಥಿರ ಮಾದರಿಯ ತರಬೇತಿಯೋ? ಕುಟುಂಬ ಯೋಜನಾ ಕಾರ್ಯಕ್ರಮದ ಜಾಗೃತಿಯ ಕೊರತೆಯೋ? ಮುಂತಾದ ಪ್ರಶ್ನೆಗಳು ಸುಳಿದು ಹೋಗುತ್ತವೆ. ಏನಿದ್ದರೂ ಗ್ರಾಮೀಣ ಪ್ರದೇಶದಲ್ಲಿ ಶೇ.99 ಮಹಿಳೆಯರೆ ಶಸ್ತ್ರ ಚಿಕ್ಸಿತೆಗೆ ಒಳಗಾಗುತ್ತಿದ್ದಾರೆ ಇದಕ್ಕೆ ನಗರ ಪ್ರದೇಶದ ಮಹಿಳೆಯರೇನು ಹೊರತಾಗಿಲ್ಲ.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಬರುವ ಕೋಷ್ಟಕಗಳನ್ನು ಗಮನಿಸಿದಾಗ ಪದಾಧಿಕಾರಿಗಳು ಸದಸ್ಯರಿಗಿಂತ ಹೆಚ್ಚು ನಿರ್ದಿಷ್ಟ, ನಿಖರ ಮಾಹಿತಿ ಹೊಂದಿದವರೂ ಸಕಾರಾತ್ಮಕ ಧೋರಣೆಯನ್ನು ಉಳ್ಳವರಾಗಿಯೂ ಕಂಡು ಬರುತ್ತಾರೆ. ಈ ಅಂಶವನ್ನು ಮುಂದಿಟ್ಟುಕೊಂಡು ಉಪಸಂಹಾರಕ್ಕೆ ಬರುವ.

ಪ್ರತಿನಿಧಿಗಳಲ್ಲಿ ಬಹುತೇಕ ಜನರು ಕುಟುಂಬ ಯೋಜನೆಯ ಬಗೆಗೆ ಸಕಾರಾತ್ಮಕ ಧೋರಣೆಯನ್ನು ಉಳ್ಳವರಾಗಿದ್ದಾರೆ.

1. ಕುಟುಂಬದ ಗಾತ್ರ ಸಣ್ಣದಾಗಿಸುವುದರಿಂದಲೇ ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತದೆ.
2. ಮಕ್ಕಳ ಮತ್ತು ಪಾಲಕರ ಆರೋಗ್ಯ ರಕ್ಷಣೆಯಾಗುತ್ತದೆ.
3. ಮನೆ ಮತ್ತು ಮಕ್ಕಳ ನಿರ್ವಹಣೆಗೆ ಸುಲಭವಾಗುತ್ತದೆ.
4. ದಂಪತಿಯ ನಡುವಿನ ಅನುಬಂಧ ಗಟ್ಟಿಗೊಳ್ಳುತ್ತದೆ. ಪರಸ್ಪರ ಅರಿವು, ಅಭಿಮಾನ ಪ್ರೀತಿಗೆ ಅವಕಾಶವಾಗುತ್ತದೆ.

ಈ ಅಂಶಗಳನ್ನು ಬಹುತೇಕ ಹೇಳಿಕೆದಾರರು ಒಪ್ಪಿಕೊಂಡಿದ್ದಾರೆ.

ಅದೇ ಹೊತ್ತಿಗೆ ಕೊನೆಯ ಎರಡು ಅಂಶಗಳ ಬಗೆಗೆ ಬಹುತೇಕ ಜನರು ಋಣಾತ್ಮಕ ಹೇಳಿಕೆಗಳನ್ನೂ ದಾಖಲಿಸಿದ್ದಾರೆ. ಬಯಸಿದ ಮಕ್ಕಳು ಮಗ/ಮಗಳು ಹುಟ್ಟುವ ಬಗೆಗೆ ನಿರಾಶಾದಾಯಕ ಮನೋಭಾವ ತೋರಿದ್ದಾರೆ. ಅದರೊಂದಿಗೆ ಸಣ್ಣ ಕುಟುಂಬದ ಬಗೆಗೆ ಅಭದ್ರ ಭಾವದ ಆತಂಕವನ್ನೂ ತೋರಿಸಿಕೊಟ್ಟಿದ್ದಾರೆ.

ಹೆರಲು ಬಯಸುವ ಮಕ್ಕಳ ಸಂಖ್ಯೆ:

ಸಾಮಾಜಿಕ ಮಹಿಳಾ ಸಬಲೀಕರಣದ ಪರಿಕಲ್ಪನೆಯಲ್ಲಿ ಅವಳು ಬಯಸುವ ಮಕ್ಕಳ ಸಂಖ್ಯೆಯೂ ಮಹತ್ವದ ಪಾತ್ರ ವಹಿಸುತ್ತದೆ. ಹೆರುವ ಯಂತ್ರವೆಂದೇ ಭಾವಿಸುವ ನಮ್ಮ ಸಮಾಜದಲ್ಲಿ ಬಯಕೆಯ ಕೂಸು ಹುಟ್ಟುವವರೆಗೂ ಅವಳು ಹೆರುತ್ತಲೇ ಹೋದ ಅನೇಕ ಉದಾಹರಣೆಗಳಿವೆ. ತನ್ನ ದೈಹಿಕ ಸಾಮರ್ಥ್ಯ, ಮಾನಸಿಕ ಬಯಕೆ ಎರಡನ್ನೂ ಹತ್ತಿಕ್ಕಿ ಒತ್ತಡಕ್ಕೆ ಬಲಿಯಾಗಿ ಹೆರುವಂಥ ಸಮಾಜದಲ್ಲಿ ಮಹಿಳೆ ಇದ್ದಳು. ಆದರೆ ಈಗ ಕಾಲ ಬದಲಾಗಿದೆ. ಅವಳೀಗ ತಾನು ಹೆರಬಹುದಾದ ಮಕ್ಕಳ ಸಂಖ್ಯೆಯನ್ನು ತಾನೇ ತೀರ್ಮಾನಿಸಬಹುದಾಗಿದೆ. ಅಥವಾ ಆ ತೀರ್ಮಾನ ತೆಗೆದುಕೊಳ್ಳುವಲ್ಲಿ ಪಾಲುಗಾರಿಕೆಯನ್ನು ಪಡೆಯುತ್ತಿದ್ದಾಳೆ. ಇದು ಅವಳಲ್ಲಿ ಆಗುತ್ತಿರುವ ಬದಲಾವಣೆಯನ್ನು ಸೂಚಿಸುತ್ತದೆ. ಸಾಮಾಜಿಕ ಬದಾವಣೆಯ ಗತಿಯನ್ನು ತೋರಿಸಿಕೊಡುತ್ತದೆ.

ಫಲವಂತಿಕೆಯ ಮಟ್ಟವನ್ನು ನಿರ್ಧರಿಸುವಲ್ಲಿ ನಿಯಮಗಳು ಮತ್ತು ಮೌಲ್ಯಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ. ಈ ನಿಯಮಗಳು ಮಗುವಿನ ಬಯಕೆಯನ್ನು ಬೇಡಿಕೆಯನ್ನು ನಿರ್ಧರಿಸುತ್ತವೆ. ಮೌಲ್ಯಗಳು ಮಕ್ಕಳ ಲಿಂಗದ ಬಗೆಗೆ ತಳೆಯುವ ನಿರ್ಧಾರದ ಬಗೆಗೆ ಆಗಿರುತ್ತದೆ.

ಮಕ್ಕಳ ಬಗೆಗಿನ ಬದಲಾಗುತ್ತಿರುವ ಮೌಲ್ಯಗಳು:

ಕೃಷಿ ಆಧಾರಿತ ಕುಟುಂಬದಲ್ಲಿ ದುಡಿಯುವ ಕೈಗಳ ಲೆಕ್ಕದಲ್ಲಿ ಹೆಚ್ಚಿನ ಮಕ್ಕಳನ್ನು ಹೆರುವುದೇ ಆದರ್ಶವೆನಿಸುತ್ತಿತ್ತು. ಅಂಥ ತಾಯಿಗೆ "ಹತ್ತು ಮಕ್ಕಳನ್ನು ಹೆತ್ತುಕೊಟ್ಟ ಮಹಾತಾಯಿ ಎಂಬ ಬಿರುದು ಇತ್ತು". ಆ ಸಮಯದಲ್ಲಿ ಬದುಕಿನ ಬಗ್ಗೆ ಹೆಚ್ಚಿನ ಯೋಚನೆಗಳಿಲ್ಲದೇ "ಹುಟ್ಟಿಸಿದ ಶಿವ ಹುಲ್ಲು ಮೇಯಿಸುವನೇ" ಎಂಬ ಆತ್ಮ ವಿಶ್ವಾಸವಿತ್ತು. ಮಕ್ಕಳು ತುಂಬಿದ ಮನೆ ಸಮೃದ್ಧಿಯ ಸಂಕೇತವೆನಿಸುತ್ತಿತ್ತು. ಬಂಧುತ್ವದ ಭಾವವೂ ಹೆಚ್ಚುತ್ತಿತ್ತು. ಭದ್ರತೆಯ ಬೆಚ್ಚನೆಯ ಭಾವವೂ ದೊರೆಯುತಿತ್ತು. ಆದರೆ ಬದಲಾಗುತ್ತಿರುವ ಕಾಲದೊಂದಿಗೆ ಕೃಷಿಯೂ ಪ್ರಗತಿಪರವಾಗತೊಡಗಿತು. ಕೃಷಿ ಕ್ಷೇತ್ರದಲ್ಲೂ ಯಂತ್ರಗಳು ಬಂದವು. ಔಪಚಾರಿಕ ಶಿಕ್ಷಣ ಆರಂಭವಾಯಿತು. ಆಧುನೀಕರಣ ಹಾಗೂ ನಗರೀಕರಣದ ಪ್ರಭಾವದಿಂದಾಗಿ ಮೌಲ್ಯಗಳು ಬದಲಾಗತೊಡಗಿದವು. ಪರಿಣಾಮವಾಗಿ ಜೀವನ ಮಟ್ಟ ಸುಧಾರಣೆ, ಪೌಷ್ಟಿಕ ಆಹಾರ, ಮನೆ, ನೀರು, ಶಿಕ್ಷಣ, ಉತ್ತಮ ಆರೋಗಯ ವೃತ್ತಿ ಮುಂತಾದವುಗಳ ಬಗೆಗೆ ಮೊದಲಿದ್ದ ನಿಲುವು ಹಂತ ಹಂತವಾಗಿ ಬದಲಾಗತೊಡಗಿತು.

ಗ್ರಾಮೀಣ ಜನರು ನಗರೀಕರಣ ಹಾಗೂ ಆಧುನಿಕ ಬದುಕಿನ ಎಲ್ಲ ಅನುಕೂಲಗಳತ್ತ ಆಕರ್ಷಿತರಾಗುತ್ತಿದ್ದಾರೆ. ಭೌತಿಕ ಬದುಕಿನ ಅಗತ್ಯತೆಗಳು ಬದಲಾಗುತ್ತಿವೆ. ಆದರೆ ಭೌತಿಕ ಐಷಾರಾಮಿ ಅನುಕೂಲಗಳು ಬದುಕಿನ ಅಗತ್ಯಗಳಾಗಿ ಬದಲಾಗತೊಡಗಿದಾಗ ಮಕ್ಕಳ ಸಂಖ್ಯೆಯ ಬಗೆಗೆ ತೀರ್ಮಾನ ತೆಗೆದುಕೊಳ್ಳುವ ಪರಿಪಾಠ ಬೆಳೆಯುತ್ತಿದೆ. ಮಕ್ಕಳ ಸಂಖ್ಯೆಯ ಬಗೆಗೆ ಗ್ರಾಮೀಣ ಮಹಿಳೆಯರೂ ತೀರ್ಮಾನ ತೆಗೆದುಕೊಳ್ಳುತ್ತಿರುವುದು ಸಕಾರಾತ್ಮಕ ಬೆಳವಣಿಗೆಯಾಗಿದೆ. ಆದರೆ ಬಯಸಿರುವ ಮಕ್ಕಳ ಸಂಖ್ಯೆಗೂ ಹೆತ್ತಿರುವ ಮಕ್ಕಳ ಸಂಖ್ಯೆಗೂ ವ್ಯತ್ಯಾಸವಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಮತ್ತು ಇವೆರಡೂ ಅಂಶಗಳ ನಡುವೆ ನೇರ ಸಂಬಂಧ ಇರುವುದೂ ಅಧ್ಯಯನಗಳಿಂದ ತಿಳಿದುಬಂದಿದೆ.

ಈ ಅಧ್ಯಾಯದಲ್ಲಿ ಗ್ರಾಮೀಣ ಮಹಿಳೆಯರ ಅಭಿಪ್ರಾಯ ಮತ್ತು ಅನುಭವ ಎರಡನ್ನೂ ಆಧಾರವಾಗಿಟ್ಟುಕೊಂಡು ಪ್ರಶ್ನೆಗಳಿಗೆ ಉತ್ತರ ಪಡೆಯುವ ಪ್ರಯತ್ನ ಮಾಡಿದ್ದೇವೆ. ಗ್ರಾಮೀಣ ಮಹಿಳೆ ತಾನು ಬಯಸಿದ ಮಕ್ಕಳ ಸಂಖ್ಯೆ ಮತ್ತು ಹೆತ್ತಿರುವ ಮಕ್ಕಳ ಸಂಖ್ಯೆಯನ್ನು ತಿಳಿಸುವಂತೆ ಪ್ರಶ್ನೆಗಳನ್ನು ರಚಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಮಕ್ಕಳ ವಿಷಯದಲ್ಲಿ ಅವಳ ಮನಸ್ಸಿನ ಇಚ್ಛೆಯೇ ಬೇರೆ, ಕೌಟುಂಬಿಕ ಒತ್ತಡದಲ್ಲಿ ಅವಳು ಹೆತ್ತಿರುವ ಮಕ್ಕಳ ಸಂಖ್ಯೆಯೇ ಬೇರೆ ಎಂಬ ವಿಷಯಗಳಲ್ಲಿ ವ್ಯತ್ಯಾಸ ಇರುವುದು ಬಹಳ ಸ್ಪಷ್ಟವಿದೆ. ಈ ವಿಚಾರಗಳನ್ನು ನೋಡಿದಾಗ ಅವಳ ಮನದಾಶೆಗೆ ಅವಕಾಶ ಇಲ್ಲವೆನ್ನುವುದು ತಿಳಿದುಬರುತ್ತದೆ.

ಕೋಷ್ಟಕ 5.1.7
ಹೇಳಿಕೆದಾರರು ಬಯಸಿದ ಮಕ್ಕಳ ಸಂಖ್ಯೆ

ಕ್ರ ಸಂ.	ಬಯಸಿದ ಮಕ್ಕಳ ಸಂಖ್ಯೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ	ಸಂಖ್ಯೆ	ಶೇಕಡಾ
01.	1–2	18	15%	36	20%	54	18%
02.	3–4	78	65%	108	60%	186	62%
03.	5–6	24	20%	36	20%	60	20%
	ಒಟ್ಟು	**120**	**100%**	**180**	**100%**	**300**	**100%**

ಮಕ್ಕಳ 'ಮೀನ್' ಸಂಖ್ಯೆ 3.5: ಈ ಕೋಷ್ಟಕವು ಮಕ್ಕಳ ಸಂಖ್ಯೆಯ ಬಗೆಗೆ ತಮ್ಮ ನಿಲುವನ್ನು ತೋರಿಸುವಂತೆ ಪ್ರೇರೇಪಿಸಿದೆ. ಕೋಷ್ಟಕದ ಅನುಸಾರ ಬಹುಪಾಲು ಜನರು 3–4 ಮಕ್ಕಳಿರಬೇಕು ಎಂದು ಹೇಳಿದ್ದಾರೆ. ಕೇವಲ ಶೇ 20ರಷ್ಟು ಜನ ಹೆಚ್ಚಿಗೆ ಹೆರಬಹುದು ಎಂದು ಹೇಳಿದ್ದರೆ ಶೇ 18ರಷ್ಟು ಜನರು ಮಾತ್ರ ಒಂದು ಅಥವಾ ಎರಡು ಮಕ್ಕಳಿರಲಿ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇದರರ್ಥ ಅತಿ ಸೀಮಿತ ಸಂಖ್ಯೆಗೂ ಒಪ್ಪದ, ಅತಿ ಹೆಚ್ಚಿನ ಮಕ್ಕಳಿಗೂ ತಯಾರಿಲ್ಲದ ತಮ್ಮ ಅನುಕೂಲಕ್ಕೆ ತಕ್ಕಂತೆ 3–4 ಮಕ್ಕಳನ್ನು ಹೆರಬೇಕು ಎನ್ನುವವರ ಸಂಖ್ಯೆಯೇ ಹೆಚ್ಚಾಗಿದೆ. ಇದರಲ್ಲಿ ಇನ್ನೊಂದು ಗಮನೀಯ ಅಂಶವೆಂದರೆ ಸದಸ್ಯರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪದಾಧಿಕಾರಿಗಳು 3–4 ಮಕ್ಕಳಿರಬೇಕು ಎಂಬ ವಾದವನ್ನು ಮುಂದಿಟ್ಟಿದ್ದಾರೆ. ಹಾಗಾಗಿ ಸಮರ್ಪಕ ಮಕ್ಕಳ ಸಂಖ್ಯೆಯ ಮೀನ್ 3.5 ಆಗಿದೆ.

ಈಗ ಒಟ್ಟಾರೆಯಾಗಿ ಹೇಳಬೇಕೆಂದರೆ ಮಕ್ಕಳ ಸಂಖ್ಯೆಯಲ್ಲಿ ಹೆಚ್ಚಿನ ಮಕ್ಕಳು ಬೇಡ ಎಂದವರ ಸಂಖ್ಯೆ ಗಮನೀಯವಾಗಿದೆ. ಶೇ 20ರಷ್ಟು ಜನರು ಮಾತ್ರ 5ರ ಮೇಲ್ಪಟ್ಟು ಮಕ್ಕಳನ್ನು ಬಯಸಿದ್ದಾರೆ. ಕಡಿಮೆ ಮಕ್ಕಳನ್ನು ಹೊಂದಬೇಕು ಎಂಬ ಅಕಾಂಕ್ಷೆ ಬೆಳೆಯುತ್ತಿರುವುದು. ಆ ಮೂಲಕ ತಮ್ಮ ಬದುಕಿನ ಗುಣಮಟ್ಟ ಸುಧಾರಿಸುವ ಬಗೆಗೆ ಚಿಂತಿಸುವುದು ಗ್ರಾಮೀಣ ಮಹಿಳೆಯರ ಪ್ರಗತಿಪರ ಧೋರಣೆಗೆ ಹಿಡಿದ ಕೈಗನ್ನಡಿಯಾಗಿದೆ.

ಗಂಡು ಮಗುವಿಗೆ ಆದ್ಯತೆ ನೀಡುವ ಮನೋಭಾವ:

ಕುಟುಂಬದ ಗಾತ್ರ ಕಡಿಮೆಗೊಳಿಸಬೇಕು ಎಂದಾದಾಗ ಸಾಂಪ್ರದಾಯಿಕ ಭಾರತೀಯ ಕುಟುಂಬದಲ್ಲಿ ಗಂಡು ಮಗುವಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಕುಲಪುತ್ರ, ವಂಶೋದ್ಧಾರಕ ಮುಂತಾದ ಭಾವನಾತ್ಮಕ ಅಂಶಗಳೂ ಇದರೊಂದಿಗೆ ಸೇರಿವೆ. 'ಮಕ್ಕಳನ್ನು ಹೆರುವುದು' ಈ ಅಂಶವೇ ಸಾಮಾಜಿಕ ಆರ್ಥಿಕ ಹಾಗೂ ಧಾರ್ಮಿಕ ಅಂಶಗಳನ್ನು ಒಳಗೊಂಡಿದೆ. ಈ ಅಂಶವನ್ನು ಗಮನದಲ್ಲಿರಿಸಿಕೊಂಡಾಗ ಜನರು ಸಾಮಾಜಿಕ ಮೌಲ್ಯಕ್ಕಿಂತ ಹೆಚ್ಚಾಗಿ ಉಳಿದೆಲ್ಲ

ಕಾರಣಗಳಿಂದಲೂ ಗಂಡು ಮಕ್ಕಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ. ಇದೇ ಕಾರಣಕ್ಕಾಗಿಯೇ ಕುಟುಂಬದ ಗಾತ್ರವೂ ದೊಡ್ಡದಾಗಿರಲು ಇದು ಒಂದು ಕಾರಣವಾಗಿದೆ ಎಂದು 1982ರಲ್ಲಿ ಚೌಧರಿ ಅವರು ತಿಳಿಸಿದ್ದಾರೆ.

ಸಂಧು (1986) ಹಾಗೂ ಜಯಶ್ರೀ (1988) ಇವರ ಪ್ರಕಾರ ಗಂಡು ಮಗುವಿಗೆ ನೀಡುವ ಆದ್ಯತೆಯು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ ಎಂದು ಹೇಳಿದ್ದಾರೆ.

- ಮಗ ಎಂದರೆ ದುಡಿಯುವ ಎರಡು ಕೈಗಳು,
- ಮಗ ಎಂದರೆ ಪರಿಹಾರ
- ಮಗ ಎಂದರೆ ಸಾಮಾಜಿಕ ಸಂಬಂಧಗಳ ಮೂಲ
- ಮಗ ಎಂದರೆ ಕುಟುಂಬ ಹಾಗೂ ವಂಶೋದ್ಧಾರಕ
- ಮಗ ಎಂದರೆ ಸಾಮಾಜಿಕ ಹಾಗೂ ಭೌತಿಕ ಬೆಂಬಲ
- ಮಗ ಎಂದರೆ ವೃದ್ಧಾಪ್ಯದಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಬೆಂಬಲ

ಈ ಎಲ್ಲ ಕಾರಣಗಳಿಂದಾಗಿ ಮಗನ ಮಹತ್ವ ಹೆಚ್ಚಾಯಿತು. ಮಗನಿಗೆ ನೀಡುವ ಮಾನ್ಯತೆಯಿಂದಾಗಿಯೇ ಕುಟುಂಬದ ಗಾತ್ರ ಹಾಗು ಹೆರುವ ಸಂಖ್ಯೆಯೂ ನಿರ್ಧಾರವಾಗುತ್ತದೆ ಎಂಬುದಂತೂ ಸತ್ಯವಾಗಿದೆ. ಈ ಅಂಶದಿಂದಾಗಿ ಮಗನಿಗೆ ನೀಡುವ ಮಾನ್ಯತೆ ಹಾಗೂ ಕುಟುಂಬ ಯೋಜನೆಯ ನಡುವೆ ನೇರವಾದ ಸಂಬಂಧವಿದೆ ಎಂದೂ ಹೇಳಬಹುದಾಗಿದೆ. ಮಗನಿಗಾಗಿಯೇ ಕುಟುಂಬ ಯೋಜನೆ ಕೆಲವೊಮ್ಮೆ ವಿಫಲವಾದ ಕಾರಣಗಳೂ ಇವೆ.

ಸಾಮಾಜಿಕವಾಗಿಯೂ, ಧಾರ್ಮಿಕವಾಗಿಯೂ ಮಗನಿದ್ದರೆ ಮುಕ್ತಿ ಎಂಬ ಭಾವನೆ ನೆಲೆಯೂರಿದೆ. ಇದೇ ಕಾರಣದಿಂದಲೇ ಒಬ್ಬನಾದರೂ ಮಗನಿರಲಿ ಎಂಬ ಆಕಾಂಕ್ಷೆಯಿಂದಲೇ ಹೆರುತ್ತ ಹೋಗುತ್ತಾರೆ. ಹೀಗಾಗಿ ಕುಟುಂಬದ ಗಾತ್ರ ಹೆಚ್ಚುತ್ತದೆ. ಆದರೆ ಒಂದರ ನಂತರ ಒಂದು ಎರಡೂ ಗಂಡು ಮಕ್ಕಳಾದರೆ ಮಕ್ಕಳು ಸಾಕು ಎನ್ನುವ ಕುಟುಂಬಗಳು ಕಡಿಮೆ ಪ್ರಮಾಣದಲ್ಲಿವೆ.

ಮಗನಿಗಾಗಿ ಮಾನ್ಯತೆ ನೀಡುವಲ್ಲಿ ಬದಲಾದ ಮೌಲ್ಯಗಳು

ಸಾಮಾಜೀಕರಣ, ಆಧುನೀಕರಣ, ನಗರೀಕರಣ ಹಾಗು ಔದ್ಯಮೀಕರಣ, ಔದ್ಯೋಗೀಕರಣಗಳ ಪ್ರಭಾವದಿಂದಾಗಿ ಮಗನಿಗಾಗಿ ಇರುವ ಮಾನ್ಯತೆಯ ಮೌಲ್ಯಗಳಲ್ಲಿ ಸ್ವಲ್ಪ ಮಟ್ಟಿನ ಬದಲಾವಣೆಗಳು ಆಗುತ್ತಿರುವುದನ್ನು ಕಾಣಬಹುದಾಗಿದೆ. ಜೀವ ವಿಮೆ, ಪಿಂಚಣಿ ಹಾಗೂ ಸ್ವಯಂಉದ್ಯೋಗದ ಅವಕಾಶಗಳು, ಆರೋಗ್ಯ ಸೌಲಭ್ಯಗಳು ಈ ಎಲ್ಲ ಕಾರಣಗಳಿಂದ ಆರ್ಥಿಕ ಭದ್ರತೆಯ ಭಾವ ಬೆಳೆಯತೊಡಗಿತು. ಇದರೊಂದಿಗೆ ಮಗನೇ ಜನಿಸಲಿ ಎಂಬ

ಭಾವದಲ್ಲಿಯೂ ಇಳಿಕೆ ಕಂಡು ಬರತೊಡಗಿತು.

ಉತ್ತಮ ಜೀವನ ಮಟ್ಟ ಮಕ್ಕಳನ್ನು ಬೆಳೆಸುವ ಜವಾಬ್ದಾರಿ ಇವೆರಡೂ ಗ್ರಾಮೀಣ ಜನರಲ್ಲಿಯೂ ಸಣ್ಣ ಕುಟುಂಬದತ್ತಲೇ ಒಲವು ತೋರುವುದನ್ನು ಹೆಚ್ಚಿಸಿತು. ಗ್ರಾಮೀಣ ಭಾಗದಲ್ಲಿ ಮಕ್ಕಳನ್ನು ಬಯಸುವ ಸಂಖ್ಯೆಯ ಮೀನ್ 3.5 ಆಗಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಈ ಅಂಶವು ಕಡಿಮೆ ಮಕ್ಕಳನ್ನು ಬಯಸುವಾಗ ಯಾವುದಾದರೂ ಮಗು ಇರಲಿ ಎಂಬ ಭಾವ ಬೆಳೆದಿರುವುದನ್ನು ಸಮರ್ಥಿಸುತ್ತದೆ.

ಗರಿಷ್ಠ ನಾಲ್ಕು ಮಕ್ಕಳಾದ ನಂತರ ಯಾವುದೇ ಮಗು ಬೇಡ ಎಂಬ ನಿರ್ಧಾರಕ್ಕೆ ಗ್ರಾಮೀಣ ಜನರು ಬರುತ್ತಿದ್ದಾರೆ. ಲಿಂಗ ತಾರತಮ್ಯ ಮಾಡದೇ ಕುಟುಂಬದ ಗಾತ್ರವನ್ನು ಅಷ್ಟಕ್ಕೇ ಸೀಮಿತಗೊಳಿಸಬೇಕು ಎಂಬ ಧೋರಣೆಯುಳ್ಳವರಾಗಿದ್ದಾರೆ. ಮಗನಿಗಾಗಿ ಮಾನ್ಯತೆ ನೀಡುವ ಬಗೆಗೆ ಮಹಿಳೆಯರನ್ನು ಪ್ರಶ್ನಿಸಿದಾಗ ಕಂಡು ಬಂದ ಅಂಶಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 5.1.8
ಮಗನಿಗೆ ಮಾನ್ಯತೆ ನೀಡುವ ಧೋರಣೆಯ ವಿವರ

ಕ್ರ ಸಂ.	ಹೇಳಿಕೆಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂ.	ಶೇ.	ಸಂ.	ಶೇ.	ಸಂ.	ಶೇ.
01.	ಮಗನೇ ಬೇಕು	38	32%	68	38%	105	35%
02.	ಮಗ ಬೇಕು ಆದರೆ ಅನಿವಾರ್ಯ ಏನಲ್ಲ	20	16%	26	14%	46	15%
03.	ಮಗನೇ ಬೇಕು ಎಂದೇನಿಲ್ಲ.	10	08%	15	09%	25	08%
	ಒಟ್ಟು	**120**	**100%**	**180**	**100%**	**300**	**100%**

ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ ಗಂಡು ಮಗುವಿನ ಆದ್ಯತೆ ಹಾಗೂ ನಿಲುವಿನಲ್ಲಿ ಕಡಿಮೆಯಾಗಿರುವುದು ಸ್ಪಷ್ಟವಾಗುತ್ತದೆ. ಶೇ 35ರಷ್ಟು ಜನ ಮಗನೇ ಮುಖ್ಯ ಎಂಬ ನಿಲುವು ತಳೆದಿದ್ದರೆ, ಅಗತ್ಯವಿದ್ದರೂ ಅನಿವಾರ್ಯ ಅಲ್ಲ ಎಂಬುದನ್ನು ಶೇ 50ರಷ್ಟು ಜನರು ಒಪ್ಪಿಕೊಂಡಿದ್ದಾರೆ. ಇದೇ ಅಂಶ ಸಾಮಾಜಿಕ ಜೀವನದ ಭೌತಿಕ ಮೌಲ್ಯದಲ್ಲಿ ಆಗಿರುವ ಬದಲಾವಣೆಯನ್ನು ಎತ್ತಿಹಿಡಿಯುತ್ತದೆ.

ನಮ್ಮ ಅಧ್ಯಯನದ ಈ ಭಾಗದಲ್ಲಿ ಗ್ರಾಮೀಣ ಮಹಿಳೆಯರ ಮನೋಭಾವ ಬದಲಾಗಿದೆ ಎಂದು ಊಹಿಸಲಾಗಿತ್ತು. ಅದೇ ಈ ಮೇಲಿನ ಕೋಷ್ಟಕವನ್ನು ಗಮನಿಸಿದರೆ ಮಗನಿರಲಿ ಇಲ್ಲದೇ ಇರಲಿ, ಏನು ವ್ಯತ್ಯಾಸವಾಗದು ಎಂಬ ಸತ್ಯವನ್ನು ಅರಿತಿದ್ದಾರೆ. ಆದರೆ ಮಗನಿರದಿದ್ದರೂ ನಡೆದೀತು ಎಂಬ ಭಾವ ಇನ್ನೂ ಬಂದಿಲ್ಲ. ಮಗನಿಗಾಗಿ ಬಯಕೆ ಇದೆ. ಇರದಿದ್ದರೆ ಒಪ್ಪಿಕೊಳ್ಳುವ

ಮನೋಸ್ಥಿತಿಯೂ ಇದೆ. ಒಟ್ಟಾರೆ ಹೇಳಬೇಕೆಂದರೆ ಮಗನೇ ಬೇಕು ಎಂಬ ಭಾವನೆಯಂತೂ ಕಡಿಮೆಯಾಗಿದೆ. ಆದರೆ ಪುರ್ತಿಯಾಗಿ ಕಡಿಮೆಯಾಗಿಲ್ಲ.

ಈ ಭಾವನೆಯನ್ನು ಈ ಕೋಷ್ಟಕ ಸಮರ್ಥಿಸುತ್ತದೆ. ಮಗ ಹುಟ್ಟಿದರೆ ಅದೃಷ್ಟ. ಹುಟ್ಟದಿದ್ದರೆ ಹಣೆಬರಹ ಎಂದುಕೊಂಡಾದರೂ ಪರಿಸ್ಥಿತಿಯನ್ನು ನಿಭಾಯಿಸುವತ್ತ ಹೆಚ್ಚಿನ ಒಲವು ತೋರುತ್ತಿದ್ದಾರೆ. ಒಟ್ಟಾರೆ ಈ ಕೋಷ್ಟಕದ ಮಾಹಿತಿ ಸಂಗ್ರಹಿಸುವಾಗ ಚರ್ಚೆಗೆ ಬಂದ ವಿಷಯವೇನೆಂದರೆ ಏನಾದರಾಗಲಿ, ಹೆಚ್ಚು ಮಕ್ಕಳಾಗದಿರಲಿ ಎಂಬ ಭಾವನೆಯಂತು ಬಂದಿದೆ ಆದರೂ ಬದುಕಿನ ಅನಿವಾರ್ಯತೆಯಲ್ಲಿ ನಿರ್ಧಾರ ತೆಗೆದುಕೊಳ್ಳುವುದು ಕಷ್ಟವೆಂದು ತಮ್ಮ ಅಸಹಾಯಕತೆಯನ್ನು ವ್ಯಕ್ತಪಡಿಸಿರುತ್ತಾರೆ.

ಆದರೆ ಪದಾಧಿಕಾರಿಗಳು ಹಾಗೂ ಸದಸ್ಯರನ್ನು ಹೋಲಿಸಿದಾಗ ಪದಾಧಿಕಾರಿಗಳು ಹೆಚ್ಚು ಪ್ರಗತಿಪರರು ಎಂದು ಕಂಡುಬರುತ್ತದೆ. ಸದಸ್ಯರು ಹೆಚ್ಚುಹೆಚ್ಚಾಗಿ ಸಾಂಪ್ರದಾಯಿಕವಾಗಿ ಯೋಚಿಸುತ್ತಾರೆ. ಶೇ.35 ರಷ್ಟು ಜನರು ಈಗಲೂ ಗಂಡು ಮಗು ಬೇಕೆಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಶೇ.15 ರಷ್ಟು ಜನರು ಮಾತ್ರ ಮಗನೇ ಆಗಬೇಕಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಗ್ರಾಮೀಣ ಮಹಿಳೆಯರಲ್ಲಿ ಸಣ್ಣ ಕುಟುಂಬದ ಬಗೆಗೆ ಒಲುವು ಹೆಚ್ಚುತ್ತಿರುವಾಗಲೇ ಮಗು ಯಾವುದಾದರೂ ಆಗಲಿ ಎಂಬ ಮನೋಭಾವವೂ ಬೆಳೆಯುತ್ತಿದೆ. ಕುಟುಂಬ ಯೋಜನೆಯ ಶಸ್ತ್ರ ಚಿಕಿತ್ಸೆಗೆ ಮಹಿಳೆಯರೆ ಏಕೆ ಒಳಗಾಗಬೇಕೆಂದು ಸಣ್ಣ ಪ್ರಮಾಣದ ಚರ್ಚೆ ಸಂಘಗಳಲ್ಲಿ ಪ್ರಾರಂಭವಾಗಿದೆ. ಕಾಲನುಕಾಲದಿಂದ ಬಂದ ಈ ಪದ್ಧತಿಯಲ್ಲಿ ತ್ರೀವ ಪರಿಣಾಮಕಾರಿಯಾದ ಬದಲಾವಣೆ ತರುವುದು ಸಾಧ್ಯವಿಲ್ಲ ಎನ್ನುವ ಅಭಿಪ್ರಾಯವನ್ನು ಮಹಿಳೆಯರು ವ್ಯಕ್ತಪಡಿಸಿದರು.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಅಧ್ಯಯನದ ಬಹುಮುಖ್ಯವಾದ ಘಟ್ಟಗಳನ್ನು ಚರ್ಚಿಸಲಾಗಿದೆ. ಸಾಮಾಜಿಕ ಸಬಲೀಕರಣದ ಮುಖ್ಯ ಆಯಾಮವಾದ ಮಹಿಳೆಯ ವ್ಯಕ್ತಿತ್ವದಲ್ಲಿ ಆಗಿರುವ ಬದಲಾವಣೆಗಳನ್ನು ಚರ್ಚಿಸಲಾಗಿದೆ.

ಸಾಮಾಜಿಕ ಸಂಸ್ಥೆಗಳಾದ ಮದುವೆ, ಕುಟುಂಬ ಇತ್ಯಾದಿ ವಿಷಯಗಳ ಬಗೆಗೆ ಸ್ಥೂಲವಾಗಿ ಚರ್ಚಿಸಲಾಗಿದೆ. ಮದುವೆಯ ವಯಸ್ಸು, ಸಂಗಾತಿಯ ಆಯ್ಕೆ ಮುಂತಾದ ವಿಷಯಗಳಿಂದ ಆರಂಭಿಸಿ ಕುಟುಂಬದ ಬಗೆ, ಅವಿಭಕ್ತ, ವಿಘಟಿತ, ವಿಭಕ್ತ ಕುಟುಂಬಗಳು ಹಾಗೂ ಕುಟುಂಬ ಯೋಜನೆ ಇವುಗಳ ಬಗೆಗೆ ಮಹಿಳೆಯಲ್ಲಿ ಆಗಿರುವ ಸಕಾರಾತ್ಮಕ ಬದಲಾವಣೆಗಳನ್ನು ಚರ್ಚಿಸಲಾಗಿದೆ. ಅವರ ಧೋರಣೆಯಲ್ಲಿ, ಮನೋಭಾವನೆಯಲ್ಲಿ ನಿರ್ಧಾರ ತೆಗೆದುಕೊಳ್ಳುವ ಆತ್ಮವಿಶ್ವಾಸ ಬಂದಿದೆಯೇ ಎಂಬುದನ್ನು ಪರಿಶೀಲಿಸಲಾಗಿದೆ.

ಅಧ್ಯಯನಕ್ಕೆ ಒಳಪಡಿಸಿದ ವಿಷಯಗಳನ್ನು ಈ ಕೆಳಗಿನಂತೆ ವಿಂಗಡಿಸಲಾಗಿದೆ.

1. ಮದುವೆಗಾಗಿ ಹುಡುಗಿಯರ ಸೂಕ್ತ ವಯಸ್ಸು.
2. ಜೀವನ ಸಂಗಾತಿಯ ಆಯ್ಕೆ.
3. ಅವಿಭಕ್ತ/ವಿಭಕ್ತ ಕುಟುಂಬಗಳ ಆಯ್ಕೆ.
4. ಅದೆಷ್ಟು ಮಕ್ಕಳನ್ನು ಪಡೆಯಲು ಬಯಸುವ ಆಕಾಂಕ್ಷೆ.
5. ಕುಟುಂಬ ಯೋಜನೆಯಲ್ಲಿ ನಂಬಿಕೆ.
6. ಕುಟುಂಬ ಯೋಜನೆಯ ಲಾಭ ಮತ್ತು ಹಾನಿಗಳು.
7. ಗಂಡು ಮಗುವಿನ ಮಹತ್ವದ ಬಗೆಗೆ ಗ್ರಾಮೀಣ ಮಹಿಳೆಯರ ಮನೋಭಾವ.

ಈ ವಿಷಯಗಳನ್ನು ಚರ್ಚಿಸಲಾಯಿತು. ಅಂಕಿ ಅಂಶಗಳು ಈ ಕೆಳಗಿನ ಅಂಶಗಳನ್ನೇ ಸ್ಪಷ್ಟಪಡಿಸುತ್ತವೆ.

1. ಮದುವೆಗಾಗಿ ಹುಡುಗಿಯರ ಸೂಕ್ತ ವಯಸ್ಸು: ಗ್ರಾಮೀಣ ಮಹಿಳೆಯರಲ್ಲಿ ತಮ್ಮ ಹೆಣ್ಣುಮಕ್ಕಳ ಮದುವೆ 19–20ರ ವಯೋಮಾನದ ನಡುವೆಯಾಗಬೇಕು ಎಂದು ಬಯಸಿದವರು ಶೇ 59 ಜನ. ಇದಕ್ಕೆ ಪ್ರತಿಯಾಗಿ ಹದಿಹರೆಯದಲ್ಲಿಯೇ 16–18ರ ವಯೋಮಾನದ ನಡುವೆ ಮದುವೆಯಾಗಬೇಕು ಎಂದು ಬಯಸಿದವರೂ ಶೇ 28 ಜನ. ಸಾಂಪ್ರದಾಯವಾದಿಗಳಂತೆ ಬಲುಬೇಗ ಮದುವೆ ಮಾಡಬೇಕು ಎಂಬುವವರ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿಲ್ಲ. ಆದರೆ 19–20ರ ವಯೋಮಿತಿಯ ನಡುವೆ ಮದುವೆಯಾಬೇಕು ಎಂಬ ಬದಲಾವಣೆಯೂ ಏರುಗತಿಯಲ್ಲಿ ಆಗಿದೆ. ಇದನ್ನೂ ಸಕಾರಾತ್ಮಕ ಬೆಳವಣಿಗೆಯೆಂದೇ ಹೇಳಬಹುದಾಗಿದೆ.

2. ಜೀವನ ಸಂಗಾತಿಯ ಆಯ್ಕೆ: ಸಂಗ್ರಹಿಸಿದ ದತ್ತಾಂಶದ ಪ್ರಕಾರ ಜೀವನ ಸಂಗಾತಿಯ ಆಯ್ಕೆಯ ಹಕ್ಕನ್ನು ಸಂಪೂರ್ಣವಾಗಿ ಮಗಳಿಗೆ ನೀಡಬೇಕು ಎಂಬುದನ್ನು ಒಪ್ಪಿದವರು ಶೇ.45 ರಷ್ಟು. ಇದಕ್ಕೆ ಪ್ರತಿಯಾಗಿ ಮಗಳಿಗೆ ಆಯ್ಕೆಯ ಹಕ್ಕನ್ನು ಕೊಡಬಾರದು ಎಂದವರು ಶೇ.33 ರಷ್ಟು ಜನ ಮದುವೆಗೆ ಜೀವನ ಸಂಗಾತಿಯ ಆಯ್ಕೆಯ ಹಕ್ಕನ್ನು ಒಪ್ಪಕೊಂಡವರದ್ದೇ ಸಿಂಹಪಾಲು ಆಗಿದೆ ಎಂಬುದು ಸಮಾಧಾನಕರ ವಿಷಯವಾಗಿದೆ. ಆದರೆ ಶೇ.33 ರಷ್ಟು ಜನ ಅಸಾಧ್ಯ ಎಂದಿರುವುದು ದುರದೃಷ್ಟಕರ. ಮಹಿಳಾ ಹಕ್ಕುಗಳ ಬಗೆಗೆ ಅವರಿಗೆ ಅರಿವು ಇಲ್ಲವೇ ಇಲ್ಲ ಎಂದೂ ಹೇಳಬಹುದಾಗಿದೆ. ಮದುವೆಯಲ್ಲಿ ತಮ್ಮ ಭಾವೀ ಸಂಗಾತಿ ಹೇಗಿರಬೇಕು ಅಥವಾ ಯಾರಿರಬಹುದು ಎಂಬ ವಿಷಯಗಳ ತೀರ್ಮಾನ ತೆಗೆದುಕೊಳ್ಳುವಾಗ ಹುಡುಗಿಯರನ್ನು ಕೇಳಲೇಬೇಕು ಎಂಬುದನ್ನು ಇವರು ಒಪ್ಪುವುದೇ ಇಲ್ಲ. ಇದು ಅವರ ಸಾಂಪ್ರದಾಯಿಕ

ಮನೋಭಾವವನ್ನೂ ತೋರುತ್ತದೆ.

ಉಳಿದಂತೆ ಮಗಳೊಡನೆ ತಾವೂ ಒಡಗೂಡಿ ನಿರ್ಧಾರ ತೆಗೆದುಕೊಳ್ಳಬೇಕು ಎಂಬುದನ್ನು ಒಪ್ಪಿಕೊಂಡಿದ್ದಾರೆ. ಅಲ್ಲಿಗೆ ತನ್ನ ಜೀವನ ಸಂಗಾತಿಯ ಸ್ವೀಕಾರ ಮತ್ತು ತಿರಸ್ಕಾರಗಳಲ್ಲಿ ಅವಳೂ ಪಾತ್ರವಹಿಸುವ ಬಗೆಗೆ ಒಲವು ತೋರುತ್ತಿದ್ದಾರೆ ಎನ್ನಬಹುದಾಗಿದೆ

3. ಕುಟುಂಬದ ಆಯ್ಕೆ:

ಅ) ಅವಿಭಕ್ತ ವಿಘಟಿತ ಹಾಗೂ ವಿಭಕ್ತ ಕುಟುಂಬದತ್ತ ಒಲವು ತೋರುತ್ತಿರುವುದು ಕಂಡು ಬರುತ್ತಿದೆ. ಮಾನಸಿಕವಾಗಿ ಒಂದೆ ಕುಟುಂಬದವರಾಗಿದ್ದು, ಭೌತಿಕವಾಗಿ ಬೇರ್ಪಟ್ಟ ಕುಟುಂಬಗಳು ಎಂದು ಎನಿಸಿಕೊಳ್ಳುವ ಅವಿಭಕ್ತ ವಿಘಟಿತ ಕುಟುಂಬದತ್ತ ಶೇ.38 ರಷ್ಟು ಜನ ಒಲವು ತೋರಿಸಿದ್ದಾರೆ. ಆದರೆ ಸಂಪೂರ್ಣ ಸ್ವಾತಂತ್ರ್ಯ ಬಯಸುವವರೇ ಹೆಚ್ಚಾಗಿರುವುದು ಶೇ.39 ರಷ್ಟು ಜನರಿದ್ದಾರೆ. ಅವಿಭಕ್ತ ಕುಟುಂಬದತ್ತ ಒಲವು ತೋರಿದವರು ಶೇ.23 ರಷ್ಟು. ಬದಲಾವಣೆಯ ಬೀಸು ರಭಸವಾಗಿಲ್ಲದಿದ್ದರೂ ಪ್ರಕ್ರಿಯೆಯ ವೇಗ ಹೆಚ್ಚಿದೆ ಎಂಬುದು ಕಂಡು ಬರುತ್ತದೆ. ಇದಕ್ಕೆ ಅವಿಭಕ್ತ ವಿಘಟಿತ ಕುಟುಂಬಗಳೇ ಕಾರಣವಾಗಿವೆ. ಅತ್ತ ಸ್ವಾತಂತ್ರ್ಯವೂ ಬಯಸುವ ಇತ್ತ ಸಹಭಾಗಿತ್ವದಲ್ಲೂ ನಂಬಿಕೆ ಇರುವ ಬಣ ಇದು. ಇವರ ಸಂಖ್ಯೆಯೂ ಗಮನೀಯವಾಗಿದೆ ಎಂಬುದು ಈ ಪ್ರತಿಕ್ರಿಯೆಗಳಿಂದ ಕಂಡು ಬರುತ್ತದೆ.

ಬ) ಬಯಸಿದ ಮಕ್ಕಳ ಸಂಖ್ಯೆ: ಹೆರಬಹುದೇ ಎಂದು ಪ್ರಶ್ನಿಸಿದಾಗ ಶೇ.18 ರಷ್ಟು ಜನರು ಮಾತ್ರ ಒಂದು ಅಥವಾ ಎರಡು ಮಕ್ಕಳಿರಲಿ ಎಂಬುದನ್ನು ಒಪ್ಪಿಕೊಂಡಿದ್ದಾರೆ. ಇದರರ್ಥ ಅತಿ ಸೀಮಿತ ಸಂಖ್ಯೆಗೂ ಒಪ್ಪದ, ಅತಿ ಹೆಚ್ಚಿನ ಮಕ್ಕಳಿಗೂ ತಯಾರಿಲ್ಲದ ತಮ್ಮ ಅನುಕೂಲಕ್ಕೆ ತಕ್ಕಂತೆ 3–4 ಮಕ್ಕಳನ್ನು ಹೆರಬೇಕು ಎನ್ನುವವರ ಸಂಖ್ಯೆಯೇ ಹೆಚ್ಚಾಗಿದೆ. ಇದರಲ್ಲಿ ಇನ್ನೊಂದು ಗಮನೀಯ ಅಂಶವೆಂದರೆ ಸದಸ್ಯರಿಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಪದಾಧಿಕಾರಿಗಳು 3–4 ಮಕ್ಕಳಿರಬೇಕು ಎಂಬ ವಾದವನ್ನು ಮುಂದಿಡುತ್ತಾರೆ. ಹಾಗಾಗಿ ಸಮರ್ಪಕ ಮಕ್ಕಳ ಸಂಖ್ಯೆಯ ಮೀನ್ 3.5 ಆಗಿದೆ.

4. ಕುಟುಂಬ ಯೋಜನೆಯಲ್ಲಿ ನಂಬಿಕೆ: ಯೋಜನೆಯನ್ನು ಬಹುಮಟ್ಟಿಗೆ ನಂಬುತ್ತಾರೆ ಎಂಬುದನ್ನು ಈ ಅಧ್ಯಯನ ಸ್ಪಷ್ಟಪಡಿಸುತ್ತದೆ. ಶೇ.67 ರಷ್ಟು ಜನ ಬಹುಮಟ್ಟಿಗೆ ಕುಟುಂಬ ಯೋಜನೆಯಲ್ಲಿ ನಂಬಿಕೆ ಇರಿಸಿದ್ದಾರೆ ಎಂಬುದು ತೋರಿಸಿಕೊಡುತ್ತದೆ. ಪದಾಧಿಕಾರಿಗಳಲ್ಲಿ ಶೇ.75 ರಷ್ಟು ಜನರು ಕುಟುಂಬ ಯೋಜನೆಯನ್ನು ತಮ್ಮ ಬದುಕಿನ ಅನುಕೂಲವೆಂದೇ ಅರಿತಿದ್ದಾರೆ. ಪ್ರತಿನಿಧಿಗಳೊಂದಿಗೆ ಚರ್ಚಿಸಿದಾಗ ಬೇಡದ ಬಸಿರು, ಅನಗತ್ಯದ ಗರ್ಭಪಾತ, ಇಂಥ ಸಮಸ್ಯೆಗಳಿಗೆ ಬದಲಾಗಿ ಕುಟುಂಬ ಯೋಜನೆಯನ್ನು ಅನುಸರಿಸುವುದೇ ಒಳಿತು ಎಂಬ ನಂಬಿಕೆ ಅವರಲ್ಲಿ

ಬೆಳೆದಿದೆ ಎಂದು ಕಂಡು ಬಂದಿತು. ಜೀವನ ಮಟ್ಟ ಸುಧಾರಣೆಗೆ ದುಡಿಮೆಗೆ ತಕ್ಕ ವೆಚ್ಚ ನಂಬಿಕೆಯನ್ನು ನಗರೀಕರಣದ ಪ್ರಭಾವದಿಂದಾಗಿಯೇ ಬೆಳೆಯಿತು. ಹೀಗಾಗಿ ಸಣ್ಣ ಕುಟುಂಬದತ್ತ ಗ್ರಾಮೀಣ ಮಹಿಳೆಯರು ವಾಲತೊಡಗಿದರು.

5. ಕುಟುಂಬ ಯೋಜನೆಯ ಲಾಭ ಹಾನಿಗಳು: ಈ ಅಧ್ಯಾಯದಲ್ಲಿ ಬರುವ ಕೋಷ್ಟಕಗಳನ್ನು ಗಮನಿಸಿದಾಗ ಪದಾಧಿಕಾರಿಗಳು ಸದಸ್ಯರಿಗಿಂತ ಹೆಚ್ಚು ನಿರ್ದಿಷ್ಟ, ನಿಖರ ಮಾಹಿತಿ ಹೊಂದಿದವರೂ ಸಕಾರಾತ್ಮಕ ಧೋರಣೆಯನ್ನು ಉಳ್ಳವರಾಗಿಯೂ ಕಂಡು ಬರುತ್ತಾರೆ. ಈ ಅಂಶವನ್ನು ಮುಂದಿಟ್ಟುಕೊಂಡು ಈ ಅಧ್ಯಾಯದ ಕೊನೆಯ ಹಂತಕ್ಕೆ ಬರುವ ಪ್ರತಿನಿಧಿಗಳಲ್ಲಿ ಬಹುತೇಕ ಜನರು ಕುಟುಂಬ ಯೋಜನೆಯ ಬಗೆಗೆ ಸಕಾರಾತ್ಮಕ ಧೋರಣೆಯನ್ನು ಉಳ್ಳವರಾಗಿದ್ದಾರೆ. ಕುಟುಂಬದ ಗಾತ್ರ ಸಣ್ಣದಾಗಿಸುವುದರಿಂದಲೇ ಜೀವನ ಮಟ್ಟದಲ್ಲಿ ಸುಧಾರಣೆಯಾಗುತ್ತದೆ. ಮಕ್ಕಳ ಮತ್ತು ಪಾಲಕರ ಆರೋಗ್ಯ ರಕ್ಷಣೆಯಾಗುತ್ತದೆ. ಮನೆ ಮತ್ತು ಮಕ್ಕಳ ನಿರ್ವಹಣೆಗೆ ಸುಲಭವಾಗುತ್ತದೆ. ದಂಪತಿಯ ನಡುವಿನ ಅನುಬಂಧ ಗಟ್ಟಿಗೊಳ್ಳುತ್ತದೆ. ಪರಸ್ಪರ ಅರಿವು, ಅಭಿಮಾನ ಪ್ರೀತಿಗೆ ಅವಕಾಶವಾಗುತ್ತದೆ. ಈ ಅಂಶಗಳನ್ನು ಬಹುತೇಕ ಹೇಳಿಕೆದಾರರು ಒಪ್ಪಿಕೊಂಡಿದ್ದಾರೆ.

ಅದೇ ಹೊತ್ತಿಗೆ ಕೊನೆಯ ಎರಡು ಅಂಶಗಳ ಬಗೆಗೆ ಬಹುತೇಕ ಜನರ ಋಣಾತ್ಮಕ ಹೇಳಿಕೆಗಳನ್ನೂ ದಾಖಲಿಸಲಾಗಿದೆ. ಬಯಕೆಯ ಮಕ್ಕಳು ಮಗ/ಮಗಳು ಹುಟ್ಟುವ ಬಗೆಗೆ ನಿರಾಶಾದಾಯಕ ಮನೋಭಾವ ತೋರಿದ್ದಾರೆ. ಅದರೊಂದಿಗೆ ಸಣ್ಣ ಕುಟುಂಬದ ಬಗೆಗೆ ಅಭದ್ರ ಭಾವದ ಆತಂಕವನ್ನೂ ತೋರಿಸಿಕೊಟ್ಟಿದ್ದಾರೆ.

6. ಗಂಡು ಮಗುವಿಗೆ ಆದ್ಯತೆ ನೀಡುವ ಮನೋಭಾವದಲ್ಲಿ ಬದಲಾವಣೆ: ಪದಾಧಿಕಾರಿಗಳು ಹೆಚ್ಚು ಪ್ರಗತಿಪರರು ಎಂದು ಕಂಡುಬರುತ್ತದೆ. ಸದಸ್ಯರು ಹೆಚ್ಚುಹೆಚ್ಚಾಗಿ ಸಾಂಪ್ರದಾಯಿಕವಾಗಿ ಯೋಚಿಸುತ್ತಾರೆ. ಶೇ.35 ರಷ್ಟು ಜನರು ಈಗಲೂ ಗಂಡು ಮಗು ಬೇಕೆಬೇಕು ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಶೇ.15 ರಷ್ಟು ಜನರು ಮಾತ್ರ ಮಗನೇ ಆಗಬೇಕಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಒಟ್ಟಾರೆಯಾಗಿ ಹೇಳಬೇಕೆಂದರೆ ಗ್ರಾಮೀಣ ಮಹಿಳೆಯರಲ್ಲಿ ಸಣ್ಣ ಕುಟುಂಬದ ಬಗೆಗೆ ಒಲುವು ಹೆಚ್ಚುತ್ತಿರುವಾಗಲೇ ಮಗು ಯಾವುದಾದರೂ ಆಗಲಿ ಎಂಬ ಮನೋಭಾವವೂ ಬೆಳೆಯುತ್ತಿದೆ ಎಂದು ಹೇಳಬಹುದಾಗಿದೆ.

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ಗ್ರಾಮೀಣ ಮಹಿಳೆಯರ ಸಾಮಾಜಿಕ ಚಲನೆ ಹೆಚ್ಚು ಹೆಚ್ಚು ಸಕಾರಾತ್ಮಕವಾಗುತ್ತಿದೆ. ಸಾಂಪ್ರದಾಯಿಕ ತಳಹದಿಯ ಮೇಲೆ ಯೋಚಿಸುತ್ತಿರುವಾಗಲೇ ಸಮಕಾಲೀನ ಬದುಕಿನೊಂದಿಗೆ ಹೆಜ್ಜೆ ಹಾಕುವ ಯತ್ನಗಳನ್ನೂ ಮಾಡುತ್ತಿದ್ದಾರೆ. ಮದುವೆ,

ಕುಟುಂಬಗಳಂಥ ಸಾಮಾಜಿಕ ಸಂಸ್ಥೆಗಳಲ್ಲಿ ಮೂಲ ಆಯ್ಕೆ ಮತ್ತು ತೀರ್ಮಾನಗಳ ವಿಷಯದಲ್ಲಿ ಗ್ರಾಮೀಣ ಮಹಿಳೆಯರು ಸ್ವಲ್ಪ ಮಟ್ಟಿನ ಪಾತ್ರ ವಹಿಸುತ್ತಿರುವುದು ಮಹಿಳೆಯರ ಸಬಲೀಕರಣಕ್ಕೆ ಪೂರಕವಾಗಿದೆ ಎಂದು ಹೇಳಬಹುದಾಗಿದೆ.

5.2 ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣ:

ಪೀಠಿಕೆ:

ಉದ್ಯೋಗವು ಸಬಲೀಕರಣದ ಮೂಲವಾಗಿದೆ ಅಥವಾ ಬೆನ್ನೆಲುಬಾಗಿದೆ ಎಂದು ಹೇಳಬಹುದು ಉದ್ಯೋಗಸ್ಥ ಮಹಿಳೆಯ ಸ್ಥಾನಮಾನಗಳು ನಿಶ್ಚಿತವಾಗಿಯೇ ನಿರುದ್ಯೋಗಿ ಮಹಿಳೆಗಿಂತ ಸಕಾರಾತ್ಮಕವಾಗಿ ಬೇರೆಯಾಗಿರುತ್ತವೆ. ಉದ್ಯೋಗವು ಮಹಿಳಾ ಸಬಲೀಕರಣದ ಮೂಲ ಸಾಧನವಾಗಿದೆ.

ಗ್ರಾಮೀಣ ಮಹಿಳೆಯರ ಉದ್ಯೋಗ ಕುರಿತು ವಿಶಾಲವಾದ ಅರ್ಥದಲ್ಲಿ ಹೇಳುವುದಾದರೇ "ಉದ್ಯೋಗವೆಂದರೆ ಆರ್ಥಿಕ ಸಶಕ್ತಿಕರಣ ಮಾತ್ರವಲ್ಲ, ಖರೀದಿಸುವ ಸಾಮರ್ಥ್ಯ, ಉಳಿಕೆಯ ಸಾಮರ್ಥ್ಯ ಹಾಗೂ ವೆಚ್ಚದ ಸಾಮರ್ಥ್ಯ ಹಾಗೂ ಠೇವಣಿ ಇಡುವ ಸಾಮರ್ಥ್ಯ ಮತ್ತು ಹಕ್ಕನ್ನೂ ನೀಡುತ್ತದೆ. ಹೀಗಾಗಿ ಉದ್ಯೋಗಸ್ಥ ಮಹಿಳೆಯ ಸ್ಥಾನಮಾನ ಕುಟುಂಬ, ಸಮಾಜ ಹಾಗೂ ಇಡೀ ಸಾಮಾಜಿಕ ವ್ಯವಸ್ಥೆಯಲ್ಲಿ ಭಿನ್ನವಾಗಿಯೇ ಇರುತ್ತದೆ'ಎಂದು ಅಶೋಕ ಮಿತ್ರ 1975 "ದಿ ಸ್ಟೇಟಸ್ ಆಫ್ ವುಮೆನ್: ಲಿಟ್ರಸಿ ಅಂಡ್ ಎಂಪ್ಲಾಯ್‌ಮೆಂಟ್" ಎಂಬ ಪುಸ್ತಕದಲ್ಲಿ ಹೇಳಿದ್ದಾರೆ". ಹೀಗಾಗಿ ಸಬಲೀಕರಣದ ಮೂಲ ಸಲಕರಣೆಯೇ ಉದ್ಯೋಗವೆಂದೂ ಹೇಳಬಹುದಾಗಿದೆ. ಉದ್ಯೋಗವಿಲ್ಲದೆ ಸಬಲೀಕರಣದ ಪರಿಕಲ್ಪನೆಯೇ ಪೂರ್ಣಗೊಳ್ಳದು ಎಂದು ನಂಬಲಾಗಿದೆ. ಹಾಗೆಯೇ ಮುಂದುವರೆದು ಉದ್ಯೋಗವೇ ಮಹಿಳೆಯ ಆರ್ಥಿಕ ಸಬಲೀಕರಣವಾಗಿದೆ. ಈ ಊಹೆಯನ್ನೇ ಮುಂದಿಟ್ಟುಕೊಂಡು ಮಾಡಿರುವ ಅಧ್ಯಯನವು ಸಮಾಜಿಕ ಸ್ವರೂಪದಲ್ಲಿ ಉದ್ಯೋಗಸ್ಥ ಮಹಿಳೆಯು ಪ್ರಮುಖ ಪಾತ್ರವನ್ನು ವಹಿಸುತ್ತಾಳೆ ಎಂಬುದನ್ನು ಸಾಬೀತುಪಡಿಸಿದೆ"[6].

ಆರ್ಥಿಕ ಸಬಲೀಕರಣದ ಅರ್ಥ:

ಆರ್ಥಿಕ ಸಬಲೀಕರಣದ ಅರ್ಥವೆಂದರೆ ಪ್ರತಿಯೊಬ್ಬ ವ್ಯಕಿಯನ್ನೂ ಉತ್ಪಾದಕನಾಗಿ ನಿರ್ಮಿಸುವುದು ಅಥವಾ ತರಬೇತಿಗೊಳಿಸುವುದೇ ಆಗಿದೆ. ಪ್ರತಿಯೊಬ್ಬನೂ ಒಂದಲ್ಲ ಒಂದು ಉತ್ಪಾದನೆ ಅಥವಾ ಸೇವೆಯನ್ನು ನೀಡುವಂಥವನಾಗಿರಬೇಕು. ಆ ಉತ್ಪಾದನೆ ಅಥವಾ ಸೇವೆಗೆ ಮಾರುಕಟ್ಟೆಯಲ್ಲಿ ವಿನಿಮಯ ದರವಿರಲೇಬೇಕು.

ಈ ಅಧ್ಯಯನದಲ್ಲಿ ಗ್ರಾಮೀಣ ಮಹಿಳೆಯರ ಆರ್ಥಿಕ ಸಬಲೀಕರಣವನ್ನು ವಿಶಾಲವಾದ ಅರ್ಥದಲ್ಲಿ ಬಳಸಲಾಗಿದೆ. ಇಲ್ಲಿ ಕೇವಲ ವ್ಯಕ್ತಿಯೊಬ್ಬ ಗ್ರಾಹಕನ ಉತ್ಪಾದನೆಯನ್ನು ಉತ್ಪಾದಿಸುವ ಉತ್ಪಾದಕನಾಗಿ ಅಥವಾ ಸೇವೆಗಳನ್ನು ನೀಡುವವನಾಗಿ ಮಾತ್ರ ಪರಿಗಣಿಸಿಲ್ಲ. ಅದರೊಂದಿಗೆ ಆರ್ಥಿಕ ಧೋರಣೆಗಳನ್ನೂ ಅಧ್ಯಯನಿಸುವ ಪ್ರಯತ್ನ ಮಾಡಲಾಗಿದೆ.

ಗ್ರಾಮೀಣ ಮಹಿಳೆಯರು ತಮ್ಮ ಉತ್ಪಾದನಾ ಸಾಮರ್ಥ್ಯದಿಂದ ಗಳಿಸಿರುವ ಸಂಪತ್ತಿನ ವಿತರಣೆ, ಗಳಿಕೆ, ಉಳಿಕೆ ಹಾಗೂ ಮತ್ತೆ ಬಂಡವಾಳವಾಗಿಸುವ ಪ್ರಕ್ರಿಯೆಗಳಲ್ಲಿ ತೊಡಗಿಸಿಕೊಂಡಿರುವ ಬಗೆಯನ್ನು ನಿರ್ಧರಿಸಲಾಗುತ್ತದೆ. ಉಳಿಕೆಯೊಂದಿಗೆ ಠೇವಣಿ ಇಡುವುದು, ಹಣದ ವಿತರಣೆ ಮಾಡುವುದು ಮುಂತಾದ ಎಲ್ಲವನ್ನೂ ಆರ್ಥಿಕ ಚಟುವಟಿಕೆಗಳೆಂದೇ ಪರಿಗಣಿಸಲಾಗಿದೆ. ಸ್ವ-ಸಹಾಯ ಸಂಘದಲ್ಲಿ ಮಹಿಳೆಯರ ಆರ್ಥಿಕ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಚರ್ಚಿಸಲಾಗಿದೆ.

ಮಹಿಳಾ ಸಬಲೀಕರಣದ ಅಧ್ಯಾಯದಲ್ಲಿ ಆರ್ಥಿಕ ಸಬಲೀಕರಣದ ಅಧ್ಯಾಯವನ್ನು 5 ಮುಖ್ಯ ಉದ್ದೇಶಗಳೊಂದಿಗೆ ಅಧ್ಯಯನಿಸಲಾಗಿದೆ.

1. ಸದ್ಯದ ಉದ್ಯೋಗದ ಸ್ಥಿತಿ
2. ಸಾಲ ಪಡೆದ ಬಗೆ, ಬ್ಯಾಂಕ್ ಸಾಲ, ಹಣ ಬಳಕೆ
3. ಹೂಡಿಕೆಯ ವಿಧಗಳು
4. ಆರ್ಥಿಕವಲ್ಲದ ಲಾಭಗಳ ಬಗೆಗಿನ ಧೋರಣೆ
5. ಸಾಲ ಮತ್ತು ಹೂಡಿಕೆಗಳ ಆರ್ಥಿಕ ಲಾಭಗಳ ಬಗೆಗಿನ ಧೋರಣೆ

ಮಹಿಳೆ ಮನೆ ಕೆಲಸ ಮಾಡಿದರೆ ಸಾಕು ಹೊರಗಡೆ ಉದ್ಯೋಗ, ಪುರುಷರಿಗೆ ಸೀಮಿತವಾಗಿದ್ದ ಈ ಕಾಲದಲ್ಲಿಯೂ ಸ್ತ್ರೀವಾದಿ ನೆಲೆಯಿಂದ ಮಹಿಳೆಯರು ಸ್ವ-ಸಹಾಯ ಸಂಘದಲ್ಲಿ ಯಾವ ರೀತಿಯಾಗಿ ಉದ್ಯೋಗದ ಸ್ಥಿತಿಯನ್ನು ಹೊಂದಿದ್ದಾರೆಂದು ಚರ್ಚಿಸಲಾಯಿತು.

ಈ ಮೇಲಿನ ಉದ್ದೇಶಗಳನ್ನು ಎದುರಿಗಿರಿಸಿಕೊಂಡು ಪ್ರತಿಕ್ರಿಯೆಗಳನ್ನು ಸಂಗ್ರಹಿಸಿದಾಗ ಅವರ ಆರ್ಥಿಕ ಸ್ಥಿತಿಯ ಚಿತ್ರಣ ದೊರಕಿತು.

ಹೇಳಿಕೆದಾರರ ಉದ್ಯೋಗದ ಸ್ಥಿತಿಯ ವಿವರ:

ಈ ವಿಭಾಗದಲ್ಲಿ ಹೇಳಿಕೆದಾರರ ಉದ್ಯೋಗ ಸ್ಥಿತಿಯನ್ನು ಅಧ್ಯಯನಿಸಲಾಯಿತು. ಅಧ್ಯಯನಕ್ಕೆ ಒಳಪಟ್ಟ ಹೇಳಿಕೆದಾರರಲ್ಲಿ ಅದೆಷ್ಟು ಜನರು ಉದ್ಯೋಗವನ್ನು ಹೊಂದಿದ್ದಾರೆ? ಆದಾಯ ಹುಟ್ಟಿಸುವಂಥ ಕೆಲಸದಲ್ಲಿದ್ದಾರೆ? ಅದು ತಾತ್ಕಾಲಿಕ ಉದ್ಯೋಗವೇ ಅಥವಾ ಶಾಶ್ವತವಾಗಿರುವ ಆದಾಯಕರ ಕೆಲಸವೆ ಎಂಬ ಅಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಯಿತು.

ಕೋಷ್ಟಕ – 5.2.1
ಹೇಳಿಕೆದಾರರ ಉದ್ಯೋಗದ ಸ್ಥಿತಿಯ ವಿವರ

ಕ್ರ ಸಂ.	ಉದ್ಯೋಗದ ಸ್ಥಿತಿ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ನಿರಂತರ ಸ್ವ–ಉದ್ಯೋಗ	62	52%	81	45%	143	48%
02.	ಕೂಲಿ ಉದ್ಯೋಗ	36	30%	58	32%	94	32%
03.	ಗ್ರಹಿಣಿ	22	18%	41	23%	63	20%
	ಒಟ್ಟು	**120**	**100%**	**180**	**100%**	**300**	**100%**

ಇಲ್ಲಿ ಸಂಗ್ರಹಿಸಿದ ದತ್ತಾಂಶವು ಮಹಿಳೆಯರಲ್ಲಿ ಶೇ.48 ರಷ್ಟು ಜನರು ಸತತವಾಗಿ ಆದಾಯ ಉತ್ಪನ್ನವಾಗುವ ಸ್ವಯಂ ಉದ್ಯೋಗದಲ್ಲಿದ್ದಾರೆ. ಉದಾಹರಣೆಗೆ ಕಾಯಿಪಲ್ಯ ಮಾರಾಟ, ಚಹಾ ಅಂಗಡಿ, ಚಿಕ್ಕ ಕಿರಣಾ ಅಂಗಡಿ, ಎಸ್.ಟಿ.ಡಿ. ಸೆಂಟರನಲ್ಲಿ ಸಹಾಯಕರಾಗಿ, ಚಪ್ಪಲಿ ರಿಪೇರಿ ಮುಂತಾದ ಸಣ್ಣ ಸಣ್ಣ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದರೆ ಶೇ 32ರಷ್ಟು ಜನ ಕೂಲಿಯಾಧಾರಿತ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೂಲಿಗಳಾಗಿ ಅಥವಾ ಮನೆಕೆಲಸದವರಾಗಿ ಕೆಲಸ ಮಾಡುತ್ತಾರೆ. ಅತಿ ಕಡಿಮೆಯೆನ್ನಬಹುದಾದ ಗುಂಪು ಗ್ರಹಿಣಿಯರದ್ದಾಗಿದೆ. ಶೇ.20 ರಷ್ಟು ಜನ ಮಾತ್ರ ಗ್ರಹಿಣಿಯರಾಗಿದ್ದಾರೆ. ಅಂದರೆ ಮನೆವಾರ್ತೆಯ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಾರೆ. ಗಮನೀಯವಾದ ಅಂಶವೇನೆಂದರೆ ಈ ವಿಭಾಗದಲ್ಲಿ ಬರುವ ಮಹಿಳೆಯರು ತಮಗೆ ವಯಸ್ಸಯಾಗಿದೆ ಎಂದು ಹೊರಗಡೆ ಹೋಗಿ ದುಡಿಯಲಿಕ್ಕೆ ಆಗಲ್ಲ ಎಂದರು.

ಈ ದತ್ತಾಂಶವು ಇನ್ನೊಂದು ವಿಷಯವನ್ನು ಸ್ಪಷ್ಟಪಡಿಸುತ್ತದೆ. ಸ್ವಸಹಾಯ ಸಂಘಗಳು ತಮ್ಮ ಸದಸ್ಯರಿಗೆ ಸ್ವಯಂ ಉದ್ಯೋಗ ಮಾಡುವಲ್ಲಿ ಹೆಚ್ಚಿನ ಸಹಾಯ ಮಾಡಿಲ್ಲ. ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಂಡವರು ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗಕ್ಕೆ ಸೇರಿದವರಾಗಿದ್ದಾರೆ. ಕೆಲವು ಮಹಿಳೆಯರು ಬ್ಯಾಂಕಿನಿಂದ ಸಾಲ ಪಡೆದಿರುವುದಾಗಿ ತಿಳಿಸಿದರು. ಹಿಂದುಳಿದ ಜಾತಿ ಮತ್ತು ಹಿಂದುಳಿದ ಪಂಗಡಕ್ಕೆ ಸೇರಿದ ಸದಸ್ಯರು ಕೂಲಿ ಆಧಾರಿತ ಕೆಲಸಗಳಲ್ಲಿ ತೊಡಗಿರುವುದೂ ಗಮನೀಯವಾದ ಅಂಶವೇ. ಅವರಲ್ಲಿ ಯಾರಾದರೂ ಸ್ವಯಂ ಉದ್ಯೋಗಕ್ಕೆ ಸಹಾಯವಾಗುವಂತೆ ಬ್ಯಾಂಕುಗಳಿಂದ ಸಾಲ ಪಡೆದಿದ್ದಾರೆಯೇ ಎಂಬುದನ್ನು ಪರಿಶೀಲಿಸಲಾಯಿತು. ಕೆಲವು ಜನ ಮಹಿಳೆಯರು ಬ್ಯಾಂಕಿನಿಂದ ಸಾಲ ಪಡೆದಿರುವುದಾಗಿ ತಿಳಿದು ಬಂದಿದೆ.

ಪದಾಧಿಕಾರಿಗಳಲ್ಲಿ ಶೇ 52ರಷ್ಟು ಜನರು ಸ್ವಯಂ ಉದ್ಯೋಗ ಹೊಂದಿದ್ದಾರೆ. ಶೇ.30 ರಷ್ಟು ಜನರು ಕೂಲಿ ಕೆಲಸವನ್ನು ಆಧರಿಸಿದ್ದಾರೆ. ಸದಸ್ಯರಲ್ಲಿ ಶೇ.45 ರಷ್ಟು ಜನರು ಸ್ವಯಂ

ಉದ್ಯೋಗ ಮಾಡುತ್ತಿದ್ದರೆ, ಕೇವಲ ಶೇ.32 ರಷ್ಟು ಜನ ಕೂಲಿ ಆಧಾರಿತ ಕೆಲಸ ಮಾಡುತ್ತಾರೆ. ಇದಷ್ಟೇ ಅಲ್ಲ ಪದಾಧಿಕಾರಿಗಳು ಬ್ಯಾಂಕ್ ನಿರ್ವಹಣೆ, ವ್ಯಾಪಾರ ಹಾಗೂ ವ್ಯವಹಾರಗಳನ್ನು ಚೆನ್ನಾಗಿ ಬಲ್ಲವರಾಗಿದ್ದಾರೆ ಎಂಬುದನ್ನೂ ಅಂಕಿ ಅಂಶಗಳು ಸ್ಪಷ್ಟಪಡಿಸಿವೆ. ಹೀಗಾಗಿ ಪದಾಧಿಕಾರಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ವ್ಯವಹಾರಗಳಲ್ಲಿ ತೊಡಗಿಸಿಕೊಂಡಿರುವುದು ಸಹಜವಾಗಿದೆ. ಹಾಗೂ ಇವರು ತಮ್ಮ ಉದ್ಯೋಗಕ್ಕೆ ತೆಗೆದುಕೊಂಡಿರುವ ಸಾಲದ ವಿಷಯ ಕುರಿತಾದ ವಿವರವನ್ನು ಮುಂದಿನ ವಿಶ್ಲೇಷಣೆಯಲ್ಲಿ ಕಾಣಬಹುದಾಗಿದೆ.

ಸಾಲ ಪಡೆದಿರುವ ಬಗೆಗಳು :

ಈ ಅಧ್ಯಾಯದಲ್ಲಿ ಸ್ವಸಹಾಯ ಸಂಘದ ಮಹಿಳೆಯರು ಎಂಥ ಬಗೆಯ ಸಾಲಗಳನ್ನು ಪಡೆದಿದ್ದಾರೆ ಎಂಬುದನ್ನು ಚರ್ಚಿಸಲಾಯಿತು. ಸಾಲ ಪಡೆದಿರುವ ಬಗೆಗೆ ನಿರ್ದಿಷ್ಟವಾಗಿ ಪ್ರಶ್ನಿಸಲಾಯಿತು. ಪಡೆದಿರುವ ಸಾಲಗಳು ಕೇವಲ ವೆಚ್ಚಕ್ಕಾಗಿ ಪಡೆಯಲಾಯಿತೇ ಅಥವಾ ಯೋಜನೆಯನ್ನು ಸಿದ್ಧಪಡಿಸಿ, ಕ್ರಿಯಾಯೋಜನೆ ಸಜ್ಜುಪಡಿಸಿ, ಅಗತ್ಯದ ಮಾಹಿತಿ ಪತ್ರಗಳನ್ನು ಬರೆದು, ಸಾಲ ಪಡೆಯುವಂತೆ ಆಗಿದೆಯೇ ಎಂಬುದನ್ನು ತಿಳಿಯಲು ಪ್ರಯತ್ನಪಡಲಾಯಿತು.

ಆದರೆ ಇನ್ನೊಂದೆಡೆ ಬ್ಯಾಂಕಿನಿಂದ ಸಾಲ ಪಡೆಯಲು ಯೋಜನಾ ವರದಿಯನ್ನು ಸಿದ್ಧಪಡಿಸಿ ಬ್ಯಾಂಕಿಗೆ ಒಪ್ಪಿಸಬೇಕಾಗುತ್ತದೆ. ನಂತರ ಬ್ಯಾಂಕ್ ಅಧಿಕಾರಿಗಳು ಸಂಘಕ್ಕೆ ಭೇಟಿ ನೀಡಿ ಸಂಘ ಸಭೆ ಮತ್ತು ದಾಖಲಾತಿಯನ್ನು ಪರಿಶೀಲಿಸಿ ಸಾಲದ ಮಂಜೂರು ದೊರೆಯುತ್ತದೆ. ಪ್ರಸ್ತಾಪ ಸಲ್ಲಿಸಿದ ನಂತರವೂ ಸಾಲ ಪಡೆಯಲು ಶಿಫಾರಸ್ಸು, ಅಧಿಕಾರ, ಅರಿವು ಎಲ್ಲವೂ ಇರಬೇಕಾಗುತ್ತದೆ. ಇವೆಲ್ಲವನ್ನು ಪರಿಗಣಿಸಿದರೆ ಬ್ಯಾಂಕ್ ಸಾಲ ಪಡೆಯುವುದು ಸುಲಭದ ಕೆಲಸವೇನಲ್ಲ.

ಕೋಷ್ಟಕ–5.2.2
ಸಾಲದ ಬಗೆಗಿನ ವಿವರ ಸಂಘದಿಂದ ಮತ್ತು ಬ್ಯಾಂಕಿನಿಂದ

ಕ್ರ ಸಂ.	ಸಾಲದ ಬಗೆಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಉಳಿತಾಯದ ಸಾಲ	39	40%	84	60%	123	52%
02.	ಬ್ಯಾಂಕ್ ಸಾಲ	39	40%	56	40%	95	40%
03.	ಎರಡೂ ಬಗೆಯ ಸಾಲ	20	20%	–	–	20	08%
	ಒಟ್ಟು	**120**	**100%**	**180**	**100%**	**300**	**100%**

ಈ ದತ್ತಾಂಶವು ಶೇ.52 ರಷ್ಟು ಉಪಭೋಗದ ಸಾಲವನ್ನು ಪಡೆದಿದ್ದರೆ, ಶೇ.40 ರಷ್ಟು ಜನರು ಬ್ಯಾಂಕ್ ಸಾಲವನ್ನು ಪಡೆದಿದ್ದಾರೆ. ಆದರೆ ಕೇವಲ ಶೇ.8 ರಷ್ಟು ಜನರು ಮಾತ್ರ ಎರಡೂ ಸಾಲವನ್ನು

ಪಡೆದಿದ್ದಾರೆ. ಈ ಅಂಶವನ್ನು ಗಮನಿಸಿದರೆ ಸ್ವಸಹಾಯ ಸಂಘಗಳಂಥ ಸೂಕ್ಷ್ಮ ಅರ್ಥ ಶಾಸ್ತ್ರದ ಘಟಕಗಳು ಯಾವುದೇ ಬಗೆಯ ಹೆಚ್ಚಿನ ಸಹಾಯ ಮಾಡಿಲ್ಲ ಎಂಬುದು ಅರ್ಥವಾಗುತ್ತದೆ. ಬಹುಸಂಖ್ಯಾತ ಜನರು ಉಳಿತಾಯದ ಸಾಲ ಪಡೆದಿರುವುದರಿಂದ ಅವರೆಲ್ಲ ಸ್ವಯಂಉದ್ಯೋಗಿಗಳಾಗಲು ಸಾಧ್ಯವಾಗಿಲ್ಲ.

ಬ್ಯಾಂಕ್ ಸಾಲ ಪಡೆದಿರುವ ಎಲ್ಲ ಹೇಳಿಕೆದಾರರು ಶಿಕ್ಷಿತರು. ಉಳ್ಳವರು ಹಾಗೂ ವ್ಯಾಪಾರದ ಬಗ್ಗೆ ಸ್ವಲ್ಪ ಜ್ಞಾನ ಉಳ್ಳವರಾಗಿದ್ದಾರೆ ಎಂಬುದು ಸಹ ಇಲ್ಲಿ ಉಲ್ಲೇಖನೀಯ.

ಇದೇ ದತ್ತಾಂಶವು ತೋರುವ ಇನ್ನೊಂದು ಅಂಶವೆಂದರೆ ಪದಾಧಿಕಾರಿಗಳು ಉಳಿತಾಯದ ಸಾಲಕ್ಕಿಂತ ಹೆಚ್ಚಾಗಿ ಬ್ಯಾಂಕ್ ಸಾಲಗಳನ್ನೆ ಪಡೆದಿದ್ದಾರೆ. ಸದಸ್ಯರಲ್ಲಿ ಶೇ 60ರಷ್ಟು ಜನರು ಉಳಿತಾಯ ಸಾಲವನ್ನೇ ಪಡೆದಿದ್ದಾರೆ. ಮೆಚ್ಚಬಹುದಾದ ಇನ್ನೊಂದು ಅಂಶ ಪದಾಧಿಕಾರಿಗಳು ಉಳಿತಾಯದ ಸಾಲ ಹಾಗೂ ಬ್ಯಾಂಕ್ ಸಾಲ ಎರಡನ್ನೂ ನಿರ್ವಹಿಸಬಲ್ಲವರಾಗಿದ್ದಾರೆ. ಈ ದತ್ತಾಂಶಗಳಿಂದ ಈ ಕೆಳಗಿನ ತೀರ್ಮಾನಗಳಿಗೆ ಬರಬಹುದಾಗಿದೆ.

ಬಹುತೇಕ ಜನರು ಉಳಿತಾಯದ ಸಾಲಗಳತ್ತ ಆಕರ್ಷಿತರಾಗಿದ್ದಾರೆ. ಅವರಿಗೆ ಸ್ವಯಂ ಉದ್ಯೋಗದತ್ತ ಒಲವು ಅಥವಾ ಸವಾಲುಗಳನ್ನು ಎದುರಿಸುವ ಆಸಕ್ತಿಯಿದೆ ಏನಿಸುವುದಿಲ್ಲ. ಬ್ಯಾಂಕ್ ಸಾಲ ಪಡೆಯುವ ಮರಳಿಸುವ ಸಾಮರ್ಥ್ಯದ ಬಗೆಗೆ ವಿಶ್ವಾಸದ ಕೊರತೆ ಇದೆ. ಇದು ಸ್ವ-ಸಹಾಯ ಸಂಘದ ಸದಸ್ಯರೆಲ್ಲರು ಆರ್ಥಿಕ ಸಬಲೀಕರಣವಾಗಿಲ್ಲ ಎಂಬುದು ಸ್ಪಷ್ಟಪಡಿಸುತ್ತದೆ. ಅತೀ ಚಿಕ್ಕ ಸಮೂಹ ಎನ್ನಬಹುದಾದ ಶೇ 8ರಷ್ಟು ಪದಾಧಿಕಾರಿಗಳು ಎರಡೂ ಬಗೆಯ ಸಾಲಗಳನ್ನು ನಿರ್ವಹಿಸಬಲ್ಲವರು ಆಗಿದ್ದಾರೆ. ಇದರರ್ಥ ಸ್ವಲ್ಪ ಮಟ್ಟಿನ ಸದಸ್ಯರು ಮಾತ್ರ ಬ್ಯಾಂಕ್ ಸೌಲಭ್ಯದ ಲಾಭ ಪಡೆಯುತ್ತಿದ್ದಾರೆ.

ಸ್ವ-ಸಹಾಯ ಸಂಘದ ಅತಿದೊಡ್ಡ ಸಮೂಹವನ್ನು ಪ್ರತಿನಿಧಿಸುವ ಗುಂಪು ಆರ್ಥಿಕವಾಗಿ ಸಬಲೀಕರಣವಾಗಿಲ್ಲ ಎಂಬುದನ್ನು ಪ್ರತಿಬಿಂಬಿಸುತ್ತದೆ. ಆದರೆ ಇದಕ್ಕೆ ಸಮನಾಂತರವಾಗಿ ಇದೇ ಸಮೂಹದ ಚಿಕ್ಕ ಘಟಕವೊಂದು ಶೇ.8ರಷ್ಟು ಜನರು ಎಲ್ಲ ಸೌಲಭ್ಯಗಳನ್ನೂ ಪರಿಪೂರ್ಣವಾಗಿ ಅನುಭೋಗಿಸುತ್ತಿದ್ದಾರೆ ಎನ್ನಬಹುದಾಗಿದೆ. ಬದಲಾವಣೆ ಪುಟ್ಟ ಪ್ರಮಾಣದಲ್ಲಿ ಆರಂಭವಾಗಿದೆ ಎಂದು ಹೇಳಬಹುದಾಗಿದೆ.

ಮಹಿಳಾ ಆರ್ಥಿಕ ಸಬಲೀಕರಣವು ಕೇವಲ ಸಾಲ ಪಡೆದಿರುವುದರ ಮೇಲೆಯೇ ನಿರ್ಧಾರವಾಗುವುದಿಲ್ಲ. ಸಾಲ ಪಡೆಯುವುದು ಕೇವಲ ಆರ್ಥಿಕ ಚಟುವಟಿಕೆಯೊಂದರ ಒಂದು ಮಗ್ಗಲಾಗಿದೆ. ಆದರೆ ಪಡೆದಿರುವ ಸಾಲವನ್ನು ಅದ್ಹೇಗೆ ಬಳಸಿದ್ದಾರೆ ಎಂಬುದೂ ನಿರ್ಧಾರಕ ಅಂಶವಾಗುತ್ತದೆ. ಸಾಲ ಪಡೆಯುವುದು ಕೇವಲ ಅನುಕೂಲಗಳನ್ನು ಬಳಸಿಕೊಳ್ಳುವ ಅರಿವು ಎಂದು ಪರಿಗಣಿಸಬಹುದಾಗಿದೆ. ಆದರೆ ಪಡೆದಿರುವ ಸಾಲವನ್ನು ಆದಾಯ ತರಬಹುದಾದ

ಉತ್ಪಾದಕ ಚಟುವಟಿಕೆಗಳಲ್ಲಿ ತೊಡಗಿಸಿದ್ದಾರೆಯೇ ಎಂಬುದು ಅತಿಮುಖ್ಯ ಅಂಶವಾಗುತ್ತದೆ. ಅಥವಾ ಪಡೆದ ಸಾಲವನ್ನು ಅನುತ್ಪಾದಕ ಚಟುವಟಿಕೆಗಳಲ್ಲಿ ವೆಚ್ಚ ಮಾಡಿರುವ ಉದಾಹರಣೆಗಳೂ ಇಲ್ಲದಿಲ್ಲ.

ಉತ್ಪಾದಕ ಚಟುವಟಿಕೆಗಳಲ್ಲಿ ಪಡೆದ ಸಾಲವನ್ನು ತೊಡಗಿಸುವುದು ಅವರ ಆರ್ಥಿಕ ನಿರ್ವಹಣೆಯ ಜಾಣ್ಮೆಯನ್ನು ಸೂಚಿಸುತ್ತದೆ.ಆದರೆ ಅನುತ್ಪಾದಕ ಚಟುವಟಿಕೆಗಳಿಗಾಗಿ ಮಾಡಿದ ವೆಚ್ಚಗಳು ಅವರ ಅನಿವಾರ್ಯತೆಯನ್ನು ಬಿಂಬಿಸುತ್ತದೆ.

ಈ ಅಧ್ಯಾಯದಲ್ಲಿ ಪಡೆದ ಸಾಲವನ್ನು ಬಳಸಿದ ಬಗೆಯನ್ನೂ ವಿಶ್ಲೇಷಿಸಲಾಯಿತು. ಹೇಳಿಕೆದಾರರೊಂದಿಗೆ ಚರ್ಚಿಸಿದಾಗ ಅವರು ತಾವು ಪಡೆದ ಉಳಿತಾಯದ ಸಾಲವನ್ನು ಕುಟುಂಬದ ಖರ್ಚಿಗೆ ಸಾಲಗಾರರ ಬಡ್ಡಿ ತೀರಿಸುವುದಕ್ಕೆ, ಆಸ್ಪತ್ರೆಗೆ ಅಥವಾ ಧಾರ್ಮಿಕ ಕಾರ್ಯಗಳಿಗೆ ವೆಚ್ಚವಾಗಿರುವುದು ಕಂಡು ಬಂದಿತು. ಪಡೆದ ಸಾಲ ಕುಡಿತ, ಜೂಜು ಮುಂತಾದ ಮೋಜುಗಳಲ್ಲಿಯೂ ಕರಗಿದ ಉದಾಹರಣೆಗಳೂ ದೊರಕಿವೆ. ಹಾಗೇ ಮರು ಪಾವತಿ ಮಾಡದೇ "ತೆಗೆದುಕೊಂಡ ಸಾಲ ಮಹಿಳೆಯರಿಗೆ ಶೂಲವಾಗಿ ಪರಿಣಮಿಸಿದೆ".

ಕೋಷ್ಟಕ 5.2.3
ಹೂಡಿಕೆಯ ವಿಧಾನಗಳ ಬಗೆಗಿನ ವಿವರ

ಕ್ರ ಸಂ.	ಹೊಡೆಕೆಯ ವಿಧಾನಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಉತ್ಪಾದಕ ಚಟುವಟಿಕೆಗಳು	61	62%	59	42%	120	80%
02.	ಅನುತ್ಪಾದಕ ಚಟುವಟಿಕೆಗಳು	27	28%	53	38%	80	34%
03.	ನಿರುಪಯುಕ್ತ ವೆಚ್ಚಗಳು	10	10%	28	20%	38	16%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕವನ್ನು ಗಮನಿಸಿದಾಗ ಪಡೆದ ಸಾಲವನ್ನು ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಆದಾಯ ತರುವಂಥ ಉತ್ಪಾದಕ ಚಟುವಟಿಕೆಗಳು, ಇವುಗಳನ್ನು ಹೂಡಿಕೆ ಅಥವಾ ಬಂಡವಾಳವೆಂದೂ ಭಾವಿಸಬಹುದಾಗಿದೆ. ಅನುತ್ಪಾದಕ ಚಟುವಟಿಕೆಗಳೆಂದರೆ ಅನಾರೋಗ್ಯ, ಪ್ರಯಾಣ ಅಥವಾ ಮದುವೆ, ಪೂಜೆಗಳಂಥ ಕಾರ್ಯಗಳಿಗೆ ಬಳಸಿಕೊಂಡಿರುವುದು_ ನಿರುಪಯುಕ್ತ ವೆಚ್ಚಗಳೆಂದರೆ ಸಾಲದ ಹಣದಿಂದ ಕುಡಿತ ಜೂಜು ಮುಂತಾದವುಗಳಲ್ಲಿ ಹಣ ಕಳೆದುಕೊಳ್ಳುವುದು ಎಂದು ವಿಂಗಡಿಸಲಾಗಿದೆ.

ಆಸಕ್ತಿಕರ ಅಂಶವೆಂದರೆ ಶೇ.80 ರಷ್ಟು ಜನರು ಉತ್ಪಾದಕ ಚಟುವಟಿಕೆಗಳಲ್ಲಿ ಹಣವನ್ನು ತೊಡಗಿಸಿದ್ದಾರೆ. ಅಂದರೆ ಹೈನುಗಾರಿಕೆ ಮಾಡಲು ಪಶುಗಳನ್ನು ಕೊಳ್ಳುವುದು, ಅಥವಾ

ಇನ್ನಾವುದೇ ಸಣ್ಣ ವ್ಯಾಪಾರಕ್ಕೆ ಬಂಡವಾಳವಾಗಿ ಆ ಹಣದ ಬಳಕೆ ಮಾಡುವುದು. ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಇಂಥ ಚಟುವಟಿಕೆಗಳಲ್ಲಿ ಹಣ ತೊಡಗಿಸಿರುವುದು ವ್ಯಕ್ತವಾಗುತ್ತದೆ. ಶೇ.62ರಷ್ಟು ಜನ ಪದಾಧಿಕಾರಿಗಳಿದ್ದರೆ ಶೇ.42 ರಷ್ಟು ಜನರು ಸದಸ್ಯರು ಉತ್ಪಾದಕ ಚಟುವಟಿಕೆಗಳಿಗಾಗಿ ಪಡೆದ ಸಾಲವನ್ನು ಬಳಸಿದ್ದಾರೆ. ಆದರೆ ಒಟ್ಟಾರೆಯಾಗಿ ಗಮನಿಸಿದಾಗ ಶೇ.50 ರಷ್ಟು ಜನರು ಆದಾಯದ ಮೂಲವಾಗಿರಿಸಿದ್ದು ಸಮಾಧಾನಕರ ಅಂಶವೆನಿಸುತ್ತದೆ. ಇದರಲ್ಲಿ ಪದಾಧಿಕಾರಿಗಳೇ ಮುಂದಿರುವುದು ಅವರ ದೂರದೃಷ್ಟಿತ್ವ, ಹಣದ ಬಳಕೆ, ಅಧಿಕಾರ, ಅರಿವು ಮುಂತಾದವುಗಳನ್ನು ಸೂಚಿಸುತ್ತದೆ.

ಪದಾಧಿಕಾರಿಗಳಲ್ಲಿ ಶೇ.28 ರಷ್ಟು ಜನರು ಅನುತ್ಪಾದಕ ಚಟುವಟಿಕೆಗಳಿಗೆ ಹಣ ವ್ಯಯ ಮಾಡಿರುವುದು ಕಂಡು ಬಂದರೆ ಸದಸ್ಯರು ಶೇ 38ರಷ್ಟು ಜನರು ಅನುತ್ಪಾದಕ ಕಾರಣಗಳಿಗೆ ಹಣ ಖರ್ಚು ಮಾಡಿದ್ದಾರೆ. ಕೇವಲ ಶೇ.10 ರಷ್ಟು ಜನರು ಮಾತ್ರ ನಿರುಪಯುಕ್ತ ಕಾರಣಗಳಿಗೆ ವೆಚ್ಚ ಮಾಡಿದ್ದಾರೆ. ಇಂಥವರ ಸಂಖ್ಯೆ ಅತಿ ಕಡಿಮೆ ಎಂಬುದೇ ಇನ್ನೊಂದು ಸಮಾಧಾನಕರ ಅಂಶವಾಗಿದೆ. ಈ ಕೋಷ್ಟಕವನ್ನು ಗಮನಿಸಿದಾಗ ಅರ್ಧದಷ್ಟು ಜನರಿಗೆ ಹಣದ ಬಳಕೆಯ ಬಗೆಗೆ ಅರಿವು ಇರುವುದು ಕಂಡು ಬರುತ್ತದೆ. ಸಾಲವನ್ನು ಆದಾಯದ ಮೂಲವಾಗಿಸಿಕೊಂಡು ಆರ್ಥಿಕವಾಗಿ ಸಬಲರಾಗುವತ್ತ ಹೆಜ್ಜೆ ಹಾಕುತ್ತಿರುವುದು ಈ ಕೋಷ್ಟಕ ಸ್ಪಷ್ಟಪಡಿಸುತ್ತದೆ.

ಮಿತವ್ಯಯ ಮತ್ತು ಉಳಿಕೆ, ಲೆಕ್ಕಾಚಾರದ ವೆಚ್ಚ ಹಾಗೂ ಸಾಮಾಜಿಕ, ಧಾರ್ಮಿಕ, ಹಬ್ಬದ ಆಚರಣೆಗಳು. ಈ ಮೊದಲೇ ಸ್ಪಷ್ಟ ಪಡಿಸಿರುವಂತೆ ಆರ್ಥಿಕ ಸಬಲೀಕರಣವೆಂದರೆ ಕೇವಲ ಹಣ ಗಳಿಕೆ ಮಾತ್ರವಲ್ಲ, ಗಳಿಸಿದ ಹಣದ ಮಿತವ್ಯಯ ಹಾಗೂ ಉಳಿಕೆಯನ್ನು ಅವಲಂಬಿಸಿದೆ. ಮಿತವ್ಯಯ ಹಾಗೂ ಉಳಿಕೆಗಳನ್ನೂ ಆದಾಯವೆಂದೇ ಪರಿಗಣಿಸಲಾಗುತ್ತದೆ. ಆರ್ಥಿಕ ಸಬಲೀಕರಣವೆಂದರೆ ಗಳಿಕೆಯ ಹಣವನ್ನು ಲೆಕ್ಕಾಚಾರದ ಮೂಲಕ ವೆಚ್ಚ ಮಾಡುವುದಾಗಿದೆ. ಮಿತವ್ಯಯಕಾರಿಯಾಗಿರುವುದೇ ಆರ್ಥಿಕ ಸಬಲೀಕರಣದ ಮೂಲ ಅಂಶವಾಗುತ್ತದೆ. ಮಿತವ್ಯಯ ಕಾರಿ ಎಂದರೆ ಹಣದ ಸಮರ್ಪಕ ನಿರ್ವಹಣೆ, ಹಬ್ಬ, ಧಾರ್ಮಿಕ ಆಚರಣೆ, ಸಾಂಸ್ಕೃತಿಕ ಚಟುವಟಿಕೆಗಳಂಥ ಅನುತ್ಪಾದಕ ವೆಚ್ಚಗಳಲ್ಲಿ ಮಿತವ್ಯಯ ಸಾಧಿಸುವ ಜಾಣ್ಮೆಯೇ ಆರ್ಥಿಕ ಸಬಲೀಕರಣವಾಗಿದೆ.

ಆದರೆ ಗ್ರಾಮೀಣ ಬದುಕಿನಲ್ಲಿ, ಹುಟ್ಟು, ಸಾವು ಮದುವೆಗಳಂಥ ಬದುಕಿನ ವಿವಿಧ ಮಜಲುಗಳಿಗೆ ಅನಾವಶ್ಯಕವಾಗಿ ಹಣ ಖರ್ಚು ಮಾಡಲಾಗುತ್ತದೆ. ಹುಟ್ಟು ಸಾವುಗಳಂತೂ ನೈಸರ್ಗಿಕ ಕಾರಣಗಳಾದರೂ ಅವುಗಳಿಗೆ ಅನುತ್ಪಾದಕ ಖರ್ಚುಗಳು ಅತಿಯಾಗಿ ಆಗುತ್ತವೆ. ಇವು

ಸಾಲ ಮತ್ತು ಬಡತನಕ್ಕೆ ನಾಂದಿ ಹಾಡಿ ಗ್ರಾಮೀಣ ಜನತೆಗೆ ಕಾಲಾನುಕಾಲದವರೆಗೆ ತಲೆಯ ಮೇಲಿನ ಸಾಲದ ಹೊರೆ ಇಳಿಯದಂತೆ ನೋಡಿಕೊಳ್ಳುತ್ತವೆ.

ಕೋಷ್ಟಕ – 5.2.4

ವೆಚ್ಚದ ವಿಧಾನಗಳ ಬಗೆಗಿನ ಅರಿವು

ಕ್ರ ಸಂ.	ಮಿತವ್ಯಯ, ಉಳಿಕೆ ಹಾಗೂ ಬಳಕೆ ಸಾಮಾಜಿಕ, ಧಾರ್ಮಿಕ ಹಬ್ಬದ ಆಚರಣೆಗೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹತೇಕ	30	30%	28	20%	58	24%
02.	ಸರಿಸುಮಾರು	52	52%	70	50%	122	51%
03.	ಇಲ್ಲವೇ ಇಲ್ಲ	16	18%	42	30%	58	25%
	ಒಟ್ಟು	**98**	**100%**	**140**	**100%**	**238**	**100%**

ಹೇಳಿಕೆದಾರರಿಗೆ ಅವರ ಹಣ ವೆಚ್ಚದ ವಿಧಾನದ ಬಗೆಗೆ ಕೇಳಲಾಯಿತು. ಈ ಕೋಷ್ಟಕದಲ್ಲಿರುವ ದತ್ತಾಂಶವು ಅವರು ಮಿತವ್ಯಯಕಾರಿಯಾಗಿ ಹಣ ಖರ್ಚು ಮಾಡಿದ್ದಾರೆಯೇ ಅಥವಾ ಔದಾರ್ಯದಿಂದ ಧಾರಾಳಿಯಾಗಿ ಖರ್ಚು ಮಾಡುತ್ತಾರೆಯೇ ಎಂಬುದನ್ನು ಚರ್ಚಿಸಿ ಮಾಹಿತಿ ಸಂಗ್ರಹಿಸಲಾಯಿತು. ಬಹುತೇಕ ಜನರು ಶೇ.51 ರಷ್ಟು ಜನರು ಮಿತವ್ಯಯ ವೆಚ್ಚವನ್ನು ಸರಿಸುಮಾರಾಗಿ ಪಾಲಿಸುತ್ತಾರೆ. ಅವರು ಧಾರಾಳಿಗಳೂ ಅಲ್ಲ, ಆದರೆ ಜಿಪುಣರಂತೆಯೂ ಅಲ್ಲ, ಲೆಕ್ಕಾಚಾರದ ವೆಚ್ಚದಲ್ಲಿ ನಂಬಿಕೆ ಇರಿಸಿದವರು. ಸರಿಸುಮಾರಾಗಿ ಹಣ ಖರ್ಚು ಮಾಡುವವರದ್ದೇ ಸಿಂಹಪಾಲಾಗಿದೆ. ಶೇ.24 ರಷ್ಟು ಜನರು ಮಾತ್ರ ಕಟ್ಟುನಿಟ್ಟಾಗಿ ಮಿತವ್ಯಯಕಾರಿಯಾಗಿ ಹಣ ಖರ್ಚು ಮಾಡುತ್ತಾರೆ. ಹಾಗೂ ಕಾಲು ಭಾಗದಷ್ಟು ಜನರು ಯಾವುದಕ್ಕೂ ಕೊರತೆಯಾಗದಂತೆ ಖರ್ಚು ಮಾಡುವ ಮನೋಭಾವದರಾಗಿದ್ದಾರೆ.

ಇಲ್ಲಿ ಗಮನಿಸುವ ಇನ್ನೊಂದು ಅಂಶವೆಂದರೆ ಪದಾಧಿಕಾರಿಗಳು ಮತ್ತು ಸದಸ್ಯರಲ್ಲಿ ಬಹುತೇಕ ಉಳಿಕೆ ಮಾಡುವವರ ಸಂಖ್ಯೆಯಲ್ಲಿ ಪದಾಧಿಕಾರಿಗಳೇ ಮೇಲುಗೈ ಸಾಧಿಸಿದ್ದಾರೆ. ಸರಿಸುಮಾರು ಎಂದು ಹೇಳುವವರು ಸದಸ್ಯರು ಹಾಗೂ ಪದಾಧಿಕಾರಿಗಳು ಸಮಸಮವಾಗಿದ್ದಾರೆ. ಆದರೆ ಧಾರಾಳಿಯಾಗಿ ಖರ್ಚು ಮಾಡುವುದರಲ್ಲಿ ಪದಾಧಿಕಾರಿಗಳ ಸಂಖ್ಯೆ ಗಮನೀಯವಾಗಿ ಕಡಿಮೆಯಾಗಿದೆ. ಒಟ್ಟಾರೆಯಾಗಿ ಈ ಕೋಷ್ಟಕವನ್ನು ಗಮನಿಸಿದಾಗ ಗಳಿಕೆಯನ್ನು ಸಮರ್ಪಕವಾಗಿ ಖರ್ಚು ಮಾಡಿ, ಉಳಿಕೆಯನ್ನು ಹೆಚ್ಚಿಸಿಕೊಳ್ಳುವ ಧೋರಣೆ ಬೆಳೆಯುತ್ತಿರುವುದು ಕಂಡು ಬರುತ್ತದೆ.

ಮಾಹಿತಿ ಸಂಗ್ರಹಿಸುವಾಗ ಕಂಡು ಬಂದ ಇನ್ನೊಂದು ಸತ್ಯವೇನೆಂದರೆ ಹಿಂದುಳಿದ ವರ್ಗಗಳ ಮಹಿಳೆಯರು ತಮ್ಮ ಹಣದ ಬಹುಪಾಲನ್ನು ದೇವರಿಗೆ ಹರಕೆ ತೀರಿಸಲಕ್ಕೆ ಕುರಿ,

ಕೋಣಗಳನ್ನು ಬಲಿ ಕೊಡಲು ಬಳಸಿದ್ದು ಕಂಡು ಬಂದಿದೆ. ಕುಡಿತವೂ ಕೆಳ ವರ್ಗದಲ್ಲಿ ಸಾಮಾನ್ಯವಾದ ವೆಚ್ಚದ ಬಾಬ್ತು ಆಗಿಯೇ ಕಂಡು ಬಂದಿದೆ.

ಒಟ್ಟಾರೆಯಾಗಿ ಗಮನಿಸಿದಾಗ ಮಿತವ್ಯಯ ಸಾಧಿಸುವಲ್ಲಿ ಪದಾಧಿಕಾರಿ ಹಾಗೂ ಸದಸ್ಯರ ಸಂಖ್ಯೆಯಲ್ಲಿ ಗಮನೀಯವಾದ ವ್ಯತ್ಯಾಸವೇನೂ ಕಂಡು ಬರುವುದಿಲ್ಲ. ಸಾಲ ಮತ್ತು ಹೂಡಿಕೆಗಳಿಂದಾಗುವ ಆರ್ಥಿಕ ಮತ್ತು ಆರ್ಥಿಕವಲ್ಲದ ಲಾಭಗಳ ಬಗೆಗಿನ ಪ್ರಜ್ಞೆಯನ್ನು ಸೂಚಿಸುತ್ತದೆ.

ಅಧ್ಯಯನಕ್ಕೆ ಒಳಗಾದ ಹೇಳಿಕೆದಾರರು ಆರ್ಥಿಕವಾಗಿ ಸಬಲರಾಗಿದ್ದಾರೆಯೇ ಎಂಬುದನ್ನು ಪರಿಶೀಲಿಸಲು ಸಾಲ ಮತ್ತು ಹೂಡಿಕೆಗಳಿಂದಾಗುವ ಅನುಕೂಲಗಳ ಬಗೆಗೆ ಅವರ ಅರಿವು ಎಷ್ಟು? ಅದನ್ನು ಹೇಗೆ ಸ್ವೀಕರಿಸುತ್ತಾರೆ ಎಂಬುದನ್ನೂ ಮುಂದಿನ ಪುಟಗಳಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ – 5.2.5

ಸಾಲ ಮತ್ತು ಹೂಡಿಕೆಗಳಿಂದಾಗುವ ಲಾಭಗಳ ಬಗೆಗಿನ ವಿವರ

ಕ್ರ ಸಂ.	ಸಾಮಾಜಿಕ ಆರ್ಥಿಕ ಲಾಭಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಆರ್ಥಿಕ ಉಳಿತಾಯಗಳು	61	72%	59	42%	120	50%
02.	ಸಾಮಾಜಿಕ ಲಾಭಗಳು	27	28%	53	38%	80	34%
03.	ಲಾಭಗಳೇ ಇಲ್ಲ	10	10%	15	20%	38	16%
	ಒಟ್ಟು	**98**	**100%**	**140**	**100%**	**238**	**100%**

ಈ ಕೋಷ್ಟಕದಲ್ಲಿರುವ ದತ್ತಾಂಶವು ಆರ್ಥಿಕ ಲಾಭವನ್ನು ಪಡೆಯುವುದರ ಬಗೆಗೆ ಚಿತ್ರಣವನ್ನು ನೀಡುತ್ತಿದೆ. ಸಾಲಗಳಿಂದ ಆದಾಯ ಹೆಚ್ಚುತ್ತದೆಯೋ ಇಲ್ಲವೋ ಸದ್ಬಳಕೆಯಾಗಿದೆಯೋ ಎಂಬುದರ ಬಗೆಗೆ ಮಾಹಿತಿಯನ್ನು ಸಂಗ್ರಹಿಸಲಾಯಿತು. ಆಸಕ್ತಿಕರ ವಿಷಯವೆಂದರೆ ಶೇ.50 ರಷ್ಟು ಜನರು ಆದಾಯ ಮತ್ತು ಉಳಿತಾಯವಾಗಿದೆ ಎಂದು ಹೇಳುತ್ತಾರೆ. ಸಾಲದ ಹಣವನ್ನು ಸದ್ವಿನಿಯೋಗ ಮಾಡಿರುವ ಸಮೂಹವೇ ಅರ್ಧದಷ್ಟಿದೆ. ಸಾಲದ ಬಳಕೆಯನ್ನು ಈ ಹೇಳಿಕೆದಾರರು ಆದಾಯ ಹುಟ್ಟಿಸುವಂಥ ಕ್ರಿಯೆಗಳಿಗೆ ಬಳಸಿಕೊಂಡಿದ್ದಾರೆ. ಶಿಕ್ಷಣ ನಿರ್ವಹಣೆ ಮುಂತಾದ ಜೀವನ ಮಟ್ಟವನ್ನು ನಿರ್ಧರಿಸುವ ಅಂಶದ ಮೇಲೆ ಸಾಲದ ಹಣವನ್ನು ವಿನಿಯೋಗ ಮಾಡಿದವರ ಪಾಲು ಶೇ.34 ರಷ್ಟಿದೆ. ಸಾಲವಾಗಿ ಪಡೆದ ಹಣವನ್ನು ತಮ್ಮ ಜೀವನ ಮಟ್ಟ ಸುಧಾರಣೆಗೆ ಸಕಾರಾತ್ಮಕವಾಗಿ ಬಳಸಿಕೊಂಡವರ ಗುಂಪು ಇದು. ಆದರೆ ಪಡೆದ ಸಾಲವನ್ನು ಸದ್ವಿನಿಯೋಗ ಮಾಡಲು ಮಾರ್ಗದರ್ಶಕರಿಲ್ಲದೆ ವಿವಿಧ ಕಾರಣಗಳಿಗೆ, ಅಥವಾ ಕುಡಿತ ಮುಂತಾದ ಚಟಗಳಿಗೆ ಖರ್ಚು ಮಾಡಿದವರು ಶೇ.16 ರಷ್ಟು ಜನರಿದ್ದಾರೆ.

ಈ ಕೋಷ್ಟಕ ಇನ್ನೊಂದು ಆಸಕ್ತಿಕರ ಅಂಶವನ್ನು ಬಿಚ್ಚಿಡುತ್ತದೆ. ಇಲ್ಲಿ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಲದ ಹಣವನ್ನು ಆದಾಯ ಉತ್ಪನ್ನ ಮಾಡುವಂತೆ ಹೂಡಿಕೆಯಲ್ಲಿ ತೊಡಗಿಸಿದ್ದಾರೆ. ಅಥವಾ ಗಳಿಕೆಯ ಇನ್ನೊಂದು ಮುಖವಾದ ಉಳಿಕೆಯಲ್ಲಿ ತೊಡಗಿಸಿದ್ದಾರೆ. ಶೇ.72 ರಷ್ಟು ಜನರು ಪದಾಧಿಕಾರಿಗಳಾಗಿದ್ದರೆ ಶೇ.42 ರಷ್ಟು ಜನರು ಮಾತ್ರ ಆರ್ಥಿಕ ಚಟುವಟಿಕೆಗಳಲ್ಲಿ ಹಣ ತೊಡಗಿಸಿದ್ದಾರೆ.

ಸಾಮಾಜಿಕ ಲಾಭದಲ್ಲಿ ಮಾತ್ರ ಇದು ಹಿಂದು ಮುಂದಾಗಿದೆ. ಶೇ.38 ರಷ್ಟು ಜನರು ಸದಸ್ಯರು ಸಾಮಾಜಿಕ ಕಾರಣಗಳಿಗಾಗಿ ಹಣವನ್ನು ಬಳಸಿದ್ದರೆ ಶೇ.28 ರಷ್ಟು ಜನರು ಪದಾಧಿಕಾರಿಗಳು ಮಾತ್ರ ಸಾಮಾಜಿಕ ಕಾರಣಗಳಿಗೆ ವೆಚ್ಚ ಮಾಡಿದ್ದಾರೆ. ಇದರ ಇನ್ನೊಂದು ಆಸಕ್ತಿ ಕೆರಳಿಸುವ ಅಂಶವೆಂದರೆ ಲಾಭವೇ ಮಾಡಿಕೊಳ್ಳದ ಶೇ.10 ರಷ್ಟು ಪದಾಧಿಕಾರಿಗಳಿದ್ದರೆ ಅವರ ಎರಡರಷ್ಟು ಅಂದರೆ ಶೇ.20 ರಷ್ಟು ಸದಸ್ಯರು ಸಾಲದ ಹಣವನ್ನು ಖರ್ಚುಮಾಡಿಕೊಂಡಿದ್ದಾರೆ. ಈ ವೆಚ್ಚಗಳೆಲ್ಲವೂ ಅನಾವಶ್ಯಕ ಎಂಬುದು ಗಮನೀಯ. ಹೇಳಿಕೆದಾರರೊಂದಿಗೆ ಚರ್ಚಿಸಿದಾಗ ಈ ವಿಷಯ ಬೆಳಕಿಗೆ ಬಂದಿದೆ.

ಒಟ್ಟಾರೆಯಾಗಿ ಗಮನಿಸಿದಾಗ ಹೇಳಿಕೆದಾರರ ಒಂದು ಗುಂಪು ಆರ್ಥಿಕವಾಗಿ ಪ್ರಾಬಲ್ಯ ಪಡೆಯುತ್ತಿದೆ. ಶೇ.50 ರಷ್ಟು ಜನ ಪಡೆದ ಸಾಲವನ್ನು ಸದ್ವಿನಿಯೋಗ ಮಾಡುತ್ತಿದ್ದಾರೆ. ಅದರಲ್ಲಿಯೂ ಪದಾಧಿಕಾರಿಗಳು ಹೆಚ್ಚುಹೆಚ್ಚು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿ ಕೊಳ್ಳುತ್ತಿರುವುದು ಸಾಬೀತಾಗಿದೆ. ಬ್ಯಾಂಕುಗಳು ಗ್ರಾಮೀಣ ಜನತೆಗೆ ಸಾಲ ಸೌಲಭ್ಯಗಳ ವ್ಯವಸ್ಥೆ ಹಂತ-ಹಂತವಾಗಿ ಮಾಡುತ್ತಿದ್ದರೂ ಸಹ ಸಾಂಪ್ರದಾಯಿಕವಾಗಿ ಸಾಲಕ್ಕಾಗಿ ಊರ ಹಣವಂತರನ್ನು ಎಷ್ಟು ಜನ ನಂಬಿದ್ದಾರೆಂದು ಮುಂದಿನ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಬಡ್ಡಿ ವ್ಯವಹಾರಸ್ತರ ಮೇಲೆ ಅವಲಂಬನೆ:

ಸೂಕ್ಷ್ಮ ಹಣಕಾಸು ವ್ಯವಸ್ಥೆಯ ಮುಖ್ಯ ಉದ್ದೇಶವೆಂದರೆ ಸ್ವಸಹಾಯ ಸಂಘದ ಸದಸ್ಯರನ್ನು ಬಡ್ಡಿವ್ಯವಹಾರಸ್ಥರ ಕಪಿ ಮುಷ್ಠಿಯಿಂದ ಬಿಡಿಸುವುದಾಗಿದೆ. ಗ್ರಾಮೀಣ ವಿಭಾಗದಲ್ಲಿ ಹಣಕಾಸಿನ ವ್ಯವಸ್ಥೆಯ ನಿಯಂತ್ರಣ ಇರುವುದೇ ಇಂಥ ಬಡ್ಡಿ ವ್ಯವಹಾರಸ್ಥ ಸಾಹುಕಾರರಿಂದ ಎಂಬುದು ಎಲ್ಲರಿಗೂ ತಿಳಿದ ರಹಸ್ಯವಾಗಿದೆ. ಸಾಹುಕಾರರು ಗ್ರಾಮೀಣ ಜನರಿಗೆ ಸಾಲ ನೀಡುವ ಮುನ್ನವೇ ಬಡ್ಡಿದರ ನಿಗದಿ ಮಾಡುತ್ತಾರೆ. ಆದರೆ ಆ ಬಡ್ಡಿದರ ಉಳಿದೆಲ್ಲ ದರಕ್ಕಿಂತ ಹೆಚ್ಚಾಗಿದ್ದು, ಮೂಲ ತೀರಿಸುವ ಮುನ್ನವೇ ಬಡ್ಡಿಗಳ ಸುಳಿಯಲ್ಲಿ ಬಡವ ಸಿಲುಕಿಕೊಳ್ಳುತ್ತಾನೆ. ಸಾಲಕ್ಕಾಗಿ ತಮ್ಮ ಚರಾಚರ ಆಸ್ತಿಯನ್ನೆಲ್ಲ ಒತ್ತೆ ಇಡುವ ಬಡವರು ಬದುಕಿಡೀ ದುಡಿದರೂ ಅಸಲು ಬಾಕಿ ತೀರಿಸಲು ಆಗುವುದೇ ಇಲ್ಲ. ಈ ಕಾರಣಕ್ಕಾಗಿಯೇ ಜೀತದಾಳುಗಳ ಪದ್ಧತಿಯೂ ಬಳಕೆಗೆ ಬಂತು. ಸಾಲಕ್ಕಾಗಿ ಸುಲಭವಾಗಿ ಲಭ್ಯ ಇರುವ ಸಂಪನ್ಮೂಲ ಎಂದರೆ ಸ್ಥಳೀಯ ಸಾಹುಕಾರರೇ ಆಗಿದ್ದಾರೆ. ಆದ್ದರಿಂದ

ಈ ಅಧ್ಯಯನದಲ್ಲಿ ಅದೆಷ್ಟು ಜನರು ಸಾಹುಕಾರರ ಮೇಲೆ ಅವಲಂಬಿಸಿಲ್ಲ ಎಂಬ ವಿಷಯದ ಮೇಲೂ ಬೆಳಕು ಚೆಲ್ಲಲು ಯತ್ನಿಸಲಾಯಿತು. ಆರ್ಥಿಕ ಸಬಲೀಕರಣವೆಂದರೆ ಕೇವಲ ಗಳಿಕೆ, ಉಳಿಕೆ ಮತ್ತು ಹೂಡಿಕೆ ಅಷ್ಟೇ ಅಲ್ಲ, ಸಾಂಪ್ರದಾಯಿಕ ಸಂಪನ್ಮೂಲಗಳನ್ನು ಬದಿಗೊತ್ತಿ ಆರ್ಥಿಕ ವ್ಯವಹಾರಗಳಲ್ಲಿ ತೊಡಗಿಸಿಕೊಳ್ಳುವುದೂ ಆಗಿದೆ. ಅಧ್ಯಾಯದ ಈ ವಿಭಾಗದಲ್ಲಿ ಸಾಹುಕಾರರ ಅವಲಂಬನೆಯಿಂದ ಅದೆಷ್ಟು ಜನರು ದೂರವಾಗಿದ್ದಾರೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಕೋಷ್ಟಕ –5.2.6

ಸಾಲಕ್ಕಾಗಿ ಸಾಹುಕಾರನ ಮೇಲೆ ಅವಲಂಬಸಿರುವ ಬಗೆಗಿನ ವಿವರ

ಕ್ರ ಸಂ.	ಸಾಹುಕಾರನ ಮೇಲೆ ಅವಲಂಬನೆ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹುತೇಕ	54	55%	105	75%	159	67%
02.	ಸ್ವಲ್ಪ ಮಟ್ಟಿಗೆ	44	45%	35	25%	79	33%
03.	ಇಲ್ಲವೇ ಇಲ್ಲ	--	--	--	--	--	--
	ಒಟ್ಟು	**98**	**100%**	**140**	**100%**	**238**	**100%**

ಕೋಷ್ಟಕವು ಸ್ಪಷ್ಟ ಪಡಿಸುವುದೇನೆಂದರೆ ಇಂದಿಗೂ ಗ್ರಾಮೀಣ ಹಣಕಾಸಿನ ವ್ಯವಸ್ಥೆಯಲ್ಲಿ ಸಾಹುಕಾರನೇ ಪ್ರಮುಖ ಪಾತ್ರ ವಹಿಸುತ್ತಾನೆ. ಶೇ.67 ರಷ್ಟು ಜನರು ಹಣಕಾಸಿನ ಸಹಾಯಕ್ಕಾಗಿ ಸಾಹುಕಾರನನ್ನೇ ನಂಬಿದ್ದಾರೆ. ಕೇವಲ ಶೇ 33ರಷ್ಟು ಜನರು ಮಾತ್ರ ಸ್ವಲ್ಪ ಮಟ್ಟಿಗೆ ಸಾಹುಕಾರನನ್ನು ನಂಬಿದ್ದಾರೆ. ಆದರೆ, ಸಾಹುಕಾರರನ್ನು ನಂಬದೇ ಇರುವವರು ಯಾರು ಇಲ್ಲವೆಂದು ಕಂಡುಬಂದಿತು.

ಇದರರ್ಥ ಇಂದಿಗೂ ಸ್ವ-ಸಹಾಯ ಸಂಘಗಳು ಸಾಹುಕಾರನಿಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುವ ಪರಿಪೂರ್ಣ ಸಂಘಗಳಾಗಿಲ್ಲ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ಪ್ರಮುಖ ಕಾರಣವೆಂದರೆ ಸ್ವಸಹಾಯ ಸಂಘದಿಂದ ವರ್ಷಕ್ಕೆ ಒಂದೇ ಸಲ ಸಾಲ ಪಡೆಯಬಹುದಾಗಿದೆ. ಆದರೆ ಸಾಹುಕಾರ ಅಗತ್ಯವಿದ್ದಾಗಲೆಲ್ಲ ಹಣ ನೀಡುವ ಆಪದ್ಬಾಂಧವನಾಗಿದ್ದಾನೆ. ಸಾಹುಕಾರನ ಸಾಲಕ್ಕೆ ಯಾವುದೇ ದಾಖಲೆಗಳ ಅಗತ್ಯವಿಲ್ಲ. ಆದರೆ ಬ್ಯಾಂಕುಗಳ ಸಾಲಕ್ಕೆ ಬ್ಯಾಂಕ್ ವಹಿವಾಟಿನ ಬಗೆಗೆ ತಿಳಿದಿರಲೇಬೇಕಾಗಿರುತ್ತದೆ. ಬಡ್ಡಿದರ ಹೆಚ್ಚು ಎನ್ನುವುದು ಬಿಟ್ಟರೆ ಸಾಹುಕಾರ ಸ್ಥಳೀಯ ವ್ಯಕ್ತಿಯೇ ಆಗಿರುವುದರಿಂದ ಲಭ್ಯತೆಯ ಸಾಧ್ಯತೆಗಳೂ ಹೆಚ್ಚಾಗಿರುತ್ತವೆ.

ಹೇಳಿಕೆದಾರರೊಂದಿಗೆ ಚರ್ಚಿಸುವಾಗ ಇನ್ನಷ್ಟು ಆಘಾತಕಾರಿ ಅಂಶಗಳೂ ಬೆಳಕಿಗೆ ಬಂದವು. ಸ್ವಸಹಾಯ ಸಂಘಗಳಲ್ಲೂ ಸಾಲಕ್ಕಾಗಿ ವಶೀಲಿ, ಜಾತಿ ಮುಂತಾದ ಅಂಶಗಳೂ ಮಹತ್ವದ ಪಾತ್ರ ವಹಿಸುತ್ತಲಿವೆ. ಸರಳ ಸುಲಭದ ಸಹಾಯಕ ಅಂಶವಾಗದೇ ಇವು ಜಾತಿ ರಾಜಕಾರಣದ ಪುಟ್ಟ ಪಂಗಡಗಳಾಗುತ್ತಿರುವುದು ವಿಷಾದನೀಯವಾಗಿದೆ. ಸಂಘದ ಮೇಲ್ವರ್ಗದ

ಮೇಲ್ಜಾತಿಯ ಸದಸ್ಯರಿಗೆ ಹೆಚ್ಚಿನ ಆದ್ಯತೆ ದೊರೆಯುತ್ತಿರುವುದರಿಂದ ಬಹುತೇಕ ಮುಕ್ಕಾಲು ಪಾಲು ಜನ ಸದಸ್ಯರು ಈಗಲೂ ಸಾಲಕ್ಕಾಗಿ ಸಾಹುಕಾರನನ್ನೇ ಅವಲಂಬಿಸಿದ್ದಾರೆ.

ಇದೇ ಕಾರಣದಿಂದಲೇ ಪದಾಧಿಕಾರಿಗಳಲ್ಲಿ ಶೇ.55 ರಷ್ಟು ಜನರು ಸಾಹುಕಾರನನ್ನು ಅವಲಂಬಿಸಿದ್ದರೆ ಸದಸ್ಯರಲ್ಲಿ ಶೇ.75 ರಷ್ಟು ಜನ ಬಹುತೇಕ ಮಟ್ಟಿಗೆ ಸಾಹುಕಾರನನ್ನೇ ಅವಲಂಬಿಸಿದ್ದಾರೆ. ಪದಾಧಿಕಾರಿಗಳಲ್ಲಿ ಶೇ.45 ರಷ್ಟು ಜನರು ಸ್ವಲ್ಪಮಟ್ಟಿಗೆ ಸಹಾಯ ಪಡೆಯುವಂತಿದ್ದರೆ ಶೇ.25 ರಷ್ಟು ಜನರು ಸದಸ್ಯರು ಸಾಹುಕಾರನ ಮೇಲೆ ಸ್ವಲ್ಪ ಮಟ್ಟಿಗೆ ಅವಲಂಬಿಸಿದ್ದಾರೆ. ಹಾಗಾಗಿ ಈಗಲೂ ಸಾಲಕ್ಕೆ ಸಾಹುಕಾರನೇ ಸ್ನೇಹಿತನೂ, ಮಾರ್ಗದರ್ಶಿಯೂ ಸಹಾಯಕನೂ ಆಗಿದ್ದಾನೆ. ಈ ವರ್ಗದಲ್ಲೂ ಅವಲಂಬಿಸದವರು ಮೇಲ್ಜಾತಿ ಹಾಗೂ ಮೇಲ್ವರ್ಗಕ್ಕೆ ಸೇರಿದವರು ಎಂಬುದು ಗಮನಾರ್ಹ ಅಂಶವಾಗಿದೆ.

ಒಟ್ಟಾರೆಯಾಗಿ ಗಮನಿಸಿದಾಗ ಸೂಕ್ಷ್ಮ ಹಣಕಾಸಿನ ಸಂಸ್ಥೆಯಾಗಿ ಸ್ವಸಹಾಯ ಸಂಘ ನಿರೀಕ್ಷಿತ ಮಟ್ಟದಲ್ಲಿ ಬೆಳೆದಿಲ್ಲವೆಂದೇ ಹೇಳಬಹುದಾಗಿದೆ. ಸಂಘವು ಎಲ್ಲ ಮಹಿಳೆಯರಿಗೆ ಸಾಹುಕಾರನ ಸಾಲದ ವ್ಯವಸ್ಥೆಗೆ ಪರ್ಯಾಯವಾಗಿ ಕಾರ್ಯನಿರ್ವಹಿಸುತ್ತಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ.

ಈ ಅಧ್ಯಾಯದಲ್ಲಿ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲೀಕರಣ ಹೊಂದಿದ್ದಾರೆಯೇ ಎಂಬುದನ್ನು ವಿವಿಧ ಆಯಾಮಗಳಿಂದ ಪರಿಶೀಲಿಸಲಾಗಿದೆ. ಹೇಳಿಕೆದಾರರೊಂದಿಗೆ ಚರ್ಚಿಸಿ ಪಡೆದ ದತ್ತಾಂಶಗಳು ನೀಡುವ ವಿವರಗಳು ಈ ಕೆಳಗಿನಂತಿವೆ.

1. ಮಹಿಳಾ ಉದ್ಯೋಗದ ಸ್ಥಿತಿ :

ಮಹಿಳೆಯರಲ್ಲಿ ಶೇ.48 ರಷ್ಟು ಜನರು ಸತತವಾಗಿ ಆದಾಯ ಉತ್ಪನ್ನವಾಗುವ ಸ್ವಯಂ ಉದ್ಯೋಗದಲ್ಲಿದ್ದಾರೆ. ಶೇ.32 ರಷ್ಟು ಜನ ಕೂಲಿಯಾಧಾರಿತ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕೂಲಿಗಳಾಗಿ ಅಥವಾ ಮನೆಕೆಲಸದವರಾಗಿ ಕೆಲಸ ಮಾಡುತ್ತಾರೆ. ಅತಿ ಕಡಿಮೆಯೆನ್ನಬಹುದಾದ ಗುಂಪು ಗ್ರಹಿಣಿಯರದ್ದಾಗಿದೆ. ಶೇ.20 ರಷ್ಟು ಜನರು ಮಾತ್ರ ಗ್ರಹಿಣಿಯರಾಗಿದ್ದಾರೆ. ಆದರೆ ಗಮನೀಯವಾದ ಅಂಶವೇನೆಂದರೆ ಈ ವಿಭಾಗದಲ್ಲಿ ಬರುವ ಮಹಿಳೆಯರಿಗೆ ವಯಸ್ಸಾಗಿದೆ ಎಂಬುದು.

2. ಪಡೆದಿರುವ ಸಾಲದ ಬಗೆಗಳು :

ಹೇಳಿಕೆದಾರರಲ್ಲಿ ಶೇ.52 ರಷ್ಟು ಉಳಿತಾಯದ ಸಾಲವನ್ನು ಪಡೆದಿದ್ದರೆ, ಶೇ.40 ರಷ್ಟು ಜನರು ಬ್ಯಾಂಕ್ ಸಾಲವನ್ನು ಪಡೆದಿದ್ದಾರೆ. ಆದರೆ ಕೇವಲ ಶೇ.8 ರಷ್ಟು ಜನರು ಮಾತ್ರ ಎರಡೂ ಸಾಲವನ್ನು ಪಡೆದಿದ್ದಾರೆ. ಈ ಅಂಶವನ್ನು ಗಮನಿಸಿದರೆ ಸ್ವಸಹಾಯ ಸಂಘಗಳಂಥ ಸೂಕ್ಷ್ಮ

ಹಣಕಾಸಿನ ಘಟಕಗಳು ಯಾವುದೇ ಬಗೆಯ ಹೆಚ್ಚಿನ ಸಹಾಯ ಮಾಡಿಲ್ಲ ಎಂಬುದು ಅರ್ಥವಾಗುತ್ತದೆ.

3. ಹೂಡಿಕೆಯ ಬಗೆ:

ಆಸಕ್ತಿಕರ ಅಂಶವೆಂದರೆ ಶೇ.80 ರಷ್ಟು ಜನರು ಉತ್ಪಾದಕ ಚಟುವಟಿಕೆಗಳಲ್ಲಿ ಹಣವನ್ನು ತೊಡಗಿಸಿದ್ದಾರೆ. ಶೇ.62 ರಷ್ಟು ಜನ ಪದಾಧಿಕಾರಿಗಳಿದ್ದರೆ ಶೇ.42 ರಷ್ಟು ಜನರು ಸದಸ್ಯರು ಉತ್ಪಾದಕ ಚಟುವಟಿಕೆಗಳಿಗಾಗಿ ಪಡೆದ ಸಾಲವನ್ನು ಬಳಸಿದ್ದಾರೆ. ಶೇ.50 ರಷ್ಟು ಜನರು ಆದಾಯದ ಮೂಲವಾಗಿರಿಸಿದ್ದು ಸಮಾಧಾನಕರ ಅಂಶವೆನಿಸುತ್ತದೆ. ಇದರಲ್ಲಿ ಪದಾಧಿಕಾರಿಗಳೇ ಮುಂದಿರುವುದು ಅವರ ದೂರದೃಷ್ಟಿತ್ವ, ಹಣದ ಬಳಕೆ, ಅಧಿಕಾರ, ಅರಿವು ಮುಂತಾದವುಗಳನ್ನು ಸೂಚಿಸುತ್ತದೆ. ಪದಾಧಿಕಾರಿಗಳಲ್ಲಿ ಶೇ.28 ರಷ್ಟು ಜನರು ಅನುತ್ಪಾದಕ ಚಟುವಟಿಕೆಗಳಿಗೆ ಹಣ ವ್ಯಯ ಮಾಡಿರುವುದು ಕಂಡು ಬಂದರೆ ಸದಸ್ಯರು ಶೇ.38 ರಷ್ಟು ಜನರು ಅನುತ್ಪಾದಕ ಕಾರಣಗಳಿಗೆ ಹಣ ಖರ್ಚು ಮಾಡಿದ್ದಾರೆ. ಕೇವಲ ಶೇ.10 ರಷ್ಟು ಜನರು ಮಾತ್ರ ನಿರುಪಯುಕ್ತ ಕಾರಣಗಳಿಗೆ ವೆಚ್ಚ ಮಾಡಿದ್ದಾರೆ.

4. ಮಿತವ್ಯಯ ಮತ್ತು ಉಳಿಕೆ :

ಬಹುತೇಕ ಜನರು ಶೇ.51 ರಷ್ಟು ಜನರು ಮಿತವ್ಯಯ ವೆಚ್ಚವನ್ನು ಸರಿಸುಮಾರಾಗಿ ಪಾಲಿಸುತ್ತಾರೆ. ಅವರು ಧಾರಾಳಿಗಳೂ ಅಲ್ಲ, ಆದರೆ ಜಿಪುಣರಂತೆಯೂ ಅಲ್ಲ, ಲೆಕ್ಕಾಚಾರದ ವೆಚ್ಚದಲ್ಲಿ ನಂಬಿಕೆ ಇರಿಸಿದವರು. ಸರಿಸುಮಾರಾಗಿ ಹಣ ಖರ್ಚು ಮಾಡುವವರದ್ದೇ ಸಿಂಹಪಾಲಾಗಿದೆ. ಶೇ.24 ರಷ್ಟು ಜನರು ಮಾತ್ರ ಕಟ್ಟುನಿಟ್ಟಾಗಿ ಮಿತವ್ಯಯಕಾರಿಯಾಗಿ ಹಣ ಖರ್ಚು ಮಾಡುತ್ತಾರೆ. ಹಾಗೂ ಕಾಲು ಭಾಗದಷ್ಟು ಜನರು ಯಾವುದಕ್ಕೂ ಕೊರತೆಯಾಗದಂತೆ ಖರ್ಚು ಮಾಡುವ ಪಂಗಡದವರಾಗಿದ್ದಾರೆ.

5. ಸಾಲ ಮತ್ತು ಹೂಡಿಕೆ, ಉಳಿಕೆಗಳ ಬಗೆಗಿನ ಪ್ರಜ್ಞೆ:

ಇಲ್ಲಿ ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಾಲದ ಹಣವನ್ನು ಆದಾಯ ಉತ್ಪನ್ನ ಮಾಡುವಂತೆ ಹೂಡಿಕೆಯಲ್ಲಿ ತೊಡಗಿಸಿದ್ದಾರೆ. ಅಥವಾ ಗಳಿಕೆಯ ಇನ್ನೊಂದು ಮುಖವಾದ ಉಳಿಕೆಯಲ್ಲಿ ತೊಡಗಿಸಿದ್ದಾರೆ. ಶೇ.72 ರಷ್ಟು ಜನರು ಪದಾಧಿಕಾರಿಗಳಾಗಿದ್ದರೆ ಶೇ. 42 ರಷ್ಟು ಜನರು ಮಾತ್ರ ಆರ್ಥಿಕ ಚಟುವಟಿಕೆಗಳಲ್ಲಿ ಹಣ ತೊಡಗಿಸಿದ್ದಾರೆ. ಸಾಮಾಜಿಕ ಲಾಭದಲ್ಲಿ ಮಾತ್ರ ಇದು ಹಿಂದು ಮುಂದಾಗಿದೆ. ಶೇ.38 ರಷ್ಟು ಜನರು ಸದಸ್ಯರು ಸಾಮಾಜಿಕ ಕಾರಣಗಳಿಗಾಗಿ ಹಣವನ್ನು ಬಳಸಿದ್ದಾರೆ. ಶೇ.28 ರಷ್ಟು ಜನರು ಪದಾಧಿಕಾರಿಗಳು ಮಾತ್ರ ಸಾಮಾಜಿಕ ಕಾರಣಗಳಿಗೆ ವೆಚ್ಚ ಮಾಡಿದ್ದಾರೆ. ಇದರ ಇನ್ನೊಂದು ಆಸಕ್ತಿ ಕೆರಳಿಸುವ ಅಂಶವೆಂದರೆ ಲಾಭವೇ ಮಾಡಿಕೊಳ್ಳದ

ಶೇ.10 ರಷ್ಟು ಪದಾಧಿಕಾರಿಗಳಿದ್ದರೆ ಅವರ ಎರಡರಷ್ಟು ಅಂದರೆ ಶೇ.20 ರಷ್ಟು ಸದಸ್ಯರು ಸಾಲದ ಹಣವನ್ನು ಖರ್ಚು ಮಾಡಿಕೊಂಡಿದ್ದಾರೆ.

6. ಸಾಹುಕಾರನ ಮೇಲಿನ ಅವಲಂಬನೆ:

ಪದಾಧಿಕಾರಿಗಳಲ್ಲಿ ಶೇ.55 ರಷ್ಟು ಜನರು ಸಾಹುಕಾರನನ್ನು ಅವಲಂಬಿಸಿದ್ದರೆ ಸದಸ್ಯರಲ್ಲಿ ಶೇ.75 ರಷ್ಟು ಜನ ಬಹುಮಟ್ಟಿಗೆ ಸಾಹುಕಾರನನ್ನೇ ಅವಲಂಬಿಸಿದ್ದಾರೆ. ಪದಾಧಿಕಾರಿಗಳಲ್ಲಿ ಶೇ.45 ರಷ್ಟು ಜನರು ಸ್ವಲ್ಪಮಟ್ಟಿಗೆ ಸಹಾಯ ಪಡೆಯುವಂತಿದ್ದರೆ ಶೇ.25 ರಷ್ಟು ಜನ ಸದಸ್ಯರು ಸಾಹುಕಾರನ ಮೇಲೆ ಸ್ವಲ್ಪ ಮಟ್ಟಿಗೆ ಅವಲಂಬಿಸಿದ್ದಾರೆ. ಹಾಗಾಗಿ ಈಗಲೂ ಸಾಲಕ್ಕೆ ಸಾಹುಕಾರನೇ ಸ್ನೇಹಿತನೂ, ಮಾರ್ಗದರ್ಶಿಯೂ ಸಹಾಯಕನೂ ಆಗಿದ್ದಾನೆ.

ಈ ಮೇಲಿನ ಎಲ್ಲ ವಿಷಯಗಳನ್ನು ಸ್ವ–ಸಹಾಯ ಸಂಘದ ಮಹಿಳೆಯರೊಡನೆ ಚರ್ಚಿಸಿದಾಗ ಗಮನಕ್ಕೆ ಬಂದಂತಹ ಅಂಶಗಳನ್ನು ಈ ಕೆಳಗಿನಂತೆ ಹೇಳಲಾಗಿದೆ.

1. ಗ್ರಾಮೀಣ ಮಹಿಳೆಯರನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವಲ್ಲಿ ಸ್ವಸಹಾಯ ಸಂಘಗಳು ನಿರೀಕ್ಷಿತ ಮಟ್ಟದಲ್ಲಿ ಯಶಸ್ವಿಯಾಗಿಲ್ಲ.
2. ಗ್ರಾಮೀಣ ಮಹಿಳೆಯರಿಗೆ ಬ್ಯಾಂಕ್ ಸಾಲಗಳು ಹಾಗೂ ಬಳಕೆಗಳ ಬಗೆಗೆ ಹೆಚ್ಚಿನ ರೀತಿಯಲ್ಲಿ ಸಹಾಯವಾಗಿಲ್ಲ.
3. ಸರ್ಕಾರೇತರ ಸಂಸ್ಥೆಗಳಿಂದ ಗ್ರಾಮೀಣ ಮಹಿಳೆಯರಿಗೆ ಹೆಚ್ಚಿನ ರೀತಿಯಲ್ಲಿ ಸಹಾಯವಾಗಿಲ್ಲ.
4. ಸೂಕ್ಷ್ಮ ಹಣಕಾಸು ಘಟಕವು ಸ್ವಾವಲಂಬಿಯಾಗುವಲ್ಲಿ, ಸ್ವ–ಸಹಾಯ ಸಂಘಗಳು ಅಭಿವೃದ್ಧಿ ಪಥದತ್ತ ಸಾಗಿಸುವಲ್ಲಿ ಸಂಪೂರ್ಣ ಸಾಫಲ್ಯ ಪಡೆದಿಲ್ಲ.

   ಆದರೆ ಇದಕ್ಕೆ ವಿರುದ್ಧವಾಗಿ ಅವು ಸಕಾರಾತ್ಮಕ ಬದಲಾವಣೆಗಳನ್ನೂ ತಂದಿವೆ.

   1. ಕೂಲಿಗಳಿಗಿಂತ ಸ್ವ ಉದ್ಯೋಗದತ್ತ ಒಲವು ತೋರುತ್ತಿದ್ದಾರೆ.
   2. ಮಿತವ್ಯಯ ಹಾಗೂ ಉಳಿಕೆಯತ್ತ ಜನರು ಒಲವು ತೋರುತ್ತಿದ್ದಾರೆ.
   3. ಪಡೆದ ಸಾಲಗಳನ್ನು ಹೂಡಿಕೆಯಲ್ಲಿ ಆದಾಯ ಉತ್ಪನ್ನವಾಗುವ ಚಟುವಟಿಕೆಗಳಲ್ಲಿ ತೊಡಗಿಸುವತ್ತ ತಮ್ಮ ಗಮನ ಕೇಂದ್ರೀಕರಿಸುತ್ತಿದ್ದಾರೆ.
   4. ಜೀವನ ಮಟ್ಟದ ಸುಧಾರಣೆಯ ಸಾಲವನ್ನು ಪಡೆದು ಸದ್ವಿನಿಯೊಗ ಮಾಡುತ್ತಿದ್ದಾರೆ.

ಹೀಗಾಗಿ ಗ್ರಾಮೀಣ ಮಹಿಳೆಯರು ಸ್ವ–ಸಹಾಯ ಸಂಘದ ಮುಖಾಂತರ ಆರ್ಥಿಕ ಸಬಲೀಕರಣಕ್ಕಾಗಿ ಹಂತ ಹಂತವಾಗಿ ಪ್ರಯತ್ನಸುತ್ತಿದ್ದಾರೆ. ಆರ್ಥಿಕವಾಗಿ ತಮ್ಮ ಜೀವನದಲ್ಲಿ ಸಣ್ಣ ಮಟ್ಟ ಬದಲಾವಣೆಗಳು ಸಾಧ್ಯವಾಗುತ್ತಿವೆ ಎಂಬ ಸತ್ಯವನ್ನು ಹೊರಗಡೆವಿದ್ದಾರೆ. ಹೀಗಾಗಿ ಗ್ರಾಮೀಣ

ಮಹಿಳೆಯರ ಸಬಲೀಕರಣದಲ್ಲಿ ಆರ್ಥಿಕ ಸಬಲೀಕರಣವು ಮಹತ್ವದ್ದಾಗಿದೆ ಅಲ್ಲದೆ ಸ್ವ-ಸಹಾಯ ಸಂಘಗಳು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಪೂರಕವಾಗಿಯೇ ಕಾರ್ಯನಿರ್ವಹಿಸುತ್ತಿವೆ ಎಂದು ಹೇಳಬಹುದು.

5.3. ಗ್ರಾಮೀಣ ಮಹಿಳೆಯ ಶೈಕ್ಷಣಿಕ ಸಬಲೀಕರಣ:

ಪೀಠಿಕೆ.

ಶಿಕ್ಷಣವೆಂದರೆ ಕಲಿಕೆ. ಜ್ಞಾನವನ್ನು ಅರ್ಜಿಸಿಕೊಳ್ಳುವುದು ತಿಳಿಯುವುದು ಓದುವುದು. ಬರೆಯುವುದು ಇತ್ಯಾದಿ ಅರ್ಥಗಳನ್ನು ಕೊಡುತ್ತದೆ. "ವ್ಯಕ್ತಿಯೊರ್ವ ಕುಟುಂಬದೊಂದಿಗೆ, ಸಮಾಜದೊಂದಿಗೆ ಹೊಂದಿಕೊಂಡು ಜೀವಿಸುತ್ತಾ ತನ್ನ ಶ್ರೇಯೋಭಿವೃದ್ಧಿಗೆ ಬೇಕಾಗುವ ಸಾಮರ್ಥ್ಯ, ಕೌಶಲ್ಯ, ಮನೋಭಾವ ಮತ್ತು ವರ್ತನೆಗಳನ್ನು ರೂಢಿಸಿಕೊಳ್ಳಲು ನೆರವಾಗುವ. ಪ್ರಕ್ರಿಯೆ ಶಿಕ್ಷಣವಾಗಿದೆ." ಹಾಗೇಯೇ ಗ್ರಾಮೀಣ ಮಹಿಳೆಯ ಸಬಲೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಣ ಮತ್ತು ಉದ್ಯೋಗಗಳೆರಡು ಬಹುಮುಖ್ಯವಾದ ಸಾಧನಗಳಾಗಿವೆ. ಅಲ್ಲದೆ ಸಾಮಾಜಿಕ ಶಕ್ತಿಗಳಾಗಿವೆಯೆಂದು ಹೇಳಬಹುದು. ಪುರುಷಪ್ರಧಾನ ಸಮಾಜದಲ್ಲಿ ಮಹಿಳೆ ತನ್ನ ಸ್ಥಿತಿಗತಿಗಳನ್ನು ಅರ್ಥಮಾಡಿಕೊಂಡು ಸಾಮರ್ಥ್ಯಗಳೇನಿವೆ, ಬಲಹೀನತೆಗಳೇನಿವೆ ಎಂದು ಅರಿತು ಪುರುಷನಿಗೆ ಸರಿಸಮನಾಗಿ ನಿಲ್ಲಲ್ಲು ಶಿಕ್ಷಣದ ಅವಶ್ಯಕತೆಯಿದೆ. ಈ ಅಧ್ಯಾಯದಲ್ಲಿ ಶಿಕ್ಷಣದ ಮಹತ್ವ ಗ್ರಾಮೀಣ ಹೆಣ್ಣುಮಕ್ಕಳು ಅದರಲ್ಲಿಯೂ ಗ್ರಾಮೀಣ ಬಾಲೆಯರು ಇದನ್ನು ಪಡೆಯುವಲ್ಲಿ ಸಫಲ ರಾಗಿದ್ದಾರೆಯೆ. ತೊಂದರೆಗಳೇನಾದರೂ ಎದುರಿಸುತ್ತಿದ್ದಾರೆಯೇ? ಪರಿಹಾರ ಹುಡುಕಿಕೊಳ್ಳಲು ಸಾಧ್ಯವಾಗಿದೆಯೇ? ಎನ್ನುವ ವಿಷಯಗಳನ್ನು ಸ್ವಸಾಹಯ ಗುಂಪಿನ ಮಹಿಳೆಯೊಂದಿಗೆ ಚರ್ಚಿಸಿ ಅವರಿಂದ ಬಂದ ಪ್ರತಿಕ್ರಿಯೆಗಳನ್ನು ಸಂಗ್ರಹಿಸಲಾಗಿದೆ.

ಗ್ರಾಮೀಣ ಮಹಿಳೆಯ ಶಿಕ್ಷಣದ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು:

ಒಬ್ಬ ವ್ಯಕ್ತಿಯ ಪರಿಪೂರ್ಣ ವಿಕಾಸಕ್ಕೆ ಶಿಕ್ಷಣವು ಬಹುಮುಖ್ಯ ಸಾಧನವಾಗಿದೆ. ಶಿಕ್ಷಣ ಪಡೆಯುವುದರ ಮೂಲಕ ವೈಯಕ್ತಿಕ ಮತ್ತು ಸಾಮಾಜಿಕ ಗುರಿಗಳನ್ನು ತಿಳಿದುಕೊಳ್ಳಲು ಸಾದ್ಯವಾಗುತ್ತದೆ. ನಾಗರಿಕಹಕ್ಕು ಮತ್ತು ಕರ್ತವ್ಯದ ಬಗ್ಗೆ ತಿಳಿಯಲು ಇದು ಪೂರಕವಾಗಿದೆ. ಸದೃಢ ಮತ್ತು ಉತ್ತಮ ಸಮಾಜದ ನಿರ್ಮಾಣಕ್ಕೆ ಶಿಕ್ಷಣವು ಅವಶ್ಯವಾಗಿದೆ. ವ್ಯಕ್ತಿತ್ವದ ಬೆಳವಣಿಗೆಯ ಜೋತೆಗೆ ಉತ್ತಮ ಶೀಲ ಸಂವರ್ಧನೆಯ ಬೆಳವಣಿಗೆಯಲ್ಲಿ ಸಮಾಜದ ಮತ್ತು ರಾಷ್ಟ್ರದ ಅಭಿವೃದ್ಧಿ ಕಾರ್ಯದಲ್ಲಿ ಶಿಕ್ಷಣವೊಂದು ಸಾಧನವಾಗಿದೆ. ಹಾಗೇಯೇ ಗ್ರಾಮೀಣ ಸಮಾಜದಲ್ಲಿ ಶೈಕ್ಷಣಿಕ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಾಂತಿಕಾರಕ ಬದಲಾವಣೆಗಳನ್ನು ತರಲು

ಶಾಲೆಗಳು, ರಾತ್ರಿ ಶಾಲೆಗಳು ಅಂದರೆ ಅನೌಪಚಾರಿಕ ಶಿಕ್ಷಣ ಕೇಂದ್ರಗಳು, ವಯಸ್ಕರ ಶಿಕ್ಷಣ ಕೇಂದ್ರಗಳು ಹಾಗೂ ಪ್ರಸಾರ ಮಾಧ್ಯಮಗಳಾದ ದಿನ ಪತ್ರಿಕೆಗಳು, ದೂರದರ್ಶನ, ಆಕಾಶವಾಣಿ ಮುಂತಾದವುಗಳು ಬದಲಾವಣೆಯ ಪ್ರಕ್ರಿಯೆಯಲ್ಲಿ ತನ್ನದೆಯಾದ ಮಹತ್ವದ ಪಾತ್ರವನ್ನು ನಿರ್ವಹಿಸಿಸುತ್ತವೆಯಾದರೂ ಮಹಿಳೆಯರ ಹಿತಾಸಕ್ತಿಗೆ ಪೂರಕವಾಗಿವೆಯೋ ಅಥವಾ ಇಲ್ಲವೋ ಈ ಕುರಿತು ಮಹಿಳೆಯರ ದೃಷ್ಟಿಕೋನ ಹೇಗಿದೆಯೆಂದು ಅಧ್ಯಾಯನದಲ್ಲಿ ವಿಶ್ಲೇಷಿಸಲಾಗಿದೆ.

"ಭಾರತದೇಶ ಬಡಜನರಿಂದ ಕೂಡಿದ ಶ್ರೀಮಂತ ದೇಶ", ಹಳ್ಳಿಗಳ ನಾಡು, ಕೃಷಿ ಪ್ರಧಾನವಾದ ದೇಶ. 100ಕ್ಕೆ ಶೇ.72 ರಷ್ಟು ಜನರು ಗ್ರಾಮೀಣ ಪ್ರದೇಶಗಳಲ್ಲಿಯೂ ವಾಸಿಸುತ್ತಿದ್ದಾರೆ. ಹಾಗೂ ಬಹುಸಂಖ್ಯಾತ ಜನರು ಅನಕ್ಷರಸ್ತರಾಗಿದ್ದಾರೆ. ಅದರಲ್ಲಿ ಗ್ರಾಮೀಣ ಮಹಿಳೆಯರ ಶಿಕ್ಷಣವನ್ನು ಗಮನಕ್ಕೆ ತೆಗೆದುಕೊಂಡಾಗ ತುಂಬಾ ಶೋಚನೀಯವಾದ ಸ್ಥಿತಿಕಂಡುಬರುತ್ತದೆ. ಅದ್ದರಿಂದ ಗ್ರಾಮೀಣ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಕ್ಷರರಾವುದು ಅದು ಮಹಿಳಾ ಸಬಲೀಕರಣಕ್ಕೆ ಕಾರಣವಾಗಿದೆ ಎಂದು ಆಧುನಿಕರಣದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಗ್ರಾಮೀಣ ಶಿಕ್ಷಣ ಯಾವರೀತಿಯಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತಿದೆಯೆಂದು ನೋಡುವುದೇ ಅಗಿದೆ.

ಸಾಕ್ಷರತೆಯು ಸಮಾಜದ ಬದಲಾವಣೆಯಲ್ಲಿ ಪೂರಕವಾದ ಮತ್ತು ಪ್ರಮುಖವಾದ ಸಾಧನವಾಗಿದೆ. ಆರಂಭಿಕ ಶಿಕ್ಷಣವು ಗ್ರಾಮೀಣ ಸಮುದಾಯದ ಭಾಗಗಳಾದ, ಕೂಲಿಕಾರ್ಮಿಕರು, ಒಕ್ಕಲಿಗರು, ಕುಶಲಕರ್ಮಿಗಳು, ಹಾಲು, ಹಣ್ಣು, ತರಕಾರಿ, ಮಾರುವವರು. ಸಣ್ಣ ಪುಟ್ಟ ವ್ಯಾಪಾರ ಮಾಡುವವರು. ಗ್ರಹಿಣಿಯರಿಗೆ ಅಂಗಡಿಗಳ ಬಸ್ಸಿನ ನಾಮಫಲಕಗಳನ್ನು ಓದಲು ಕ್ರಿಮಿನಾಶಕ ಔಷಧಿಗಳ ಹೆಸರುಗಳನ್ನೋದಲು, ರಸಿದಿಗಳ ಬಗ್ಗೆ ತಿಳಿದುಕೊಳ್ಳಲು, ಹಣದ ಎಣಿಕೆ ಮಾಡಲು, ಪತ್ರ ಓದಲಿಕ್ಕೆ ಮತ್ತು ಬರೆಯಲಿಕ್ಕೆ, ಅರ್ಜಿಫಾರಂಗಳನ್ನು ತುಂಬಲಿಕ್ಕೆ ಕೈಬರಹ ಪುಸ್ತಕಗಳನ್ನು ಜಾಹಿರಾತುಗಳನ್ನು ಓದಲಿಕ್ಕೆ, ಹಾಗೂ ಗ್ರಾಮೀಣ ಜನರ ದೈನಂದಿನ ಕೆಲಸಕಾರ್ಯಗಳನ್ನು ಅರ್ಥಮಾಡಿಕೊಂಡು ಜವಾಬ್ದಾರಿಯಿಂದ ಪ್ರಾಮಣಿಕತೆಯಿಂದ, ದಕ್ಷತೆಯಿಂದ ಜೀವನ ನಿರ್ವಹಿಸಲಿಕ್ಕೆ ಇದು ಸಹಕಾರಿಯಾಗಿದೆ.

ಅಶಿರ್ವಾದರವರ ಅಭಿಪ್ರಾಯದಂತೆ ಶಿಕ್ಷಣವು ಗ್ರಾಮೀಣ ಸಮುದಾಯದ ಜನರ ದೈನಂದಿನ ಬದುಕಿನ ವರ್ತನೆಗಳು ಹಾಗೂ ಬೇಡಿಕೆಗಳಿಗೆ ಅನ್ವಯಿಸುವಂತೆ ಅವರ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಅದರಂತೆಯೇ ಮಾಧ್ಯಮಿಕ ಹಂತದಲ್ಲಿ ಶಾಲೆಗೆ ಹೋಗಿ ಶಿಕ್ಷಣ ಪಡೆದ ಜನ ಸಾಮಾನ್ಯರಿಗೆ ಕಥೆ ಪುಸ್ತಕಗಳನ್ನು, ಕಾದಂಬರಿಗಳನ್ನು, ದಿನಪತ್ರಿಕೆಗಳನ್ನು ಜಾಹಿರಾತುಗಳನ್ನು ಓದುವುದರಿಂದ ತರ್ಕಬದ್ಧವಾಗಿ ವಿಚಾರ ಮಾಡುವ ಕೌಶಲ್ಯ ಹೆಚ್ಚಾಗುತ್ತದೆ ಹಾಗೇಯೇ ಬಾಹ್ಯ ಚರ್ಚೆಗಳಲ್ಲಿ ಭಾಗವಹಿಸಲು ಸಹಕಾರಿಯಾಗಿದೆ.

ಉದಾ: ಒಬ್ಬ ಶಿಕ್ಷಿತ ವ್ಯಕ್ತಿ ಕಲಿಯದವನಿಗೆ ಅನೇಕ ರೀತಿಯ ಸಾಹಯವನ್ನು ಮಾಡಬಹುದಾಗಿದೆ. ಪತ್ರ ಓದಲಿಕ್ಕೆ ಬರೆಯಲಿಕ್ಕೆ, ಭಿತ್ತಿ ಪತ್ರ, ಜಾಹಿರಾತ, ಗೋಡೆ ಬರಹಗಳನ್ನು ಓದಿ ಹೇಳುವುದು.

ಗ್ರಾಮೀಣ ಮಹಿಳೆಯರಿಗೆ ಶಿಕ್ಷಣದ ಪ್ರಾಮುಖ್ಯತೆ:

ಸರ್ವೆ ಸಾಧಾರಣವಾಗಿ ಮಹಿಳೆಯರ ಜೀವನದಲ್ಲಿ ಶಿಕ್ಷಣವು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತದೆ. ಅದರಲ್ಲಿಯೋ ಗ್ರಾಮೀಣ ಮಹಿಳೆಯರಲ್ಲಿ ಅನಕ್ಷರತೆಯ ಪ್ರಮಾಣ ಹೆಚ್ಚಿದೆ. ಹಾಗೂ ಅವರಿಗೆ ಸಾಕ್ಷರರನ್ನಾಗಿ ಮಾಡುವಲ್ಲಿ ಅನೇಕ ರೀತಿಯ ತಾರತಮ್ಯವನ್ನು ಅನುಸರಿಸಲಾಗುತ್ತದೆ. ದೇಶದ ಅಭಿವೃದ್ಧಿಯು ಗ್ರಾಮೀಣ ಅಭಿವೃದ್ಧಿಯನ್ನು ಅದರಲ್ಲಿಯೋ ಗ್ರಾಮೀಣ ಮಹಿಳೆಯರ ಅಭಿವೃದ್ಧಿಯನ್ನ ಅವಲಂಬಿಸಿದೆ. ಹೀಗಾಗಿ ಅವರಿಗೆ ಶಿಕ್ಷಣವು ಅತಿ ಅವಶ್ಯಕವಾಗಿದೆ, ಭಾರತೀಯ ಸಾಂಪ್ರಾದಾಯಿಕ ಸಮಾಜ ಮಹಿಳೆಗೆ ಶಿಕ್ಷಣ ನೀಡುವುದು. ಅತಿ ಅವಶ್ಯಕವಾಗಿದೆಯೆಂಬ ಸತ್ಯವನ್ನು ಅರಿತುಕೊಂಡಿಲ್ಲ. ಇದಕ್ಕೆ ಮುಖ್ಯವಾದ ಕಾರಣವೇನೆಂದರೆ ಮಹಿಳೆಗೆ ಶಿಕ್ಷಣ ನೀಡುವುದಕ್ಕಿಂತ ಆಕೆಗೆ ಮದುವೆ ಮಾಡಿ ಗಂಡನ ಮನೆಗೆ ಕಳುಹಿಸುವಲ್ಲಿಯೇ ಜನ ಆಸಕ್ತರಾಗಿದ್ದಾರೆ. ಇದಕ್ಕೆ ಎಲ್ಲ ಸಮಾಜಗಳು ಹೊರತಾಗಿಲ್ಲ. ಮಹಿಳೆಗೆ ಶಿಕ್ಷಣಬೇಕೆಂಬ ನಂಬಿಕೆ ಅವರಲ್ಲಿ ಇರಲಿಲ್ಲ. ಹೀಗಾಗಿ ಶಿಕ್ಷಣ ಮಹಿಳೆಗೆ ಕೈಗೆಟುಕಲಿಲ್ಲ ಅವಳಿಗೆ ಆಸಕ್ತಿ ಇದ್ದರೂ ಪುರುಷ ಪ್ರಧಾನ ವ್ಯವಸ್ಥೆಯು ಆಕೆಯ ಹಿತಾಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳದೇ ತನ್ನ ಮೂಗಿನ ನೇರಕ್ಕೆ ಮಹಿಳೆ ಜೀವನ ಸಾಗಿಸುವಂತಹ ಅನಿವಾರ್ಯತೆಯನ್ನು ಕಲ್ಪಿಸಲಾಗಿದೆ.

ಶಿಕ್ಷಣ ಪಡೆದ ಮಹಿಳೆಯನ್ನು ಅಶಿಕ್ಷಿತ ಮಹಿಳೆಗೆ ಹೋಲಿಸಿದಾಗ ಕೆಲವು ವಿಷಯಗಳಲ್ಲಾದರೂ ತನ್ನ ಮನೆಯ ಎಲ್ಲಾ ಜವಾಬ್ದಾರಿಗಳನ್ನು ಅದೇಶಿತ, ಸ್ವಯಂ. ಮಾಡಲೇಬೇಕಾದ ಜವಾಬ್ದಾರಿ ತೆಗೆದುಕೊಳ್ಳುವುದರ ಜೋತೆಗೆ ಅರ್ಥಿಕ ಚಟುವಟಿಕೆಗಳ ನಿರ್ವಹಣೆ ಮಾಡಲು ಸಾಧ್ಯವೆಂದು ನಂಬಲಾಗಿದೆ, ಏನೆಯಾಗಲಿ 16ನೇ ಶತಮಾನದ ಆರಂಭದಲ್ಲಿ ಭಾರತದಲ್ಲಿ ಬ್ರಿಟಿಷರ ಅಳ್ವಿಕೆಯಲ್ಲಿ ಇಡಿ ವಿಶ್ವದಲ್ಲಿಯೆ ಶಿಕ್ಷಣದ ಅಲೆಗಳು ಎದ್ದವು. ಎಲ್ಲರಿಗೂ ಮುಕ್ತವಾದ ಸ್ವತಂತ್ರವಾದ ಶಿಕ್ಷಣ ಪುರುಷ ಮತ್ತು ಮಹಿಳೆಯೆಂಬ ಬೇದವಣಿಸಿದೆ. ಮೇಲ್ವವರ್ಗ ಮತ್ತು ಕೆಳವರ್ಗ, ಬಡವ-ಬಲ್ಲಿದ, ಉಚ್ಚ-ನೀಚ ಎಂದು ತಾರತಮ್ಯ ಮಾಡದೇ ಸಮಾನತೆಯ ಶಿಕ್ಷಣ ನೀಡುವ ಪ್ರಕ್ರಿಯೆ ಪ್ರಾರಂಭವಾಯಿತು.

ಜಾತಿವರ್ಗ, ಧರ್ಮ, ಲಿಂಗ, ವರ್ಣ, ಭೇದವಿಲ್ಲದ ಶಿಕ್ಷಣವು ಎಲ್ಲರಿಗೂ ಮುಕ್ತವಾಗಿತ್ತು. ಭಾರತ ಸ್ವಾತಂತ್ರ್ಯನಂತರ ಭಾರತಸರ್ಕಾರದ ಮಹಿಳಾ ಶಿಕ್ಷಣ ಸಮಿತಿಯ ವಿಶೇಷವಾದ ಬೆಳಕನ್ನು ಚೆಲ್ಲಿ, ಹೆಚ್ಚಿನ ಒಲವು ಮತ್ತು ಕಾಳಜಿ ತೋರಿಸಿತು. ಅದರ ಪ್ರತಿಫಲವಾಗಿ ಗ್ರಾಮೀಣ ಪ್ರದೇಶಗಳಲ್ಲಿ

ಮತ್ತು ಆದಿವಾಸಿ ಪ್ರದೇಶಗಳಲ್ಲಿ ಶಾಲೆಗಳು ತೆರೆಯಲ್ಪಟ್ಟವು. ಮತ್ತು ಹೆಣ್ಣು ಬಾಲೆಯರಿಗೆ ಶಾಲೆಗೆ ಹೆಚ್ಚಿನ ಸಂಖ್ಯೆಯಲ್ಲಿ ಬರಲು ಆತ್ಮ ವಿಶ್ವಾಸ ಮತ್ತು ಧೈರ್ಯತುಂಬಲಾಯಿತು. ಅವರು ಪ್ರವೇಶ ಪಡೆಯಲು ಯಾವುದೇ ರೀತಿಯಲ್ಲಿ ಹಣ ನೀಡಬೇಕಾಗಿರಲಿಲ್ಲ. ಹೀಗಾಗಿ ಶಾಲೆಗಳಲ್ಲಿ ಹೆಣ್ಣು ಮಕ್ಕಳ ದಾಖಲಾತಿ ದಿನದಿಂದ ದಿನಕ್ಕೆ ಹೆಚ್ಚಾಗತೊಡಗಿತ್ತು. ಇತ್ತಿಚಿನ ದಿನಗಳಲ್ಲಿ ಗ್ರಾಮೀಣ ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಿ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. "Operation Black Board" ಕಪ್ಪು ಹಲಗೆಯ ಕಾರ್ಯಕ್ರಮ ಮುಖಾಂತರ ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ಪ್ರಾರಂಭಿಕ ಹಂತದ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಿ ಮಕ್ಕಳಲ್ಲಿ ಮಾನವಸಂಪತ್ತನ್ನ ಭೌತಿಕ ಸಂಪತ್ತಿನ. ಅಭಿವೃದ್ಧಿ ಪಡಿಸುವುದು ಶಿಕ್ಷಣದ ಮುಖ್ಯ ಉದ್ದೇಶ ವಾಗಿತ್ತು. "ಟೀಚರ ಎಜ್ಯುಕೇಶನ ಕೋರ್ಸ" (Teachers Education Course) 1987 ಇದರಲ್ಲಿ ಶಿಕ್ಷಕರಿಗೆ ತಮ್ಮ ವೃತ್ತಿಯಲ್ಲಿ ಬೇಕಾದ ಪ್ರೋತ್ಸಾಹ ಹೊಸ ಹೊಸ ವಿಧಾನಗಳಿಂದ ಮಕ್ಕಳಿಗೆ ಕಲಿಸುವುದು. ಇತ್ಯಾದಿಗಳನ್ನು ಈ ಕಾರ್ಯಕ್ರಮ ಒಳಗೊಂಡಿತ್ತು. ಅಷ್ಟೇ ಅಲ್ಲದೆ "ಹಸಿದ ಹೊಟ್ಟೆಗೆ ಯಾವುದೇ ಅಕ್ಷರ ಕಲಿಯುವ ಆಸಕ್ತಿ ಇರುವುದಿಲ್ಲ. ಆದ್ದರಿಂದ ಪ್ರಾಥಮಿಕ ಶಾಲಾ ಮಕ್ಕಳಿಗೆ ಮದ್ಯಾಹ್ನದ ಸಮಯದಲ್ಲಿ ಅಕ್ಷರದ ಜೊತೆಗೆ ಬಿಸಿ ಊಟವನ್ನು ನೀಡಲು ಸರಕಾರ ಅಲೋಚಿಸಿ. 1995 ರಿಂದ 'ಮಿಡ ಡೇ ಮಿಲ್ಸ' ಯೋಜನೆಯನ್ನು ಅನುಷ್ಠಾನಗೊಳಿಸಿ ಮಕ್ಕಳಿಗೆ ಪೌಷ್ಟಿಕ ಆಹಾರ ದೊರೆಯುವಂತೆ ಸಹಕರಿಸಿತು". 1994ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯ ಜಾರಿಗೆ ಬಂತು. ಇದರ ಮುಖ್ಯ ಉದ್ದೇಶ ರಾಜ್ಯದ ಮೂಲೆ ಮೂಲೆಗಳಲ್ಲಿರುವ ಶಾಲೆಗಳಲ್ಲಿ ಏಕರೂಪವಾಗಿ ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರಿಕರಣಗೊಳಿಸುವುದ UNICEF ಈ ನೆರವಿನಿಂದ 1998 ರಲ್ಲಿ "ಜ್ಞಾನ ಶಾಲೆ" ಕಾರ್ಯಕ್ರಮ ಪ್ರಾರಂಭವಾಗಿ ಶಾಲೆಯ ಹಂತ ಹಂತದ ಕಾರ್ಯ ಚಟುವಟಿಕೆಗಳಲ್ಲಿ ಸಮುದಾಯದ ಜನರು ಭಾಗವಹಿಸಬೇಕೆಂಬುದೇ ಈ ಯೋಜನೆಯ ಗುರಿಯಾಗಿತ್ತು. 2001-2002 ರಲ್ಲಿ ಬೃಹತ ಗಾತ್ರದ ಸರ್ವ ಶಿಕ್ಷಣ ಅಭಿಯಾನ (SSA) ಕಾರ್ಯಕ್ರಮ ಆರಂಭವಾಯಿತು. ಇದು ಸರಕಾರ ಮತ್ತು ಅಜೆಮ-ಪ್ರೇಮಜಿ ಫೌಂಡೇಶನ ಸಹಯೋಗದೊಂದಿಗೆ ಅನುಷ್ಠಾನಗೊಂಡಿದೆ. ಈ ಕಾರ್ಯಕ್ರಮದ ಮುಖ್ಯ ಉದ್ದೇಶ ಪ್ರಾರಂಭಿಕ ಶಿಕ್ಷಣವನ್ನು ಸಾರ್ವತ್ರಿಕಗೊಳಿಸುವುದು ಒಂದು ನಿಗದಿ ಪಡಿಸಿದ ಸಮಯದಲ್ಲಿ ದೇಶದ ಮೂಲೆ ಮೂಲೆಗಳಲ್ಲಿರುವ ಗ್ರಾಮಗಳ ಕುಗ್ರಾಮಗಳ ತಾಂಡಾಗಳ ಶಾಲೆಯ ಮಕ್ಕಳಿಗೆ ಎಕರೂಪದ ಶಿಕ್ಷಣವನ್ನು ತಲುಪಿಸಿ ಶಿಕ್ಷಣದಲ್ಲಿ ಹೆಚ್ಚಿನ ಸಾಧನೆ ಗೈಯುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿದೆ.

ಸಂವಿಧಾನದಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯತೆ ನೀಡುವಂತೆ 2002ರಲ್ಲಿ ಪ್ರತಿಯೊಂದು ಮಗುವು ಶಿಕ್ಷಣವನ್ನು ಪಡೆಯವುದು ಅದರ ಮೂಲಭೂತ ಹಕ್ಕಾಗಿದೆ. ಅದರಲ್ಲಿಯೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ರಾಷ್ಟ್ರ ವ್ಯಾಪ್ತಿಯಾದ ಎರಡು ಬೃಹತ್ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಅದರಲ್ಲಿ (NPEGEL) National Programme for Education Girls Elementry level ಮತ್ತು ಕಸ್ತೂರ ಬಾ ಗಾಂಧಿ, ಬಾಲಕಿಯರ ವಸತಿ ಶಾಲೆಗಳನ್ನು 2003 ರಲ್ಲಿ ಆರಂಭಗೊಳಿಸಲಾಯಿತು.

ಕಳೆದ ಎರಡು ಮೂರು ವರ್ಷಗಳಿಂದಿಚೆಗೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಕಲಿಯಲು ಪ್ರೋತ್ಸಾಹಿಸಿ ಬೈಸಿಕಲ್ ಸೌಲಭ್ಯವನ್ನು ನೀಡಿ ಅವರೆಡೆ ಹೆಚ್ಚಿನ ಗಮನ ಹರಿಸಲಾಯಿತು. ಸಂಕ್ಷಿಪ್ತವಾಗಿ ಹೇಳುವುದಾದರೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಹಲವಾರು ಯೋಜನೆಗಳನ್ನು ಮತ್ತು ಸೌಲಭ್ಯಗಳನ್ನು ಒದಗಿಸಿ ಮಹಿಳಾ ಸಬಲೀಕರಣ ಪ್ರಕ್ರಿಯೆಗೆ ಪೂರಕವಾಗಿವೆ. ಗ್ರಾಮೀಣ ಮಹಿಳೆಯರು ಈ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ ಎಂದು ತಿಳಿದು ಕೊಳ್ಳುವುದು ಅವಶ್ಯಕವಾಗಿದೆ.

ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಗ್ರಾಮೀಣ ಮಹಿಳೆಯರು ತಳೆದಿರುವ ಧೋರಣೆಗಳನ್ನು ಈ ಕೆಳಗಿನ ಅಂಶಗಳಿಂದ ತಿಳಿದುಕೊಳ್ಳಬಹುದಾಗಿದೆ.

1. ಮಹಿಳೆಯರ ಶಿಕ್ಷಣದ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು.
2. ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು.
3. ಹೆಣ್ಣು ಮಕ್ಕಳಿಗೆ ಹೆಚ್ಚಿನ ಶಿಕ್ಷಣ ನೀಡುವ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು.
4. ಹೆಣ್ಣು ಮಕ್ಕಳ ಶಿಕ್ಷಣದ ಗುರಿ ಉದ್ದೇಶಗಳ ಅಧ್ಯಯನದ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು.

ಗ್ರಾಮೀಣ ಪ್ರದೇಶದಲ್ಲಿ ಮಹಿಳೆಗೆ ಶಿಕ್ಷಣ ನೀಡಬೇಕೆನ್ನವುದು ಹಿಂದಿನಿಂದಲೂ ಕನಸಿನ ಮಾತಾಗಿತ್ತು. ಮಹಿಳೆಗೆ ಶಿಕ್ಷಣಕ್ಕಿಂತ ಮದುವೆಮಾಡಿ ಗಂಡನ ಮನೆಗೆ ಕಳುಸುವಲ್ಲಿಯೇ ಸಾಮಾಜಿಕ ವ್ಯವಸ್ಥೆ ಅತಿ ಉತ್ಸಾಹ ತೋರಿಸುತ್ತದೆ. ಅವಳು ಕಲಿಯುವುದು ಯಾರಿಗೂ ಬೇಕಾಗದ ವಿಷಯವಾಗಿದೆ. ಅವಳಿಗೆ ಈಗಾಗಲೇ ಬುದ್ದಿ ಕಡಿಮೆ ಕಲಿತು ಇವಳೇನು ಮಾಡ್ತಾಳೆ. ಎಷ್ಟು ಕಲಿತರೂ ಗಂಡನ ಮನೆಗೆ ಹೋಗವಳೆಂದು ಮನೆ ಕೆಲಸಮಾಡಿ ಒಳ್ಳೆಯ ಗೃಹಿಣಿಯಾದರೆ ಸಾಕೆಂಬ ನೀತಿ ಪಾಠವಿದೆ. ಆದರೂ ಕೆಲವು ಮಹಿಳೆಯರು ಶಿಕ್ಷಣದಡೆಗೆ ಒಲವು

ತೋರುತ್ತಿರುವುದು ಗಮನಾರ್ಹ ಸಂಗತಿಯಾಗಿದೆ. ಆದ್ದರಿಂದ ಸ್ವಸಹಾಯ ಸಂಘದ ಮಹಿಳೆಯರು ಮಹಿಳಾ ಶಿಕ್ಷಣದ ಬಗ್ಗೆ ತಳೆದಿರುವ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ – 5.3.1

ಮಹಿಳೆಯರ ಶಿಕ್ಷಣದ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು

ಕ್ರ. ಸಂ.	ಹೇಳಿಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂ.	ಶೇ.	ಸಂ.	ಶೇ.
01.	ಬಹು ಮಟ್ಟಿಗೆ	72	60%	86	48%	158	53%
02.	ಸ್ವಲ್ಪ ಮಟ್ಟಿಗೆ	28	40%	14	52%	42	47%
03.	ಗೊತ್ತಿಲ್ಲ	--	--	--	--	--	--
	ಒಟ್ಟು	**100**	**100%**	**100**	**100%**	**200**	**100%**

ಈ ಮೇಲಿನ ಕೋಷ್ಟಕದಲ್ಲಿ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆ ಇದೇಯೇ ಎಂಬುದಕ್ಕೆ ಹೇಳಿಕೆದಾರರು ತಳೆದಿರುವ ದೋರಣೆಗಳನ್ನು ನೊಡಿದಾಗ ಹೆಚ್ಚಿನ ಮಟ್ಟದಲ್ಲಿ ಅಂದರೇ ಶೇ.53 ರಷ್ಟು ಹೇಳಿಕೆದಾರರು ಪೂರಕವಾದ ಧನಾತ್ಮಕ ಹೇಳಿಕೆಯನ್ನು ನೀಡಿದ್ದಾರೆ. ಶೇ.47 ರಷ್ಟು ಹೇಳಿಕೆದಾರರು ಮಹಿಳೆಗೆ ಸ್ವಲ್ಪ ಮಟ್ಟಿಗೆ ಶಿಕ್ಷಣ ನೀಡಬೇಕೆಂದು, ಅಭಿಪ್ರಾಯ ಪಟ್ಟಿದ್ದಾರೆ. ಇದೆಲ್ಲವನ್ನು ನೋಡಿದಾಗ ಹೆಚ್ಚಿನ ಮಹಿಳೆಯರು ಮಹಿಳೆಗೆ ಶಿಕ್ಷೆ ನೀಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಅಂದರೇ ಸಂಘದ ಪ್ರತಿನಿಧಿಗಳು ಶೇ.60 ರಷ್ಟು ಹಾಗೂ ಸಂಘದ ಸದಸ್ಯರು ಶೇ.48 ರಷ್ಟು ಮಹಿಳೆಯರ ಅಭಿಪ್ರಾಯಗಳನ್ನು ಅವಲೋಕಿಸಿದಾಗ ಇವರೆಲ್ಲರು ಮಹಿಳೆಗೆ ಶಿಕ್ಷಣ ಬೇಕೆಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ. ಆದರೆ ಶೇ.52 ರಷ್ಟು ಸಂಘದ ಸದಸ್ಯರು ಸಂಘದ ಪ್ರತಿನಿಧಿಗಳಿಗಿಂತ ಅಧಿಕವಾಗಿ ಹೆಣ್ಣು, ಮಕ್ಕಳಿಗೆ ಸ್ವಲ್ಪ ಮಟ್ಟಿನ ಶಿಕ್ಷಣ ಬೇಕೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಇಡೀ ವ್ಯವಸ್ಥೆಯನ್ನು ನೋಡಿದರೆ ಗ್ರಾಮೀಣ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕೆನ್ನುವ ಅಭಿಪ್ರಾಯ ಹೊಂದಿದ್ದಾರೆ. ಬಹಳಷ್ಟು ಹೇಳಿಕೆದಾರರು ಇತ್ತಿಚಿನ ದಿನಗಳಲ್ಲಿ ಮಹಿಳೆಯರಿಗೆ ಶಿಕ್ಷಣ ಅತಿ ಅವಶ್ಯಕವಾಗಿ ಬೇಕೆಂದು ಹೇಳಿದ್ದಾರೆ. ಕಾರಣವೇನೆಂದರೆ ವೈಯಕ್ತಿಕ ಬೆಳವಣಿಗೆಗೆ ನಿರ್ಧಾರ ತೆಗೆದುಕೊಳ್ಳಲು ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಕಂಡು ಹಿಡಿಯಲು ಸಹಾಯ ಮಾಡುತ್ತದೆ. ಹಾಗೂ ಸಮಸ್ಯೆಗಳು ಬರದಂತೆ ಮುನ್ನಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲು ವ್ಯವಸ್ಥಿತವಾದ ಜೀವನ ಸಾಗಿಸಲು ಸಾಧ್ಯ. ನಮಗೆ ಈಗ ಶಿಕ್ಷಣ ಕಲಿಯುವ ವಯಸ್ಸು ಮುಗಿದಿದೆ. ನಮ್ಮ ಮಕ್ಕಳಿಗೆ ಶಿಕ್ಷಣ ಕೊಡಬೇಕಾಗಿದೆ ಎಂಬುವುದು ಮಹಿಳೆಯರ ಅಭಿಪ್ರಾಯವಾಗಿದೆ. ಹೀಗಾಗಿ ಮಹಿಳೆಗೆ ಶಿಕ್ಷಣದ ಅವಶ್ಯಕತೆ ಇದೆ ಅದರಲ್ಲಿಯೂ ಬಾಲಕೀಯರಿಗೆ ಶಿಕ್ಷಣ ನೀಡುವುದು ಅತೀ ಅವಶ್ಯಕವಾಗಿರು ವುದರಿಂದ ಮುಂದಿನ ಭಾಗದಲ್ಲಿ ಇದನ್ನು ವಿಶ್ಲೇಷಿಸಲಾಗಿದೆ.

ಬಾಲಕಿಯರ ಶಿಕ್ಷಣ ನೀಡುವುದರ ಬಗ್ಗೆ ಹೇಳಿಕೆದಾರರು ತಳೆದಿರುವ ಧೋರಣೆಗಳು:

18-ವರ್ಷದ ಒಳಗಿನ ಹೆಣ್ಣು ಮಕ್ಕಳನ್ನು ಬಾಲಕಿಯರು, ಹುಡುಗಿಯರು, ಕಿಶೋರಿಯರು ಎಂದು ಕರೆಯುತ್ತೇವೆ. 18-ವರ್ಷದ ಮೇಲ್ಪಟ್ಟವರನ್ನು ಮಹಿಳೆಯರು, ಸ್ತ್ರೀಯರು, ಯುವತಿಯರು ಎಂದು ಕರೆಯುತ್ತೇವೆ. ಅದ್ದರಿಂದ ಬಾಲಕಿಯರ ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಶಿಕ್ಷಣವು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ನಮ್ಮ ಸಾಂಪ್ರಾದಾಯಿಕ ಭಾರತೀಯ ಸಮಾಜದಲ್ಲಿ ಬಾಲಕಿಯರಿಗೆ ಇಂಥದೆ. ರೀತಿಯ ಶಿಕ್ಷಣಬೇಕೆಂಬ ನಿರೀಕ್ಷೆಗಳು ಇರುವುದಿಲ್ಲ. ಇದರ ಬದಲಿಗೆ ತಂದೆ-ತಾಯಿಯರು ತಮ್ಮ ಮಗಳನ್ನು ಮನೆಯ ಎಲ್ಲ ಕೆಲಸಗಳನ್ನು ಹೇಗೆ ಅಚ್ಚುಕಟ್ಟಾಗಿ ಮಾಡಬೇಕು. ಮನೆಯ ಜವಾಬ್ದಾರಿಗಳನ್ನು ಹೇಗೆ ತೆಗೆದುಕೊಳ್ಳಬೇಕು ಮತ್ತು ಮದುವೆಯ ನಂತರ ಗಂಡನ ಮನೆಯಲ್ಲಿ ಹೇಗಿರಬೇಕು. ತವರಿಗೆ ಒಳ್ಳೆಯ ಹೆಸರು ಹೇಗೆ ತರಬೇಕು ಎನ್ನುವ ತರಬೇತಿಯನ್ನು ತಮ್ಮ ಮಗಳಿಗೆ ನೀಡಿ ಸಿದ್ಧಗೊಳಿಸಿರುತ್ತಾರೆ. ಹೀಗಾಗಿ ಶಾಲೆ ಕಲಿಯಬೇಕೆಂಬ ಪ್ರಶ್ನೆ ಉದ್ಭವವಾಗದಂತೆ ನೋಡಿಕೊಳ್ಳಲಾಗುತ್ತಿದೆ.

ಸಾಮಾಜೀಕರಣ, ಅಧುನೀಕರಣ, ಕೈಗಾರೀಕಿಕರಣ, ಆಧುನಿಕ ಶಿಕ್ಷಣ ಜಾಗತೀಕರಣ ಪ್ರಕ್ರಿಯೆಯ ಫಲವಾಗಿ ಭಾರತೀಯ ಸಮಾಜ ಮೊದಲಿಗಿಂತಲೂ ಈಗ ಸರಳತೆಯಿಂದ ಸಂಕೀರ್ಣತೆಯೆಡೆಗೆ ಸಾಗಿದೆಯೆಂದು ಹೇಳಬಹುದಾಗಿದೆ. ಅವರು ಸಾಂಪ್ರದಾಯಕ ಪದ್ಧತಿಗಳನ್ನು ಮುಂದುವರೆಸಿಕೊಂಡು ಹೋಗಲು ಆಗುತ್ತಿಲ್ಲ. ಅಂದರೆ ಸಾಂಪ್ರದಾಯಿಕ ಸಮಾಜದ ನೀತಿನಿಯಮಗಳು ನಿಂತ ನೀರಾಗಿವೆ. ಸ್ಪರ್ದೆಗೆ ನಿಲ್ಲದೆ ಅನುತ್ಪಾದಕ ಸ್ತಿತಿಯಲ್ಲಿವೆ.

ಸಂಪ್ರಾದಾಯಿಕ ಭಾರತೀಯ ಸಮಾಜವು ಜಾಗತೀಕರಣದ ಫಲವಾಗಿ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಫಲವಾಗಿ ಅನೇಕ ಕ್ರಾಂತಿಕಾರಿ ಬದಲಾವಣೆಗಳನ್ನು ಕಂಡಿದೆ. ಶಾಲೆ, ಅಂಗನವಾಡಿ, ಪ್ರೌಢಶಾಲೆ ಮುಂತಾದ ಮೂಲ ಸೌಕರ್ಯಗಳಿಂದ ಹಾಗೂ ಹೆಣ್ಣು ಹುಡುಗಿ ಯರನ್ನು ಶಾಲೆಗೆ ಕಳುಹಿಸಬೇಕೆಂಬ ಅವಶ್ಯಕತೆ ಮಹಿಳೆಯರ ಅನುಭವಕ್ಕೆ ಬಂದಿದೆ ಹಾಗೂ ತಮ್ಮ ಜೀವನಮಟ್ಟವನ್ನು ಎತ್ತರಿಸಿಕೊಳ್ಳಬೇಕೆಂಬ ಪ್ರಜ್ಞೆ ಬಂದಿದೆ ಹಾಗೂ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಅವಶ್ಯಕತೆಯನ್ನು ತಮ್ಮ ಅನುಭವದ ಮೂಲಕ ತಿಳಿಸಿದ್ದಾರೆ.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದು ಅವಶ್ಯವೆಂದು ಬಹಳಷ್ಟು ಜನರ ಅಭಿಪ್ರಾಯವಾಗಿದೆ. ಅಷ್ಟೇ ಅಲ್ಲದೆ ಇದು ಮೂಲಭೂತವಾದ ಮಾನವ ಹಕ್ಕಾಗಿದೆ. ಈ ಮೊದಲು ಅಂದರೆ ಹಿಂದಿನ ಕಾಲದಲ್ಲಿ ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿತೆಂದು ಅವಳಿಗಾಗಿ ಖರ್ಚು ಮಡುವುದು. ಅನಾವ್ಯಶಕ ಖರ್ಚು ಎಂದು ತಿಳಿಯಲಾಗಿತ್ತು. ಕಾರಣ ಅವಳು ಮದುವೆ ಮಾಡಿಕೊಂಡು ಗಂಡನಮನೆಗೆ ಹೋಗುತ್ತಾಳೆಂದು ಆದರೆ ಇಂದಿನ ಆಧುನಿಕ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಗಳನ್ನು

ನೋಡಿದಾಗ ಹೆಣ್ಣು ಮಗಳಿಗೆ ಶಿಕ್ಷಣಕ್ಕಾಗಿ ಹಣ ಖರ್ಚುಮಾಡುವುದು. ಕುಟುಂಬ ಮತ್ತು ಸಮಾಜಗಳು ನಂಬಿರುವಂತೆ ಅಭಿವೃದ್ಧಿಯ ಒಂದು ಭಾಗವೆಂದು ಅಭಿಪ್ರಾಯ ಪಡಲಾಗಿದೆ. ಹೀಗಾಗಿ ಬಾಲಕೀಯರಿಗೆ ಶಿಕ್ಷಣ ನೀಡುವ ಅವಶ್ಯಕತೆಯನ್ನು ಈ ಮುಂದಿನಂತೆ ವಿಶ್ಲೇಷಿಸಲಾಗಿದೆ.

ಕೋಷ್ಠಕ – 5.3.2

ಬಾಲಕಿಯರಿಗೆ ಶಿಕ್ಷಣ ನೀಡುವ ಬಗೆಗಿನ ವಿವರ

ಕ್ರ ಸಂ.	ಧೋರಣೆಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹು ಮುಖ್ಯ	72	60%	76	42%	148	50%
02.	ಮುಖ್ಯವಾಗಿ (ಸ್ವಲ್ಪ)	40	40%	86	48%	134	44%
03.	ಮುಖ್ಯವಲ್ಲ	08	00%	18	10%	16	06%
	ಒಟ್ಟು	**120**	**100%**	**180**	**100%**	**300**	**100%**

ಈ ಮೇಲಿನ ಕೋಷ್ಟಕದಲ್ಲಿ ತಿಳಿಸಿರುವಂತೆ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಹೇಳಿಕೆದಾರರು ತಳೆದಿರುವ ಅಭಿಪ್ರಾಯಗಳಲ್ಲಿ ಶೇ.50 ರಷ್ಟು ಜನ ಹೇಳಿಕೆದಾರರು ಬಹಳ ಮುಖ್ಯವೆಂದು ಹೇಳಿದ್ದಾರೆ. ಹಾಗೇಯೇ ಶೇ.44 ರಷ್ಟು ಜನ ಸ್ವಲ್ಪಮಟ್ಟಿಗೆ ಮುಖ್ಯವೆಂದು ಹೇಳಿದ್ದಾರೆ. ಆದರೆ ಶೇ.6 ರಷ್ಟು ಹೇಳಿಕೆದಾರರು ಋಣಾತ್ಮಕ ಅಭಿಪ್ರಾಯವನ್ನು ನಿಡಿದ್ದಾರೆ. ಅದು ಬಹಳ ಪ್ರಮುಖ ವಾಗಿರುವುದರಿಂದ ಹೆಚ್ಚಿನ ಮಹಿಳೆಯರು ಧನಾತ್ಮಕವಾಗಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಪೂರಕವಾದ ಅಭಿಪ್ರಾಯವನ್ನು ಹೊಂದಿದ್ದಾರೆ.

ಈ ದತ್ತಾಂಶದ ಪ್ರಕಾರ ಸಂಘದ ಪ್ರತಿನಿಧಿಗಳು ಶೇ.60% ರಷ್ಟು ಸಂಘದ ಸದಸ್ಯರಿಗಿಂತ ಅಂದರೇ ಶೇಕಡಾ 42 ರಷ್ಟು ಮಹಿಳಾ ಸದಸ್ಯರು ಶಿಕ್ಷಣದ ಪರವಾಗಿ ಅಭಿಪ್ರಾಯಗಳನ್ನು ತಳೆದಿದ್ದಾರೆ. ಆದರೆ ಶೇಕಡಾ 48 ಸಂಘದ ಸದಸ್ಯರು, ಸಂಘದ ಪ್ರತಿನಿದಿಗಳು ಸರಾಸರಿ ಧೋರಣೆಗಳನ್ನು ತಳೆದಿದ್ದಾರೆ. ಆದರೆ ಶೇ.10 ರಷ್ಟು ಹೇಳಿಕೆದಾರರು ಋಣಾತ್ಮಕವಾದ ಅಭಿಪ್ರಾಯ ವನ್ನು ಹೊಂದಿದ್ದಾರೆ ಇದರಿಂದ ಗ್ರಾಮೀಣ ಸಮಾಜದ ಮಹಿಳೆಯರ ಅಭಿಪ್ರಾಯಗಳು ಬಾಲಕೀಯರಿಗೆ ಶಿಕ್ಷಣಬೇಕೆಂಬುವದರ ಬಗ್ಗೆ ಪ್ರಮುಖವಾದ ಅವರ ಹೇಳಿಕೆಗಳು ಒಟ್ಟಾರೆಯಾಗಿ ಅರ್ಧಕ್ಕಿಂತ ಹೆಚ್ಚಿನ ಸದಸ್ಯರು ಬಾಲಕೀಯರಿಗೆ ಶಿಕ್ಷಣದ ಅವಶ್ಯಕತೆ ಇದೆ ನಮ್ಮ ಆರ್ಥಿಕ ಪರಿಸ್ಥಿತಿಗನುಗುಣವಾಗಿ ಶಿಕ್ಷಣ ನೀಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದಾರೆ. ಈ ವಿಚಾರಗಳು ಶಿಕ್ಷಣದ ಪರವಾಗಿ ಧನಾತ್ಮಕವಾಗಿ ಸಾಗಿವೆಯೆಂದು ಹೇಳಬಹುದಾಗಿದೆ. ಹಾಗೆಯೇ ಬಾಲಕೀಯರಿಗೆ ಹೆಚ್ಚಿನ ಶಿಕ್ಷಣ ನೀಡಬೇಕೆಂದು ಮಹಿಳೆಯರೊಂದಿಗೆ ಮುಂದಿನ ಅಧ್ಯಯನದಲ್ಲಿ ಚರ್ಚಿಸಲಾಗಿದೆ.

ಕೋಷ್ಠಕ – 5.3.3
ಬಾಲಕಿಯರಿಗೆ ಉನ್ನತ ಶಿಕ್ಷಣ ನೀಡುವ ಬಗೆಗಿನ ಅರಿವು

ಕ್ರ ಸಂ.	ತಳೆದಿರುವ ಧೋರಣೆಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಪ್ರಾಥಮಿಕ ಶಾಲೆ	12	10%	54	30%	66	22%
02.	ಮಾಧ್ಯಮಿಕ ಶಾಲೆ	60	50%	72	40%	132	44%
03.	ಪ್ರೌಢ ಶಾಲೆ	36	30%	36	40%	72	24%
04.	ಪದವಿ ಪೂರ್ವ ಕಾಲೇಜು	12	10%	18	10%	30	10%
	ಒಟ್ಟು	**120**	**100%**	**180**	**100%**	**300**	**100%**

ಹಿಂದಿನ ಅಧ್ಯಯನದಲ್ಲಿ ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಧನಾತ್ಮಕವಾದ ಧೋರಣೆಗಳನ್ನು ತಳೆದಿದ್ದಾರೆಂದು ನೋಡಿದ್ದೇವೆ. ಅದಾದ ನಂತರ ಗ್ರಾಮೀಣ ಸಮುದಾಯದ ಹೆಣ್ಣು ಮಕ್ಕಳಿಗೆ ಗರಿಷ್ಠ ಮಟ್ಟದ ಶಿಕ್ಷಣ ನೀಡುವ ಕುರಿತು ಪುನ: ಕೇಳಿದಾಗ ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಣವು ಬಹುಮುಖ್ಯವಾದ ಅಂಶವಾಗಿದ್ದು ಮಹತ್ವದ ಪಾತ್ರವನ್ನು ನಿರ್ವಹಣೆ ಮಾಡುತ್ತದೆ. ಆದರೆ ಗುಣಮಟ್ಟದ ಶಿಕ್ಷಣವನ್ನು ಗ್ರಾಮೀಣ ಬಾಲಕೀಯರಿಗೆ ನೀಡುವುದು. ಗ್ರಾಮೀಣ ಸಮಾಜವನ್ನು ಅವಲಂಬಿಸಿದೆ. ಕಾರಣವೇನೆಂದರೆ ಗ್ರಾಮೀಣ ಸಮಾಜದಲ್ಲಿ ಶಿಕ್ಷಣವು ಎಲ್ಲ ಕಾಲದಲ್ಲಿಯೂ ಯಾವಾಗಲೂ ಪುರುಷರಿಗೆ ಪೂರಕವಾಗಿ ಮತ್ತು ಮಹಿಳೆಯರಿಗೆ ಒಂದು ಸೀಮಿತ ಪರಧಿಯೋಳಗಡೆ ಇರುವುದರಿಂದ ಗ್ರಾಮೀಣ ಬಾಲಕೀಯರಿಗೆ ಕಡ್ಡಾಯ ಶಿಕ್ಷಣ ನೀಡಬೇಕೆಂದು ಗ್ರಾಮೀಣ ಜನರ ಮನಸ್ಸಿನಲ್ಲಿ ಬರಬೇಕಾಗಿದೆ.

ಈ ಮೇಲಿನ ಕೋಷ್ಟಕದಲ್ಲಿ ನೀಡಿರುವ ವಿವರಣೆಯಂತೆ ಶೇ.22 ರಷ್ಟು ಮಹಿಳೆಯರು ಬಾಲಕೀಯರಿಗೆ ಪ್ರಾಥಮಿಕ ಶಾಲೆಯವರೆಗೆ ಶಿಕ್ಷಣ ಒದಗಿಸಿದರೆ ಸಾಕು ಎಂಬ ಅಭಿಪ್ರಾಯವನ್ನು ಹೊಂದಿದ್ದಾರೆ ಹಾಗೂ ಶೇ.44 ರಷ್ಟು ಮಹಿಳೆಯರು ಹೆಣ್ಣು ಮಕ್ಕಳಿಗೆ ಮಾಧ್ಯಮಿಕ ಹಂತದವರೆಗೆ ಶಿಕ್ಷಣ ನೀಡುವುದು ಸಾಕು ಎಂದಿದ್ದಾರೆ. ಇದಕ್ಕೆ ಮುಖ್ಯಕಾರಣವೇನೆಂದರೆ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇಲ್ಲ. ಎಷ್ಟು ಓದಿದರೂ ಮುಸುರೆ ತಿಕ್ಕುವುದು ತಪ್ಪಲ್ಲ ತುಂಬಾ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಹೊಂದಾಣಿಕೆಯ ಸಮಸ್ಯೆ, ವಿಶೇಷವಾಗಿ ಗಂಡನ ಮನೆಯಲ್ಲಿ ಗಂಡ ಮತ್ತು ಆತನ ಕುಟುಂಬದ ಸದಸ್ಯರ ಜೊತೆಗೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿ ಕಷ್ಟವಾಗುತ್ತದೆ. ಆದ್ದರಿಂದ ಮಾಧ್ಯಮಿಕ ಶಿಕ್ಷಣ ಹೆಣ್ಣು ಮಕ್ಕಳಿಗೆ ಸಾಕು ಎಂದಿದ್ದಾರೆ.

ಗ್ರಾಮೀಣ ಮಹಿಳೆಯರ ಅಭಿಪ್ರಾಯದ ಪ್ರಕಾರ ಮಾಧ್ಯಮಿಕ ಶಿಕ್ಷಣದಿಂದ ಹೆಣ್ಣು ಮಕ್ಕಳು ಸಬಲರಾಗಬೇಕು. ಎಷ್ಟರ ಮಟ್ಟಿಗೆ ಎಂದರೆ ಅವರವರ ಮನೆ ವಾರ್ತೆಗಳನ್ನು ನೋಡಿಕೊಳ್ಳಲು

ಮನೆಯ ಎಲ್ಲ ಕೆಲಸಗಳನ್ನು ತಾವಾಗಿ ಮಾಡುವುದು ಹಾಗೂ ಸ್ಥಳೀಯ ವಾರ್ತಾಪತ್ರಿಕೆ ಓದುವುದು. ಸಲ್ಪ ಪ್ರಮಾಣದಲ್ಲಿ ಪತ್ರಗಳನ್ನು ಬರೆಯುವುದು, ಬಂದಂತಹ ಪತ್ರಗಳನ್ನು ಓದುವುದು. ಹೆಚ್ಚಿನ ನಿರ್ದಾರಗಳಲ್ಲಿ ತಲೆಹಾಕದಿರುವುದು. ಹೀಗಾಗಿ ಸರಾಸರಿ ಮಾಧ್ಯಮಿಕ ಶಿಕ್ಷಣದಿಂದ ಸಾಧ್ಯವೆಂದು ಹೇಳಿದರು. ಮಾಧ್ಯಮಿಕ ಶಿಕ್ಷಣವು ಮಹಿಳೆಯರನ್ನು ಸರಾಸರಿ ಸಬಲರನ್ನಾಗಿ ಮಾಡುತ್ತದೆ. ಇದು ಸ್ವಯಂ ಉದ್ಯೋಗಕ್ಕೆ ಸಹಾಯ ಮಾಡುತ್ತದೆ. ಆದರೆ ಈ ಶಿಕ್ಷಣದ ಮಟ್ಟವನ್ನು ಪ್ರಯೋಗಿಕವಾಗಿ ಯೋಚನೆ ಮಾಡಲಿಕ್ಕಾಗದು, ಮಹಿಳೆಯರ ವಿರುದ್ಧ ಅಗುತ್ತಿರುವ ಅತ್ಯಾಚಾರ, ಅನ್ಯಾಯ, ದೌರ್ಜನ್ಯದ ವಿರುದ್ಧ ಹೋರಾಡಲಿಕ್ಕೆ ಸಾಧ್ಯವಾಗದು.

ಶೇ.22 ರಷ್ಟು ಹೇಳಿಕೆದಾರರು ಪ್ರಾಥಮಿಕ ಶಿಕ್ಷಣ ಸಾಕೆಂದು ಹೇಳುದ್ದಾಳೆ ಹಾಗೂ ಶೇ.24 ರಷ್ಟು ಪ್ರೌಢಶಾಲೆಯವರೆಗೆ ಶಿಕ್ಷಣ ಸಾಕೆಂದು ಹೇಳಿದ್ದಾರೆ. ಇದರ ಅರ್ಥವೇನೆಂದರೆ ಗ್ರಾಮೀಣ ಪ್ರದೇಶದಲ್ಲಿ ಬಡವರ್ಗ ಮತ್ತು ಶ್ರೀಮಂತರು ಎಂಬ ಎರಡು ವರ್ಗಗಳಿರುವುದು ಸ್ಪಷ್ಟವಾಗಿದೆ. ಅವರು ತಮ್ಮ ಆರ್ಥಿಕಪರಿಸ್ಥಿತಿಗನುಗುಣವಾಗಿ ಮಕ್ಕಳಿಗೆ ಶಿಕ್ಷಣ ನೀಡುತ್ತಾರೆ. ಇದು ಹೀಗೂ ಅರ್ಥೈಸುತ್ತದೆ. ಗ್ರಾಮೀಣ ಮಹಿಳೇಯರು ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತುಕೊಂಡಿಲ್ಲವೆಂದು ಚಿತ್ರಣವನ್ನು ನೀಡುತ್ತದೆ. ಒಬ್ಬೊಬ್ಬರ ಹೇಳಿಕೆಯ ಪ್ರಕಾರ ಹೀಗೂ ಹೇಳಿಬಹುದು. ಸಧ್ಯದ ಔಪಚಾರಿಕ ಶಿಕ್ಷಣ ವ್ಯವಸ್ಥೆಯು ಗ್ರಾಮೀಣ ಜನರಿಗೆ ಹೋಂದಾಣಿಕೆ ಆಗುವುದಿಲ್ಲ ಎಂದು ಹೇಳಬಹುದು.

ಈ ದತ್ತಾಂಶದ ಪ್ರಕಾರ ಸಂಘದ ಪ್ರತಿನಿಧಿಗಳು ಶೇ.10 ಕ್ಕಿಂತ ಸಂಘದ ಸದಸ್ಯರು ಶೆ.30 ರಷ್ಟು ಜನರು ಪ್ರಾಥಮಿಕ ಹಂತದವರೆಗೆ ಶಿಕ್ಷಣ ಕೂಡಬಹುದು ಎಂದು ಹೇಳುತ್ತಾರೆ. ಆದರೆ ಸಂಘದ ಪ್ರತಿನಿಧಿಗಳ ಅಭಿಪ್ರಾಯವೇನೆಂದರೆ ಶೇ.50 ರಷ್ಟು ಮಾಧ್ಯಮಿಕ ಹಂತದವರೆಗೆ ಶಿಕ್ಷಣ ವನ್ನು ಕೊಡಿಸಬೇಕೆಂದು ಹೇಳುತ್ತಾರೆ. ಶೇ.40 ರಷ್ಟು ಹೇಳಿಕೆದಾರರು ಪ್ರೌಢ ಶಿಕ್ಷಣ ಅಂದರೆ ಹೈಸ್ಕೂಲ ವರೆಗೆ ವಿದ್ಯಾಬ್ಯಾಸ ಕೊಡಬೇಕೆನ್ನುತ್ತಾರೆ.

ಆಸಕ್ತಿದಾಯಕ ವಿಷಯವೆನೆಂದರೆ, ಶೇ.10 ರಷ್ಟು ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರು ಹೆಣ್ಣು ಮಕ್ಕಳು ಕಾಲೇಜಿನ ಪದವಿ ಪೂರ್ವ ಶಿಕ್ಷಣವದರೆಗೆ ಓದಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಒಟ್ಟಾರೆಯಾಗಿ ಬಾಲಕೀಯರಿಗೆ ಹೆಚ್ಚಿನ ಶಿಕ್ಷಣ ಕೊಡಿಸಬೇಕೇ ಎನ್ನುವ ವಿಷಯ ಕುರಿತಂತೆ ಗ್ರಾಮೀಣ ಮಹಿಳೆಯರನ್ನು ಸಂಶೋಧನೆಗೆ ಒಳಪಡಿಸಿದಾಗ ಸರಾಸರಿ ಆದಂತಹ ಒಂದು ನಿಗದಿತ ಹಂತದವರೆಗೆ ಶಿಕ್ಷಣವನ್ನು ನೀಡಬೇಕೆಂದು ಹೇಳಿದ್ದಾರೆ. ಪ್ರಾಥಮಿಕ ಹಂತ, ಮಾಧ್ಯಮಿಕ ಹಂತ, ಪ್ರೌಢಶಾಲೆಯ ಹಂತದವರೆಗೆ ಬಾಲಕಿಯರಿಗೆ ಶಿಕ್ಷಣ ಸಾಕು ಎಂದು ಹೇಳಿದ್ದಾರೆ.

ಈ ಮೇಲಿನ ಎಲ್ಲ ವಿಷಯಗಳನ್ನು ಪರಿಶೀಲಿಸಿದಾಗ ಬಾಲಕಿಯರ ಶಿಕ್ಷಣದ ಬಗ್ಗೆ ಗ್ರಾಮೀಣ ಮಹಿಳೆಯರಲ್ಲಿ ಹೆಚ್ಚುತ್ತಿರುವ ನೀರಿಕ್ಷೆ ಮತ್ತು ಕಾಳಜಿಯನ್ನು ಸೂಚಿಸುತ್ತದೆ. ಪರೋಕ್ಷವಾಗಿ ಗ್ರಾಮೀಣ ಮಹಿಳೆಯರು ಬಾಲಕಿಯರ ಶಿಕ್ಷಣದ ಸಬಲತೆಯಲ್ಲಿ ಆಸಕ್ತಿ ತೋರಿಸುತ್ತಿದ್ದಾರೆ ಎನ್ನುವುದು ಸ್ಪಷ್ಟವಾಗುತ್ತದೆ.

ಶಿಕ್ಷಣದ ಗುರಿ ಉದ್ದೇಶಗಳ ಬಗ್ಗೆ ಹೇಳಿಕೆದಾರರು ಹೊಂದಿರುವ ಅಭಿಪ್ರಾಯಗಳು:

ಗ್ರಾಮೀಣ ಮಹಿಳೆಯರ ಶಿಕ್ಷಣದ ಸಬಲಿಕರಣಕ್ಕೂ ಮತ್ತು ಶಿಕ್ಷಣದ ಗುರಿ ಉದ್ದೇಶಗಳಿಗೂ ಪರಸ್ಪರ ಸಂಬಂಧವಿದೆ. ಶಿಕ್ಷಣದ ಬಗ್ಗೆ ಗುರಿ ಉದ್ದೇಶ, ಹೇಗಿದೆಯೊ ಅದೇ ತರಹ ಹೆಣ್ಣು ಮಕ್ಕಳಿಗೂ ಸಬಲೀಕರಣದ ಅವಶ್ಯಕತೆಯಿದೆಯೆಂದು ಹೇಳಿಕೆದಾರರು ಅಭಿಪ್ರಾಯ ಪಟ್ಟಿರುತ್ತಾರೆ. ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಿ ಎಲ್ಲ ರೀತಿಯಿಂದಲೂ ಸಬಲರನ್ನಾಗಿ ಮಾಡಬೇಕೆಂಬ. ಉದ್ದೇಶವಿರಲಿಲ್ಲ "1988 ರಲ್ಲಿ ಚೌಧರಿಯವರು ಹೇಳಿರುವಂತೆ ಹೆಣ್ಣು ಮಕ್ಕಳೀಗೆ ಆರ್ಥಿಕ, ಸಾಮಾಜಿಕ, ರಾಜಕೀಯ ಮಟ್ಟದಲ್ಲಿ ಶಿಕ್ಷಣ ಕೊಡುವ ಉದ್ದೇಶವಿರಲಿಲ್ಲ. ಆದರೆ ಅವರಿಗೆ ತನ್ನ ಸಾಂಪ್ರದಾಯಕವಾಗಿ ಬಂದಿರುವ ಪಾತ್ರಗಳಾದ ಹೆಂಡತಿ, ಮನೆ ಒಡತಿ, ಸೊಸೆ, ಅತ್ತೆ, ನಾದಿನಿ, ಅತ್ತಿಗೆ , ಹೀಗೆ ನಾನಾ ರೂಪದ ಅವಳು ತನ್ನ ಪಾತ್ರಗಳನ್ನು ಪರಿಪೂರ್ಣವಾಗಿ ಜವಾಬ್ದಾರಿಯಿಂದ ನಿರ್ವಹಿಸಬೇಕಾದಂತಹ ಸಮರ್ಥ ಶಿಕ್ಷಣ ಒದಗಿಸಿದರೆ ಸಾಕು ಎನ್ನುವ ಮನೋಭಾವನೆ ಇತ್ತು".

ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವ ಉದ್ದೇಶ ಅವರ ಕುಟುಂಬದಲ್ಲಿಯೆ ಅಂದರೆ ನಾಲ್ಕು ಗೋಡೆಗಳ ಮಧ್ಯಲ್ಲಿಯೇ ಅವರ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುವುದು ಹೊರತಾಗಿ ಹೊರಗಡೆ ಸಾಮಾಜಿಕ ರಂಗದಲ್ಲಿ ಅವಳಿಗೆ ಯಾವುದೇ ರೀತಿಯ ಅವಕಾಶಗಳನ್ನು ನೀಡುತ್ತಿರಲಿಲ್ಲ ಕಾರಣ ಅವಳನ್ನು ಹೊರಗಡೆ ತೀರಗಬಾರದು ಎಂಬ ನೀತಿ ಪಾಠಗಳೊಂದಿಗೆ ಬಂಧಿಸಲಾಗಿದೆ. ಉದಾ: ಬಾವಿಯಲ್ಲಿ ವಾಸವಾಗಿರುವ ಕಪ್ಪೆ ತನ್ನ ಸೀಮಿತ ಜ್ಞಾನದಿಂದ ಬಾವಿಯ ನೀರನ್ನೇ ಸಮುದ್ರವೆಂದು ತಿಳಿದಿರುತ್ತದೆ. ಹೊರಗಡೆ ದೊಡ್ಡದಾದ ಸಮುದ್ರವಿದೆ ಎಂದು ಅದಕ್ಕೆ ಗೊತ್ತಿಲ್ಲ. ಹಾಗೆಯೇ ನಮ್ಮ ಹೆಣ್ಣು ಮಕ್ಕಳಿಗೆ ಮನೆಯೇ ಸರ್ವಸ್ವ ಎಂಬ ಮಾತನ್ನು ಪದೇ-ಪದೇ ಆಕೆಗೆ ಹೇಳಿ ಒಪ್ಪಿಸಿರುವುದರಿಂದ ಹೊಸ ವಿಚಾರಗಳು ಆಕೆಯ ತಲೆಯಲ್ಲಿ ಸುಳಿಯದಂತೆ ವ್ಯವಸ್ಥೆ ನೋಡಿಕೊಂಡಿದೆ. ಆದರೂ ಮಹಿಳೆಯರಿಗೆ ಶಿಕ್ಷಣ ಯಾಕೆ ಕೊಡಬೇಕು ಎನ್ನುವ ವಿಷಯವನ್ನು ಮುಂದಿನ ಅಧ್ಯಾಯನದಲ್ಲಿ ಚರ್ಚಿಸಲಾಗಿದೆ.

ಮಹಿಳಾ ಸಬಲೀಕರಣಕ್ಕೆ ಶಿಕ್ಷಣ ಒಂದು ದಾರಿಯಾಗಿದೆ:

ಮಹಿಳಾ ಸಬಲೀಕರಣಕ್ಕೆ ಹಲವಾರು ಮಾರ್ಗಗಳು ಇದ್ದು, ಅದರಲ್ಲಿಯೂ ಶಿಕ್ಷಣವು ಬಹು ಮುಖ್ಯವಾದ ಮಾರ್ಗವಾಗಿದೆಯೆಂದು ಹೇಳಬಹುದಾಗಿದೆ. ಕೆಳೆದ ಮೂರು

ದಶಕಗಳಿಂದಲೂ ಭಾರತ ಸರಕಾರವು ಮಹಿಳೆಯರಿಗೆ ಶಿಕ್ಷಣ ನೀಡುವುದು ಕಡ್ಡಾಯವೆಂದು ಘೋಷಿಸಿ ಅವರಲ್ಲಿ ಮೂರು ಮುಖ್ಯ ಕೌಶಲ್ಯಗಳಲ್ಲಿ ಬೆಳವಣಿಗೆಯಾಗಬೇಕಾಗಿದೆ. ಅವು ಈ ಕೆಳಗಿನಂತಿವೆ.

1. ಹಣಕಾಸಿನ ನಿರ್ವಹಣೆ
2. ಮನೆ ವಾರ್ತೆಗಳ ನಿರ್ವಹಣೆ
3. ಸ್ವಯಂ ಉದ್ಯೋಗ ಪಡೆಯುವಲ್ಲಿ ಪ್ರಯತ್ನ.

1951 ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಮಾಧ್ಯಮಿಕ ಶಿಕ್ಷಣ ಆಯೋಗ 1954 ತನ್ನ ವರದಿಯಲ್ಲಿ ತಿಳಿಸಿರುವಂತೆ ಪಠ್ಯಕ್ರಮದಲ್ಲಿ ಹೆಣ್ಣು ಗಂಡಿನ ನಡುವೆ ತಾರತಮ್ಯ ಮಾಡಬಾರದು ಎನ್ನುವ ವಿಷಯ ಕುರಿತು ತಿಳಿಸಿದೆ.

ಹಾಗೇ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಯ ಇದೆ ಎನ್ನವುದನ್ನು ಅರ್ಥ ಮಾಡಿಕೊಂಡು ಕಡ್ಡಾಯ ಶಿಕ್ಷಣ ನೀಡಬೇಕೆಂದು ತಿಳಿಸಿದೆ. ಭಾರತ ಸರ್ಕಾರದ ರಾಷ್ಟ್ರೀಯ ಶಿಕ್ಷಣ ನೀತಿ 1967ರಲ್ಲಿ ಹೇಳಿದ ಪ್ರಕಾರ "ಒಳ್ಳೆಯ ಶಿಕ್ಷಣ ವ್ಯವಸ್ಥೆಯು ಯುವಪೀಳಿಗೆಯಲ್ಲಿ ಶಿಸ್ತು, ಸಂಯಮ, ಬದ್ಧತೆ, ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ರಾಷ್ಟ್ರೀಯ ಸೇವೆ ಅಭಿವೃದ್ಧಿ ಐಕ್ಯತೆಯ ಮನೋಭಾವನೆ ನಾಗರಿಕತೆ ಸಂಸ್ಕೃತಿ ಮತ್ತು ರಾಷ್ಟ್ರೀಯ ಭಾವಕ್ಯತೆಯನ್ನು ಬಲಪಡಿಸುವ ಒಳ್ಳೆಯ ಗುಣಮಟ್ಟದ ಶಿಕ್ಷಣ ವ್ಯವಸ್ಥೆ ನಮಗೆ ಬೇಕಾಗಿದೆ ಎಂದು ತಿಳಿಸಲಾಗಿದೆ".

ಮಹಿಳಾ ಶಿಕ್ಷಣದ ಗುರಿ– ಉದ್ದೇಶಗಳು ಈ ಕೆಳಗಿನಂತಿವೆ.

1. ಶಿಕ್ಷಣ ಇದು ಸ್ಥಾನಮಾನದ ಸಂಕೇತವಾಗಿದೆಯೇ.
2. ಶಿಕ್ಷಣವು ಓದುವ–ಬರೆಯುವ ಮತ್ತು ಎಣಿಸುವ ಸಾಮರ್ಥ್ಯವನ್ನು ಕಲ್ಪಿಸಿ ಕೊಡುತ್ತದೆಯೇ?
3. ಶಿಕ್ಷಣವು ಮನೆವಾರ್ತೆಗಳಿಗೆ ಮೂಲಧಾರವಾಗಿದೆಯೆ?
4. ಶಿಕ್ಷಣವು ಸ್ವಯಂ ಉದ್ಯೋಗಕ್ಕೆ ದಾರಿಯಾಗಿದಯೇ?

ಮೇಲಿನ ವಿಷಯಗಳ ವಿಶ್ಲೇಷಣೆಯ ವಿವರಣೆ ಈ ಕೆಳಗಿನಂತಿವೆ.

ಶಿಕ್ಷಣವು ಸ್ಥಾನಮಾನದ ಸಂಕೇತವಾಗಿದೆ:

ಸಾಂಪ್ರಾದಾಯಿಕ ಭಾರತೀಯ ಸಮಾಜದ ಆಧುನೀಕರಣ ಪ್ರಕ್ರಿಯೆಯಲ್ಲಿ ಶಿಕ್ಷಣವು ಒಂದು ಬಹು ಮುಖ್ಯವಾದ ಸಾಧನಾ ಮಾರ್ಗವಾಗಿದೆ ಹಾಗೂ ಶಿಕ್ಷಣವು ವ್ಯಕ್ತಿಗಳ ಸ್ಥಾನಮಾನಗಳನ್ನು ನಿರ್ಧರಿಸುವ ಒಂದು ಸಂಕೇತವಾಗಿದೆ. ನಗರ ಸಮುದಾಯದಲ್ಲಿ ಪುರುಷರು ಮತ್ತು ಮಹಿಳೆಯರು ಅದರಲ್ಲಿಯೂ ಮೇಲುವರ್ಗದವರು ಹೆಚ್ಚಿನ ಶಿಕ್ಷಣವನ್ನು ಪಡೆದು ಪದವಿ ಗಳಿಸಿದ್ದರೆ

ಸ್ಥಾನಮಾನದ ಸಂಕೇತವೆಂದು ಪರಿಗಣಿಸಿದ್ದಾರೆ. ಹೆಣ್ಣುಮಕ್ಕಳ ವಿಷಯದಲ್ಲಿ ಸ್ಥಾನಮಾನವನ್ನು ನೋಡುವಂತಹದ್ದು ಬಹಳಷ್ಟು ಇದೆ. ಯಾರು ಶಿಕ್ಷಣವನ್ನು ಪಡೆಯುತ್ತಾರೂ ಅವರಿಗೆ ಸಮಾಜದ ಆಗು ಹೋಗುಗಳ ಅರಿವು ಸಹಜವಾಗಿಯೇ ಬರುತ್ತದೆ ಶಿಕ್ಷಣವು ವಿವಾಹದ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯವಾಗುತ್ತದೆ ಹಾಗೂ ವರನ ನೀರಿಕ್ಷೆಯ ಪ್ರಕಾರ ಓದಿದ ಹೆಣ್ಣು ಸಿಗಬೇಕೆಂಬ ಉದ್ದೇಶವು ಈಡೇರುತ್ತದೆ. ಹೀಗಾಗಿ ಮಹಿಳೆಯರನ್ನು ಕುರಿತು ಶಿಕ್ಷಣವು ಹೆಣ್ಣು ಮಕ್ಕಳಿಗೆ ನೀಡುವುದರಿಂದ ಅದು ಅವರ ಸ್ಥಾನಮಾನದ ಸಂಕೇತವೆ ಎನ್ನುವ ವಿಷಯ ಮಹಿಳೆಯ ರೊಂದಿಗೆ ಚರ್ಚಿಸಿ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ – 5.3.4

ಶಿಕ್ಷಣ ಸ್ಥಾನಮಾನದ ಸಂಕೇತವಾಗಿದೆಯೆ ಎಂಬುವುದರ ಬಗೆಗಿರುವ ವಿವರ

ಕ್ರ ಸಂ.	ಹೇಳಿಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂ.	ಶೇ.	ಸಂ.	ಶೇ.	ಸಂ.	ಶೇ.
01.	ಶಿಕ್ಷಣ ಸ್ಥಾನಮಾನಕ್ಕೆ ಮಾತ್ರ ಸಂಕೇ	72	60%	126	70%	198	66%
02.	ಸ್ಥಾನಮಾನಗಳಿಗೆ ಸಂಕೇತವಾಗಿರಬಹುದೇ	24	20%	54	30%	78	26%
03.	ಸಾಮಾನ್ಯಕ್ಕಿಂತ ಹೆಚ್ಚಿನ ಸಂಕೇತವಾಗಿದೆ.	24	20%	--	--	24	08%
	ಒಟ್ಟು	**120**	**100%**	**180**	**100%**	**300**	**100%**

ಈ ಮೇಲಿನ ಕೋಷ್ಟಕದಲ್ಲಿಯ ದತ್ತಾಂಶಗಳ ಪ್ರಕಾರ ತಿಳಿದುಬರುವುದೇನೆಂದರೆ, ಶಿಕ್ಷಣವು ಸ್ಥಾನಮಾನದ ಸಂಕೇತವಾಗಿದೆಯೇ ಎಂದು ಪ್ರಶ್ನೇಸಿದಾಗ ಹೇಳಿಕೆದಾರರಲ್ಲಿ ಶೇ.66 ರಷ್ಟು ಜನ ಶಿಕ್ಷಣವೆನ್ನುವುದು ಕೇವಲ ಸ್ಥಾನಮಾನಕ್ಕೆ ಸಂಬಂಧಿಸಿದ ಸಂಕೇತವಾಗಿದೆಯೆಂದು ನಂಬಿದ್ದಾರೆ ಹಾಗೂ ಶೇ.26 ರಷ್ಟು ಸದಸ್ಯರು ಶಿಕ್ಷಣವೆನ್ನುವುದು ಸ್ಥಾನಮಾನಕ್ಕೆ ಸಂಬಂಧಿಸಿದಂತೆ ಸಂಕೇತವಾಗಿರ ಬಹುದೆಂದು ಅಭಿಪ್ರಾಯಪಟ್ಟಿದ್ದಾರೆ. ಹಾಗೂ ಶೇ.8 ರಷ್ಟು ಸದಸ್ಯರ ಅಭಿಪ್ರಾಯವೆನೆಂದರೆ ಶಿಕ್ಷಣವು ಸ್ಥಾನ ಮಾನಕ್ಕಿಂತ ಹೆಚ್ಚಿನದಾಗಿದೆ ಅಥವಾ ಹಿರಿದಾಗಿದೆಯೆಂದು ಅಭಿಪ್ರಾಯಪಟ್ಟಿದ್ದಾರೆ. ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರು ಪ್ರತಿಕ್ರಿಯಿಸಿದ್ದಂತೆ ಮೇಲಿನವರ ಅಭಿಪ್ರಾಯಗಳಿಗೆ ಹೋಲಿಸಿದಾಗ ಅಂಥ ವ್ಯತ್ಯಾಸವೇನು ಕಾಣಿಸಲಿಲ್ಲವೆಂದು ಹೇಳಿದ್ದಾರೆ. ಆದರೆ ಶೇ.24 ರಷ್ಟು ಸಂಘದ ಪ್ರತಿನಿಧಿಗಳ ಅಭಿಪ್ರಾಯದಂತೆ ಶಿಕ್ಷಣವೆನ್ನುವುದು ಕೇವಲ ಸ್ಥಾನಮಾನಕ್ಕೆ ಸಂಬಂಧಿಸದೆ ಅದರ ವ್ಯಾಪ್ತಿ ಹೆಚ್ಚಿದೆ ಎಂದಿದ್ದಾರೆ. ಇದನ್ನು ಹೀಗೂ ಹೇಳಬಹುದು, ಗ್ರಾಮೀಣ ಮಹಿಳೆಯರ ಚರ್ಚೆಗಳನ್ನು ಗಮನಿಸಿದಾಗ ಶಿಕ್ಷಣವು ಕೇವಲ ಸ್ಥಾನಮಾನಕ್ಕೆ ಸಂಬಂಧಿಸಿದ ಸಂಕೇತವಾಗಿದೆಯೆಂದು ಪರಿಗಣಿಸಿದ್ದಾರೆ. ಈ ಅಭಿಪ್ರಾಯ ಸರಿಯೆಂದು ಹೇಳಬಹುದಾದರು ಇದು ಸಬಲೀಕರಣ ಪ್ರಕ್ರಿಯೆಯ ಸರಿಯಾದ ಗುರುತು ಅಲ್ಲವೆಂದಿದ್ದಾರೆ.

ಶಿಕ್ಷಣವು ಓದು–ಬರಹದ ಸಾಧನ:

ಸಾಮಾನ್ಯವಾಗಿ ಶಿಕ್ಷಣವು ಕಲಿಯುವವರಿಗೆ ಓದುವ ಮತ್ತು ಬರೆಯುವ ಅಂಕಿ ಸಂಖ್ಯೆಗಳನ್ನು ಎಣಿಸುವ ಸಾಮರ್ಥ್ಯವನ್ನು ಒದಗಿಸುತ್ತದೆ. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಯಿಂದ ಶಿಕ್ಷಣ ಪಡೆದ ಮಕ್ಕಳಲ್ಲಿ ಬರೆಯುವ ಓದುವ ಮತ್ತು ಎಣಿಕೆಮಾಡುವಂತಹ ಕೌಶಲ್ಯಗಳು ಬೆಳೆದಿರುತ್ತವೆ. ಈ ಮಕ್ಕಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಪಡೆದನಂತರ ಮತ್ತೆ ಅವರಿಗೆ ಪುಸ್ತಕಗಳ ಜೊತೆ ಸಂಪರ್ಕವಿರುವುದಿಲ್ಲ. ಅದರಿಂದ ಹಿಂದೆ ಓದಿರುವುದೆಲ್ಲವು ನೆನಪಲ್ಲಿ ಇರುವುದಿಲ್ಲ. ಅಂದರೆ ಜ್ಞಾಪಕಕ್ಕೆ ಬರುವುದಿಲ್ಲ ಇದು ಬಾಲಕರಿಗಿಂತ ಬಾಲಕಿಯರ ವಿಷಯದಲ್ಲಿ ಹೆಚ್ಚಾಗುತ್ತದೆ ಎಂದು ನಂಬಲಾಗಿದೆ. ಕಾರಣ ಬಾಲಕಿಗೆ 10–ವರ್ಷ ತುಂಬುವುದರೊಳಗಾಗಿಯೇ ತಾಯಿಗೆ ಸಹಾಯಕಳಾಗಿ ಮನೆಕೆಲಸಗಳನ್ನು ಮಾಡಬೇಕಾಗಿ ಇರುವುದರಿಂದ ಹಾಗೆ ಮಾಡುವಂತೆ ಒತ್ತಾಯವಿರುವುದರಿಂದ ಸಹಜವಾಗಿಯೇ ಶಿಕ್ಷಣದ ವಿಚಾರಗಳು ತಲೆಗೆ ಹೋಗುವುದಿಲ್ಲ.

ಹೀಗಾಗಿ ಸಾಕ್ಷರತೆಯೆಂದರೆ – ಓದು ಬರಹ ಶಿಕ್ಷಣವೆಂದರೆ ಎಲ್ಲ ರೀತಿಯ ವ್ಯವಹಾರ ಜ್ಞಾನ ಸಹಜವಾಗಿ ಇವೆಲ್ಲವನ್ನು ಸೇರಿಸಿಯೇ ಶಿಕ್ಷಣವೆನ್ನುತ್ತೇವೆ. ಆದ್ದರಿಂದ ಶಿಕ್ಷಣವೆಂದರೆ ಓದು–ಬರಹ, ಅಂಕಿ–ಸಂಖ್ಯೆಗಳ ಎಣಿಕೆಯೇ ಎಂಬುದಾಗಿ ಮಹಿಳೆಯರೊಂದಿಗೆ ಚರ್ಚಿಸಿ ಬಂದಂತಹ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ – 5.3.5

ಶಿಕ್ಷಣವೆಂದರೆ ಒದುವುದು, ಬರೆಯುವುದು ಮತ್ತು ಎಣಿಕೆ ಮಾಡುವುದು ಹೌದಾ?

ಕ್ರ. ಸಂ.	ಹೇಳಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂ.	ಶೇ.	ಸಂಖ್ಯೆ	ಶೇ.
01.	ಸಂಪೂರ್ಣ ಒಪ್ಪಿದ್ದೇವೆ	36	30%	36	20%	72	24%
02.	ಸ್ವಲ್ಪ ಒಪ್ಪಿದ್ದೇವೆ	60	50%	63	35%	123	81%
03.	ಒಪ್ಪಿಗೆಯಿಲ್ಲ (ಗೊತ್ತಿಲ್ಲ)	24	20%	81	45%	105	35%
	ಒಟ್ಟು	**120**	**100%**	**180**	**100%**	**300**	**100%**

ಈ ಮೇಲಿನ ಕೋಷ್ಟಕದಲ್ಲಿಯ ವಿರವರಣೆಯಂತೆ ಈ ಮೇಲಿನ ಪ್ರಶ್ನೆಗೆ ಬಂದಂತಹ ಪ್ರತಿಕ್ರಿಯೆಗಳು ಈ ರೀತಿಯಾಗಿವೆ. ಶೇ.24 ರಷ್ಟು ಹೇಳಿಕೆದಾರರು ಪೂರ್ತಿಯಾಗಿ ಒಪ್ಪಿದ್ದೆವೆ ಎಂದು ತಿಳಿಸಿದ್ದಾರೆ. ಇದರರ್ಥವೇನೆಂದರೆ ಶಿಕ್ಷಣವೇಂದರೆ ಓದುವ ಬರೆಯುವ ಕೌಶಲ್ಯವನ್ನು ಬೆಳಸಿಕೊಳ್ಳುವುದು ಎಂದಾಗುತ್ತದೆ. ಗ್ರಾಮೀಣ ಭಾಗದಲ್ಲಿ ನಡೆಯುವ ಪ್ರಾಥಮಿಕ ಶಾಲೆಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲ. ಉದಾ: ಮಕ್ಕಳ ಬುದ್ಧಿ ಮಟ್ಟಕ್ಕೆ ಅನುಗುಣವಾಗಿ ಜ್ಞಾನಾರ್ಜನೆ ಸಿಗುವುದಿಲ್ಲ. ಪ್ರಾಥಮಿಕ ಶಾಲೆಗಳು ಸುಮ್ಮನೆ ಕಾಲಕಳೆಯುವ ಕೇಂದ್ರಗಳಾಗಿವೆ.

ಆದ್ದರಿಂದ ಗ್ರಾಮೀಣ ಪ್ರದೇಶಗಳ ಶಾಲೆಗಳು ದುಸ್ಥಿತಿಯಲ್ಲಿವೆ. ಅದಕ್ಕೆ ಸರಿಯಾಗಿ ಶಿಕ್ಷಕರು ಆಸಕ್ತಿ ವಹಿಸಿ ಪಾಠ ಮಾಡುವುದಿಲ್ಲ. ಬಡತನದಿಂದಾಗಿ ಮಕ್ಕಳು ಶಿಕ್ಷಣ ಕಲಿಯದೆ ಕೂಲಿ ಕೆಲಸಕ್ಕೆ, ಜೀತಕ್ಕೆ ನಿಂತು ಬೀಡುತ್ತಾರೆ. ಹೀಗಾಗಿ ಶಾಲೆಯಲ್ಲಿ ಮಕ್ಕಳ ಹಾಜರಾತಿ ಕಡಿಮೆ ಇರುತ್ತದೆ. ಮಕ್ಕಳ ಗೈರು ಹಾಜರಿಯ ಬಗ್ಗೆ ಶಿಕ್ಷಕರಾಗಲಿ, ಪಾಲಕರಾಗಲಿ, ಲಕ್ಷ್ಯ ಕೊಡವುದಿಲ್ಲ ಎಂದು ಹೇಳಿದ್ದಾರೆ.

ಹೀಗಾದರೆ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣದ ಹಂತದಲ್ಲಿ ಮಕ್ಕಳಿಗೆ ಓದುವ ಬರೆಯುವ ಕೌಶಲ್ಯ ಬೆಳೆಯಲು ಹೇಗೆ ಸಾಧ್ಯವೆಂದು ಹೇಳಿಕೆದಾರರೊಬ್ಬರು ಪ್ರಶ್ನಿಸಿದಾಗ ಸಂಘದ ಪ್ರತಿನಿಧಿಗಳು ಅದಕ್ಕೆ ಸಂಬಂಧಿಸಿದಂತೆ ಶೇ.30 ರಷ್ಟು ಧನಾತ್ಮಕವಾದ ಹೇಳಿಕೆಯನ್ನು ನೀಡಿರುತ್ತಾರೆ.

ಶೇ.45 ರಷ್ಟು ಮತ್ತು 25 ರಷ್ಟು ಸಂಘದ ಪ್ರತಿನಿಧಿಗಳು ಈ ವಿಷಯವನ್ನು ಸಂಪೂರ್ಣವಾಗಿ ಒಪ್ಪಿಕೊಂಡಿಲ್ಲ ಇದರ ಅರ್ಥವೇನೆಂದರೆ ಪ್ರಾಥಮಿಕ ಹಂತಹ ಶಿಕ್ಷಣ ಮಕ್ಕಳ ಕಲಿಕೆಯಲ್ಲಿ ಓದುವ-ಬರೆಯುವ ಕೌಶಲ್ಯಗಳ ಬೆಳವಣಿಗೆ ಅಥವಾ ಯಾವುದೇ ರೀತಿಯ ಸಂಪರ್ಕ ಕೌಶಲ್ಯವನ್ನು ಬೆಳೆಸುವುದಕ್ಕೆ ಮುಖ್ಯ ಪಾತ್ರ ನಿರ್ವಹಿಸುವುದಿಲ್ಲ ಎಂದಿದ್ದಾರೆ.

ಮಕ್ಕಳಲ್ಲಿ ಓದುವ ಬರೆಯುವ ಎಣಿಕೆಮಾಡುವ ಕೌಶಲ್ಯಗಳ ದತ್ತಾಂಶವು ತಿಳಿಸುವುದೇನೆಂದರೆ ಶಿಕ್ಷಣವು ವ್ಯವಸ್ಥಿತವಾಗಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಅದರಲ್ಲಿಯೂ ಶಿಕ್ಷಣವೆನ್ನುವುದು ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಸರಿಯಾಗಿ ಕಾರ್ಯನಿರ್ವಹಿಸುತ್ತಿಲ್ಲವೆನ್ನುವುದು ಈ ದತ್ತಾಂಶದಿಂದ ಸ್ಪಷ್ಟವಾಗುತ್ತದೆ. ಶಿಕ್ಷಣವು ಓದು-ಬರಹ ಏಣಕೆಗೆ ಸಹಕಾರಿ ಆಗಿಲ್ಲವಾದರೇ ಮನೆವಾರ್ತೆಗಳಿಗೆ ಮೂಲಧಾರವಾಗಿದೆಯೇ ಎನ್ನುವ ವಿಷಯಗಳನ್ನು ಮುಂದಿನ ಭಾಗದಲ್ಲಿ ಮಹಿಳೆಯರೊಂದಿಗೆ ವಿಶ್ಲೇಷಿಸಲಾಗುವುದು.

ಶಿಕ್ಷಣವೆನ್ನುವುದು ಮನೆವಾರ್ತೆಗಳ ನಿರ್ವಹಣೆಗೆ ಮೂಲವಾಗಿದೆ.

ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡುವುದು ಎಂದರೆ ಅದರ ಹಿಂದಿರುವ ನಿರೀಕ್ಷೆ ಅಥವಾ ಹುನ್ನಾರ ಎಂದರೆ ಅವಳು ತನ್ನ ಮನೆಯ ಎಲ್ಲ ಕೆಲಸ ಕಾರ್ಯಗಳನ್ನು ಜವಾಬ್ದಾರಿಯಿಂದ ಎದುರು ಮಾತಾಡದೇ ಅಚ್ಚುಕಟ್ಟಾಗಿ ಮಾಡುವ ಸಾಮರ್ಥ್ಯ ಒದಗಿಸಿಕೊಡುವುದು ಮತ್ತು ಮದುವೆಯೇ ನಂತರ ಉತ್ತಮ ಗೃಹಿಣಿಯಾಗಿ ಕುಟುಂಬದಲ್ಲಿ ಎಲ್ಲರ ಸೇವೆ ಮಾಡಬೇಕೆನ್ನುವುದೇ ಆಗಿದೆ.

"House Hold Management" ಎಂದರೆ ಗೃಹ ನಿರ್ವಹಣೆ ಅಡುಗೆ ತಯಾರಿಕೆ ಮಾಡುವ ಮನೆಯ ಎಲ್ಲ ತರಹದ ಸ್ವಚ್ಛತಾ ಕೆಲಸಗಳು ಮತ್ತು ಮಕ್ಕಳ ಪಾಲನಾ-ಪೋಷಣೆ, ಹಿರಿಯ ಕಾಳಜಿ ಮತ್ತು ಅತಿಥಿಗಳ ಸತ್ಕಾರ ಇವೆಲ್ಲವುಗಳನ್ನು ಜವಾಬ್ದಾರಿಯಿಂದ ನಿರ್ವಹಿಸಲು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಬೇಕು ಎನ್ನುವ ಅಭಿಪ್ರಾಯವಿದೆ. ಮುಂದಿನ ಅಧ್ಯಾಯದಲ್ಲಿ ಪ್ರಾಥಮಿಕ

ಮತ್ತು ಮಾಧ್ಯಮಿಕ ಹಂತದ ಶಿಕ್ಷಣ ಮನೆಯ ವಾರ್ತೆಗಳನ್ನು ಜವಾಬ್ದಾರಿಯಿಂದ ನಿರ್ವಹಣೆ ಮಾಡುವ ಕೌಶಲ್ಯವನ್ನು ಬೆಳೆಸುತ್ತದೆಯೇ ಅಥವಾ ಇಲ್ಲವೇ ಎನ್ನುವ ಬಗ್ಗೆ ಚರ್ಚಿಸಲಾಗಿದೆ. ಪ್ರಾರಂಭಿಕ ಹಂತದ ಶಿಕ್ಷಣ ಪದ್ಧತಿ ಅಕ್ಷರ ಜ್ಞಾನ ಮಾತ್ರ ನೀಡುತ್ತದೆ. ವಿನಃ ಮನೆ ವಾರ್ತೆಗಳ ಬಗ್ಗೆ ಅದು ಯಾವ ರೀತಿಯ ಪಾಠವನ್ನು ಕಲಿಸುವುದಿಲ್ಲ ಎನ್ನುವು ವಿಷಯಗಳನ್ನು ಮುಂದಿನ ಕೋಷ್ಟಕದಲ್ಲಿ ನೋಡಬಹುದಾಗಿದೆ.

ಕೋಷ್ಟಕ – 5.3.6

ಶಿಕ್ಷಣವು ಗೃಹವಾರ್ತೆಗಳ ನಿರ್ವಹಣೆಗೆ ಮೂಲಾಧಾರವಾಗಿದೆಯೇ

ಕ್ರ ಸಂ.	ಹೇಳಿಕೆದಾರರ ಅಭಿಪ್ರಾಯಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹು ಮಟ್ಟಿಗೆ ಒಪ್ಪಿಗೆಯಿದೆ	24	20%	18	10%	42	14%
02.	ಸ್ವಲ್ಪ ಒಪ್ಪಿಗೆಯಿದೆ	48	40%	54	30%	102	34%
03.	ಒಪ್ಪಿಗೆಯಿಲ್ಲ	48	40%	108	60%	156	52%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ವಿವರಣೆಯ ಪ್ರಕಾರ ಗ್ರಾಮೀಣ ಪ್ರದೇಶದಲ್ಲಿ ಇರುವ ಶಾಲೆಗಳಲ್ಲಿ ಮನೆಯ ಜವಾಬ್ದಾರಿಗಳ ನಿರ್ವಹಣೆ ಕುರಿತು ಅಭ್ಯಾಸವನ್ನು ಮಾಡಿಸುವುದಿಲ್ಲ. ಅಷ್ಟೇ ಅಲ್ಲದೆ ವಿಷಯಗಳಲ್ಲಿ ಗೃಹ ವಿಜ್ಞಾನದಂತಹ ವಿಷಯಗಳಿಲ್ಲ. ಶಾಲೆಯ ಶಿಕ್ಷಣವು ಪರೋಕ್ಷವಾಗಿ ಬದುಕಿನ ಅವಶ್ಯಕತೆಗಳ ಬಗ್ಗೆ ತಿಳುವಳಿಕೆ ನೀಡುತ್ತದೆ. ಸಾಕ್ಷರತೆಯೂ ಆಧುನಿಕತೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯ ಮಾಡುತ್ತದೆ.

ಉಳಿತಾಯ, ಖರ್ಚು, ಆರೋಗ್ಯದ ಸಮಸ್ಯೆಗಳು ಹೆಚ್ಚಿನ ಸ್ಥಾನ ಮಾನಗಳಿಸುವ ಆಸೆ, ವ್ಯಕ್ತಿತ್ವ ಚಲನೆ ಇದೆಲ್ಲದರ ಬಗ್ಗೆ ಸಾಕ್ಷರತೆಯ ಅರಿವು ಮೂಡಿಸುತ್ತದೆ. ಇದಕ್ಕಿಂತ ಮೇಲಾಗಿ ಶಿಕ್ಷಣದ ಒಂದು ಪ್ರಮುಖವಾದ ಕಾರ್ಯವೆಂದರೆ ಕಲಿಯುವರಿಗೆ, ಕಲಿತವರಿಂದ ಅನುಭವಗಳನ್ನು ಹಂಚಲು ಸಹಾಯ ಮಾಡುತ್ತದೆ. ಪ್ರಸಾರ ಮಾಧ್ಯಮಗಳು ಶಿಕ್ಷಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜೀವನದಲ್ಲಿ ಧೈರ್ಯ ತುಂಬುತ್ತವೆ ಹಾಗೂ ಶಿಕ್ಷಣವು ಸಮಾಜದಲ್ಲಿ ಅತ್ಯಂತ ಧನಾತ್ಮಕವಾದ ಪಾತ್ರವನ್ನು ನಿರ್ವಹಿಸುತ್ತದೆ. ಮೇಲೆ ಕೊಟ್ಟಿರುವ ಕೊಷ್ಠಕದಲ್ಲಿ ಹೇಳಿಕೆದಾರರ ಅಭಿಪ್ರಾಯದಂತೆ, ಮನೆ ಕೆಲಸಗಳ ನಿರ್ವಹಣೆ ಮಾಡುವ ಸಾಮರ್ಥ್ಯವನ್ನು ನೀಡುವ ಸಲುವಾಗಿ ಶಿಕ್ಷಣದ ಪಾತ್ರ ಎಷ್ಟಿದೆಯನ್ನುವುದರ ಬಗ್ಗೆ ಶೇ.52 ರಷ್ಟು ಹೇಳಿಕೆದಾರರು ಶಿಕ್ಷಣವು ಮನೆ ನಿರ್ವಹಣೆಗೆ ಸಂಬಂಧಿಸಿದಂತೆ ಶಿಕ್ಷಣದಲ್ಲಿ ವಿಲೀನವಾಗಿಲ್ಲ. ಮನೆಯ ನಿರ್ವಹಹಣಗೆ ಸಂಬಂಧಿಸಿದಂತೆ ಶಿಕ್ಷಣ ಕೌಶಲ್ಯ ಬೆಳೆಸುತ್ತದೆ ಎನ್ನುವುದನ್ನು ಒಪ್ಪಿಲ್ಲ. ಈ ಹೇಳಿಕೆಯು ಸ್ಪಷ್ಟಪಡಿಸುವುದೇನೆಂದರೆ ಶಿಕ್ಷಣವು

ಮಹಿಳೆಯರಿಗೆ ಅರ್ಥಪೂರ್ಣವಾದ ಪಾತ್ರ ನಿರ್ವಹಿಸಲಿಕ್ಕೆ ಸಿದ್ದಳಾಗಿ ಮಾಡುವುದಿಲ್ಲವೆಂದು ತೋರಿಸುತ್ತದೆ.

ಶೇ.34 ರಷ್ಟು ಹೇಳಿಕೆದಾರರು ನಂಬಿರುವ ವಿಷಯವೇನೆಂದರೆ ಶಿಕ್ಷಣವು ಮಹಿಳೆಯರಿಗೆ ಗೃಹ ವಾರ್ತೆಗಳಿಗೆ ಸಂಬಂಧಿಸಿದಂತೆ ಸ್ವಲ್ಪ ಮಟ್ಟಿಗೆ ಮೂಲಧಾರವಾಗಿದೆಂದು ನಂಬಿದ್ದಾರೆ. ಬಹಳಷ್ಟು ಜನರ ಅಭಿಪ್ರಾಯವೇನೆಂದರೆ ಶಿಕ್ಷಿತ ಜನರು ಲೆಕ್ಕ ಪತ್ರಗಳನ್ನು ವ್ಯವಸ್ಥಿತವಾಗಿ ಇಟ್ಟಿರುತ್ತಾರೆ ಎನ್ನುವ ಅಭಿಪ್ರಾಯ ಹೊಂದಿದ್ದರು. ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರು ಋಣಾತ್ಮಕ ಅಭಿಪ್ರಾಯವನ್ನು ಹೊಂದಿದ್ದಾರೆ. ಶಿಕ್ಷಣವು ಗ್ರಹಕ್ರತ್ಯ ನಿರ್ವಹಣೆಗೆ ಮೂಲವಾಗಿ ದೆಯೆನ್ನುವ ವಿಷಯಕ್ಕೆ ಸಂಬಂಧಿಸಿದಂತೆ ಸಂಘದ ಸದಸ್ಯರಿಗೆ ಸಂಘದ ಪ್ರತಿನಿಧಿಗಳನ್ನು ಹೋಲಿಸಿದರೆ ಪ್ರತಿನಿಧಿಗಳು ಸ್ವಲ್ಪಮಟ್ಟಿಗೆ ಪರವಾಗಿಲ್ಲ ಎಂದು ಹೇಳಿರುತ್ತಾರೆ.

ಒಟ್ಟಾರೆಯಾಗಿ ಗ್ರಾಮೀಣ ಮಹಿಳೆಯರ ಶಿಕ್ಷಣದ ಮಟ್ಟವನ್ನು ನೋಡಿದಾಗ ಶಿಕ್ಷಣವು ಜನ ಸಾಮಾನ್ಯರಿಗೆ ಸ್ವಲ್ಪ ಜ್ಞಾನವನ್ನು ನೀಡುತ್ತದೆ. ಬಹಳಷ್ಟು ಹೇಳಿಕೆದಾರರ ಅಭಿಪ್ರಾಯದಂತೆ ಪ್ರಾಥಮಿಕ ಶಿಕ್ಷಣದಿಂದ ಹೇಳಿಕೊಳ್ಳುವಂತಹ ಜ್ಞಾನವೇನು ಸಿಗುವುದಿಲ್ಲ ಮತ್ತು ಹೆಚ್ಚಿನ ನೀರಿಕ್ಷೆಯೂ ಮಾಡಬಾರದೆಂಬ ವಿಷಯ ಚರ್ಚೆಯಲ್ಲಿ ತಿಳಿದು ಬಂದಿತು. ಪ್ರಾರಂಭಿಕ ಹಂತದಲ್ಲಿ ಹೆಣ್ಣು ಮಕ್ಕಳು ಪಡೆಯುವ ಶಿಕ್ಷಣಕ್ಕೂ ಹಾಗೂ ಅವರ ಗೃಹ ವಾರ್ತೆಗಳಿಗೂ ಒಂದಕ್ಕೊಂದು ತಾಳ ಮೇಳವಿಲ್ಲದಂತಾಗಿದೆ. ಹೀಗಾಗಿ ವ್ಯವಸ್ಥೆಯಲ್ಲಿ ಹೊಂದಿಕೊಳ್ಳುವುದೇ ಒಂದು ಸಮಸ್ಯೆಯಾಗಿ ಪರಿಣಮಿಸಿದೆ. ಈ ಎಲ್ಲ ವಿಷಯಗಳ ಚೆರ್ಚಯೊಡನೆ ಗ್ರಾಮೀಣ ಮಹಿಳೆಯ ಉದ್ಯೋಗದ ವಿಷಯಗಳನ್ನು ಕುರಿತು ಈ ಮುಂದೆ ಚರ್ಚಿಸಲಾಗಿದೆ.

ಸಂಘದ ಮಹಿಳೆಯರು ಉದ್ಯೋಗದ ಬಗ್ಗೆ ಹೊಂದಿರುವ ಅಭಿಪ್ರಾಯಗಳು:

ಈ ಅಧ್ಯಾಯದಲ್ಲಿ ಗ್ರಾಮೀಣ ಮಹಿಳೆಯರ ಉದ್ಯೋಗದ ಬಗ್ಗೆ ಹೇಳಿಕೆದಾರರು ಹೊಂದಿರುವ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಗ್ರಾಮೀಣ ಮಹಿಳೆಯರ ಉದ್ಯೋಗದ ಬಗ್ಗೆ ಹೇಳಿಕೆದಾರರು ಹೊಂದಿರುವ ಧನಾತ್ಮಕ ಮತ್ತು ಋಣಾತ್ಮಕ ಅಭಿಪ್ರಾಯಗಳನ್ನು ತಿಳಿದುಕೊಳ್ಳುವುದು ಇದರ ಮುಖ್ಯ ಉದ್ದೇಶವಾಗಿದೆ.

ಭಾರತ ಸರ್ಕಾರವು ಗ್ರಾಮೀಣ ಜನರ ಜೀವನ ಮಟ್ಟದಲ್ಲಿ ಸುಧಾರಣೆಯನ್ನು ತರಲು ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ, ಆರೋಗ್ಯ ಹಾಗೂ ಉದ್ಯೋಗ ಅವಕಾಶಗಳಿಗೆ ಸಂಬಂಧಿಸಿದಂತೆ ಸಾಂಪ್ರಾದಾಯಿಕ ಪದ್ಧತಿಯಿಂದ ಆಧುನಿಕ ಪದ್ಧತಿಗೆ ಜನರ ಜೀವನ ಮಟ್ಟದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಸಾಕಷ್ಟು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆ. ಆದರೆ ಇವೆಲ್ಲವು ಮಹಿಳೆಯರ ಹಿತಾಸಕ್ತಿಗೆ ಪೂರಕವಾಗಿವೆ ಎಂದು

ಹೇಳುವುದು ಕಷ್ಟ. ಈ ಯೋಜನೆಗಳಿಗೆ ಪೂರಕವಾಗಿಯೇ ಮಹಿಳೆಯರು ಸ್ವ-ಸಹಾಯ ಸಂಘದಲ್ಲಿ ಸದಸ್ಯರಾಗಿ ನಿರಂತರವಾದ ಸಭೆ, ಉಳಿತಾಯ, ಸಾಲ, ಮರುಪಾವತಿ ಬೇರೆ ಬೇರೆ ವಿಷಯಗಳ ಚರ್ಚೆ ಮುಂತಾದ ಕಾರ್ಯಚಟುವಟಿಕೆಗಳನ್ನು ಮಾಡುತ್ತಿದ್ದಾರೆ. ತಮ್ಮ ಮನೆಯ ಕೆಲಸದೊಂದಿಗೆ ಬೇರೆ ಉದ್ಯೋಗವೇನಾದರೂ ಮಾಡುತ್ತಿದ್ದಾರೆಯೇ ಹಾಗಾದರೆ ಯಾರು ಯಾವ ಪ್ರಕಾರದ ಉದ್ಯೋಗವನ್ನು ಮಾಡುತ್ತಿದ್ದಾರೆಂದು ನೋಡುವುದೇ ಇಲ್ಲಿ ಚರ್ಚೆಯ ಮುಖ್ಯ ವಿಷಯವಾಗಿದೆ.

ಮಹಿಳೆಯರ ಉದ್ಯೋಗವು ಈ ಕೆಳಗಿನ ಅಂಶಗಳನ್ನು ಒಳಗೊಂಡಿದೆ.

1. ಮಹಿಳೆಯರಿಗೆ ಉದ್ಯೋಗ
2. ಅವಿವಾಹಿತ ಮಹಿಳೆಯ ಉದ್ಯೋಗ
3. ವಿವಾಹಿತ ಮಹಿಳೆಯ ಉದ್ಯೋಗ
4. ಉದ್ಯೋಗದ ಪ್ರಕಾರಗಳು

ಹೆಣ್ಣು ಮಕ್ಕಳ ಉದ್ಯೋಗದ ಬಗ್ಗೆ ಗ್ರಾಮೀಣ ಮಹಿಳೆಯರ ಅಭಿಪ್ರಾಯವೇನೆಂದರೆ ಹೆಣ್ಣು ಮಕ್ಕಳ ಸಬಲೀಕರಣ ಉದ್ಯೋಗಕ್ಕೆ ಒಂದು ದಾರಿಯಾಗಿದೆ ಎಂದು ನಂಬಿದ್ದಾರೆ.

ಉದ್ಯೋಗವೆಂದರೆ, ಇದೊಂದು ಗಳಿಕೆಯ ಶಕ್ತಿಯಾಗಿದೆ. ಖರಿದಿಸುವ ಖರ್ಚು ಮಾಡುವ ಸ್ವತಂತ್ರವಾದ ಶಕ್ತಿಯಾಗಿದೆ. ಹಾಗೇಯೇ ಹೆಣ್ಣು ಮಕ್ಕಳಿಗೆ ಮನೆಯ ಹೊರಗಡೆ ಓಡಾಡುವ ಮತ್ತು ಪರಸ್ಪರ ಅಭಿಪ್ರಾಯವನ್ನು ಹಂಚಿಕೊಳ್ಳುವ ಅವಕಾಶ ಕಲ್ಪಿಸುತ್ತದೆ.

ಉದ್ಯೋಗವೆನ್ನುವುದು ಯಾವುದೇ ಜಾತಿ, ಧರ್ಮ, ವರ್ಗ, ಲಿಂಗ, ವಯಸ್ಸಿನ ತಾರತಮ್ಯವಿಲ್ಲದೆ ಕೆಲಸ ಮಾಡಲಿಕ್ಕೆ ಮಹಿಳೆಯನ್ನು ಪ್ರೇರೆಪಿಸುತ್ತದೆ.

ಉದ್ಯೋಗದ ಸ್ವರೂಪ ಮತ್ತು ಸಬಲೀಕರಣ:

ಉದ್ಯೋಗ ಸಬಲೀಕರಣದ ಮೂಲವಾಗಿದೆ ಉದ್ಯೋಗದ ಪ್ರಕಾರ ಸಬಲೀಕರಣದ ಸ್ವರೂಪ ಮತ್ತು ಪದವಿ (ಶ್ರೇಣಿ) ಏರಿಳಿತಗಳಿಂದ ಕೂಡಿರುತ್ತದೆ. ಉದಾ: ಆರ್ಥಿಕ ಭದ್ರತೆಯಿಂದ ಕೂಡಿದ ಉದ್ಯೋಗ ಅವರಿಗೆ ಹೆಚ್ಚಿನ ಸಬಲತೆಯನ್ನು ನೀಡುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಆರ್ಥಿಕ ಅಭದ್ರತೆಯಿಂದ ಕೂಡಿದ ಉದ್ಯೋಗಗಳಿಂದ ಸಬಲತೆಯ ಮಟ್ಟಕ್ಕೆರಲು ಆಗುವುದಿಲ್ಲ.

ಹೆಣ್ಣು ಮಕ್ಕಳ ಉದ್ಯೋಗದ ಬಗ್ಗೆ ಹೇಳಿಕೆದಾರರ ಅಭಿಪ್ರಾಯಗಳು:

ಸರ್ವೆ ಸಮಾನ್ಯವಾಗಿ ಎಲ್ಲ ಮಹಿಳೆಯರು ತಮ್ಮ ಮನೆವಾರ್ತೆಗಳನ್ನು ಅಂದರೆ ಅಡುಗೆ ಮಾಡುವುದು, ಬಟ್ಟೆ ತೊಳೆಯುವ, ಕಸಮುಸುರೆ, ಸ್ವಚ್ಛತೆ, ಮಕ್ಕಳ, ಹಿರಿಯರ ಗಂಡನ, ಪೋಷಣೆ

ಇತ್ಯಾದಿ, ಆವಳ ಕುಟುಂಬದ ಹೊರಗಡೆ ಹೋಗಿ ಯಾವುದೇ ಆದಾಯ ತರುವ ಉದ್ಯೋಗವನ್ನು ಮಾಡುವುದಿಲ್ಲ. ಆದರೆ ಬಡ ಕುಟುಂಬದ ಮಹಿಳೆಯರು ಪುರುಷರಿಗೆ ಕೆಲಸಗಳಲ್ಲಿ ಸಹಾಯಕ ರಾಗಿ ಹೊಲ ಕೆಲಸದಲ್ಲಿ, ರೋಡ ಕೆಲಸದಲ್ಲಿ ಗೂಡುಕಟ್ಟುವ ಕೆಲಸದಲ್ಲಿ ಸಹಾಯಕರಾದರೆ ಕೆಳ ವರ್ಗದ ಮಹಿಳೆಯರು ಬಿಲ್ಡಿಂಗ್, ರೋಡ್, ಬ್ರಿಜ್, ನಿರ್ಮಾಣ ಮಾಡುವಲ್ಲಿ ಪುರುಷರಿಗೆ ಸಹಾಯಕರಾಗಿ ಗುಂಪಿನಲ್ಲಿಯೇ ಕೆಲಸಮಾಡುತ್ತಾರೆ. ಉದಾ: ರೇತಿ ಸೊಸುವುದರಲ್ಲಿ ಸಿಮೆಂಟ ಹೊತ್ತು ತಂದುಕೊಡುವುದು ವೈಯಕ್ತಿಕವಾಗಿ ಕೆಲಸ ಮಾಡುವುದಿಲ್ಲ. ಈ ಅಧ್ಯಯನದಲ್ಲಿ ಹೆಣ್ಣು ಮಕ್ಕಳ ಉದ್ಯೋಗಕ್ಕೆ ಸಂಬಂಧಿಸಿದಂತೆ ಹೇಳಿಕೆದಾರರ ಅಭಿಪ್ರಾಯವನ್ನು ಈ ಕೆಳಗಿನ ಕೊಷ್ಟಕದಲ್ಲಿ ವಿವರಿಸಲಾಗಿದೆ.

ಕೋಷ್ಟಕ – 5.3.7

ಹೆಣ್ಣು ಮಕ್ಕಳು ಉದ್ಯೋಗದ ಕುರಿತು ವಿವರ

ಕ್ರ ಸಂ.	ಹೇಳಿಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹು ಮಟ್ಟಿಗೆ	66	55%	90	50%	148	52%
02.	ಸ್ವಲ್ಪ ಮಟ್ಟಿಗೆ	54	45%	54	30%	108	36%
03.	ಇಲ್ಲ	--	--	36	20%	36	12%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ವಿವರಣೆಯ ಪ್ರಕಾರ ಹೆಣ್ಣು ಮಕ್ಕಳ ಉದ್ಯೋಗದ ಬಗ್ಗೆ ಹೇಳಿಕೆದಾರರು ಹೊಂದಿರುವ ಅಭಿಪ್ರಾಯಗಳು ಶೇ.52 ರಷ್ಟು ಹೇಳಿಕೆದಾರರು ಹೆಣ್ಣು ಮಕ್ಕಳ ಉದ್ಯೋಗದ ಪರವಾಗಿ ಮಾತನಾಡಿದ್ದಾರೆ. ಆದರೆ ಶೇ.36 ರಷ್ಟು ಹೇಳಿಕೆದಾರರು ಸ್ವಲ್ಪ ಮಟ್ಟಿಗೆ ಹೆಣ್ಣು ಮಕ್ಕಳಿಗೆ ಉದ್ಯೋಗ ಬೇಕೆಂದು ಹೇಳಿದ್ದಾರೆ. ಕೇವಲ ಶೇ.12 ರಷ್ಟು ಹೇಳಿಕೆದಾರರು "ಮಹಿಳೆಯರು ಹೊರಗಡೆ ಹೋಗಿ ಉದ್ಯೋಗ ಮಾಡಿ ಹಣಗಳಿಸುವ ಅವಶ್ಯಕತೆಯಿಲ್ಲವೆಂದು ಹೇಳಿದ್ದಾರೆ". ಮನೆ ನೋಡಿ ಕೊಂಡರೆ ಸಾಕು, ಹೆಣ್ಣು ದುಡಿಯಲಿಕ್ಕೆ ಹೊರಗೆ ಹೊಗುವುದೇನು. ದುಡಿಯುವುದೇನು, ಗಳಿಸುವುದೇನು, ಗಳಿಸಿ, ತಂದಿರುವುದರಿಂದ ಮನೆ ನಡೆಯುತ್ತೆ ಅನ್ನೋದು ಸುಳ್ಳು ಎಂಬ ಅಭಿಪ್ರಾಯ ಪುರುಷರಂತೆ ಬೇರೋರಿ ಬಿಟ್ಟಿದೆ ಅದಕ್ಕೆ ಪುರಕವಾಗಿ ಮಹಿಳೆಯರು ತಲೆ ಹಾಕಬೇಕಾಗಿದೆ ಇದು ಅನಿವಾರ್ಯವು ಆಗಿದೆ. ಸಂಘದ ಪ್ರತಿನಿಧಿಗಳು ಮತ್ತು ಸದಸ್ಯರ ಅಭಿಪ್ರಾಯಗಳಲ್ಲಿ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಸದಸ್ಯರಗಿಂತ ಸಂಘದ ಪ್ರತಿನಿಧಿಗಳು ನೀಡಿದ ಹೇಳಿಕೆ ಪರವಾಗಿಲ್ಲವೆನಿಸಿದೆ ಶೇ.55 ರಷ್ಟು ಸಂಘದ ಪ್ರತಿನಿಧಿಗಳು ಮಹಿಳೆಯರಿಗೆ ಉದ್ಯೋಗಬೇಕೆಂದು ಹೇಳಿದ್ದಾರೆ. ಶೇ.50 ರಷ್ಟು ಸದಸ್ಯರು ಇದೇ ಅಭಿಪ್ರಾಯವನ್ನು

ಹೊಂದಿದ್ದಾರೆ. ಒಟ್ಟಾರೆ ಈ ಪ್ರಕ್ರಿಯೆಯಲ್ಲಿ ಮಹಿಳೆಯರು ಉದ್ಯೋಗದಲ್ಲಿರಬೇಕೆಂಬುದೆ ಆಗಿದೆ. ಅದರಲ್ಲಿ ಸಂಘದ ಪ್ರತಿನಿಧಿಗಳು ಸದಸ್ಯರಗಿಂತ ಹೆಚ್ಚಾಗಿಯ ಈ ವಿಷಯವನ್ನು ಪ್ರೋತ್ಸಾಹಿಸಿದ್ದಾರೆ.

ಅವಿವಾಹಿತ ಮಹಿಳೆಯರ ಉದ್ಯೋಗದ ಬಗ್ಗೆ ಹೇಳಿಕೆದಾರರ ಅಭಿಪ್ರಾಯಗಳು:

ಮಹಿಳೆಯರಿಗೆ ಉದ್ಯೋಗವು ಸಬಲೀಕರಣಕ್ಕೆ ಒಂದು ದಾರಿಯಾಗಿದೆ ಅಲ್ಲಿ ಮುಖ್ಯವಾದ ಅಂಶ ಅವಳು ಮುದುವೆಯಾಗಿದ್ದಾಳೆ ಇಲ್ಲವೋ ಎನ್ನುವುದಲ್ಲ. ಅಂಶ ಅಷ್ಟೋಂದು ಗಮನಕ್ಕೆ ಬಾರದು, ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಹುಡುಗಿಯು ದೊಡ್ಡವಳಾದ ಮೇಲೆ (ಋತುಮತಿ) ಅವಳಿಗೆ ಹೊರಗಡೆಹೋಗಲು ಹೆಚ್ಚಿನ ಮಟ್ಟದಲ್ಲಿ ತಂದೆ ತಾಯಿಗಳು ಅನುಮತಿ ನೀಡುವುದಿಲ್ಲ ಅವಳ ಮದುವೆ ಎಷ್ಟೂ ಬೇಗ ಸಾಧ್ಯವೂ ಅಷ್ಟೂ ಬೇಗ ಮಾಡಲು ನಿರ್ಧರಿಸುತ್ತಾರೆ ಮತ್ತು ವರನ ಶೋಧದಲ್ಲಿ ತೊಡಗುತ್ತಾರೆ.

ಒಟ್ಟಾರೆಯಾಗಿ ನೋಡಿದಾಗ ಮಹಿಳೆಯು ಉದ್ಯೋಗ ಪಡೆಯುವಲ್ಲಿ ಅವಿವಾಹಿತ ಮಹಿಳೆಯರನ್ನು ಕೆಲಸಕ್ಕೆ ಕಳುಹಿಸಲು ಹಿಂದೆ-ಮುಂದೆ ನೋಡುತ್ತಾರೆ. ಕೆಲವೊಂದು ಸಾರಿ ಬಡ ಕುಟುಂಬದಲ್ಲಿ ಹೆಣ್ಣು ಮಕ್ಕಳು ದೊಡ್ಡವರಾದ ನಂತರವು ಅಕ್ಕ-ಪಕ್ಕದ ವಯಸ್ಸಾದ ಮಹಿಳೆಯರೊಂದಿಗೆ ಕೂಲಿ ಕೆಲಸಕ್ಕೆ ತಂದೆ-ತಾಯಿಯರು ಕಳಿಸುತ್ತಾರೆ. ಇದಕ್ಕೆ ಪೂರಕವಾಗಿ ಅವಿವಾಹಿತ ಹೆಣ್ಣು ಮಕ್ಕಳು ಉದ್ಯೋಗ ಮಾಡಬೇಕೆ, ಇಲ್ಲವೇ ಎನ್ನುವ ವಿಷಯದ ವಿವರಣೆಯನ್ನು ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ – 5.3.8

ಅವಿವಾಹಿತ ಹೆಣ್ಣುಮಕ್ಕಳ ಉದ್ಯೋಗದ ಬಗ್ಗೆ ಹೇಳಿಕೆದಾರರು ಹೊಂದಿರುವ ಅಭಿಪ್ರಾಯಗಳು

ಕ್ರ ಸಂ.	ಹೇಳಿಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಬಹು ಮಟ್ಟಿಗೆ	24	20%	36	20%	60	20%
02.	ಸ್ವಲ್ಪ ಮಟ್ಟಿಗೆ	24	20%	36	20%	00	20%
03.	ಒಪ್ಪಿಗೆಯಿಲ್ಲ	72	60%	108	60%	180	60%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ವಿವರಣೆಯ ಪ್ರಕಾರ ಅವಿವಾಹಿತ ಹೆಣ್ಣು ಮಕ್ಕಳು ಉದ್ಯೋಗವನ್ನು ಹೊಂದಬೇಕೇ? ಎನ್ನುವ ವಿಷಯ ತಿಳಿದಿರುತ್ತದೆ. ಶೇ.20 ರಷ್ಟು ಹೇಳಿ ಪೂರ್ತಿಯಾಗಿ ಒಪ್ಪಿಕೊಂಡಿದ್ದಾರೆ. ಶೇ.20 ರಷ್ಟು ಹೇಳಿಕೆದಾರರು ಸ್ವಲ್ಪ ಮಟ್ಟಿಗೆ ಒಪ್ಪಿಕೊಂಡಿದ್ದಾರೆ. ಇವರ ಅಭಿಪ್ರಾಯಗಳನ್ನು ಪರಿಶೀಲಿಸಿ ನೋಡಿದಾಗ ಬಹಳಷ್ಟು ಹೇಳಿಕೆದಾರರು ಹೆಣ್ಣು ಮಕ್ಕಳು ಅವಿವಾಹಿತ ಹೆಣ್ಣು ಮಕ್ಕಳು ನೌಕರಿಮಾಡುವುದು ಅಥವಾ ಉದ್ಯೋಗ ಮಾಡುವುದು ತಮಗೆ ಒಪ್ಪಿಗೆಯಿಲ್ಲವೆಂದು ತಿಳಿಸಿದ್ದಾರೆ. ಗ್ರಾಮೀಣ ಹೆಣ್ಣು ಮಕ್ಕಳನ್ನು ನೌಕರಿಗೆ ಒಂಟಿಯಾಗಿ ಕಳಿಸುವುದು ಬೇಡ ಏನಿಸುತ್ತದೆ. ಅಂದರೆ ಅವರಿಗೆ ಒಪ್ಪಿಗೆಯಿಲ್ಲ ಎಂದರ್ಥ ಮಗಳು ದೊಡ್ಡವಳಾದ ನಂತರ ಆದಷ್ಟು ಬೇಗ ಅವಳನ್ನು ಮದುವೆ ಮಾಡಬೇಕೆನ್ನುವ ಕಾತುರತೆಯನ್ನು ಬಹಳಷ್ಟು ಹೇಳಿಕೆದಾರರು ವ್ಯಕ್ತಪಡಿಸಿದರು. ಹಾಗೆಯೇ ವಿವಾಹಿತ ಮಹಿಳೆಯರು ಉದ್ಯೋಗ ಮಾಡಬೇಕೆ ಅಥವಾ ಬೇಡವೆ ಎನ್ನುವ ವಿಷಯಗಳನ್ನು ಮುಂದಿನ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ – 5.3.9

ವಿವಾಹಿತ ಹೆಣ್ಣುಮಕ್ಕಳ ಉದ್ಯೋಗದ ಬಗ್ಗೆ ಹೇಳಿಕೆದಾರರು ಹೊಂದಿರುವ ಅಭಿಪ್ರಾಯಗಳು

ಕ್ರ ಸಂ.	ಹೇಳಿಕೆದಾರರ ಅಭಿಪ್ರಾಯ	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂ.	ಶೇ.	ಸಂಖ್ಯೆ	ಶೇ.
01.	ಬಹು ಮಟ್ಟಿಗೆ	72	60%	90	50%	162	34%
02.	ಸ್ವಲ್ಪ ಮಟ್ಟಿಗೆ	36	30%	54	30%	90	30%
03.	ಒಪ್ಪಿಗೆಯಿಲ್ಲ	12	10%	36	20%	48	16%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ವಿವರಣೆಯಂತೆ ವಿವಾಹಿತ ಹೆಣ್ಣುಮಕ್ಕಳ ಉದ್ಯೋಗದ ಬಗ್ಗೆ ತಿಳಿದು ಬರುತ್ತದೆ. ಶೇ.34 ರಷ್ಟು ಹೇಳಿಕೆದಾರರು ಪೂರ್ತಿಯಾಗಿ ಒಪ್ಪಿದ್ದಾರೆ. ಶೇ.30 ರಷ್ಟು ಸ್ವಲ್ಪ ಮಟ್ಟಿಗೆ ಬೇಕೆಂದು ಒಪ್ಪಿದ್ದಾರೆ. ಈ ದತ್ತಾಂಶದ ವಿಷಯಗಳನ್ನು ನೋಡಿದಾಗ ಸಂಘದ

ಪ್ರತಿನಿಧಿಗಳು ಸದಸ್ಯರಿಗಿಂತ ಹೆಚ್ಚಾಗಿ ಶೇ.16 ರಷ್ಟು ಹೇಳಿರುವುದು ಕಂಡು ಬಂತು. ಅವಿವಾಹಿತ ಮಹಿಳೆಯರು ಉದ್ಯೋಗ ಮಾಡಕೂಡದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಂಘದ ಪ್ರತಿನಿಧಿಗಳು ಧನಾತ್ಮಕ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

ಮಹಿಳಾ ಉದ್ಯೋಗದ ಪ್ರಕಾರಗಳು:

ಗ್ರಾಮೀಣ ಮಹಿಳೆಯರು ಹೇಳಿರುವ ಪ್ರಕಾರ ಮಹಿಳೆಯರು ಉದ್ಯೋಗವನ್ನು ಮಾಡಬೇಕು. ಆದರೆ ಉದ್ಯೋಗಕ್ಕೆ ಹೋಗುವವರು ವಿವಾಹಿತರಾಗಿರಬೇಕೆಂದು ಅವಿವಾಹಿತರು ಹೋಗಕೂಡದೆಂದು ಪರೋಕ್ಷವಾಗಿ ಹೇಳಿದರು. ಮುಂದಿನ ಭಾಗದ ವಿವರಣೆಯಲ್ಲಿ ಉದ್ಯೋಗದ ಪ್ರಕಾರಗಳನ್ನು ತಿಳಿದುಕೊಳ್ಳಲಿಕ್ಕೆ ಪ್ರಯತ್ನಿಸಲಾಗಿದೆ. ಆ ಉದ್ಯೋಗಗಳು ಸ್ವಯಂ ಉದ್ಯೋಗ, ಮನೆಯ ಕೆಲಸ ಮತ್ತು ಸೇವೆಗಳು ಈ ಕೆಲಸಗಳಲ್ಲಿ ಹೋಗುವ ಹೆಣ್ಣು ಮಕ್ಕಳ ವಿವರಗಳನ್ನು ಕುರಿತು ವಿಶ್ಲೇಷಿಸಲಾಗಿದೆ.

ಹಿಂದಿನ ಅಧ್ಯಾಯಗಳಲ್ಲಿ ಮಹಿಳೆಯರಿಗೆ ಉದ್ಯೋಗ ಬೇಕು ಎನ್ನುವುದರ ಬಗ್ಗೆ ಈಗಾಗಲೇ ನೋಡಿದ್ದೇವೆ. ಆದರೆ ಈಗಿನ ವಾಸ್ತವದ ಪ್ರಶ್ನೆ ಎಂದರೆ ಗ್ರಾಮೀಣ ಮಹಿಳೆಯರಿಗೆ ಎಂಥ ಉದ್ಯೋಗಗಳು ಬೇಕು. ಯಾವ ತರಹದ ಉದ್ಯೋಗಗಳು ಬೇಕು ಎಂಬ ಅಂಶಗಳನ್ನು ನೊಡಬೇಕಾಗಿದೆ. ಉದ್ಯೋಗದ ಪ್ರಕಾರಗಳು.

1. ಸ್ವಯಂ ಉದ್ಯೋಗ
2. ಮನೆ ಕೆಲಸ
3. ಕೂಲಿ

ಮಹಿಳೆಯು ಯಾವ ಉದ್ಯೋಗವನ್ನು ಮಾಡಬೇಕು ಎಂಬ ವಿಷಯದ ಚರ್ಚೆಯಲ್ಲಿ ಹೇಳಿಕೆದಾರರ ಆಸಕ್ತಿದಾಯಕವಾಗಿ ಬಂದತಹ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ – 5.3.10
ಮಹಿಳೆಯರ ಉದ್ಯೋಗದ ಪ್ರಕಾರಗಳ ವಿವರ

ಕ್ರ ಸಂ.	ಉದ್ಯೋಗದ ಪ್ರಕಾರಗಳ ಬಗ್ಗೆ ಹೇಳಿಕೆದಾರರ ಅಭಿಪ್ರಾಯಗಳು	ಪದಾಧಿಕಾರಿಗಳು		ಸದಸ್ಯರು		ಒಟ್ಟು	
		ಸಂಖ್ಯೆ	ಶೇ.	ಸಂಖ್ಯೆ	ಶೇ.	ಸಂಖ್ಯೆ	ಶೇ.
01.	ಸ್ವಯಂ ಉದ್ಯೋಗ	72	60%	90	50%	162	54%
02.	ಮನೆ ಕೆಲಸ	30	25%	54	30%	84	28%
03.	ಕೂಲಿ	18	15%	36	20%	54	185
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ವಿವರಣೆಯ ಪ್ರಕಾರ ಹೇಳಿಕೆದಾರರು ಹೇಳಿರುವಂತೆ ಶೇ.54 ರಷ್ಟು ಹೇಳಿಕೆದಾರರು ಮಹಿಳೆಯರಿಗೆ ಸ್ವಯಂ ಉದ್ಯೋಗವಿದ್ದರೆ ಒಳ್ಳೆಯದು ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಅದೇ ರೀತಿ ಸ್ವಯಂ ಉದ್ಯೋಗಗಳೆಂದರೆ ತರಕಾರಿ, ಮಾರಾಟ, ಹಣ್ಣಿನ ಮಾರಾಟ, ಚಹಾದ ಅಂಗಡಿ, ಹಾಲು ಮೊಸರು, ತುಪ್ಪ, ಬೆಣ್ಣೆ ಮಾರಾಟ, ಸಣ್ಣ-ಪುಟ್ಟ ವ್ಯಾಪಾರಗಳು, ಪಶು ಸಂಗೋಪನೆ ಮುಂತಾದವುಗಳನ್ನು ನೋಡಿದಾಗ ಮಹಿಳೆಯರು ಸರ್ಕಾರ ಜಾರಿಗೊಳಿಸಿದ ಹಲವಾರು ಯೋಜನೆಗಳಿಗೆ ಮತ್ತು ಕಾರ್ಯಕ್ರಮಗಳಿಗೆ ಇವರು ಸ್ಪಂದಿಸಿರುವುದು ತಿಳಿದು ಬರುತ್ತದೆ.

ಸ್ವಯಂ ಉದ್ಯೋಗದ ಅರ್ಥವೇನೆಂದರೆ "ಉಳಿಸು, ಬಳಸು, ಬೆಳೆಸುವ ಒಂದು ಪರಿಜ್ಞಾನ ಎಂದರ್ಥ". ಇವೆಲ್ಲದರ ಒಟ್ಟಾರೆ ಅರ್ಥವೇನೆಂದರೆ ಗ್ರಾಮೀಣ ಮಹಿಳೆಯರು ಪ್ರಗತಿ ಹೊಂದುತ್ತಿದ್ದಾರೆ. ಮತ್ತು ಚಟುವಟಿಕೆಯೊಂದರಲ್ಲಿ ಆಸಕ್ತಿಯಿಂದ ಮತ್ತು ಕಾಳಜಿಯಿಂದ ಭಾಗವಹಿಸುತ್ತಿದ್ದಾರೆಂದು ಹೇಳಬಹುದಾಗಿದೆ. ಶೇ.28 ರಷ್ಟು ಮಹಿಳೆಯರು ಹೇಳಿರುವಂತೆ ಮನೆವಾರ್ತೆಯ ಕೆಲಸಕಾರ್ಯಗಳು ಉದಾ: ಅಡುಗೆ ಮಾಡುವುದು, ಮನೆ ಸ್ವಚ್ಛ ಮಾಡುವುದು, ಬಟ್ಟೆ ತೊಳೊಯುವುದು, ಪಾತ್ರೆ ತೊಳೆಯುವುದು. ಮುಂತಾದ ಕೆಲಸಗಳನ್ನು ಮಾಡುತ್ತಾರೆ. ಹಾಗೆ ಇವರು ಕೇವಲ ಮನೆಕೆಲಸ ಮಾತ್ರ ಏಕೆ ಮಾಡುತ್ತಾರೆಂದರೆ ಪುರುಷರು ಹೊರಗಡೆ ಹೋಗಿ ಉದ್ಯೋಗ ಮಾಡಲು ಮಹಿಳೆಯರಿಗೆ ಅವಕಾಶ ನೀಡವುದಿಲ್ಲ. ಒಂದು ವೇಳೆ ಕಾಡಿ-ಬೇಡಿ ಅವಕಾಶ ಪಡೆದುಕೊಂಡರು ಇವರಿಗೆ ಸ್ವಯಂ ಉದ್ಯೋಗ ಮಾಡಲು ಬಂಡವಾಳ ಹೂಡಿಕೆ, ಖರೀದಿಸುವ, ಮಾರುವ ಸಾಮರ್ಥ್ಯ, ದಕ್ಷತೆ ಮತ್ತು ಕೌಶಲ್ಯ ಇರದೇ ಇರುವುದರಿಂದ ಅವರು ಮನೆವಾರ್ತೆಯ ಕೆಲಸಗಳಿಗೆ ಹೋಗುತ್ತಾರೆನ್ನುವ ಮಾತನ್ನು ಸಹ ಹೇಳಿಕೆದಾರರು ಹೇಳಿದರು. ಶೇ.18 ರಷ್ಟು ಜನ ಗ್ರಾಮೀಣ ಮಹಿಳೆಯರು ಕೂಲಿ ಕೆಲಸ ಮಾಡುವುದು ಸರಿ ಎಂದು ಹೇಳಿದ್ದಾರೆ. ಇದಕ್ಕೆ ಯಾವುದೇ ಬಂಡವಾಳ ಬೇಕಾಗಿಲ್ಲ ಮತ್ತು ದಿನ ನಿತ್ಯ ಕೂಲಿ ಕೆಲಸ ಮಾಡಿ ಬದುಕುವುದು ಅನಿವಾರ್ಯವೆಂದು ತಿಳಿಸಿದ್ದಾರೆ.

ಇನ್ನೊಮ್ಮೆ ಪರಿಶೀಲಿಸಿದಾಗ ಸಂಘದ ಸದಸ್ಯರು ಸ್ವಯಂ ಉದ್ಯೋಗ ಮಾಡಬೇಕೆಂದಿದ್ದಾರೆ. ಆದರೆ ಹೆಚ್ಚಿನ ಸದಸ್ಯರು ಹೆಣ್ಣು ಮಕ್ಕಳಿಗೆ ಮನೆವಾರ್ತೆಯ ಕೆಲಸ ಮತ್ತು ಕೂಲಿ ಕೆಲಸ ಸುಲಭವಾಗಿ ಮಾಡಲು ಸಾಧ್ಯವಾಗುತ್ತದೆ ಎಂದಿದ್ದಾರೆ. ಸಂಘದ ಪ್ರತಿನಿಧಿಗಳು ಸ್ಪಷ್ಟವಾದ ಪ್ರಗತಿದಾಯಕವಾದ ಗುರಿ ಉದ್ದೇಶಗಳನ್ನು ಹೊಂದಿದ್ದಾರೆ. ಶೇ.60 ಸಂಘದ ಪ್ರತಿನಿಧಿಗಳು ಸ್ವಯಂ ಉದ್ಯೋಗಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಶೇ.50 ರಷ್ಟು ಸಂಘದ

ಸದಸ್ಯರು ಸ್ವಯಂ ಉದ್ಯೋಗಕ್ಕೆ ಒಪ್ಪಿಗೆಯೆಂದಿದ್ದಾರೆ. ಆದರೆ ಹೆಚ್ಚಿನ ಸದಸ್ಯರು ಕುಟುಂಬದ ಕೆಲಸ ಮತ್ತು ಕೂಲಿ ಕೆಲಸವೇ ಹೆಣ್ಣುಮಕ್ಕಳಿಗೆ ಚೆಂದ ಎಂದಿದ್ದಾರೆ.

ಒಟ್ಟಾರೆ ಗ್ರಾಮೀಣ ಮಹಿಳೆಯರ ಅಭಿಪ್ರಾಯವನ್ನು ನೋಡಿದಾಗ ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಉದ್ಯೋಗದ ಬಗ್ಗೆ ಇರುವ ಮನೋವೃತ್ತಿ ನಿಧಾನಗತಿಯಲ್ಲಿ ಯಾದರೂ ಬದಲಾವಣೆ ಹೊಂದುತ್ತಿದೆ. ಇದು ಮಹಿಳಾ ಸಬಲೀಕರಣಕ್ಕೆ ಪೂರಕವಾದ ಹೆಜ್ಜೆಯಾಗಿದೆ.

ಒಟ್ಟಾರೆಯಾಗಿ ಈ ಅಧ್ಯಯನದ ಮುಖ್ಯ ಉದ್ದೇಶವೇನೆಂದರೆ ಹೇಳಿಕೆದಾರರ ಅಭಿಪ್ರಾಯದ ಪ್ರಕಾರ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಎರಡು ದಾರಿಗಳೆಂದರೆ ಶಿಕ್ಷಣ ಮತ್ತು ಉದ್ಯೋಗ ಮುಖ್ಯವಾದ ಅಂಶಗಳಾಗಿವೆ. ಈ ಅಂಶಗಳ ಬಗ್ಗೆ ಹೇಳಿಕೆದಾರರಿಂದ ಬಂದಂತಹ ಅಭಿಪ್ರಾಯಗಳನ್ನು ಸಂಗ್ರಹಿಸಲಾಗಿದೆ. ಈ ಅಧ್ಯಾಯದ ಮುಖ್ಯಾಂಶಗಳು ಈ ಕೆಳಗಿನಂತಿವೆ.

1. ಹೆಚ್ಚಿನ ಹೇಳಿಕೆದಾರರು ತಾವು ಶಾಲೆ ಕಲಿಯದೇ ಇದ್ದರೂ ತಮ್ಮ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ನೀಡಬೇಕೆಂದು ನಂಬಿದ್ದಾರೆ.
2. ಶೇ.44 ರಷ್ಟು ಹೇಳಿಕೆದಾರರು ತಮ್ಮ ಹೆಣ್ಣು ಮಕ್ಕಳಿಗೆ ಮಾಧ್ಯಮಿಕ ಶಾಲೆಯವರೆಗೆ ಶಿಕ್ಷಣ ನೀಡಬೇಕೆಂದು ಉದ್ದೇಶ ಇಟ್ಟುಕೊಂಡಿದ್ದಾರೆ. ಮತ್ತು ಶೇ.24 ರಷ್ಟು ಹೇಳಿಕೆದಾರರು ಪ್ರೌಢಶಾಲೆಯ ತನಕ ತಮ್ಮ ಹೆಣ್ಣು ಮಕ್ಕಳಿಗೆ ಶಿಕ್ಷಣ ನೀಡಬೇಕೆನ್ನುವ ಅಭಿಪ್ರಾಯವನ್ನು ವ್ಯಕ್ತ ಪಡಿಸಿದರು.
3. ಈ ದತ್ತಾಂಶ ಎನು ತೋರಿಸುತ್ತದೆಯೆಂದರೆ ಗ್ರಾಮೀಣ ಮಹಿಳಾ ಸಬಲೀಕರಣ ದಲ್ಲಿ ವಿದ್ಯಾಭ್ಯಾಸವು ಸ್ಥಾನಮಾನದ ಸಂಕೇತವಾಗಿದೆಯೆಂದು ತೋರಿಸುತ್ತದೆ.
4. ಶೇ.41 ಹೇಳಿಕೆದಾರರು ಪ್ರಾಥಮಿಕ ಶಾಲೆಯು ಓದುವ ಬರೆಯುವ ಕೌಶಲ್ಯವನ್ನು ಒದಗಿಸುತ್ತದೆಯೆಂದು ನಂಬಿದ್ದರು. ಆದರೆ ಶೇ.55 ರಷ್ಟು ಹೇಳಿಕೆದಾರರು ಪ್ರಾಥಮಿಕ ಶಿಕ್ಷಣವು ಅಂಥ ಹೇಳಿಕೊಳ್ಳುವಂತಹ ಕೌಶಲ್ಯ ನೀಡುವುದಿಲ್ಲವೆಂದು ನಂಬಿದ್ದರು.
5. ಶಿಕ್ಷಣ ಇದು ಮನೆ ವಾರ್ತೆಗಳ ನಿರ್ವಹಣೆಯ ಮೂಲವಾಗಿದೆ. ಪ್ರಾರಂಭಿಕ ಹಂತದ ಶಿಕ್ಷಣ ಅಪರೋಕ್ಷವಾಗಿ ಹೆಣ್ಣು ಮಕ್ಕಳಿಗೆ ಒಂದು ಪ್ರಾಥಮಿಕ ಜ್ಞಾನವನ್ನು ನೀಡುತ್ತದೆ. ಆಧುನಿಕ ಜೀವನದ ಅರಿವು ಶಾಲೆ ಓದುವುದರಿಂದ ಸಿಗುತ್ತದೆ ಎಂದು ನಂಬಿದ್ದಾರೆ.

6. ಹೆಣ್ಣು ಮಕ್ಕಳ ಉದ್ಯೋಗದ ಬಗ್ಗೆ ಅವರು ತಳೆದಿರುವ ಧೋರಣೆ ಏನೆಂದರೆ ಗ್ರಾಮೀಣ ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಉದ್ಯೋಗವು ಬಹುಮುಖ್ಯ ವಾದ ಪಾತ್ರವನ್ನು ವಹಿಸುತ್ತದೆ.

7. ಗ್ರಾಮೀಣ ಮಹಿಳೆಯರು ಹೆಣ್ಣು ಮಕ್ಕಳ ಉದ್ಯೋಗದ ಬಗ್ಗೆ ಪೂರಕವಾದ ಮನೋವೃತ್ತಿಯನ್ನು ಹೊಂದಿದ್ದಾರೆ.

8. ಹೇಳಿಕೆದಾರರ ಅಭಿಪ್ರಾಯದ ಪ್ರಕಾರ ಅವಿವಾಹಿತ ಹೆಣ್ಣು ಮಕ್ಕಳು ಕೆಲಸ ಉದ್ಯೋಗ ಮಾಡ ಕೂಡದೆಂದು ಹೇಳಿದ್ದಾರೆ. ವಿವಾಹದ ನಂತರ ಮಹಿಳೆಯರು ಉದ್ಯೋಗ ಮಾಡಬೇಕೆಂದು ಅಭಿಪ್ರಾಯಹೊಂದಿದ್ದಾರೆ.

9. ಒಟ್ಟಾರೆಯಾಗಿ ಹೇಳಬೇಕೆಂದರೆ ಬಹು ಸಂಖ್ಯಾತ ಮಹಿಳೆಯರ ಅಭಿಪ್ರಾಯ ಗಳನ್ನು ಅವಲೋಕಿಸಿದಾಗ ಗ್ರಾಮೀಣ ಮಹಿಳೆಯರು ಸ್ವಯಂ ಉದ್ಯೋಗ ಮಾಡುವುದರಲ್ಲಿ ಆಸಕ್ತರಾಗಿದ್ದಾರೆ.

ಹೇಳಿಕೆದಾರರು ಗ್ರಾಮೀಣ ಮಹಿಳೆಯರ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧ ಪಟ್ಟಿರುವಂತೆ ಧನಾತ್ಮಕವಾದ ಅಭಿಪ್ರಾಯಗಳನ್ನು ಹೊಂದಿದ್ದಾರೆ. ಇದು ಸೂಚಿಸುವದೇನೆಂದರೆ ಗ್ರಾಮೀಣ ಮಹಿಳೆಯರು ತಮ್ಮ ಸಬಲೀಕರಣದ ದಾರಿಯನ್ನು ಕಂಡು ಕೊಳ್ಳುವಲ್ಲಿ ಪ್ರಯತ್ನ ಮಾಡುತ್ತಿದ್ದಾರೆಂದು ತಿಳಿದು ಬರುತ್ತದೆ.

5.4 ಗ್ರಾಮೀಣ ಮಹಿಳಾ ಆರೋಗ್ಯ ಸಬಲೀಕರಣ:

ಮಾನವನ ಆರೋಗ್ಯವು ಸುಖಮಯ ಜೀವನ, ಮತ್ತು ಸಮಸ್ತ ಅಭಿವೃದ್ಧಿಯನ್ನು ತಿಳಿಸುವ ಸೂಚ್ಯಂಕವಾಗಿದೆ. ಒಂದು ರಾಷ್ಟ್ರ ಅಥವಾ ಸಮಾಜದ ಸಮಗ್ರ ಅಭಿವೃದ್ಧಿಯಾಗಬೇಕಾದರೆ ಅಲ್ಲಿ ಸಾಮಾಜಿಕ, ಆರ್ಥಿಕ ಹಾಗೂ ಆರೋಗ್ಯದ ಸ್ಥಿತಿಗತಿಗಳನ್ನೂ ಪರಿಗಣಿಸಲಾಗುತ್ತದೆ. ಇವನ್ನೇ ಪ್ರಗತಿಯ ಮಾನದಂಡವೆಂದು ಹೇಳಲಾಗುತ್ತದೆ. ಈ ನಿಟ್ಟಿನಲ್ಲಿ 1971ರ ಜನಗಣತಿಯ ವರದಿಯ ಪ್ರಕಾರ "ರಾಷ್ಟ್ರೀಯ ಆರೋಗ್ಯಕ್ಕಾಗಿ ಮಾಡುವ ಎಲ್ಲ ವೆಚ್ಚಗಳೂ ಇನ್ನೊಂದು ರೀತಿಯ ಬಂಡವಾಳವೆಂದೇ ಪರಿಗಣಿಸಲಾಗುತ್ತದೆ".

ಆರೋಗ್ಯವೆಂದರೇನು?

ರೋಗಮುಕ್ತ ಅಥವಾ ರೋಗರಹಿತಸ್ಥಿತಿಯನ್ನು ಆರೋಗ್ಯವೆಂದು ಹೇಳಬಹುದು. ಆದರೆ ವಿಶ್ವ ಆರೋಗ್ಯ ಸಂಸ್ಥೆಯ ವರದಿಯ ಪ್ರಕಾರ ಶಾರರೀಕ, ಮಾನಸಿಕ ಹಾಗೂ ಸಾಮಾಜಿಕ ಅಂಶಗಳನ್ನು ಒಳಗೊಂಡಂತೆ ಸುಭದ್ರವಾಗಿದ್ದರೆ ಅದನ್ನು ಆರೋಗ್ಯವಂತ ಸ್ವಸ್ಥ ಸಮಾಜ ಎಂದು ಕರೆಯಲಾಗುತ್ತದೆ.

ಆದರೆ ಇಲ್ಲಿ ಗಮನಿಸಬೇಕಾದ ಇನ್ನೊಂದು ಪ್ರಮುಖ ಅಂಶವೆಂದರೆ ಸಾಮುದಾಯಿಕ ಆರೋಗ್ಯ ವೈಯಕ್ತಿಕ ಆರೋಗ್ಯಕ್ಕಿಂತ ಭಿನ್ನವಾಗಿರುತ್ತದೆ. ವೈಯಕ್ತಿಕ ಆರೋಗ್ಯವು ರೋಗ ರುಜಿನೆಗಳಿಗೆ, ದೈಹಿಕ ಮಾನಸಿಕ ಸ್ಥಿತಿಗೆ ಸಂಬಂಧಿಸಿದ್ದಾಗಿರುತ್ತದೆ. ಸಾಮುದಾಯಿಕ ಆರೋಗ್ಯ ಈ ರೋಗಗಳನ್ನು ತಡೆಯುವಲ್ಲಿ ಆದ ಆವಿಷ್ಕಾರಗಳು, ವಿಜ್ಞಾನ ತಂತ್ರಜ್ಞಾನ, ಅಧ್ಯಯನ ಮುಂತಾದವುಗಳನ್ನು ಒಳಗೊಂಡಿರುತ್ತದೆ.

"ಆರೋಗ್ಯವರ್ಧನೆ, ಆಯುಷ್ಯದಲ್ಲಿ ಹೆಚ್ಚಳ, ಸಾವುನ್ನು ಮುಂದೂಡುವುದು ಸಂಘಟನಾತ್ಮಕ ಯತ್ನಗಳ ಮೂಲಕ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವುದು ಸಾರ್ವಜನಿಕ ಆರೋಗ್ಯವಾಗಿದೆ. ವಿಜ್ಞಾನ ತಂತ್ರಜ್ಞಾನ, ಪ್ರಯೋಗಗಳು ಉತ್ತಮ ಬದುಕಿಗೆ ಪೂರಕವಾಗುವಂತೆ ಬಳಸುವುದೇ ಸಾರ್ವಜನಿಕ ಆರೋಗ್ಯವಾಗಿದೆ" ಎಂದು ಐತಿಹಾಸಿಕ ಹತ್ಯೆಗಳು ಎಂಬ ಕೃತಿಯಲ್ಲಿ ವಿನ್‌ಸ್ಲೋ ರಾವ್ 1968ರಲ್ಲಿ ಹೇಳಿದ್ದಾರೆ.

ಅವರ ಪ್ರಕಾರ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟುವುದು, ಪ್ರತಿಯೊಬ್ಬರಿಗೂ ಆರೋಗ್ಯ ಶಿಕ್ಷಣ, ಮುಂಜಾಗೃತಾ ಕ್ರಮಗಳು, ಪೂರ್ವ ಸಿದ್ಧತೆಗಳು ಮುಂತಾದವುಗಳನ್ನು ನೀಡುವುದು. ವೈದ್ಯಕೀಯ ಸಹಾಯ, ಶುಶ್ರೂಷೆಗೆ ಅಗತ್ಯದ ಸೌಲಭ್ಯಗಳು, ಸಾಮಾಜಿಕ ಹಕ್ಕುಗಳು, ಆರೋಗ್ಯದ ಹಕ್ಕು ಮುಂತಾದವುಗಳ ಬಗೆಗೆ ಸಂಪೂರ್ಣ ಮಾಹಿತಿ ನೀಡುವುದೂ ಆರೋಗ್ಯದ ಅಡಿಯಲ್ಲಿಯೇ ಬರುತ್ತದೆ.

ಸಾರ್ವಜನಿಕ ಆರೋಗ್ಯ ಗಂಡುಮಕ್ಕಳು, ಹೆಣ್ಣು ಮಕ್ಕಳು ಮತ್ತು ಮಕ್ಕಳ ದೀರ್ಘಾಯುಷ್ಯದ ಬಗೆಗೆ ಈ ಕೃತಿಯಲ್ಲಿ ಚರ್ಚಿಸಲಾಗಿದೆ. ಗರ್ಭಿಣಿಯರಿಗೆ ಅನುಕೂಲಗಳನ್ನು ನೀಡುವುದು ಮತ್ತು ವಿಶೇಷ ಆರೈಕೆ ಸುರಕ್ಷಿತ ಹೆರಿಗೆ, ಹಸುಳೆಗಳ ಮರಣದರದಲ್ಲಿ ಇಳಿತ ಮುಂತಾದವುಗಳೆಲ್ಲವನ್ನೂ ಮಾಡುವುದೇ ಆರೋಗ್ಯ ನೀತಿಯಾಗಿದೆ.

ಆರೋಗ್ಯ ಮತ್ತು ಸ್ತ್ರೀಯರ ಸಬಲೀಕರಣ:

ಸ್ತ್ರೀಯರ ಆರೋಗ್ಯವೆಂದರೆ ಶಾರರೀಕ ಜೈವಿಕ ಮತ್ತು ಮಾನಸಿಕ ಶಕ್ತಿಯ ಒಟ್ಟಾರೆ ಸ್ವಾಸ್ಥ್ಯವೆಂದು ಅರ್ಥ. ಆರೋಗ್ಯವಂತ ಮಹಿಳೆಯೇ ಒಂದು ಸಮಾಜದ ಸಂಪತ್ತು ಎಂದೂ ಹೇಳಬಹದಾಗಿದೆ. ಕಾಯಿಲೆ ಕಸಾಲೆಗಳಿಂದ ನರಳಿದರೆ ಆ ಮನೆಯ ಸುವಾರ್ತೆ ನಿಭಾಯಿಸುವುದೇ ಕಷ್ಟವಾಗುತ್ತದೆ. ಮನೆಯ ಒಳ-ಹೊರಗೆ ದುಡಿಯಲು ಸದೃಢ ಆರೋಗ್ಯವುಳ್ಳ ಮಹಿಳೆಯರಿಂದ ಮಾತ್ರ ಸಾಧ್ಯ. ಆರೋಗ್ಯವಂತ ಮಹಿಳೆಗೆ ಆರೋಗ್ಯವಂತ ಮಕ್ಕಳು ಹೆರುವ ಶಕ್ತಿ ಇರುತ್ತದೆ. ಮತ್ತು ಹೆರುವ ಮಕ್ಕಳೆಲ್ಲ ಆರೋಗ್ಯವಂತವಾಗಿರುತ್ತವೆ. ಈ ದೃಷ್ಟಿಯಿಂದ ಒಂದು ತಲೆಮಾರಿನಿಂದ ಇನ್ನೊಂದು ಸದೃಢ ತಲೆಮಾರಿಗೆ ಸಂಪರ್ಕ ಸೇತು ಆರೋಗ್ಯವಂತ ಮಹಿಳೆಯೇ ಆಗಿದ್ದಾಳೆ.

ಒಂದು ಪೀಳಿಗೆಯು ತಾಯಿಯ ಆರೋಗ್ಯವನ್ನೇ ಸಂಪೂರ್ಣವಾಗಿ ಅವಲಂಬಿಸಿರುತ್ತದೆ. ಮಹಿಳಾ ಆರೋಗ್ಯದಿಂದಲೇ ಸಮಾಜದ ಸಾಮಾಜಿಕ, ಆರ್ಥಿಕ ಹಾಗೂ ಸ್ಥಿತಿಗತಿಗಳನ್ನು ನಿರ್ಣಯಿಸಬಹುದು ಎಂದು ಹೇಳಲಾಗುತ್ತದೆ.

"ಕೊಕ್ಕೊ" ಅವರ ಪ್ರಕಾರ ಸಬಲೀಕರಣವೆಂದರೆ ಮಾನವನ ಜೀವನವನ್ನು ನಿಯಂತ್ರಿಸುವ ಅಂಶಗಳ ಪ್ರಕ್ರಿಯೆಯನ್ನು ಅರಿಯುವುದಾಗಿದೆ. ಜೀವನ ಮತ್ತು ಜೀವನಮಟ್ಟವನ್ನು ಅರಿಯುವಲ್ಲಿ ಆರೋಗ್ಯವನ್ನೂ ಒಂದು ಮಾನದಂಡವಾಗಿ ಪರಿಗಣಿಸಲಾಗುತ್ತದೆ. ವೈಯಕ್ತಿಕ ಆರೋಗ್ಯ, ಸಾಮಾಜಿಕ, ಸಾಮುದಾಯಿಕ ಆರೋಗ್ಯವನ್ನೂ ಇದೇ ಕಾರಣದಿಂದ ಜೀವನ ಮಟ್ಟ ನಿಯಂತ್ರಣದ ಒಂದು ಅಂಶವೆಂದು ಪರಿಗಣಿಸಲಾಗಿದೆ.

ಈ ಅಧ್ಯಾಯದ ಉದ್ದೇಶಗಳು:

ಈ ಅಧ್ಯಾಯದ ಉದ್ದೇಶಗಳನ್ನು ಸಂಕ್ಷಿಪ್ತವಾಗಿ ಈ ರೀತಿಯಾಗಿ ವಿಂಗಡಿಸಬಹುದಾಗಿದೆ.

1. ವೈಯಕ್ತಿಕ ನೈರ್ಮಲ್ಯ, ಆರೋಗ್ಯನಿಯಮಗಳ ಬಗೆಗೆ ಹೇಳಿಕೆದಾರರಿಗೆ ಇರುವ ಅರಿವು.
2. ಹಸುಕೂಸು ಹಾಗೂ ಮಕ್ಕಳ ಆರೋಗ್ಯಕ್ಕೆ ಅಗತ್ಯವಿರುವ ಎಚ್ಚರಿಕೆಯ ಮಾಹಿತಿ ಇದೆಯೇ?
3. ಗರ್ಭಿಣಿಯರ ನಿಯಮಿತ ತಪಾಸಣೆಯನ್ನು ಹೇಳಿಕೆದಾರರು ಅದೆಷ್ಟು ಗಂಭೀರವಾಗಿ ಪರಿಗಣಿಸಿದ್ದಾರೆ? ಈ ಎಲ್ಲ ಅಂಶಗಳನ್ನು ಅಧ್ಯಯನಿಸುವುದೇ ಈ ಅಧ್ಯಾಯದ ಉದ್ದೇಶಗಳಾಗಿವೆ.
4. ಕನಿಷ್ಠಮಟ್ಟದ ಮಾಹಿತಿ, ಅಥವಾ ಅವರಲ್ಲಿರಬಹುದಾದ ನಂಬಿಕೆಗಳ ಮೇಲೆ ಅಧ್ಯಾಯ ಬೆಳಕು ಚೆಲ್ಲಿದೆ.

ಭಾರತೀಯ ಮಹಿಳೆಯ ಆರೋಗ್ಯ ಸ್ಥಿತಿ:

ಭಾರತೀಯ ಮಹಿಳಾ ಆರೋಗ್ಯದ ಬಗೆಗೆ ಹೆಚ್ಚಿನ ಗಮನ ನೀಡುವುದು ಕಂಡು ಬಂದಿಲ್ಲ. ಋತುಮತಿಯಾದರೆ ಅದನ್ನು ಶಾಪವೆಂದು ಪರಿಗಣಿಸಲಾಗುತ್ತದೆ. ರೋಗರುಜಿನೆಗಳಿಗೆ ದೈವದ ಕೋಪವೆಂದು ಬಗೆಯುತ್ತಾರೆ. ಹೊರತು ಇದು ಅಸ್ವಚ್ಛತೆಯಿಂದ ಆದುದು, ನೈರ್ಮಲ್ಯವಿಲ್ಲದೇ ಬಂದಿರಬಹುದು ಎಂಬ ಪರಿಜ್ಞಾನ ಕಡಿಮೆ. ಇದಕ್ಕೆ ಅಜ್ಞಾನವೂ ಕಾರಣವೆಂದು ಹೇಳಬಹುದಾಗಿದೆ. ಅಪೌಷ್ಟಿಕ ಆಹಾರ, ಹೆಚ್ಚುವರಿ ಕೆಲಸಗಳು, ಮೇಲಿಂದ ಮೇಲೆ ಹೆರಿಗೆ, ಸಣ್ಣ ವಯಸ್ಸಿನಲ್ಲಿಯೇ ಮದುವೆ_ಇವೆಲ್ಲ ಕಾರಣಗಳಿಂದ ಮಹಿಳಾ ಆರೋಗ್ಯದ ಸ್ಥಿತಿ ಉನ್ನತ ಮಟ್ಟದಲ್ಲಿದೆ ಎಂದು ಹೇಳಲು ಆಗುವುದೇ ಇಲ್ಲ. ಅಷ್ಟಕ್ಕೂ ಆರೋಗ್ಯವೆಂದರೆ ಕೇವಲ ದೈಹಿಕವಾಗಿ

ಸದೃಢರಾಗುವುದು ಅಷ್ಟೇ ಅಲ್ಲ. ಮಾನಸಿಕವಾಗಿಯೂ ಸದೃಢವಾಗಿರಬೇಕು. ಆದರೆ ಕೆಳವರ್ಗದ, ದಮನಿತ ವರ್ಗವನ್ನೇ ಪ್ರತಿಭಿಂಬಿಸುವ ಮಹಿಳೆ ಕೆಲವೊಮ್ಮೆ ಮಾನಸಿಕ ಅಭದ್ರ ಭಾವಗಳನ್ನು ಅನುಭವಿಸುತ್ತಿರುತ್ತಾಳೆ.

ಇದಕ್ಕೆ ಮುಖ್ಯ ಕಾರಣ ಮಹಿಳೆಯ ಆರೋಗ್ಯಕ್ಕಾಗಿ ವೆಚ್ಚ ಮಾಡಬೇಕು ಎಂಬ ಮನೋಭಾವದ ಕೊರತೆ. ಗಂಡು ಹೆಣ್ಣಿನ ನಡುವೆ ತಾರತಮ್ಯ ನೀತಿ ಮುಂತಾದವುಗಳಿಂದ ಅವಳ ಆರೋಗ್ಯವನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಕುಂಕುಂ ಮಾರ್ವಹ 1983 ಹೊಸ ಸಹಸ್ರಮಾನದಲ್ಲಿ ಮಹಿಳಾ ಆರೋಗ್ಯ ಎಂಬ ಲೇಖನದಲ್ಲಿ ಈ ಬಗೆಗೆ ಇನ್ನಷ್ಟು ಬೆಳಕು ಚೆಲ್ಲುತ್ತಾರೆ. ಲಿಂಗಾನುಪಾತವೂ ಮಹಿಳಾ ಆರೋಗ್ಯವನು ಸೂಚಿಸುತ್ತದೆ.

1991ರ ಜನ ಗಣತಿಯ ಪ್ರಕಾರ ಪ್ರತಿ ಸಾವಿರ ಗಂಡು ಮಕ್ಕಳಿಗೆ ಕೇವಲ 927 ಹೆಣ್ಣುಮಕ್ಕಳು ಇರುವುದು ತಿಳಿದು ಬರುತ್ತದೆ. ಈ ವ್ಯತ್ಯಾಸ 2001 ಜನಗಣತಿಯ ಹೊತ್ತಿಗೆ 933ಕ್ಕೆ ಏರಿದೆ. ಆದರೆ ಅದೂ ಸಹ ಹೇಳಿಕೊಳ್ಳುವಂಥ ಬೆಳವಣಿಗೆಯೇನೂ ಅಲ್ಲ. ಈ ಕಡಿಮೆ ಅನುಪಾತಕ್ಕೆ ಸಾಮಾಜಿಕ ಸಮಸ್ಯೆಗಳೇ ಕಾರಣ ಎನ್ನಬಹುದಾಗಿದೆ.

ಭ್ರೂಣ ಹತ್ಯೆ, ಅತ್ಯಾಚಾರ, ಶೋಷಣೆ, ವರದಕ್ಷಿಣೆ ಮುಂತಾದ ಕಾರಣಗಳಿಂದ ಹೆಣ್ಣುಮಕ್ಕಳ ಜನಸಂಖ್ಯೆ ಗಣನೀಯ ಪ್ರಮಾಣದಲ್ಲಿ ಇಳಿಯಲು ಕಾರಣವಾಗಿದೆ. ಇದಲ್ಲದೆ ಮಹಿಳಾ ಮರಣದರವು ಹೆರಿಗೆ ಸಮಯ, ಹೆರಿಗೆ ಪೂರ್ವ, ಹೆರಿಗೆ ಉತ್ತರದ ಅವಧಿಯಲ್ಲಿ ಹೆಚ್ಚಿರುವುದು ಗಮನಾರ್ಹವಾಗಿದೆ. ಇದಕ್ಕೆ ವೈದ್ಯಕೀಯ ಸೌಲಭ್ಯದ ಕೊರತೆ, ಅಜ್ಞಾನ ಅಥವಾ ರಕ್ತಹೀನರಾಗಿರುವುದು ಮುಂತಾದ ಕಾರಣಗಳನ್ನು ಹೆಸರಿಸಬಹುದಾಗಿದೆ.

ಪ್ರಾಚೀನ ಭಾರತದಲ್ಲಿ ಆರೋಗ್ಯ ಸೇವೆಗಳು:

ಪ್ರಾಚೀನ ಭಾರತದಲ್ಲಿ ಗ್ರಾಮೀಣ ಜನರ ಬದುಕಿನಲ್ಲಿ ಆರೋಗ್ಯಕ್ಕೆ ಅಂಥ ಮಹತ್ವದ ಪರಿಕಲ್ಪನೆಯನ್ನೇನೂ ನೀಡಿರಲಿಲ್ಲ. ವೈದ್ಯಕೀಯ ಸೇವೆಯೆಂದರೆ ಜಾನಪದ ವೈದ್ಯ ಮಾತ್ರವಾಗಿತ್ತು. ಬದುಕನ್ನು ಸರಳವಾಗಿ ಸ್ವೀಕರಿಸುತ್ತಿದ್ದರು. ರೋಗ ರುಜಿನಗಳನ್ನು ಕೆಲವೊಮ್ಮೆ ಕರ್ಮದ ಫಲವೆಂದು ಭಾವಿಸುತ್ತಿದ್ದರು. ಇದೇ ಕಾರಣಕ್ಕೆ ಮರಣದರ ಹೆಚ್ಚಾಗಿತ್ತು. "ಸಾಮ್ರಾಟ್ ಅಶೋಕನ ಮಗ ರಾಹುಲ್ ವೈದ್ಯಕೀಯ ಸೇವೆಗಳನ್ನು, ಆರೋಗ್ಯ ಸೇವೆಗಳನ್ನು ಜನರಿಗೆ ನೀಡಲು ಯತ್ನಿಸಿದ ಎಂಬುದಕ್ಕೆ ಹಲವು ಪುರಾವೆಗಳಿವೆ". ಆದರೆ ಕಾಲ ಕ್ರಮೇಣ ವೈದ್ಯಕೀಯ ವೆಂಬುದು ಭಾವನಾತ್ಮಕ ನಂಬಿಕೆಗಳ ಪ್ರಶ್ನೆಯಾಗಿ ಮಾರ್ಪಾಟಾಯಿತು. ಕರ್ಮಠ ಪುರೋಹಿತ ವರ್ಗದ ಕಪಿಮುಷ್ಠಿಯಲ್ಲಿ ಸಿಲುಕಿತು. ಈ ಕಾರಣದಿಂದಲೇ ಜನ ಸಾಮಾನ್ಯರು ಆರೋಗ್ಯ ಸಮಸ್ಯೆಗಳನ್ನು ದೈವದ ಕೋಪವೆಂದು ಭಾವಿಸತೊಡಗಿದರು. ಅಲ್ಲಿಯವರೆಗೂ ವೈದ್ಯಕೀಯ ವಿಜ್ಞಾನ ಪದ್ಧತಿಯಲ್ಲಿ

ಇದ್ದುದು ಆಚರಣೆಯಾಗಿ ಬದಲಾವಣೆ ಹೊಂದಿತು. ಪರಿಣಾಮವೇ ಸಾಂಕ್ರಾಮಿಕ ರೋಗಗಳು, ಮತ್ತು ಮರಣದರದಲ್ಲಿಯ ಹೆಚ್ಚಳ ಎಂದು ಹೇಳಬಹುದಾಗಿದೆ.

ಬ್ರಿಟಿಷ್ ಆಳ್ವಿಕೆಯ ದಿನಗಳಲ್ಲಿ ಆರೋಗ್ಯ ಸೇವೆಗಳು:

ಭಾರತೀಯ ಇತಿಹಾಸದಲ್ಲಿ ಮೊದಲ ಬಾರಿಗೆ ವ್ಯವಸ್ಥಿತ ಆರೋಗ್ಯ ಸೇವೆಯನ್ನು ಜಾರಿಗೆ ತಂದವರೇ ಬ್ರಿಟಿಷರು ಎಂದರೆ ಅತಿಶಯೋಕ್ತಿಯಾಗದು. ಅವರು 1864ರಲ್ಲಿಯೇ ಹೆಲ್ತ್ ಕಮಿಷನ್ ಅನ್ನು ಸ್ಥಾಪಿಸಿದರು. ತಮ್ಮ ಆಡಳಿತ ವರ್ಗ, ಆಡಳಿತ ಸಿಬ್ಬಂದಿಗೆ ಅಷ್ಟೇ ಅಲ್ಲ, ಸಾರ್ವಜನಿಕರಿಗೂ ಸಾಮಾನ್ಯರಿಗೂ ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಆರಂಭಿಸಿದರು. ಈ ಕಾಲದಲ್ಲಿ ಮಿಷನರಿಗಳ ಪಾತ್ರವೂ ಹಿರಿದಾಗಿದೆ.

1872ರಲ್ಲಿ ಮದ್ರಾಸ್, ಕೋಲ್ಕತ್ತಾ ಹಾಗೂ ಮುಂಬೈನಲ್ಲಿ ಆರೋಗ್ಯ ಆಯುಕ್ತಾಲಯಗಳನ್ನು ಸ್ಥಾಪಿಸಿ ಜನನ ಮರಣ ನೋಂದಣಿಯನ್ನು ಕಡ್ಡಾಯಗೊಳಿಸಿದರು. ಮತ್ತು ಅದನ್ನು ಪ್ರಚಾರಕ್ಕೆ ತಂದರು. ಮುಂದೇ ಭಾರತೀಯ ಸರ್ಕಾರದ ಅನುಮತಿಯ ಮೇರೆಗೆ ಇದು ಶಾಸನವಾಗಿ ಬದಲಾವಣೆಯಾಯಿತು. ಇದರೊಂದಿಗೆ ಲಸಿಕಾ ಕಾನೂನು ಸಹ ಜಾರಿಗೆ ಬಂದಿತು.

ಸ್ವಾತಂತ್ರ್ಯದ ನಂತರ ಆರೋಗ್ಯ ಸೇವೆಗಳು:

ಭಾರತದ ಸ್ವಾತಂತ್ರ್ಯದ ನಂತರ ಆರೋಗ್ಯದ ಕ್ಷೇತ್ರದಲ್ಲಿ ಹೊಸ ಯುಗವೊಂದು ಆರಂಭವಾಯಿತೆಂದೇ ಹೇಳಬಹುದು. ಸಾಂಕ್ರಾಮಿಕ ರೋಗಗಳ ನಿಯಂತ್ರಣ, ಮಹಾಮಾರಿ ರೋಗಗಳ ನಿರ್ಮೂಲನೆ, ಜಾಗೃತಿ ಹಾಗೂ ಜನರಲ್ಲಿ ಅರಿವು ಮೂಡಿಸುವಂಥ ಕಾರ್ಯಕ್ರಮ ಗಳನ್ನು ಯೋಜಿಸಲಾಯಿತು.

ಭಾರತದ ಸಂವಿಧಾನದ ಅಡಿಯಲ್ಲಿ 246 ಪರಿಚ್ಛೇಧದ ಅಡಿಯಲ್ಲಿ ಆರೋಗ್ಯವನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ. ಕೇಂದ್ರ, ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶದಲ್ಲಿ ಆರೋಗ್ಯ ಸೇವೆಯನ್ನು ಸಲ್ಲಿಸಲೇಬೇಕು ಎಂದು ಹೇಳಲಾಯಿತು.

ಸಂವಿಧಾನ ಹಾಗೂ ರಾಷ್ಟ್ರೀಯ ಆರೋಗ್ಯ:

ರಾಜ್ಯ ನಿರ್ದೇಶಕ ತತ್ವಗಳಲ್ಲಿ ಸರ್ಕಾರವು ಕೆಲವು ವಿಷಯಗಳನ್ನು ಅತಿ ಸ್ಪಷ್ಟಪಡಿಸಿದೆ. ಆಡಳಿತವು ಜನರ ಆರೋಗ್ಯ ಸದೃಢವಾಗಿರುವಂತೆ ಹಾಗೂ ರೋಗಮುಕ್ತವಾಗಿರುವಂತೆ ನೋಡಲು ಸಾಧ್ಯವಿರುವ ಎಲ್ಲ ಕ್ರಮಗಳನ್ನೂ ಕೈಗೊಳ್ಳಬೇಕು. ಜನರ ಬಾಲ್ಯ ಶೋಷಣೆ ಮುಕ್ತವಾಗಿರಬೇಕು, ಹದಿಹರೆಯ ಸುರಕ್ಷಿತವಾಗಿರಬೇಕು, ಉದ್ಯೋಗಿಗಳಿಗೆ ಅನಾರೋಗ್ಯದ ವಿರುದ್ಧ ಸಾಕಷ್ಟು ಸೌಲಭ್ಯಗಳನ್ನು ನೀಡಿರಬೇಕು, ಪೌಷ್ಟಿಕಾಂಶಗಳ ಪೂರೈಕೆಯಾಗಬೇಕು, ಕೆಲಸದ ಸಂದರ್ಭದಲ್ಲಿ ಆರೋಗ್ಯಕರ ವಾತಾವರಣ ನೀಡಬೇಕು. ಹೆರಿಗೆಯ ಸಂದರ್ಭದಲ್ಲಿ ಎಲ್ಲ ಅನುಕೂಲಗಳನ್ನೂ

ಕಲ್ಪಿಸಬೇಕು. ಸ್ವಾಸ್ಥ್ಯ ಸದೃಢ ಆರೋಗ್ಯ ಖಚಿತವಾಗಿರಬೇಕು ಎಂದು ರಾಜ್ಯನೀತಿಯ ನಿರ್ದೇಶಕ ತತ್ವಗಳಲ್ಲಿ ಈ ಸೂಚನೆಗಳನ್ನು ಸ್ಪಷ್ಟಪಡಿಸಿದೆ.

ರಾಷ್ಟ್ರೀಯ ಆರೋಗ್ಯವನ್ನು ದೇಶದ ಸಾಮಾಜಿಕ ಹಾಗೂ ಆರ್ಥಿಕ ಅಭಿವೃದ್ಧಿಯ ಮಾನದಂಡವೆಂದು ಪರಿಗಣಿಸಲಾಗಿದೆ. ಆರ್ಥಿಕ ಪ್ರಗತಿ ಹಾಗೂ ಸಾಮುದಾಯಿಕ ಆರೋಗ್ಯವನ್ನು ಬೇರ್ಪಡಿಸದೇ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಆರೋಗ್ಯದ ಸ್ಥಿತಿ ಕೆಳಮಟ್ಟದಲ್ಲಿದ್ದರೆ ಸಾಮಾಜಿಕ ಹಾಗೂ ಆರ್ಥಿಕ ಪ್ರಗತಿಯು ಕುಂಠಿತವಾಗುತ್ತದೆ ಎಂದೇ ಪರಿಗಣಿಸಲಾಗುತ್ತದೆ.

ಆರೋಗ್ಯ ಸೇವೆಗಳ ವಿಸ್ತರಣೆ:

ಸಂವಿಧಾನಾತ್ಮಕ ಅಂಶಗಳಲ್ಲಿ ಆರೋಗ್ಯ ಸೇವೆಗಾಗಿ ಸರ್ಕಾರಕ್ಕೆ ಕೆಲವು ಸೂಚನೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಕೆಲವನ್ನು ಹೀಗೆ ಹೇಳಬಹುದಾಗಿದೆ.

1. ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ನೀರು ಪೂರೈಕೆ
2. ಗ್ರಾಮೀಣ ಜನಸಂಖ್ಯೆ ಆರೋಗ್ಯಕ್ಕೆ ಮುಂಜಾಗೃತಾ ಕ್ರಮಗಳು
3. ತಾಯಿ ಮತ್ತು ಮಕ್ಕಳಿಗೆ ಸಾರ್ವಜನಿಕ ಆರೋಗ್ಯ ಸೇವೆಗಳು
4. ಮಲೇರಿಯಾ, ಕಾಲರಾ, ಕ್ಷಯ, ದಡಾರ, ಕುಷ್ಠ ಮುಂತಾದ ಅಂಟುಜಾಡ್ಯಗಳ ಮೇಲೆ ಕಡಿವಾಣ

ಈ ಯೋಜನೆಗಳ ಆಧಾರದ ಮೇಲೆ ಆರೋಗ್ಯ ಸ್ಥಿತಿ ಬದಲಾವಣೆ ಹಾಗೂ ಸುಧಾರಣೆಗಾಗಿ ಪ್ರಯತ್ನಗಳನ್ನು ಕೈಗೊಳ್ಳಲಾಗಿದೆ. ಇದೇ ಕಾರಣಕ್ಕಾಗಿ ಆರೋಗ್ಯ ಕೇಂದ್ರಗಳು ಸಂಸ್ಥೆಗಳ ಸ್ಥಾಪನೆಗಳನ್ನು ಆರಂಭಿಸಲಾಯಿತು ಅದಕ್ಕೆ ತಕ್ಕಂತೆ ಆಡಳಿತ ವ್ಯವಸ್ಥೆಯಲ್ಲಿಯೂ ಬದಲಾವಣೆ ತರಲಾಗಿದೆ.

1951 ರಿಂದ 92ರವರೆಗೆ ಆರೋಗ್ಯ ಸೇವೆಗಳ ವಿಸ್ತರಣೆಯ ಪ್ರಕಾರಗಳನ್ನು ಈ ಮುಂದಿನ ಕೋಷ್ಟಕದಲ್ಲಿ ನೀಡಲಾಗಿದೆ.

ಕೋಷ್ಟಕ 5.4.1
ಆರೋಗ್ಯ ಸೇವಾ ಸೌಲಭ್ಯಗಳ ವಿವರ

ಕ್ರ ಸಂ.	ಮನೋಭಾವ	1951	1961	1971	1981	1991	1992
01.	ವೈದ್ಯಕೀಯ ಕಾಲೇಜುಗಳು	28	60	106	128	128	146
02.	ಆಸ್ಪತ್ರೆಗಳು	3694	3054	3862	6804	11174	--
03.	ಡಿಸ್ಪೆನ್ಸರಿಸ್	6515	9406	12180	15968	27431	--
04.	ಸಾಮುದಾಯಿಕ ಆರೋಗ್ಯ ಸೇವೆಗಳು	00	00	00	217	2071	2193
05.	ಪ್ರಾಥಮಿಕ ಆರೋಗ್ಯ ಸೇವೆಗಳು	725	2565	5112	5740	20450	20719

06	ಉಪ ಕೇಂದ್ರಗಳು	00	00	28489	51405	1309059	
07.	ಆಸ್ಪತ್ರೆ ಹಾಸಿಗೆ ಸಾಮರ್ಥ್ಯ	117178	230000	348655	569495	810548	---
08.	ವೈದ್ಯರು	61840	83756	151129	268712	394063	405253
09.	ದಂತವೈದ್ಯರು	3290	3582	5512	8648	11011	11300
10.	ಶುಶ್ರೂಷಕಿಯರು (ನರ್ಸು, ದಾಯಿ)	16550	35584	80620	154280	264504	---

(ಸಂಪನ್ಮೂಲ: ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅನುಷ್ಠಾನ)

ಈ ಕೋಷ್ಟಕದ ಪ್ರಕಾರ ಮೊದಲ ವರ್ಷದಲ್ಲಿ ವೈದ್ಯಕೀಯ ಸೇವೆ ಸೌಲಭ್ಯದಲ್ಲಿ ಮೊದಲ ವರ್ಷ 28 ವೈದ್ಯಕೀಯ ಕಾಲೇಜುಗಳಿದ್ದರೆ 1992 ರಲ್ಲಿ 146 ವೈದ್ಯಕೀಯ ಕಾಲೇಜುಗಳಿವೆ. ಪ್ರತಿ ವರ್ಷವು ಸರಾಸರಿ ಶೇ.2.8 ರಷ್ಟು ವೈದ್ಯಕೀಯ ಕಾಲೇಜಿನ ಸ್ಥಾಪನೆಯಾದಂತೆ ಇದೆ. ಆಸ್ಪತ್ರೆ, ವೈದ್ಯಕೀಯ ಸಿಬ್ಬಂದಿಯ ನೇಮಕ ಎಲ್ಲವೂ ಏರುಗತಿಯಲ್ಲಿರುವುದು ಇಲ್ಲಿ ಎದ್ದು ಕಾಣುತ್ತದೆ. ಸಾಮುದಾಯಿಕ ಆರೋಗ್ಯಕ್ಕಾಗಿ ಸಾಮಾನ್ಯ ಜನರಿಗೆ ತಲುಪಲು ಆರೋಗ್ಯ ಸೇವೆಗಳನ್ನು ಸಮರೋಪಾದಿಯಲ್ಲಿ ಆರಂಭಿಸಿದ್ದಾರೆ.

ಇದಕ್ಕೆ ತಕ್ಕಂತೆ ಆಸ್ಪತ್ರೆಗಳ ಸಂಖ್ಯೆಯಲ್ಲಿಯೂ ಗಣನೀಯ ಪ್ರಮಾಣದ ಆಸ್ಪತ್ರೆಗಳ ಸಂಖ್ಯೆಯಲ್ಲಿ 7 ಪಟ್ಟು ಹೆಚ್ಚಳವಾಗಿದೆ. ಅಂದರೆ 1951 ರಲ್ಲಿ 3694 ಆಸ್ಪತ್ರೆಗಳಿದ್ದವು. 91 ರಲ್ಲಿ 11174 ನಷ್ಟಾದವು. ಈ ಕೋಷ್ಟಕದಲ್ಲಿರುವಂತೆ ಸಾಮುದಾಯಿಕ ಆರೋಗ್ಯ ಸೇವೆಯ ಪರಿಕಲ್ಪನೆ ಆರಂಭವಾಗಿದ್ದೇ 1981 ರಲ್ಲಿ. 217 ಸಾಮುದಾಯಿಕ ಆರೋಗ್ಯ ಕೇಂದ್ರಗಳಿದ್ದವು. ಆದರೆ 92ರಲ್ಲಿ ಇವುಗಳ ಸಂಖ್ಯೆ 2193 ಗೆ ತಲುಪಿತು. ಪ್ರಾಥಮಿಕ ಆರೋಗ್ಯ ಸೇವಾ ಕೇಂದ್ರಗಳ ಸಂಖ್ಯೆಯೂ 20719 ಕ್ಕೆ ಏರಿತು. ಉಪಕೇಂದ್ರಗಳ ಸಂಖ್ಯೆ ಲಕ್ಷದ ಮಿತಿ ದಾಟಿ 131414 ರಷ್ಟಾಯಿತು. ಇದಕ್ಕೆ ತಕ್ಕಂತೆ ವೈದ್ಯರ ಸಂಖ್ಯೆ ಶುಶ್ರೂಷಕಿಯರ ಸಂಖ್ಯೆಯೂ 91 ರವೇಳೆಗೆ 2 ಲಕ್ಷ 64 ಸಾವಿರದ ಗಡಿ ದಾಟಿದೆ.

ಈ ಕೋಷ್ಟಕವು ನಾಲ್ಕು ದಶಕಗಳಲ್ಲಿ ಭಾರತೀಯ ಸರ್ಕಾರವು ಆರೋಗ್ಯ ಸೇವೆಗೆಂದು ರೂಪಿಸಿದ ಯೋಜನೆಗಳನ್ನು ಸಂಕ್ಷಿಪ್ತದಲ್ಲಿಯೇ ತಿಳಿಸುತ್ತದೆ. ಆರೋಗ್ಯ ಸೇವೆಯನ್ನು ಗಂಭೀರವಾಗಿ ಪರಿಗಣಿಸಿರುವುದು ಈ ಸಂಖ್ಯೆಗಳಿಂದ ತಿಳಿದುಬರುತ್ತದೆ.

ಈ ಎಲ್ಲ ಕಾರಣಗಳಿಂದಲೇ ಸ್ವಾತಂತ್ರ್ಯದ ನಂತರ ಭಾರತದ ಜನಸಂಖ್ಯೆಯೂ ಗಣನೀಯ ಪ್ರಮಾಣದಲ್ಲಿ ಹೆಚ್ಚಾಯಿತು. ಆರೋಗ್ಯ ಸೇವೆಗಾಗಿ ನೀಡಿದ ಯೋಜನೆಗಳಿಂದಾಗಿ ಜನರಲ್ಲಿ ಮಾಹಿತಿ, ಜನಜಾಗೃತಿ ಮುಂತಾದವು ಎಲ್ಲವೂ ಬೆಳೆದು ಮರಣದರದ ಮೇಲೆ ನಿಯಂತ್ರಣ ಸಾಧಿಸುವಂತಾಯಿತು. ಆದರೆ ಇದಕ್ಕೆ ತಕ್ಕಂತೆ ಜನನ ದರದ ಮೇಲೆ ಕಡಿವಾಣ ಹಾಕಲು ಆಗಲಿಲ್ಲ.

ಕಾರಣ ಧಾರ್ಮಿಕ ಹಾಗೂ ಸಾಮಾಜಿಕ ಮೌಲ್ಯಗಳು ಜನನ ನಿಯಂತ್ರಣವನ್ನು ನಿರ್ಧರಿಸುವಂತಾಯಿತು. ಈ ಕಾರಣದಿಂದ ಭಾರತದ ಜನಸಂಖ್ಯೆ ಹೆಚ್ಚಾಯಿತು. ಶಿಕ್ಷಣ, ಮಾಹಿತಿ, ರಸ್ತೆ ನಿರ್ಮಾಣ, ಸಂಪರ್ಕ ಸಾಧನ, ಸಂವಹನ ಮಾಧ್ಯಮ ಮುಂತಾದವು ಆರೋಗ್ಯ ಸೇವೆಯನ್ನು ಪಡೆಯುವಲ್ಲಿ ಗುರುತರ ಸಹಾಯ ಮಾಡಿದವು.

ಗ್ರಾಮೀಣ ಆರೋಗ್ಯ ಸೇವೆಗಳು:

ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಆರೋಗ್ಯ ಸೇವೆಗಳ ಅಗತ್ಯದ ಮತ್ತು ಸಮನ್ವಯಗೊಳಿಸಲಾದ ಅಂಶವಾಗಿ ಸೇರ್ಪಡೆ ಮಾಡಲಾಗಿದೆ. ಗ್ರಾಮೀಣ ಅಭಿವೃದ್ಧಿಯ ಪರಿಕಲ್ಪನೆಯಲ್ಲಿ ಸಾಮಾಜಿಕ ಹಾಗೂ ಆರ್ಥಿಕ ಚಟುವಟಿಕೆಗಳಲ್ಲಿ ಸಾಮಾನ್ಯ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಿಕೆ ಎಂಬುದನ್ನು ಸ್ಪಷ್ಟಪಡಿಸಲಾಗಿದೆ. ಹಾಗೆಯೇ ಸಾಮುದಾಯಿಕ ಕಾರ್ಯಗಳಲ್ಲಿ ಇದನ್ನೊಂದು ಸಮಗ್ರ ಅಭಿವೃದ್ಧಿಪರ ಯೋಜನೆಯೆಂದು ಪರಿಗಣಿಸಿರುವುದರಿಂದ ಸಾಮಾಜಿಕ ಹಾಗೂ ಆರ್ಥಿಕ ಸಮಗ್ರ ಅಭಿವೃದ್ಧಿಯಲ್ಲಿ ಆರೋಗ್ಯ ಸೇವೆಯನ್ನೂ ಸಮನ್ವಯಗೊಳಿಸಲಾಯಿತು. ಕುಟುಂಬ ಕಲ್ಯಾಣ, ಜನನ ನಿಯಂತ್ರಣ ಮುಂತಾದ ವಿಷಯಗಳನ್ನೂ ಆರೋಗ್ಯ ಸೇವೆಯ ವ್ಯಾಪ್ತಿಯಲ್ಲಿಯೇ ಅಳವಡಿಸಲಾಯಿತು.

ಪ್ರಾಥಮಿಕ ಆರೋಗ್ಯ ಸೇವೆಗಳು:

ಆರೋಗ್ಯ ಸಮೀಕ್ಷೆಹಾಗೂ ಅಭಿವೃದ್ಧಿ ಸಮಿತಿಯ ನಿರ್ದೇಶನದಂತೆ ಗ್ರಾಮೀಣ ಅಭಿವೃದ್ಧಿಯಲ್ಲಿ ಗ್ರಾಮೀಣ ಆರೋಗ್ಯ ಸೇವೆಗಳನ್ನು ಅಳವಡಿಸಲಾಗಿದೆ. (1946 ಭೋರೆ ಸಮಿತಿ) ಪ್ರತಿ ಸಾಮುದಾಯಿಕ ಘಟಕದಲ್ಲೂ ಒಂದೊಂದು ಪ್ರಾಥಮಿಕ ಕೇಂದ್ರವನ್ನು ತೆರೆಯಲು ಭೋರೆ ಸಮಿತಿ ಶಿಫಾರಸ್ಸು ಮಾಡಿತು. ಪ್ರಾಥಮಿಕ ಆರೋಗ್ಯ ಕೇಂದ್ರಗಳು ವೈದ್ಯಕೀಯ ಸೇವೆಗಳನ್ನು ಸುರಕ್ಷಿತ ಹೆರಿಗೆ, ಕುಟುಂಬ ಕಲ್ಯಾಣ, ಕುಟುಂಬ ಯೋಜನೆ, ನೈರ್ಮಲ್ಯ, ಸ್ವಚ್ಛತೆ ಮುಂತಾದ ವಿಷಯಗಳನ್ನು ಇದರ ಕಾರ್ಯವ್ಯಾಪ್ತಿಗೆ ಅಳವಡಿಸಲಾಯಿತು. ಇದಲ್ಲದೆ ಅಂಟುಜಾಡ್ಯ, ಸಾಂಕ್ರಾಮಿಕ ರೋಗಗಳ ವಿರುದ್ಧ ಮಾಹಿತಿ ಒದಗಿಸುವ ಲಸಿಕೆಗಳನ್ನು ನೀಡುವ ಕೆಲಸಗಳನ್ನೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಹಿಸಿಕೊಡಲಾಯಿತು.

ಸಮಗ್ರ ಶಿಶು ಅಭಿವೃದ್ಧಿ ಸೇವಾ ಯೋಜನೆ:

ಆರೋಗ್ಯವಂತ ಮಕ್ಕಳು ದೇಶದ ಮಾನವ ಸಂಪನ್ಮೂಲವಾಗಲು ಸಾಧ್ಯ. ಒಂದು ದೇಶದ ಅಭಿವೃದ್ಧಿ ಆ ದೇಶದ ಮಾನವ ಸಂಪನ್ಮೂಲ, ಕೌಶಲ್ಯಪೂರ್ಣ ಮಾನವ ಸಂಪನ್ಮೂಲ, ಕ್ರಿಯಾತ್ಮಕ ಮಾನವ ಸಂಪನ್ಮೂಲವನ್ನು ಅವಲಂಬಿಸಿರುತ್ತದೆ. ಈ ಕಾರಣಕ್ಕೆ ಮಾನವ ಸಂಪನ್ಮೂಲದ ಅಭಿವೃದ್ಧಿಗಾಗಿ ಮಕ್ಕಳ ಆರೋಗ್ಯಕ್ಕೆ ಹೆಚ್ಚಿನ ಮಹತ್ವ ನೀಡಲಾಯಿತು. ಮಗುವಿನ ಸಮಗ್ರ ಆರೋಗ್ಯಕ್ಕಾಗಿ

ಕೇಂದ್ರೀಯ ಸಮಾಜ ಕಲ್ಯಾಣ ಮಂಡಳಿಯನ್ನು 1953ರಲ್ಲಿ ಸ್ಥಾಪಿಸಲಾಯಿತು. ಕಲ್ಯಾಣದ ಯೋಜನೆಗಳ ಮೂಲಕ ಗ್ರಾಮೀಣ ವಿಭಾಗದಲ್ಲೂ ಈ ಯೋಜನೆಗಳು ತಲುಪವಂತೆ ಮಾಡಲು ಯತ್ನಿಸಿದ ಮೊದಲ ವ್ಯವಸ್ಥಿತ ಪ್ರಯತ್ನ 'ಕುಟುಂಬ ಕಲ್ಯಾಣ' ಇಲಾಖೆಯ ಸ್ಥಾಪನೆಯಿಂದ ಆಯಿತು.

ಮೊದಲ ಸಲ ದೇಶದ ಮಹಿಳೆ ಮತ್ತು ಮಕ್ಕಳನ್ನು ಗಮನದಲ್ಲಿರಿಸಿಕೊಂಡು ಅವರ ಸಮಗ್ರ ಆರೋಗ್ಯಕ್ಕಾಗಿಯೇ ಒಂದು ಇಲಾಖೆಯ ಆರಂಭ ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ ಮೊದಲ ಹೆಜ್ಜೆ ಇರಿಸುವಂತಾಯಿತು.

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಗುರಿಗಳು:

1. ಹುಟ್ಟಿನಿಂದ 6-ವರ್ಷಗಳ ವಯೋಮಿತಿಯೊಳಗಿನ ಮಕ್ಕಳ ಆರೋಗ್ಯದ ಗುಣಮಟ್ಟ ಕಾಪಾಡುವುದು ಹಾಗೂ ಪೌಷ್ಠಿಕಾಂಶದ ಬಗೆಗೆ ಹೆಚ್ಚಿನ ಗಮನ ನೀಡುವುದು.
2. ಮಗುವಿನ ದೈಹಿಕ, ಮಾನಸಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯಕ್ಕಾಗಿ ವ್ಯಕ್ತಿತ್ವ ವಿಕಸನಕ್ಕಾಗಿ ಭದ್ರ ಬುನಾದಿಯನ್ನು ಸೃಷ್ಟಿಸುವುದು.
3. ಶಿಶು ಮರಣ ದರವನ್ನು ನಿಯಂತ್ರಣದಲ್ಲಿಡುವುದು, ಕಡಿಮೆಯಾಗುವಂತೆ ನೋಡಿಕೊಳ್ಳುವುದು. ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶಾಲೆ ಬಿಟ್ಟ ಮಕ್ಕಳನ್ನು ಮತ್ತೆ ಮುಖ್ಯವಾಹಿನಿಗೆ ಸೇರಿಸುವುದು.
4. ವಿವಿಧ ಇಲಾಖೆಗಳಲ್ಲಿ ಮಕ್ಕಳ ಆರೋಗ್ಯಕ್ಕಾಗಿ ಇರುವ ಯೋಜನೆಗಳನ್ನು ಸಮಗ್ರವಾಗಿ ಸಮನ್ವಯಗೊಳಿಸಿ ಅದೆಲ್ಲವೂ ಅನುಷ್ಠಾನಕ್ಕೆ ತರುವಂತೆ ನೋಡಿಕೊಳ್ಳುವುದು.
5. ಮಕ್ಕಳ ಸಾಮಾನ್ಯ ಆರೋಗ್ಯದೆಡೆಗೆ ಗಮನ ನೀಡುವಂತೆ ತಾಯಂದಿರ ಸಾಮರ್ಥ್ಯ ಹೆಚ್ಚಿಸುವುದು. ಪೌಷ್ಟಿಕಾಂಶದ ಮಹತ್ವದ ಬಗೆಗೆ ಅರಿವು ಮೂಡಿಸಿ, ಪೌಷ್ಟಿಕ ಆಹಾರದ ಬಗೆಗೆ ಹೆಚ್ಚಿನ ಮಾಹಿತಿ ನೀಡುವುದು.

ಅಂಗನವಾಡಿಗಳು:

ಅಂಗನವಾಡಿ ಕೇಂದ್ರವನ್ನು ಐಸಿಡಿಎಸ್ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ದೃಷ್ಟಿಯಿಂದ ಅಂಗನವಾಡಿ ಕೇಂದ್ರಗಳನ್ನು ಆರಂಭಿಸಲಾಯಿತು. ಎಳೆ ಮಕ್ಕಳ ಸಮಗ್ರ ಅಭಿವೃದ್ಧಿ, ಗರ್ಭಿಣಿಯರ ಆರೋಗ್ಯ, ಹಾಲುಣಿಸುವ ತಾಯಂದಿರಿಗೆ ಮಾರ್ಗದರ್ಶನ ನೀಡುವ ಮೂಲಕ ಮಹಿಳೆ ಮತ್ತು ಮಕ್ಕಳ ಆರೋಗ್ಯದ ಸಂಪೂರ್ಣ ಜವಾಬ್ದಾರಿ ಅಂಗನವಾಡಿ

ಕೇಂದ್ರಗಳಿಗೆ ವಹಿಸಿಕೊಡಲಾಯಿತು. ಎಳೆ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಪೂರೈಸಲಾಯಿತು. ಮಕ್ಕಳಿಗೆ ಚೇತೋಹಾರಿ ವಾತಾವರಣ ನೀಡುವಂತೆ ಆಟಿಕೆಗಳು, ಆಟಪಾಟಗಳ ವ್ಯವಸ್ಥೆ ಮಾಡಲಾಯಿತು.

ಆರೋಗ್ಯ ಸೇವೆಗಳಿಂದ ಗ್ರಾಮೀಣ ಮಹಿಳೆಯ ಮೇಲಿನ ಪರಿಣಾಮ:

ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಆರೋಗ್ಯ ಯೋಜನೆಗಳು ಗ್ರಾಮೀಣ ಸಮುದಾಯದತ್ತಲೇ ಕೇಂದ್ರೀಕರಿಸಲಾಗಿದೆ. ಮಹಿಳೆ ಹಾಗೂ ಮಕ್ಕಳಿಗಾಗಿ ಯೋಜಿಸಿದ ಯೋಜನೆಗಳಲ್ಲಿ ಆರೋಗ್ಯ, ನೈರ್ಮಲ್ಯ, ಲಸಿಕಾಕರಣ, ಗರ್ಭಾವಸ್ಥೆ ಮುಂತಾದವುಗಳ ಬಗೆಗೆ ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಗ್ರಾಮೀಣ ಮಹಿಳೆಯರಿಗೆ ಈ ವಿಷಯಗಳ ಬಗೆಗೆ ಅದೆಷ್ಟು ಜ್ಞಾನವಿದೆ? ದಿನನಿತ್ಯದ ಜೀವನದಲ್ಲಿ ಅವರು ಅದನ್ನು ಹೇಗೆ ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಮುಂದಿನ ಪುಟಗಳಲ್ಲಿ ವಿಶ್ಲೇಷಿಸಲಾಗಿದೆ.

ಮಹಿಳೆ ಮತ್ತು ಸಾಮಾನ್ಯ ನೈರ್ಮಲ್ಯ, ವೈಯಕ್ತಿಕ ನೈರ್ಮಲ್ಯ:

ಆರೋಗ್ಯದ ಅರಿವು ಗ್ರಾಮೀಣ ಮಹಿಳೆಯರಲ್ಲಿ ಅದೆಷ್ಟರ ಮಟ್ಟಿಗೆ ಇದೆ ಎಂದು ಪರಿಶೀಲಿಸಲು ಪ್ರಯತ್ನಿಸಲಾಯಿತು. ಸ್ವಾಸ್ಥ್ಯ ಎಂದರೆ ಭೌತಿಕವಾಗಿ, ದೈಹಿಕ, ಮಾನಸಿಕ ಹಾಗೂ ಜೈವಿಕವಾಗಿ ಮಹಿಳೆ ಸದೃಢಳಾಗಿದ್ದಲ್ಲಿ ಮಾತ್ರ ಅವಳು ಕೌಟುಂಬಿಕ ಜವಾಬ್ದಾರಿಯನ್ನು ಹೊರಬಲ್ಲಳು. ಸಾಮಾಜಿಕ ಚಟುವಟಿಕೆಗಳಷ್ಟೇ ಅಲ್ಲ, ಆರ್ಥಿಕ ಚಟುವಟಿಕೆಗಳಲ್ಲೂ ಭಾಗವಹಿಸುವಂತೆ ಆಗಲು ಸಂಪೂರ್ಣ ಸ್ವಸ್ಥ ಮಹಿಳೆಯಿಂದ ಮಾತ್ರ ಸಾಧ್ಯ. ಈ ಸಂಪೂರ್ಣ ಸ್ವಾಸ್ಥ್ಯ ಸ್ತ್ರೀ ಪರಿಕಲ್ಪನೆ ಅದೆಷ್ಟು ಜನರಿಗೆ ಇದೆ? ಅವಳಿಂದ ಮನೆಗೆ ಅದೆಷ್ಟರ ಮಟ್ಟಿನ ಸಹಾಯವಾಗಬಹುದು ಎಂದು ಪರಿಶೀಲಿಸಲಾಯಿತು.

ಕೋಷ್ಟಕ – 5.4.2
ಸಂಪೂರ್ಣ ಸ್ವಸ್ಥ ಸ್ತ್ರೀ ಕುಟುಂಬದ ಆಸ್ತಿ

ಕ್ರ ಸಂ.	ಮನೋಭಾವ	ಸಂಘದ ಪ್ರತಿನಿಧಿಗಳು	ಶೇ.	ಸದಸ್ಯರು	ಶೇ.	ಒಟ್ಟು	ಶೇ.
01.	ಅತಿ ಮಹತ್ವ	72	60%	90.%	50%	162	54%
02.	ಮಹತ್ವದ್ದು	36	30%	54	30%	90	30%
03.	ಮಹತ್ವದ್ದಲ್ಲ	12	10%	36	20%	48	16%
	ಒಟ್ಟು	**120**	**100%**	**180**	**100%**	**300**	**100%**

ಇಲ್ಲಿ ಸಂಗ್ರಹಿಸಿದ ದತ್ತಾಂಶದ ಪ್ರಕಾರ ಅರ್ಧದಷ್ಟು ಜನರು ಕೌಟುಂಬಿಕ ಅಭಿವೃದ್ಧಿಗೆ ಸ್ತ್ರೀಯ ಸಂಪೂರ್ಣ ಸ್ವಾಸ್ಥ್ಯ ಅತಿ ಮಹತ್ವದ್ದು ಎಂದು ಹೇಳಿದ್ದಾರೆ. ಶೇ.54ರಷ್ಟು ಜನರು ಕೌಟುಂಬಿಕ ಪ್ರಗತಿಗೆ

ಮಹಿಳಾ ಆರೋಗ್ಯ ಅತಿಮುಖ್ಯವೆಂದೇ ನಂಬಿದ್ದಾರೆ. ಕುಟುಂಬದ ಸರ್ವತೋಮುಖ ಬೆಳವಣಿಗೆಯು ಸ್ತ್ರೀ ಸ್ವಾಸ್ಥ್ಯವನ್ನು ಅವಲಂಬಿಸಿದೆ ಎಂದು ತಿಳಿಸಲಾಗಿದೆ.

ಮಹಿಳಾ ಆರೋಗ್ಯಕ್ಕೆ ಮಹತ್ವ ನೀಡಬೇಕು ಎಂದು ಹೇಳಿದವರೂ ಶೇ.30 ರಷ್ಟು ಜನರಿದ್ದಾರೆ. ಆದರೆ ಅವರಲ್ಲಿ ಹಲವರು ಸರ್ಕಾರವು ಆರೋಗ್ಯಕ್ಕಾಗಿ ಇನ್ನಷ್ಟು ಸೌಲಭ್ಯಗಳನ್ನು ನೀಡಬೇಕು. ಸಾಕಷ್ಟು ಸೌಲಭ್ಯಗಳಿಲ್ಲ ಎಂದೂ ದೂರಿದ್ದು ಆಸಕ್ತಿಕರ ಅಂಶವಾಗಿದೆ. ಆದರೆ ಶೇ.16 ರಷ್ಟು ಜನರು ಸ್ತ್ರೀ ಆರೋಗ್ಯವು ಅಷ್ಟೇನು ಮಹತ್ವದ ವಿಷಯವಲ್ಲ. ಇಷ್ಟಕ್ಕೂ ಆರೋಗ್ಯವು ದೇವರು ಕೊಟ್ಟಂತೆ ಇರುತ್ತದೆ ಎಂದು ನಂಬಿದವರೇ ಆಗಿದ್ದಾರೆ.

ಈ ದತ್ತಾಂಶವು ಇನ್ನೊಂದು ಮಹತ್ವದ ಅಂಶವನ್ನು ಬೆಳಕಿಗೆ ತರುತ್ತದೆ. ಪದಾಧಿಕಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಚನಾತ್ಮಕವಾಗಿ ಧನಾತ್ಮಕವಾಗಿ ಉತ್ತರಿಸಿದ್ದಾರೆ. ಅತಿ ಮಹತ್ವದ್ದು ಎಂದು ಭಾವಿಸಿದವರಲ್ಲಿ ಶೇ.60 ರಷ್ಟು ಜನರು ಒಪ್ಪಿಕೊಂಡಿದ್ದಾರೆ. ಆದರೆ ಸದಸ್ಯರಲ್ಲಿ ಶೇ.50 ರಷ್ಟು ಜನರು ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಮಹತ್ವದ್ದು ಎಂದು ಒಪ್ಪಿಕೊಂಡವರಲ್ಲಿ ಪದಾಧಿಕಾರಿ ಗಳು ಹಾಗೂ ಸದಸ್ಯರದ್ದು ಸಮಪಾಲಿದೆ. ಆದರೆ ಮಹತ್ವದಲ್ಲ ಎಂದು ಹೇಳಿದವರು ಬೆರಳೆಣಿಕೆಯಷ್ಟು ಮಾತ್ರ. ಒಟ್ಟು ಹೇಳಿಕೆದಾರರಲ್ಲಿ ಶೇ.16 ರಷ್ಟು ಜನರು ಮಹಿಳಾ ಆರೋಗ್ಯ ಮಹತ್ವವಲ್ಲ ಎಂದು ನಂಭಿದವರಾಗಿದ್ದಾರೆ. ಅವರಲ್ಲಿಯೂ ಪದಾಧಿಕಾರಿಗಳ ಸಂಖ್ಯೆ ಶೇ.10 ರಷ್ಟಿದ್ದರೆ ಸದಸ್ಯರ ಸಂಖ್ಯೆ ಶೇ.20 ರಷ್ಟಿದೆ.

ಮಾನವ ಆರೋಗ್ಯ ಮತ್ತು ಧಾರ್ಮಿಕ ಮನೋಭಾವ:

ಮಾನವನ ಸದೃಢ ಆರೋಗ್ಯವೂ ದೇವರ ಕೊಡುಗೆಯೆಂದೇ ಭಾರತೀಯ ಸಮಾಜದಲ್ಲಿ ನಂಬಲಾಗಿದೆ. ರೋಗ ರುಜಿನಗಳೆಲ್ಲವೂ ತಮ್ಮ ಪೂರ್ವ ಜನ್ಮದ ಕರ್ಮದ ಫಲವೆಂದು ಭಾವಿಸಿ, ಅದರೊಂದಿಗೆ ಬದುಕುವುದನ್ನೇ ರೂಢಿ ಮಾಡಿಕೊಳ್ಳುತ್ತಾರೆ. ಕಾರಣ ರೋಗ ನಿವಾರಣೆಯ ಶಕ್ತಿ ಇರುವುದು ದೇವರಿಗೆ ಮಾತ್ರ. ದೇವರ ಬಯಕೆಯನ್ನು ಅಲ್ಲಗಳೆಯುವುದು ಹುಲುಮಾನವನಿಂದ ಸಾಧ್ಯವಿಲ್ಲ ಎಂಬ ಬೇರೂರಿದ ನಂಬಿಕೆ.

ಇದೇ ಕಾರಣದಿಂದಲೇ ಮಲೇರಿಯಾ, ಕಾಲರಾ, ಟೈಫಾಯಿಡ್, ಪ್ಲೇಗ್ ಮುಂತಾದ ಮರಣಾಂತಿಕ ರೋಗಗಳು ದಾಳಿ ಇಟ್ಟಾಗ ದೇವರ ಶಾಂತಿ ಮಾಡಿಸುವುದು, ಹೋಮ, ಹವನ, ಬಲಿ ನೀಡುವುದೇ ಮಹತ್ವದ್ದಾಗಿತ್ತೇ ಹೊರತು ಲಸಿಕೆ, ಔಷಧಿ, ನೈರ್ಮಲ್ಯದತ್ತ ಒಲವು ತೋರುತ್ತಿರಲಿಲ್ಲ. ವೈದ್ಯಕೀಯವನ್ನು ದೈವೇಚ್ಛೆಗೆ ವಿರುದ್ಧವಾದುದು ಎಂದೇ ಭಾವಿಸಲಾಗುತ್ತಿತ್ತು.

ಇದೇ ಕಾರಣದಿಂದ ಆರೋಗ್ಯ ಸೇವೆಗಳನ್ನು ಗ್ರಾಮೀಣ ಭಾರತದಲ್ಲಿ ಪರಿಚಯಿಸಿದಾಗ ವೈದ್ಯಕೀಯ ಸೇವೆಯೊಂದಿಗೆ ಜಾಗೃತಿಯನ್ನೂ ಮೂಡಿಸಬೇಕಾದುದು ಅತ್ಯಗತ್ಯವಾಗಿತ್ತು. ಪ್ರತಿ

ಮಾತ್ರೆ, ಲಸಿಕೆಗಳನ್ನು ಸ್ವೀಕರಿಸುವಾಗಲೂ ಅವರ ನಂಬಿಕೆ ಮತ್ತು ವಿಜ್ಞಾನದ ನಡುವಿನ ಗೊಂದಲ ಒಂದು ತಡೆಗೋಡೆಯನ್ನು ಒಡ್ಡುತ್ತಿತ್ತು. ಆದರೆ ಆಧುನೀಕರಣದ ನೆರಳು ಗ್ರಾಮೀಣ ಪ್ರದೇಶಗಳತ್ತ ಚಾಚಿದಾಗ ಈ ಮನೋಭಾವ ಬದಲಾಯಿತು. ಗಿಡ–ಮೂಲಿಕೆಗಳ ಜಾನಪದ ವೈದ್ಯಕೀಯ ಸೇವೆಯಿಂದ ದೂರವಾಗಿ ಇಂಗ್ಲಿಷ್ ಔಷಧಿಯತ್ತ ಆಲೋಪಥಿಯತ್ತ ವಾಲತೊಡಗಿದರು.

ಬದಲಾವಣೆಯ ಈ ಪರ್ವಕಾಲದಲ್ಲಿ ರೋಗಗಳು ಮಾನವನ ಪರಿಸರದಲ್ಲಿಯೇ ಹುಟ್ಟುವಂಥವು. ಇದಕ್ಕೂ ದೇವರಿಗೂ ಸಂಬಂಧವಿಲ್ಲ ಎಂಬ ಸತ್ಯ ಗೋಚರವಾಯಿತು. ಅಲ್ಲಿಗೆ ಪೂರ್ವ ಜನ್ಮದ ಕರ್ಮ ಎಂಬ ಭಾವ ಬೇರು ಸಹಿತ ಕಿತ್ತು ಹೋಯಿತು. ಆರೋಗ್ಯ ಸೇವೆಗಳ ದೃಷ್ಟಿಯಿಂದ ಯೋಚಿಸಿದರೆ ಒಂದು ಸಮುದಾಯದಲ್ಲಿ ಬಲವಾಗಿ ಬೇರೂರಿದ ನಂಬಿಕೆಯನ್ನು ಮೌಢ್ಯವೆಂದು ಸಾಬೀತು ಪಡಿಸಿದ ಹೆಮ್ಮೆ ಆರೋಗ್ಯ ಸೇವೆಗೆ ಸಲ್ಲುತ್ತದೆ. ಹೀಗಾಗಿ ಸ್ವ–ಸಹಾಯ ಸಂಘದ ಮಹಿಳೆಯರೊಂದಿಗೆ ಮಾನವ ಆರೋಗ್ಯದ ಬಗೆಗೆ ಹೊಂದಿರುವ ಮನೋಭಾವನೆಯನ್ನು ಪ್ರಶ್ನಾವಳಿಗಳ ಮುಖಾಂತರ ಚರ್ಚಿಸಿ ಬಂದಿರುವ ಪ್ರತಿಕ್ರಿಯೆಗಳನ್ನು ಮುಂದಿನ ಕೋಷ್ಟಕದಲ್ಲಿ ಸಂಗ್ರಹಿಸಲಾಗಿದೆ.

ಕೋಷ್ಟಕ 5.4.3

ಮಾನವನ ಆರೋಗ್ಯದ ಬಗೆಗೆ ಮನೋಭಾವ: ಉತ್ತಮ ಸ್ವಾಸ್ಥ್ಯ ದೇವರ ಕೊಡುಗೆಯೋ ಅಥವಾ ಮನುಷ್ಯನ ಪರಿಶ್ರಮವೋ, ಇವೆರಡರ ಸಂಗಮವೋ?

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇಕಡ	ಸದಸ್ಯರು	ಶೇಕಡ	ಒಟ್ಟು	ಶೇಕಡ
01.	ದೇವರ ಕೊಡುಗೆ	24	20%	54	30%	78%	26%
02.	ಮಾನವನ ಶ್ರಮ	36	30%	36	20%	72	24%
03.	ಎರಡೂ	60	50%	90	50%	150	50%
	ಒಟ್ಟು	**120**	**100%**	**180**	**100%**	**300**	**100%**

ಮಾನವನ ಆರೋಗ್ಯವು ದೇವರ ಕೊಡುಗೆಯೆಂದು ನಂಬಿದವರು ಕಾಲು ಭಾಗವಾದರೆ ಮಾನವನ ಶ್ರಮ ಎಂದು ನಂಬಿದವರು ಕಾಲುಭಾಗ. ಇಬ್ಬರದ್ದೂ ಸಮಪಾಲು ಎಂದುಕೊಂಡವರೇ ಅರ್ಧದಷ್ಟಿರುವುದು ಮೇಲ್ನೋಟಕ್ಕೇ ಗೋಚರವಾಗುತ್ತದೆ. ಇಲ್ಲಿ ಕಾರಣಗಳು ಏನೇ ಇರಲಿ ಮನುಜನ ಆರೋಗ್ಯವು ದೇವರ ಕೊಡುಗೆ ಎನ್ನಲು ಪೂರ್ವ ಜನ್ಮದ ಕರ್ಮ ಸಿದ್ಧಾಂತವನ್ನು ನಂಬುವವರದ್ದೇ ಸಿಂಹಪಾಲು ಆಗಿರುತ್ತದೆ. ಆದರೆ ಪದಾಧಿಕಾರಿಗಳನ್ನು ಹಾಗೂ ಸದಸ್ಯರನ್ನು ಹೋಲಿಸಿದಾಗ ಈ ಮನೋಭಾವವು ಪದಾಧಿಕಾರಿಗಳಲ್ಲಿ ಕಡಿಮೆ ಇರುವುದು ಸ್ಪಷ್ಟವಾಗುತ್ತದೆ. ಪದಾಧಿಕಾರಿಗಳಲ್ಲಿ 24–ಜನರು ದೇವರ ಕೊಡುಗೆ ಎಂಬುದಕ್ಕೆ ತಮ್ಮ ಅನುಮೋದನೆ ತೋರಿಸಿದರೆ

ಸದಸ್ಯರಲ್ಲಿ 54-ಜನ ಹೌದು ಎನ್ನುತ್ತಾರೆ. ಒಟ್ಟಾರೆ ಗಮನಿಸಿದಾಗ ಶೇ.26ರಷ್ಟು ಜನರು ಇದನ್ನು ಒಪ್ಪುತ್ತಾರೆ.

ಅಲ್ಲಿಗೆ ಆರೋಗ್ಯ ಸೇವೆಗಳು ತಮ್ಮ ನಿರೀಕ್ಷಿತ ಮಟ್ಟದಲ್ಲಿ ಸೇವೆ ಸಲ್ಲಿಸಿದರೂ ಜನರ ನಂಬಿಕೆ ಮತ್ತು ಮೌಲ್ಯಗಳ ಬದಲಾವಣೆಯಲ್ಲಿ ಮಂದಗತಿಯ ಸುಧಾರಣೆಯನ್ನೇ ಕಾಣಬಹುದಾಗಿದೆ.

ಇನ್ನು ಕಾಲು ಭಾಗದಷ್ಟು ಜನರು ಇದನ್ನು ಸಂಪೂರ್ಣವಾಗಿ ಮಾನವ ನಿರ್ಮಿತ ಸ್ಥಿತಿ ಎಂದು ನಂಬುತ್ತಾರೆ. ವೈರುಧ್ಯಗಳು ಕಾಣುವುದು ಇದೇ ಎರಡು ಅಂಶಗಳಲ್ಲಿ. ಒಂದೆಡೆ ತಮ್ಮ ನಂಬಿಕೆಯನ್ನು ಮೌಢ್ಯವೆಂದು ಒಪ್ಪಿಕೊಂಡು ಆರೋಗ್ಯವನ್ನು ಕೇವಲ ದೈಹಿಕ ಮಾನಸಿಕ ಸ್ವಾಸ್ತ್ಯ ಎಂದು ಭಾವಿಸಿದವರು ಶೇ.24 ರಷ್ಟು ಜನರಿದ್ದಾರೆ. ಪದಾಧಿಕಾರಿಗಳಲ್ಲಿ ಶೇ.30 ರಷ್ಟು ಜನ, ಸದಸ್ಯರಲ್ಲಿ ಶೇ.20 ರಷ್ಟು ಜನರು ಈ ವಾಸ್ತವ್ಯವನ್ನು ಒಪ್ಪಿಕೊಳ್ಳುತ್ತಾರೆ. ಇಲ್ಲಿಯೂ ಗಮನಾರ್ಹವಾದ ಅಂಶವೆಂದರೆ ಪದಾಧಿಕಾರಿಗಳು ವೈಜ್ಞಾನಿಕವಾಗಿ ಯೋಚಿಸುವಲ್ಲಿ ಸದಸ್ಯರಿಗಿಂತ ಒಂದು ಹೆಜ್ಜೆ ಮುಂದೆ ಇದ್ದಾರೆ.

ಈ ಎರಡೂ ಭಾವಗಳನ್ನು ಸಮನ್ವಯವಾಗಿ ಸ್ವೀಕರಿಸಿದವರದ್ದೇ ಸಿಂಹಪಾಲು. ಶೇ.50 ರಷ್ಟು ಜನರು ತಮ್ಮ ಆರೋಗ್ಯಕ್ಕೆ ತಮ್ಮ ಪರಿಶ್ರಮ ಹಾಗೂ ದೇವರ ಕೊಡುಗೆ ಎರಡೂ ಸಮಪಾಲು ಹೊಂದಿವೆ ಎಂದು ಭಾವಿಸಿದ್ದಾರೆ. ಅದರರ್ಥ ಇವರು ತಮ್ಮೊಳಗಿನ ನಂಬಿಕೆಯನ್ನೂ ಒಪ್ಪಿಕೊಂಡವರು. ಅದರೊಂದಿಗೆ ವಿಜ್ಞಾನದ ವಾಸ್ತವವನ್ನೂ ತಬ್ಬಿಕೊಂಡವರು. ಇವರ ಸಂಖ್ಯೆಯಲ್ಲೂ ಸಮ ಸಮಪಾಲು ಇದೆ. ಈ ಮನೋಭಾವದವರಲ್ಲಿ ಪದಾಧಿಕಾರಿಗಳೂ ಹಾಗೂ ಸದಸ್ಯರು ಸಮಸಮವಾಗಿದ್ದಾರೆ.

ಮಹಿಳೆ, ಆಹಾರ ಮತ್ತು ನೀರು:

ಮಹಿಳಾ ಸಬಲೀಕರಣವನ್ನು ಆರೋಗ್ಯದ ಆಯಾಮದಿಂದ ಅಧ್ಯಯನ ಮಾಡುತ್ತಿರುವಾಗ ಆರೋಗ್ಯಕ್ಕೆ ಉತ್ತಮ ಆಹಾರ ಪರಿಶುದ್ಧ ನೀರು ಮೂಲ ಸಲಕರಣೆಯೆಂದು ಅರಿತಿದ್ದಾರೆಯೇ? ಅಥವಾ ಮಹಿಳೆಯರ ಆಹಾರ ಯಾವತ್ತಿದ್ದರೂ ಮಕ್ಕಳು ಉಳಿಸಿದ್ದು, ಹಾಳಾಗದೇ ಉಳಿದಿದ್ದು, ಇದನ್ನೇ ಆಹಾರಾಭ್ಯಾಸ ಮಾಡಿಕೊಂಡವರೇ ಅತಿಹೆಚ್ಚಿನ ಸಂಖ್ಯೆಯಲ್ಲಿರುವವರು. ಬಿಸಿಯೂಟ ಎಂಬುದು ಕೇವಲ ದುಡಿಯುವ ಗಂಡಸರಿಗೆ ಎಂಬುದೇ ಇದಕ್ಕೆ ಕಾರಣವಾಗಿರಬಹುದು.

ಇನ್ನೂ ಪರಿಶುದ್ಧ ನೀರಿನ ಅಗತ್ಯವಿದ್ದರೂ, ನೀರು ದೊರೆಯದ ಅನಿವಾರ್ಯದಿಂದಾಗಿ ನೈರ್ಮಲ್ಯಕ್ಕೆ ಹೆಚ್ಚಿನ ಮಹತ್ವ ಸಿಗುವುದಿಲ್ಲ. ಕುಡಿಯುವ ನೀರಿಗೆ ತತ್ವಾರವಿದ್ದಾಗ ಬಾವಿನೀರು ಕುಡಿಯುವ ನೀರಿನ ಮೂಲಸೆಲೆಯಾಗಿರುತ್ತದೆ. ಅಥವಾ ಗ್ರಾಮೀಣ ಪ್ರದೇಶದಲ್ಲಿ ಬಾವಿ, ಕೆರೆಗಳು, ಕೊಳವೆಬಾವಿಗಳು ಕುಡಿಯುವ ನೀರಿನ ಮೂಲಗಳಾಗಿರುತ್ತವೆ. ಈ ಎಲ್ಲವನ್ನೂ ಗಮನದಲ್ಲಿರಿಸಿ

ಕೊಂಡಾಗ ಬಹುತೇಕ ಜನರು ಆಹಾರ ಮತ್ತು ನೀರಿನ ಸಮರ್ಪಕ ಬಳಕೆಯಿಂದ ಆರೋಗ್ಯದ ಮಟ್ಟ ಅವಲಂಬಿತವಾಗಿರುತ್ತದೆ ಎಂಬುದು ಅರ್ಥೈಸಿಕೊಂಡಿದ್ದಾರೆ. ಆದರೆ ಪೌಷ್ಟಿಕಾಂಶವುಳ್ಳ ಆಹಾರ ಆರೋಗ್ಯವಂತಕ್ಕೆ ಮೂಲವೆಂಬುದು ಹಾಗೂ ಬಿಸಿ ಆಹಾರ, ಬೇಯಿಸಿದ ಆಹಾರ, ಸೊಪ್ಪು, ತರಕಾರಿಗಳ ಊಟ ಇವುಗಳ ಬಗೆಗೆ ಅರಿವು ಮೂಡಿರುವುದು ದಿಟ. ಹೀಗಾಗಿ ಪರಿಶುದ್ಧ ನೀರು ಮತ್ತು ಆಹಾರ ಸೇವನೆಯ ಬಗೆಗಿರುವ ಅರಿವನ್ನು ಕುರಿತು ವಿಶ್ಲೇಷಿಸಲಾಯಿತು.

ಕೋಷ್ಟಕ 5.4.4.
ತಾಜಾ ಆಹಾರ ಹಾಗೂ ಪರಿಶುದ್ಧ ನೀರು ಸೇವನೆ

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇಕಡ	ಸದಸ್ಯರು	ಶೇಕಡ	ಒಟ್ಟು	ಶೇಕಡ
01.	ಅತ್ಯಂತ ಮಹತ್ವದು	78	65%	72	40%	150	50%
02.	ಮಹತ್ವದ್ದೇನಲ್ಲ	42	35%	81	45%	123	41%
	ಒಟ್ಟು	**120**	**100%**	**180**	**100%**	**300**	**100%**

ಈ ಇಡೀ ಕೋಷ್ಟಕವನ್ನು ನೋಡಿದರೆ ತಾಜಾ ಆಹಾರ ಸೇವನೆ ಹಾಗೂ ಪರಿಶುದ್ಧ ನೀರು ಅತ್ಯಂತ ಮಹತ್ವದ್ದು ಎಂದು ಬಹುತೇಕ ಜನರು ಒಪ್ಪಿಕೊಂಡಿದ್ದಾರೆ. ಶೇ 50ರಷ್ಟು ಜನರು ಸದೃಢ ಆರೋಗ್ಯಕ್ಕೆ ಇವೆರಡೇ ಮೂಲಗಳು ಎಂಬದುನ್ನು ಸ್ಪಷ್ಟಪಡಿಸಿದ್ದಾರೆ. ತಾಜಾ ಆಹಾರ ಸೇವನೆ ಯಿಂದ ದೈಹಿಕ ಧಾರ್ಢ್ಯಕ್ಕೆ ಅನುಕೂಲವಾದರೆ ಶುದ್ಧ ನೀರು ಸೇವನೆಯಿಂದ ರೋಗಗಳನ್ನು ದೂರವಿಡಬಹುದು ಎಂಬ ನಂಬಿಕೆ ಇವರದ್ದಾಗಿದೆ. ನೀರು ಸೋಸಿ ಕುಡಿಯುವುದು, ಮಳೆಗಾಲ ದಲ್ಲಿ ಕಾಯಿಸಿ ಕುಡಿಯುವುದು ಮುಂತಾದ ಕ್ರಿಯೆಗಳಿಂದ ಶುದ್ಧ ನೀರು ಸೇವನೆಯ ಅಭ್ಯಾಸವನ್ನು ಇರಿಸಿಕೊಂಡಿದ್ದಾರೆ ಎಂಬುದು ಹೇಳಿಕೆದಾರರೊಂದಿಗೆ ಚರ್ಚಿಸಿದಾಗ ತಿಳಿದು ಬಂದ ಸತ್ಯವಾಗಿದೆ.

ಇದೇ ಕಾರಣಕ್ಕೆ ಪದಾಧಿಕಾರಿಗಳು ಹಾಗೂ ಸದಸ್ಯರು ಶೇ.50 ರಷ್ಟು ಜನರು ಈ ಮಾತನ್ನು ಒಪ್ಪಿಕೊಂಡಿದ್ದಾರೆ. ಇನ್ನು ಮಹತ್ವದ್ದು ಎಂದವರು ಅರ್ಧಕ್ಕೆ ಸಮೀಪದಷ್ಟು ಜನರು ಶೇ.41 ರಷ್ಟು ಜನರು ಮಹತ್ವದ್ದು ಎಂಬ ಅಂಶವನ್ನು ಒಪ್ಪಿಕೊಳ್ಳುತ್ತಾರೆ. ಆದರೆ ತಾಜಾ ಆಹಾರ ಸೇವನೆ ಹಾಗೂ ನೀರಿನೊಂದಿಗೆ ಮಾತ್ರವಲ್ಲ ಪೂರ್ವ ಜನ್ಮದ ಪುಣ್ಯ, ದೇವರ ಆಶೀರ್ವಾದ ಹಾಗೂ ವ್ಯಾಯಾಮ, ಕಸರತ್ತು ಮುಂತಾದ ಭಾವನೆಗಳನ್ನೂ ವ್ಯಕ್ತಪಡಿಸಿದರು ಇವರೂ ಈ ಎರಡೂ ಅಂಶಗಳು ಉತ್ತಮ ಆರೋಗ್ಯಕ್ಕೆ ಮೂಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ.

ಪದಾಧಿಕಾರಿಗಳಲ್ಲಿ ಯಾರೂ ಇದನ್ನು ಮಹತ್ವದ್ದು ಅಲ್ಲವೆಂದು ಪರಿಗಣಿಸಿದವರೇ ಇಲ್ಲ. ಆದರೆ ಸದಸ್ಯರಲ್ಲಿ ಕೆಲವರು ಮಹತ್ವದಲ್ಲ ಎಂದು ಹೇಳಿದ್ದಾರೆ. ಆದರೆ ಅವರ ಸಂಖ್ಯೆ ಕಡಿಮೆ ಎಂಬುದೇ ಸಮಾಧಾನಕರ ಅಂಶವಾಗಿದೆ.

ಪ್ರತಿ ದಿನ ಬೆಳಿಗ್ಗೆ ಹಲ್ಲುಜ್ಜುವುದು ಮತ್ತು ಸ್ನಾನ ಮಾಡುವುದು:

ಹಲ್ಲುಜ್ಜುವುದು ಒಂದು ಸಾಮಾನ್ಯವಾಗಿ ಆರೋಗ್ಯವಂತ ಕ್ರಿಯೆ. ಆದರೆ ಹಳ್ಳಿಗರಲ್ಲಿ ಇದು ಕೇವಲ ಬೇವಿನ ಕಡ್ಡಿ ಹಾಗೂ ಹುಂಚಿಕಡ್ಡಿಯಿಂದ ಕೈ ಆಡಿಸುವ ಕ್ರಿಯೆಯಾಗಿ ಉಳಿದಿದೆ. ಒಲೆ ಬಳಸುವ ಕಾಲದಲ್ಲಿ ಇದ್ದಿಲೊಂದಿಗೆ ಉಪ್ಪನ್ನು ಸೇರಿಸಿ ಉಜ್ಜುತ್ತಿದ್ದರು. ಅಥವಾ ಬೆರಣಿಯ ಬೂದಿಯೊಂದಿಗೆ ಉಪ್ಪು ಬೆರೆಸಿ ಉಜ್ಜುತ್ತಿದ್ದರು. ಆದರೆ ಹಲ್ಲುಜ್ಜುವ ಕ್ರಿಯೆಯನ್ನು ದೇಹ ನೈರ್ಮಲ್ಯದ ಒಂದು ಕ್ರಿಯೆ ಎಂದು ಭಾವಿಸಿದವರು ಅತಿ ವಿರಳ. ಕಡ್ಡಿಯಿಂದ ಉಜ್ಜುವುದು ಕಡಿಮೆಯಾಗಲು ಅದು ನಾಗರಿಕರ ಲಕ್ಷಣವಲ್ಲ ಎಂಬ ಭ್ರಮೆ. ಒಲೆಗಳ ಬಳಕೆ ಕಡಿಮೆಯಾದಂತೆ ಬೂದಿ ಹಾಗೂ ಇದ್ದಿಲಿನ ಬಳಕೆಯೂ ಕಡಿಮೆಯಾಯಿತು. ಅಲ್ಲಿಗೆ ಹಲ್ಲುಜ್ಜುವ ಕ್ರಿಯೆ ಕಡಿಮೆಯಾಗತೊಡಗಿತು.

ಸ್ನಾನಕ್ಕೆ ಹೊಳೆಗೆ ಹೋಗುವುದು, ಜವಳು ಮಣ್ಣು, ಸೀಗೆ ಪುಡಿ, ಅಂಟವಾಳ ಪುಡಿ, ಮುಂತಾದವನ್ನು ಸ್ನಾನಕ್ಕೆ ಬಳಸುತ್ತಿದ್ದರು. ಆದರೆ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ದಿನವೂ ಸ್ನಾನದ ಬದಲಿಗೆ ಮನಸಿದ್ದರೆ, ನೀರು ಸಿಕ್ಕರೆ ಸ್ನಾನ ಮಾಡಲಾಗುತ್ತಿತ್ತು. ಕಾಲವೀಗ ಬದಲಾಗುತ್ತಿದೆ. ಜಾಗತೀಕರಣದ ಪ್ರಭಾವದಿಂದಾಗಿ ಮಾರ್ಜಾಲ ಹಾಗೂ ಹಲ್ಲುಜ್ಜುವ ಪೇಸ್ಟು ಮತ್ತು ಪುಡಿಗಳು ಮಾರುಕಟ್ಟೆಯನ್ನು ಕಂಡುಕೊಳ್ಳುತ್ತಿವೆ. ಅದರೊಂದಿಗೆ ಜನರಲ್ಲಿ ಪ್ರತಿದಿನ ಸ್ನಾನದ ರೂಢಿಯನ್ನೂ ಅಭ್ಯಾಸಗೊಳಿಸಿವೆ ಹಾಗೂ ಗ್ರಾಮೀಣ ಭಾಗದಲ್ಲಿ ಸ್ನಾನದ ಸಾಬೂನು ಬಳಸುತ್ತಿರುವುದು ಅತ್ಯಂತ ಸಂತೋಷಕರ ವಿಷಯವಾಗಿದೆ. ಹೀಗಾಗಿ ಪ್ರತಿದಿನ ಬೆಳಗ್ಗೆ ಹಲ್ಲುಜ್ಜುವ ಮತ್ತು ಸ್ನಾನ ಮಾಡುವ ವಿಷಯಗಳನ್ನು ಕುರಿತು ಮಹಿಳೆಯರೊಂದಿಗೆ ಮುಂದಿನ ಭಾಗದಲ್ಲಿ ಚರ್ಚಿಸಲಾಯಿತು.

ಕೋಷ್ಟಕ 5.4.5
ಪ್ರತಿದಿನ ಹಲ್ಲುಜ್ಜುವುದು, ಪ್ರತಿದಿನ ಸ್ನಾನ

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇಕಡ	ಸದಸ್ಯರು	ಶೇಕಡ	ಒಟ್ಟು	ಶೇಕಡ
01.	ಪ್ರತಿ ದಿನ	66	55%	81	45%	147	49%
02.	ವಾರಕ್ಕೆ ಕೆಲ ದಿನ	42	35%	45	25%	87	29%
03.	ಯಾವಾಗಲಾದರೂ	12	10%	54	30%	66	22%
	ಒಟ್ಟು	**120**	**100%**	**180**	**100%**	**300**	**100%**

ಕೊಷ್ಟಕದಲ್ಲಿರುವ ದತ್ತಾಂಶವು ಜನರ ಆಚರಣೆಗಳನ್ನು ತೋರುತ್ತಿದೆ. ಅರ್ಧದಷ್ಟು ಜನ ಎಂದು ಹೇಳಲಾಗದಿದ್ದರೂ ಅರ್ಧಕ್ಕೆ ಸಮೀಪದಷ್ಟು ಜನರು ಪ್ರತಿದಿನವೂ ಹಲ್ಲುಜ್ಜುತ್ತಾರೆ. ಪ್ರತಿದಿನವೂ ಸ್ನಾನ ಮಾಡುತ್ತಾರೆ. ಪದಾಧಿಕಾರಿಗಳಲ್ಲಿ ಬಹುತೇಕ ಜನ ಈ ರೂಢಿಯನ್ನು

ಪಾಲಿಸಿಕೊಂಡಿದ್ದಾರೆ. ಶೇ.55 ರಷ್ಟು ಜನರು ಈ ಆಚರಣೆಯನ್ನು ಮಾಡುತ್ತಾರೆ. ಸದಸ್ಯರು ಶೇ.45 ರಷ್ಟು ಜನರು ಸದಸ್ಯರು ಪ್ರತಿದಿನ ಹಲ್ಲುಜ್ಜುತ್ತಾರೆ. ಸ್ನಾನ ಮಾಡುತ್ತಾರೆ. ಪ್ರತಿದಿನದ ನೈರ್ಮಲ್ಯದ ಬಗೆಗೆ ಜಾಗೃತಿ ಹೆಚ್ಚಾಗಿ ಪದಾಧಿಕಾರಿಗಳಲ್ಲಿದೆ ಎಂದು ತಿಳಿದು ಬರುತ್ತದೆ.

ವಾರಕ್ಕೆ ಕೆಲವು ದಿನಗಳು ಮಾತ್ರ ಸ್ನಾನ ಮಾಡುವವರಲ್ಲಿ ಪದಾಧಿಕಾರಿಗಳದ್ದೇ ಮೇಲುಗೈ ಆಗಿರುವುದು ಆಸಕ್ತಿಕರ ಅಂಶವಾಗಿದೆ. ಸದಸ್ಯರು ಶೇ.25 ರಷ್ಟು ಜನ ವಾರದಲ್ಲಿ ಕೆಲದಿನ ಮಾಡಿದರೆ ಪದಾದಿಕಾರಿಗಳು ಶೇ.35 ರಷ್ಟು ಮಾಡುತ್ತಾರೆ. ಇದಕ್ಕೆ ಕಾರಣ ಮನೆಯಲ್ಲಿ ಪ್ರತ್ಯೇಕ ಸ್ನಾನಗ್ರಹ ಇಲ್ಲದೇ ಇರುವುದು, ಅಥವಾ ಪ್ರತಿದಿನವೂ ಹೊಳೆಗೆ ಸ್ನಾನಕ್ಕೆ ಹೋಗಲಾರದವರು ಎಂದು ಚರ್ಚಿಸಿದಾಗ ತಿಳಿದು ಬಂತು. ಇನ್ನೊಂದು ಮಹತ್ವದ ಕಾರಣವೆಂದರೆ ನೀರು ಸಂಗ್ರಹಕ್ಕೆ ದೂರದ ಹಾದಿ ಸವೆಸಬೇಕಿರುವುದು. ಹಾದಿ ಕ್ರಮಿಸುವ ಕಾರಣದಿಂದಲೇ ನೀರು ತಂದು ಚೆಲ್ಲುವುದು ತರವಲ್ಲ ಎಂದು ಸ್ನಾನವನ್ನು ಮುಂದೂಡುತ್ತಾರೆ.

ಯಾವಾಗಲಾದರೂ ಸ್ನಾನ ಮಾಡುವವರು ಪದಾಧಿಕಾರಿಗಳಲ್ಲಿ ಶೇ.10 ರಷ್ಟು ಜನ. ಸದಸ್ಯರಲ್ಲಿ ಶೇ.30 ರಷ್ಟು ಜನ. ಒಟ್ಟಾರೆ ಶೇ.22 ರಷ್ಟು ಜನರು ಪ್ರತಿದಿನವೂ ಸ್ನಾನ ಹಾಗೂ ಹಲ್ಲುಜ್ಜುವುದು ಅವಶ್ಯವೆಂದೇ ಭಾವಿಸಿದಂತಿಲ್ಲ ಈ ವಿಭಾಗದಲ್ಲಿ ಸುಧಾರಣೆಯಾಗಬೇಕಿರುವುದು ಅತ್ಯಗತ್ಯವಾಗಿದೆ.

ಮಕ್ಕಳ ಆರೋಗ್ಯ ರಕ್ಷಣೆ:

ಮಕ್ಕಳು ಮಾನವ ಸಂಪನ್ಮೂಲದ ಮೊಗ್ಗುಗಳಾಗಿವೆ. ಸಂಪೂರ್ಣವಾಗಿ ಆರೋಗ್ಯವಂತ ಮಗು ದೇಶದ ನಿರ್ಮಾಣಕ್ಕೆ ಭದ್ರ ಬುನಾದಿಯಾಗಬಲ್ಲದು. ಆದರೆ ಮಾನಸಿಕವಾಗಿ ದುರ್ಬಲವಾಗಿರುವ ಮಕ್ಕಳು, ಆರೋಗ್ಯವಂತ ಮನಸನ್ನು ಹೊಂದಿರದ ಮಕ್ಕಳು, ಚಟಗಳಿಗೆ ದಾಸರಾದ ಮಕ್ಕಳು ಇವರೆಲ್ಲ ಹೇಗೆ ತಾನೇ ಸುಭದ್ರ ದೇಶದ ನಾಗರಿಕರಾಗಬಲ್ಲರು? ಮಗುವಿನ ಆರೋಗ್ಯ ಸಂರಕ್ಷಣೆಯಿಂದಲೇ ಮಾನಸಿಕ ಸ್ವಾಸ್ಥ್ಯವನ್ನೂ ಕಾಯಬಹುದು. "ಮಾನಸಿಕವಾಗಿ, ದೈಹಿಕವಾಗಿ ಸದೃಢವಾದ ಮಗುವೇ ದೇಶದ ಸಂಪತ್ತು ಆಗುತ್ತದೆ. ಇಲ್ಲದಿದ್ದಲ್ಲಿ ಮಗು ಸಮಾಜಕ್ಕೂ ಕುಟುಂಬಕ್ಕೂ ಭಾರವಾಗುತ್ತದೆ".

ಮಕ್ಕಳ ಸಮಸ್ಯೆಗಳು:

ಭಾರತದ ಜನಸಂಖ್ಯೆಯಲ್ಲಿ ಒಂದನೇ ಮೂರರಷ್ಟು ಭಾಗ ಮಕ್ಕಳ ಸಂಖ್ಯೆಯಿದೆ. ಆದರೆ ಬಹುತೇಕ ಮಕ್ಕಳು ಪೌಷ್ಠಿಕ ಅಂಶದ ಕೊರತೆಯಿಂದ ಬಳಲುವುದೇ ದೊಡ್ಡ ಸಮಸ್ಯೆಯಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಜಗತ್ತಿನಲ್ಲಿ ಅತಿ ಹೆಚ್ಚು ಮಕ್ಕಳು ಪೌಷ್ಠಿಕಾಂಶದ ಕೊರತೆಯಿಂದ

ಬಳಲುತ್ತಾರೆ. ಅದರಲ್ಲಿ ಮೊದಲನೇ ಸ್ಥಾನ ಬಾಂಗ್ಲಾದೇಶಕ್ಕೆ ಇದ್ದರೆ ಎರಡನೆಯದು ಪಾಕಿಸ್ತಾನ ಹಾಗೂ ನಂತರದ ಸ್ಥಾನ ಭಾರತದ್ದಾಗಿದೆ.

ಭಾರತೀಯ ಜೀವನ ಶೈಲಿ ಹಾಗೂ ಜೀವನ ಮಟ್ಟವನ್ನು ಗಣನೆಗೆ ತೆಗೆದುಕೊಂಡರೆ ಪ್ರತಿ ಮಕ್ಕಳಿಗೂ ಪೌಷ್ಠಿಕ ಆಹಾರ ನೀಡುವುದು ಕಷ್ಟವೇ ಆಗಿದೆ. ಕೆಳಸ್ತರದ ಜನರಲ್ಲಿ, ಕೆಳವರ್ಗದ ಜನರಲ್ಲಿ ಬಡತನ ಹಾಗೂ ಅಜ್ಞಾನದಿಂದ ತುತ್ತು ಅನ್ನಕ್ಕೂ ತತ್ವಾರವಾದ ಸ್ಥಿತಿಯೇ ಇದೆ. ಇದಲ್ಲದೇ "ಹುಟ್ಟಿಸಿದ ದೇವರು ಹುಲ್ಲು ಮೇಯಿಸಿಯಾನು" ಎಂಬಂಥ "ಮನೋಭಾವ, ಅದೃಷ್ಟ ಗಟ್ಟಿಯಿದ್ದಲ್ಲಿ ಕಲ್ಲುಂಡು ಕರಗಿಸಿಯಾನು" ಎಂಬಂಥ ನಂಬಿಕೆಗಳು ಮಕ್ಕಳಿಗೆ ವಿಶೇಷ ಪ್ರೀತಿ, ಪೌಷ್ಠಿಕಾಂಶದ ಆಹಾರದ ಮಹತ್ವದ ಬಗೆಗೆ ತಿಳಿಯುವಲ್ಲಿ ತಡೆಗೋಡೆಯಾಗುತ್ತವೆ. ಇದರ ಪರಿಣಾಮವಾಗಿ ಶೇ.63 ರಷ್ಟು ಜನ ಮಕ್ಕಳು ಪೌಷ್ಠಿಕಾಂಶದ ಕೊರತೆಯಿಂದ ಬಳಲುತ್ತಾರೆ. ಗರ್ಭಿಣಿಯರಿಗೆ ಆರೈಕೆಯಿಲ್ಲದೇ ಶೇ.70 ರಷ್ಟು ಮಕ್ಕಳು 2.5 ಕೆಜಿಗಿಂತಲೂ ಕಡಿಮೆ ತೂಕದ ಮಕ್ಕಳು ಹುಟ್ಟುತ್ತವೆ. (ಪಾಟ್ನಾಯಕ್ 1998), ಹದಿಹರೆಯದ ಮಕ್ಕಳು ಕಿಶೋರಾವಸ್ಥೆಯ ಮಕ್ಕಳು ಪೌಷ್ಠಿಕಾಂಶದ ಕೊರತೆಯಿಂದಲೇ ಸದೃಢವಾಗಿ ಬೆಳೆಯುವುದಿಲ್ಲ. ಇದರಿಂದಾಗಿ ಅವರು ಶಿಕ್ಷಣದಲ್ಲಿಯೂ ಹಿಂದಕ್ಕೆ ಉಳಿಯುತ್ತಾರೆ ಆರೋಗ್ಯವೂ ಅಷ್ಟಕ್ಕಷ್ಟೇ ಆಗಿರುತ್ತದೆ.

ಗ್ರಾಮೀಣ ಮಹಿಳೆ ಹಾಗೂ ಮಕ್ಕಳ ಅನಾರೋಗ್ಯದ ಬಗೆಗೆ ಅರಿವು:

ಮಕ್ಕಳಲ್ಲಿ ಬಹುತೇಕ ಹಸುಳೆಗಳು ತಮ್ಮ ಎರಡು ವರ್ಷಗಳ ಅವದಿಗೆ ಮುನ್ನವೇ ಕೊನೆಯುಸಿರೆಳೆಯುತ್ತವೆ. 'ಅಮ್ಮ', ಕ್ಷಯ, ನಂಜು, ಡಿಫ್ತೀರಿಯಾ ಮುಂತಾದ ರೋಗಗಳಿಂದಲೇ ಮಗು ಸಾವನ್ನಪ್ಪುತ್ತವೆ. ಈ ಐದು ಮರಣಾಂತಿಕ ರೋಗಗಳಿಂದ ಸಂರಕ್ಷಿಸಲು ಲಸಿಕಾಕರಣವನ್ನು ಜನಪ್ರಿಯಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಎಲ್ಲ ಪ್ರಾಥಮಿಕ ಕೇಂದ್ರಗಳಲ್ಲಿಯೂ ಲಸಿಕಾಕರಣದ ಬಗೆಗೆ ಜಾಗೃತಿಯನ್ನು ಹೆಚ್ಚಿಸುವತ್ತ ಗಮನ ಕೇಂದ್ರೀಕರಿಸಲಾಗಿದೆ. ಸುರಕ್ಷಿತ ಹೆರಿಗೆ ಹಾಗೂ ಹಸುಳೆಗಳ ಸಂರಕ್ಷಣೆಗೆ ಲಸಿಕಾಕರಣವನ್ನು ಜನಾಂದೋಲನವಾಗಿಸಿದ್ದು ಹಸುಗೂಸುಗಳ ಮರಣದರವನ್ನು ಕಡಿತಗೊಳಿಸುವುದು ಕಡಿವಾಣ ಹಾಕುವುದು, ಮುಖ್ಯ ಉದ್ದೇಶವಾಗಿದೆ. ಅದರೊಂದಿಗೆ ಆರೋಗ್ಯವಂತ ಮಗುವನ್ನು ಬೆಳೆಸುವುದು. ರೋಗಮುಕ್ತವಾಗಿ ಬೆಳೆಸುವುದು.

ಈ ಲಸಿಕಾ ಕಾರ್ಯಕ್ರಮವು ಕ್ಷಯದ ನಂಜನ್ನು ದೂರವಿಡುತ್ತದೆ. ಇದೇ ಕಾರಣದಿಂದಲೇ ಲಸಿಕಾ ಕರಣ ಕಾರ್ಯಕ್ರಮವು ಜೋರುಗತಿಯಲ್ಲಿ ಸಾಗುತ್ತಿದೆ. ಆದರೆ ಈ ಜಾಗೃತಿಯ ಮಟ್ಟ ಗ್ರಾಮೀಣ ಮಹಿಳೆಯರಿಗೆ ಅದೆಷ್ಟರ ಮಟ್ಟಿಗೆ ಜನರನ್ನು ಮುಟ್ಟಿದೆ ಎಂಬುದನ್ನು ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

ಕೋಷ್ಟಕ 5.4.6
ಗ್ರಾಮೀಣ ಮಹಿಳೆಯರಲ್ಲಿ ಲಸಿಕಾಕರಣದ ಬಗೆಗೆ ಜಾಗೃತಿ

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇಕಡ	ಸದಸ್ಯರು	ಶೇಕಡ	ಒಟ್ಟು	ಶೇಕಡ
01.	ಅರಿವು	48	40%	36	20%	84	28%
02.	ಪರಿಣಾಮಕಾರಿಯಾಗಿ	24	26%	26	20%	60	20%
03.	ಇಲ್ಲವೇ ಇಲ್ಲ	48	40%	108	60%	156	52%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿ ಹೇಳಿಕೆದಾರರಿಗೆ ಮಕ್ಕಳಿಗೆ ಬರುವ ಪ್ರಾಣಾಂತಿಕ ರೋಗಗಳ ಬಗೆಗೆ ಅರಿವು ಇದೆಯೇ ಎಂದು ಕೇಳಲಾಗಿತ್ತು. ಅದರಲ್ಲಿ ಬಹುತೇಕ ಜನರಿಗೆ ಅರ್ಧಕ್ಕಿಂತ ಹೆಚ್ಚಿನ ಜನರು ಗೊತ್ತಿಲ್ಲ ಎಂದು ಹೇಳಿದವರು ಶೇ.52 ರಷ್ಟು. ಪರಿಣಾಮಕಾರಿಯಾಗಿ ಎಂದು ಹೇಳಿದವರು ಶೇ.20 ರಷ್ಟು ಜನರು.ಇವರಿಗೆಲ್ಲ ಅರಿವು ಇದೆ ಮಾಹಿತಿ ಇದೆ ರೋಗಗಳ ಬಗೆಗೆ ಅರಿವು ಇದೆ ಎಂದುವರ ಶೇ.20 ರಷ್ಟು ಜನರು. ಪರಿಪೂರ್ಣವಾಗಿ ಅರಿವಿದೆ ಎಂದವುರ ಶೇ.28 ರಷ್ಟು, ಬಹುತೇಕ ಜನರಿಗೆ ರೋಗಗಳ ಬಗೆಗೆ ಅರಿವು ಇಲ್ಲವೆ ಇಲ್ಲ ಎಂಬುದು ಅರ್ಥವಾಗುತ್ತದೆ.

ಪಲ್ಸ್ ಪೋಲಿಯೋ ಬಗೆಗೆ ಅರಿವು :

ಮಕ್ಕಳ ಮರಣಾಂತಿಕ ರೋಗಗಳ ಬಗ್ಗೆ ಚರ್ಚಿಸುವಾಗಲೇ ಸರ್ಕಾರವು ಅಂಗವೈಕಲ್ಯದಿಂದ ಕಾಡುವ ಮಕ್ಕಳ ರೋಗದ ಹತೋಟಿಗೆ ರಾಷ್ಟ್ರೀಯ ಕಾರ್ಯಕ್ರಮವನ್ನೇ ಹಮ್ಮಿಕೊಂಡಿದೆ. ಪಲ್ಸ್ ಪೋಲಿಯೋ ಅಭಿಯಾನ ಆರಂಭವಾಗಿದ್ದೇ ಸುರಕ್ಷಿತ ಬಾಲ್ಯ ಮತ್ತು ಸುರಕ್ಷಿತ ತಾಯ್ತನದ ಉದ್ದೇಶದಿಂದ. 1980ರಲ್ಲಿ ತಮಿಳು ನಾಡಿನಲ್ಲಿ ಆರಂಭವಾದ ಈ ಅಭಿಯಾನ ಇಂದು ವಿಶ್ವದ ಅತಿ ದೊಡ್ಡ ಪರಿಸರ ಜಾಗೃತಿ ಕಾರ್ಯಕ್ರಮವಾಗಿದೆ.

1995–96ರಲ್ಲಿ ದೇಶದಾದ್ಯಂತ ಪ್ರಚಾರಾಂದೋಲನದ ರೂಪ ಪಡೆದ ಪಲ್ಸ್ ಪೋಲಿಯೋದ ಉದ್ದೇಶ ಕ್ರಿ.ಶ.2000ರ ವೇಳೆಗೆ ಪೋಲಿಯೋ ನಿರ್ಮೂಲನೆಯೇ ಆಗಿದೆ. ಆದರೆ ವಿಶ್ವಸಂಸ್ಥೆಯ ಹೇಳಿಕೆ ಉದ್ದೇಶಗಳಿಗೆ ತಕ್ಕಂತೆಯೇ ಈಗ ರೋಗ ನಿಯಂತ್ರಣ ಸಂಪೂರ್ಣವಾಗಿದೆ.

ಸರ್ಕಾರದ ಪ್ರಯತ್ನಗಳು ಹಾಗೂ ಮಹಿಳೆಯರ ಜಾಗೃತಿಯಿಂದಾಗಿ ಹುಟ್ಟಿನಿಂದ 5–ವರ್ಷದ ವಯೋಮಾನದ ಮಕ್ಕಳಿಗೆ ಪೋಲೀಯೋ ಹನಿಗಳನ್ನು ಕುಡಿಸಲು ಪಾಲಕರೇ ಒತ್ತಾಯಿಸುತ್ತಿದ್ದಾರೆ. ಆ ಮಟ್ಟಿಗೆ ಪಲ್ಸ್ ಪೋಲೀಯೋ ಜನಾಂದಲೋನ ಯಶಸ್ವಿಯಾಗಿದೆ ಎಂದೇ ಹೇಳಬಹುದಾಗಿದೆ.

ಹೇಳಿಕೆದಾರರೊಂದಿಗೆ ಚರ್ಚಿಸುವಾಗ ತಿಳಿದು ಬಂದವಿಷಯವೂ ಆಸಕ್ತಿಕರವಾಗಿದೆ. ಗ್ರಾಮೀಣ ಮಹಿಳೆಯರು ಈ ಪ್ರಚಾರಾಂದೋಲನದಲ್ಲಿ ಭಾಗಿಯಾಗಿಲ್ಲ. ಅಭಿವೃದ್ಧಿಪರ ಕಾರ್ಯಗಳಲ್ಲಿ ಪಾಲ್ಗೊಳ್ಳುವಿಕೆಯ ಪಾತ್ರ ಕಡಿಮೆ ಇದೆ ಎಂದೇ ಹೇಳಬಹುದು. ಪಲ್ಸ್ ಪೋಲೀಯೋ ಬಗೆಗೆ ಅರಿವಿದೆ ಆದರೆ ಅದರೊಂದಿಗೆ ಪಾಲ್ಗೊಳ್ಳಬೇಕು ಎಂಬ ಮಾಹಿತಿ ಇಲ್ಲ. ಈ ವಿಷಯ ಕುರಿತು ಮುಂದಿನ ಕೋಷ್ಟಕದಲ್ಲಿ ಮಹಿಳೆಯರೊಂದಿಗೆ ವಿಶ್ಲೇಷಿಸಲಾಗಿದೆ.

ಕೋಷ್ಟಕ 5.4.7
ಲಸಿಕಾ ಕಾರ್ಯಕ್ರಮದ ಬಗ್ಗೆ ಇರುವ ಅರಿವು

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇ.	ಸದಸ್ಯರು	ಶೇ	ಒಟ್ಟು	ಶೇ.
01.	ಅತ್ಯಂತ ಪರಿಣಾಮಕಾರಿಯಾಗಿ	24	40%	54	30%	102	34%
02.	ಪರಿಣಾಮಕಾರಿಯಾಗಿ	36	30%	90	50%	126	42%
03.	ಇಲ್ಲವೇ ಇಲ್ಲ	36	30%	90	50%	126	42%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದಲ್ಲಿಯ ದತ್ತಾಂಶವು ತೋರಿಸುವ ಮಾಹಿತಿಯೂ ಆಸಕ್ತಿಕರವಾಗಿದೆ. ಅತ್ಯಂತ ಜನಪ್ರಿಯ ಯಶಸ್ವಿ ಪ್ರಚಾರಾಂದೋಲನವೂ ಶೇ.42 ರಷ್ಟು ಗ್ರಾಮೀಣ ಮಹಿಳೆಯರನ್ನು ತಲುಪಿಲ್ಲ. ಆದರೆ ಇದಕ್ಕೆ ತದ್ವಿರುದ್ಧವಾಗಿ ಶೇ.34 ರಷ್ಟು ಜನರು ಅತ್ಯಂತ ಪರಿಣಾಮಕಾರಿಯಾಗಿ ಎಲ್ಲವನ್ನೂ ಅರಿತಿದ್ದಾರೆ. ಶೇ.24 ರಷ್ಟು ಜನರಿಗೆ ಪರಿಣಾಮಕಾರಿಯಾಗಿ ಎಲ್ಲವೂ ಅರ್ಥವಾಗುತ್ತದೆ. ತಿಳಿದವರಲ್ಲಿ ಪದಾಧಿಕಾರಗಳ ಸಂಖ್ಯೆಯೇ ಹೆಚ್ಚಿನದು. ಅಲ್ಲಿಗೆ ಮಾಧ್ಯಮಗಳಿಗೆ ಹೆಚ್ಚಾಗಿ ಅರಿತವರು ಇದರ ಬಗೆಗೆ ಮಾಹಿತಿಯುಳ್ಳವರು ಆಗಿದ್ದಾರೆ.

ಪಲ್ಸ್ ಪೋಲಿಯೋ ನಿರ್ವಹಣೆ:

ಮಹಿಳಾ ಸಬಲೀಕರಣ ಅರಿಯುವಲ್ಲಿ ಮಕ್ಕಳ ಆರೋಗ್ಯದ ಬಗೆಗಿನ ಅರಿವು ಬಗೆಗೆ ಅಧ್ಯಯನ ಮಾಡುವಾಗ ಸರಳ ಮಾನದಂಡವೆಂದರೆ ಅದೆಷ್ಟು ಜನ ಮಹಿಳೆಯರಿಗೆ ಪಲ್ಸ್ ಪೋಲೀಯೊ ಕಾರ್ಯಕ್ರಮದ ಬಗೆಗೆ ಅರಿವು ಇದೆ ಎಂಬುದನ್ನು ಅರಿಯುವುದು. ಈ ದೃಷ್ಟಿಯಿಂದ ಮಾಹಿತಿ ಸಂಗ್ರಹಿಸಿದಾಗ ಅವರು ಅದೆಷ್ಟು ಜಾಗೃತರಾಗಿದ್ದಾರೆ ಎಂದು ಅಳೆಯಲು ಸುಲಭವಾಗಿ ಸಾಧ್ಯವಾಯಿತು.

ಹೀಗಾಗಿ ಹೇಳಿಕೆದಾರರು ತಮ್ಮ ಮಕ್ಕಳು, ಬಂಧುಬಳಗದ ಮಕ್ಕಳಿಗೆ ಪಲ್ಸ್ ಪೋಲೀಯೋ ಹಾಕಿಸಿದ್ದಾರೆಯೇ ಎಂಬುದನ್ನು ಅರಿಯಲು ಯತ್ನಿಸಲಾಯಿತು.

ಕೋಷ್ಟಕ 5.4.8

ಹೇಳಿಕೆದಾರರು ತಮ್ಮ ಮಕ್ಕಳಿಗೆ, ಬಂಧು ಬಳಗದ ಮಕ್ಕಳಿಗೆ ಪಲ್ಸ್ ಪೋಲೀಯೋ ಹಾಕಿಸಿರುವ ಬಗೆಗೆ

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇ.	ಸದಸ್ಯರು	ಶೇ.	ಒಟ್ಟು	ಶೇ.
01.	ಅತ್ಯಂತ ಪರಿಣಾಮಕಾರಿಯಾಗಿ	84	70%	94	52%	178	50%
02.	ಪರಿಣಾಮಕಾರಿಯಾಗಿ	36	30%	50	28%	86	28%
03.	ಇಲ್ಲವೇ ಇಲ್ಲ	00	00%	36	20%	36	12%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದ ಪ್ರಕಾರ ಶೇ.50 ರಷ್ಟು ಜನರು ಪಲ್ಸ್ ಪೋಲಿಯೋದ ಮಹತ್ವ ಅರಿತವರಾಗಿದ್ದಾರೆ. ತಮ್ಮ ಮಕ್ಕಳು, ಬಂಧು-ಬಾಂಧವರ ಮಕ್ಕಳು ಎಲ್ಲರ ಬಗೆಗೂ ಕಾಳಜಿ ಹೊಂದಿದವರಾಗಿದ್ದಾರೆ. ಅದೇ ಕಾರಣಕ್ಕೇ ಅವರು ಅತ್ಯಂತ ಪರಿಣಾಮಕಾರಿಯಾಗಿ ಅರಿತವರ ಸಮೂಹದಲ್ಲಿದ್ದಾರೆ. ಇದರಲ್ಲಿ ಪದಾಧಿಕಾರಿಗಳು ಶೇ.70 ರಷ್ಟು ಅರಿತಿದ್ದರೆ ಸದಸ್ಯರು ಶೇ.52 ರಷ್ಟು ಮಾಹಿತಿಯುಳ್ಳವರು ಆಗಿದ್ದಾರೆ. ಆಸಕ್ತಿಕರ ಅಂಶವೆಂದರೆ ಇಲ್ಲವೇ ಇಲ್ಲ ಎಂದವರು ಪದಾಧಿಕಾರಿಗಳಲ್ಲಿ ಇಲ್ಲವೇ ಇಲ್ಲ. ಈ ಕೋಷ್ಟಕದಿಂದ ಪದಾಧಿಕಾರಿಗಳು ಸದಸ್ಯರಿಗಿಂತ ಹೆಚ್ಚಿನ ಮಾಹಿತಿ ಹೊಂದಿರುವುದು ಮತ್ತೊಮ್ಮೆ ಸಾಬೀತು ಪಡಿಸುತ್ತದೆ.

ಇದರರ್ಥ ಇನ್ನೂ ಸ್ಪಷ್ಟಗೊಳಿಸಬೇಕು ಎಂದರೆ ಆರೋಗ್ಯದ ಯೋಜನೆಗಳ ಬಗೆಗೆ ಗ್ರಾಮೀಣ ಮಹಿಳೆಯರಿಗೆ ಅರಿವಿದೆ ಎಂದು ಹೇಳಬಹುದಾಗಿದೆ. ಅವರಿಗೆ ಲಸಿಕಾಕರಣ, ಪಲ್ಸ್ ಪೋಲಿಯೋದ ಬಗೆಗೆ ಮಾಹಿತಿ ಇದೆ ಎಂದು ಹೇಳಬಹುದಾಗಿದೆ.

ಗರ್ಭಿಣಿಯರು ಹಾಗೂ ಹಾಲುಣಿಸುವ ಅಮ್ಮಂದಿರ ಆರೋಗ್ಯ ಸಂರಕ್ಷಣೆ:

ಸ್ವಾತಂತ್ರ್ಯ ಭಾರತದಲ್ಲಿ ಹೆಚ್ಚಾಗಿ ಮಹಿಳೆಯರ ಮರಣದರ ಏರುಗತಿಯಲ್ಲಿ ಕಂಡು ಬರುತ್ತಿದ್ದುದು ಅವರ ಗರ್ಭಾವಸ್ಥೆ, ಹೆರಿಗೆ ಸಂದರ್ಭ ಅಥವಾ ಹೆರಿಗೆ ಉತ್ತರ ಹಾಲುಣಿಸುವ ಅವಧಿಯಲ್ಲಿ. ಅಸುರಕ್ಷಿತ ಹೆರಿಗೆಯಿಂದಾಗಿ, ಸಣ್ಣ ವಯಸ್ಸಿನ ತಾಯ್ತನ ಅಥವಾ ನಂಜು ಇತರ ಇತ್ಯಾದಿ ಕಾರಣಗಳಿಂದಾಗಿ ಮಹಿಳೆಯು ಸಾವನ್ನಪ್ಪುವುದು ಸಹಜವಾಗಿತ್ತು. ಅದೇ ಕಾರಣಕ್ಕೆ ಹೆರಿಗೆಯೆಂಬುದು ಪುನರ್ಜನ್ಮ ಪಡೆದಂತಾಯಿತು. ಹೀಗಾಗಿ ಭಾರತ ಸರ್ಕಾರ ಈ ವಿಷಯವನ್ನು ಮನಗಂಡು 1994ರಲ್ಲಿ ಸಂತಾನೋತ್ಪತ್ತಿ ಹಾಗೂ ಮಗುವಿನ ಆರೋಗ್ಯ (ಆರ್‌ಸಿಎಚ್) ಯೋಜನೆಯ ಉದ್ದೇಶಗಳು ಈ ಕೆಳಗಿನಂತೆ ಉದ್ಧರಿಸಬಹುದಾಗಿದೆ.

1. ಸುರಕ್ಷಿತ ತಾಯ್ತನ, ತಾಯ್ತನದ ಸಂದರ್ಭದಲ್ಲಿ ಪರಿಣಾಮಕಾರಿಯಾದ ಕಾಳಜಿ
2. ಬೇಡದ ಗರ್ಭಗಳನ್ನು ತಡೆಯಲು ಸಾಕಷ್ಟು ಮುನ್ನೆಚ್ಚರಿಕಾ ಕ್ರಮಗಳು

3. ಬೇಡದ ಗರ್ಭಗಳನ್ನು ತೆಗೆಯಲು ಕಾನೂನಾತ್ಮಕವಾದ ಸುರಕ್ಷಿತ ಗರ್ಭಪಾತ
4. ಪೌಷ್ಠಿಕಾಂಶಗಳ ಪೂರೈಕೆ
5. ಲೈಂಗಿಕ ರೋಗಗಳಿಗೆ ಬಲಿಯಾಗುವುದನ್ನು ತಡೆಯುವುದು ಮತ್ತು ಚಿಕಿತ್ಸೆ ನೀಡುವುದು.

ಸರಳ ವಾಕ್ಯಗಳಲ್ಲಿ ಹೇಳಬೇಕೆಂದರೆ ಗ್ರಾಮೀಣ ಮಹಿಳೆಯರ ಆರೋಗ್ಯಕ್ಕೆ ಬೇಡದ ಗರ್ಭಗಳನ್ನು ತಡೆಯುವುದು, ಸುರಕ್ಷಿತ ಗರ್ಭ ನಿವಾರಣೆ ಮಾಡುವುದು, ಆರೋಗ್ಯವಂತ ತಾಯ್ತನಕ್ಕಾಗಿ ಪೋಷಕಾಂಶಗಳನ್ನು, ಪೌಷ್ಟಿಕಾಂಶಗಳನ್ನು ಆಹಾರ ಹಾಗೂ ವೈದ್ಯಕೀಯ ಪದ್ಧತಿ ಔಷಧಿಗಳ ಮೂಲಕ ನೀಡುವುದು. ಈ ಉದ್ದೇಶಕ್ಕಾಗಿ ಗರ್ಭಿಣಿಯರ ನಿಯಮಿತ ತಪಾಸಣೆ ಮಾಡುವುದು ಎಂದು ಹೇಳಬಹುದಾಗಿದೆ.

ಗರ್ಭಿಣಿಯ ನಿಯಮಿತ ತಪಾಸಣೆ:

ಗರ್ಭಾವಸ್ಥೆಯಲ್ಲಿ ನಿಯಮಿತ ತಪಾಸಣೆಯಿಂದ ಸುರಕ್ಷಿತ ಹೆರಿಗೆ ಹಾಗೂ ಸಮೃದ್ಧ ತಾಯ್ತನ ಸಾಧ್ಯ. ಆದರೆ ಗ್ರಾಮೀಣ ಮಹಿಳೆಯರು ಗರ್ಭಧಾರಣೆಯ ಸಂದರ್ಭದಲ್ಲಿ ವೈದ್ಯಕೀಯ ಸಲಹೆ, ಸೂಚನೆಗಳನ್ನು ಪಡೆಯಬೇಕು ಎಂದು ನಂಬಿದವರೇ ಅಲ್ಲ. ಆದರೂ ಅವರ ಮನೋಭಾವದಲ್ಲಿ ಬದಲಾವಣೆಗಳು ಬಂದಿವೆ. ಅದು ಎಷ್ಟರ ಮಟ್ಟಿಗೆ ಎಂದು ಪರಿಶೀಲಿಸಲು ಹೇಳಿಕೆದಾರರೊಂದಿಗೆ ಈ ಬಗೆಗೆ ಚರ್ಚಿಸಲಾಯಿತು.

ಕೋಷ್ಟಕ 5.4.9

ವೈದ್ಯರಿಂದ ಗರ್ಭಿಣಿಯರ ನಿಯಮಿತ ತಪಾಸಣೆಯಲ್ಲಿ ಹೊಂದಿರುವ ನಂಬಿಕೆ

ಕ್ರ ಸಂ.	ಮನೋಭಾವ	ಪದಾಧಿಕಾರಿಗಳು	ಶೇಕಡ	ಸದಸ್ಯರು	ಶೇಕಡ	ಒಟ್ಟು	ಶೇಕಡ
01.	ಅತ್ಯಂತ ಪರಿಣಾಮಕಾರಿಯಾಗಿ	54	45%	63	35%	117	39%
02.	ಪರಿಣಾಮಕಾರಿಯಾಗಿ	42	35%	45	25%	87	29%
03.	ಇಲ್ಲವೇ ಇಲ್ಲ	24	20%	72	40%	96	32%
	ಒಟ್ಟು	**120**	**100%**	**180**	**100%**	**300**	**100%**

ಈ ಕೋಷ್ಟಕದ ವಿವರಣೆಯ ಪ್ರಕಾರ, ವೈದ್ಯರಿಂದ ನಿಯಮಿತವಾಗಿ ತಪಾಸಣೆಗೆ ಒಳಗಾಗಬೇಕು ಎಂಬ ಬಗೆಗೆ ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾದವು. ಶೇ.32 ರಷ್ಟು ಜನರು ಇದನ್ನು ಅನಗತ್ಯವೆಂದು ಭಾವಿಸಿದ್ದಾರೆ. ಅದರಲ್ಲೂ ಸದಸ್ಯರು ಶೇ.40 ರಷ್ಟು ಜನರು ನಿಯಮಿತ ತಪಾಸಣೆ ಅನಗತ್ಯವೆಂದೇ ಹೇಳುತ್ತಾರೆ. ಅವರ ಪ್ರಕರ ಗರ್ಭಧಾರಣೆ ಒಂದು ನೈಸರ್ಗಿಕ ಕ್ರಿಯೆ ಅದೇನು

ರೋಗವಲ್ಲ. ಹಾಗಾಗಿ ವೈದ್ಯಕೀಯ ತಪಾಸಣೆಯ ಅಗತ್ಯವಿಲ್ಲ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಶೇ.29 ರಷ್ಟು ಜನರು ತಪಾಸಣೆ ಅಗತ್ಯವೆನ್ನುತ್ತಾರೆ. ಅವರಿಗೆ ಗರ್ಭಧಾರಣೆಯ ಸಮಯದ ಸಮಸ್ಯೆಗಳ ಬಗೆಗೆ ಕೇಳಲು ವೈದ್ಯಕೀಯ ಸಲಹೆ ಅಗತ್ಯವೆನ್ನುತ್ತಾರೆ. ಇದರಲ್ಲಿಯೂ ಪದಾಧಿಕಾರಿಗಳ ಸಂಖ್ಯೆಯೇ ಹೆಚ್ಚು. ಆದರೆ ನಿಯಮಿತವಾಗಿ ನಿಗದಿತ ಅವಧಿಯಲ್ಲಿ ತಪಾಸಣೆ ಅತ್ಯಗತ್ಯವೆಂದು ನಂಬಿದವರು ಶೇ.39 ರಷ್ಟು. ಇವರಿಗೆ ಸುರಕ್ಷಿತ ಹೆರಿಗೆ, ಸುರಕ್ಷಿತ ತಾಯ್ತನದ ಮಹತ್ವ ತಿಳಿದಿದ್ದು ಅದಕ್ಕೆ ವೈದ್ಯಕೀಯ ಸಲಹೆ ಸಮಾಲೋಚನೆ ಅತ್ಯಗತ್ಯವೆಂದು ನಂಬುತ್ತಾರೆ ಹಾಗೂ ನಿಗದಿತ ವೇಳೆಯಲ್ಲಿ ನಿಯಮಿತ ವೈದ್ಯಕೀಯ ಸಲಹೆಗೆ ಬಹುತೇಕ ಜನರು ಒಪ್ಪಿಕೊಳ್ಳುತ್ತಾರೆ.

ಒಟ್ಟಾರೆಯಾಗಿ ಈ ಅಧ್ಯಾಯದಲ್ಲಿ ಮಹಿಳೆ ಮತ್ತು ಮಕ್ಕಳ ಆರೋಗ್ಯದ ಅರಿವಿನ ಬಗೆಗೆ ಅಧ್ಯಯನಿಸಲಾಯಿತು. ಗ್ರಾಮೀಣ ಮಹಿಳಾ ಸಬಲೀಕರಣವನ್ನು ಸಂಪೂರ್ಣವಾಗಿ ಅಧ್ಯಯನ ಮಾಡಲು ಆರೋಗ್ಯದ ಬಗೆಗೆ ಅವರಿಗೆ ಇರುವ ಅರಿವನ್ನು ಅರಿಯುವುದು ಅತ್ಯಗತ್ಯವಾಗಿತ್ತು. ಸ್ವಾತಂತ್ರ್ಯೋತ್ತರ ಸಂದರ್ಭದಲ್ಲಿ ಮಹಿಳೆಯರ ಮತ್ತು ಮಕ್ಕಳ ಆರೋಗ್ಯ ಸ್ಥಿತಿ ದಯನೀಯವಾಗಿತ್ತು. ಆದರೆ 1951ರಿಂದ ಈಚೆಗೆ ಹೆಚ್ಚುವರಿ ಆರೋಗ್ಯ ಸೇವೆಗಳು, ಯೋಜನೆಗಳು, ವೈದ್ಯಕೀಯ ಸೌಲಭ್ಯಗಳಿಂದಾಗಿ ಪರಿಸ್ಥಿತಿಯಲ್ಲಿ ಬದಲಾವಣೆ ಬಂದಿದೆ.

ಸಾಮಾನ್ಯ ಆರೋಗ್ಯ ಹಾಗೂ ಆರೋಗ್ಯ ರಕ್ಷಣೆಯ ಬಗೆಗೆ ಜಾಗೃತಿ ಮೂಡುತ್ತಿದೆ ಎಂದೇ ಹೇಳಬಹುದಾಗಿದೆ.

1. ಬಹುತೇಕ ಜನರಿಗೆ ಸಾಮಾನ್ಯ ಆರೋಗ್ಯಕ್ಕೆ ಅಗತ್ಯವಿರುವ ಜ್ಞಾನವಿದೆ. ನಿಯಮಿತವಾಗಿ ಸ್ನಾನ ಮಾಡುವುದು, ಹಲ್ಲುಜ್ಜುವುದು ಇತ್ಯಾದಿಗಳನ್ನು ಬಹುತೇಕ ಜನರು ಮಾಡುತ್ತಾರೆ. ಆ ಮೂಲಕ ವೈಯಕ್ತಿಕ ನೈರ್ಮಲ್ಯದ ಬಗೆಗೆ ಹೆಚ್ಚಿನ ಅರಿವು ಮೂಡಿದೆ ಎಂದೇ ಹೇಳಬಹುದಾಗಿದೆ.
2. ಬಹುತೇಕ ಜನರಿಗೆ ಆರೋಗ್ಯ ಸೇವೆಗಳ ಬಗೆಗೆ ಸ್ಪಷ್ಟವಾದ ಅರಿವು ಇಲ್ಲ. ಮಾರಾಣಾಂತಿಕ ರೋಗಗಳ ಬಗೆಗೆ ಹೆಚ್ಚಿನ ಜ್ಞಾನವಿಲ್ಲ. ಆದರೆ ಲಸಿಕಾಕರಣದ ಬಗೆಗೆ ಮಾಹಿತಿ ಇದೆ. ಪಲ್ಸ್ ಪೋಲೀಯೋ ಬಗೆಗೆ ಸಾಕಷ್ಟು ಅರಿವು ಇದೆ.
3. ಬಹುತೇಕ ಜನರು ನಿಯಮಿತ ತಪಾಸಣೆಯನ್ನು ಅಲ್ಲಗಳೆಯುತ್ತಾರೆ. ಗರ್ಭಧಾರಣೆಯ ಸಂದರ್ಭದಲ್ಲಿ ನಿಗದಿತ ತಪಾಸಣೆಯನ್ನು ಒಪ್ಪುವುದೇ ಇಲ್ಲ. ಇದಕ್ಕೆ ಕಾರಣ ಸರ್ಕಾರಿ ಯೋಜನೆಗಳು ಜನರ ಬಳಿ ಪರಿಣಾಮಕಾರಿಯಾಗಿ ಮುಟ್ಟದೇ ಇರುವುದು ಎಂದೇ ಹೇಳಬಹುದು. ಈ ಕಾರ್ಯಕ್ರಮಕ್ಕಾಗಿ ಸರ್ಕಾರ ಗ್ರಾಮೀಣ ಜನತೆಯ ನಡುವೆ ಸೇತುಬಂಧದಂತೆ ವರ್ತಿಸಬೇಕಾದ ಸರ್ಕಾರೇತರ

ಸಂಸ್ಥೆಗಳೂ ಕೈ ಚೆಲ್ಲಿಕುಳಿತಿವೆ ಎನ್ನಬಹುದಾಗಿದೆ. ಅಂಗನವಾಡಿ ಕೇಂದ್ರಗಳೂ ಆರೋಗ್ಯದ ಬಗೆಗೆ ಮಾಹಿತಿ ನೀಡುವ ಜಾಗೃತಿ ಬೆಳೆಸುವ ಕಾರ್ಯದಲ್ಲಿ ಸಕ್ರಿಯವಾಗಿಲ್ಲ. ನಿರೀಕ್ಷಿತ ಮಟ್ಟದಲ್ಲಿ ಕೆಲಸ ನಿರ್ವಹಿಸುತ್ತಿಲ್ಲ. ಅವರ ಕಾರ್ಯ ಮಕ್ಕಳನ್ನು ನೋಡುವುದಕ್ಕೆ ಮಾತ್ರ ಸೀಮಿತವಾಗುತ್ತಿದೆ. ಗರ್ಭಿಣಿಯರ ಆರೋಗ್ಯದ ಬಗೆಗೆ ಮಾಹಿತಿ ನೀಡುವಲ್ಲಿ ಸೋಲುತ್ತಿವೆ ಎಂದೇ ಹೇಳಬಹುದಾಗಿದೆ.

ಅರಿವು–ಮಾಹಿತಿಯ ಅಗತ್ಯ ಹಾಗೂ ಅನಿವಾರ್ಯಗಳೊಂದಿಗೆ ಸಾಮಾಜಿಕ ಸವಾಲುಗಳನ್ನು ಎದುರಿಸುವುದೇ ಮಹಿಳಾ ಸಬಲೀಕರಣ ಎಂದು ಅರ್ಥೈಸಿದಲ್ಲಿ ಆರೋಗ್ಯದ ವಿಷಯದಲ್ಲಿ ಇನ್ನೂ ಹೆಚ್ಚಿನ ಸೇವೆಗಳು ಗ್ರಾಮೀಣ ಜನತೆಗೆ ಪರಿಣಾಮಕಾರಿಯಾಗಿ ತಲುಪಬೇಕಿವೆ ಎನ್ನುವ ಬಗ್ಗೆ ಈ ಅಧ್ಯಯನ ಬೆಳಕು ಚೆಲ್ಲುತ್ತದೆ.

ಟಿಪ್ಪಣೆಗಳು

1. ಚೌಧರಿ ಮತ್ತು ಸಿಂಘಾಲ 2003.
2. ಕೆ.ಎಂ.ಕಪಾಡಿಯಾ 1966 " ಭಾರತದಲ್ಲಿ ವಿವಾಹ ಮತ್ತು ಕುಟುಂಬ" ಪುಟ ಸಂ: 152.
3. ಡಾ॥ ಹಾಲತಿ ಸೋಮಶೇಖರ 2007 "ಮಹಿಳಾ ಚಳುವಳಿ" ಪುಟ ಸಂಖ್ಯೆ: 336.
4. ಕೆ.ಭೈರಪ್ಪ 2000 """ಸಮಾಜಶಾಸ್ತ್ರದ ಮೂಲತತ್ವಗಳು" ಪುಟ ಸಂಖ್ಯೆ: 266.
5. ಶ್ರೀವಾಸ್ತವ 1998, ಸಂಧು 1996 "ಸ್ತ್ರೀವಾದಿ ಸಿದ್ದಾಂತ.
6. ಅಶೋಕ ಮಿತ್ರಾ 1975 ಮಹಿಳೆಯ ಸ್ಥಾನಮಾನ : ಸಾಕ್ಷರತೆ ಮತ್ತು ಉದ್ಯೋಗ ಪುಟ ಸಂಖ್ಯೆ: 133 ರಿಂದ 137.

ಅಧ್ಯಾಯ–6

ಸಮಾರೋಪ

61. ಅಧ್ಯಯನದ ಫಲಿತಗಳು.

6.2 ಅಧ್ಯಯನದ ಸಲಹೆಗಳು.

ಅಧ್ಯಾಯ–6

ಸಮಾರೋಪ

ಗ್ರಾಮೀಣ ಮಹಿಳೆಯ ಸಬಲೀಕರಣ ಕುರಿತಾದ ಅಧ್ಯಯನವು ಆಸಕ್ತಿದಾಯಕವಾಗಿ ಹಾಗೂ ಗ್ರಾಮೀಣ ಸಮುದಾಯಗಳ ಮಟ್ಟದಲ್ಲಿಯೇ ವಿಶೇಷವಾಗಿ ತಳ ಸಮುದಾಯದ ಮಹಿಳೆಯರ ಸ್ಥಿತಿಗತಿಗಳನ್ನು ಮತ್ತು ಸ್ವ–ಸಹಾಯ ಸಂಘಗಳ ಮುಖಾಂತರ ಸಬಲೀಕರಣದ ಹೆಜ್ಜೆಗಳನ್ನು ಸ್ತ್ರೀವಾದಿ ನೆಲೆಯಲ್ಲಿ ಒರೆಗೆ ಹಚ್ಚುವ ಗಂಭೀರ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಸಾಂಪ್ರದಾಯಿಕ ಸಮಾಜದಲ್ಲಿ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರು ಹೊಂದಿರುವ ಸ್ಥಾನಮಾನಗಳನ್ನು ಕುರಿತ ಚಿಂತನೆಯನ್ನು ಮಾಡುವುದಾಗಿ ಮಹಿಳಾ ಸಬಲೀಕರಣದ ಪ್ರಶ್ನೆಗಳ ತೊಡಕುಗಳನ್ನು ಕುರಿತು ಚರ್ಚಿಸಲಾಗಿದೆ.

ಗ್ರಾಮೀಣ ಮಹಿಳೆಯೆಂಬ ಪರಿಕಲ್ಪನೆಯನ್ನು ಅವಳ ಸಬಲೀಕರಣ ಕುರಿತಾದ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ರಾಜಕೀಯ, ಧಾರ್ಮಿಕ ಗ್ರಹಿಕೆ ಮತ್ತು ದೃಷ್ಟಿಕೋನಗಳನ್ನು ಅರಿಯುವ ಆಶಯ ಪ್ರಸ್ತುತ ಅಧ್ಯಯನದ್ದಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಗ್ರಾಮೀಣ ಮಹಿಳೆಗೆ ಸಿಕ್ಕಿರುವ ಸ್ಥಾನಮಾನ ಅದರಿಂದ ಅವಳ ಬದುಕಿನಲ್ಲಿ ಅನುಕೂಲತೆಗಳೇನಾಗಿವೆ, ಅನಾನುಕೂಲತೆಗೇನಾಗಿವೆ ಎಂಬುದನ್ನು ಕುರಿತಂತೆ ಚರ್ಚಿಸಿ ವಿಶ್ಲೇಷಿಸಲಾಗಿದೆ.

ಗ್ರಾಮೀಣ ಮಹಿಳೆಯರ ಸಬಲೀಕರಣ ಪ್ರಕ್ರಿಯೆಯಲ್ಲಿ ಸ್ವ–ಸಹಾಯ ಗುಂಪುಗಳ ಪಾತ್ರವನ್ನು ಮಹಿಳೆಗೆ ಪೂರಕವಾಗಿ ವಿಶ್ಲೇಷಿಸಿ, ಅವುಗಳ ನಿರ್ವಹಣೆಯಲ್ಲಿ ಅಡೆತಡೆಗಳು ಏನಿವೆಯೆಂಬುದನ್ನು ಅಧ್ಯಯನದಲ್ಲಿ ಒರೆಗೆ ಹಚ್ಚಿ ನೋಡಲಾಗಿದೆ. ಸರ್ಕಾರಿ ಯೋಜನೆಗಳು ಮಹಿಳೆಯರಿಗಾಗಿ ಅನುಷ್ಠಾನಗೊಳ್ಳುತ್ತಲೇ ಇವೆ ಅವು ಮಹಿಳೆಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿವೆ ಹಾಗೂ ದುರುಪಯೋಗ ಕೂಡಾ ಆಗುತ್ತಿದೆಯನ್ನುವುದರ ವಿಶ್ಲೇಷಣೆ ಮಾಡಲಾಗಿದೆ. ಜೊತೆಗೆ

ಗ್ರಾಮೀಣ ಮಹಿಳೆಯ ಬದುಕಿಗೆ ಸ್ವಯಂ ಸೇವಾ ಸಂಸ್ಥೆಗಳು ಪೂರಕವಾಗಿ ಸೇವೆ ಸಲ್ಲಿಸಬೇಕೆಂಬ ಗುರಿ ಉದ್ದೇಶ ಹೊಂದಿದ್ದರೂ ಅಂತಿಮವಾಗಿ ನೋಡಿದಾಗ ಅಂತಹ ಮಹತ್ವದ ಬದಲಾವಣೆಗಳು ಕಾಣದಂಥ ವಿಷಯಗಳು ಈ ಅಧ್ಯಯನದಲ್ಲಿವೆ. ಈ ಹಿನ್ನೆಲೆಯಲ್ಲಿ ಗ್ರಾಮೀಣ ಮಹಿಳೆಯ ಸಬಲೀಕರಣ: ಒಂದು ಸ್ತ್ರೀವಾದಿ ಅಧ್ಯಯನ (ಹೈದ್ರಾಬಾದ್-ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ನಿರ್ವಚನದಡಿಯಲ್ಲಿ ಪ್ರಸ್ತುತ ಅಧ್ಯಯನ ಸಾಗುತ್ತದೆ. ಗ್ರಾಮೀಣ ಮಹಿಳೆಯ ಸಬಲೀಕರಣವು ಮುಖ್ಯವಾಗಿ ಸ್ತ್ರೀವಾದಿ ಚಿಂತನೆ ಮತ್ತು ದೃಷ್ಟಿಕೋನಗಳನ್ನು ಆಧರಿಸಿ ಗಮನಿಸಲಾಗಿದೆ.

ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಧ್ವನಿಯಿಲ್ಲದ ಸ್ಥಿತಿಯಲ್ಲಿರುವ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳು, ಯೋಜನೆಗಳು, ಸ್ವ-ಸಹಾಯ ಗುಂಪುಗಳು ಇತ್ಯಾದಿಗಳನ್ನು ಪುರುಷ ಪ್ರಧಾನ ವ್ಯವಸ್ಥೆ ತಮ್ಮ ಉಳುವಿನ ಅಸ್ತಿತ್ವಕ್ಕಾಗಿ ಬಳಸಿಕೊಳ್ಳುತ್ತಿದೆ ಎಂಬ ಸತ್ಯವನ್ನು ಚರ್ಚಿಸಲಾಗಿದೆ. ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ತುಂಬಾ ಹಿಂದುಳಿದಿರುವ ಗ್ರಾಮೀಣ ಮಹಿಳೆಯರಿಗೆ ಸಂಘಟನೆಯ ಸೌಲಭ್ಯದ ಹೆಸರಿನಲ್ಲಿ ಅವರಿಗೆ ಇಷ್ಟವಿರದಿದ್ದರೂ ಬಲವಂತವಾಗಿ ಹೊರಗೆ ಎಳೆದು ತರಲಾಗಿದೆ. ಯಾವುದೇ ರಂಗದಲ್ಲಿ ಕಾಲಿರಿಸಿದರೂ ಆ ಹೆಜ್ಜೆಗಳು ಅಂಜಿಕೆ ಭಯ ಆತಂಕದಿಂದಲೇ ಕೂಡಿರುತ್ತವೆ. ಅಂದರೆ ಅವಳಿಗೆ ಸಿಗುವ ಸ್ಥಾನಮಾನಗಳನ್ನು ಈ ಪವರ್‌ಸ್ಟಕ್ಚರ್‌ನಲ್ಲಿ ಅಲಂಕರಿಸಿದ್ದರೂ, ವಾಸ್ತವಿಕವಾಗಿ ತೀರ್ಮಾನ ತೆಗೆದುಕೊಳ್ಳುವಲ್ಲಿ ಗೊಂದಲದಲ್ಲಿದ್ದಾಳೆಂದು ಹೇಳಬಹುದಾಗಿದೆ. ಇವರ ಹಕ್ಕು ಮತ್ತು ಅಧಿಕಾರವನ್ನು ಸ್ಥಾಪಿತ ಪ್ರಭುತ್ವಗಳು ಅನುಭವಿಸುತ್ತಿವೆ, ಉದಾ: ಗ್ರಾಮ ಪಂಚಾಯ್ತಿಯಲ್ಲಿ ಒಬ್ಬ ಮಹಿಳೆ ಆಯ್ಕೆಯಾದರೆ ಹಾರತುತಾಯಿ ಮೆರವಣಿಗೆ ಅವಳ ಗಂಡನಿಗೆ ಮಾಡಲಾಗುತ್ತಿದೆ. ಅಂದರೆ ಈ ವ್ಯವಸ್ಥೆಯಲ್ಲಿ ಮಹಿಳೆಗೆ ಅಧಿಕಾರವಿದ್ದರೂ ಅಧಿಕಾರ ಹೀನತೆಯಿಂದ ಇರುತ್ತಾಳೆ. ಈ ಎಲ್ಲ ಕಾರಣಗಳಿಂದ ಪ್ರತಿಯೊಂದು ಕ್ಷೇತ್ರದಲ್ಲಿಯ ಅವಳ ಪ್ರತಿನಿಧೀಕರಣ ಅಂದರೆ ಆಕೆಯ ಸ್ವರೂಪವು ಕೇವಲ ಸಾಂಕೇತಿಕವಾಗಿ ಅಲಂಕಾರಿಕವಾಗಿ ಕಂಡುಬರುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಸಮಾನತೆ, ಸ್ವಾತಂತ್ರ್ಯದ ತತ್ವ ಸಿದ್ಧಾಂತವನ್ನು ಆಧರಿಸಿರುವ ಭಾರತ ದೇಶದಲ್ಲಿ ಗ್ರಾಮೀಣ ಮಹಿಳಾ ಸ್ಥಿತಿಗತಿಗಳು ಮಾತ್ರ ತದ್ವಿರುದ್ಧವಾಗಿ ಅನಾವರಣಗೊಳುತ್ತಿವೆ. ಈ ಎಲ್ಲ ಚಿಂತನೆಗಳ ಆಧಾರದ ಮೇಲೆ ಗ್ರಾಮೀಣ ಮಹಿಳೆಯ ಸಬಲೀಕರಣಕ್ಕೆ ಇರುವ ಇಕ್ಕಟ್ಟು, ಸವಾಲು, ಸಮಸ್ಯೆ, ಗೊಂದಲಗಳನ್ನು ಹಾಗೂ ಪರಿಹಾರಗಳನ್ನು ಅಧ್ಯಯನದ ಉದ್ದಕ್ಕೂ ವಿಮರ್ಶಾತ್ಮಕ ನೆಲೆಯೊಳಗೆ ಚರ್ಚಿಸಲಾಗಿದೆ. ಗ್ರಾಮೀಣ ಮಹಿಳೆಯರ ಸಂಖ್ಯೆ ಹೆಚ್ಚಿದ್ದರೂ ಅವರ ಪಾತ್ರ ಅರಿಯುವಿಕೆಯಲ್ಲಿ ಇದು ಅತ್ಯಂತ ಮಹತ್ವದ ಅಂಶವಾಗಿದೆ. ಸಮಾಜದ ಪ್ರತಿಯೊಂದು ರಂಗದಲ್ಲಿಯೂ ಆವರಿಸಿಕೊಂಡಿರುವ ಕೆಲವು ಸಾಮಾನ್ಯೀಕರಿಸಿದ ಸಂಗತಿಗಳು ವಯಸ್ಸು, ವರ್ಗ, ಲಿಂಗ, ಜಾತಿ,

ಧರ್ಮ, ವಿವಾಹ, ಉದ್ಯೋಗದ ಹೆಸರಿನಲ್ಲಿ ಮಹಿಳೆಯರನ್ನು ನಿಯಂತ್ರಿಸುತ್ತಿರುವ ಬಗೆಯನ್ನು ಸ್ತ್ರೀವಾದಿ ದೃಷ್ಟಿಕೋನದಲ್ಲಿ ನೋಡಲಾಗಿದೆ.

ಸ್ವತಂತ್ರ ಭಾರತದಲ್ಲಿ ಕಂಡುಬಂದ ಉದಾರೀಕರಣ, ಔದ್ಯೋಗಿಕರಣ, ನಗರೀಕರಣ, ಜಾಗತೀಕರಣದಿಂದ ಇಡೀ ಭಾರತೀಯ ಸಾಮಾಜಿಕ ಬದುಕಿನಲ್ಲಿ ತೀವ್ರತರ ಬಲದಾವಣೆಗಳುಂಟಾದವು. ಆದರೆ ಗ್ರಾಮೀಣ ಮಹಿಳೆಯರ ಸ್ಥಿತಿಯಲ್ಲಿ ಮಾತ್ರ ಯಥಾ ರೀತಿಯ ಸಾಂಪ್ರದಾಯಿಕ ಚಿಂತನೆಗಳೇ ಮುಂದುವರೆದವು. ದೇಶದ ಜನ ಸಂಖ್ಯೆಯ ಸ್ಥಿತಿಯಲ್ಲಿ ಮಾತ್ರ ಯಥಾ ರೀತಿಯ ಸಾಂಪ್ರದಾಯಿಕ ಚಿಂತನಗಳೇ ಮುಂದುವರೆದವು. ದೇಶದ ಜನಸಂಖ್ಯೆಯ ಅರ್ಧದಷ್ಟಿರುವ ಮಹಿಳೆಯರು ಅದರಲ್ಲಿಯೂ ಒಟ್ಟು ಮಹಿಳೆಯರ ಅರ್ಧಕ್ಕಿಂತ ಹೆಚ್ಚಿನ ಮಹಿಳೆಯರು ಗ್ರಾಮೀಣ ಪ್ರದೇಶದಲ್ಲಿ ಬದುಕನ್ನು ಸಾಗಿಸುತ್ತಿದ್ದಾರೆ. ಗ್ರಾಮೀಣ ಮಹಿಳಾ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಯನ್ನು ಸುಧಾರಿಸಿ ಅವಳಿಗೊಂದು ಸಾಮಾಜಿಕ ಚಹರೆಯನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಅನೇಕ ಯೋಜನೆಗಳು, ಮಹತ್ತರ ಚಿಂತನೆಗಳು ಜಾರಿಯಾದವು. ಅದರಲ್ಲಿ ಅನೇಕ ಗ್ರಾಮೀಣಾಭಿವೃದ್ಧಿ ಯೋಜನೆಗಳು ಮತ್ತು ಮಹಿಳೆಯರಿಗೆ ನೀಡಲಾಗಿರುವ 33% ಮೀಸಲಾತಿ ಇತ್ಯಾದಿ, ಇವೆಲ್ಲವು ಆಳುವ ಪ್ರಭುತ್ವಗಳಡಿಯಲ್ಲಿ ಸಿಕ್ಕಿ ನಲಗುವಂತಾಗಿದೆ. ಗ್ರಾಮೀಣ ಮಹಿಳೆಯರಿಗೆ ನೀಡಲಾಗಿರುವ ಎಲ್ಲ ಸೌಲಭ್ಯಗಳು ಮತ್ತು ಅವಕಾಶಗಳು ಅವಳನ್ನು ಸಬಲಳನ್ನಾಗಿಸುವ ಬದಲಿಗೆ ಅಬಲಳನ್ನಾಗಿಸುತ್ತಿವೆ.

ಪುರುಷ ಪ್ರಧಾನ ವ್ಯವಸ್ಥೆ, ರಾಜಕೀಯ ವ್ಯವಸ್ಥೆ, ಬಂಡವಾಳಶಾಹಿ, ಊಳಿಗಮಾನ್ಯ ಪದ್ಧತಿ, ಜಮೀನ್ದಾರಿ ವ್ಯವಸ್ಥೆಗಳು ಒಂದುಕ್ಕೊಂದು ಭದ್ರವಾಗಿ ತಳುಕು ಹಾಕಿಕೊಂಡಿರುವುದರಿಂದ ಗ್ರಾಮೀಣ ಮಹಿಳೆಯ ಅಸ್ತಿತ್ವವನ್ನೇ ನಿರಾಕರಿಸಿ ಅವಳನ್ನು ಸುಧಾರಿತ ಗುಲಾಮಗಿರಿ ಪದ್ಧತಿಗೆ ಒಳಪಡಿಸಿವೆ. ಅವಳು ತನ್ನಲ್ಲಿರುವ ಸ್ವಂತಿಕೆ, ಕೌಶಲ್ಯ, ಅನನ್ಯತೆ, ಸೃಜನಶೀಲತೆಗಳಿಂದ ಕಾರ್ಯನಿರ್ವಹಿಸದೆ ಪಟ್ಟಭದ್ರ ಪ್ರಭುತ್ವದಡಿಯಲ್ಲಿ ಅಸ್ತಿತ್ವ ಇಲ್ಲದ ಸೂತ್ರದ ಬೊಂಬೆಯಂತೆ ಅಸ್ತಿತ್ವಹೀನ ಮಹಿಳೆಯಾಗಿ ತನ್ನ ಪಾತ್ರವನ್ನು ನಿರ್ವಹಿಸುತ್ತಿದ್ದಾಳೆ. ಇದು ಮಹಿಳಾ ಸಬಲೀಕರಣ ಕುರಿತು ಮಾತನಾಡುವಾಗ ಮನಸ್ಸಿಗೆ ತುಂಬಾ ನೋವು ತರುವಂತ ಸಂಗತಿಯಾಗಿದೆ.

ಗ್ರಾಮೀಣ ಮಹಿಳೆಯ ಬದುಕಿನ ಅನುಭವ ಲೋಕದ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಬದಲಾಗುತ್ತಿರುವ ಸಾಂಸ್ಕೃತಿಕ ಸಂದರ್ಭದಲ್ಲಿ ಗ್ರಾಮೀಣ ಮಹಿಳಾ ಸಬಲೀಕರಣದಲ್ಲಿ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಅರಿಯುವ ಹಿನ್ನೆಲೆಯಲ್ಲಿ ಈ ಅಧ್ಯಯನದ ವಿಶ್ಲೇಷಣೆಯನ್ನು ಮಾಡಲಾಗಿದೆ.

ಭಾರತೀಯ ಸಾಂಪ್ರದಾಯಿಕ ಸಮಾಜವು ಏಣಿಶ್ರೇಣಿಗಳಿಂದ ಕೂಡಿದ್ದು ಗ್ರಾಮೀಣ ಮಹಿಳೆಯರ ಶೋಷಿತ ಬದುಕಿನ ಮತ್ತು ಪುರುಷಶಾಹಿ ವ್ಯವಸ್ಥೆಯಡಿಯಲ್ಲಿ ಬಳಲಿ ಬೆಂಡಾಗಿರುವ ಮಹಿಳಾ ಸಮುದಾಯದ ಅಧ್ಯಯನಗಳು ಇನ್ನಷ್ಟು ಹೆಚ್ಚಾಗುವ ಅವಶ್ಯಕತೆಯನ್ನು ಈ ಮೂಲಕ ಕಂಡುಕೊಳ್ಳಲಾಗಿದೆ.

ಗ್ರಾಮೀಣ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲಾ ಮಹಿಳೆಯರ ಸ್ಥಿತಿ ಕೆಳ ಮಟ್ಟದಲ್ಲಿಯೇ ಇದೆ. ಅದರಲ್ಲಿಯೂ ಕೆಳಸ್ತರದ ಮಹಿಳೆಯರು ಮೇಲ್ವರ್ಗದ ಮಹಿಳೆಯರ ಸ್ಥಿತಿಗತಿಗಿಂತ ತುಂಬ ಕ್ಲಿಷ್ಟಕರವಾದ ಶೋಷಣೆಯನ್ನು ಅನುಭವಿಸುತ್ತಿದ್ದಾರೆ. ಗ್ರಾಮೀಣ ಮಹಿಳೆಯ ಕುರಿತಂತೆ ಅವಳ ಬದುಕು, ತೊಳಲಾಟ, ಅನನ್ಯತೆ, ಸೃಜನಶೀಲತೆ, ಚಹರೆಗಳನ್ನು ಕುಟುಂಬದಲ್ಲಿ ಮತ್ತು ಸ್ವ-ಸಹಾಯ ಸಂಘದಲ್ಲಿ ಸಮರ್ಪಕವಾಗಿ ಬಿಂಬಿಸುವ ಕಾರ್ಯವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

"ಗ್ರಾಮೀಣ ಮಹಿಳೆಯ ಸಬಲೀಕರಣ: ಒಂದು ಸ್ತ್ರೀವಾದಿ ಅಧ್ಯಯನ" (ಹೈದ್ರಾಬಾದ-ಕರ್ನಾಟಕವನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಒಟ್ಟಾರೆಯಾಗಿ ಆರು ಅಧ್ಯಾಯಗಳಲ್ಲಿ ವರ್ಗೀಕರಿಸಿಕೊಳ್ಳಲಾಗಿದೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಅಧ್ಯಯನದ ಚೌಕಟ್ಟು ಹಾಗೂ ಈ ಕ್ಷೇತ್ರದಲ್ಲಿ ಈವರೆಗೆ ನಡೆದ ಅಧ್ಯಯನಗಳ ಕುರಿತಾದ ವಿವರಣೆಯನ್ನು ನೀಡಲಾಗಿದೆ.

ಪ್ರಸ್ತುತ ಅಧ್ಯಯನವು ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಎದುರಾಗುವ ಸವಾಲುಗಳನ್ನು ತೊಡಕುಗಳನ್ನು ಅರಿಯುವ ಆಶಯವನ್ನು ಹೊಂದಿದೆ. ವರ್ತಮಾನದಲ್ಲಿ ಗ್ರಾಮೀಣ ಮಹಿಳೆಯ ಸಬಲೀಕರಣಕ್ಕಾಗಿ ಶಾಸನಬದ್ಧ, ಸಂವಿಧಾನಬದ್ಧ ಅಧಿಕಾರವನ್ನು ಯಾವ ರೀತಿಯಾಗಿ ನಿರ್ವಸುತ್ತಾಳೆ, ಅವಳು ಸೌಲಭ್ಯವನ್ನು ಪಡೆಯುವಲ್ಲಿ ಎದುರಿಸುತ್ತಿರುವ ತೊಡಕುಗಳೇನು, ಅದು ಪುರುಷ ಪ್ರಧಾನ ಸಮಾಜದಿಂದಲೂ ಆಗಿರಬಹುದು, ಕುಟುಂಬ ವರ್ಗದಿಂದಲೂ ಆಗಿರಬಹುದು, ಅಧಿಕಾರಿಗಳಿಂದ ಆಗಿರಬಹುದು. ತನ್ನ ಸೀಮಿತ ಪರಿಧಿಯಲ್ಲಿರುವ ನಿರ್ಧಾರಗಳನ್ನು ಎಷ್ಟರಮಟ್ಟಿಗೆ ಸ್ವತಂತ್ರವಾಗಿ, ನಿರ್ಭಯವಾಗಿ ಹೇಳುತ್ತಿದ್ದಾಳೆ, ಅದಕ್ಕೆ ಅವಕಾಶವಿದೆಯೇ, ಇಲ್ಲವೇ? ಒಂದು ವೇಳೆ ಅಕಸ್ಮಾತ್ತಾಗಿ ತೀರ್ಮಾನ ತೆಗೆದುಕೊಂಡರೆ ಅದಕ್ಕೆ ಸಮ್ಮತಿಯಿದೆಯೇ? ಇಲ್ಲವೆ ಎನ್ನುವುದನ್ನು ಅರಿಯಲಾಗಿದೆ. ಇಲ್ಲಿ ಪುರುಷ ಪ್ರಧಾನ ಪಟ್ಟಭದ್ರ ಹಿತಾಸಕ್ತಿಗಳಿರುವುದರಿಂದ ನೈತಿಕತೆ ಮತ್ತು ಸಾಮಾಜಿಕ ಮೌಲ್ಯಗಳಿಂದ ಗುಣಾತ್ಮಕ ಕಾರ್ಯಗಳಾಗಬೇಕೆಂಬುದು ಮಹಿಳೆಯರ ವಿಷಯದಲ್ಲಿ ಏಕೆ ಸುಳ್ಳಾಗುತ್ತದೆ. ಇದೆಲ್ಲ ಪ್ರತಿಯೊಂದು ಕ್ಷೇತ್ರದಲ್ಲಿಯೂ ಇವರಿಗೆ ಸಿಗುತ್ತಿರುವ ಅವಕಾಶದ ಸ್ವರೂಪವೇನು? ನುಡಿದಂತೆ ನಡೆಯುವುದು ಆಚರಣೆಯಲ್ಲಿ ತರಬೇಕಾದರೆ ಅವುಗಳ ಪಾತ್ರವೇನು?

ಇಂತಹ ಪಾತ್ರಗಳನ್ನು ಪ್ರಶ್ನಿಸುವುದು ಪರಾಮರ್ಶಿಸುವುದು ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಪುರುಷಶಾಹಿಗಳ ಹಿಡಿತವಿದೆಯೇ ಎಂದು ತಿಳಿಯುವುದು.

ಸಾಮಾಜಿಕವಾಗಿ, ಆರ್ಥಿಕವಾಗಿ ಏಣಿಶ್ರೇಣಿ ಹೊಂದಿರುವ ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಗ್ರಾಮೀಣ ಮಹಿಳೆಯ ಸಬಲೀಕರಣ ಅರ್ಥಪೂರ್ಣವಾಗಿರಲು ಸಾಧ್ಯವೇ ಎಂದು ಅರಿಯುವುದು, ಸಾಂಪ್ರದಾಯಿಕ ಸಮಾಜದಲ್ಲಿ ಗ್ರಾಮೀಣ ಮಹಿಳಾ ಸಂವೇದನೆಗಳಿಗೆ ಅಸ್ತಿತ್ವ-ಅನನ್ಯತೆಗಳಿಗೆ ಎಷ್ಟರಮಟ್ಟಿಗೆ ಅವಕಾಶವಿದೆ ಎಂದು ಅವಲೋಕಿಸುವುದು. ಸಂವಿಧಾನಬದ್ಧವಾಗಿ ಅವಳಿಗೆ ಸಿಕ್ಕಿರುವ ಮೀಸಲಾತಿಯ ಪ್ರಯೋಜನವನ್ನು ಅವಳೆ ಪಡೆಯುತ್ತಿದ್ದಾಳೆಯೇ ಅಥವಾ ಅವಳ ಹೆಸರಿನಲ್ಲಿ ಬೇರೆಯವರು ಪಡೆಯುತ್ತಿದ್ದಾರೆಯೇ ಎಂದು ಗಮನಿಸುವುದು. ಅವಳ ದಿನನಿತ್ಯದ ಬದುಕಿನಲ್ಲಿ ವಯಸ್ಸು, ಲಿಂಗ, ಜಾತಿ, ಧರ್ಮ, ಶಿಕ್ಷಣ, ವಿವಾಹ, ಉದ್ಯೋಗ, ಆದಾಯ ಮುಂತಾದ ಅಂಶಗಳು ಗ್ರಾಮೀಣ ಮಹಿಳೆಯನ್ನು ಹೇಗೆ ನಿಯಂತ್ರಿಸುತ್ತಿವೆ ಎಂದು ತಿಳಿಯುವ ಪ್ರಯತ್ನ ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ.

ಹೈದ್ರಾಬಾದ್-ಕರ್ನಾಟಕ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಲ್ಪಡುವ ಬೀದರ್, ಗುಲಬರ್ಗಾ, ರಾಯಚೂರು ಜಿಲ್ಲೆಗಳನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಏಕೆಂದರೆ ಡಾ॥ ಡಿ.ಎಂ.ನಂಜುಂಡಪ್ಪ ವರದಿಯಲ್ಲಿ ಈ ಮೂರು ಜಿಲ್ಲೆಗಳು ಅತ್ಯಂತ ಹಿಂದುಳಿದ ಜಿಲ್ಲೆಗಳಾಗಿವೆ. ಜಿಲ್ಲೆಯಾದ್ಯಂತ ಬಡತನ, ಅನಕ್ಷರತೆ, ನಿರುದ್ಯೋಗ, ಜಾತೀಯತೆ ಹಾಗೂ ಜಮೀನ್ದಾರಿ ಪ್ರಭಾವಗಳು ಹೇರಳವಾಗಿವೆ. ಈ ಮೂರು ಜಿಲ್ಲೆಗಳಲ್ಲಿ ಬರುವ ತಾಲೂಕಿನ ಗ್ರಾಮ ಪಂಚಾಯತಿ ಹಳ್ಳಿಗಳಲ್ಲಿಯ ಸ್ವ-ಸಹಾಯ ಸಂಘದ ಮಹಿಳೆಯರೆ ಅಧ್ಯಯನದ ವಸ್ತುವನ್ನಾಗಿ ಆಯ್ದುಕೊಳ್ಳಲಾಗಿದೆ. ವಿವರಣಾತ್ಮಕ ಸಂಶೋಧನ ವಿಧಾನವೆಂದರೆ ಅದು ನಿರ್ದಿಷ್ಟವಾಗಿ ಒಬ್ಬ ವ್ಯಕ್ತಿಯ ಅಥವಾ ಸಮೂಹದ ವಿಷಯವನ್ನು ವಿವರಿಸುವಂತಹದ್ದಾಗಿದೆ. ಈ ವಿಧಾನದಲ್ಲಿ ರಚಿತ, ಅರಚಿತ ಪ್ರಶ್ನಾವಳಿಗಳನ್ನು ರೂಪಿಸಿಕೊಳ್ಳಲಾಗಿದೆ. ಒಂದು ನಿರ್ದಿಷ್ಟ ಕ್ಷೇತ್ರಕ್ಕೆ ಹಾಗೂ ಮಾದರಿ ಪ್ರಕರಣಗಳಿಗೆ ಸಂಬಂಧಿಸಿದ ಆಳವಾದ ಹಾಗೂ ಕೇಂದ್ರಿಕೃತವಾದಂತಹ ಅಧ್ಯಯನಕ್ಕೆ ಇಂತಹ ವಿಧಾನ ತುಂಬಾ ಸಹಾಯಕವಾಗಿದೆ. ಅಲ್ಲದೆ ಸಮಯ ಸಂದರ್ಭಕ್ಕನುಸಾರವಾಗಿ ಪ್ರಶ್ನೆಗಳನ್ನು ರೂಪಿಸಿಕೊಳ್ಳಲಿಕ್ಕೆ ಅವುಗಳನ್ನು ಕೇಳುವ ರೀತಿ, ಅವುಗಳ ಭಾಷೆಯಲ್ಲಿ ಸಾಕಷ್ಟು ಮಾರ್ಪಾಡು ಮಾಡಿಕೊಳ್ಳಲಿಕ್ಕೆ ಇದು ಸಂಶೋಧಕರಿಗೆ ಅವಕಾಶ ನೀಡುತ್ತದೆ. ಪ್ರಸ್ತುತ ಅಧ್ಯಯನಕ್ಕಾಗಿ ಮೂರು ಜಿಲ್ಲೆಗಳಿಂದ, ಆರು ತಾಲ್ಲೂಕುಗಳಿಂದ, 12 ಗ್ರಾಮ ಪಂಚಾಯ್ತಿಯ ಹಳ್ಳಿಗಳಿಂದ, 30 ಸ್ವ-ಸಹಾಯ ಸಂಘಗಳಿಂದ 300 ಮಹಿಳೆಯರನ್ನು (ಇವರಲ್ಲಿ 150 ಜನ ಸಂಘದ ಪ್ರತಿನಿಧಿಗಳು ಮತ್ತು 150 ಜನ ಸಂಘದ ಸದಸ್ಯರು) ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಎರಡನೇಯ ಅಧ್ಯಾಯದಲ್ಲಿ ಪ್ರಸ್ತುತ ಅಧ್ಯಯನದಲ್ಲಿ ಅವಳಡಿಸಿಕೊಂಡಿರುವ ಮೂಲ ಪರಿಕಲ್ಪನೆಗಳಾದ ಗ್ರಾಮೀಣ ಮಹಿಳೆ ಸಬಲೀಕರಣ, ಸ್ತ್ರೀವಾದಿ ಚಿಂತನೆಗಳ ಅಡಿಯಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಗ್ರಾಮೀಣ ಮಹಿಳೆಯ ದೈನಂದಿನ ಬದುಕು, ಎದುರಿಸುತ್ತಿರುವ ಸಮಸ್ಯೆಗಳು, ಸಬಲೀಕರಣ ಎಂದರೇನು?, ಅದರ ತತ್ವಗಳೇನು? ನಿಜವಾಗಿಯೂ ಗ್ರಾಮೀಣ ಮಹಿಳೆ ಸಬಲಳಾಗುತ್ತಿದ್ದಾಳೆಯೇ?, ಸ್ತ್ರೀವಾದವೆಂದರೇನು ಗ್ರಾಮೀಣ ಮಹಿಳೆಗೂ ಸ್ತ್ರೀವಾದಕ್ಕೂ ಇರುವ ಸಂಬಂಧ ಮುಂತಾದ ವಿಷಯಗಳನ್ನು ಸ್ತ್ರೀವಾದಿ ನೆಲೆಯಲ್ಲಿ, ಸ್ತ್ರೀವಾದಿ ದೃಷ್ಟಿಕೋನದಲ್ಲಿ ಅಗತ್ಯಕ್ಕೆ ತಕ್ಕಂತೆ ಬಳಸಿಕೊಂಡು ಪರಾಮರ್ಶಿಸಿ ನಿರ್ವಚಿಸಲಾಗಿದೆ. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯ ಬಗ್ಗೆ ಇರುವ ಗ್ರಹಿಕೆಗಳ ಕುರಿತಾದ ಅಂತರಾಳದಲ್ಲಿನ ಅಂಶಗಳನ್ನು ಅರಿಯಲು ಸ್ತ್ರೀವಾದಿ ನಿರ್ವಚನದ ಅಗತ್ಯತೆ ಸಂಶೋಧನಾ ಅಧ್ಯಯನದಲ್ಲಿ ಅತ್ಯಂತ ಅವಶ್ಯಕವಾಗಿದ್ದು; ಇದು ತನ್ನದೇಯಾದ ಮಹತ್ವವನ್ನು ಪಡೆದಿದೆ ಎಂದು ಹೇಳಬಹುದು.

ಮೂರನೇಯ ಅಧ್ಯಾಯದಲ್ಲಿ ಗ್ರಾಮೀಣ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಯೋಜನೆಗಳು ಮತ್ತು ಕಾರ್ಯಕ್ರಮಗಳು ಕಾಲಕಾಲಕ್ಕೆ ಅನುಷ್ಠಾನಗೊಂಡು ಮಹಿಳೆಯರ ಬದುಕಿನಲ್ಲಿ ಪರಿಣಾಮಕಾರಿಯಾಗಿ ಪ್ರಭಾವ ಬೀರಿವೆಯೇ ಅಥವಾ ಇಲ್ಲವೇ? ಇಲ್ಲವಾದರೆ ಯಾಕೆ, ಏನು ಕಾರಣ ಮುಂತಾದ ವಿಷಯಗಳನ್ನು ಸ್ತ್ರೀವಾದಿ ನೆಲೆಯಲ್ಲಿ ನೋಡಲಾಗಿದೆ. ಹಾಗೆಯೇ ಸ್ವಯಂ ಸೇವಾಸಂಸ್ಥೆಗಳು ಅದರಲ್ಲಿ ಮುಖ್ಯವಾಗಿ ಸ್ವಯಂಸೇವಾ ಸಂಸ್ಥೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಅದರಲ್ಲಿ ಮಹಿಳಾ ಸಾಮಖ್ಯ ಕರ್ನಾಟಕ ಒಂದಾಗಿದೆ. ನಮ್ಮ ರಾಜ್ಯದ 12 ಜಿಲ್ಲೆಗಳಲ್ಲಿ ಮಹಿಳೆಯರ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕಾರ್ಯ ನಿರ್ವಹಿಸುತ್ತಿದೆ. ಇದರಲ್ಲಿ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳು ಸಹ ಸೇರಿವೆ. ಕಳೆದ 20 ವರ್ಷಗಳಿಂದ ಮಹಿಳೆಯರಿಗೆ ಶಿಕ್ಷಣದಿಂದ ಸಶಕ್ತತೆ ಎಂಬ ತತ್ವದಡಿಯಲ್ಲಿ ಇಲ್ಲಿ ಶಿಕ್ಷಣವೇನೆಂದರೆ ಎಲ್ಲ ತರಹದ ಓದು-ಬರಹ, ಎಣಿಕೆ ಅಲ್ಲದೆ ಜ್ಞಾನವನ್ನು ಅಂದರೆ ಸ್ವಾವಲಂಬನೆ, ಆರ್ಥಿಕ, ಸಾಮಾಜಿಕ, ರಾಜಕೀಯ, ಲೈಂಗಿಕ, ಲಿಂಗತ್ವ, ಆರೋಗ್ಯ, ಕಾನೂನು, ಪಂಚಾಯ್ತಿರಾಜ್ ಮುಂತಾದ ವಿಷಯಗಳ ಬಗ್ಗೆ ಅರಿವನ್ನು ನೀಡುವ ಕಾರ್ಯನಿರ್ವಹಿಸುತ್ತಿದೆ. ಮುಖ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಬಡತನ ರೇಖೆಯ ಕೆಳಗಿರುವ ಮಹಿಳೆಯರ ಸಂಘಗಳನ್ನು ರಚಿಸಿ, ಅವರಿಗೆ ಸ್ವಾವಲಂಬನೆ, ಶಿಕ್ಷಣ, ಆರ್ಥಿಕತೆ, ರಾಜಕೀಯ, ಆರೋಗ್ಯ, ಲಿಂಗತ್ವ ಮತ್ತು ಕಾನೂನಿಗೆ ಸಂಬಂಧಿಸಿದ ಅಂಶವನ್ನು ಈ ಸಂಸ್ಥೆ ನೀಡುತ್ತಿದೆ. ಬೇರೆ ಎಲ್ಲ ಯೋಜನೆಗಳಿಗೆ ಹೋಲಿಸಿ ನೋಡಿದಾಗ ಮಹಿಳೆಯರ ಹಿತಾಸಕ್ತಿಗೆ ಅನುಗುಣವಾದ ಯೋಜನೆಯಾಗಿದೆಯೆಂದು ಹೇಳಬಹುದು.

ಆದರೆ ಈ ಸಂಸ್ಥೆಯಲ್ಲಿ ದುಡಿಯುವ ಎಲ್ಲ ಕಾರ್ಯಕರ್ತರಿಗೆ ಕೆಲಸದ ಭದ್ರತೆ ಇಲ್ಲ. ತನಗೆ

ಭದ್ರತೆಯಿಲ್ಲದೆ ಒಬ್ಬ ವ್ಯಕ್ತಿ, ಒಂದು ಗುಂಪನ್ನು ಹೇಗೆ ಸಬಲೀಕರಣಗೊಳಿಸಬಲ್ಲ ಎಂಬ ಪ್ರಶ್ನೆ ಪದೇ ಪದೇ ಏಳುತ್ತದೆ. ಆದರೂ ಮಹಿಳಾ ಸಬಲೀಕರಣಕ್ಕಾಗಿ ಈ ಸಂಸ್ಥೆ ಹಗಲಿರುಳು ಶ್ರಮಿಸುತ್ತಿದೆ.

ಇನ್ನೊಂದು, ಬಯಲುಸೀಮೆ ಗ್ರಾಮೀಣಾಭಿವೃದ್ಧಿ ಸಂಸ್ಥೆ, ಇದು ಸಹ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ತನ್ನ ಅನೇಕ ಕಾರ್ಯಕ್ರಮಗಳ ಜೊತೆಗೆ ಮಹಿಳೆಯರಿಗಾಗಿ ಬೇರೆ ಬೇರೆ ಮೂಲಗಳಿಂದ ಧನ ಸಹಾಯ ಪಡೆದು ಮಹಿಳಾ ಸಬಲೀಕರಣ ಕಾರ್ಯಕ್ರಮಗಳನ್ನು ಮಾಡುತ್ತಿದೆ. ಸ್ವ-ಸಹಾಯ ಸಂಘದ ಮಟ್ಟದಿಂದ ಮಹಿಳೆಯರನ್ನು ಜಿಲ್ಲಾ ಮಟ್ಟದ ಒಕ್ಕೂಟದವರೆಗೂ ಸಂಘಟಿಸಿ ಒಕ್ಕೂಟದ ಮಟ್ಟದಲ್ಲಿ ಸಭೆ ಮತ್ತು ಆರ್ಥಿಕ ಚಟುವಟಿಕೆಗಳನ್ನು ಮಹಿಳೆಯರು ಮಾಡಿಕೊಳ್ಳುತ್ತಿದ್ದಾರೆ. ತೆಗೆದುಕೊಂಡ ಸಾಲವನ್ನು ಮರುಪಾವತಿ ಮಾಡುವಂಥ ಸಂಘಗಳು ಇವೆ. ಸಾಲ ಮರುಪಾವತಿ ಮಾಡದೆಯಿರುವ ಸಂಘಗಳು ಇವೆ ಹೀಗಾಗಿ, ಇವೆರಡು ಸ್ವಯಂ ಸೇವಾ ಸಂಸ್ಥೆಗಳು ಮಹಿಳಾ ಸಬಲೀಕರಣವನ್ನೇ ಮುಖ್ಯ ಗುರಿಯಾಗಿಟ್ಟುಕೊಂಡು ಕೆಲಸ ನಿರ್ವಹಿಸುತ್ತಿವೆ. ಗ್ರಾಮೀಣ ಮಹಿಳೆಯರ ಜೀವನದ ಮೇಲೆ ಉಂಟಾದ ಪರಿಣಾಮಗಳೇನು, ಅನುಕೂಲಕರವಾಗಿವೆಯೋ ಅಥವಾ ಅನಾನುಕೂಲಕರವಾಗಿವೆಯೋ? ವ್ಯವಸ್ಥೆ ಹೇಗಿದೆ ಇಲ್ಲಿ ಮಹಿಳೆಯರ ಪಾತ್ರ ಹೇಗಿದೆ, ಪುರುಷರ ಪಾತ್ರ ಹೇಗಿದೆ ಮುಂತಾದ ವಿಷಯಗಳನ್ನು ಒರೆಗೆಹಚ್ಚಿ ನೋಡುವ ಪ್ರಯತ್ನ ಮಾಡಲಾಗಿದೆ.

ನಾಲ್ಕನೇಯ ಅಧ್ಯಾಯದಲ್ಲಿ ಸಂಶೋಧನೆಗೆ ಆಯ್ದುಕೊಂಡಿರುವ ಗ್ರಾಮೀಣ ಮಹಿಳೆಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಸ್ವ-ಸಹಾಯ ಸಂಘದಲ್ಲಿ ಅವಳ ಪಾತ್ರದ ವಿಶ್ಲೇಷಣೆಯನ್ನು ಮಾಡಲಾಗಿದೆ. ಗ್ರಾಮೀಣ ಮಹಿಳೆಯ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಅಧ್ಯಾಯ ತಲಸ್ಪರ್ಶಿ ಆಗಿದೆ. ಇವರ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಯನ್ನು ಅರಿಯಲು ವಿವರಣಾತ್ಮಕ ಹಾಗೂ ವಿಶ್ಲೇಷಣಾತ್ಮಕ ಸಂಶೋಧನಾ ವಿಧಾನಗಳಿಂದ ಕಂಡುಕೊಂಡ ಅಂಶಗಳನ್ನು ವಿವಿಧ ನಮೂನೆಯ ಕೋಷ್ಟಕಗಳನ್ನು ಹಾಕಿ ಆ ಮೂಲಕ ಓದುಗರಿಗೆ ಸುಲಭವಾಗಿ ಅರ್ಥವಾಗುವಂತೆ ವಿವರಣೆ ನೀಡಲಾಗಿದೆ. ಇಲ್ಲಿ ಮುಖ್ಯವಾಗಿ ಸ್ವ-ಸಹಾಯ ಸಂಘದ ನಿರ್ವಚನ ಮತ್ತು ಧ್ಯೇಯೋದ್ದೇಶಗಳು ಗ್ರಾಮೀಣ ಮಹಿಳೆಯ ವ್ಯಕ್ತಿತ್ವ ನಿರ್ಮಾಣದಲ್ಲಿ ಸಾಮಾಜಿಕ ಮತ್ತು ಆರ್ಥಿಕತೆಗಳ ಪಾತ್ರ ಕುರಿತು ಸ್ತ್ರೀವಾದಿ ನೆಲೆಯಲ್ಲಿ ಚಿಂತಿಸಲಾಗಿದೆ. ಮಹಿಳೆಯರು ಸಂಘದ ಧ್ಯೇಯೋದ್ದೇಶ ಮತ್ತು ಬ್ಯಾಂಕ್ ವ್ಯವಹಾರದ ಬಗ್ಗೆ ಎಷ್ಟರ ಮಟ್ಟಿಗೆ ಅರಿವನ್ನು ಹೊಂದಿದ್ದಾರೆಂದು ಪ್ರಶ್ನೆಗಳನ್ನು ಕೇಳುವ ಮುಖಾಂತರ ವಿಷಯಗಳನ್ನು ಸಂಗ್ರಹಿಸಿಕೊಳ್ಳಲಾಗಿದೆ ಹಾಗೂ ಸಾಲದ ಬಗ್ಗೆ ಹೊಂದಿರುವ ಅರಿವನ್ನು ಸಂಶೋಧನೆಯ ಮುಖಾಂತರ ಕಂಡುಕೊಳ್ಳಲಾಗಿದೆ.

ಐದನೇಯ ಅಧ್ಯಾಯವನ್ನು ನಾಲ್ಕನೆಯ ಅಧ್ಯಾಯಕ್ಕೆ ಪೂರಕವಾಗಿಯೇ ಮುಂದುವರಿಸಲಾಗಿದೆ. ಗ್ರಾಮೀಣ ಮಹಿಳೆಯ ಸಾಮಾಜಿಕ ಸಬಲೀಕರಣ, ಆರ್ಥಿಕ ಸಬಲೀಕರಣ, ಶೈಕ್ಷಣಿಕ ಸಬಲೀಕರಣ, ಆರೋಗ್ಯದ ಸಬಲೀಕರಣಕ್ಕೆ ಸಂಬಂಧಿಸಿದಂತೆ ಪ್ರಶ್ನಾವಳಿಗಳ ಮುಖಾಂತರ ಪಡೆದಂತ ಮಾಹಿತಿಗಳನ್ನು ವಿಶ್ಲೇಷಿಸಲಾಗಿದೆ. ನಿಜವಾಗಿಯೂ ಈ ಎಲ್ಲ ವಿಷಯಗಳಲ್ಲಿ ಸಬಲಗೊಳ್ಳುತ್ತಿದ್ದಾಳೆಯೇ ಅಥವಾ ಇಲ್ಲವೇ? ಇಲ್ಲವೆಂದರೆ ಕಾರಣಗಳೇನು ಮುಂತಾದ ವಿಷಯಗಳನ್ನು ಇಲ್ಲಿ ಚರ್ಚಿಸಲಾಗಿದೆ. ಇಲ್ಲಿ ಕೋಷ್ಟಕಗಳ ಮುಖಾಂತರ ಮಾಹಿತಿಗಳನ್ನು ಯಥಾವತ್ತಾಗಿ ಅನಾವರಣಗೊಳಿಸಲಾಗಿದೆ ಹಾಗೂ ಬಂದ ಫಲಿತಾಂಶಗಳನ್ನು ಸ್ತ್ರೀವಾದಿ ನೆಲೆಯಲ್ಲಿ ನೋಡಲಾಗಿದೆ.

ಅಂತಿಮವಾಗಿ ಆರನೇಯ ಅಧ್ಯಾಯದಲ್ಲಿ ಒಟ್ಟಾರೆಯಾಗಿ ಎಲ್ಲ ಅಧ್ಯಾಯಗಳಲ್ಲಿನ ಶೋಧಿತ ಸಂಗತಿಗಳನ್ನು ಮತ್ತು ವಸ್ತು ವಿವರಗಳನ್ನು ಸಮೀಕ್ಷಿಸಲಾಗಿದೆ. ಅಲ್ಲದೆ ಅಧ್ಯಯನದಲ್ಲಿ ಬಳಸಿದ ಆಲೋಚನೆಗಳು, ಗ್ರಹಿಕೆಗಳು ಮುಂತಾದ ಅಂಶಗಳನ್ನು ಇಡಿಯಾಗಿ ಹಿಡಿದಿಡಲು ಹಾಗೂ ಸಂಶೋಧನೆಯಲ್ಲಿ ಕಂಡುಕೊಂಡಂತಹ ಮಹತ್ವಪೂರ್ಣ ಫಲಿತಗಳನ್ನು ನೀಡಲು ಈ ಶೀರ್ಷಿಕೆಯಲ್ಲಿ ಅವಕಾಶ ಕಲ್ಪಿಸಿಕೊಳ್ಳಲಾಗಿದೆ. ಮಹಾಪ್ರಬಂಧದ ಶೀರ್ಷಿಕೆಯು ಸ್ಪಷ್ಟಪಡಿಸುವಂತೆ ಗ್ರಾಮೀಣ ಮಹಿಳಾ ಸಬಲೀಕರಣ ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಸಬಲೀಕರಣ ಅನ್ನುವ ಪದ ಬಹಳ ದೊಡ್ಡದು ಹಾಗೂ ಧನಾತ್ಮಕವಾಗಿ ಕಂಡರೂ ಸಹಿತ ಆಳವಾಗಿ ಒಳಹೊಕ್ಕು ನೊಡಿದಾಗ ಇದರ ಸ್ವರೂಪವು ಸಾಂಕೇತಿಕವಾಗಿ ತುಂಬಾ ಸುಂದರವಾಗಿ ಕಂಡುಬರುತ್ತಿದೆ. ಗ್ರಾಮೀಣ ಮಹಿಳೆಯರು ವೈಯಕ್ತಿಕ, ಕೌಟುಂಬಿಕ, ಸಾಮಾಜಿಕ ಮತ್ತು ಆರ್ಥಿಕ, ಶೈಕ್ಷಣಿಕ ಹಾಗೂ ರಾಜಕೀಯ ಸಬಲೀಕರಣವಾಗುವ ಬದಲು ಅಧಿಕಾರ ಹೀನತೆಯನ್ನು ಅನುಭವಿಸುತ್ತಿದ್ದಾರೆ. ತೀರ್ಮಾನ ತೆಗೆದುಕೊಳ್ಳುವ ಅಸಹಾಯಕ ಪರಿಸ್ಥಿತಿಯನ್ನು ಪುರುಷ ಪ್ರಧಾನ ಸಮಾಜದ ಲಿಂಗತಾರತಮ್ಯ ನೀತಿಯಿಂದ ಮಹಿಳೆ ಬಲವಂತದಿಂದಲೇ ಅನುಭವಿಸಬೇಕಾಗಿದೆಯೆಂಬ ಸಂಗತಿಗಳನ್ನು ಪ್ರಸ್ತುತ ಸಂಶೋಧನೆಯಲ್ಲಿ ಕಂಡುಕೊಂಡಂತೆ ಈ ಸಂಶೋಧನಾ ಅಧ್ಯಯನದ ಫಲಿತಗಳನ್ನು ಕೆಳಗಿನಂತೆ ಪಟ್ಟಿಮಾಡಿ ಹೇಳಬಹುದಾಗಿದೆ.

6.1 ಅಧ್ಯಯನದ ಫಲಿತಗಳು:

1. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರನ್ನು ನಿಯೋಗಿಯಾಗಿ ಬಳಸಿಕೊಂಡು ಇಂದಿಗೂ ಸಮಾಜದಲ್ಲಿ ಸ್ಥಾಪಿತ ಪ್ರಭುತ್ವಗಳೇ ತಮ್ಮ ಆಳ್ವಿಕೆ ಯನ್ನು ನಡೆಸುತ್ತಿವೆ. ತಮ್ಮ ಹಿತಾಸಕ್ತಿಗಾಗಿ ಮಹಿಳೆಯನ್ನು ಬಳಸಿಕೊಳ್ಳುತ್ತಿವೆ.

2. ಕುಟುಂಬದಲ್ಲಿ ಇವತ್ತು ಸಹ ಯಾರು ಕೌಟುಂಬಿಕ ವಿಚಾರಗಳಲ್ಲಿ ಗ್ರಾಮೀಣ ಮಹಿಳೆಯರಿಗೆ ತೀರ್ಮಾನ ತೆಗೆದುಕೊಳ್ಳಲು ಅವಕಾಶವಿಲ್ಲ. ಅದಕ್ಕೂ ಮೀರಿ ತೀರ್ಮಾನ ತೆಗೆದುಕೊಂಡರೆ ಗಂಡ ಮತ್ತು ಕುಟುಂಬದವರ ಹಿಂಸೆಯನ್ನು ಎದುರಿಸಬೇಕಾಗುತ್ತದೆ. ಅವಳನ್ನು ಪಾತಿವ್ರತ್ಯ, ಶೀಲ, ಪಾವಿತ್ರ್ಯ, ತಾಯ್ತನ ಮುಂತಾದ ಆದರ್ಶೀಕೃತ ಮೌಲ್ಯ ವ್ಯವಸ್ಥೆಯಲ್ಲಿ ಬಂಧಿಸಲಾಗಿದೆ.

3. ಕುಟುಂಬದಲ್ಲಿ ಹೊಂದಾಣಿಕೆ ಮಾಡಿಕೊಳ್ಳುವುದು ಯಾವ ಮೂಲೆಯಿಂದ ನೋಡಿದರೂ ಸಹ ಮಹಿಳೆಯೇ ಮಾಡಿಕೊಳ್ಳಬೇಕೆಂಬ ಒತ್ತಾಯವಿರುವುದು ಕಂಡುಬರುತ್ತದೆ ಹಾಗೂ ಸ್ಥಿರಮಾದರಿಯ ಸಾಮಾಜೀಕರಣ ನಿರಂತರವಾಗಿ ನಡೆಯುತ್ತದೆ.

4. ಬಾಲ್ಯ, ಯೌವ್ವನ, ಮುಪ್ಪಿನಲ್ಲಿ ಪುರುಷನ ಆಶ್ರಯದಲ್ಲಿ ಮಹಿಳೆ ಇರಬೇಕೆಂಬ ಮನುಸ್ಮೃತಿಯ ಅನುಸರಣೆ ಈ ಕಾಲದಲ್ಲಿಯೂ ಬಹಳ ವ್ಯವಸ್ಥಿತವಾಗಿ ನಡೆಯುತ್ತಿದೆ.

5. ಗ್ರಾಮೀಣ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆಯೋ ವಿನಃ ಕಡಿಮೆಯಾಗುತ್ತಿಲ್ಲ.

6. ಸ್ವ-ಸಹಾಯ ಸಂಘದ ಧ್ಯೇಯೋದ್ದೇಶಗಳ ಸಂಪೂರ್ಣ ಅರಿವು ಇಲ್ಲದೆ ಇರುವುದು ಕಂಡುಬರುತ್ತದೆ.

7. ಮಹಿಳೆಯರಿಗೆ ಕೇವಲ ಸಾಲ ಸಿಕ್ಕುತ್ತದೆಯೆನ್ನುವ ಉದ್ದೇಶಕ್ಕೆ ಸಂಘಗಳನ್ನು ರಚಿಸಿಕೊಳ್ಳಲಾಗುತ್ತಿದೆ, ಬ್ಯಾಂಕ್ ವ್ಯವಹಾರದ ಪರಿಪೂರ್ಣ ಜ್ಞಾನವಿರದೆ ತೆಗೆದುಕೊಂಡ ಸಾಲ ಮರುಪಾವತಿ ಮಾಡದೆ (ಪುರುಷ ನಿಯಂತ್ರಣಕ್ಕೆ ಒಳಪಟ್ಟು) ಇನ್ನು ಹೆಚ್ಚಿನ ಸಾಲದ ಹೊರೆಯಲ್ಲಿ ಸಿಕ್ಕಿರುವುದು ಸಾಮಾನ್ಯವಾಗಿ ಕಂಡುಬರುತ್ತದೆ.

8. ಸರ್ಕಾರಿ ಯೋಜನೆಗಳಾಗಲಿ, ಕಾರ್ಯಕ್ರಮಗಳಾಗಲಿ ಅದರ ಪರಿಪೂರ್ಣ ಸ್ಪಷ್ಟತೆ ಅಥವಾ ತರಬೇತಿ ಸಿಗದೆ ಸೌಲಭ್ಯಗಳನ್ನು ಪಡೆದುಕೊಳ್ಳುವಲ್ಲಿಯೂ ಅನ್ಯಾಯವಾಗುಗ್ತದೆ, ಅಂದರೆ ಸಾಮಾನ್ಯವಾಗಿ ಹೆಸರು ಮಹಿಳೆಯರದಾದರೂ ಅನುಭವಿಸುವವರು ಬೇರಯವರು ಆಗಿರುತ್ತಾರೆ.

9. ಶೈಕ್ಷಣಿಕ ಸಬಲೀಕರಣಕ್ಕೆ ಸಂಬಂಧಪಟ್ಟಂತೆ ತಾವು ಶಾಲೆ ಕಲಿತಿಲ್ಲವಾದರೂ ತಮ್ಮ

ಮಕ್ಕಳಿಗೆ ಶಿಕ್ಷಣ ಕಲಿಸಬೇಕಂಬ ಪರಿಜ್ಞಾನ ಬಂದಿದೆ. ಈ ಶೈಕ್ಷಣೀಕ ಅರಿವಿಗಿಂತ ಹೆಣ್ಣು ಮಕ್ಕಳ ಮದುವೆಯ ವ್ಯವಸ್ಥೆಗೆ ಪ್ರಾಧಾನ್ಯತೆ ನೀಡಲಾಗುತ್ತದೆ.

10. ಪಂಚಾಯತ್ ವ್ಯವಸ್ಥೆಯಲ್ಲಿ ರಾಜಕೀಯವಾಗಿ ಮಹಿಳೆಯರಿಗೆ ದೊರೆತಿರುವ ಶೇ.33 ರಷ್ಟು ಮೀಸಲಾತಿಯಿಂದ ಯಾವುದೇ ರೀತಿಯ ಉಪಯೋಗವಾಗುತ್ತಿಲ್ಲ. ಅದು ಪುರುಷ ವ್ಯವಸ್ಥೆಗೆ ನೀಡಿದ ಇನ್ನೊಂದು ಅವಕಾಶವೆಂತಾಗಿದೆ.

11. ಆರೋಗ್ಯದ ಸಬಲೀಕರಣದ ವಿಷಯಕ್ಕೆ ಬಂದರೆ ಸಾಂಪ್ರದಾಯಿಕ ಮನೋಭಾವನೆಗಳಿಂದ ತನ್ನ ಆರೋಗ್ಯವನ್ನು ತಾನು ಕಾಪಾಡಿಕೊಳ್ಳದಂತಹ ಸ್ಥಿತಿ ಇವಳಿಗಿದೆ. ಉದಾ: ಪದೇ ಪದೇ ಗರ್ಭಪಾತ, ಗಂಡು ಮಗು ಹುಟ್ಟುವವರೆಗೂ ಕಾಯುವುದು ಅನಾರೋಗ್ಯಕ್ಕೆ ತುತ್ತಾದಾಗ ಬೇಗ ಆಸ್ಪತ್ರೆಗೆ ಹೋಗದೆಯಿರುವುದು ಇತ್ಯಾದಿ.

12. ಸ್ವಯಂ ಸೇವಾ ಸಂಸ್ಥೆಗಳು ಮಹಿಳೆಯರ ಸಬಲೀಕರಣವನ್ನು ಮುಖ್ಯ ಗುರಿಯಾಗಿಟ್ಟುಕೊಂಡು ಕಾರ್ಯ ನಿರ್ವಹಿಸುತ್ತಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಮಹಿಳೆಯರಿಗೆ ತಲುಪುತ್ತಿಲ್ಲ. ಅನುಕೂಲಕ್ಕಿಂತ ಅನಾನುಕೂಲಗಳೇ ಜಾಸ್ತಿಯಾಗಿದೆ. ಇದಕ್ಕೆ ವ್ಯವಸ್ಥೆಯೇ ಕಾರಣವೆಂದು ಹೇಳಬಹುದಾಗಿದೆ.

13. ಸಾಮಾಜಿಕ ಸಮಸ್ಯೆಗಳಾದ ಬಾಲ್ಯವಿವಾಹ, ವರದಕ್ಷಿಣೆ, ಕುಡಿತ ಮುಂತಾದ ಸಮಸ್ಯೆಗಳು ಮಹಿಳೆಯರ ಮೇಲೆ ಗಂಭೀರ ಪ್ರಭಾವ ಬೀರುತ್ತಿವೆ. ಅವುಗಳ ಬಗ್ಗೆ ಮಾತಾಡದಂತೆ ತಡೆಯೊಡ್ಡಿವೆ.

ಪ್ರಸ್ತುತ ಅಧ್ಯಯನದಲ್ಲಿ ಗ್ರಾಮೀಣ ಮಹಿಳೆಯರ ದೈನಂದಿನ ಬದುಕಿನ ಅನುಭವಗಳನ್ನು ಮಾಹಿತಿಗಳನ್ನು ವಿಶ್ಲೇಷಣಗೊಳಪಡಿಸಿ ಮೇಲಿನ ಫಲಿತಗಳನ್ನು ಅಧ್ಯಯನದುದ್ದಕ್ಕೂ ಕಂಡುಕೊಳ್ಳಲಾಗಿದೆ. ಮಹಿಳೆಯಾಗಿರುವ ಕಾರಣದಿಂದಲೇ ಅನುಭವಿಸುವ ಯಾತನೆ, ಶೋಷಣೆ, ತೊಡಕುಗಳು, ಅಧಿಕಾರ ಹೀನತೆಯನ್ನು ಅಧ್ಯಯನದಲ್ಲಿ ಕಂಡುಬಂದಂತೆ ದಾಖಲಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಮಹಿಳೆಯರು ತಮ್ಮ ಬದುಕಿನಲ್ಲಿ ಬದಲಾವಣೆಯನ್ನು ಕಾಣಬೇಕು, ಸಬಲೀಕರಣ ಹೊಂದಬೇಕೆಂದು ಅವರಿಗಾಗಿಯೇ ವಿಶೇಷ ಯೋಜನೆಗಳನ್ನು ಕಾರ್ಯಕ್ರಮಗಳನ್ನು ಹಾಗೂ ಸಹಕಾರ ಸಿಗಲೆಂದು ವಿಶೇಷ ಮಹಿಳಾ ಕಾನೂನುಗಳು, ಶಾಸನಾತ್ಮಕ, ಕಾನೂನಿನಾತ್ಮಕ ಬೆಂಬಲಗಳನ್ನು ನೀಡಿದರೂ ಸಹ ಅದರ ಪಾಲನಾಕಾರ್ಯದಲ್ಲಿ ಎಡವಿದೆ ಎಂದು ಹೇಳಬಹುದು. ಸಾಂಪ್ರದಾಯಿಕ ಭಾರತೀಯ ಸಮಾಜದಲ್ಲಿ ಮೂಲಭೂತವಾಗಿರುವ ಊಳಿಗಮಾನ್ಯ ಪದ್ಧತಿ, ಬಂಡವಾಳ ಶಾಹಿ ವ್ಯವಸ್ಥೆ, ಜಮೀನ್ದಾರಿ ವ್ಯವಸ್ಥೆಗಳಂತಹ ಸಾಂಪ್ರದಾಯಿಕ ಪ್ರಭುತ್ವಗಳೇ ವಾಸ್ತವವಾಗಿ ಸಮಾಜವನ್ನು ಸರ್ಕಾರವನ್ನು ನಿಯಂತ್ರಿಸುತ್ತಿವೆ. ಇಂತಹ ಸ್ಥಾಪಿತ ಪ್ರಭುತ್ವಗಳಡಿಯಲ್ಲಿ

ಸಿಕ್ಕ ಮಹಿಳೆಯ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಆರೋಗ್ಯಕ್ಕೆ ಸಂಬಂಧಿಸಿದ ಅಸ್ತಿತ್ವವು ಮೂಲೆಗುಂಪಾಗುತ್ತಿದೆ. ಪುರುಷಶಾಹಿ ವ್ಯವಸ್ಥೆ ತೆಗೆದುಕೊಳ್ಳುವ ಪ್ರತಿ ತೀರ್ಮಾನಗಳು ಮಹಿಳೆಯ ದೈನಂದಿನ ಬದುಕನ್ನು ನಿಯಂತ್ರಿಸುತ್ತಿವೆ. ಎಷ್ಟೋ ಸಾರಿ ಆಕೆಯ ಮನದಾಳದಲ್ಲಿ ತನ್ನ ಅಸ್ತಿತ್ವವೇ ಇಲ್ಲವೆಂಬ ನೋವಿನ ಭಾವನೆ ವಿಸ್ತಾರವಾಗಿ ಬೆಳೆಯುತ್ತಿದೆ.

ಹೀಗೆ ಗ್ರಾಮೀಣ ಮಹಿಳೆಗೆ ಯಾವುದೋ ಒತ್ತಡಕ್ಕೆ ಅವಕಾಶಗಳು ಅಧಿಕಾರಗಳು ಸಿಕ್ಕರೂ ಸಹಿತ ಸಾಂಪ್ರದಾಯಿಕವಾಗಿ ಬಂದಿರುವ ಜಾತಿ ಹಾಗೂ ಲಿಂಗದ ನೆಲೆಗಳಿಂದ ಅಧಿಕಾರ ಹೀನತೆಯನ್ನು ಅನುಭವಿಸುತ್ತಿದ್ದಾಳೆ. ಪುರುಷಶಾಹಿ ವ್ಯವಸ್ಥೆಯು ತಂದೊಡ್ಡುತ್ತಿರುವ ಮಹಿಳಾ ಸಬಲೀಕರಣದ ಯೋಜನೆಗಳಾಗಲಿ, ಸೌಲಭ್ಯಗಳಾಗಲಿ, ಮೀಸಲಾತಿಯಾಗಲಿ ಮಹಿಳೆಯರಿಗೆ ತಲುಪುತ್ತಿಲ್ಲ. ಮಹಿಳೆಯರನ್ನು ಅಸ್ತ್ರವನ್ನಾಗಿ ಮಾಡಿಕೊಂಡು ತಮ್ಮ ಹಿತಾಸಕ್ತಿಗೆ ಅಸ್ತಿತ್ವಕ್ಕೆ ಈ ಎಲ್ಲ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿವೆ. ಹೀಗೆ ಗ್ರಾಮೀಣ ಮಹಿಳೆಯ ಬದುಕು ಪುರುಷಶಾಹಿ ವ್ಯವಸ್ಥೆಯ ನಿಯಂತ್ರಣದಲ್ಲಿದೆಯೆಂದು ಹೇಳಬಹುದು. ಈ ಎಲ್ಲ ತೊಡಕುಗಳ ಮಧ್ಯೆಯೂ ಗ್ರಾಮೀಣ ಮಹಿಳೆಯರು ತಮ್ಮ ಸಬಲೀಕರಣದ ಪ್ರಕ್ರಿಯೆಯಲ್ಲಿ ಸಮಯ ಮತ್ತು ಅವಕಾಶಗಳನ್ನು ಪಡೆದುಕೊಂಡು ತನ್ನದೆಯಾದ ಆತ್ಮ ವಿಶ್ವಾಸದ ಗಟ್ಟಿಯಾದ ಹೆಜ್ಜೆಗಳನ್ನು ಇಡುವ ಪ್ರಕ್ರಿಯೆಯ ಕಾರಣಕ್ಕಾಗಿ ಪ್ರಸ್ತುತ ಅಧ್ಯಯನವು ಅವಳ ಸಮಗ್ರ ಸಮಸ್ಯೆಗಳ ಎಡೆಗೆ ಒಂದು ಬೆಳಕು ಚೆಲ್ಲಿ, ಅವಳ ಮುಂದಿನ ದಾರಿಯ ಹೆಜ್ಜೆ ಗುರುತುಗಳನ್ನು ಮೂಡಿಸುವಲ್ಲಿ ಪ್ರಾಮಾಣಿಕ ಅಧ್ಯಯನವನ್ನು ಮಾಡಿ ಮಂಡಿಸಿದೆ.

ಈ ಒಟ್ಟು ಅಧ್ಯಯನಕ್ಕೆ ಬಂಧವಾಗಿ ಸೇರದಿರುವ ಆದರೆ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಬಳಕೆಯಾದ ಮಾಹಿತಿಯ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ. ಪ್ರಸ್ತುತ ಅಧ್ಯಯನಕ್ಕೆ ಬಳಸಿದ ಮಾಹಿತಿಯ ಮೂಲಗಳಾಧ ಸ್ವ-ಸಹಾಯ ಸಂಘಗಳ ಹಾಗೂ ಸದಸ್ಯರ ವಿವರದ ಪಟ್ಟಿಯನ್ನು ಹಾಗೂ ಮಹಿಳೆಯರೊಂದಿಗೆ ಚರ್ಚೆಯಲ್ಲಿ ತೊಡಗಿದಾದಿ ವಿಶೇಷವಾಗಿ ಕಂಡು ಬಂದಂತಹ ಪ್ರಕರಣ ಮಾದರಿಗಳನ್ನು ದಾಖಲಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿದ ಮಾಹಿತಿ ಮೂಲಗಳ ಸ್ವ-ಸಹಾಯ ಸಂಘಗಳ ಹಾಗೂ ಸದಸ್ಯರ ವಿವರದ ಪಟ್ಟಿಯನ್ನು ಮತ್ತು ಮಹಿಳಾ ಸಂಘಗಳ ಕಾರ್ಯ ಚಟುವಟಿಕೆಗಳ ಭಾವಚಿತ್ರಗಳನ್ನು, ಪಂಚಾಯ್ತಿ ವ್ಯಾಪ್ತಿಯಲ್ಲಿ ಬರುವ ಸ್ವ-ಸಹಾಯ ಸಂಘದ ಮಹಿಳೆಯರನ್ನು ಸಂದರ್ಶಿಸಿದಾಗ ವಿಶೇಷವಾಗಿ ಕಂಡುಬಂದಂತಹ ಮಾದರಿ ಪ್ರಕರಣಗಳನ್ನು ದಾಖಲಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬಳಸಿದ ಅನುಸರಿಸಿದ ಪ್ರಶ್ನಾವಳಿಯ ನಮೂನೆಯನ್ನು ಒದಗಿಸಲಾಗಿದೆ.

ಅಧ್ಯಯನಕ್ಕೆ ಸಂಬಂಧಿಸಿದಂತೆ ಪೂರಕವಾದ ಗ್ರಂಥಗಳ ಪಟ್ಟಿಯನ್ನು ನೀಡಲಾಗಿದೆ. ಕೊನೆಯಲ್ಲಿ ಸಂಶೋಧನಾ ಅಧ್ಯಯನದಲ್ಲಿ ಸ್ವ-ಸಹಾಯ ಸಂಘ, ಸಭೆ ಮಹಿಳೆಯರ ಚಟುವಟಿಕೆ ಕುರಿತು ಕೆಲವೊಂದು ಭಾವಚಿತ್ರಗಳನ್ನು ಅಂತ್ಯದಲ್ಲಿ ನೀಡಲಾಗಿದೆ.

6.2 ಅಧ್ಯಯನದ ಸಲಹೆಗಳು:

1. ಸ್ವ-ಸಹಾಯ ಗುಂಪುಗಳು ತನ್ನದೆಯಾದಂತಹ ನೀತಿ-ನಿಯಮ, ಗುರಿ-ಉದ್ದೇಶಗಳನ್ನು ಹೊಂದಿವೆ ಮತ್ತು ಮಹಿಳೆಯರ ಬದುಕಿಗೆ ಬೆಳಕನ್ನು ನೀಡಬಲ್ಲವು. ಹೀಗಾಗಿ ಬರೀ ಸಾಲದ ಉದ್ದೇಶಕ್ಕಾಗಿ ಮಾತ್ರ ಸ್ವ-ಸಹಾಯ ಗುಂಪುಗಳ ರಚನೆಯಾಗಕೂಡದು ಅವು ನಿರಂತರವಾಗಿರಬೇಕು.

2. ಮಹಿಳೆಯರಿಗಾಗಿ ಬಂದಿರುವ ಸೌಲತ್ತುಗಳನ್ನು ಪುರುಷರಾಗಲಿ, ಅಧಿಕಾರಿಗಳಾಗಲಿ, ಚುನಾಯಿತ ಸದಸ್ಯರು, ರಾಜಕೀಯ ಮುಖಂಡರಾಗಲಿ ದುರುಪಯೋಗಪಡಿಸಿಕೊಳ್ಳದೆ ಮಹಿಳೆಯರ ಕೆಲಸ ಕಾರ್ಯಗಳಿಗೆ ಪೂರಕವಾಗಿ ಸಹಕರಿಸಬೇಕು.

3. ಗ್ರಾಮ ಪಂಚಾಯ್ತಿ ಮೀಸಲಾತಿಯಲ್ಲಿ ಮಹಿಳೆಗೆ ಹೆಸರಿಗೆ ಮಾತ್ರ ಸ್ಥಾನ ಮತ್ತು ಅಧಿಕಾರವನ್ನು ನೀಡಿ, ಪುರುಷರು ತಮಗೆ ಇನ್ನೊಂದು ಅವಕಾಶ ಒದಗಿದೆ ಎಂಬ ಭ್ರಮೆಯಲ್ಲಿ ಆಕೆಯ ಅಧಿಕಾರವನ್ನು ಇವರು ಚಲಾಯಿಸುತ್ತಿದ್ದಾರೆ ಇದು ತಪ್ಪು ಅವಳ ಹಕ್ಕು ಮತ್ತು ಅಧಿಕಾರ ಅವಳೇ ಚಲಾಯಿಸುವಂತೆ ಸಹಕರಿಸಬೇಕು.

4. ಸ್ವ-ಸಹಾಯ ಗುಂಪಿನ ರಚನೆಯ ಪ್ರಾರಂಭದಿಂದ ಸಂಘ ಬಲಗೊಳ್ಳುವವರೆಗೆ ಮಾತ್ರ ಸ್ವಯಂ ಸೇವಾ ಸಂಸ್ಥೆ ಜೊತೆಗಿರುಬೇಕು. ಸಂಘ ಸ್ವಾವಲಂಬಿಯಾದ ನಂತರ ಹೊರಗಡೆ ನಿಂತು ಸಂಘಕ್ಕೆ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು. ಮುಂಬರುವ ದಿನಗಳಲ್ಲಿ ಸಂಘಗಳು ಸ್ಥಳೀಯ ಸಂಪನ್ಮೂಲ ಕೇಂದ್ರಗಳಾಗಬೇಕು.

5. ಮಹಿಳೆಯರಿಗೆ ಸಂಬಂಧಪಟ್ಟಂತಹ ಯೋಜನೆಗಳು ಮತ್ತು ಕಾರ್ಯಕ್ರಮಗಳು ಅವು ಸರ್ಕಾರದ್ದಾಗಿರಬಹುದು, ಅರೆ ಸರ್ಕಾರದ್ದಾಗಿರಬಹುದು. ಅವುಗಳ ಅನುಷ್ಠಾನ ಪೂರ್ವದಲ್ಲಿ ಸಂಬಂಧಿಸಿದ ಕಾರ್ಯಕ್ರಮಗಳ ಬಗ್ಗೆ ಮಹಿಳೆಯರನ್ನು ಸೇರಿಸಿ ಪರಿಣಾಮಕಾರಿಯಾದ ತರಬೇತಿ ಕಾರ್ಯಕ್ರಮಗಳನ್ನು ಮಾಡಬೇಕು. ನಂತರ ಕಾಲ ಕಾಲಕ್ಕೆ ಯೋಜನೆಯ ಅನುಷ್ಠಾನ ಕುರಿತು ಅನುಸರಣಾ ಸಭೆಗಳನ್ನು ಮಾಡಬೇಕಾಗುತ್ತದೆ.

6. ಮಹಿಳಾ ಸಬಲೀಕರಣ ಪ್ರಕ್ರಿಯೆಯಲ್ಲಿ ಅಂದರೆ ಅವಳು ತೆಗೆದುಕೊಳ್ಳುವ ತೀರ್ಮಾನಗಳಾಗಲಿ, ಸ್ವಾತಂತ್ರ್ಯವಾಗಲಿ, ಇದಕ್ಕೆ ಸಂಬಂಧಿಸಿದಂತೆ ಕುಟುಂಬದವರಾಗಲಿ, ಸಮುದಾಯದವರಾಗಲಿ, ಸಮಾಜದವರಾಗಲಿ, ಅಧಿಕಾರವರ್ಗದವರಾಗಲಿ, ಸಹಕಾರ ನೀಡುವುದು ಅತೀ ಅವಶ್ಯಕವಾಗಿದೆ.

7. ಮಹಿಳೆಯರು ಸಂಘಟನೆಯನ್ನು ದುರುಪಯೋಗಪಡಿಸಿಕೊಳ್ಳುವ ಯಾವ ವ್ಯವಸ್ಥೆಯೇ ಆಗಲಿ ಅದರ ಮೇಲೆ ಸೂಕ್ತಕ್ರಮ ಕೈಗೊಳ್ಳಬೇಕು.

8. ಸ್ವ-ಸಹಾಯ ಸಂಘದಿಂದ ಪ್ರಾರಂಭವಾದ ಮಹಿಳಾ ಸಂಘಟನೆ ಗ್ರಾಮ ಮಟ್ಟದಿಂದ ತಾಲ್ಲೂಕಮಟ್ಟ, ಜಿಲ್ಲಾಮಟ್ಟ, ರಾಜ್ಯಮಟ್ಟ ಹಾಗೂ ರಾಷ್ಟ್ರ ಮಟ್ಟದವರೆಗೆ ಸಂಘಟನೆ ಬೆಳೆದು ಮಹಿಳೆಯರ ವಿರುದ್ಧದ ಧೋರಣೆಗಳನ್ನು ನೀತಿ-ನಿಯಮಗಳನ್ನು ಮಹಿಳಾ ಶೋಷಣೆಯ ವಿರುದ್ಧ ಪ್ರತಿಭಟಿಸಬೇಕಾಗಿದೆ.

9. ಮಹಿಳೆಯರು ಸಾಲ ತೆಗೆದುಕೊಳ್ಳುವ ವಿಷಯದಲ್ಲಿ ಅವರ ಕುಟುಂಬದವರು ಒತ್ತಾಯ ಮಾಡುವುದಾಗಲಿ, ತೆಗೆದುಕೊಂಡ ಸಾಲವನ್ನು ದುರ್ಬಳಕೆ ಮಾಡುವುದಾಗಲಿ ಅಥವಾ ಮರುಪಾವತಿಗೆ ಸಹಕರಿಸದೆ ಇರುವುದಾಗಲಿ ಮಾಡದೆ ಪ್ರತಿ ಹಂತದಲ್ಲಿ ಅವಳಿಗೆ ಸಹಕಾರ ನೀಡಬೇಕು.

10. ಮಹಿಳಾ ಸಬಲೀಕರಣಕ್ಕೆ ಸಂಘ ಒಂದು ಆರಂಭದ ಹೆಬ್ಬಾಗಿಲು ಇದರ ಮೂಲಕ ಸರ್ಕಾರ ಅಥವಾ ಸರ್ಕಾರೇತರ ಸಂಸ್ಥೆಗಳಾಗಲಿ ಜಾಗೃತಿಯನ್ನು ಉಂಟು ಮಾಡಿ ಸ್ವಾವಲಂಬನೆ, ಶಿಕ್ಷಣ, ಆರ್ಥಿಕತೆ, ಆರೋಗ್ಯ, ಲಿಂಗತ್ವ, ಕಾನೂನು, ಪಂಚಾಯ್ತಿ ರಾಜ್ ಮುಂತಾದ ವಿಷಯಗಳಲ್ಲಿ ಮಹಿಳೆಯರು ಸಶಕ್ತರಾಗುವಂತೆ ಮಾಡಬೇಕು.

11. ಸ್ವ-ಸಹಾಯ ಸಂಘ ಕಾರ್ಯಕ್ರಮಗಳಲ್ಲಿ ಆರ್ಥಿಕ ಚಟುವಟಿಕೆಗಳು ಕೇವಲ ಮಹಿಳೆ ಯರ ಉಳಿತಾಯ ಮತ್ತು ಸಾಲಕ್ಕೆ ಸೀಮಿತವಾಗದೇ, ಮಹಿಳೆಯರಲ್ಲಿ ಉದ್ಯಮ ಶೀಲತೆಯ ಗುಣಗಳನ್ನು ಬೆಳಸುವಂತಾಗಬೇಕು. ಅಷ್ಟೇ ಅಲ್ಲದೆ ಮುಂಬರುವ ದಿನಗಳಲ್ಲಿ ಮಹಿಳಾ ಬ್ಯಾಂಕುಗಳ ಸ್ಥಾಪನೆಯಾಗಬೇಕು.

12. ಪ್ರತಿಯೊಂದು ಸ್ವಸಹಾಯ ಸಂಘವು ವೋಟ್‌ಬ್ಯಾಂಕ್ ಆಗದೆ ಸುತ್ತಮುತ್ತಲಿನ ಜನರ ಆಗುಹೋಗುಗಳನ್ನು ಅರಿತುಕೊಂಡು ಸಮಾಜ, ಸಮುದಾಯ ಮಾನವ ಹಕ್ಕುಗಳ ಮೇಲೆ ನಡೆಯುವ ದೌರ್ಜನ್ಯಗಳನ್ನು ಅರಿತು ನ್ಯಾಯಯುತ ವಾಗಿ ಅವುಗಳನ್ನು ಪ್ರತಿಭಟಿಸುವಂಥ ಶಕ್ತಿ ಸಂಘಗಳು ಮಹಿಳೆಯರಿಗೆ ನೀಡಬೇಕು.

13. ಮಹಿಳಾ ಸಂಘಗಳಲ್ಲಿ ಮಹಿಳೆಯರ ಹಕ್ಕು ಮತ್ತು ಸ್ವಾತಂತ್ರ್ಯ ನಿರ್ಧರಿಸುವಂಥ ವಿಷಯಗಳಾದ ಆಹಾರ, ಉಡುಪು, ಶಿಕ್ಷಣ, ಮದುವೆ, ಲೈಂಗಿಕತೆ, ಆರೋಗ್ಯಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಅವಳೇ ತೆಗೆದುಕೊಳ್ಳುವಂಥ ಶಕ್ತಿ ಮಹಿಳೆಯರಿಗೆ ಬರುವ ಹಾಗೆ ಮಾಡುವುದೆ ಈ ಸಂಘದ ಮೂಲ ಉದ್ದೇಶವಾಗಿರಬೇಕು.

14. ಓದು, ಬರಹ, ಸಹಿ, ಅಂಕಿ-ಸಂಖ್ಯೆಗಳನ್ನು ಎಣಿಸುವದೇ ಸಾಕ್ಷರತೆ ಅಥವಾ ಶಿಕ್ಷಣವೆನ್ನುವುದಕ್ಕಿಂತ ವ್ಯಾಪಕ ಅರಿವುಗಳಾದ ಆತ್ಮ ವಿಶ್ವಾಸ, ಸ್ವಾಭಿಮಾನವನ್ನು ಮಹಿಳಾ ಸ್ವ-ಸಹಾಯ ಸಂಘಗಳು ಮಹಿಳೆಯರಲ್ಲಿ ಬೆಳಸಬೇಕಾಗಿದೆ.

15. ಮಹಿಳಾ ಸಮಾಖ್ಯ ಕರ್ನಾಟಕ ತನ್ನ ತರಬೇತಿ ಕಾರ್ಯಕ್ರಮಗಳಲ್ಲಿ ಲಿಂಗ ತಾರತಮ್ಯ, ಲಿಂಗಭೇದ,ಲಿಂಗಸೂಕ್ಷ್ಮತೆ ವಿಷಯಗಳಿಗೆ ಸಂಬಂಧಿಸಿದಂತೆ ಪುರುಷರು ಭಾಗವಹಿಸುತ್ತಿದ್ದಾರೆ. ತರಬೇತಿ ಪಡೆಯಲು ಹಾಗೆಯೇ ಸರ್ಕಾರಿ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು ತಮ್ಮ ತರಬೇತಿಗಳಲ್ಲಿ ಪುರುಷ ತರಬೇತಿ ನೀಡುವ ಮುಖಾಂತರ ಸಮಾನತೆಯ ಸಮಾಜಕ್ಕೆ ದಾರಿಮಾಡಿದಂತಾಗುತ್ತದೆ.

ಮುಂದಿನ ಅಧ್ಯಯನಕ್ಕೆ ದಾರಿಗಳು:

1. ಹೈದ್ರಾಬಾದ-ಕರ್ನಾಟಕ ಪ್ರದೇಶದ ಬೀದರ, ಗುಲಬರ್ಗಾ, ರಾಯಚೂರು ಜಿಲ್ಲೆಗಳ ಸ್ವ-ಸಹಾಯ ಸಂಘಗಳನ್ನು ತೆಗೆದುಕೊಂಡು ಅಧ್ಯಯನ ಮಾಡಲಾಗಿದೆ. ಆದರೆ ಇನ್ನೂ ಹೆಚ್ಚಿಗೆ ಪ್ರದೇಶವಾರು ಸ್ವ-ಸಹಾಯ ಗುಂಪುಗಳನ್ನು ಸಂಶೋಧನೆಗೆ ಒಳಪಡಿಸಿ ಅಧ್ಯಯನ ಮಾಡಬಹುದು.

2. ಮಹಿಳೆಯರ ಸಬಲೀಕರಣದ ದೃಷ್ಟಿಯಿಂದ ಮತ್ತು ಸರ್ಕಾರೇತರ ಸಂಸ್ಥೆಗಳು ರಚಿಸುತ್ತಿರುವ ಸ್ವ-ಸಹಾಯ ಗುಂಪುಗಳು, ಅನುಷ್ಠಾನಗೊಂಡ ಕಾರ್ಯಕ್ರಮಗಳು ಮಹಿಳೆಯ ಮೇಲೆ ಬೀರಿದ ಪ್ರಭಾವಗಳನ್ನು ಕುರಿತು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ತೌಲನಿಕ ಅಧ್ಯಯನಗಳು ನಡೆಯಬೇಕು.

3. ಮುಂದುವರೆದ ಜಿಲ್ಲೆ ಹಾಗೂ ಹಿಂದುಳಿದ ಜಿಲ್ಲೆಗಳಲ್ಲಿಯ ನಗರ ಮಹಿಳಾ ಗುಂಪುಗಳು, ಗ್ರಾಮೀಣ ಮಹಿಳಾ ಗುಂಪುಗಳು, ಆ ಗುಂಪುಗಳ ಸಮಾಜೋ-ಆರ್ಥಿಕ ಸ್ಥಾನಮಾನಗಳನ್ನು ಅಧ್ಯಯನಕ್ಕೆ ಒಳಪಡಿಸಬೇಕು.

ಅನುಬಂಧಗಳು

1. ಮಾದರಿ ಪ್ರಕರಣಗಳು.
2. ಮಾಹಿತಿ ಮೂಲ : ಸ್ವ-ಸಹಾಯ ಸಂಘಗಳು ಹಾಗೂ ಸದಸ್ಯರ ವಿವರ.
3. ಪ್ರಶ್ನಾವಳಿ ನಮೂನೆ.
4. ಪರಾಮರ್ಶನ ಗ್ರಂಥಗಳು.
5. ಭಾವಚಿತ್ರಗಳು.

ಅನುಬಂಧಗಳು

1. ಮಾದರಿ ಪ್ರಕರಣಗಳು (Case Studies)

1.1 ಸಂಘ ಅಂದ್ರೆ ನನಗೆ ಬಹಳ ಪ್ರೀತಿ.

ಬೀದರಿನ ಮನ್ನಾಖ್ಯೆಳ್ಳಿಯ ಜ್ಯೋತಿ ಮಹಿಳಾ ಸಮಾಖ್ಯ ಸಂಘದ ಮಹಿಳೆಯಾದ ಮೌಲಾನಬೀ ಅವರು ಸಂಘದಲ್ಲಿ ಸೇರುವುದಕ್ಕಿಂತ ಮುಂಚೆ ಗಂಡನ ಅವಲಂಬಿಯಾಗಿ ನಾಲ್ಕು ಗೋಡೆಗಳ ಮಧ್ಯಯೇ ಮನೆ ಕೆಲಸದೊಂದಿಗೆ ಜೀವನ ಸಾಗಿಸುತ್ತಿದ್ದರು. ಮನೆ ತುಂಬಾ ಚಿಕ್ಕದಾಗಿತ್ತು ಅವರ ನೆಂಟರಿಷ್ಟರು ಮನೆಗೆ ಬರಬೇಕೆಂದರೆ ಕೂಡಲು ಜಾಗವಿಲ್ಲವೆಂದು ಆಡಿಕೊಂಡು ಯಾರು ಬರುತ್ತಿರಲಿಲ್ಲ. ಹೀಗೆ ಮನಸ್ಸಿನಲ್ಲಿಯೇ ಕೊರಗುತ್ತಿರುವ ಮೌಲಾನಬೀ ತಮ್ಮ ಕುಟುಂಬದ ಸದಸ್ಯರಿಗೆ ಗೊತ್ತಾಗದಂತೆ ಸಂಘದ ಸದಸ್ಯರಾದರು ನಂತರ ಮನೆಯಲ್ಲಿ ತಿಳಿಸಿದರು. ಸಂಘದಲ್ಲಿ ತುಂಬಾ ಆಸಕ್ತಿಯಿಂದ ಭಾಗವಹಿಸುತ್ತಿದ್ದರು.

ಎಲ್ಲರಂತೆ ಉಳಿತಾಯ ಹಣದಲ್ಲಿ ಸಾಲ ಪಡೆದು ಮೊದಲು ಮನೆಯಲ್ಲಿ ಲೈಟು ಇರಲಿಲ್ಲ ಚಿಮಣಿದೀಪ ಹಚ್ಚುತ್ತಿದ್ದರು ವಿದ್ಯುತ್ ಸಂಪರ್ಕ ಮಾಡಿಕೊಂಡರು. ಎರಡನೇ ಸಾಲದಿಂದ ಒಂದು ಹೊಲಗೆ ಯಂತ್ರ ತೆಗೆದುಕೊಂಡು ಕೌದಿ ಹೊಲೆದು ಅದಾಯ ಪಡೆಯಲು ಆರಂಭಿಸಿದಳು. ಒಂದೇ ವರ್ಷದಲ್ಲಿಯೇ 5,000 ಲಾಭ ಪಡೆದರು. ಅಷ್ಟಕ್ಕೆ ಬೀಡದೆ ಮೂರನೇ ಬಾರಿ ಸಾಲ ಪಡೆದು ತನ್ನ ಹಾಗೂ ನೆರೆಯವರ ಮಧ್ಯವಿರುವ ಜಾಗವನ್ನು ಖರೀದಿಸಿದಳು. ನಾಲ್ಕನೇ ಬಾರಿ ಎಸ್.ಜೆ.ಎಸ್.ವಾಯ್. ಸಾಲ ರೂ.20,000 ಪಡೆದು ನಳ, ಶೌಚಾಲಯ, ಮನೆಯ ಸುತ್ತಲು ಕೌಂಪೊಂಡ ಕಟ್ಟಿಸಿಕೊಂಡು 20-ವರ್ಷದಿಂದ ಒಂದೇ ಸ್ಥಿತಿಯಲ್ಲಿರುವ ವ್ಯವಸ್ಥೆಗಳನ್ನು 5-ವರ್ಷದಲ್ಲಿಯೇ ಬದಲಾವಣೆ ಮಾಡಿದಳು. ನನ್ನ ಕುಟುಂಬ ಇಷ್ಟೊಂದು ಪರಿವರ್ತನೆ

ಆಗುತ್ತದೆ ಎಂದು ನಾನು ಊಹಿಸಿರಲಿಲ್ಲ. ನಾಲ್ಕು ಗೋಡೆಯಿಂದ ಹೊರಗೆ ಬಂದ ಮೇಲೆ ನನಗೆ ಸಂಘ ಕಣ್ಣು ತೆರಿಸಿತು ಎಂದು ಹಮ್ಮೆಯಿಂದ ನುಡಿಯುತ್ತಾರೆ.

ಇಂದು ನನ್ನ ಕುಟುಂಬದಿಂದ, ಸಂಘದ ಮಹಿಳೆಯರಿಂದ ಹಾಗೂ ಯಾವತ್ತು ಮನೆಗೆ ಬಾರದ ಸಂಬಂಧಿಕರಿಂದಲೂ ಗೌರವ ಸಿಗುತ್ತಿದೆ. ಗ್ರಾಮದಲ್ಲಿ ಯಾವುದೇ ಕಾರ್ಯಕ್ರಮವಿದ್ದರೂ ಮೌಲಾನಬೀ ಎಲ್ಲಿ ಇದ್ದಾರೆ ಕೇಳುತ್ತಾರೆ. ನಮ್ಮ ಮನೆಯವರೆಲ್ಲರು ನನ್ನ ಪತಿಯು ಸಹ ನನ್ನ ಪ್ರತಿಯೊಂದು ಕೆಲಸ ಕಾರ್ಯದಲ್ಲಿ ಸಹಕಾರ ನೀಡುತ್ತಾರೆ. ಬ್ಯಾರೇ ಗಂಡಸರ ಹಾಗೆ ನನ್ನ ಗಂಡ ಇಲ್ಲ. ನನಗೆ ಕಿಮ್ಮತು ಕೊಡ್ತಾರ ಸಂಘ ಮಿಟಿಂಗಗೆ ಹೋಗಾಕ ಸಮಯ ಮತ್ತು ಅವಕಾಶ ಮಾಡಿಕೊಡ್ತಾರ. ಲಾಭ ಸಿಗ್ತದ ರೊಕ್ಕ ಸಿಗ್ತದ ಅಂತ ಅಲ್ಲ ಎಲ್ಲರಕ್ಕಿಂತ ಹೆಚ್ಚಾಗಿ ಎಷ್ಟು ರೊಕ್ಕ ಕೊಟ್ರು ಸಿಗಲಾರದ ತಿಳುವಳಿಕೆ ಸಿಗ್ತಾದ ಹೆಣ್ಣು ಉದ್ಯೋಗದಲ್ಲಿ ಪುರುಷನಂತೆ ಮಾಡಲಿಕ್ಕೆ ಸಂಘ ಒಂದು ವೇದಿಕೆ. ಅದಕ್ಕೆ ನನಗೆ ಸಂಘ ಅಂದರೆ ಪ್ರೀತಿ ಎಂದು ಹೇಳುತ್ತಾರೆ ಮೌಲಾನಬೀ.

1.2. ಆಸ್ತಿಯ ವಿವಾದ ಬಗೆಹರಿಸಿದ್ದು:

ರಂಜೀತಾ ಚಿಕ್ಕಂದಿಂನಿಂದಲೂ ಕಷ್ಟದಿಂದಲೇ ಬೆಳದು ಬಂದವಳು. ಹುಟ್ಟಿದಾಗಿನಿಂದಲೂ ತಂದೆಯ ಸೋದರಾದ ಸೈದಪ್ಪ ಅವರ ಹಂಗಿನಲ್ಲಿಯೇ ಬೆಳದವಳು. ತಂದೆ–ತಾಯಿ ಹುಟ್ಟು ಅಂಗವಿಕಲರಾಗಿದ್ದರಿಂದ ತಮಗೆ 12 ಎಕರೆ ಜಮೀನನ್ನು ತನ್ನ ಸೋದರನಿಗೆ ನೋಡಿಕೊಳ್ಳುವಂತೆ ಜವಾಬ್ದಾರಿ ವಹಿಸಿದರು. 2001 ರಲ್ಲಿ ರಂಜೀತಾಗೆ ಗ್ರಾಮದ ಪ್ರೇಮಕುಮಾರ ಅವರೊಂದಿಗೆ ಮದುವೆಯಾಯಿತು. ಮದುವೆಯ ಜವಾಬ್ದಾರಿಯನ್ನು ಅವರ ಚಿಕ್ಕಪ್ಪನಾದ ಸೈದಪ್ಪ ವಹಿಸಿಕೊಂಡು ಮದುವೆ ಕಾರ್ಯವನ್ನು ಮುಗಿಸಿದರು. ರಂಜೀತಾಗೆ ಮದುವೆಯಾದ ಎರಡನೇ ವರ್ಷದಲ್ಲಿ ತಂದೆ–ತಾಯಿ ತೀರಿಕೊಂಡರು. ನಂತರ ಆಕೆಗೆ ತವರು ಮನೆಯ ಬಾಗಿಲು ಶಾಶತ್ವವಾಗಿ ಮುಚ್ಚಿದಂದಾಯಿತು.

ಇತ್ತ ಗಂಡ ಪ್ರೇಮಕುಮಾರ ಹಾಗೂ ತನ್ನ ಎರಡು ಪುಟ್ಟ ಮಕ್ಕಳೊಂದಿಗೆ ನೆಮ್ಮದಿಯಾಗಿ ಸಂಸಾರ ಮಾಡುವಂತಿಲ್ಲ. ಪ್ರತಿದಿನ ಗಂಡ ನಿಮ್ಮ ತಂದೆ–ತಾಯಿಗೆ ಒಬ್ಬಳೇ ಮಗಳು. ಆದ್ದರಿಂದ ನಿಮ್ಮ ತವರು ಮನೆಯ ಆಸ್ತಿಯಲ್ಲಿ ನನಗೆ ಸೇರಬೇಕು. ನಿಮ್ಮ ಚಿಕ್ಕಪ್ಪನ ಹತ್ತಿರ ಕೇಳು ಎಂದು ಹಿಂಸೆ ಕೊಡುತ್ತಿದ್ದ. ರಂಜೀತಾಗೆ ಇತ್ತ ಗಂಡನಿಂದ ಹಿಂಸೆ ಅತ್ತ ತನ್ನ ಚಿಕ್ಕಪ್ಪನಿಂದ ಹಿಂಸೆ ಮಧ್ಯೆ ಏನು ಮಾಡಬೇಕೆಂದು ತೋಚದೆ ಮಾನಸಿಕವಾಗಿ ದಿನೇ ದಿನೇ ಕೊರಗುತ್ತಿದ್ದಳು. ರಂಜೀತಾಗೆ ಒಂದು ದಿನ ತನ್ನ ತವರು ಮನಗೆ ಅಜ್ಜಿನ್ನು ನೋಡಲು ಬಂದಾಗ ಅವಳ ಚಿಕ್ಕಪ್ಪ ಜಗಳ ಮಾಡಿ ಇಲ್ಲಿಗೆ ಯಾಕೆ ಬಂದೆ ಇಲ್ಲಿ ನಿನಗೆ ಯಾರು ಇಲ್ಲ. ಇನ್ನು ಮುಂದೆ ನಮ್ಮ ಮನಗೆ ಬರಬೇಡ ಎಂದು ಹೇಳಿದ. ರಂಜೀತಾಳಿಗೆ ಆಕಾಶವೇ ತಲೆಯ ಮೇಲೆ ಬಿದ್ದಂತಾಯಿತು. ಅಳುತ್ತ ತನ್ನ ಸಮಸ್ಯೆಯನ್ನು ಯಾರ ಹತ್ತಿರ ಹೇಳಿಕೊಳ್ಳುಬೇಕೆಂದು ಚಿಂತೆ ಮಾಡುತ್ತಿದ್ದಳು. ಒಮ್ಮೆ ರಂಜೀತಾ

ತನ್ನ ತಾಯಿಯ ತವರಾದ ಕೊರವಾರ ಗ್ರಾಮಕ್ಕೆ ನಾಗರ ಪಂಚಮಿ ಹಬ್ಬಕ್ಕೆ ಎಂದು ಬಂದಾಗ ತನ್ನ ಸಮಸ್ಯೆಯನ್ನು ತಾಯಿಯ ಸೋದರರಿಗೆ ಹೇಳಿದಳು. ಆಗ ಅದೇ ಗ್ರಾಮದಲ್ಲಿ ಸಂಘದ ಸದಸ್ಯರಾದ ಜಗದೇವಿ ಇಂತಹ ಕೌಟುಂಬಿಕ ಸಮಸ್ಯೆಯನ್ನು ಬಗೆಹರಿಸಿದ್ದು ಕೇಳಿ ಆಕೆ ಹತ್ತಿರ ರಂಜೀತಳನ್ನು ಕರೆದುಕೊಂಡು ಹೋದರು.

ಜಗದೇವಿ ಅವರ ಹತ್ತಿರ ತನ್ನ ಎಲ್ಲಾ ನೋವುಗಳನ್ನು ಹೇಳಿಕೊಂಡು ನಾನು ಬದುಕಿರಲೆಬಾರದು ಗಂಡನಿಂದಲೂ ನೆಮ್ಮದಿ ಇಲ್ಲ. ನಮ್ಮ ತಂದೆಯ ಆಸ್ತಿ ಚಿಕ್ಕಪ್ಪ ಕೊಡುವ ಸೂಚನೆಯೂ ಇಲ್ಲ ಎಂದು ಗೋಳಾಡಿದಳು. ಜಗದೇವಿ ರಂಜೀತಾಳ ಸಮಸ್ಯೆಯನ್ನು ಕೇಳಿ ಮಾರನೇ ದಿನವೇ ನಾರಿ ಅದಾಲಿತಗೆ ಕರೆದುಕೊಂಡು ಬಂದು ಕೇಸ್ ದಾಖಲಿಸಿದ ನಂತರ ನಾರಿ ಅದಾಲತ್ ಸದಸ್ಯರು ಈ ಕೇಸ್ ಬಗ್ಗೆ ಚರ್ಚಿಸಿ ನ್ಯಾಯವಾಗಿ ತವರು ಮನೆಯ ಆಸ್ತಿ ಸಿಗಬೇಕಾಗಿದ್ದು, ರಂಜೀತಾಗೆ ಹೌದು ಅದನ್ನು ಕೊಡಿಸೋಣ ಆದ್ರೆ ಹಾಗೆ ಆಕೆಯ ಗಂಡನಿಗೂ ಸಹ ಸ್ವಲ್ಪ ಬುದ್ಧಿ ಕಲಿಸಬೇಕೆಂದು ಯೋಚಿಸಿ ಮೊದಲು ಕೊರವಾರ ಗ್ರಾಮಕ್ಕೆ ಭೇಟಿಮಾಡಿ ಸೈದಪ್ಪನ ಬಗ್ಗೆ ವಿಚಾರಿಸೋಣ ನಂತರ ಆಕೆ ಗಂಡನ ಹತ್ತಿರ ಮಾತಾಡೋಣ ಎಂದು ತೀರ್ಮಾನಿಸಿದರು.

ನಾರಿ ಅದಾಲತ್ ಸದಸ್ಯರಲ್ಲಿ 4–ಜನರನ್ನು ಬೆಣ್ಣೂರು ಗ್ರಾಮಕ್ಕೆ ಕಳುಹಿಸಿ ಮೊದಲು ಉಪಾಯವಾಗಿ ಸೈದಪ್ಪನ ಹತ್ತಿರ ಮಾತನಾಡಿ ನೀನು, ನಿನ್ನ ಅಣ್ಣ ಅಂಗವಿಕಲನಾದರೂ ಸರಿ ಅವನ ಮಗಳ ಮದುವೆ ಜವಾಬ್ದಾರಿ ವಹಿಸಿಕೊಂಡು ಚೆನ್ನಾಗಿ ಮಾಡಿದ್ದೀರಿ ಎಂದು ಹೇಳಿ ಅವನ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ನಂತರ ಅವಳಿಗೆ ಸೇರಬೇಕಾಗಿದ್ದ ಆಸ್ತಿ ಬಗ್ಗೆ ಮಾತನಾಡಿ ಆಗ ಸೈದಪ್ಪನಿಗೆ ಗೊತ್ತಾಯಿತು. ನನ್ನಿಂದ ರಂಜೀತಗೆ ಆಸ್ತಿ ಕೊಡುವ ಯೋಚನೆ ಇವರಲ್ಲಿ ಇದೆ ಎಂದು ತಿಳಿದು ಘುಷಾರಾದ ಸೈದಪ್ಪ ನಾರಿ ಅದಾಲತ ಸದಸ್ಯರಿಗೆ ಬೇದರಿಕೆ ಮಾತಗಳನ್ನು ಆಡಿದ.

ಅಷ್ಟೇಕ್ಕೆ ಬೀಡದೆ ನಮ್ಮ ನಾರಿ ಅದಾಲತ್ ಸದಸ್ಯರು ಒಂದು ತಿಂಗಳ ನಂತರ ಅದೇ ಗ್ರಾಮಕ್ಕೆ ಭೇಟಿಮಾಡಿ ಗ್ರಾಮದ ಮುಖಂಡರನ್ನು ಒಂದೆಡೆ ಸೇರಿಸಿ ರಂಜೀತಾಗೆ ಸೀಗಬೇಕಾದ ತವರು ಮನೆಯ ಆಸ್ತಿ 12 ಎಕರೆ ಜಮೀನಿನಲ್ಲಿ ಆಕೆಯೇ ಬಿತ್ತನೇ ಮಾಡಬೇಕು ಜಮೀನಿನ ಹತ್ತಿರ ಸೈದಪ್ಪ ಬರುವ ಹಾಗಿಲ್ಲ ಎಂದು ತೀರ್ಮಾನಿಸಿ ಪತ್ರ ಬರೆದು ಅಲ್ಲಿ ಸೇರಿದ ಎಲ್ಲಾ ಮುಖಂಡರ ಸಹಿ ಹಾಕಿಸಿ ಒಂದು ಪ್ರತಿಯನ್ನು ರಂಜೀತಾಗೆ ಪ್ರತಿಯನ್ನು ಇನ್ನೊಂದು ಪ್ರತಿಯನ್ನು ನಾರಿ ಅದಾಲತಿಗೆ ತೆಗೆದುಕೊಂಡು ಬಂದಿರುತ್ತಾರೆ.

ಇಷ್ಟಕ್ಕೆ ಸುಮ್ಮನಿರದ ನಾರಿ ಅದಾಲತ್ ಸದಸ್ಯರು ರಂಜೀತಾಳ ಗಂಡನ ಜೊತೆಗೆ ಮಾತನಾಡಿ ಇನ್ನೊ ಮುಂದೆ ಆಸ್ತಿಯ ವಿಷಯವಾಗಿ ಆಕೆಗೆ ಏನು ಹಿಂಸೆ ಕೊಡಬಾರದು

ಹಿಂಸೆಕೊಟ್ಟಿಲ್ಲ 12 ಎಕರೆ ಜಮೀನನ್ನು ಕಳೆದುಕೊಳ್ಳಬೇಕಾಗುತ್ತದೆಂದು ಬೇದರಿಕೆ ಹಾಕಿ ಬಂದರು. ಸಮಸ್ಯೆ ಬಗೆಹರಿದ 3 ತಿಂಗಳ ಮೇಲೆ ರಂಜೀತಾ ಹಾಗೂ ಆಕೆಯ ಗಂಡ ನಾರಿ ಅದಾಲತ್ ಸಭಗೆ ಬಂದು ನಮಗೆ ನಮ್ಮ ಜಮೀನಿನಲ್ಲಿ ಬಿತ್ತನೆ ಮಾಡಲು ಭಯವಾಗುತ್ತದೆ. ಸೈದಪ್ಪನಿಂದ ಮತ್ತೆ ತೊಂದರೆಯಾಗಬಹುದು. ನೀವೇ ನಿಂತು ಬಿತ್ತನೆ ಮಾಡಿಸಿದ್ದಲ್ಲಿ ನಮಗೂ ಉಪಕಾರವಾಗುತ್ತದೆ ಎಂದು ಕೇಳಿಕೊಂಡರು. ನಂತರ ನಾರಿ ಅದಾಲತ್ ಸದಸ್ಯರು ನಾಲ್ಕು ಮಂದಿ ಬೆಣ್ಣೂರು ಗ್ರಾಮದಲ್ಲಿ ರಂಜೀತಾಳ ಮನೆಯಲ್ಲಿ ನಾಲ್ಕು ದಿನ ಇದ್ದು, ಜಮೀನಿನ ಬಿತ್ತನೇ ಮಾಡಿಸಿ ಬಂದಿರುತ್ತಾರೆ. ರಂಜೀತಾ ಹಾಗೂ ಆಕೆ ಗಂಡ ಪ್ರೇಮಕುಮಾರ ಆಸ್ತಿ ಪಡೆಯಬೇಕು ಅಂದ್ರೆ ನಮಗೆ ಪೋಲಿಸ್ ಠಾಣೆ, ಕೋರ್ಟ ಅಂದಿದ್ರೆ ಅರ್ಧ ಆಸ್ತಿನೇ ಕಳಕೊಳಬೇಕಾಗಿತ್ತು. ಆದರೆ ನಾರಿ ಅದಾಲತ್ ಇರುವುದರಿಂದ ನಮ್ಮಂಥ ಬಡವರು ಬದುಕುವುದಕ್ಕೆ ಆಯಿತು ಎಂದು ಸಂತೋಷ ವ್ಯಕ್ತಪಡಿಸುತ್ತಾರೆ.

1.3. ಪಂಚಾಯ್ತಿ ಸೌಲಭ್ಯ ಪಡೆದುಕೊಂಡಿದ್ದು:

ಗ್ರಾಮ: ಮಹಾಗಾಂವ, ಸಂಘ: ಸಂಗೀತಾ ಸ್ವ-ಸಹಾಯ ಸಂಘ

ತಾಲ್ಲೂಕಾ/ಜಿಲ್ಲಾ : ಗುಲಬರ್ಗಾ

ಮಹಾಗಾಂವ ಗುಲಬರ್ಗಾ ತಾಲೂಕಿನ ಒಂದು ದೊಡ್ಡ ಗ್ರಾಮ. ಗುಲಬರ್ಗಾದಿಂದ ಬೀದರಿಗೆ ಹೋಗುವ ಮುಖ್ಯ ರಸ್ತೆಯಲ್ಲಿ ಬರುವ ಈ ಹಳ್ಳಿಯಲ್ಲಿ ಎಲ್ಲಿ ನೋಡಿದರೆ ಅಲ್ಲಿ ರಾಜಕೀಯ ತಾಂಡವವಾಡುತ್ತಿದೆ. ಸರ್ಕಾರದಿಂದ ಬರುವ ಸೌಲಭ್ಯಗಳು ಹೆಸರಿಗೆ ಮಾತ್ರ ಬಡವರದಾಗಿರುತ್ತದೆ. ಮಾಹಿತಿ ಇರುವವರಿಗೆ ಮಾತ್ರ ಸೌಲಭ್ಯ ಸಿಗುತ್ತದೆ. ಏನು ತಿಳಿದಯದವರಿಗೆ ಸಿಗುತ್ತಿರುವ ಸೌಲಭ್ಯ ದಿಂದಲೂ ವಂಚಿತರನ್ನಾಗಿ ಮಾಡುತ್ತದೆ. ಅಲ್ಲಿನ ಗ್ರಾಮದ ರಾಜಕೀಯ ವ್ಯಕ್ತಿಗಳು ಸಂಘದ ಮಹಿಳೆ ಯರಾದ ರಾಣಮ್ಮ ಮತ್ತು ಶರಣಮ್ಮ ಅವರು ಸುಮಾರು 15-ವರ್ಷದಿಂದ ವಿಧವಾ ವೇತನ ಪಡೆಯುತ್ತಿದ್ದರು. ಸಂಘ ಸೇರಿದ ಮೇಲೆ ಪಂಚಾಯ್ತಿ ಭೇಟಿ ಮಾಡುವ ಅಲ್ಲಿನ ಸೌಲಭ್ಯಗಳ ಬಗ್ಗೆ ಚರ್ಚೆ ಮಾಡುವುದು ಫಲಾನುಭವಿಗಳ ಆಯ್ಕೆಯಲ್ಲಿ ತಾವು ಭಾಗವಹಿಸಬೇಕೆಂದು ಅಪೇಕ್ಷೆ ಪಡುವುದು ನಿರಂತರವಾಗಿ ನಡೆಯುತ್ತಿತ್ತು. ಇದನ್ನು ಗಮನಿಸಿದ ಪಂಚಾಯ್ತಿ ಸದಸ್ಯರಲ್ಲಿ ಕೆಲವರು ರಾಣಮ್ಮ ಮತ್ತು ಶರಣಮ್ಮ ಅವರಿಗೆ ಸಿಗುತ್ತಿದ್ದ ವಿಧವಾ ವೇತನವನ್ನು ತಾಲೂಕಿನ ಕಛೇರಿಗೆ ಗುಪ್ತವಾಗಿ ಅರ್ಜಿ ಕೊಟ್ಟು 7-ತಿಂಗಳಿಂದ ಬರದಂತೆ ಮಾಡಿದ್ದಾರೆ. ರಾಣಮ್ಮ, ಶರಣಮ್ಮ ಅವರಿಗೆ 7-ತಿಂಗಳಿಂದ ವಿಧವಾ ವೇತನ ಬರದೇ ಇರುವುದರಿಂದ ಮಹಿಳಾ ಸಮಾಖ್ಯಾ ಕಾರ್ಯಕ್ರಮದಲ್ಲಿ ತಮ್ಮ ಸಮಸ್ಯೆಯನ್ನು ಹಂಚಿಕೊಂಡರು.

ಕಮೀಟಿ ಸಭೆಗೆ ಭಾಗವಹಿಸಿದ ಬೇರೆ ಗ್ರಾಮದ ಮಹಿಳೆಯರು ಇದಕ್ಕೆ ಏನಾದರೂ

ಪರಿಹಾರ ಕಂಡು ಹಿಡಿಯಬೇಕೆಂದು ಯೋಚಿಸಿ ಮಹಿಳಾ ಸಮಾಖ್ಯಾ ಸಿಬ್ಬಂದಿ ಸಹಕಾರ ಪಡೆದು ತಹಸೀಲ್ದಾರ ಕಛೇರಿಗೆ ಭೇಟಿ ನೀಡಿ ಅವರ ಜೊತೆ ಮಾತನಾಡಿ ಸುಮಾರು 7-ಹಳ್ಳಿಗಳಲ್ಲಿ ಈ ಸಮಸ್ಯೆ ಎದುರಿಸುತ್ತಿದ್ದವರ ಹೆಸರನ್ನು ನೊಂದಾಯಿಸಿ ಅರ್ಜಿ ಕೊಟ್ಟು ಬಂದರು. ಕಮೀಟಿ ಸಭೆಗೆ ಭಾಗವಹಿಸಿದಾಗಲೆಲ್ಲ ತಹಸೀಲ್ದಾರರು ಭೇಟಿ ಮಾಡುತ್ತಿದ್ದರು. ನಿರಂತರ ಅನುಸರಣೆಯಿಂದ ಈಗ ಅರ್ಜಿ ಹಾಕಿದ 45 ಮಹಿಳೆಯರಿಗೂ ವಿಧವಾ ವೇತನ, ವೃದ್ಧಾಪ್ಯ ವೇತನ ಬರುತ್ತಿದೆ. ಕಮೀಟಿಯ ಸಭೆಯಲ್ಲಿ ಅವರು ಏನೇ ಮಾಡಿದರು ಒಗ್ಗಟ್ಟಿನಿಂದ ಮಾಡಬೇಕು ಎಂದು ಸಂತೋಷದಿಂದ ಹೇಳುತ್ತಾರೆ.

1.4. ಗಂಡು ಮಗುವಿಗೆ ಹೆಚ್ಚಿನ ಆದ್ಯತೆ (ಮಾದರಿ ಪ್ರಕರಣ):

ನಮ್ಮ ಸಮಾಜವು ಪುರಷ ಪ್ರಧಾನ ವ್ಯವಸ್ಥೆಯಿಂದ ಕೂಡಿದೆ. ಗಂಡು ಮಗುವಿಗೆ ಅದ್ಯತೆ ನೀಡುತ್ತದೆ ಪ್ರತಿ ಕುಟುಂಬದಲ್ಲಿ ಗಂಡು ಮಗು ಬೇಕೆಂಬ ಹಂಬಲವಿದೆ. ಕಾರಣ ಗಂಡು ಮಗು ತಮ್ಮ ಮನೆಯ ಬೆಳಕು, ತಾಯಿ-ತಂದೆಗೆ ಮೋಕ್ಷ ಸಿಗುತ್ತದೆ, ಕೊನೆಗಾಲದಲ್ಲಿ ತಮಗೆ ಆಧಾರ ಸ್ತಂಭವಾಗಿ ನಿಲ್ಲುತ್ತಾನೆ ಎಂಬ ಪೊಳ್ಳುನಂಬಿಕೆಗಳಿವೆ. ಈ ನಂಬಿಕೆಗೆ ಯಾವುದೇ ರೀತಿಯ ಆಧಾರಗಳಿಲ್ಲ.

ಮಗು ಹೆಣ್ಣು ಅಥವಾ ಗಂಡು ಎಂದು ನಿರ್ಧಾರವಾಗುವುದು ತಂದೆಯ ವಿರ್ಯದಲ್ಲಿರುವ ಜೀವತಂತುಗಳ ಆಧಾರದ ಮೇಲೆ ಈ ಲಿಂಗ ನಿರ್ಧಾರದ ಪ್ರಕ್ರಿಯ ಹೆಣ್ಣು ಅಥವಾ ಗಂಡಿನ ಹತೋಟಿಯಲ್ಲಿ ಇಲ್ಲ ಅದು ಹೇಗಿದ್ದರೂ ನೈಸರ್ಗಿಕ. ಆದರೆ ಗ್ರಾಮೀಣ ಪ್ರದೇಶದಲ್ಲಿ ದಂಪತಿಗಳಿಗೆ ಸತತವಾಗಿ ಹೆಣ್ಣು ಮಗು ಜನಿಸಿದರೆ ಅದಕ್ಕೆ ತಾಯಿಯನ್ನೇ ಹೊಣೆಯಾಗಿಸುತ್ತಾರೆ. ಇಲ್ಲಿ ನಾವು ಅರ್ಥ ಮಾಡಿಕೊಳ್ಳುವುದೇನೆಂದರೆ ಹೆಣ್ಣಿಗೆ ಪರೋಕ್ಷವಾಗಿ ಆಗಲೀ ಮಗುವಿನ ಲಿಂಗ ನಿರ್ಧಾರದ ಮೇಲೆ ಹತೋಟಿ ಇರುವುದಿಲ್ಲ.

ರಾಧಾಬಾಯಿ ಸಂಘದ ಮಹಿಳೆ ಬೀದರ ಜಿಲ್ಲೆಯ ಬೆಡಕುಂದ ಎಂಬ ಹಳ್ಳಿಯಲ್ಲಿ ವಾಸಿಸುತ್ತಾಳೆ. ಕೆಳ ವರ್ಗದ ಕೆಳಜಾತಿಯ, ಬಡ ಕುಟುಂಬದ ಮಹಿಳೆಯಿವಳು ಅವಳಿಗೆ ಈಗಾಗಲೇ 5 ಜನ ಹೆಣ್ಣು ಮಕ್ಕಳು ಇದ್ದಾರೆ ಮತ್ತು 6 ನೇ ಸಲ ಗಭೀಣಿಯಾಗಿದ್ದಾಳೆ, ಅವಳಿಗೆ ಈ ಸಲ ಏನು ಹುಟ್ಟಿತ್ತದೆ ಏನ್ನುವುದು ಹಗಲಿರುಳು ಚಿಂತೆ. ಈಕೆ ಗಂಡು ಮಗುವಿಗೆ ಜನ್ಮ ಕೊಡುತ್ತಿಲ್ಲವೆಂದು ಗಂಡ, ಅತ್ತೆ, ಮಾವ, ನಾದನಿಯರು ಬೈಯುವುದು ಹೊಡೆಯುವುದು ರಾಧಾಬಾಯಿಗೆ ಮಾನಸಿಕ ಹಿಂಸೆಯಾಗುತ್ತಿತ್ತು. ಪದೇ ಪದೇ ಅವಳನ್ನು ತವರಿಗೆ ಕಳುಹಿಸುವುದು ತವರು ಮನೆಯವರು ಬಂದು ಬುದ್ಧಿ-ವಾದ ಹೇಳಿ ಗಂಡನ ಮನೆಗೆ ಮಗಳನ್ನು ಕಳುಹಿಸಿ

ಹೋಗುವುದು ಸರ್ವೆಸಾಮಾನ್ಯವಾಗಿತ್ತು. ಹಾಗೇ ಅವಳ ಗಂಡನಿಗೆ ಇನ್ನೊಂದು ಮದುವೆ ಮಾಡುತ್ತೇನೆ ಎಂದು ಹೇಳುತ್ತಿದ್ದಳು. ಪ್ರತಿಸಲ ಅವಳನ್ನು ತವರು ಮನೆಗೆ ಕಳುಹಿಸಿದಾಗ ಹಳ್ಳಿಯವರು ಪಂಚಾಯ್ತಿ ಮಾಡಿ ಪುನಃ ಅವಳನ್ನು ಗಂಡನ ಮನೆಗೆ ತಂದು ಬಿಡುತ್ತಿದ್ದರು.

ರಾಧಾಬಾಯಿಯ ಗೃಹಚಾರಕ್ಕೆ ಅವಳಿಗೆ 6 ನೇ ಸಲವೂ ಹೆಣ್ಣು ಮಗುವೆ ಆಯಿತು. ಅವಳ ಗಂಡ ಅವಳನ್ನು ಬಿಟ್ಟು ಇನ್ನೊಂದು ಮದುವೆ ಮಾಡಿಕೊಂಡನು ತನ್ನ 6 ಜನ ಮಕ್ಕಳನ್ನು ಸಾಕುವ ಜವಾಬ್ದಾರಿ ರಾಧಾಬಾಯಿಯ ಮೇಲೆ ಬಿತ್ತು. ತೋಟದಲ್ಲಿ ಮಾವಿನ ಬೀಜ ಬಿತ್ತಿ ತೆಂಗಿನ ಮರಬೇಕು ಎಂದ ಹಾಗಾಯಿತು ಪರಿಸ್ಥಿತಿ. ಲಿಂಗ ಗುರುತಿಸುವಿಕೆಯ ಬಗ್ಗೆ ಜಾಗೃತಿಯ ಕೊರತೆಯಿದೆ ಇದೊಂದು ಋಣಾತ್ಮಕ ಮಾದರಿ ಪ್ರಕರಣವಾಗಿದೆ. ಈ ಸಂದರ್ಭದಲ್ಲಿ ರಾಧಾಬಾಯಿಯ ತಾಯಿ–ತಂದೆಯವರು ಸಂಘದವರ ಅಸಹಾಯಕ ಪರಿಸ್ಥಿತಿಯನ್ನು ಕಾಣುತ್ತೇವೆ. ನಂತರ ರಾಧಾಬಾಯಿ ರಾತ್ರಿ ಶಾಲೆಯ ಶಿಕ್ಷಿಕಿಯಾಗಿ ಸಂಘದ ಮಹಿಳೆಯಾಗಿ ತನ್ನ ಮಕ್ಕಳೊಂದಿಗೆ ಜೀವನ ಸಾಗಿಸುತ್ತಿದ್ದಾಳೆ. ಆದರೆ ಇದು ಒಬ್ಬ ರಾಧಾಬಾಯಿಯ ಜೀವನದ ಪ್ರಶ್ನೆಯಲ, ಸಾವಿರಾರು ಮಹಿಳೆಯರು ಇಂಥ ಒಂದು ತನ್ನದಲ್ಲದ ತಪ್ಪಿಗೆ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ.

1.5. ಆರ್ಥಿಕತೆಗೆ ಸಂಬಂಧಿಸಿದ ಮಾದರಿ ಪ್ರಕರಣ:

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಮೈಸಲಗಾ ಗ್ರಾಮದಲ್ಲಿ ಭೀಮಬಾಯಿ ಮಹಿಳಾ ಸಮಾಖ್ಯ ಸಂಘವಿದೆ. ಸಂಘದಲ್ಲಿ ಒಟ್ಟು 20 ಜನ ಮಹಿಳೆಯರು ಸದಸ್ಯರಿದ್ದಾರೆ. ಅವರಲ್ಲಿಯೆ ಶಾಂತಾಬಾಯಿಯು ಒಬ್ಬಳು. ಅವಳು ಸಂಘ ಸೇರಿ 13 ವರ್ಷಗಳಾಯಿತು ಅವಳಿಗೆ ಗಂಡ ಮತ್ತು 4 ಜನ ಮಕ್ಕಳಿದ್ದಾರೆ. ಆಕೆಯ ಗಂಡ ಮತ್ತು ಹಿರಿಯ ಮಗ ಬೊಂಬಾಯಿಗೆ ದುಡಿಯಾಲಿಕ್ಕೆ ಹೋಗಿದ್ದರು. ಈಕೆಯ ಕುಟುಂಬ ಬಡತನದ ಪರಿಸ್ಥಿತಿಯಿಂದ ಕೂಡಿತು. ಈ ಸಂದರ್ಭದಲ್ಲಿ ಅವಳು ಸಂಘ ಸೇರಿದಳು. ಸಂಘದ ಕಾರ್ಯಚಟುವಟಿಕೆಗಳನ್ನು ಶ್ರದ್ಧೆಯಿಂದ ಮಾಡತೊಡಗಿದಳು.

ಉಳಿತಾಯದ ಹಣದಲ್ಲಿ ಸಾಲ ಪಡೆದು ಬಟ್ಟೆ ಹೊಲಿಯುವ ಯಂತ್ರವನ್ನು ಖರೀದಿ ಮಾಡಿದಳು. ಈ ಹಿಂದೆಯ ಅವಳಿಗೆ ಟೈಲರಿಂಗ ಕೆಲಸ ಬರುತ್ತಿತ್ತು. ಯಂತ್ರ ಇದ್ದರೆ ಬಂದ್ರಿದೆ ಬಟ್ಟೆ ಹೊಲಿಯುತ್ತಿದ್ದ ನೋಡ್ರಿ ಮೇಡಂ ಎನ್ನುತ್ತಿದ್ದಳು. ಒಂದು ವರ್ಷದಲ್ಲಿಯೇ ತೆಗೆದುಕೊಂಡ ಸಾಲವನ್ನು ಮರು ಪಾವತಿ ಮಾಡಿದಳು. ತಮ್ಮ ಓಣಿಯಲ್ಲಿಯ ಬ್ಲಾವ್ಸ್, ಲಂಗ, ಖಾದಿ ಹಾಸಿಗಿ ಇತರೆ ಸಣ್ಣ ಪುಟ್ಟ ಹೋಲಿಗೆ ಕೆಲಸ ಶಾಂತಾಬಾಯಿ ಮನೆಗೆಲಸದೊಂದಿಗೆ ಚೆನ್ನಾಗಿಯೇ ಮಾಡತೊಡಗಿದಳು. ಹೋಲಿಗೆ ಯಂತ್ರ ಪಡೆದ ಒಂದು ವರ್ಷದದಲ್ಲಿಯೇ ತೆಗೆದುಕೊಂಡ

ಸಾಲವನ್ನು ಮರುಪಾವತಿ ಮಾಡಿದಳು ನಂತರ ಪ್ರತಿ ತಿಂಗಳಿಗೆ ರೂ.1000/– ರೂಪಾಯಿಯಂತೆ ಹೊಲಿಗೆಯಿಂದ ಲಾಭ ಗಳಿಸತೊಡಗಿದಳು.

ಹಾಗೆಯೇ ಎಸ್.ಜಿ.ಎಸ್.ವಾಯ್. ಯೋಜನೆಯಲ್ಲಿ ಇವರ ಸಂಘ ಆಯ್ಕೆಯಾಯಿತು. ಎಸ್.ಜೆ.ಎಸ್.ವಾಯ್ ಸಾಲದಲ್ಲಿ ಇವಳು 25,000/– ರೂ ಸಾಲ ಪಡೆದು ಅದಕ್ಕೆ ತಾನು ಉಳಿಸಿದ ಅಲ್ಪಸ್ವಲ್ಪ ಹಣ ಇದಕ್ಕೆ ಸೇರಿಸಿ ತನ್ನಗಿದ್ದ ಎರಡು ಎಕರೆ ಹೊಲಕ್ಕೆ ಬೋರವೆಲ್ ಹಾಕಿಸಿಕೊಂಡು ಪೈಪಲೈನ್ ಮಾಡಿಸಿ ಹೊಲದಲ್ಲಿ ತರಕಾರಿ ಬೆಳೆದು ವ್ಯಾಪಾರ ಮಾಡುತ್ತಿದ್ದಾಳೆ.

ಒಟ್ಟಿನಲ್ಲಿ ಆ ಓಣಿಯ ಜನರಿಗೆ ಬಟ್ಟೆ ಹೊಲಿಸುವ ಚಿಂತೆಯಿಲ್ಲ. ಶಾಂತಾಬಾಯಿ ಮನೆಯ ಸಮೀಪದಲ್ಲಿಯೇ ಹೊಲ ಇದೆ, ಶಾಂತಾಬಾಯಿ ನಿಗದಿತ ಬೆಲೆಯಲ್ಲಿ ತರಕಾರಿ ಕೊಡುತ್ತಾಳೆ ಹೀಗಾಗಿ ಶಾಂತಾಬಾಯಿ ಎಂದರೆ ಸಂಘದ ಮಹಿಳೆಯರಿಗೆ ಪ್ರೀತಿ, ನಮ್ಮ ಲೀಡರ್ ಎನ್ನುತ್ತಾರೆ. ಕೇವಲ ನಾಲ್ಕನೇ ತರಗತಿಯವರೆಗೆ ಓದಿದ ಶಾಂತಾಬಾಯಿ ಒಪ್ಪತ್ತಿನ ಗಂಜಿಗೂ ಗತಿಯಲ್ಲಿದಂತಹ ಪರಿಸ್ಥಿತಿಯಲ್ಲಿ ಸಂಘದಲ್ಲಿ ಸೇರಿ ತನ್ನ ದುಡಿಮೆ ಮತ್ತು ಬುದ್ಧಿವಂತಿಕೆಯಿಂದ ತನ್ನ ಕುಟುಂಬಕ್ಕೆ ಆಸರೆಯಾಗಿ ನಿಂತಿದ್ದಾಳೆ.

ಒಂದು ವೇಳೆ ಸಂಘದಲ್ಲಿ ಸೇರದೆ, ಸಂಘದ ಸಹಾಯ ಪಡೆದುಕೊಳ್ಳದೇ ಇದ್ದರೆ, ನಾವು ಮನೆ ಮಂದಿಯಲ್ಲ ಬೊಂಬಾಯಿಗೆ ದುಡಿಯಲ್ಲಿಕ್ಕೆ ಹೋಗಬೇಕೆಂಬ ನಿರ್ಧಾರದಲ್ಲಿದ್ದೇವು ಎನ್ನುತ್ತಾಳೆ.

ಸಂಘದಿಂದ ತನ್ನ ಬದುಕಿಗೆ ಒಂದು ಹೊಸ ತಿರುವನ್ನು ಪಡೆದುಕೊಂಡಿದ್ದಾಳೆ. ಅದಕೋಸ್ಕರವಾಗಿ ಸಂಘಕ್ಕೆ ಯಾವಾಗಲೂ ಋಣಿಯಾಗಿದ್ದೇನೆ "ಸಂಘದಿಂದ ನಮ್ಮ ಜೀವನದಾಗ ಬೆಳಕು ಬಂದಾದ್ರಿ" ಎಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತಾಳೆ.

ಇತರ ಮಹಿಳೆಯರಿಗೆ ಸಮಯ ಅವಕಾಶದೊಂದಿಗೆ ಹಣಕಾಸಿನ ಸಹಾಯ ದೊರೆತರೆ ಅದರ ಸದುಪಯೋಗ ಪಡೆದು ನನ್ನ ಹಾಗೆ ಎಲ್ಲರೂ ಸ್ವಯಂ ಉದ್ಯೋಗ ಮಾಡಿಕೊಂಡು ಮುಂದೆಬನ್ನಿರಿ ಎನ್ನುತ್ತಾಳೆ.

ತಿಂಗಳಿಗೆ ಮನೆಯ ಖರ್ಚುಗಳೆಲ್ಲವು ಹೋಗಿ 2000/– ರೂ ಆದಾಯವಿದೆ. ನನ್ನ ಹೊಲದಲ್ಲಿ ನಾನು ಮಾಲಿಕಳಾಗಿಯೇ ಕೆಲಸ ಕಾರ್ಯಗಳನ್ನು ಮಾಡುತ್ತೇನೆ. ಇನ್ನೊಬ್ಬರ ಹೊಲಕ್ಕೆ ಬಿಸಿಲಲ್ಲ ಕೂಲಿ ಕೆಲಸಕ್ಕೆ ಹೋಗುವುದಕ್ಕಿಂತ ಇದು ಎಷ್ಟೋ ವಾಸಿ ನನಗೆ ಕುಟುಂಬದಲ್ಲಿ, ಸಂಘದಲ್ಲಿ, ಸಮಾಜದಲ್ಲಿ ಗೌರವ ಇದರಿಂದ ಹೆಚ್ಚಿದೆ ಎನ್ನುತ್ತಾಳೆ.

ಒಟ್ಟಾರೆಯಾಗಿ ಹೇಳುವುದಾದರೆ, ಮೊದಲಿನ ಬದುಕಿನೊಂದಿಗೆ ಈಗಿನ ಬದುಕನ್ನು ಹೋಲಿಸಿದರೆ ನಾನೀಗ ಸಂತೋಷವಾಗಿದ್ದೇನೆ. ಜೀವನಾವಶ್ಯಕ ವಸ್ತುಗಳಿಗೆ ಕೊರತೆಯಿಲ್ಲ. ಕೈಯಲ್ಲಿ

ಹಣಕಾಸಿನ ತೊಂದರೆಯಿಲ್ಲ ಮಕ್ಕಳಿಗೆ ಒಳ್ಳೆಯ ರೀತಿಯ ಶಿಕ್ಷಣ ಕೊಡಿಸುತ್ತಿದ್ದೇನೆ ನನ್ನ ಬದುಕು ಬಂಗಾರವಾಗಿದೆ ಎನ್ನುತ್ತಾಳೆ ಶಾಂತಾಬಾಯಿ.

1.6. ಋಣಾತ್ಮಕ ಮಾದರಿಗಳ ಪ್ರಕರಣ:

ಗುಲಬರ್ಗಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಸಂಘದ 20 ಜನ ಮಹಿಳೆಯರಿಗೆ ದ್ವಾಕ್ರಾ ಸಾಲ ಬಂದಿತ್ತು. ಎಲ್ಲ ಮಹಿಳೆಯರಿಗೂ 100 ರೂಪಾಯಿಗೆ ಒಂದರಂತೆ 20 ಕೋಳಿಗಳನ್ನು ಖರೀದಿಸಿ ಕೊಡಲಾಗಿತ್ತು. ಸಂತೋಷದಿಂದ ಮಹಿಳೆಯರು ತೆಗೆದುಕೊಂಡ ಒಂದೊಂದು ಕೋಳೆಗಳನ್ನೆ ಸರಿಯಾಗಿ ಸಾಕಿ ಸಲಹಿ 3–4 ವರ್ಷದಲ್ಲಿಯೇ ಪ್ರತಿಯೊಬ್ಬರಲ್ಲಿಯೋ 20 ರಿಂದ 30 ರಷ್ಟು ಕೋಳಿಗಳ ಸಂಖ್ಯೆ ಹೆಚ್ಚಾಗಿತು. ಕೋಳಿಗಳನ್ನು ಮಾರುವುದು ಮೊಟ್ಟೆಗಳನ್ನು ಮಾರುವುದು ಸಾಗಿತ್ತು. ದ್ವಾಕ್ರಾ ಯೋಜನೆಯ ಬಗ್ಗೆ ಯಾರಿಗೂ ಯಾವ ವಿಷಯವು ಗೊತ್ತಿರಲಿಲ್ಲ. ಒಂದು ಕೋಳಿ ಕೊಡಿಸಿದ ಖುಷಿಯಲ್ಲಿಯೇ ಮಹಿಳೆಯರಿದ್ದರು. ಈ ಸಂಘಕ್ಕೆ ಭೇಟಿ ಮಾಡಿದಾಗ ಯಾವ ಯಾವ ಯೋಜನೆಗಳನ್ನು ಪಡೆದುಕೊಂಡಿದ್ದೀರಿ ಎಂದು ಕೇಳಿದಾಗ ಕೋಳಿಯ ಕಥೆ ಬಹುಸ್ವಾರಸ್ಯವಾಗಿ ಹೇಳಿದರು. ಆದರೆ ಇಲ್ಲಿ ನಿಜವಾಗಿಯೂ ನಡೆದಿರುವುದೇನು? ಈ ಸಂಘಕ್ಕೆ ದ್ವಾಕ್ರಾ ಯೋಜನೆಯಿಂದ ರೂ.25,000/– ಹಣ ಬಂದಿತ್ತು. ಪುರುಷ ಪ್ರಾಬಲ್ಯದಿಂದಾಗಿ ಯೋಜನೆಯ ಅಧಿಕಾರಿಗಳ ನಿರ್ಲಕ್ಷಿದಿಂದಾಗಿ ಯೋಜನೆಯ ಹಣ ಸೋರಿ ಹೋಗಿ ಮಹಿಳೆಯರಿಗೆ ಕೇವಲ 2000/– ರೂ. ಮಾತ್ರ ಸಿಕ್ಕಿತ್ತು. ಆದರೂ ಮಹಿಳೆಯರು ಸಿಕ್ಕ ಅವಕಾಶವನ್ನು ಬಹಳ ಕಾಳಜಿಯಿಂದ ಬಳಿಸಿಕೊಂಡಿದ್ದಾರೆ. ಒಂದು ವೇಳೆ ಪೂರ್ತಿ ಹಣ, ಮಹಿಳೆಯರ ಕೈಗೆ ಸಿಕ್ಕರೆ ಬಹುಶ ಇನ್ನೂ ಜವಾಬ್ದಾರಿಯಿಂದ ಆರ್ಥಿಕ ಚಟುವಟಿಕೆಗಳನ್ನು ಮಾಡಿಕೊಂಡು ತಮ್ಮ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುತ್ತಿದ್ದರೇನು. ಹೀಗಾಗಿ ಯೋಜನೆಗಳು ಮಹಿಳೆಯರ ಹೆಸರಿನಲ್ಲಿ ಬರುತ್ತೇವೆ. ಆದರೆ ಮಹಿಳೆಯರ ಹಿತಾಸಕ್ತಿಗೆ ವಿರುದ್ಧವಾಗಿವೆ. ವ್ಯವಸ್ಥೆಯು ಮಹಿಳೆಯ ಹೆಸರಿನಲ್ಲಿ ಬಂದಿರುವ ಸೌಲಭ್ಯವನ್ನು ದುರುಪಯೋಗ ಪಡಿಸಿಕೊಳ್ಳುತ್ತಿದೆ. ಹಿಂದೆ ಬಾವಿ ಮುಂದೆ ಕೆರೆ ಎನ್ನುವ ಪರಿಸ್ಥಿತಿಯಲ್ಲಿ ಮಹಿಳೆಯರಿದ್ದಾರೆ. ಈ ಒಂದು ಪ್ರಕರಣದಿಂದ ಯಾವುದೇ ಯೋಜನೆಯಿರಲಿ ಅದನ್ನು ಪಡೆಯುವ ಪೂರ್ವದಲ್ಲಿ ಫಲಾನುಭವಿ ಗಳಿಗೆ ಪರಿಣಾಮಕಾರಿಯಾದ ತರಬೇತಿ ನೀಡಬೇಕು ಎನಿಸುತ್ತದೆ. ಮಹಿಳೆಯರ ಮುಗ್ಧತೆಯನ್ನು ಈ ರೀತಿ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು ಹಾಗೂ ಸದುಪಯೋಗವಾಗುವಂತೆ ಪ್ರೋತ್ಸಾಹಿಸಬೇಕು.

1.7. ಗ್ರಾಮ ಪಂಚಾಯ್ತಿ ಅಧ್ಯಕ್ಷಳಾದರೂ ಅವಳಿಗೆ ಅಧಿಕಾರ ಚಲಾಯಿಸಲಿಕ್ಕೆ ಬಿಡಲಿಲ್ಲ:

ಬೀದರ ಜಿಲ್ಲೆಯ ಹಳ್ಳಿಯೊಂದರಲ್ಲಿ ಮಹಿಳೆಯರಿಗೆ ಇಗಾಗಲೇ ರಾಜಕೀಯದಲ್ಲಿ ನೀಡಿದ ಶೇ.33% ರಷ್ಟು ಮಿಸಲಾತಿಯಡಿಯಲ್ಲಿ ದಲಿತ ಮಹಿಳೆಯೊಬ್ಬರು ಗ್ರಾಮ ಪಂಚಾಯ್ತಿಯ ಅಧ್ಯಕ್ಷರಾಗಿದ್ದರು. ಈ ಹಿಂದೆ ಅವರು ಆ ಊರಿನ ಗೌಡನ ಮನೆಯಲ್ಲಿ ಸಗಣಿ ಎತ್ತುವ ಅಂಗಳ ಕಸ ಹೊಡಿಯುವ ಹೊಲದಲ್ಲಿ ಕೂಲಿ ಮಾಡುವ ಮುಂತಾದ ಕೆಲಸಗಳನ್ನು ಮಾಡುತ್ತಿದ್ದಳು. ಅದು ಅವಳ ಬಡತನದಿಂದಾಗಿ ಆದರೆ ಅಧ್ಯಕ್ಷಳಾದ ನಂತರ ಆಕೆ ಕೂಲಿ ಕೆಲಸ ಬಿಟ್ಟು ಪಂಚಾಯ್ತಿಗೆ ಬರಲಿಕ್ಕೆ ಪ್ರಾರಂಭಿಸಿದಳು. ಗೌಡನ ದಬ್ಬಾಳಿಕೆಯ ಮಾತುಗಳಿಗೆ ಹೆದರಿ ಆಕೆ ತನ್ನ ಕುರ್ಚಿ ಬಿಟ್ಟು ಇತರ ಸದಸ್ಯರಂತೆ ಬೇರೆ ಕುರ್ಚಿಯ ಮೇಲೆ ಕೂಡುತ್ತಿದ್ದಳು. ಗೌಡನ ಮಾತುಗಳನ್ನು ಅವನ ಭಾಷಯಲ್ಲಿಯೇ ಹೇಳೋಣ "ನೀ ಈ ಕುರ್ಚಿ ಮ್ಯಾಲ ಅದು ಹ್ಯಾಂಗ್ ಕೂಡ್ತಿ ನಮ್ಮ ಮನ್ಯಾಗ್ ಹೆಂಡಿ ತೆಗಿತಿದ್ದಿ ನಾವು ಕೊಟ್ಟ ಕೂಲಿಯಲ್ಲಿ ಜೀವನ ಸಾಗಿಸುತ್ತಿದ್ದಿ ಈಗ ನನ್ನ ಎದುರು ನೀನು ಕೂಡಂಗ್ ಇಲ್ಲ" ಸರ್ಕಾರ ಸುಮ್ಮನ ಶೇ. 33% ರಷ್ಟು ಹೆಣ್ಣು ಮಕ್ಕಳಿಗೆ ಮೀಸಲಾತಿ ಕೊಟ್ಟಾದಂತ ಹೆಸರಿಗಿ ನೀನಗ ಅಧ್ಯಕ್ಷ ಮಾಡಿದ್ದೇವೆ. ಹಾಂಗಂತ್ ನಿನಗೆ ಈ ಕುರ್ಚಿ ಮ್ಯಾಲ್ ಕೊಡಸಲಕ್ಕ ನನಗೇನ ತೆಲಿ ಕೆಟ್ಟಾದಂತ್ ತಿಳಿದುಕೊಂಡಿಯೇನು ಎಂದು ಗದರಿಸುತ್ತಿದ್ದ. ಗೌಡನ ಮಾತುಗಳಿಗೆ ಉಳಿದ ಸದಸ್ಯರುಗಳು ಸಹಕಾರ ನೀಡುತ್ತಿದ್ದರು. ಹೀಗೆ ಒಂದು ವರ್ಷದವರೆಗೆ ಸಮಯ ಕಳೆಯಿತು ವಿಷಯ ಬೂದಿ ಮುಚ್ಚಿದ ಕೆಂಡದಂತೆ ಹಂತ-ಹಂತವಾಗಿ ಒಬ್ಬರಿಂದ-ಇನ್ನೊಬ್ಬರಿಗೆ ಹೋಗಿ ಜಿಲ್ಲಾಡಳಿತದ ಅಧಿಕಾರಿ ವರ್ಗಕ್ಕೂ ಈ ವಿಷಯ ಗೊತ್ತಾಯಿತು. ಆಕಸ್ಮಿಕವಾಗಿ ಒಂದು ದಿನ ಅಧಿಕಾರಿ ವರ್ಗದವರೆಲ್ಲರೂ ಅಂದರೆ ಜಿಲ್ಲಾಧಿಕಾರಿಗಳು, ಪೋಲಿಸ್ ವರಿಷ್ಠಾಧಿಕಾರಿಗಳು, ತಾಲ್ಲೂಕಾ ಪಂಚಾಯತ್ ಕಾರ್ಯನಿರ್ವಹಕ ಅಧಿಕಾರಿಗಳು ಹಾಗೂ ಇನ್ನಿತರ ಮುಖಂಡರು ಯಾವ ಮುನ್ಸೂಚನೆ ಇಲ್ಲದೆ ಈ ಗ್ರಾಮಕ್ಕೆ ಭೇಟಿ ನೀಡಿದರು. (ಸ್ವತಂತ್ರ ಭಾರತದ ಗೃಹ ಮಂತ್ರಿಗಳಾದ ಸರ್ದಾರ ವಲ್ಲಭಾಯಿ ಪಟೇಲರು ಹೈದ್ರಾಬಾದ-ಕರ್ನಾಟಕದ ವಿಮೋಚನೆಗಾಗಿ ನಿಜಾಮನ ಹುಟ್ಟನ್ನು ಅಡಗಿಸಿದ ಹಾಗೆಯೇ) ಅಧಿಕಾರಿಗಳೆಲ್ಲರು ಗೌಡನ ದರ್ಪದ ಮಾತುಗಳಿಗೆ ಸ್ಪಂದಿಸಿ ಕಾಯ್ದೆ-ಕಾನೂನುಗಳ ಅರಿವು ಮೂಡಿಸಿ ಕುರ್ಚಿಯಿಂದ ಕೆಳಗೆ ಇಳಿಯುವಂತೆ ಆದೇಶಿಸಿದರು. ಅದಕ್ಕೆ ಗೌಡ ಕೂಡ ಒಲ್ಲದ ಮನಸ್ಸಿನಿಂದಲೇ ಅನಿವಾರ್ಯವಾಗಿ ಒಪ್ಪಿದ ನಂತರ ಪಂಚಾಯ್ತಿಯ ಅಧ್ಯಕ್ಷಳನ್ನು ಕುರ್ಚಿಯ ಮೇಲೆ ಕೂಡಿಸಿ ಸನ್ಮಾನ ಮಾಡಿದರು. ಒಂದುವರೆ ವರ್ಷ ತನಗೆ ತಿಳಿದಂತೆ ಹಾಗೂ ಪಂಚಾಯ್ತಿ ಕಾರ್ಯದರ್ಶಿಗಳ ಸಹಕಾರದೊಂದಿಗೆ ಅವಳು ಕಾರ್ಯನಿರ್ವಹಿಸಿದ್ದಳು. ವಳಿಗೆ ಪಂಚಾಯ್ತಿಯ ಉಳಿದ ಸದಸ್ಯರು ಬೇಡದ ಮನಸ್ಸಿನಿಂದಲೇ ಸಹಕರಿಸಿದರು.

ಈ ಪ್ರಕ್ರಿಯೆಯನ್ನು ನೋಡಿದಾಗ ನಮ್ಮ ಸಾಮಾಜಿಕ ವ್ಯವಸ್ಥೆ ಬದಲಾಗಿದೆಯೇ? ಜಾತಿ ವ್ಯವಸ್ಥೆ ಸಂಪೂರ್ಣವಾಗಿ ನಾಶವಾಗಿದಯೇ? ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯನ್ನು ಹೇಗೆ ಬಲಿಪಶುವನ್ನಾಗಿ ಮಾಡಿದೆ ಮೀಸಲಾತಿ ಯಾರಿಗೆ ಇದೆ, ಅಧಿಕಾರ ಯಾರು ಚಲಾಯಿಸುತ್ತಿದ್ದಾರೆ, ಸರ್ಕಾರ ಏನು ಮಾಡುತ್ತಿದೆ, ಸಾರ್ವಜನಿಕರ ಪಾತ್ರವೇನು ಮುಂತಾದ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾಗಿದೆ. ಮೀಸಲಾತಿಯ ವ್ಯವಸ್ಥೆ ಮಹಿಳೆಯರ ಹೆಸರಿನಲ್ಲಿ ಪುರುಷರಿಗೆ ಇನ್ನೊಂದು ಅವಕಾಶವನ್ನು ಕಲ್ಪಿಸಿಕೊಟ್ಟಂತಾಗಿದೆ.

1.8. ನನಗೆ ತಿಳಿಯುವ ಮುಂಚೆಯೇ ಬಾಲ್ಯ ವಿವಾಹ ಮಾಡಿದ್ರು:

ಸಂಘದ ಮಹಿಳೆಯೊಬ್ಬಳು ತಮ್ಮ ಜೀವನದ ಕುರಿತಾಗಿ ಕೆಲವೊಂದು ಘಟನೆಗಳನ್ನು ನಮ್ಮೊಡನೆ ಹೇಳಿಕೊಂಡರು. ಅವಳಿಗೆ 15 ವರ್ಷದ ವಯಸ್ಸಿರಬಹುದಂತೆ ಒಂದೂರಿನ ಗೌಡನಿಗೆ 2ನೇ ಹೆಂಡತಿಯಾಗಿ ಮದುವೆ ಮಾಡಿಕೊಟ್ಟಿರುತ್ತಾರೆ. ಗೌಡನ ವಯಸ್ಸು 45 ರಿಂದ 50 ವರ್ಷಗಳು. ಗೌಡನಿಗೆ ಮೊದಲಿನ ಹೆಂಡತಿಯ ಜೊತೆಗೆ ಸಂಬಂಧ ಮುರಿದು ಹೋಗಿತ್ತಂತೆ. ಗೌಡನ ದೊಡ್ಡದಾದ ಮನಗೆ ಒಡತಿಯಾಗಿ ಈಕೆ ಬಂದಳು. ಇವಳ ಬದುಕಿನಲ್ಲಿ ಊಟ, ಬಟ್ಟೆ, ವಸತಿ, ಬಂಗಾರಕ್ಕೆ ಯಾವುದೇ ಕೊರತೆ ಇರಲಿಲ್ಲ. ಹೇಳಿಕೊಳ್ಳುವಂತಹ ಆಸ್ತಿಯೇನು ಇವಳ ಹೆಸರಿಗೆ ಇರಲಿಲ್ಲ. ಆದರೆ ಗೌಡ ಮಾತ್ರ ಈಕೆಯನ್ನು ಬಹಳ ಪ್ರೀತಿ ಆದರಗಳಿಂದ ಕಾಣುತ್ತಿದ್ದನಂತೆ. ಕುದುರಿಯ ಮೇಲೆ ಕೂಡಿಸಿಕೊಂಡು ತನ್ನ ಹೊಲ ಗದ್ದೆಗಳಲ್ಲಿ ಸುತ್ತಾಡಿ ಬರುತ್ತಿದ್ದನಂತೆ. ಇವಳಿಗೆ ಪರಿಚಯ ವಿಲ್ಲದ ಅನೇಕ ಜನ ಗೌಡನನ್ನು ಕುರಿತು ನಿಮ್ಮ ಮಗಳ ಏನ್ರಿ ಎಂದು ಕೇಳುತ್ತಿದ್ದರಂತೆ ಗೌಡನಿಗೆ ಗಲಿಬಿಲಿಯಾಗಿ ಉತ್ತರ ಕೊಡಲಿಕ್ಕ ಆಗುತ್ತಿರಲಿಲ್ಲ. ನನಗೆ ತಿಳುವಳಿಕೆ ಬಂದ ನಂತರ ಯೋಚನೆ ಮಾಡಲಿಕ್ಕೆ ಪ್ರಾರಂಭಿಸಿದೆ. ನನ್ನ ವಯಸ್ಸೇನು, ನನ್ನ ಸ್ನೇಹಿತೆಯರು ಗಂಡನ ವಯಸ್ಸೇನು, ನಮ್ಮಿಬ್ಬರ ವಯಸ್ಸಿನ ನಡುವಿನ ಅಂತರ ಅಜ-ಗಜಾಂತರವಿತ್ತು ನಾವು ಇಬ್ಬರು ಈ ಹಳ್ಳಿಗೆ ಗೌಡ-ಗೌಡ್ತಿಯರು ನಮ್ಮ ಹಿರಿಯರು ನನ್ನ ಮದುವೆ ವಿಷಯದಲ್ಲಿ ಯಾಕೆ ಹೀಗೆ ಮಾಡಿದರು. ನನ್ನ ಸ್ನೇಹಿತೆಯರು ತಕ್ಕ ವರಗಳೊಂದಿಗೆ ಮದುವೆಯಾಗಿ ಸುಖ-ಸಂತೋಷದಿಂದ ಇದ್ದಾರೆ. ನನಗೆ ಯಾಕೆ ಇಂತಹ ಶಿಕ್ಷೆ ನನ್ನ ಹಿಂದಿನ ಜನ್ಮದ ಕರ್ಮದ ಫಲವೇ ಎಂದು ಯೋಚಿಸುತ್ತಿದ್ದೆ.

ನನ್ನ ಮದುವೆಯಾಗಿ 10 ವರ್ಷ ಮುಗಿಯುವುದರೊಳಗೆ ಗೌಡ್ರು ಯಾವುದೊ ವಾಸಿಯಾಗದ ಕಾಯಿಲೆಗೆ ತುತ್ತಾಗಿ ಹಾಸಿಗೆ ಹಿಡಿದರು. ನಮ್ಮ ಕಷ್ಟದ ಸಮಯದಲ್ಲಿ ಯಾವ ನೆಂಟರಿಷ್ಟರು ಬರಲಿಲ್ಲ. ಮನೆಯಲ್ಲಿದ್ದ ಬಂಗಾರ, ಬೆಳ್ಳಿ, ಹೊಲ, ಗದ್ದೆ ಎಲ್ಲವು ಮಾರಿ ಆಸ್ಪತ್ರೆಯ ಖರ್ಚನ್ನು ಭರಿಸಲಾಯಿತು. 3 ವರ್ಷಗಳ ಕಾಲ ಹಾಸಿಗೆಯಲ್ಲಿಯೇ ನರಳುತ್ತಿದ್ದಾಗ ಅವರ ಸೇವೆಯೊಂದು ಬಿಟ್ಟರೆ ಬೇರೆ ಯಾವ

ವಿಚಾರಗಳು ನನ್ನ ತಲೆಯಲ್ಲಿ ಸುಳಿಯಲಿಲ್ಲ. ನನ್ನ ಸೇವೆಗೆ ಪ್ರತಿಫಲ ದೊರೆಯಿಲಿಲ್ಲ. ಗೌಡ್ರು ಮರಣ ಹೊಂದಿದರು. ನನಗೆ ಆಗ 25 ವರ್ಷ ವಯಸ್ಸು ತುಂಬಿತು. ಆದರೆ ನನಗೆ ಈಗ 50 ವರ್ಷ ವಯಸ್ಸಾಗಿದೆ. ಕಳೆದ 25 ವರ್ಷಗಳಿಂದ ಸಾಂಪ್ರದಾಯಕವಾದ ಈ ದೊಡ್ಡ ಮನೆಯಲ್ಲಿ ನಾನು ಒಬ್ಬಳೆ ವಾಸವಾಗಿದ್ದೇನೆ. ನನಗೆ ಮಕ್ಕಳಿಲ್ಲ ಬುದ್ದಿ ಬರುವುದರೊಳಗೆ ನಾನು ಕಾಣದ ಕನಸಿನ ಜೀವನವೇ ಮುಗಿದು ಹೋಗಿತ್ತು. ನನ್ನ ಕಷ್ಟ ಸುಖ ಹಂಚಿಕೊಳ್ಳಲು ನನ್ನವರು ಅಂತ್ ಯಾರು ಇಲ್ಲ. ಇತ್ತೀಚಿಗೆ ಸಂಘದಲ್ಲಿ ಸದಸ್ಯೆಯಾಗಿ ಸೇರಿದ್ದೇನೆ. ಸಂಘದ ಮಹಿಳೆಯರೊಂದಿಗೆ ನನ್ನ ನೋವುಗಳನ್ನು ಮರೆಯಬಹುದು ಎಂದು ಹೇಳುತ್ತಿರುವಾಗ ಅವರ ಕಣ್ಣಾಲೆಗಳಲ್ಲಿ ನೀರು ತುಂಬಿರುವುದನ್ನು ನೋಡಿ ತುಂಬಾ ದುಃಖವಾಯಿತು. ಹೇಗೆ ಸಾಂತ್ವನ ಹೇಳಬೇಕೆಂದು ತೋಚಲಿಲ್ಲ. ಆದರೂ ನನಗೆ ತಿಳಿದ ಎರಡು ಮಾತುಗಳನ್ನು ಹೇಳಿದ "ನೀವು ಅಳಬೇಡಿ ನಿಮ್ಮ ಕಣ್ಣಲ್ಲಿ ನೀರು ಬರಬಾರದು ನೀವು ನಿಮಗಾಗಿ ಬದುಕಬೇಕು, ಇನ್ನೊಬ್ಬರ ಕಣ್ಣೀರನ್ನು ಒರೆಸುವ ಶಕ್ತಿ ನಿಮಗೆ ಬರಲಿ ಎಂದೆ".

ಈ ಮಾದರಿ ಪ್ರಕರಣದಲ್ಲಿ ತಿಳಿದು ಬರುವುದೇನೆಂದರೆ ಮಹಿಳೆಯ ಬದುಕು ಬೇರೆಯವರ ನಿರ್ಧಾರದ ಮೇಲೆ ನಿಂತಿದೆ. ಮಾತು ಬಂದರು ಆಡುವ ಹಾಗಿಲ್ಲ. ನಮ್ಮ ಸಾಮಾಜಿಕ ವ್ಯವಸ್ಥೆ ಪ್ರತಿಯೊಂದು ಹಂತದಲ್ಲಿಯೂ ಆಕೆಯನ್ನು ಬಲಿ ಪಶುವನ್ನಾಗಿ ಮಾಡಿದೆ. ಬದುಕು ಬರಡಾಗಿಸಿದೆ, ಆಶೆಗಳು ಬತ್ತಿ ಹೋಗಿವೆ ಏತಕ್ಕಾಗಿ ಈ ಬದುಕು ಎನ್ನಿಸಿದೆ. ಮುಂಬರುವ ದಿನಗಳಲ್ಲಿ ಬಾಲ್ಯ ವಿವಾಹಗಳು ಸಂಪೂರ್ಣವಾಗಿ ನಿಲ್ಲಲಿ, ಸಂಪ್ರಾದಾಯಿಕ ಸಮಾಜದ ಮನೋವೃತ್ತಿಯಲ್ಲಿ ಬದಲಾವಣೆ ಬರಲಿ ಎಂಬ ಆಶೆಯಿಂದಲೇ ಈ ಮಾದರಿಯ ಪ್ರಕರಣವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

2. ಮಾಹಿತಿಮೂಲ : ಸ್ವ-ಸಹಾಯ ಸಂಘಗಳು ಹಾಗೂ ಸದಸ್ಯರ ವಿವರ:

ಸಂಘದ ಹೆಸರು : ಸೌಭಾಗ್ಯಲಕ್ಷ್ಮೀ ಮಹಿಳಾ ಸ್ವ-ಸಹಾಯ ಸಂಘ.

ಗ್ರಾಮದ ಹೆಸರು : ಮೈಸಲಗಾ

ತಾಲೂಕಾ : ಬಸವಕಲ್ಯಾಣ

ಜಿಲ್ಲಾ : ಬೀದರ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಜ್ಞಾನಬಾಯಿ ಗಂ. ಲಕ್ಷ್ಮಣ	45
02.	ತಾರಾಬಾಯಿ ಗಂ. ಶ್ರೀಮಂತ	55
03.	ಶಾಂತಾಬಾಯಿ ಗಂ. ಪರಮೇಶ್ವರ	45
04.	ಖಾದುಬಾಯಿ ಗಂ. ಸಾಯಿಬಣ್ಣಾ	41
05.	ಜಯಶ್ರೀ ಗಂ. ಅಂಬಾರಾಯ	36
06.	ಜಗದೇವಿ ಗಂ. ಬಾಬು	49
07.	ಲಕ್ಷ್ಮೀ ಗಂ. ರಾಮಣ್ಣಾ	26
08.	ಇಂದುಬಾಯಿ ಗಂ. ಸೋಮು	36
09.	ಶರಣಮ್ಮ ಗಂ. ಅರ್ಜುನ	46
10.	ಚಿತ್ರಾಬಾಯಿ ಗಂ. ಪ್ರಕಾಶ	31

ಸಂಘದ ಹೆಸರು : ಶ್ರೀ ಬನಶಂಕರಿ ಸ್ವ-ಸಹಾಯ ಸಂಘ

ಗ್ರಾಮದ ಹೆಸರು : ರಾಜೇಶ್ವರ

ತಾಲೂಕಾ : ಬಸವಕಲ್ಯಾಣ

ಜಿಲ್ಲಾ : ಬೀದರ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಶಶಿಕಲಾ ಗಂ. ಮಾಣಿಕ	25
02.	ಸುಂದ್ರಮ್ಮಾ ಗಂ. ಪ್ರಭು	45
03.	ಶಾಂತಾಬಾಯಿ ಗಂ. ಸುರೇಶ	36
04.	ಶಕುಂತಲಾ ಗಂ. ಭೀಮಣ್ಣಾ	30
05.	ಶ್ರೀದೇವಿ ಗಂ. ರಾಮಶೆಟ್ಟಿ	30
06.	ರೇಣುಕಾ ಗಂ. ರಮೇಶ	35
07.	ಶಾರದಾ ಗಂ. ಮಲ್ಲಪ್ಪಾ	45
08.	ಶಾಂತಮ್ಮ ಗಂ. ರಾಮಣ್ಣಾ	26
09.	ರೇಣುಕಾ ಗಂ. ಸುನೀಲ	30
10.	ಚಂದ್ರಕಲಾ ಗಂ. ಕಮಲಕರ	28

ಸಂಘದ ಹೆಸರು : ಜೈ ಸಂತೋಷಿ ಮಾತಾ ಮಹಿಳಾ ಸ್ವ-ಸಹಾಯ ಸಂಘ

ಗ್ರಾಮದ ಹೆಸರು : ಭಾತಂಬ್ರಾ

ತಾಲೂಕಾ : ಭಾಲ್ಕಿ

ಜಿಲ್ಲಾ : ಬೀದರ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಸುಭದ್ರ ಗಂ. ಮಾಣಿಕ	35
02.	ಸುನೀತಾ ಗಂ. ಮಾರುತಿ	30
03.	ಉಷೆ ಗಂ. ರಮೇಶ	30
04.	ನೀಲಮ್ಮ ಗಂ. ಗುಂಡಪ್ಪಾ	45
05.	ಮಹಾನಂದಾ ಗಂ. ವೈಜನಾಥ	36
06.	ಈರಮ್ಮ ಗಂ. ಚಂದ್ರಶೇಖರ	51
07.	ಮಲ್ಲಮ್ಮ ಗಂ. ಮಹಾದೇವ	25
08.	ಚಂದ್ರಕಲಾ ಗಂ. ದಶರಥ	41
09.	ರತ್ನಮ್ಮಾ ಗಂ. ಚೆನ್ನಪ್ಪಾ	45
10.	ಕಾಂತಮ್ಮ ಗಂ. ಕಾಶಿನಾಥ	35

ಸಂಘದ ಹೆಸರು : ರಮಬಾಯಿ ಮಹಿಳಾ ಸಮುಖ್ಯ ಸಂಘ

ಗ್ರಾಮದ ಹೆಸರು : ದುಬಲಗುಂಡಿ

ತಾಲೂಕಾ : ಹುಮನಾಬಾದ

ಜಿಲ್ಲಾ : ಬೀದರ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಅಡೆಮ್ಮಾ ಗಂ. ತುಳಸಿರಾಮ್	45
02.	ತಂಗೆಮ್ಮಾ ಗಂ. ಪಾಂಡುರಂಗ	40
03.	ಗುಂಡಮ್ಮಾ ಗಂ. ಗುಂಡಪ್ಪಾ	50
04.	ಮಾಣೆಮ್ಮಾ ಗಂ. ಸಿದ್ರಾಮ	45
05.	ಪಾರ್ವತಿ ಗಂ. ಪುಂಡಲಿಕ	45
06.	ಮಹಾದೇವಿ ಗಂ. ಪ್ರಭು	38
07.	ಶೆಕಮ್ಮಾ ಗಂ. ಮಾರುತಿ	40
08.	ಶರಣಮ್ಮ ಗಂ. ಸಂಬಣ್ಣಾ	55
09.	ಶಿವಮ್ಮ ಗಂ. ಸುಭಾಷ	50
10.	ಚಿತ್ರಮ್ಮ ಗಂ. ರುದ್ರಪ್ಪಾ	51

ಸಂಘದ ಹೆಸರು : ಜ್ಯೋತಿ ಮಹಿಳಾ ಸಮಾಖ್ಯ ಸಂಘ

ಗ್ರಾಮದ ಹೆಸರು : ಮನ್ನಾ ಎಖ್ಖೆಳಿ

ತಾಲೂಕಾ : ಹುಮನಾಬಾದ

ಜಿಲ್ಲಾ : ಬೀದರ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಮಹಾದೇವಿ ಗಂ. ಶಿವಾಜಿ	40
02.	ನಿರ್ಮಲಾ ಗಂ. ಮಲ್ಲಿಕಾರ್ಜುನ	35
03.	ಕಾವೇರಿ ಗಂ. ರಾಚಯ್ಯ	25
04.	ಚೆನ್ನಮ್ಮ ಗಂ. ಬಸವರಾಜ	40
05.	ಅಂಜಮ್ಮ ಗಂ. ಕರಿಬಸಪ್ಪಾ	39
06.	ಮಲ್ಲಮ್ಮಾ ಗಂ. ನಾಗಪ್ಪಾ	35
07.	ಕಲಾವತಿ ಗಂ. ದಶರಥ	30
08.	ಚೆನ್ನಮ್ಮ ಗಂ. ಶಂಕರ	48
09.	ಮಾಲನ್ ಬೀ ಗಂ. ಕರೀಮ್	38
10.	ಸಲೀಮಾ ಬೇಗಂ ಗಂ. ಬಾಬುಮಿಯಾ	38

ಸಂಘದ ಹೆಸರು : ಭಾಗ್ಯವಂತಿ ಸ್ತ್ರಿ ಶಕ್ತಿ ಸ್ವ-ಸಹಾಯ ಸಂಘ

ಗ್ರಾಮದ ಹೆಸರು : ಕಡಣಿ

ತಾಲೂಕಾ : ಗುಲಬರ್ಗಾ

ಜಿಲ್ಲಾ : ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಸರಸ್ವತಿ ಗಂ. ಬಸಯ್ಯಸ್ವಾಮಿ	50
02.	ಬಾಯಮ್ಮ ಗಂ. ಮಲ್ಲಣ್ಣಾ	30
03.	ಶಾರಾಬಾಯಿ ಗಂ. ಸಿದ್ದಯ್ಯಸ್ವಾಮಿ	45
04.	ಮಲ್ಲಮ್ಮ ಗಂ. ಬಾಬುರಾಯ್ಯ	30
05.	ಸುಮಂಗಲಾ ಗಂ. ರುದ್ರಯಾಸ್ವಾಮಿ	36
06.	ಸಿದ್ದಮ್ಮ ಗಂ. ಸಿದ್ರಾಮಪ್ಪಾ	25
07.	ಇಸ್‌ಪುರಂ ಗಂ. ತಿಪ್ಪಣ್ಣಾ	30
08.	ಕಸ್ತೂರಿಬಾಯಿ ಗಂ. ಮಲ್ಲಣ್ಣಾ	50
09.	ಮಹಾದೇವಿ ಗಂ. ಶಂಕರರಾವ್	25
10.	ಮಾಯಾದೇವಿ ಗಂ. ಮಲ್ಲಿಕಾರ್ಜುನ	25

ಸಂಘದ ಹೆಸರು : ಜಗದಂಬಾ ಸ್ತ್ರೀ ಶಕ್ತಿ ಸಂಘ

ಗ್ರಾಮದ ಹೆಸರು : ಶರಣ ಸಿರಸಗಿ

ತಾಲ್ಲೂಕಾ : ಗುಲಬರ್ಗಾ

ಜಿಲ್ಲಾ : ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ರಮಾದೇವಿ ಗಂ. ಕಲ್ಯಾಣರಾವ್	30
02.	ಕಾಶಿಬಾಯಿ ಗಂ. ಸುಭಾಷ	26
03.	ಮಲ್ಲಮ್ಮಾ ಗಂ. ನೀಲಕಂಠ	40
04.	ಶರಣಮ್ಮ ಗಂ. ನಾಗಪ್ಪಾ	40
05.	ನಿಂಗಮ್ಮ ಗಂ. ಶಿವಪುತ್ರ	35
06.	ಶ್ರೀದೇವಿ ಗಂ. ಶಿವಕುಮಾರ	30
07.	ಶಶಿಕಲಾ ಗಂ. ಶಿವಲಾಲ	30
08.	ಸವಿತಾ ಗಂ. ಬಸವರಾಜ	25
09.	ಶೇಕುಬಾಯಿ ಗಂ. ರಮೇಶ	30
10.	ಚಂದ್ರಬಾಯಿ ಗಂ. ಲಾಲು	50

ಸಂಘದ ಹೆಸರು : ಪ್ರಗತಿ ಮಹಿಳಾ ಸ್ವ-ಸಹಾಯ ಸಂಘ

ಗ್ರಾಮದ ಹೆಸರು : ಕೆಸರಟಗಿ

ತಾಲೂಕಾ : ಗುಲಬರ್ಗಾ

ಜಿಲ್ಲಾ : ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಅನ್ನಪೂರ್ಣ ಗಂ. ಶಿವಕಾಂತ ಕಾಳೆ	41
02.	ಶಾಂತಾಬಾಯಿ ಗಂ. ಮಲ್ಲೇಶಪ್ಪ	36
03.	ಭೀಮಬಾಯಿ ಗಂ. ಕಲ್ಯಾಣಿ	45
04.	ರಾಮಬಾಯಿ ಗಂ. ಶಿವಶರಣ	40
05.	ಸಿದ್ದಮ್ಮ ಗಂ. ಹಣಮಂತ	45
06.	ಬಸಮ್ಮ ಗಂ. ಶಿವಲಿಂಗಪ್ಪಾ	36
07.	ಶಿವಕಾಂತ ಗಂ. ಪ್ರಕಾಶ	35
08.	ಸುಮಿತ್ರಾಬಾಯಿ ಗಂ. ಯಶವಂತರಾವ	50
09.	ವೀರಮ್ಮ ಗಂ. ಶರಣಪ್ಪಾ	30
10.	ಕಾಳಮ್ಮ ಗಂ. ಸಿದ್ದಯ್ಯ	26

ಸಂಘದ ಹೆಸರು	:	**ಲಕ್ಷ್ಮೀ ಸ್ತ್ರೀ–ಶಕ್ತಿ ಸಂಘ**
ಗ್ರಾಮದ ಹೆಸರು	:	**ಕಡಗಂಚಿ**
ತಾಲೂಕಾ	:	**ಗುಲಬರ್ಗಾ**
ಜಿಲ್ಲಾ	:	**ಗುಲಬರ್ಗಾ**

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಮಾಯಾದೇವಿ ಗಂ. ಮಲ್ಲಿಕಾರ್ಜುನ	25
02.	ಮಹಾದೇವಿ ಗಂ. ಶಂಕರರಾವ	30
03.	ಕಸ್ತೂರಿಬಾಯಿ ಗಂ. ಮಲ್ಲಣ್ಣ	50
04.	ಈರಮ್ಮ ಗಂ. ತಿಪ್ಪಣ್ಣಾ	30
05.	ಸುಮಂಗಲಾ ಗಂ. ರುದ್ರಯ್ಯಸ್ವಾಮಿ	45
06.	ಸಿದ್ದಮ್ಮಾ ಗಂ. ಸಿದ್ರಾಮಪ್ಪ	25
07.	ಮಲ್ಲಮ್ಮ ಗಂ. ಬಾಬುರಾಯಾ	30
08.	ಸೌಭಾಗ್ಯ ಗಂ. ಭೀಮಣ್ಣಾ	35
09.	ಕಮಲಬಾಯಿ ಗಂ. ಈರಣ್ಣಾ	40
10.	ಕಾಶಿಬಾಯಿ ಗಂ. ಮಾರುತಿ	38

ಸಂಘದ ಹೆಸರು	:	**ಮಹಾಲಕ್ಷ್ಮೀ ಸ್ತ್ರೀ–ಶಕ್ತಿ ಸಂಘ**
ಗ್ರಾಮದ ಹೆಸರು	:	**ಕಡಗಂಚಿ**
ತಾಲೂಕಾ	:	**ಆಳಂದ**
ಜಿಲ್ಲಾ	:	**ಗುಲಬರ್ಗಾ**

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ರಾಜಮ್ಮಾ ಗಂ. ನೇಮಚಂದ	50
02.	ಮೇಘಾಬಾಯಿ ಗಂ. ಬಾಬು	30
03.	ವಿಜಯಲಕ್ಷ್ಮೀ ಗಂ. ಚೆನ್ನಮ್ಮ	20
04.	ರತ್ನಬಾಯಿ ಗಂ. ಹಣಮಂತರಾಯ	45
05.	ನೀಲಮ್ಮ ಗಂ. ರೇವಪ್ಪಾ	40
06.	ಶೆಟ್ಟೆಮ್ಮ ಗಂ. ಮಹಾದೇವ	40
07.	ಸಂಗಮ್ಮ ಗಂ. ಗುಂಡೆರಾವ್	26
08.	ಜಗದೇವಿ ಗಂ. ಶಿವರಾಜ	26
09.	ಭಾಗೀರಥಿ ಗಂ. ಅಂಬರಾಯ	30
10.	ಅಮೃತಮ್ಮ ಗಂ. ಶೆಟೆಪ್ಪಾ	45

ಸಂಘದ ಹೆಸರು	:	ರಮಾಬಾಯಿ ಸ್ತ್ರೀ ಶಕ್ತಿ ಸಂಘ
ಗ್ರಾಮದ ಹೆಸರು	:	ದಿಗ್ಗಾಂವ್
ತಾಲೂಕಾ	:	ಚಿತ್ತಾಪೂರ
ಜಿಲ್ಲಾ	:	ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಯಶೋಧಾ ಗಂ. ಶರಣಬಸಪ್ಪಾ	26
02.	ಮಲ್ಲಮ್ಮ ಗಂ. ಮಹಾದೇವ	25
03.	ಶರಣಮ್ಮಾ ಗಂ. ರಾಜಪ್ಪಾ	30
04.	ಸಂತೋಷಿ ಗಂ. ರಮೇಶ	30
05.	ಜಗದೇವಿ ಗಂ. ಅಮೃತ	31
06.	ಶೋಭಾ ಗಂ. ಶಂಕರ	26
07.	ಗೌರಾಬಾಯಿ ಗಂ. ಕಮಲಕರ್	45
08.	ಪ್ರಭಾವತಿ ಗಂ. ಮಾಣಿಕ	36
09.	ತುಳಸಮ್ಮ ಗಂ. ಪ್ರಭು	30
10.	ಪಾರಮ್ಮ ಗಂ. ರಾಮಣ್ಣಾ	45

ಸಂಘದ ಹೆಸರು	:	ಐಶ್ವರ್ಯ ಸ್ತ್ರೀ ಶಕ್ತಿ ಸ್ವ-ಸಹಾಯ ಸಂಘ
ಗ್ರಾಮದ ಹೆಸರು	:	ಇಬ್ರಾಹಿಂಪೂರ
ತಾಲೂಕಾ	:	ಶಹಾಪೂರ
ಜಿಲ್ಲಾ	:	ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಚೌಡಮ್ಮ ಗಂ. ಸಾಬಣ್ಣಾ ತಳವಾರ	36
02.	ಹುಸೇನಬಿ ಗಂ. ಹುಸೇನಸಾಬ	36
03.	ಭೀಮಬಾಬಾಯಿ ಗಂ. ಶಂಕರೆಪ್ಪಾ	35
04.	ಬಸಮ್ಮ ಗಂ. ಶಂಕರೆಪ್ಪಾ ಗುಳ್ಯಾಳ	40
05.	ಗಂಗಮ್ಮ ಗಂ. ಭೀಮರಾಯ	45
06.	ತೆಂಗೆಮ್ಮ ಗಂ. ಕರಬಸಯ್ಯ	40
07.	ಹೊನ್ನಮ್ಮ ಗಂ. ಮರೆಪ್ಪಾ	40
08.	ಅನಂತಮ್ಮ ಗಂ. ಶರಣಯ್ಯ	36
09.	ಪಿಜಮ್ಮ ಗಂ. ಸಾಬಣ್ಣಾ	35
10.	ಸೋಪಮ್ಮ ಗಂ. ನಬಿಸಾಬ	40

ಸಂಘದ ಹೆಸರು : ಬಸವಾಂಬೆ ಮಹಿಳಾ ಸ್ವ-ಸಹಾಯ ಸಂಘ.

ಗ್ರಾಮದ ಹೆಸರು : ಯರಗೋಳ

ತಾಲೂಕಾ : ಯಾದಗೀರ

ಜಿಲ್ಲಾ : ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಸಾಬಮ್ಮ ಗಂ. ಸಾಯಬಣ್ಣಾ	35
02.	ಮಹಾದೇವಿ ಗಂ. ರಾಜಪ್ಪಾ	40
03.	ಅಂಜುಳಮ್ಮ ಗಂ. ಮಾಣಿಕ	31
04.	ಮರೆಮ್ಮ ಗಂ. ಮೆಟ್ಟಿ	30
05.	ಮಹಾದೇವಮ್ಮ ಗಂ. ರಾಮಣ್ಣಾ	50
06.	ಈರಮ್ಮ ಗಂ. ಬಾಬುರಾವ	35
07.	ಶರಣಮ್ಮಾ ಗಂ. ಭೀಮರಾಯ	31
08.	ಭಾಗಮ್ಮ ಗಂ. ಮರೆಪ್ಪಾ	50
09.	ಮರೆಮ್ಮಾ ಗಂ. ಸಾಬಣ್ಣಾ	45
10.	ಶಾಂತಮ್ಮ ಗಂ. ಯಂಕಣ್ಣಾ	20

ಸಂಘದ ಹೆಸರು : ಧನಲಕ್ಷ್ಮೀ ಸ್ತ್ರೀ-ಶಕ್ತಿ ಸಂಘ

ಗ್ರಾಮದ ಹೆಸರು : ಮಲ್ಲಕಪನ ಹಳ್ಳಿ

ತಾಲೂಕಾ : ಯಾದಗೀರ

ಜಿಲ್ಲಾ : ಗುಲಬರ್ಗಾ

ಕ್ರ ಸಂ.	ಸದಸ್ಯರ ಹೆಸರು	ವಯಸ್ಸು
01.	ಶಾಣಮ್ಮ ಗಂ.ಭೀಮರಾಯ ತಳವಾರ	35
02.	ಮರೆಮ್ಮಾ ಗಂ. ಸಾಬಣ್ಣಾ ಜಳ್ಳಳ್ಳಿ	45
03.	ಭಾಗಮ್ಮ ಗಂ. ಮರೆಪ್ಪಾ ತಳವಾರ	50
04.	ಶಾಂತಮ್ಮ ಗಂ. ಯಂಕಣ್ಣಾ	20
05.	ಸೌಭಾಗ್ಯ ಗಂ. ಮಲ್ಲಪ್ಪ	40
06.	ಅಂಜುಳಮ್ಮ ಗಂ. ಬಾಬು	35
07.	ಮಹಾದೇವಿ ಗಂ. ರಾಜಪ್ಪ	40
08.	ಸಾಬಮ್ಮ ಗಂ. ಮೇಟ್ಟಿ	31
09.	ಮರೆಮ್ಮ ಗಂ. ಮಾರುತಿ	30
10.	ಈರಮ್ಮ ಗಂ. ಮಹಾದೇವ	35

ಪ್ರಶ್ನಾವಳಿ ನಮೂನೆ

"ಗ್ರಾಮೀಣ ಮಹಿಳೆಯರ ಸಬಲೀಕರಣ - ಒಂದು ಸ್ತ್ರೀವಾದಿ ಅಧ್ಯಯನ"

(ಹೈದ್ರಾಬಾದ-ಕರ್ನಾಟಕವನ್ನು ಅನುಲಕ್ಷಿಸಿ)

ವೈಯುಕ್ತಿಕ ವಿವರ :

1. ಹೆಸರು
2. ವಯಸ್ಸಿನ ವಿವರ
    1. ಹರೆಯದವರು 15 ರಿಂದ 25 ವರ್ಷ
    2. ಯುವ ಜನತೆ 26 ರಿಂದ 35 ವರ್ಷ
    3. ಮಧ್ಯ ವಯಸ್ಕರು 36 ರಿಂದ 45 ವರ್ಷ
    4. ಹಿರಿಯರ ವಯಸ್ಕರು 46 ರಿಂದ 55 ವರ್ಷ
3. ಜಾತಿಯ ವಿವರ.
    1. ಉನ್ನತ ಜಾತಿ
    2. ಹಿಂದುಳಿದವರು
    3. ಪ. ಜಾತಿ. & ಪ. ಪಂಗಡ
4. ಧರ್ಮದ ವಿವರ.
    1. ಹಿಂದು
    2. ಮುಸ್ಲಿಂ
    3. ಕ್ರೈಸ್ತರು.
5. ವೈವಾಹಿಕ ವಿವರ.
    1. ವಿವಾಹಿತರು
    2. ಅವಿವಾಹಿತರು
6. ವಿವಾಹದ ವಯಸ್ಸಿನ ವಿವರ.
    1. 10–15
    2. 16–20
    3. 21–22
7. ಶಿಕ್ಷಣದ ವಿವರ.
    1. ಅನಕ್ಷರಸ್ಥರು
    2. ಅಕ್ಷರಸ್ಥರು
    3. ಅರೆ ಅಕ್ಷರಸ್ಥರು
    4. ಶಿಕ್ಷಿತರು

8. ಉದ್ಯೋಗದ ವಿವರ.

   1. ಸ್ಥಿರ ಹಾಗೂ ಸತತ ಉದ್ಯೋಗ
   2. ಅಸ್ಥಿರ ಹಾಗೂ ಅನಿರ್ಧಿಷ್ಟ ಉದ್ಯೋಗ
   3. ಗ್ರಹಿಣಿಯರು & ಮನೆವಾರ್ತೆಗಳು.

9. ಅದಾಯದ ವಿವರ.

   1. ಗರಿಷ್ಟ ಆದಾಯ
   2. ಮಧ್ಯಮ ಆದಾಯ
   3. ಕನಿಷ್ಠ ಆದಾಯ

10. ಗ್ರಾಮದ ಬಗ್ಗೆ ಹೊಂದಿರುವ ಮಾಹಿತಿ.

   1. ಗ್ರಾಮದ ಹೆಸರು :
   2. ತಾಲೂಕು :
   3. ಜಿಲ್ಲೆ :
   4. ಗ್ರಾಮಪಂಚಾಯತಿ : ಇದೆ/ಇಲ್ಲ

11. ಶಾಲೆಗಳ ಬಗ್ಗೆ ಹೊಂದಿರುವ ಮಾಹಿತಿ.

   1. ಶಾಲೆಗಳು
   2. ಪ್ರಾಥಮಿಕ ಇದೆ/ಇಲ್ಲ
   3. ಮಾಧ್ಯಮಿಕ ಇದೆ/ಇಲ್ಲ
   4. ಪ್ರೌಢ ಶಾಲೆ ಇದೆ/ಇಲ್ಲ

ಸ್ವ-ಸಹಾಯ ಸಂಘದ ಚರ್ಚೆಯನ್ನಾಧರಿಸಿ ಗುರಿ ಉದ್ದೇಶದ ಸ್ಪಷ್ಟತೆ:

(1) ಸ್ವ-ಸಾಹಯ ಸಂಘದ ಗುರಿ, ಉದ್ದೇಶಗಳ (ಸಂಘದ ಪ್ರತಿನಿಧಿಗಳು ಮತ್ತು ಸದಸ್ಯಯರ) ಬಗ್ಗೆ ತಮಗೆ ಎಷ್ಟು ಗೊತ್ತಿದೆ?

   1. ಅತಿಸ್ಪಷ್ಟ ಅರಿವು.
   2. ಸ್ಪಷ್ಟ ಅರಿವು
   3. ಅಸ್ಪಷ್ಟ ಗೊತ್ತಿಲ್ಲ

(2) ಸ್ವ-ಸಹಾಯ ಸಂಘದ ನಿರ್ದಿಷ್ಟ ಗುರಿ ಉದ್ದೇಶದ ಬಗ್ಗೆ ತಮಗೆ ಗೊತ್ತಿದೆಯೇ?

1. ಆರ್ಥಿಕ ಸ್ವಾವಲಂಬಿತನ.
2. ಗ್ರಾಮೀಣ ಮಹಿಳೆಯರು ಸಂಘಟಿತರಾಗಿ ಶೋಷಣೆಯ ವಿರುದ್ಧ ಹೋರಾಟ ಮಾಡುವುದು.
3. ರಚನಾತ್ಮಕ ಪಾತ್ರವಹಿಸುವಲ್ಲಿ ಮಹಿಳೆಯರನ್ನು ಸಜ್ಜುಗೊಳಿಸುವುದು.

(3) ತಮಗೆ ಬ್ಯಾಂಕ ವ್ಯವಹಾರದ ಬಗ್ಗೆ ಗೊತ್ತಿದೆಯಾ?

1. ಬಹು ಮಟ್ಟಿಗೆ.
2. ಸ್ವಲ್ಪಮಟ್ಟಿಗೆ
3. ಗೊತ್ತಿಲ್ಲ

(4) ಬ್ಯಾಂಕ್ ಸಂಪರ್ಕದ ಮಾಹಿತಿಯಿದೆಯಾ?

1. ಬಹುಮಟ್ಟಿಗೆ.
2. ಸ್ವಲ್ಪ ಮಟ್ಟಿಗೆ
3. ಗೊತ್ತಿಲ್ಲ

(5) ಬ್ಯಾಂಕ ನೀಡುವ ಸಾಲದ ಬಗ್ಗೆ ತಮಗೆ ಗೊತ್ತಿದೆಯೇ?

1. ಅತಿಸ್ಪಷ್ಟ.
2. ಸ್ಪಷ್ಟ
3. ಅಸ್ಪಷ್ಟ

ಗ್ರಾಮೀಣ ಮಹಿಳೆಯರ ಸಬಲೀಕರಣದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು:
ಸಾಮಾಜಿಕ ಸಬಲೀಕರಣ:

(1) ಮದುವೆ ಮಾಡಲು ಹುಡುಗಿಯರಿಗೆ ಸೂಕ್ತವಯಸ್ಸು ಯಾವುದು ?

1. 16 ರಿಂದ 18 ವರ್ಷಗಳು
2. 19 ರಿಂದ 20 ವರ್ಷಗಳು
3. 21 ರಿಂದ 22 ವರ್ಷಗಳು

(2) ಜೀವನ ಸಂಗಾತಿಯ ಆಯ್ಕೆಯ ಹಕ್ಕನ್ನು ಹುಡುಗಿಯರಿಗೆ ನೀಡಬೇಕೆ?

1. ಬಹುಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಅಸಾಧ್ಯಮಾತು

(3) ಜೀವನ ಸಂಗಾತಿಯ ಆಯ್ಕೆಯ ತೀರ್ಮಾನ ಯಾರು ಮಾಡುತ್ತಾರೆ.

1. ಸ್ವಂತ ಇಚ್ಛೆ
2. ಸ್ವಂತ ಇಚ್ಛೆ ಮತ್ತು ಪಾಲಕರ ಇಚ್ಛೆ
3. ಕೇವಲ ಪಾಲಕರ ಇಚ್ಛೆ

(4) ಯಾವ ಬಗೆಯ ಕುಟುಂಬವನ್ನು ಆಯ್ಕೆ ಮಾಡಿಕೊಳ್ಳುತ್ತೀರಿ?

1. ಅವಿಭಕ್ತ ಕುಟುಂಬ
2. ಅವಿಭಕ್ತ ವಿಘಟಿತ ಕುಟುಂಬ
3. ವಿಭಕ್ತ ಕುಟುಂಬ

(5) ಕುಟುಂಬ ಯೋಜನೆಯಲ್ಲಿ ನಂಬಿಕೆ ಇದೆಯಾ?

1. ಬಹುಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ನಂಬಿಕೆಯಿಲ್ಲ

(6) ಕುಟುಂಬ ಯೋಜನೆಯ ಲಾಭ ಹಾನಿಗಳ ಬಗ್ಗೆ ತಮಗೆ ಗೊತ್ತಿದೆಯೇ ?

1. ಜೀವನ ಮಟ್ಟ ಸುದಾರಿಸುವಲ್ಲಿ ಸಹಾಯಕವಾಗಿದೆ.
2. ಪಾಲಕರು ಹಾಗೂ ಮಕ್ಕಳ ಆರೋಗ್ಯ ರಕ್ಷಣೆಗೆ ಸಹಾಯಕವಾಗಿದೆ.
3. ಮನೆ ಮತ್ತು ಮಕ್ಕಳ ನಿರ್ವಹಣೆಗೆ ಅನುಕೂಲಕರವಾಗಿದೆ.
4. ಪತಿ–ಪತ್ನಿಯ ನಡುವೆ ಗಟ್ಟಿಯಾದ ಅನುಬಂಧಕ್ಕೆ ಸಹಾಯಕವಾಗಿದೆ.
5. ಮಗ ಮತ್ತು ಮಗಳ ಬಗೆಗಿನ ಪ್ರಾಮುಖ್ಯತೆಯನ್ನು ಹೆಚ್ಚಿಸುತ್ತದೆ.
6. ಸಣ್ಣ ಕುಟುಂಬ ಅಭದ್ರ ಕುಟುಂಬವೆಂಬ ನಂಬಿಕೆ.

(7) ಸಾಮಾನ್ಯವಾಗಿ ತಮಗೆ ಎಷ್ಟು ಮಕ್ಕಳು ಇರಬೇಕೆಂದು ಅನ್ನಿಸುತ್ತದೆ.?

1. 1 ರಿಂದ 2 ಮಕ್ಕಳು
2. 3 ರಿಂದ 4 ಮಕ್ಕಳು
3. 5 ರಿಂದ 6 ಮಕ್ಕಳು

(8) ಗಂಡು ಮಗು ಬೇಕೆಂದು ನೀವು ಬಯಸುವೀರಾ?

1. ಮಗನೆ ಬೇಕು
2. ಮಗ ಬೇಕು ಆದರೆ ಅನಿವಾರ್ಯವಲ್ಲ
3. ಮಗನೇ ಬೇಕೆಂದೇನಿಲ್ಲ

ಗ್ರಾಮೀಣ ಆರ್ಥಿಕ ಸಬಲೀಕರಣ:

(1) ತಾವು ಯಾವ ಬಗೆಯ ಉದ್ಯೋಗವನ್ನು ಮಾಡುತ್ತಿದ್ದೀರಿ.?

1. ನಿರಂತರ ಸ್ವ-ಉದ್ಯೋಗ
2. ಕೂಲಿ ಮಾಡುವ ಉದ್ಯೋಗ
3. ಗೃಹಿಣಿಯರ ಮನೆ ವಾರ್ತೆಗಳು

(2) ಯಾವ ಬಗೆಯ ಸಾಲವನ್ನು ಪಡೆದಿದ್ದೀರಿ ?

1. ಉಳಿತಾಯದ ಸಾಲ
2. ಬ್ಯಾಂಕ ಸಾಲ
3. ಉಳಿತಾಯ ಮತ್ತು ಬ್ಯಾಂಕ್ ಸಾಲ

(3) ಪಡೆದುಕೊಂಡ ಸಾಲವನ್ನು ಯಾವವುದಕ್ಕಾಗಿ ಬಳಸಿದ್ದೀರಿ ?

1. ಉತ್ಪಾದಕ ಚಟುವಟಕೆಗಳು
2. ಅನುತ್ಪಾದಕ ಚಟುವಟಕೆಗಳು
3. ನಿರೂಪಯುಕ್ತ ಚಟುವಟಕೆಗಳು

(4) ಪಡೆದುಕೊಂಡ ಸಾಲವನ್ನು ಯಾವ ರೀತಿಯಾಗಿ ಖರ್ಚು ಮಾಡುತ್ತೀರಿ?
(ಮಿತವ್ಯಯ ಮತ್ತು ಉಳಿಕೆ ಲೆಕ್ಕಾಚಾರದ ವೆಚ್ಚ ಸಾಮಾಜಿಕ ಧಾರ್ಮಿಕ ಹಬ್ಬದ ಆಚರಣೆಗಳು)

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಇಲ್ಲವೇ ಇಲ್ಲ

(5) ಉಳಿತಾಯ ಮತ್ತು ಸಾಲಗಳಿಂದ ಅಗುವ ಲಾಭಗಳು ಯಾವವು ?

1. ಆರ್ಥಿಕ ಲಾಭ (ಆದಾಯ ಮತ್ತು ಉಳಿತಾಯ).
2. ಸಾಮಾಜಿಕ ಲಾಭಗಳು (ಮಕ್ಕಳ ಶಿಕ್ಷಣ, ಆರೋಗ್ಯ, ಇತ್ಯಾದಿ)
3. ಲಾಭ ವಿಲ್ಲ.

(6) ತಾವು ಸಾಲಕ್ಕಾಗಿ ಗ್ರಾಮದ ಸಾಹುಕಾರರನ್ನು ಎಷ್ಟರ ಮಟ್ಟಿಗೆ ಅವಲಂಬಿಸಿದ್ದೀರಿ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಇಲ್ಲವೇ ಇಲ್ಲ

ಮಹಿಳೆಯರಿಗೆ ಶೈಕ್ಷಣಿಕ ಸಬಲೀಕರಣ:

(1) ಗ್ರಾಮೀಣ ಮಹಿಳೆಯರಿಗೆ ಶಿಕ್ಷಣದ ಅವಶ್ಯಕತೆಯಿದೆಯೇ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಗೊತ್ತಿಲ್ಲ

(2) ಹೆಣ್ಣು ಹುಡುಗಿಯರಿಗೆ ಶಿಕ್ಷಣ ನೀಡುವುದರ ಪ್ರಾಮುಖ್ಯತೆ ಎಷ್ಟಿದೆ ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಮುಖ್ಯವಲ್ಲ

(3) ಶಿಕ್ಷಣವು ಸ್ಥಾನಮಾನದ ಸಂಕೇತವಾಗಿದೆಯೇ?

1. ಶಿಕ್ಷಣವು ಸ್ಥಾನಮಾನಕ್ಕೆ ಮಾತ್ರ ಸಂಕೇತವಾಗಿದೆಯೇ?
2. ಶಿಕ್ಷಣವು ಸ್ಥಾನಮಾನಕ್ಕೆ ಸಂಕೇತವಾಗಿರಬಹುದೇ?
3. ಶಿಕ್ಷಣವು ಸ್ಥಾನಮಾನಕ್ಕಿಂತಲೂ ಹೆಚ್ಚಿನ ಸಂಕೇತವಾಗಿದೆಯೇ?

(4) ಶಿಕ್ಷಣವೆಂದರೆ ಓದುವುದು, ಬರೆಯುವುದು, ಎಣಿಕೆಮಾಡುವುದು ಹೌದೇ?

1. ಸಂಪೂರ್ಣ ಒಪ್ಪಿದ್ದೇವೆ.
2. ಸ್ವಲ್ಪ ಒಪ್ಪಿದ್ದೇವೆ.
3. ಒಪ್ಪಿಗೆಯಿಲ್ಲ

(5) ಶಿಕ್ಷಣವು ಮನೆವಾರ್ತೆಗಳ ನಿರ್ವಹಣೆಗೆ ಮೂಲಾಧಾರವಾಗಿದೆಯೇ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಒಪ್ಪಿಗೆಯಿಲ್ಲ

(6) ಗ್ರಾಮೀಣ ಮಹಿಳೆಯರು ಉದ್ಯೋಗ ಮಾಡಬೇಕು ಎಂದು ತಮಗೆ ಅನಿಸಿದೆಯೇ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಮಾಡಕೂಡದು

(7) ಅವಿವಾಹಿತ ಮಹಿಳೆಯರು ಉದ್ಯೋಗ ಹೊಂದಬೇಕೆ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಹೊಂದಕೂಡದು

(8) ವಿವಾಹಿತ ಮಹಿಳೆಯರು ಉದ್ಯೋಗ ಮಾಡಬೇಕೇ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಮಾಡಕೂಡದು.

(9) ಮಹಿಳೆಯರು ಯಾವ ಬಗೆಯ ಉದ್ಯೋಗವನ್ನು ಮಾಡುತ್ತಾರೆ?

1. ಸ್ವಯಂ ಉದ್ಯೋಗ
2. ಮನೆ ಕೆಲಸ
3. ಕೂಲಿ

ಮಹಿಳಾ ಆರೋಗ್ಯದ ಸಬಲೀಕರಣ:

(1) ಆರೋಗ್ಯವಂತ ಮಹಿಳೆ ಕುಟುಂಬದ ಆಸ್ತಿಯೇ?

1. ಬಹು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಮುಖ್ಯವಲ್ಲ

(2) ಮಾನವನ ಆರೋಗ್ಯ ದೇವರ ಕೊಡುಗೆಯೋ ಅಥವಾ ಮಾನವ ಪ್ರಯತ್ನಯೋ?

1. ದೇವರ ಕೊಡುಗೆ
2. ಮಾನವ ಪ್ರಯತ್ನ
3. ಎರಡು ಇದೆ.

(3) ಉತ್ತಮ ಆರೋಗ್ಯಕ್ಕಾಗಿ ಬಿಸಿ ಅಡಿಗೆ ಊಟಮಾಡುವುದು ಮತ್ತು ಸ್ವಚ್ಛವಾದ ನೀರನ್ನು ಕುಡಿಯುವುದು ಅವಶ್ಯ ಅಂತಾ ಅನಿಸಿದೆಯೇ?

1. ಬಹಳ ಮಹತ್ವದ್ದು
2. ಮಹತ್ವದ್ದು.
3. ಮಹತ್ವದಲ್ಲ.

(4) ತಾವು ದಿನಾಲು ಹಲ್ಲುಜ್ಜುವುದು ಮತ್ತು ದಿನಾಲೂ ಸ್ನಾನ ಮಾಡುತ್ತೀರಾ?

1. ದಿನಾಲೂ
2. ವಾರದಲ್ಲೀ 3-ದಿನ
3. ಯಾವಾಗಲಾದರೂಮ್ಮೆ

(5) ಮಕ್ಕಳಿಗೆ ಲಸಿಕೆ ಹಾಕುವ ಕಾರ್ಯಕ್ರಮಗಳ ಬಗ್ಗೆ ತಮಗೆಷ್ಟು ಗೊತ್ತಿದೆ?

1. ಬಹಳಷ್ಟು ಗೊತ್ತಿದೆ.
2. ಸ್ವಲ್ಪ ಗೊತ್ತಿದೆ.
3. ಎನು ಗೊತ್ತಿಲ್ಲ

(6) ಪಲ್ಸ ಪೋಲಿಯೋ ಕಾರ್ಯಕ್ರಮದ ಬಗ್ಗೆ ನಿಮಗೇನು ಗೊತ್ತಿದೆ?

1. ಬಹಳಷ್ಟು ಗೊತ್ತಿದೆ.
2. ಸ್ವಲ್ಪ ಗೊತ್ತಿದೆ.
3. ಎನು ಗೊತ್ತಿಲ್ಲ

(7) ನಿಮ್ಮ ಮಕ್ಕಳಿಗೆ, ಸಂಬಂಧಿಕರ ಮಕ್ಕಳಿಗೆ ಪೋಲಿಯೋ ಹಾಕಿಸಿದ್ದೀರಾ ?

1. ಬಹಳಷ್ಟು ಮಟ್ಟಿಗೆ
2. ಸ್ವಲ್ಪ ಮಟ್ಟಿಗೆ
3. ಇಲ್ಲ

(8) ಗರ್ಭಿಣಿಯರಿಗೆ ನಿರಂತರ ವೈದ್ಯಕೀಯ ತಪಾಸಣೆ ಮಾಡಿಸಬೇಕೆಂಬುದರ ಬಗ್ಗೆ ನಂಬಿಕೆಯಿದೆಯಾ?

1. ಬಹಳ ಮಟ್ಟಿಗೆ ನಂಬಿಕೆಯಿದೆ.
2. ಸ್ವಲ್ಪ ಮಟ್ಟಿಗೆ ನಂಬಿಕೆಯಿದೆ.
3. ನಂಬಿಕೆಯಿಲ್ಲ.

4. ಪರಾಮರ್ಶನ ಗ್ರಂಥಗಳು

1. ಕನ್ನಡ ಗ್ರಂಥಗಳು:

1. ಅಶ್ವಿನಿ ಧೊಂಗಡೆ (ಮರಾಠಿಮೂಲ) ಕನ್ನಡಕ್ಕೆ ಡಾ॥ ವಿಠ್ಠಲರಾವ್ ಗಾಯಕವಾಡ 2001 "ಸ್ತ್ರೀವಾದಿ ವಿಮರ್ಶೆ ಸ್ವರೂಪ ಮತ್ತು ಪರಿಕಲ್ಪನೆಗಳು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

2. ಇಂದಿರಾ ಆರ್. 2002 "ಮಹಿಳೆ ಸಮಾಜ ಮತ್ತು ಸಂಸ್ಕೃತಿ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

3. ಉಷಾ ಎಂ. 2005 "ಮಹಿಳೆ ಮತ್ತು ಜಾತಿ" ಒಂದು ಸೈದಾಂತಿಕ ಗ್ರಹಿಕೆ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ – ವಿದ್ಯಾರಣ್ಯ.

4. ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ಬೆಂಗಳೂರು 2001 "ಸ್ವ-ಶಕ್ತಿ ಮತ್ತು ಸ್ತ್ರೀ-ಶಕ್ತಿ ಕೈಪಿಡಿ ಗ್ರಾಮೀಣ ಮಹಿಳೆಯರ ಅಭಿವೃದ್ಧಿ ಹಾಗೂ ಸಾಶಕ್ತತೆ.

5. ಕವಿತಾ ರೈ 2007 "ವಿವಾಹ ಮತ್ತು ಕುಟುಂಬ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ.

6. ಕುಮಾರಪ್ಪ 1997 "ಮಾತೆಯರು ಮಾನ್ಯರಾಗಿದ್ದಾಗ" ನವಕರ್ನಾಟಕ ಪ್ರಕಾಶನ ಬೆಂಗಳೂರು.

7. ಗಾಯಿತ್ರಿ ನಾವಡ 2000 "ಭಾರತೀಯ ಸ್ತ್ರೀವಾದ ಒಂದು ಸಂಕಥನ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

8. ಗಾಯಿತ್ರಿ ಎನ್.1991 "ಮಹಿಳೆ ಬಿಡುಗಡೆಯ ಹಾದಿಯಲ್ಲಿ" ನವಕರ್ನಾಟಕ ಪ್ರಕಾಶನ ಬೆಂಗಳೂರು.

9. ಚಂದ್ರಪೂಜಾರಿ ಎಂ. 2005 "ಸಂಶೋಧಕರು ಮತ್ತು ಕ್ಷೇತ್ರಾಕಾರ್ಯ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

10. ಚಂದ್ರಪೂಜಾರಿ ಎಂ. 2005 "ಜನಾಯೋಜನೆ" ಹೈದ್ರಾಬಾದ – ಕರ್ನಾಟಕದ ಅನುಭವಗಳು, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

11. ಚಂದ್ರಶೇಖರ ಟಿ.ಆರ್. "ಗ್ರಾಮೀಣ ಅಭಿವೃದ್ಧಿ ಮತ್ತು ವಿಕೇಂದ್ರಿಕರಣ "ರಾಜಕೀಯ ವೈಫಲ್ಯದ ಒಂದು ಸಂಕಥನ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

12. ಚಂದ್ರಶೇಖರ ಟಿ.ಆರ್. 1995 ಮಹಿಳೆ ಆರ್ಥಿಕತೆ ಮತ್ತು ಅಭಿವೃದ್ಧಿ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

13. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು 2008 "ಧರೆಯತೋರಣ" ಸ್ಮರಣ ಸಂಚಿಕೆ, ಗುಲಬರ್ಗಾ.

14. ಜೋತ್ಸಾ ಕಾಮತ್ 2005 "ಮಹಿಳೆ ಒಂದು ಅಧ್ಯಯನ" ನವಕರ್ನಾಟಕ ಪಬ್ಲಿಕೇಶನ ಬೆಂಗಳೂರು.

15. ಜಿರಾಲ್ಡಿನ್ ಫೋರ್ಬ್ಸ್ (ಇಂಗ್ಲೀಷ) ಕನ್ನಡಕ್ಕೆ ಡಾ॥ ಶ್ರೀಮತಿ. ಎಚ್. ಎಸ್. 2001 "ಆಧುನಿಕ ಭಾರತದಲ್ಲಿ ಮಹಿಳೆ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

16. ಜ್ಯೋತಿ. ಯ. ಶ್ರೀ 2002 "ಮಹಿಳೆ ಮತ್ತು ಕಲೆ" ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

17. ನಂದಿನಿ 2002 "ವಿಧವೆಯರ ಸಮಸ್ಯೆಗಳು" ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

18. ನೀಲಾ.ಕೆ. 2005 "ಮಹಿಳೆ ಶೋಷಣೆಯ ನೆಲೆಗಳು" ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

19. ಬಯಲು ಸೀಮೆ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ವಾರ್ಷಿಕ ವರದಿಗಳು 2005 ರಿಂದ 2009.

20. ಬಸವರಾಜ ಕುಮ್ನೂರ್ 2007 "ಡಾ॥ ನಂಜುಂಡಪ್ಪನವರ ವರದಿ ಮತ್ತು ಅನುಷ್ಠಾನ ಶುಭಕಿರಣ ಪ್ರಕಾಶನ ಗುಲಬರ್ಗಾ.

21. ಬಸವರಾಜ ಪೋಲಿಸ್ ಪಾಟೀಲ ಮತ್ತು ಗವಿಸಿದ್ದಪ್ಪ ಎಚ್.ಪಾಟೀಲ 2002 "ಬಿಡುಗಡೆ" ಅಮರ ಪ್ರಕಾಶನ ಗುಲಬರ್ಗಾ.

22. ಭಾಸ್ಕರ್.ಟಿ.ಎಂ. ಮತ್ತು ಶ್ರೀ ರಾಜಶೇಖರ ಹತ್ತಗುಂದಿ 2005 "ಕಲಬುರ್ಗಿ ಜಿಲ್ಲಾ ದರ್ಶನ" ಪ್ರಸರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

23. ಭೈರಪ್ಪ.ಕೆ. 1999 "ಸಮಾಜಶಾಸ್ತ್ರದ ಮೂಲತತ್ವಗಳು" ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

24. ಭೈರಪ್ಪ.ಕೆ. 2006 "ಭಾರತೀಯ ಸಮಾಜದ ಅಧ್ಯಯನ ಮತ್ತು ಸಾಮಾಜಿಕ ಸಂರಚನೆ" ಪ್ರಕಾಶಕರು ಎಸ್.ಬಿ.ಎಸ್. ಪಬ್ಲಿಷರ್ಸ್, ಬೆಂಗಳೂರು.

25. ಭೈರಪ್ಪ.ಕೆ. 2008 ಭಾರತೀಯ ಸಾಮಾಜಿಕ ಸಮಸ್ಯೆಗಳು ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ ಗುಲಬರ್ಗಾ.

26. ಭೈರಪ್ಪ.ಕೆ. ;2008 "ಭಾರತದಲ್ಲಿ ಗ್ರಾಮೀಣ ಅಭಿವೃದ್ಧಿಯ ಸಮಾಜಶಾಸ್ತ್ರ" ಸಿದ್ದಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

27. ಮಲ್ಲಿಕಾ ಘಂಟಿ 2000 " ತನುಕರಗದವರಲ್ಲಿ" ಗೌತಮ ಪ್ರಕಾಶನ ಬಳ್ಳಾರಿ.

28. ಮಹಾಶ್ವೇತಾದೇವಿ ಕನ್ನಡಕ್ಕೆ ಶ್ರೀಮತಿ ಎಚ್.ಎಸ್. 1998 "ರೂಡಾಲಿ" ಅಂಕಿತ ಪ್ರಕಾಶನ, ಬೆಂಗಳೂರು.

29. ಮಹಾಶ್ವೇತಾದೇವಿ ಕನ್ನಡಕ್ಕೆ ಶ್ರೀಮತಿ.ಎಚ್.ಎಸ್. 2000 'ಬೇಟಿ" ಸಿವಿಜಿ ಪಬ್ಲಿಕೇಶನ್ಸ್ ವೈಯ್ಯಾಲಿಕಾವಲ್ ಬೆಂಗಳೂರು.

30. ಮಹಿಳಾ ಸಮಾಖ್ಯೆ ಕರ್ನಾಟಕ "ರಾಜ್ಯ ಕಛೇರಿಯ ವರದಿಗಳು" 2005 ರಿಂದ 2009 ರವರೆಗೆ.

31. ಮಹಿಳಾ ಸಮಾಖ್ಯೆ ಕರ್ನಾಟಕ "ಕುಸುಮ" ರಾಜ್ಯ ಕಛೇರಿ, ಬೆಂಗಳೂರು.

32. ಮಹಿಳಾ ಸಮಾಖ್ಯೆ ಕರ್ನಾಟಕ "ಲಿಂಗತ್ವ ತರಬೇತಿ ಕೈಪಿಡಿ" ರಾಜ್ಯ ಕಛೇರಿ, ಬೆಂಗಳೂರು.

33. ಮಹಿಳಾ ಸಮಾಖ್ಯೆ ಕರ್ನಾಟಕ "ಹೊಸಿಲು ದಾಟುವ ಹೆಜ್ಜೆಗಳು" ರಾಜ್ಯ ಕಛೇರಿ, ಬೆಂಗಳೂರು.

34. ಮಂಗಳಾ ಚ.ನ. 1990 "ಎಚ್ಚೆತ್ತ ಹಾದಿಯಲ್ಲಿ ಮಹಿಳೆ" ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

35. ಮೃತ್ಯುಂಜಯ ಹೊರಕೇರಿ ಮತ್ತು ಬಸವಲಿಂಗ ಸೊಪ್ಪಿಮಠ 2005 "ರಾಯಚೂರು ಜಿಲ್ಲಾ ದರ್ಶನ" ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

36. ಮೂರ್ತಿಶ್ವರಯ್ಯಾ ಚಿ.ಕಾ.2000 ಮಹಿಳೆ ಸಮಾಜ ಮತ್ತು ಕಾನೂನು ಸಪ್ನ ಬುಕ್‌ಹೌಸ್ ತುಂಗಾ ಕಾಂಪ್ಲೆಕ್ಸ್ ಗಾಂಧಿನಗರ, ಬೆಂಗಳೂರು-9.

37. ರಾಮಚಂದ್ರ ಜೋಷಿ 2004 "ಸಮಾಜಶಾಸ್ತ್ರದ ಮೂಲ ತತ್ವಗಳು" ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ.

38. ರಾಜ್ಯ ಮಟ್ಟದ 5 ನೇ ಸಮಾಜಶಾಸ್ತ್ರ ಸಮ್ಮೇಳನ ವರದಿ 28 ಮತ್ತು 29 ನೇ

ಡಿಸೆಂಬರ 2005 "ಕರ್ನಾಟಕ ಗ್ರಾಮಗಳ ವಿಷಯ ಪರಿಸ್ಥಿತಿ" ಸಂತಫಿಲೋಮಿನಾ ಕಾಲೇಜು, ಮೈಸೂರು.

39. ಲಿಲಾದೇವಿ.ಆರ್.ಪ್ರಸಾದ 2002 "ಮಹಿಳೆ ಮತ್ತು ಉಳಿತಾಯ" ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

40. ವರದಾ ಶ್ರೀನಿವಾಸ "ಮಹಿಳೆಯ ಸ್ಥಿತಿಗತಿ ಅಂದು-ಇಂದು" ನಿರ್ದೇಶಕರು ಪ್ರಸಾರಾಂಗ ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

41. ವಂದನಾಶಿವ ಕನ್ನಡಕ್ಕೆ ಮಾಧವ ಐತಾಳ 2005 "ಬತ್ತದ ಚಿಲುಮೆ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

42. ವಿಜಯಶ್ರೀ ಸಬರದ 2005 "ಮಹಿಳೆ ಶೋಷಣೆ ಸವಾಲುಗಳು" ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

43. ವಿಜಯಕುಮಾರಿ.ಎಸ್.ಕಂಕಲ್ 2007 "ಮಹಿಳೆ ಮತ್ತು ಸಮಾಜ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

44. ಶಂಕರ್‌ರಾವ್.ಚ.ನ. 2005 "ಸಮಾಜಶಾಸ್ತ್ರದ ಮೂಲತತ್ವಗಳು" ಜೈ ಭಾರತ ಪ್ರಕಾಶನ ಮಂಗಳೂರು.

45. ಶಂಕರ್‌ರಾವ್.ಚ.ನ. 2005 "ಭಾರತೀಯ ಸಮಾಜ" ಜೈ ಭಾರತ ಪ್ರಕಾಶನ ಮಂಗಳೂರು. ಸಂರಚನೆ ಮತ್ತು ಪರಿವರ್ತನೆ.

46. ಶಂಕರ್‌ರಾವ್.ಚ.ನ. 2004 "ಸಮಾಜಶಾಸ್ತ್ರೀಯ ಚಿಂತನೆಯ ಮೂಲ ನೆಲೆಗಳು"

47. ಶಂಕರ್‌ರಾವ.ಚ.ನ. 2003 "ಭಾರತದ ಸಾಮಾಜಿಕ ಸಮಸ್ಯೆಗಳು" ಜೈ ಭಾರತ ಪ್ರಕಾಶನ, ಮಂಗಳೂರು.

48. ಶಂಕರ್‌ರಾವ.ಚ.ನ. "ಭಾರತೀಯ ಸಮಾಜದ ಪ್ರಚಲಿತ ಸಾಮಾಜಿಕ ಸಮಸ್ಯೆಗಳು" ಜೈಭಾರತ ಪ್ರಕಾಶನ ಮಂಗಳೂರು.

49. ಶಾಂತಾ.ಬಿ.ಅಸ್ಟಿಗಿ 2007 ನಡೆತುರಗ (ಬಿಡಿಲೇಖನಗಳು) ಅಮಿತಾಂಕಿತ ಪ್ರಕಾಶನ, ನಾಗನಸೂರ, ಸೋಲಾಪೂರ ಜಿಲ್ಲೆ.

50. ಶ್ರೀಮತಿ.ಎಚ್.ಎಸ್.2002 "ಗರ್ಭಾಶಯ ಮಹಿಳೆಯ ಶಕ್ತಿ ಕೇಂದ್ರ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

51. ಶ್ರೀಮತಿ.ಎಚ್.ಎಸ್.2003 "ಸ್ತ್ರೀವಾದ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

52. ಶ್ರೀಮತಿ.ಎಚ್.ಎಸ್.2006 "ಗೌರಿದುಃಖ" ಶಕ್ತಿ ಪ್ರಿಂಟರ್ಸ್ ಆ್ಯಂಡ್ ಪಬ್ಲಿಷರ್ಸ್, ಬೆಂಗಳೂರು.

53. ಶ್ರೀಲತಾ ಬಾಟ್ಲಿವಾಲಾ, ಅನಿತಾ ಗುರುಮೂರ್ತಿ 1998 ಅಂತಸ್ತಿನ ಅನ್ವೇಷಣೆ, ನಿಯಾಸ ಉಚ್ಚ ಅಧ್ಯಯನಗಳ ಸಂಸ್ಥೆ, ಬೆಂಗಳೂರು.

54. ಶೇಷ ನವರತ್ನ 2001 "ಬೇಂದ್ರಕಾವ್ಯದಲ್ಲಿ ಸ್ತ್ರೀ" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

55. ಶೈಲಜ ಹಿರೇಮಠ 1999 "ಪಾತರದವರು" ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

56. ಶೈಲಜ ಹಿರೇಮಠ 2003 "ಸ್ತ್ರೀಕಥನ" ಭೂವನ ಪ್ರಕಾಶನ, ಹೊಸಪೇಟೆ.

57. ಶೈಲಜ ಹಿರೇಮಠ 2004 "ಮಾತೃಪ್ರಧಾನ ಪರಿಕಲ್ಪನೆ" ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

58. ಸರೋಜಾ.ಕೆ. 2003 "ಮಹಿಳೆ ಮತ್ತು ಸಮೂಹ ಮಾಧ್ಯಮಗಳು" ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

59. ಸರೋಜಾ.ಕೆ. 2003 "ಮಹಿಳೆ ಮತ್ತು ಆರೋಗ್ಯ" ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

60. ಸವಿತಾ ನಾಯ್ಕ್ 2000 "ಬುಡಕಟ್ಟು ಮಹಿಳೆಯರ ಪ್ರಸಾದನ ಕಲೆ" ಪ್ರಸರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

61. ಸಮತಾ.ಬಿ.ದೇಶಮಾನೆ (2003) ಸಮಾಜಶಾಸ್ತ್ರ ಮತ್ತು ಮಹಿಳೆ ಚೇತನ ಬುಕ್ ಹೌಸ್, ಮೈಸುರು.

62. ಸಮತಾ.ಬಿ.ದೇಶಮಾನೆ (2004) ದಲಿತ ಮಹಿಳೆಯರ ಬದಲಾಗುತ್ತಿರುವ ಸ್ಥಾನಮಾನಗಳ ಸಮಾಜಶಾಸ್ತ್ರೀಯ ಅಧ್ಯಯನ ಚೇತನ ಬುಕ್‌ಹೌಸ ಮೈಸೂರು.

63. ಸಿದ್ದಗಂಗಯ್ಯ.ಬಿ.ಕಂಬಾಳು 2005 "ಮೈಥಿಲಿ" ಅರಿವು ಪ್ರಕಾಶನ, ರಾಜಾಜಿನಗರ, ಬೆಂಗಳೂರು.

64. ಸಿಲುವೈ.ಜಿ.ಸಿ 1999 "ಸ್ತ್ರೀಯರ ಸಮಗ್ರ ಸಶಕತ್ತೆ" ಹೆಕ್ಸ್ ಇಂಡಿಯಾ ಕಛೇರಿ, ಚೈನ್ನ್ಯ

65. ಸುಮಿತ್ರಾಬಾಯಿ.ಡಿ.ಎನ್. 1999 "ಸ್ತ್ರೀವಾದ ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

66. ಸೋಮನಾಥ ಯಾಳವಾರ ಮತ್ತು ಪ್ರೇಮಾ ಸಿರ್ಶೆ 2005 "ಬೀದರ ಜಿಲ್ಲಾ ದರ್ಶನ" ಪ್ರಸರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

2. ಆಂಗ್ಲ ಗ್ರಂಥಗಳು:

1 Ahmad.A.M. 1999. "Women empowerment in self-help groups Kurukshetra – April.

2 Bhasin.Khan and N.S. Khan (1991) Some Questions on Feminism and its Relevance in south Asia Kali for women.

3 Bhavani.V 1993 Feminism : A Poltical Ideology in Shuseda Koushik (Ed) Womens Participation in politics Vikas New-Delhi.

4 Biswas and Kabeer (2004) Measuring women's Empowerment Indicators and measurement techniques, Social change Setp-2004. Vol. 34 Page.No.03.

5 Boraian.M.P 2003 "Empowerment of Rural women: Towards Reversal of Gender Relations" The Indian Journal of Social work. Vol.64 Issue 4th Oct-2003.

6 Chaturvedi.Y.S. 1983 " A Social book an IRDP Implimentation" Kurukshetra Decemember.

7 Chowdhary.P. 1996 NGO's Needs both fire and Ice, Social welfare, December.

8 Godde.WJ (1977) Principles of Sociology, Macgraw Hile Book company, New Delhi. (Page. No. 345)

9 Gurulingaiah.M. 2003 Role of NGO in Empowerment of Tribal women in Karnataka-Kurukeshtra-December.

10 Hosmani Etal (2001) Self-Help Groups in KarnatakaTrends and implication, Indian Journal of Agri. Eco. Vo.50 Page.No.31.

11 Hunt and kasyanathan (2001) "Pathways to empowerment and reflections on Micro finance and transfromation in Gender relations in South Asia, Gender and development. Page.No.42 to 52.

12 Hussain (2000) Programme Alternatives for NGO's Social Welfare, December.

13 Karamakar.K.G (1999) Rural Credit and Self help Groups-Micro Finance needs and Concepts in India Sage publishers, New Delhi. Page.No.300

14 Lalitabai.K.N. (1999) Empowring women through Panchayat Raj Kurukeshtra –August.

15 Mahajan (1989) Women's contribution to India's economic and social Development- Deep & Deep : New Delhi.

16 Malipal (2002) (SGSY) Swarnjayanti Gram Swarojagar Yojana Kurukshetra, June (2002)

17 Mathews.K (2005) Empowering Rural Women through Self-Help Groups In P.K. Samanth(Ed) Empowering Rural women, the women press, New Delhi.

18 N. Lalita 1997 Rural Women's Empowerment and Development Banking, New Delhi.

19 NABARAD Impact Study on Micro Finance for Rural People- An impact evaluation NIRD Hyderabad.

20 Nanavti 1996 "Role of NGO's in the changing scenario" Social welfare. December.

21 Nanjundappa Report 2002 High Power Committee for Red-Rebbal or Regional Imbalance Govt. of Karnataka.

22 Nefa Vitoria.S and K. Someshwar 1998 DAWCRA A hope of light for women's Development in Rurual Areas Kurukeshtra-March.

23 Nefa.S and Someshwara 1998 DWACRA A hope of Light por RD do Kamalabai 1991Do Hussain S.R.

24 Pamecha and Khatika 2005 Empowerment of Rurual women Social Action Oct-Dec Vol.35 Page.No.4.

25 Pille.J.K 1990 Empowering women in India New rules for University News, Page. No.19, 47.

26 Rajashekhar (2000) Micro Finance Programmes and Women empowerment- A case study of two NGO' from Kerala. TC of Social and Economic Development Vol.3 Jan-June.

27 Rao V.M (2001) "Dairy women and Self-help Groups A Study in Andhara Pradesh and Karnataka, Indian Journal of Agri. Eco. Vol.50 (3) Page.

28 Samautha.R.K. (2005) "Empowering Rural Women" the women press, New Delhi.

29 Sapru R.R. (1989) Women and Development-Ashish: New Delhi.

30 Satish.P (2001) Some Issues in the formation of SHG Indian Journal of Agreeculture Economics Vol. 56 (3) Page. 411.

31 Shah.K (1984) Women's liberation and voluntary action Ajanta Delhi.

32 Shanti.K. 1998 Empowerment of Women Anmol publisher, New Delhi.

33 Sharma and Tyagi (1984) Implementing IRDP Yojana – Sept. Page No.16 & 30.

34 Singh and Sharawati 2001 Self-Help Groups – A micro Bank for poor villegers Indian Journal of Agree Eco Vol. 56 Page.No.

35 Soorya murthy .R (2005) Micro finance and women self help Groups in Kerala, Loans for members or others Social Action, Vol.55 Jan-March.

36 Srivastava.A (2004) Self-Help Groups and Civil Society: A preliminary study ISI New Delhi.

37 Srivastava.S.P (2000) Feminist theory An over view. Social welfare Dec-2000.

38 Sundari and N. Kamalabai (1991) Women and TRYSEM-A Case study Yojana July 31, 1991.

39 Sundari.S (1992) Is Fencilisom Culturally limited? Social change Dec-1992 Vol.22 Page. No.4.

40 The Indian Journal of Agreecultural economics (2001) Vol, 53 (Page.3)

41 Uma Veli 1975 Design of Rural Development Lessons from Africa John Hopkins press

42 Upreti, HC and N UPreti (2000) women and problems of Gender Discririmination Pointer publisher Jaipur, New Delhi.

ಪತ್ರಿಕೆಗಳು

1. ಅಭಿವೃದ್ಧಿ ಅಧ್ಯಯನ ಸಂಚಿಕೆಗಳು
2. ಕನ್ನಡಪ್ರಭ 'ಸಾಪ್ತಾಹಿಕ ಪ್ರಭ'
3. 'ಪ್ರಜಾವಾಣಿ ಸಾಪ್ತಾಹಿಕ' 'ಭೂಮಿಕಾ'
4. ಮಹಿಳಾ ಅಧ್ಯಯನ ಸಂಚಿಕೆಗಳು.
5. ವಿಜಯ ಕರ್ನಾಟಕ 'ಮಹಿಳಾ ವಿಜಯ'
6. 'ವ್ಯೂಮನ ಲಿಂಕ್ ಸೋಸಿಯಲ್ ಆಕ್ಸನ್ ನ್ಯೂಡೆಲ್ಲಿ'
7. ಸ್ತ್ರೀಮುಕ್ತಿ ಪತ್ರಿಕೆ
8. ಸುಧಾ ವಾರಪತ್ರಿಕೆ
9. 'ಸಖಿ' ಮಾಸಪತ್ರಿಕೆ 2006 ಜೂನ–ನವೆಂಬರ್
10. ಹೊಸತು ಮಾಸಪತ್ರಿಕೆ

ಭಾವಚಿತ್ರಗಳು



ಸ್ವ-ಸಹಾಯ ಗುಂಪಿನ ವಾರದ ಸಭೆಯ ನೋಟ



ಸಂಘದ ಪದಾಧಿಕಾರಿಗಳ ಆಯ್ಕೆ ಪ್ರಕ್ರಿಯೆ



ಗುಂಪಿನ ಸದಸ್ಯರಿಗೆ ತರಬೇತಿ ನೀಡುತ್ತಿರುವುದು



ಆರ್ಥಿಕ ಚಟುವಟಿಕೆಯಲ್ಲಿ ಸಾಂಪ್ರದಾಯಿಕ ಖೌದಿ ಹೊಲಿಯುತ್ತಿರುವದು



ಆದಾಯಕರ ಚಟುವಟಿಕೆಯಾಗಿ ಹಿಟ್ಟಿನ ಗಿರಣಿಯ ಉದ್ಯೋಗ ಆಯ್ಕೆ



ಹೊಟೇಲ ಉದ್ಯಮದಲ್ಲಿ ನಿರತಳಾಗಿರುವ ಮಹಿಳೆ



ಕಲಿಯೋಣ ಬಾ – ಸಾಕ್ಷರ ನಿರತ ಮಹಿಳೆಯರು



ಬರೆಯಲು ಪ್ರಯತ್ನಿಸುವೆ, ನಾನು ಬರೆಯುವೆ



ಎಷ್ಟೇ ತೊಡಕಾದರೂ ಕಲಿಯದೇ ಬಿಡೆನು



ಮಹಿಳಾ ವೇದಿಕೆ ಸ್ಥಾಪಿಸಲು ಸಮಾಲೋಚನೆಯಲ್ಲಿ ತೊಡಗಿರುವ ಮಹಿಳೆಯರು



ಮಹಿಳಾ ಒಕ್ಕೂಟ ಸ್ಥಾಪನೆ



ಮಹಿಳಾ ಒಕ್ಕೂಟದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಮಸ್ಯೆಗಳ ಚರ್ಚೆ



ಬಾಲ್ಯವಿವಾಹ ವಿರೋಧಿ ಆಂದೋಲನದಲ್ಲಿ ನಿರತ ಮಹಿಳೆಯರು



ಮಹಿಳಾ ಜಾಗೃತಿ ಜಾತಾದಲ್ಲಿ ಪಾಲ್ಗೊಂಡ ದೃಶ್ಯ



ಸರಕಾರಿ ಇಲಾಖೆಯ ಅಧಿಕಾರಿಗಳಿಂದ ಸಂಘಕ್ಕೆ ಭೇಟಿ